# ಮಂಗಳೂರು ವಿಶ್ವವಿದ್ಯಾನಿಲಯ

**ದೂರ ಶಿಕ್ಷಣ ಕೇಂದ್ರ, ಮಂಗಳಗಂಗೋತ್ರಿ - 574 199, ದಕ್ಷಿಣ ಕನ್ನಡ ಜಿಲ್ಲೆ, ಕರ್ನಾಟಕ**

# ಕೋರ್ಸ್ – 7 :

# ಶಾಲಾ ವಿಷಯಗಳ ಬೋಧನಾ ವಿಧಾನ–1(a)

# ಕನ್ನಡ

## (ಪಠ್ಯಕ್ರಮ ಮತ್ತು ಬೋಧನಾ ವಿಧಾನಗಳ ಅಧ್ಯಯನ)

## ಬ್ಲಾಕ್ಸ್ 3 ಮತ್ತು 4

## (ಭಾಗ–2)

# ಬಿ.ಎಡ್. ಪದವಿ ಕಾರ್ಯಕ್ರಮ

**(ಮುಕ್ತ ಮತ್ತು ದೂರ ಕಲಿಕೆ)**

# ದ್ವಿತೀಯ ವರ್ಷ ಬಿ.ಎಡ್.

**ಪ್ರಕಾಶಕರು**

**ಮಂಗಳೂರು ವಿಶ್ವವಿದ್ಯಾನಿಲಯ**

**ಮಂಗಳಗಂಗೋತ್ರಿ - 574 199**

**Kannada :** Self learning Material for B.Ed. Degree Programme (Open and Distance Learning) of Second Year Prepared by Prof. Nagarathna K.R. Published and Mr. Venkatesh M.M. by The Registrar, Mangalore University, Mangalagangothri - 574 199, Karnataka.

**Year 2019-20**

**Developed by:**
**The Director**
Centre for Distance Education,
Mangalore University,
Mangalagangothri - 574 199, Karnataka.

**Course Co-ordinator**
**Dr. Chidananda A.L.**
B.Ed.(ODL) Programme,
Centre for Distance Education, Mangalore University,
Mangalagangothri - 574 199, Karnataka.

© The Registrar, Mangalore University

| | | |
|---|---|---|
| ಕನ್ನಡ (ಪಠ್ಯಕ್ರಮ ಮತ್ತು ಬೋಧನಾಶಾಸ್ತ್ರೀಯ ಅಧ್ಯಯನ) | : | ದ್ವಿತೀಯ ವರ್ಷದ ಬಿ.ಎಡ್. (ಮುಕ್ತ ಮತ್ತು ದೂರ ಕಲಿಕೆ) ಪದವಿ ಕಾರ್ಯಕ್ರಮದ ಸ್ವ ಕಲಿಕಾ ಅಧ್ಯಯನ ಸಾಮಗ್ರಿ |
| ರಚನಕಾರರು | : | ಪ್ರೊ.. ನಾಗರತ್ನ ಕೆ.ಆರ್.<br>ಶ್ರೀ ವೆಂಕಟೇಶ್ ಎಂ.ಎನ್. |
| ಪ್ರಕಾಶಕರು | : | **ಕುಲಸಚಿವರು, ಮಂಗಳೂರು ವಿಶ್ವವಿದ್ಯಾನಿಲಯ**<br>**ಮಂಗಳಗಂಗೋತ್ರಿ - 574 199, ಕರ್ನಾಟಕ** |
| ವರ್ಷ | : | 2019–20 |
| © ಹಕ್ಕುಗಳು | : | **ಕುಲಸಚಿವರು, ಮಂಗಳೂರು ವಿಶ್ವವಿದ್ಯಾನಿಲಯ** |
| ಸಿದ್ಧಪಡಿಸಿದವರು | : | **ನಿರ್ದೇಶಕರು, ದೂರ ಶಿಕ್ಷಣ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ 574 199, ಕರ್ನಾಟಕ** |
| ಕೋರ್ಸ್ ಸಂಯೋಜಕರು | : | **ಡಾ. ಚಿದಾನಂದ ಎ.ಎಲ್.**<br>ಬಿ.ಎಡ್. (ಮುಕ್ತ ಮತ್ತು ದೂರ ಕಲಿಕೆ) ಪದವಿ ಕಾರ್ಯಕ್ರಮ,<br>ದೂರ ಶಿಕ್ಷಣ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ,<br>ಮಂಗಳಗಂಗೋತ್ರಿ 574 199, ಕರ್ನಾಟಕ |

**(ಖಾಸಗಿ ಪ್ರಸಾರಕ್ಕಾಗಿ ಮಾತ್ರ)**

# ಕೋರ್ಸ್ – 7

# ಶಾಲಾ ವಿಷಯಗಳ ಬೋಧನಾ ವಿಧಾನ–1(a)

# ಕನ್ನಡ

## (ಪಠ್ಯಕ್ರಮ ಮತ್ತು ಬೋಧನಾಶಾಸ್ತ್ರೀಯ ಅಧ್ಯಯನ)

## ಬ್ಲಾಕ್ಸ್ 3 & 4

## (ಭಾಗ–2)

---


**ಕುಲಸಚಿವರು** **ಪ್ರಕಾಶಕರು**
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ–574 199


---


**ಪ್ರೊ. ನಾಗರತ್ನ ಕೆ.ಆರ್. : ಬ್ಲಾಕ್ - 3** **ಕೋರ್ಸ್ ಲೇಖಕರು**

**ಶ್ರೀ ವೆಂಕಟೇಶ್ ಎಂ.ಎನ್. : ಬ್ಲಾಕ್ – 4**


---


**ಡಾ. ಶಶಿಕಲ ಎ.** **ಕೋರ್ಸ್ ಪರಿಶೀಲಕರು**
ಸಲಹೆಗಾರರು
ಬಿ.ಎಡ್. ದೂರ ಶಿಕ್ಷಣ ಕಾರ್ಯಕ್ರಮ
(ಮುಕ್ತ ಮತ್ತು ದೂರ ಕಲಿಕೆ)
ದೂರ ಶಿಕ್ಷಣ ಕೇಂದ್ರ
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ – 574 199


---


**ಡಾ. ಚಿದಾನಂದ ಎ.ಎಲ್.** **ಸಂಪಾದನ ಸಹಾಯಕರು**


---

## ವಿಷಯ ಸೂಚಿ


**ಕೋರ್ಸಿನ ಪಕ್ಷಿನೋಟ**

**ಬ್ಲಾಕ್ 3 : ಕನ್ನಡ ಪಠ್ಯಕ್ರಮ ಮತ್ತು ಪಠ್ಯೇತರ ಚಟುವಟಿಕೆಗಳು**
ಘಟಕ–1: ಭಾಷಾ ಪಠ್ಯಕ್ರಮ
ಘಟಕ–2: ಪ್ರೌಢಶಾಲಾ ಕನ್ನಡ ಪಠ್ಯಕ್ರಮದ ವಿಮರ್ಶೆ
ಘಟಕ–3: ಭಾಷಾ ಪಠ್ಯ ಪುಸ್ತಕಗಳು
ಘಟಕ–4: ಪಠ್ಯ ಪುಸ್ತಕಗಳ ವಿಮರ್ಶೆ, ವಿಧಾನ
ಘಟಕ–5: ಪಠ್ಯ ಆಧಾರಿತ ಚಟುವಟಿಕೆಗಳು
ಘಟಕ–6: ಪಠ್ಯೇತರ ಚಟುವಟಿಕೆಗಳು

**ಬ್ಲಾಕ್ 4 : ಕನ್ನಡ ಭಾಷಾ ಬೋಧನೆಯಲ್ಲಿ ಪಾಠ ಯೋಜನೆಗಳು ಮತ್ತು ಮೌಲ್ಯಮಾಪನ**
ಘಟಕ–1: ಪಾಠ ಯೋಜನೆ
ಘಟಕ–2: ಘಟಕ ಯೋಜನೆ ಮತ್ತು ಸಂಪನ್ಮೂಲ ಘಟಕ ಯೋಜನೆ
ಘಟಕ–3: ಸಾಮರ್ಥ್ಯಾಧಾರಿತ ಭಾಷಾ ಪಾಠ ಯೋಜನೆ
ಘಟಕ–4: ಭಾಷಾ ಬೋಧನೆಯಲ್ಲಿ ಮೌಲ್ಯಮಾಪನ ಮತ್ತು ಮೌಲ್ಯಮಾಪನ ಸಾಧನಗಳು
ಘಟಕ–5: ಘಟಕ ಪರೀಕ್ಷೆ ಮತ್ತು ನೈದಾನಿಕ ಪರೀಕ್ಷೆ
ಘಟಕ–6: ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ

# ಕೋರ್ಸಿನ ಪಕ್ಷಿನೋಟ

ಪ್ರೀತಿಯ ವಿದ್ಯಾರ್ಥಿ / ವಿದ್ಯಾರ್ಥಿನಿಯರೇ,

ನೀವು ಮೊದಲ ವರ್ಷದಲ್ಲಿ 'ಪಠ್ಯಕ್ರಮವ್ಯಾಪಿ ಭಾಷೆ' ಕೋರ್ಸಿನ ಅಡಿಯಲ್ಲಿ ಈಗಾಗಲೇ ಭಾಷೆಯ ಸ್ವರೂಪ, ಲಕ್ಷಣಗಳು ಇವುಗಳನ್ನು ಕಲಿಯುವುದರ ಮೂಲಕ ಭಾಷೆಯ ಕುರಿತಾಗಿ ಸಾಕಷ್ಟು ಆಳವಾದ ಅರಿವನ್ನು ಪಡೆದುಕೊಂಡಿರುವಿರಿ. ಈಗ ಈ ಭಾಷೆಯನ್ನು ವಿದ್ಯಾರ್ಥಿಗಳಿಗೆ ಕಲಿಸಲು/ಬೋಧಿಸಲು ಅಗತ್ಯವಾದ ಬೋಧನಾತ್ಮಕ ಆಧಾರಗಳನ್ನು ಅರಿತುಕೊಳ್ಳುವುದು ಅಗತ್ಯ. ಈ ಅರಿವು ವಿಷಯ ಜ್ಞಾನವಾಗಲೀ ಅಥವಾ ಜ್ಞಾನಶಿಸ್ತಿಗೆ ಸಂಬಂಧಿಸಿದ ಅರಿವಾಗಲೀ ಅಲ್ಲ. ಇದು ಕಲಿಕಾರ್ಥಿ, ವಿಷಯ ಮತ್ತು ಸಾಮಾಜಿಕ ಸನ್ನಿವೇಶಕ್ಕೆ ಅನುಗುಣವಾಗಿ ಭಾಷೆಯ ಕುರಿತು ಅರಿವು ಮೂಡಿಸಲು ರೂಢಿಸಿಕೊಳ್ಳಬೇಕಾದ ಬೋಧನಾ ವಿಧಾನವನ್ನು ಕುರಿತ ಜ್ಞಾನ ಎಂದು ಹೇಳಬಹುದು. ಇದು ಪ್ರಮುಖವಾಗಿ ವಿಮರ್ಶಾತ್ಮಕ ಬೋಧನಾ ವಿಧಾನವನ್ನು ಅಪೇಕ್ಷಿಸುತ್ತದೆ. ಅಂದರೆ, ಎಲ್ಲ ಮಕ್ಕಳಿಗೂ ಸಮಾನತೆ ಮತ್ತು ನ್ಯಾಯ ಇವುಗಳಿಗೆ ಅನುಗುಣವಾಗಿ ಭಾಷೆಯನ್ನು ಕಲಿಯಲು ಅಗತ್ಯವಾದ ಒಳಹರಿವುಗಳನ್ನು ನೀಡಲು ನಾವು ಅನ್ವಯಿಸಿಕೊಳ್ಳಬೇಕಾದ ಪ್ರಕ್ರಿಯೆ. ಅಧ್ಯಾಪಕರು ಅನುಸರಿಸುವ ಬೋಧನಾ ವಿಧಾನವು ಎಲ್ಲ ಮಕ್ಕಳಿಗೂ ಗರಿಷ್ಠ ಮಟ್ಟದಲ್ಲಿ ಭಾಷಾಪ್ರೌಢಿಮೆ ಬೆಳೆಯಲು ಅನುವು ಮಾಡಿಕೊಡಬೇಕು.

ಹೀಗಾಗಿ ಪ್ರೌಢಶಾಲಾ ಮಟ್ಟದ ವಿದ್ಯಾರ್ಥಿಗಳಿಗೆ ವಿವಿಧ ವಿವಿಧ ಹಂತಗಳಲ್ಲಿ ಭಾಷೆಯನ್ನು ಕಲಿಸುವಾಗ ಅಪೇಕ್ಷಣೀಯವಾದ ಫಲವು ಉಂಟಾಗಲು ಅಗತ್ಯವಾದ ಬೋಧನೆ ಅಥವಾ ಅನುಭವಗಳಿಗೆ ಸಂಬಂಧಿಸಿದಂತೆ ಈ ಕೋರ್ಸಿನ ಅಥವಾ ಪತ್ರಿಕೆಯ ವಿಷಯಗಳನ್ನು ಗಮನಿಸಿಕೊಳ್ಳಲಾಗಿದೆ. ಕನ್ನಡವನ್ನು ಪ್ರಥಮ, ದ್ವಿತೀಯ ಮತ್ತು ತೃತೀಯ ಭಾಷೆಯಾಗಿ ಕಲಿಸಬೇಕಾದಾಗ ಗಮನಿಸಿಕೊಳ್ಳಬೇಕಾದ ಅಂಶಗಳನ್ನು ವಿಶ್ಲೇಷಿಸಲಾಗಿದೆ. ಭಾಷಾಕಲಿಕೆಯ ವಿವಿಧ ಕೌಶಲಗಳನ್ನು–ಕೇಳುವುದು, ಮಾತನಾಡುವುದು, ಓದುವುದು, ಬರೆಯುವುದು– ಕಲಿಸುವಾಗ ಗಮನಿಸಬೇಕಾದ ನಿರ್ದಿಷ್ಟ ಅಂಶಗಳನ್ನು ವಿಚಾರ ಮಾಡಲಾಗಿದೆ. ಸಾಹಿತ್ಯದ ವಿವಿಧ ಪ್ರಕಾರಗಳಾದ ಗದ್ಯ, ಪದ್ಯ ನಾಟಕಗಳ ಮೂಲಕ ಭಾಷೆಯನ್ನು ಕಲಿಸುವ ಪ್ರಯತ್ನದಲ್ಲಿ ಗುರುತಿಸಿಕೊಳ್ಳಬೇಕಾದ ವಿಚಾರಗಳನ್ನು ವಿಮರ್ಶಿಸಲಾಗಿದೆ. ಭಾಷಾಪ್ರೌಢಿಮೆಯನ್ನು ಗಟ್ಟಿಗೊಳಿಸುವ ವ್ಯಾಕರಣ, ಪ್ರಬಂಧ ಪಾಠಗಳ ವಿಚಾರವಾಗಿ ಗಮನಿಸಲಾಗಿದೆ. ಈ ಎಲ್ಲದರ ಮೂಲಕ ಪ್ರೌಢಶಾಲಾ ಹಂತದಿಂದ ಸಾಗಿ ಹೋಗುವ ವಿದ್ಯಾರ್ಥಿಯು ಅಪೇಕ್ಷಿತವಾದ ಮಟ್ಟದಲ್ಲಿ ಭಾಷಾಪ್ರೌಢಿಮೆಯನ್ನು ಬೆಳೆಸಿಕೊಳ್ಳಲು ಅನುವು ಮಾಡಿಕೊಡುವ ಕ್ರಮಗಳನ್ನು ವಿಚಾರ ಮಾಡಲಾಗಿದೆ.

ಭಾಷಾಕಲಿಕೆಗೆ ಪೂರಕವಾದ ವಿವಿಧ ವಿಧಾನಗಳನ್ನು–ಸಾಂಪ್ರದಾಯಿಕ ಮತ್ತು ಆಧುನಿಕ–ಪ್ರಮುಖವಾಗಿ ಚರ್ಚಿಸುವುದು ಈ ಪತ್ರಿಕೆಯ ಉದ್ದೇಶ. ಈ ಮೂಲಕ ಉತ್ತಮ ಕನ್ನಡಭಾಷಾ ಅಧ್ಯಾಪಕರನ್ನು ರೂಪುಗೊಳಿಸುವುದು ಈ ಕೋರ್ಸಿನ ಗುರಿ. ಇಲ್ಲಿ ಚರ್ಚಿಸಿರುವ ಎಲ್ಲ ಅಂಶಗಳ ಅನ್ವಯದಿಂದ ಯಾರೇ ಆಗಲಿ ಉತ್ತಮ ಕನ್ನಡ ಅಧ್ಯಾಪಕರಾಗಲು ಅಗತ್ಯವಾದ ಅರಿವು ಪಡೆಯಲು ಸಾಧ್ಯವಾಗಬೇಕು ಎಂಬುದು ನಮ್ಮ ಸಂಕಲ್ಪ. ಇಲ್ಲಿ ಚರ್ಚಿಸಿರುವ ವಿಷಯಗಳೆಲ್ಲವೂ ಅರಿವಿನ ನೆಲೆಯಲ್ಲಿ ಸಹಾಯಕವಾಗುತ್ತದೆ. ಇವುಗಳ ನಿರಂತರ ಅನ್ವಯದ ಮೂಲಕ ಅರಿವನ್ನು ಕೌಶಲದ ಹಂತಕ್ಕೆ ಉನ್ನತೀಕರಿಸಿಕೊಳ್ಳಬೇಕು. ಆ ಮೂಲಕ ಪರಿಣಾಮಕಾರಿ ಭಾಷಾ ಅಧ್ಯಾಪಕರಾಗುವುದು ಸಾಧ್ಯವಿದೆ. ಈ ಉದ್ದೇಶಗಳ ಸಾಧನೆಗೆ ಅಗತ್ಯವಾದ ವಿಚಾರಗಳನ್ನು ನಾಲ್ಕು ಬ್ಲಾಕ್‌ಗಳಲ್ಲಿ ಚರ್ಚಿಸಲಾಗಿದೆ.

ಮೊದಲನೇ ಬ್ಲಾಕ್‌ನಲ್ಲಿ ಭಾಷಾಬೋಧನೆಯ ಉದ್ದೇಶಗಳು ಮತ್ತು ವಿಧಾನಗಳನ್ನು ಚರ್ಚಿಸಲಾಗಿದೆ. ಪ್ರಥಮ ಭಾಷೆಯಾಗಿ, ದ್ವಿತೀಯ ಭಾಷೆಯಾಗಿ ಮತ್ತು ತೃತೀಯ ಭಾಷೆಯಾಗಿ ಕನ್ನಡ ಭಾಷಾಬೋಧನೆಯ

ಉದ್ದೇಶಗಳನ್ನು ಮತ್ತು ಅವುಗಳ ಬೋಧನಾ ವಿಧಾನಗಳನ್ನು ಸ್ಪಷ್ಟಪಡಿಸಲಾಗಿದೆ. ಜೊತೆಗೆ ಸಾಹಿತ್ಯದ ವಿವಿಧ ಪ್ರಕಾರಗಳಾದ ಗದ್ಯ, ಪದ್ಯ ಮತ್ತು ಪ್ರಬಂಧ ಬೋಧನಾ ಉದ್ದೇಶಗಳನ್ನು ಮತ್ತು ಅವುಗಳನ್ನು ಬೋಧಿಸುವ ವಿಧಾನಗಳನ್ನು ವಿವೇಚಿಸಲಾಗಿದೆ. ಸಾಂಪ್ರದಾಯಿಕ ಬೋಧನಾ ವಿಧಾನಗಳ ಜೊತೆಗೆ ಆಧುನಿಕ ಮಾರ್ಗೋಪಾಯಗಳನ್ನೂ ವಿಶ್ಲೇಷಿಸಲಾಗಿದೆ. ಇವೆಲ್ಲಕ್ಕೂ ಪೂರಕವಾಗಿ ಕನ್ನಡ ಅಧ್ಯಾಪಕರ ಸಾಮರ್ಥ್ಯಗಳು ಮತ್ತು ಗುಣಗಳು ಚರ್ಚಿತವಾಗಿವೆ.

ಎರಡನೆಯ ಬ್ಲಾಕ್‌ನಲ್ಲಿ ನಿರ್ದಿಷ್ಟವಾಗಿ ವಿವಿಧ ಭಾಷಾಕೌಶಲಗಳ ಬೆಳವಣಿಗೆಗೆ ಅಗತ್ಯವಾದ ಕಲಿಕೆಯ ಅನುಭವಗಳ ಕಡೆಗೆ ಗಮನ ಕೊಡಲಾಗಿದೆ. ಆಲಿಸುವಿಕೆ, ಮಾತನಾಡುವಿಕೆ, ಓದುಗಾರಿಕೆ ಮತ್ತು ಬರೆವಣಿಗೆಯ ಕೌಶಲಗಳನ್ನು ಕಲಿಸುವ ವಿಧಾನಗಳು ಅದಕ್ಕನುಗುಣವಾದ ಕಲಿಕೆಯ ಅನುಭವಗಳು ಇವುಗಳನ್ನು ಇಲ್ಲಿ ವಿವೇಚಿಸಲಾಗಿದೆ. ಇದಕ್ಕೆ ಪೂರಕವಾಗಿ ಭಾಷಾಬೋಧನೆ ಮತ್ತು ಕಲಿಕೆಯನ್ನು ಅನುಕೂಲಿಸುವ ಸಾಧನಗಳನ್ನು ವಿಶ್ಲೇಷಿಸಲಾಗಿದೆ. ಗಣಕಯಂತ್ರವನ್ನು ಭಾಷಾಬೋಧನೆ ಮತ್ತು ಕಲಿಕೆಯ ಸನ್ನಿವೇಶದಲ್ಲಿ ಹೇಗೆ ಬಳಸಿಕೊಳ್ಳಬಹುದು ಎಂಬುದರ ಕಡೆಗೆ ಗಮನಹರಿಸಲಾಗಿದೆ.

'ಚಟುವಟಿಕೆಗಳ ಮೂಲಕ ಕಲಿಕೆ'ಯನ್ನು ಎತ್ತಿ ಹಿಡಿಯುತ್ತಿರುವ ಇಂದಿನ ಸನ್ನಿವೇಶದಲ್ಲಿ ಕನ್ನಡ ಬೋಧನೆ ಮತ್ತು ಕಲಿಕೆಯಲ್ಲಿ ಅನ್ವಯಿಸಿಕೊಳ್ಳಬಹುದಾದ ಪಠ್ಯ ಆಧಾರಿತ ಮತ್ತು ಪಠ್ಯೇತರ ಚಟುವಟಿಕೆಗಳನ್ನು ಮೂರನೇ ಬ್ಲಾಕ್‌ನಲ್ಲಿ ಚರ್ಚಿಸಲಾಗಿದೆ. ಇದಕ್ಕೆ ಪೂರಕವಾದ ಪಠ್ಯಕ್ರಮ, ಭಾಷಾ ಪಠ್ಯಕ್ರಮದ ಸ್ವರೂಪ, ಪ್ರಸ್ತುತ ಪ್ರೌಢಶಾಲಾ ಪಠ್ಯಕ್ರಮದ ವಿಮರ್ಶೆ, ಉದ್ದೇಶಗಳ ಸಾಧನೆಗೆ ಸಾಧನವಾದ ಪಠ್ಯಪುಸ್ತಕದ ಸ್ವರೂಪ, ಲಕ್ಷಣಗಳೂ ಇದೇ ಬ್ಲಾಕ್‌ನ ವ್ಯಾಪ್ತಿಯಲ್ಲಿ ಚರ್ಚಿತವಾಗಿವೆ.

ಭಾಷಾಬೋಧನೆ ಮತ್ತು ಕಲಿಕೆ ಫಲಕಾರಿಯಾಗಬೇಕಾದರೆ ಅಧ್ಯಾಪಕರು ಹಾಕಿಕೊಳ್ಳುವ ಯೋಜನೆಗಳು ಪರಿಣಾಮಕಾರಿಯಾಗಬೇಕು. ಈ ಹಿನ್ನೆಲೆಯಲ್ಲಿ ಭಾಷಾಬೋಧನೆಯಲ್ಲಿ ಬಳಸಬಹುದಾದ ವಿವಿಧ ಯೋಜನೆಗಳನ್ನು ಬ್ಲಾಕ್ ನಾಲ್ಕರಲ್ಲಿ ವಿಚಾರ ಮಾಡಲಾಗಿದೆ. ಜೊತೆಗೆ ವಿದ್ಯಾರ್ಥಿಗಳ ಭಾಷಾ ಸಾಧನೆಯ ಮೌಲ್ಯಮಾಪನ ವಿಧಾನಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

ಒಟ್ಟಿನಲ್ಲಿ ಈ ಎಲ್ಲ ವಿಚಾರಗಳನ್ನು ಸೂಕ್ತ ಸನ್ನಿವೇಶಗಳಲ್ಲಿ ಸಮರ್ಪಕವಾಗಿ ಅನ್ವಯಿಸಿಕೊಳ್ಳುವುದರ ಮೂಲಕ ಪರಿಣಾಮಕಾರಿ ಕನ್ನಡ ಶಿಕ್ಷಕ/ಶಿಕ್ಷಕಿಯರು ಮೂಡಿಬರಬೇಕು ಎಂಬುದು ಇಲ್ಲಿನ ಆಶಯ. ಅದಕ್ಕೆ ಪೂರಕವಾಗಿ ಈ ಸಾಮಗ್ರಿಯನ್ನು ಬಳಸಿಕೊಳ್ಳಬೇಕು ಎಂಬುದು ನಮ್ಮ ಅಪೇಕ್ಷೆ.

## ಬ್ಲಾಕ್ 3 : ಕನ್ನಡ ಪಠ್ಯಕ್ರಮ ಮತ್ತು ಪಠ್ಯೇತರ ಚಟುವಟಿಕೆಗಳು

### ಘಟಕ 1 : ಭಾಷಾ ಪಠ್ಯಕ್ರಮ

**ಘಟಕದ ರಚನೆ**

3.1.1. ಕಲಿಕೆಯ ಉದ್ದೇಶಗಳು
3.1.2. ಪೀಠಿಕೆ
3.1.3. ಕಲಿಕೆಯ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು
3.1.3.1. ಪಠ್ಯಕ್ರಮ ಅರ್ಥ ಮತ್ತು ಸ್ವರೂಪ
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1
3.1.3.2. ಕನ್ನಡ ಭಾಷಾ ಪಠ್ಯ ಕ್ರಮದ ಆಯಾಮಗಳು
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2
3.1.4. ಸಾರಾಂಶಿಸೋಣ
3.1.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1 ಮತ್ತು 2
3.1.6 ಘಟಕಾಂತ್ಯ ಅಭ್ಯಾಸಗಳು
3.1.7. ಪರಾಮರ್ಶನ ಸೂಚಿ

**3.1.1. ಕಲಿಕೆಯ ಉದ್ದೇಶಗಳು**

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿ ಶಿಕ್ಷಕ ಶಿಕ್ಷಕಿಯರು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು;

- ಪಠ್ಯಕ್ರಮ ರಚನೆಯ ತತ್ವಗಳನ್ನು ಪಟ್ಟಿಮಾಡುವರು;
- ಭಾಷಾ ಪಠ್ಯಕ್ರಮದ ಸ್ವರೂಪವನ್ನು ವಿವರಿಸುವರು;
- ಕನ್ನಡ ಭಾಷಾ ಪಠ್ಯಕ್ರಮದಲ್ಲಿರಬೇಕಾದ ಅಂಶಗಳನ್ನು ವಿಶ್ಲೇಷಿಸುವರು ಮತ್ತು
- ಕನ್ನಡ ಭಾಷಾ ಪಠ್ಯಕ್ರಮದಲ್ಲಿರಬೇಕಾದ ಸಾಹಿತ್ಯಾಂಶಗಳನ್ನು, ಭಾಷಾಂಶಗಳನ್ನು, ಬೋಧನಾ ಕಲಿಕೆಯ ಫಲಿತಗಳನ್ನು ಅನ್ವಯಿಸಿ ಪಠ್ಯಕ್ರಮ ತಯಾರಿಸಲು ಸಿದ್ಧರಾಗುವರು.

**3.1.2. ಪೀಠಿಕೆ**

ಪಠ್ಯಕ್ರಮ ಮತ್ತು ಪಠ್ಯವಸ್ತು ಇತ್ಯಾದಿ ಪರಿಕಲ್ಪನೆಗಳು ಮತ್ತು ಅವುಗಳ ನಡುವಿನ ವ್ಯತ್ಯಾಸ ಇತ್ಯಾದಿ ವಿಷಯಗಳನ್ನು ಮೊದಲ ವರ್ಷದಲ್ಲಿ ಕಲಿತಿರುವಿರಿ. ಒಂದು ವಿಷಯದ, ಅದು ವಿಜ್ಞಾನವಿರಲಿ, ಭಾಷೆಯಾಗಿರಲಿ, ಸಮಾಜವಿಜ್ಞಾನವಾಗಲಿ, ಅದರ ಪಠ್ಯಕ್ರಮವನ್ನು ನಿರ್ಧರಿಸುವುದಾದರೂ ಹೇಗೆ, ಇದಕ್ಕನುಗುಣವಾಗಿ ರಚಿಸುವ ಪಠ್ಯಪುಸ್ತಕಗಳಿಗೆ ಆಧಾರವೇನು ಎಂದು ನೀವು ಸೂಕ್ಷ್ಮವಾಗಿ ಅಲ್ಲದಿದ್ದರೂ ಸ್ಥೂಲವಾಗಿ ನಿಮಗೆ ತಿಳಿದಿರಬಹುದು. ಆಯಾ ಕಾಲದಲ್ಲಿ ರಾಷ್ಟ್ರ ಮತ್ತು ರಾಜ್ಯಮಟ್ಟಗಳು ಹೊರಡಿಸುವ ಮಾರ್ಗಸೂಚಿಗಳು ದಾಖಲೆಗಳ ರೂಪದಲ್ಲಿ ಪ್ರಕಟವಾಗುತ್ತವೆ. ಅದಕ್ಕನುಗುಣವಾಗಿ ಪಠ್ಯಕ್ರಮ, ಪಠ್ಯವಸ್ತು, ಪಠ್ಯಪುಸ್ತಕ ಎಲ್ಲವೂ ರೂಪುಗೊಳ್ಳುತ್ತವೆ. ಪ್ರಾಥಮಿಕ ತರಗತಿಗಳಿಂದ ಹಿಡಿದು ಸೆಕೆಂಡರಿ ಹಂತದವರೆಗಿನ ಪಠ್ಯಕ್ರಮಗಳು ರೂಪುಗೊಳ್ಳಲು ಆಧಾರವಾದ ಮಾರ್ಗದರ್ಶಿಗಳ ಕುರಿತು ಅಧ್ಯಾಪಕರಾದ ನಾವು ಆಳವಾಗಿ ತಿಳಿದು ಆಲೋಚಿಸಬೇಕಾದುದು ನಮ್ಮ ಕರ್ತವ್ಯ. ಈ ಹಿನ್ನೆಲೆಯಲ್ಲಿ ಭಾಷಾ ಪಠ್ಯಕ್ರಮದ ರಚನೆ, ಅದಕ್ಕೆ ಆಧಾರವಾಗಿ ಪ್ರಸ್ತುತಕ್ಕೆ ಸಮರ್ಪಕವಾದ ಮಾರ್ಗಸೂಚಿಗಳನ್ನು ಕನ್ನಡ ಭಾಷಾ ಪಠ್ಯಕ್ರಮ ರಚನೆಯಲ್ಲಿ ಗಮನಿಸಿಕೊಳ್ಳಬೇಕಾದ ಆಯಾಮಗಳನ್ನು ಈ ಘಟಕದಲ್ಲಿ ವಿಚಾರ ಮಾಡೋಣ.

### 3.1.3. ಕಲಿಕೆಯ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

#### 3.1.3.1. ಪಠ್ಯಕ್ರಮ, ಅರ್ಥ ಮತ್ತು ಸ್ವರೂಪ

'ಪಠ್ಯಕ್ರಮ' ಎಂಬ ಪದವು ಇಂಗ್ಲಿಷ್ ಭಾಷೆಯ 'ಕರಿಕ್ಯುಲಮ್'(Curriculum) ಎಂಬ ಪದಕ್ಕೆ ಸಂವಾದಿಯಾಗಿ ಶಿಕ್ಷಣವಲಯದಲ್ಲಿ ಬಳಕೆಯಾಗಿದೆ ಎಂಬುದನ್ನು ನೀವು ಬಲ್ಲಿರಿ. 'ಪಠ್ಯಕ್ರಮ' ಪರಿಕಲ್ಪನೆಯ ಬಗ್ಗೆಯೂ ತಿಳಿದಿರುವಿರಿ. ಕ್ರಿಸ್ತಪೂರ್ವ 4ನೇ ಶತಮಾನದ ತತ್ವಜ್ಞಾನಿಗಳಾಗಿದ್ದ ಪ್ಲೇಟೋ ಮತ್ತು ಅರಿಸ್ಟಾಟಲ್ಲರು ಗ್ರೀಕ್ ನಾಗರಿಕತೆಯ ಕಾಲದ ಶಾಲೆಯಲ್ಲಿ ಬೋಧಿಸುತ್ತಿದ್ದ ಸಾಂಪ್ರದಾಯಿಕ ಅಥವಾ ಪುರಾತನ ಸಾಹಿತ್ಯ-ಸಂಸ್ಕೃತಿಗಳಿಗೆ ಈ ಪದವನ್ನು ಬಳಸುತ್ತಿದ್ದರಂತೆ.

**ಅಭ್ಯಾಸ – 1**

ಈ ಹೇಳಿಕೆಗಳಲ್ಲಿ ಯಾವುದು 'ಪಠ್ಯಕ್ರಮ'ದ ಅರ್ಥವನ್ನು ಸೂಚಿಸುತ್ತದೆ?

1. ಶೈಕ್ಷಣಿಕ ಪ್ರಕ್ರಿಯೆಯಿಂದ ಪಡೆಯಬೇಕಾದ ಕಲಿಕೆಯ ಫಲಗಳನ್ನು ಗುರುತಿಸುವುದು.
2. ಅಪೇಕ್ಷಿತ ಫಲಕ್ಕಾಗಿ ಅವಶ್ಯಕವಾದ ವಿಷಯ ವಿವರಗಳನ್ನು ಆಯ್ದುಕೊಳ್ಳುವುದು.
3. ಆಯ್ದ ವಿಷಯ ವಿವರವನ್ನು ಉತ್ತಮವಾದ ವಿಧಾನ ಮತ್ತು ಚಟುವಟಿಕೆಗಳಿಂದ ನೀಡುವುದು.
4. ವಿಧಾನ ಮತ್ತು ಚಟುವಟಿಕೆಗಳ ಪರಿಣಾಮವನ್ನು ಅಥವಾ ಸಾರ್ಥಕತೆಯನ್ನು ಕಂಡುಹಿಡಿಯುವುದು/ ಅಳೆಯುವುದು.

ಉತ್ತರ : .................

ನೀವು ಎಲ್ಲ ಹೇಳಿಕೆಗಳೂ ಹೌದು ಎಂದು ಉತ್ತರಿಸಿದ್ದರೆ ಸರಿಯಾಗಿ ಉತ್ತರಿಸಿದ್ದೀರಿ. ಯುನೆಸ್ಕೊ ಪ್ರಕಾರ ಪಠ್ಯಕ್ರಮ ಎಂದರೆ 'ನಿರ್ದಿಷ್ಟವಾದ, ಅಪೇಕ್ಷಿತವಾದ ಕಲಿಕಾಫಲವನ್ನು ಪಡೆಯುವುದಕ್ಕಾಗಿ ಕಲಿಕಾ ಸರಣಿಗಳನ್ನು ವ್ಯವಸ್ಥೆ ಮಾಡುವುದು. ಪಠ್ಯಕ್ರಮದ ವಿಕಸನವು(Curriculum Development) ಉತ್ತಮವಾದ ಕಾರ್ಯಸಿದ್ಧಿಯ ಶೋಧನೆಯಲ್ಲಿ ಯೋಜಿತವಾದ ಬದಲಾವಣೆಗಳನ್ನು ಆಚರಣೆಗೆ ತರುವ ಗುರಿಸಾಧನೆಯ ಅಭ್ಯಾಸಗಳ ಸಮೂಹ. ಪಠ್ಯಕ್ರಮವೆಂದರೆ ಶಾಲೆಯು ಕೊಡುವ ಪೂರ್ಣ ವ್ಯಾಸಂಗ ಯೋಜನೆಯಾಗಿದೆ. ಪಠ್ಯವಸ್ತು(syllabus) ಎಂದರೆ ಒಂದು ಅಧ್ಯಯನ ವಿಷಯದ ಸ್ಥೂಲಚಿತ್ರಣ ಎಂದು ಯುನೆಸ್ಕೊ ಸ್ಪಷ್ಟನೆ ನೀಡಿ ಪಠ್ಯಕ್ರಮ ಮತ್ತು ಪಠ್ಯವಸ್ತು ಎರಡೂ ಪರಿಕಲ್ಪನೆಗಳ ವ್ಯತ್ಯಾಸ ತಿಳಿಸಿದೆ.

ಪಠ್ಯಕ್ರಮವು ಬೋಧನೆಯ ಉದ್ದೇಶಗಳು, ವಿಷಯ ವಿವರ, ವಿದ್ಯಾರ್ಥಿಗಳ ಕಲಿಕಾಕ್ರಮವನ್ನೂ ಒಳಗೊಂಡಂತೆ ಬೋಧನಾವಿಧಾನ ಮತ್ತು ಮೌಲ್ಯಮಾಪನ ಎಂಬ ನಾಲ್ಕು ಘಟಕಗಳನ್ನು ಹೊಂದಿರುತ್ತದೆ. ಈ ಘಟಕಗಳನ್ನು ವಿಸ್ತರಿಸಿ ಹೀಗೆ ಹೇಳಬಹುದು:

- ಬೋಧನೆಯ ಉದ್ದೇಶಗಳು ಬಹುತೇಕ ಶಿಕ್ಷಣದ ತಾತ್ವಿಕ ಬುನಾದಿ ಮತ್ತು ಸಮಾಜದಲ್ಲಿನ ಮೌಲ್ಯಗಳಿಂದ ಪ್ರಭಾವಿತವಾಗಿ, ನಿರ್ದಿಷ್ಟ ಕಲಿಕೆಯ ಪರಿಣಾಮ ಅಥವಾ ವರ್ತನೆಯಲ್ಲಿ ಅಪೇಕ್ಷಿತ ಬದಲಾವಣೆಗಳನ್ನು ಸೂಚಿಸುತ್ತದೆ.
- ಇದನ್ನು ರೂಪಿಸುವ ಪ್ರಕ್ರಿಯೆಯಲ್ಲಿ ಉದ್ದೇಶವನ್ನು ಈಡೇರಿಸಲು, ಕಲಿಯುವವನ ಸಾಮರ್ಥ್ಯ, ಸಮಾಜದ ನಿರೀಕ್ಷೆಗಳು ಮತ್ತು ವ್ಯಾಪ್ತಿಯನ್ನು ಗಮನಿಸಿಕೊಂಡು ಭವಿಷ್ಯತ್ತಿನಲ್ಲಿ ಉಪಯೋಗವಾಗುವಂತೆ ವಿಷಯಗಳನ್ನು ವ್ಯವಸ್ಥಿತವಾದ ರೀತಿಯಲ್ಲಿ ಆಯ್ಕೆಮಾಡಲಾಗುವುದು.
- ಕಲಿಯುವವನ ವರ್ತನೆಯ ವಿವಿಧ ಆಯಾಮಗಳ ಮೇಲೆ ಪ್ರಭಾವ ಬೀರುವುದಕ್ಕೆ ಅನುಗುಣವಾದ ವಿಷಯ ಸಂವಹನ ಪ್ರಕ್ರಿಯೆ ಅಂದರೆ ಬೋಧನಾ-ಕಲಿಕಾ ಕ್ರಮ ಕೈಗೊಳ್ಳಲಾಗುವುದು.
- ಉದ್ದೇಶಗಳಿಗೆ ಅನುಗುಣವಾದ ವಿಷಯವಸ್ತುವಿನ ಆಯ್ಕೆ ಮತ್ತು ಅದಕ್ಕೆ ಸೂಕ್ತವಾದ ಬೋಧನಾ ಕ್ರಮ ಬಳಸುವುದರಿಂದ ಆಗುವ ಫಲಿತಗಳನ್ನು ಮೌಲ್ಯಮಾಪನ ಮಾಡುವುದು.

- ಪಠ್ಯಕ್ರಮವು ಶೈಕ್ಷಣಿಕ ಗುರಿ ಸಾಧನೆಗಾಗಿ ವಿಷಯವನ್ನು ಕಲಿಕೆಯ ಅನುಭವಗಳನ್ನಾಗಿ ಪರಿವರ್ತಿಸಿ ವರ್ತನೆಗಳನ್ನು ಕಲಿಕೆಯ ಫಲಗಳಾಗಿ ರೂಪಿಸಲು ಆಧಾರವಾಗಿದೆ.

**ಪಠ್ಯಕ್ರಮ ರಚನೆಯ ತತ್ವಗಳು**

ನೀವು ಈಗಾಗಲೇ ವಿವಿಧ ಪಠ್ಯಪುಸ್ತಕಗಳನ್ನು ನಿಮ್ಮ ಬೋಧನ ಕಾರ್ಯಕ್ಕಾಗಿ ಕೂಲಂಕಷವಾಗಿ ಗಮನಿಸಿರುವಿರಿ. ಪ್ರಸಕ್ತ ಪಠ್ಯಪುಸ್ತಕಗಳು 2005ನೇ ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟಿನ ಆಧಾರದ ಮೇಲೆ ರಚಿತವಾದುದೆಂದು ತಿಳಿದಿರುವಿರಿ. ಮಿಗಿಲಾಗಿ ಬೋಧನ ಕಾಲದಲ್ಲಿ ಆ ಪಠ್ಯಕ್ರಮದ ಆಶಯವನ್ನು ಅನುಸರಿಸಲು ಪ್ರಯತ್ನಿಸುತ್ತೀರಲ್ಲವೇ?

ಈ ಕೆಳಗಿನ ಚೌಕಟ್ಟಿನಲ್ಲಿ 2005 ರ ರಾಷ್ಟ್ರೀಯ ಪಠ್ಯಕ್ರಮದ ವೈಶಿಷ್ಟ್ಯಗಳನ್ನು ಪಟ್ಟಿಮಾಡಿ.

| |
|---|
| |

ಈ ಅಂಶಗಳೊಂದಿಗೆ ನೀವು ಪಟ್ಟಿಮಾಡಿರುವ ಸಮರ್ಪಕ ಅಂಶಗಳನ್ನು ಹೋಲಿಸಿ.

- ಕಲಿಕೆಯನ್ನು ಇಂದಿನ ಮತ್ತು ಭವಿಷ್ಯದ ಜೀವನಾವಶ್ಯಕತೆಗಳೊಂದಿಗೆ ಜೋಡಿಸುವುದು;
- ಜ್ಞಾನವನ್ನು ಶಾಲೆಯಿಂದಾಚೆಗಿನ ಬದುಕಿಗೆ ಜೋಡಿಸುವುದು;
- ಪಠ್ಯಪುಸ್ತಕಗಳಿಗೆ ಹೊರತಾಗಿ ಪಠ್ಯಕ್ರಮವನ್ನು ಶ್ರೀಮಂತಗೊಳಿಸುವುದು;
- ವಿಷಯಗಳ ಮೇರೆಗಳನ್ನು ಮೀರಿ ಅವುಗಳಿಗೆ ಸಮಗ್ರ ದೃಷ್ಟಿಯ ಬೋಧನೆಯನ್ನು ಅಳವಡಿಸುವುದು;
- ಭಾರತದ ಪ್ರಜಾಸತ್ತಾತ್ಮಕ ನೀತಿಯನ್ವಯ ಮಕ್ಕಳ ಅವಶ್ಯಕತೆಗಳಿಗೆ ಹೊಂದುವಂತೆ ಮಾಡುವುದು;
- ಕಂಠಪಾಠ ವಿಧಾನದ ಕಲಿಕೆಯಿಂದ ಹೊರಬಂದು, ಜ್ಞಾನದ ಅಭಿವೃದ್ಧಿಗೆ ಕಲಿಕಾ ಅನುಭವಗಳನ್ನು ಬಳಸುವುದು; ಮತ್ತು
- ವಿದ್ಯಾರ್ಥಿಗಳಿಂದಲೇ ಜ್ಞಾನವನ್ನು ಸಂರಚಿಸಿ ಅಭಿವೃದ್ಧಿಪಡಿಸುವುದು.

ಯಾವುದೇ ಶೈಕ್ಷಣಿಕ ಪ್ರಕ್ರಿಯೆ ಸಾರ್ಥಕವಾಗಬೇಕಾದರೆ ಪಠ್ಯಕ್ರಮ ರಚನೆಯ ಮಾರ್ಗದರ್ಶಿ ತತ್ವಗಳಿಗೆ ಅನುಗುಣವಾಗಿರಬೇಕೆಂಬುದು ಗಮನಿಸಬೇಕಾದ ಅಂಶ. ಆ ತತ್ವಗಳನ್ನು ಹೀಗೆ ಪಟ್ಟಿಮಾಡಬಹುದು.

- ಶಿಕ್ಷಣ ವಿದ್ಯಾರ್ಥಿಕೇಂದ್ರಿತವಾಗಿರಬೇಕು. ಆದ್ದರಿಂದ ಪಠ್ಯಕ್ರಮದಲ್ಲಿ ಅಳವಡಿಸುವ ವಿಷಯಗಳು ವಿದ್ಯಾರ್ಥಿಯ ವಯೋಮಟ್ಟಕ್ಕೆ ಮತ್ತು ಮಾನಸಿಕಮಟ್ಟಕ್ಕೆ ಅನುಗುಣವಾಗಿದ್ದು, ವೈವಿಧ್ಯಮಯವೂ ಆಗಿರಬೇಕು.
- ವ್ಯಾಸಂಗದ ಅವಧಿ, ಸ್ವರೂಪ, ಉದ್ದೇಶಗಳು ಹಾಗೂ ಶಿಕ್ಷಣದ ಮಟ್ಟ ಇವುಗಳ ನಡುವೆ ಪರಸ್ಪರ ಹೊಂದಾಣಿಕೆ ಇರಬೇಕು.
- ವಿವಿಧ ವಿಷಯಗಳು ಪರಸ್ಪರ ಪೂರಕವಾಗಿದ್ದು ಸಮಗ್ರ ಕಲಿಕೆಗೆ ಎಡೆಮಾಡಿಕೊಡಬೇಕು. ಜೊತೆಗೆ ಸಮನ್ವಯ ತತ್ವಕ್ಕೆ ಅನುಗುಣವಾಗಿರಬೇಕು.

- ಸಾಮಾಜಿಕ ಹಾಗೂ ಸಾಂಸ್ಕೃತಿಕ ಮೌಲ್ಯಪರಂಪರೆಯನ್ನು ಸಂರಕ್ಷಿಸುವ ಮತ್ತು ಸಂವಹನಗೊಳಿಸುವ ಆಶಯ ಹೊಂದಿರಬೇಕು. ಸಾಮಾಜಿಕನ್ಯಾಯ ಮತ್ತು ರಾಷ್ಟ್ರೀಯಪ್ರಜ್ಞೆಯ ಅಂಶಗಳು ಗೋಚರವಾಗಬೇಕು.
- ಸ್ಥಳ, ಸನ್ನಿವೇಶ, ಪ್ರಾದೇಶಿಕ ಸಂಸ್ಕೃತಿಗಳಿಗೆ ಹೊಂದಾಣಿಕೆ ಮಾಡುವಂತೆ ಮಾರ್ಪಡಿಸಿಕೊಳ್ಳುವುದಕ್ಕೆ ಅವಕಾಶ ಕಲ್ಪಿಸುವಂತೆ ನಮ್ಯವಾಗಿರಬೇಕು.
- ದೂರದೃಷ್ಟಿಯ ತತ್ವವಿರಬೇಕು. ಅಂದರೆ ವಿದ್ಯಾರ್ಥಿಯ ವರ್ತಮಾನ, ಭವಿಷ್ಯತ್‌ನ ಅವಶ್ಯಕತೆಗಳಿಗೆ ಅನುರೂಪವಾಗಿ ಜ್ಞಾನ, ಕೌಶಲ, ಮನೋಭಾವ ಮತ್ತು ಮೌಲ್ಯಗಳನ್ನು ಹೊಂದಿಸಿಕೊಳ್ಳಲು ಅನುಕೂಲವಾಗುವಂತಿರಬೇಕು.
- ವ್ಯಕ್ತಿಯು ಸಮುದಾಯದಲ್ಲಿ ಯಶಸ್ವಿಯಾಗಲು ಬೇಕಾದ ಸಾಮಾಜಿಕ ಅಪೇಕ್ಷೆಗಳು, ಆಸಕ್ತಿಗಳು, ಮೌಲ್ಯಗಳನ್ನು ಒಳಗೊಂಡಿರುವಂತೆ ಸಮಷ್ಟಿತತ್ವಕ್ಕೆ ಅನುಗುಣವಾಗಿರಬೇಕು.

ಒಟ್ಟಿನಲ್ಲಿ ಪಠ್ಯಕ್ರಮ ರೂಪಿಸುವವರು ಕೆಳಗಿನ ಚಟುವಟಿಕೆಗಳನ್ನು ಕೈಗೊಳ್ಳಬೇಕು:
ಬೋಧನಾ-ಕಲಿಕೆಯ ಪ್ರಕ್ರಿಯೆಗೆ ಸಂಬಂಧಿಸಿದಂತೆ

- ಗುರಿಗಳನ್ನು ಮತ್ತು ಉದ್ದೇಶಗಳನ್ನು ಸೂಚಿಸುವುದು,
- ಕಲಿಕೆಯ ಫಲಗಳನ್ನು ನಿರ್ದಿಷ್ಟ ಪಡಿಸುವುದು,
- ಮೌಲ್ಯಾಂಕನ ದರ್ಜೆಗಳನ್ನು ನಿರ್ದಿಷ್ಟ ಪಡಿಸುವುದು.

ಪಠ್ಯವಸ್ತು (Content) ಪಾಠಗಳ ಸರಣಿಗೆ ಸಂಬಂಧಿಸಿದಂತೆ

- ವಿಷಯ ಮತ್ತು ಲೇಖನಗಳನ್ನು ಸೂಚಿಸುವುದು,
- ಕಲಿಕೆಯ ಚಟುವಟಿಕೆಗಳನ್ನು ಮತ್ತು ಶಿಕ್ಷಕರ ಪಾತ್ರವನ್ನು ಸ್ಪಷ್ಟಪಡಿಸುವುದು
- ತರಗತಿಯ ಎಲ್ಲ ಕಾಲಿಕಾ ಚಟುವಟಿಕೆಗಳನ್ನು ಸರಿತೂಗಿಸುವ ಬಗ್ಗೆ ಪ್ರತಿಫಲನ ಚಿಂತನೆ ಕೈಗೊಳ್ಳುವುದು.
- ಕೊನೆಯದಾಗಿ ಸಾಧನಗಳನ್ನು ಮತ್ತು ಸಂಪನ್ಮೂಲಗಳನ್ನು ಸೂಚಿಸುವುದು. ಪಾಠ ಬೋಧನೆಗೆ ಅಗತ್ಯವಾದ ಹಿನ್ನೆಲೆ, ಪಾಠ ವಿಕಾಸಕ್ಕೆ ಅಗತ್ಯ ಮಾಹಿತಿ ದೊರೆಯುವ ಪರಾಮರ್ಶನ ಸಾಮಗ್ರಿ ಮುಂತಾದವುಗಳನ್ನು ಒದಗಿಸುವುದು. ವಿದ್ಯಾರ್ಥಿಗಳ ಕಲಿಕೆಯ ಪ್ರಗತಿಯನ್ನು ಗುರುತಿಸುವ ಕ್ರಮಗಳನ್ನು ಸೂಚಿಸುವುದು.

**ಭಾಷಾಪಠ್ಯಕ್ರಮದ ಸ್ವರೂಪ**

ನೀವು ಈಗಾಗಲೇ ಅರಿತಿರುವಂತೆ ಪಠ್ಯಕ್ರಮವು ಶಿಕ್ಷಣದ ಎಲ್ಲ ಅಂಶಗಳನ್ನು (ಅಂದರೆ- ಬೌದ್ಧಿಕ, ದೈಹಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಭಾವನಾತ್ಮಕ)ಒಳಗೊಳ್ಳುತ್ತದೆ. ಅದಕ್ಕೇ ಬಹುಶಃ ಕನ್ನಿಂಗ್‌ಹ್ಯಾಮ್‌ರವರು ಪಠ್ಯಕ್ರಮವನ್ನು ಕಲಾವಿದನ ಕೈಯಲ್ಲಿರುವ ಸಾಧನದಂತೆ ಎಂದು ಹೇಳಿದ್ದಾರೆ.

ವಿದ್ಯಾರ್ಥಿಗಳ ವ್ಯಕ್ತಿತ್ವವು ವಿಕಾಸವಾಗಿ ಜಾಗತೀಕರಣಗೊಳ್ಳುತ್ತಿರುವ ಪ್ರಪಂಚದಲ್ಲಿ ಎಲ್ಲ ಸವಾಲುಗಳನ್ನು ಎದುರಿಸಿ ಯಶಸಿಯಾಗುವಂತೆ ಭಾಷಾ ಪಠ್ಯಕ್ರಮವು ರೂಪುಗೊಳ್ಳಬೇಕು. ದೇಶೀಯ ಸಾಮಾಜಿಕ ಮತ್ತು ಸಾಂಸ್ಕೃತಿಕ ಜಗತ್ತಿನಲ್ಲಿ ಪರಿಣಾಮಕಾರಿಯಾಗಿ ಯಶಸ್ವಿ ಸದಸ್ಯನಾಗುವಂತೆ ವಿದ್ಯಾರ್ಥಿಯನ್ನು ಬೆಳೆಸಬೇಕು. ಅಂದರೆ ಭಾಷಾ ಪಠ್ಯಕ್ರಮವು ವಿದ್ಯಾರ್ಥಿಗಳ ಭಾಷಾಅನುಭವಗಳನ್ನು ಶ್ರೀಮಂತಗೊಳಿಸುವ ಮತ್ತು ಸಾಹಿತ್ಯಜ್ಞಾನವನ್ನು ಸಂಪನ್ನಗೊಳಿಸುವ ರೀತಿಯಲ್ಲಿ ಯೋಜಿತವಾದ ಪಠ್ಯ ಮಾಹಿತಿಯನ್ನು(Content Information) ಒದಗಿಸಬೇಕು.

ಭಾಷಾ ಪಠ್ಯಕ್ರಮವನ್ನು ಯೋಜಿಸುವುದೆಂದರೆ ಒಂದು ಭಾಷೆಯ ಸಾಹಿತ್ಯಪಾಠಗಳನ್ನು ಆ ಭಾಷೆಯ ಕೌಶಲ್ಯಗಳ ಕಲಿಕೆ ಮತ್ತು ಬರೆವಣಿಗೆ ಕಾರ್ಯಕಲಿಕೆಯ ಸಹಯೋಗದಲ್ಲಿ ಸಂಮಿಶ್ರ ಮಾಡುವುದು ಎಂದು ಅರ್ಥೈಸಬಹುದು.

- ಪ್ರಥಮಭಾಷಾ ಅಧ್ಯಯನಕ್ಕೆ ಸಂಬಂಧಿಸಿ ಹೇಳುವುದಾದರೆ, ವಿದ್ಯಾರ್ಥಿಗಳು ಪ್ರೌಢಶಾಲೆಗೆ ಬರುವ ವೇಳೆಗೆ ಎಲ್ಲ ಹಂತಗಳ ಮತ್ತು ವಿವಿಧ ಪ್ರಕಾರದ ಸಾಹಿತ್ಯವನ್ನು ಅರ್ಥಮಾಡಿಕೊಳ್ಳಬಲ್ಲ ವಾಚನ (ಅಧ್ಯಯನ) ಕೌಶಲಗಳನ್ನು ಹೊಂದಿರಬೇಕು. ಆದ್ದರಿಂದ ಆಧುನಿಕ ಸಾಹಿತ್ಯ ಪಾಠಗಳನ್ನು ಅಧ್ಯಯನ ಮಾಡಲು ಸಿದ್ಧವಾಗಿರಬೇಕು;
- ಪ್ರಾತಿನಿಧಿಕವಾಗಿ ಪ್ರಸಿದ್ಧ ಕವಿಗಳ ರಚನಾ ಶೈಲಿ ತಿಳಿಯುವಂತಿರಬೇಕು;
- ಪ್ರೌಢಶಾಲಾ (ಮತ್ತು ಪದವಿ ಪೂರ್ವ) ಹಂತದಾದ್ಯಂತ ವಿಧಿಸಿದ ಭಾಷಾಪಠ್ಯವು ವಿವಿಧ ಕಾಲಘಟ್ಟಗಳಲ್ಲಿ ಬೆಳೆದ, ಸಂಸ್ಕೃತಿಗಳಿಂದ ಪ್ರಭಾವಿತವಾದ, ವಿವಿಧ ಪ್ರಕಾರಗಳಲ್ಲಿ ರಚನೆಯಾದ ಸಾಹಿತ್ಯವನ್ನು ಒಳಗೊಂಡಿರಬೇಕು;
- ಆಧುನಿಕ ವಿದ್ಯಾರ್ಥಿಲೋಕಕ್ಕೆ ಇಂದಿಗೂ ಸಲ್ಲುವಂತಹ ಕಾಲಾತೀತವಾದ ಸಾರ್ವತ್ರಿಕ ಲೇಖನ ವಿಚಾರ (theme)ಗಳನ್ನು ಒಳಗೊಂಡ ಸಾಹಿತ್ಯದ ಪಾಠಗಳನ್ನು ಭಾಷಾ ಪಠ್ಯಕ್ರಮದಲ್ಲಿ ಸೇರಿಸುವುದರಿಂದ ವಿದ್ಯಾರ್ಥಿಗಳಲ್ಲಿ ಸಾಹಿತ್ಯಾಸಕ್ತಿ ಉಳಿಸಿ ಬೆಳೆಸಬಹುದು;
- ಭಾಷಾಪಠ್ಯಕ್ರಮವು ಸೂಚಿತ ಪಠ್ಯೇತರ ಕೃತಿಗಳನ್ನು ಓದುವ ಅಭೀಪ್ಸೆಯನ್ನು ಬೆಳೆಸುವಂತಿರಬೇಕು. ಅದಕ್ಕಾಗಿ ಪ್ರತಿಮೆಗಳ ಸೃಷ್ಟಿ, ವಿಡಂಬನೆ, ದೃಷ್ಟಿಕೋನ, ಹಿನ್ನೋಟ ತಂತ್ರ (flash back) ಮುಂತಾದ ಪರಿಕಲ್ಪನೆಗಳ ಪರಿಚಯಾತ್ಮಕ ಜ್ಞಾನವನ್ನು ಒದಗಿಸಬೇಕು;

ಪ್ರೌಢಶಾಲಾ ಭಾಷಾಪಠ್ಯಕ್ರಮವು ಮಾತುಗಾರಿಕೆ ಮತ್ತು ಬರೆವಣಿಗೆ ಕೌಶಲಗಳಲ್ಲಿ ಭಾಷೆಯ ಬಳಕೆಯ ಕುರಿತು ಶ್ರೀಮಂತ ಅನುಭವಗಳನ್ನು ಒದಗಿಸುವಂತಿರಬೇಕು. ಅಂದರೆ,

- ವಾಕ್ಯ ರಚನಾ ವಿನ್ಯಾಸಗಳಲ್ಲಿ ವೈವಿಧ್ಯ, ಕಾಲ ಬದಲಾವಣೆ ಮಾಡುವ ಕ್ರಮ ಮತ್ತು ಅವುಗಳ ಬಳಕೆಯ ತಂತ್ರಗಳು ಸೂಚಿತವಾಗಬೇಕು;
- ಸರಳ, ಸಂಯುಕ್ತ ಮತ್ತು ಮಿಶ್ರ ವಾಕ್ಯಗಳನ್ನು ಗುರುತಿಸುವಂತಿರಬೇಕು;
- ಪದಸಮುಚ್ಚಯಗಳು, ನುಡಿಗಟ್ಟುಗಳು ಅವುಗಳ ರಚನೆ/ ಮೂಲಗಳನ್ನು ತಿಳಿಯುವಂತೆ ಪಠ್ಯದಲ್ಲಿ ಬಳಕೆಯಾಗಬೇಕು.
- ಉಪಸರ್ಗ ಮತ್ತು ಪ್ರತ್ಯಯೀಕರಣ ಹೇಗೆ ಪದಗಳ ಅರ್ಥವನ್ನು ಬದಲಿಸುವವು ಎಂಬುದನ್ನು ಗ್ರಹಿಸಲು ಅನುಕೂಲವಾಗಿರಬೇಕು.
- ಪದ್ಯ–ಗದ್ಯಾದಿ ಪಾಠಗಳಲ್ಲಿ ಆಲಂಕಾರಿಕ ಭಾಷಾಸ್ವರೂಪವನ್ನು ಗುರುತಿಸಿ ಪ್ರಶಂಸಿಸಲು ಉದಾಹರಣೆಗಳು ಸೂಕ್ತವಾಗಿ ಬಳಕೆಯಾಗಿರುವ ಸಾಹಿತ್ಯಭಾಗಗಳಿಂದ ಕೂಡಿರಬೇಕು.
- ಪಠ್ಯದ ಗದ್ಯ–ಪದ್ಯಾದಿಗಳಿಗೆ ಆಯ್ದುಕೊಳ್ಳುವ ಸಾಹಿತ್ಯಭಾಗವು ಮಾನವ ಕರ್ತೃತ್ವಶಕ್ತಿಯ ಆಳ ಮತ್ತು ವ್ಯಾಪ್ತಿಯನ್ನು, ವೈವಿಧ್ಯವನ್ನು ವಿದ್ಯಾರ್ಥಿಗಳು ಗುರುತಿಸಿ, ಅರ್ಥೈಸಿ ಮೆಚ್ಚುವಂತಿರರಬೇಕು.
- ವಿದ್ಯಾರ್ಥಿಗಳು ತಾವು ಕೇಳಿದ ಮತ್ತು ಓದಿದುದರ ಬಗ್ಗೆ ಬಾಯ್ದೆರೆಯಾಗಿ ಮತ್ತು ಲಿಖಿತರೂಪದಲ್ಲಿ ಅಭಿವ್ಯಕ್ತಿಸುವ ಸಾಮರ್ಥ್ಯಗಳಲ್ಲಿ ಪ್ರಭುತ್ವ ಪಡೆಯುವಂತೆ ಭಾಷಾಪಠ್ಯಕ್ರಮವಿರಬೇಕು.
- ಪಠ್ಯಕ್ರಮದಲ್ಲಿ ಅಪೇಕ್ಷಿತ ಮೌಲ್ಯಗಳನ್ನು ಮತ್ತು ಮನೋಭಾವಗಳನ್ನು ಮೂಡಿಸಲು ಬಹು ಜಾಗರೂಕತೆಯಿಂದ ಆಯ್ದ ಸಾಹಿತ್ಯ ಸಾಮಗ್ರಿಗಳಿರಬೇಕು.

- ಭಾಷಾಪಠ್ಯಕ್ರಮವು ಪ್ರೌಢಶಾಲಾ ಹಂತದ ವಿದ್ಯಾರ್ಥಿಗಳಿಗೆ ಸ್ವತಂತ್ರ ಮತ್ತು ಸೃಜನಾತ್ಮಕ ಬರೆವಣಿಗೆಗೆ ಮತ್ತು ಮಾತುಗಾರಿಕೆಗೆ ಅವಕಾಶ ನೀಡಲು ಆಯೋಜಿಸಿ ಪ್ರಾಯೋಗಿಕ ರೂಪಕ್ಕೆ ತರುವಂತಿರಬೇಕು.
- ಉತ್ತಮ ಭಾಷಾಪಠ್ಯಕ್ರಮವು ಓದನ್ನು ಪರಾಮರ್ಶೆಯ ಉಪಕರಣವಾಗಿ ಬಳಸಲು ವಿದ್ಯಾರ್ಥಿಗಳಿಗೆ ಆಕರ ಗ್ರಂಥಗಳ, ವಿಶ್ವಕೋಶಗಳ ಮತ್ತು ಅಂತರ್ಜಾಲ ಕೊಂಡಿಗಳ ಸಲಹೆಯನ್ನು ಒದಗಿಸುವುದು ಅಗತ್ಯ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

ಸೂಚನೆ: ಹೇಳಿಕೆಯ ಕೆಳಗೆ ನೀಡಿರುವ ಆಯ್ಕೆಗಳಿಂದ ಸರಿ ಉತ್ತರ ಗುರುತಿಸಿರಿ:

**1. ಪಠ್ಯಕ್ರಮ ಎಂದರೆ______________**

(ಅ) ಅಪೇಕ್ಷಿತ ಕಲಿಕಾ ಫಲಗಳ ಪಟ್ಟಿ

(ಬ) ಕಲಿಕೆಯ ಮೌಲ್ಯಮಾಪನ

(ಕ) ಕಲಿಕಾ ಫಲಕ್ಕಾಗಿ ಕಲಿಕಾ ಸರಣಿಗಳ ವ್ಯವಸ್ಥೆ

**2. ಪಠ್ಯಕ್ರಮವು ವಿದ್ಯಾರ್ಥಿಯ ವರ್ತಮಾನ ಮತ್ತು ಭವಿಷ್ಯದ ಅವಶ್ಯಕತೆಗೆ ಪೂರಕವಾಗಿರಬೇಕು ಎಂಬಲ್ಲಿ ಅಡಗಿರುವ ತತ್ವ ______________**

(ಅ) ವಿದ್ಯಾರ್ಥಿ ಕೇಂದ್ರಿತವಾಗಿರುವುದು

(ಬ) ದೂರದೃಷ್ಟಿ ಇರುವುದು

(ಕ) ರಾಷ್ಟ್ರೀಯ ಪ್ರಜ್ಞೆಯಿರುವುದು

**3. ಸಮಷ್ಟಿ ಪ್ರಜ್ಞೆಯ ತತ್ವ ಒಳಗೊಳ್ಳುವುದು______________**

(ಅ) ವ್ಯಕ್ತಿಯ ಬೆಳವಣಿಗೆ

(ಬ) ಸಾಮಾಜಿಕ ಮೌಲ್ಯಗಳ ಪಾಲನೆ

(ಕ) ವ್ಯಕ್ತಿ ವಿಕಾಸ ಮತ್ತು ಸಮುದಾಯದ ಪ್ರಗತಿ

**3.1.3.4. ಕನ್ನಡ ಭಾಷಾ ಪಠ್ಯಕ್ರಮದ ಆಯಾಮಗಳು**

ಶೈಕ್ಷಣಿಕ ಜೀವನದಲ್ಲಿ ಮತ್ತು ಶಿಕ್ಷಣಾನಂತರದ ಜೀವನದಲ್ಲಿ ಭಾಷಾಕಲಿಕೆ (ಅದರಲ್ಲೂ ಪ್ರಥಮ ಭಾಷೆ/ ತಾಯ್ನುಡಿ) ಮತ್ತು ಬಳಕೆ ಅತ್ಯಂತ ಮಹತ್ವವಾದುದೆಂದು ತಿಳಿದಿರುವಿರಿ. ಮೊದಲ ಬ್ಲಾಕ್‌ನಲ್ಲಿಯೇ ಕನ್ನಡ ಭಾಷಾ ಬೋಧನೆಯ ಉದ್ದೇಶಗಳನ್ನು ವಿವರವಾಗಿ ತಿಳಿದಿರುವಿರಿ. ಆ ಉದ್ದೇಶಗಳ ಸಾಧನೆಗೆ ಅನುಕೂಲವಾಗುವಂತಹ ಪಠ್ಯಕ್ರಮ ಅಗತ್ಯ. ಪಠ್ಯಕ್ರಮವು ಕನ್ನಡ ಭಾಷಾಕಲಿಕೆ, ಕನ್ನಡ ಸಾಹಿತ್ಯಾಭಿರುಚಿ ಮತ್ತು ಜ್ಞಾನಸಂವರ್ಧನೆಗೆ ಅನುಕೂಲಿಸುವಂತಿರಬೇಕೆಂದೂ ನಿಮಗೆ ತಿಳಿದಿದೆ. ಅಂದರೆ ಕನ್ನಡ ಭಾಷೆ ಪಠ್ಯಕ್ರಮ ಹೇಗಿರಬೇಕೆಂಬುದಕ್ಕೆ ಆಧಾರವಾಗಿ ಕನ್ನಡ ಭಾಷಾಬೋಧನೆಯ ಉದ್ದೇಶಗಳನ್ನು ಮೊದಲಿಗೆ ಗಣನೆಗೆ ತೆಗೆದುಕೊಳ್ಳಬೇಕು.

ಈ ಕೆಳಗಿನವುಗಳಲ್ಲಿ ಯಾವ ಹೇಳಿಕೆಗಳನ್ನು ಪ್ರೌಢಶಾಲಾ ಕನ್ನಡಭಾಷಾ ಪಠ್ಯಕ್ರಮ ರಚನೆಯಲ್ಲಿ ಗಮನಿಸಬೇಕೆಂದು ಗುರುತಿಸಿರಿ:

1. ಆಲಿಸುವ, ಗ್ರಹಿಸುವ ಮತ್ತು ವೇಗವಾಗಿ ಓದುವ ಸಾಮರ್ಥ್ಯಗಳ ಅಭಿವೃದ್ಧಿ.
2. ಸಾಮರ್ಥ್ಯಾಧಾರಿತ ಕನಿಷ್ಠಮಟ್ಟದ ಕಲಿಕೆ.
3. ಪರಿಣಾಮಕಾರಿಯಾದ ಮೌಖಿಕ ಮತ್ತು ಲಿಖಿತ ಅಭಿವ್ಯಕ್ತಿ ಸಾಮರ್ಥ್ಯಗಳ ಸಾಧನೆ.
4. ವಿವಿಧ ಉದ್ದೇಶಗಳಿಗಾಗಿ ಸ್ವತಂತ್ರವಾಗಿ ಓದುವ ಸಾಮರ್ಥ್ಯ ಗಳಿಕೆ.
5. ಶಿಷ್ಟ ಭಾಷೆಯ ಶುದ್ಧಬಳಕೆಯೊಂದಿಗೆ ಪದಸಂಪತ್ತಿನ ವೃದ್ಧಿ ಮತ್ತು ಸ್ವತಂತ್ರ ಶೈಲಿಯನ್ನು ಹೊಂದುವುದು.
6. ವ್ಯಾವಹಾರಿಕ ಪ್ರಪಂಚದ ಸಂವಹನ ಸಂಪರ್ಕಕ್ಕಾಗಿಯೇ ಭಾಷೆಯನ್ನು ಕಲಿಯುವುದು.

7. ಸಾಹಿತ್ಯ ಮತ್ತು ಸಂಸ್ಕೃತಿಯ ಬಗ್ಗೆ ಅಭಿಮಾನ ಮತ್ತು ಆಸಕ್ತಿ ಹೊಂದುವುದು.
8. ವ್ಯಕ್ತಿತ್ವ ವಿಕಾಸಕ್ಕೆ ಸಾಧಕವಾಗುವ ಜೀವನ ಮೌಲ್ಯಗಳನ್ನು ಮೂಡಿಸಿಕೊಳ್ಳುವುದು.
9. ಕನ್ನಡ ಸಾಹಿತ್ಯದ ಪ್ರಮುಖ ಪ್ರಕಾರಗಳ ಕೃತಿಗಳ ಮತ್ತು ಕೃತಿಕಾರರ ಪರಿಚಯ ಹೊಂದುವುದು.
10. ಸೃಜನಶೀಲತೆಯನ್ನು ಬೆಳೆಸಿಕೊಳ್ಳುವುದು.

ಉತ್ತರ : ...................................

ಎರಡು ಮತ್ತು ಆರನೇ ಹೇಳಿಕೆಗಳನ್ನು ಹೊರತುಪಡಿಸಿ ಉಳಿದ ಎಲ್ಲವೂ ಸರಿಯಾದ ಹೇಳಿಕೆಗಳಾಗಿವೆಯಲ್ಲವೇ...

ಯಾವುದೇ ಭಾಷಾ ಪಠ್ಯಕ್ರಮವು ಈ ಕೆಳಗೆ ವಿವರಿಸಿರುವ ಆಯಾಮಗಳನ್ನು ಹೊಂದಿರುತ್ತದೆ:

**I. ಭಾಷೆಯ ವಿವಿಧ ಹಂತದ ಭಾಷಾರೂಪಗಳ ಪರಿಚಯ.**

ಈ ಕೆಳಗಿನ ಪ್ರಮುಖ ಉದ್ದೇಶಗಳನ್ನು ಸಾಧಿಸಲು ಅನುಕೂಲವಾಗುವಂತೆ ಜೀವನ ಮತ್ತು ಜ್ಞಾನದ ಆಯಾಮಗಳಿಂದ ಪಠ್ಯಸಾಮಗ್ರಿಯನ್ನು ಆಯ್ದು ಕೊಳ್ಳಲಾಗುವುದು. ಈ ಕೆಳಗಿನ 16 ವಿಷಯಗಳು ಪಠ್ಯ ಸಾಮಗ್ರಿಯ ಆಧಾರಗಳಾಗಿವೆ:

1. ಸಮಾಜ, ಸಾಮಾಜಿಕನ್ಯಾಯ (ಭಾರತೀಯ ಸಂದರ್ಭ) ಸಾಮಾಜಿಕ ಸಮಸ್ಯೆಗಳು (ಜನಸಂಖ್ಯೆ, ವರದಕ್ಷಿಣೆ, ಮದ್ಯಪಾನ , ಭಯೋತ್ಪಾದನೆ, ತಾರತಮ್ಯ ಮುಂತಾದ ಪ್ರಚಲಿತ ಸಮಸ್ಯೆಗಳು.
2. ಪರಿಸರ ರಕ್ಷಣೆ, ವನ ಮತ್ತು ವನ್ಯ ಪ್ರಾಣಿಗಳ ರಕ್ಷಣೆ, ಪಕ್ಷಿಸಂಕುಲ ರಕ್ಷಣೆ.
3. ಕೃಷಿ, ಕೈಗಾರಿಕೆ ಮತ್ತು ಉತ್ಪಾದನೆ.
4. ಕ್ರೀಡೆಗಳು (ಪೌರ್ವಾತ್ಯ ಮತ್ತು ಪಾಶ್ಚಾತ್ಯ) ವಿನೋದ (ಜಾತ್ರೆ , ಹಬ್ಬಗಳು).
5. ಸಾಹಸಿಗಳ– ಸಂಶೋಧಕರ ಕಥೆಗಳು.
6. ಮಹಾಪುರುಷರ ಜೀವನ (ಕನ್ನಡ ನಾಡಿನ ಅರಸರು, ನಾಡ ವೀರರು, ವೀರ ರಮಣಿಯರು, ಸಮಾಜ ಸುಧಾರಕರು ಇತ್ಯಾದಿ).
7. ಮಹಾಪುರುಷರ ಆತ್ಮಕಥೆಗಳು (ಗಾಂಧೀಜಿ, ಸ್ವಾಮಿ ವಿವೇಕಾನಂದ ಇತ್ಯಾದಿ).
8. ನೀತಿ ಕಥೆಗಳು (ಆಯಾ ಪರಿಸರಕ್ಕೆ ಯೋಗ್ಯವಾದ, ಐತಿಹಾಸಿಕ ಮತ್ತು ಪೌರಾಣಿಕ ದೃಷ್ಟಾಂತ ಕಥೆಗಳು).
9. ಭಾರತೀಯರ ವಿಜ್ಞಾನೋಪಾಸನೆ.
10. ವೈಜ್ಞಾನಿಕ, ಸಾಹಿತ್ಯಕ ಸೃಜನಾತ್ಮಕ ಪ್ರಬಂಧಗಳು.
11. ಪ್ರವಾಸೋದ್ಯಮ (ಪ್ರವಾಸಿ ಕೇಂದ್ರಗಳು, ಅವುಗಳ ಅಭಿವೃದ್ಧಿ ಪ್ರವಾಸಿಗರಿಗೆ ಸೌಲಭ್ಯಗಳು...).
12. ವಿಚಾರ ಪ್ರಚೋದಕ ನಾಟಕಗಳು– ನಾಟಕ ಭಾಗಗಳು.
13. ಕಾದಂಬರಿಗಳ ಭಾಗಗಳು (ನಿಸರ್ಗ, ಜನಸ್ವಭಾವ, ಸಾಧಕರ ನಾಯಕತ್ವ, ರೂಢಿಗಳು ಮುಂತಾದ ವಿಶೇಷ ವಿಷಯಗಳುಳ್ಳವು).
14. ಕನ್ನಡಿಗರ ಹಿರಿಮೆ/ ಸಹಿಷ್ಣುತೆ (ಮತ, ಧರ್ಮ, ಭಾಷೆ, ವಿಚಾರ ಸಹಿಷ್ಣುತೆ).
15. ಭಾರತೀಯತೆ (ಆಚಾರ–ವಿಚಾರ– ಸಂಸ್ಕೃತಿ ಇತ್ಯಾದಿ).
16. ಭೂ–ಲೋಕ – ನಕ್ಷತ್ರಲೋಕ – ಬಾಹ್ಯಾಕಾಶ.
17. ಕಛೇರಿ, ಪತ್ರ ವ್ಯವಹಾರ (ಮನವಿ, ಬೇಡಿಕೆ, ಆದೇಶ ಇತ್ಯಾದಿ).

ಭಾಷೆ ಮತ್ತು ಸಾಹಿತ್ಯದ ದೃಷ್ಟಿಯಿಂದ ಪಠ್ಯಕ್ರಮದಲ್ಲಿರಬೇಕಾದ ಪಠ್ಯಸಾಮಗ್ರಿಯು ಕೆಲವು ಮುಖ್ಯ ಮೌಲ್ಯಗಳನ್ನೂ ಗಮನದಲ್ಲಿರಿಸಿಕೊಳ್ಳಬೇಕಾಗಿದೆ. 1986ರ ರಾಷ್ಟ್ರೀಯ ಶಿಕ್ಷಣನೀತಿಯ ಎಲ್ಲ ಪಠ್ಯಕ್ರಮಗಳಲ್ಲಿ

ಅಳವಡಿಸಲು ಹತ್ತು ಪ್ರಮುಖ ಮೌಲ್ಯಗಳನ್ನು ಸೂಚಿಸಿರುವುದನ್ನು ನೀವು ಈಗಾಗಲೇ ತಿಳಿದಿರಬಹುದು. ಅವು ಕೆಳಕಂಡಂತಿವೆ:

1. ಭಾರತದ ಸ್ವಾತಂತ್ರ್ಯ ಚಳುವಳಿ
2. ಸಾಂವಿಧಾನಿಕ ಕರ್ತವ್ಯಗಳು
3. ಭಾರತದ ಸಾಂಸ್ಕೃತಿಕ ಪರಂಪರೆ
4. ಸಮಾನತೆ, ಜಾತ್ಯತೀತತೆ ಮತ್ತು ಪ್ರಜಾಪ್ರಭುತ್ವ
5. ರಾಷ್ಟ್ರೀಯ ಮನೋಭಾವ
6. ಪರಿಸರ ಸಂರಕ್ಷಣೆ
7. ಲಿಂಗಸಮಾನತೆ
8. ಸಾಮಾಜಿಕ ಕಟ್ಟುಪಾಡುಗಳ ನಿರ್ಮೂಲನೆ
9. ಚಿಕ್ಕ ಕುಟುಂಬವನ್ನು ಪ್ರೋತ್ಸಾಹಿಸುವುದು ಮತ್ತು
10. ವೈಜ್ಞಾನಿಕ ಮನೋಭಾವವನ್ನು ಬೆಳೆಸುವುದು

ಇವುಗಳಲ್ಲದೆ ಸಾಮಾಜಿಕ, ನೈತಿಕ ಹಾಗೂ ಆಧ್ಯಾತ್ಮಿಕ ಮೌಲ್ಯಗಳನ್ನು ಪಠ್ಯಕ್ರಮದಲ್ಲಿ ಅಳವಡಿಸುವಂತೆ ರಾಷ್ಟ್ರೀಯ ಶಿಕ್ಷಣ ನೀತಿಯು ನಿರ್ದಿಷ್ಟವಾಗಿ ಈ ಕೆಳಗಿನಂತೆ ನಿರ್ದಿಷ್ಟ (ಎಂಬತ್ತು ಮೌಲ್ಯಗಳನ್ನು ನಿಖರವಾಗಿ) ಪಟ್ಟಿಮಾಡಿದೆ:

1. ಅನ್ಯರ ಸಂಸ್ಕೃತಿಯನ್ನು ಮೆಚ್ಚುವುದು (2) ಅಸ್ಪೃಶ್ಯತೆಯನ್ನು ವಿರೋಧಿಸುವುದು (3) ನಾಗರಿಕತೆಯನ್ನು ಕಾಪಾಡುವುದು (4) ಇನ್ನೊಬ್ಬರ ಕಷ್ಟ–ಸುಖವನ್ನು ಗಮನಿಸುವುದು (5) ಪರರ ಬಗ್ಗೆ ಕಾಳಜಿ ವಹಿಸುವುದು (6) ಸಹಕಾರ ತೋರುವುದು (7) ಶುಚಿತ್ವ ಪಾಲಿಸುವುದು (8) ಕನಿಕರ ತೋರಿಸುವುದು (9) ಸಮಾನ ವಿಷಯಗಳಿಗಾಗಿ ಹೋರಾಡುವುದು (10) ಸರ್ವರ ಒಳಿತಿಗಾಗಿ ಕೆಲಸ ಮಾಡುವುದು (11) ಧೈರ್ಯಶಾಲಿಯಾಗಿರುವುದು (12) ಸೌಜನ್ಯದಿಂದ ವರ್ತಿಸುವುದು (13) ಕುತೂಹಲವಿರುವುದು (14) ಪ್ರಜಾಪ್ರಭುತ್ವ ರೀತಿಯಲ್ಲಿ ತೀರ್ಮಾನ ಕೈಗೊಳ್ಳುವುದು (15) ಶ್ರದ್ಧೆ (16) ಕಾಯಕ ಗೌರವ (17) ವ್ಯಕ್ತಿಗೌರವ (18) ಕರ್ತವ್ಯ ಪಾಲನೆ (19) ಶಿಸ್ತು ಪಾಲನೆ (20) ಸಹನೆ (21) ಸಮಾನತೆ (22) ಗೆಳೆತನ (23) ಸ್ವಾಮಿಭಕ್ತಿ (24) ತನ್ನಂತೆ ಇತರರೂ ಎಂದು ಭಾವಿಸುವುದು (25) ಸ್ವಾತಂತ್ರ್ಯ (26) ಮೌನ ದೃಷ್ಟಿ (27) ಸದಾಚಾರ (28) ಸಂಭಾವ್ಯತನ (29) ಕೃತಜ್ಞತೆ (39) ಪ್ರಾಮಾಣಿಕತೆ (31) ಸಹಾಯ ಹಸ್ತ ಚಾಚುವುದು (32) ಮಾನವೀಯತೆ (33) ಆರೋಗ್ಯಯುತ ಜೀವನ (34) ಮುನ್ನುಗ್ಗುವಿಕೆ (35) ಭಾವಶುದ್ಧಿ (36) ನ್ಯಾಯಪರತೆ (37) ಕರುಣೆ (38) ಪ್ರಾಣಿದಯೆ (39) ಕರ್ತವ್ಯನಿಷ್ಠೆ (40) ನೇತೃತ್ವ (41) ರಾಷ್ಟ್ರೀಯ ಒಗ್ಗಟ್ಟು (42) ರಾಷ್ಟ್ರೀಯ ಪ್ರಜ್ಞೆ (43) ಅಹಿಂಸೆ (44) ರಾಷ್ಟ್ರೀಯ ಭಾವೈಕ್ಯ (45) ವಿಧೇಯತೆ (46) ಶಾಂತಿಪ್ರಿಯತೆ (47) ಕಾಲದ ಸದುಪಯೋಗ (48) ದೇಶಪ್ರೇಮ (49) ಮನಶುದ್ಧಿ (50) ಜ್ಞಾನದಾಹ (51) ಸಂಪನ್ಮೂಲವನ್ನು ಹೊಂದಿರುವುದು (52) ಹಿರಿಯರಲ್ಲಿ ಭಕ್ತಿಭಾವ (53) ಇತರರನ್ನು ಗೌರವಿಸುವುದು (54) ಕ್ರಮಬದ್ಧತೆ (55) ನಿಷ್ಕಪಟತೆ (56) ಸರಳಜೀವನ (57) ಸಾಮಾಜಿಕ ನ್ಯಾಯ (58) ತನ್ನನ್ನು ತಾನು ಶಿಸ್ತಿಗೆ ಒಳಪಡಿಸುವುದು (59) ಉತ್ತೇಜನ (60) ಆತ್ಮಗೌರವ (61) ಆತ್ಮಸ್ಥೈರ್ಯ (62) ಸ್ವಾವಲಂಬನೆ (63) ಸ್ವಾವಲಂಬನೆ (64) ಸ್ವನಿಯಂತ್ರಣ (65) ಆತ್ಮಸಂಯಮ (66) ಸಾಮಾಜಿಕ ಜವಾಬ್ದಾರಿ (67) ಸ್ವಸಹಾಯ (68) ವಿವೇಚನಾಶಕ್ತಿ (69) ಸಮಾಜವಾದ (70) ಸಹಾನುಭೂತಿ (71) ಜಾತ್ಯತೀತತೆ ಮತ್ತು ಪರಧರ್ಮಸಹಿಷ್ಣುತೆ (72) ಪರೀಕ್ಷಿಸಿ ತಿಳಿಯುವ ಕುತೂಹಲ (73) ತಂಡಸ್ಫೂರ್ತಿ (74) ತಂಡದಲ್ಲಿ ಒಂದಾಗಿ ಪಾಲ್ಗೊಳ್ಳುವಿಕೆ (75) ಸತ್ಯಪರತೆ (76) ಸಹಿಷ್ಣುತೆ (77) ಪ್ರಾಪಂಚಿಕ ಸತ್ಯ (78) ಪ್ರಾಪಂಚಿಕ ಒಲವು (79) ರಾಷ್ಟ್ರೀಯ ಸ್ವತ್ತಿನ ಕಾಪಾಡುವಿಕೆ (80) ನಾಗರಿಕ ಸ್ವತ್ತುಗಳ ಮೌಲ್ಯದ ಅರಿವು.

ಒಟ್ಟಿನಲ್ಲಿ ಪ್ರೌಢಶಾಲಾ ಕನ್ನಡ ಪಠ್ಯಕ್ರಮವು ಸ್ಥೂಲವಾಗಿ ಹಲ್ಮಿಡಿ ಶಾಸನದಿಂದ ಮೊದಲ್ಗೊಂಡು ಸಮಕಾಲೀನ ಕನ್ನಡ ಸಾಹಿತ್ಯಲೋಕದ ಕಿರುಪರಿಚಯ ಮಾಡಿಕೊಡಬೇಕು. ಇದರಿಂದ ಕನ್ನಡದ ಸಿರಿಯನ್ನು ತಿಳಿದು, ಇಂಪನ್ನು ನಿರಂತರವಾಗಿ ಸವಿಯುವ ಅವಕಾಶವನ್ನು ಕಲ್ಪಿಸಬೇಕು, ಬಾಳಿನ ಹೋರಾಟದಲ್ಲಿ ಧೀಮಂತರಾಗಿ ಬಾಳಿದ ( ಆದರ್ಶಗಳನ್ನು ತೋರಿದ) ವ್ಯಕ್ತಿಗಳ ಪರಿಚಯ , ನಾಡು–ನುಡಿಯ ಬಗೆಗೆ ಹಿರಿಯರ ಚಿಂತನೆ, ವೈಚಾರಿಕ ಚಿಂತನೆಗಳನ್ನೊಳಗೊಂಡ ಬರಹಗಳನ್ನು ಒಳಗೊಳ್ಳಬೇಕು. ನಾಟಕ ಪ್ರಕಾರ ಪರಿಚಯ, ಪ್ರಬಂಧ ಪ್ರಕಾರಗಳ ಪರಿಚಯ ಮಾಡಿಕೊಡಬೇಕು. ಸಾಮಾಜಿಕ–ಸಾಂಸ್ಕೃತಿಕ, ಪ್ರಾದೇಶಿಕ ಮತ್ತು ಲಿಂಗ ಸಮಾನತೆಯನ್ನು ಕಾಯ್ದುಕೊಳ್ಳಬೇಕು. ಸೈದ್ಧಾಂತಿಕ ಭಾಷಾ ವಿವರಗಳನ್ನೊಳಗೊಂಡಿರಬೇಕು. ವಿದ್ಯಾರ್ಥಿಗಳಲ್ಲಿ ವ್ಯಾಸಂಗದ ಅಭಿರುಚಿ ಮತ್ತು ಹವ್ಯಾಸವನ್ನುಂಟು ಮಾಡಲು ಪೋಷಕ ಸಾಮಗ್ರಿಯನ್ನು ಒದಗಿಸಬೇಕು.

**II.** ಮೇಲಿನ ವಿವರಗಳಿಂದ ವಿಸ್ತೃತವಾದ ಹರವು ಮತ್ತು ವೈವಿಧ್ಯಗಳನ್ನು ಹೊಂದಿರುವ ಕನ್ನಡ ಸಾಹಿತ್ಯವನ್ನು ಪರಿಚಯಿಸುವುದು ಕನ್ನಡ ಪಠ್ಯಕ್ರಮದ ಒಂದು ಆಯಾಮವೆಂದು ತಿಳಿದಿರಿ. ಪ್ರೌಢಶಾಲಾ ಹಂತದ ವಿದ್ಯಾರ್ಥಿಗಳಲ್ಲಿ ಚಿಂತನೆಗಳು, ವಿವೇಚನೆಗಳು ಮತ್ತು ವಿಶ್ಲೇಷಣ ಸಾಮರ್ಥ್ಯಗಳು ಚುರುಕುಗೊಳ್ಳುವಂತೆ ಭಾಷಾಪಠ್ಯಕ್ರಮವನ್ನು ರೂಪುಗೊಳಿಸಬೇಕೆಂಬುದನ್ನು ಮರೆಯಬಾರದು. ಚಿಂತನೆ ಮತ್ತು ಭಾಷೆ (thinking and language) ಅವಿನಾಸಂಬಂಧ ಹೊಂದಿರುತ್ತದೆ. ಇವು ಒಟ್ಟಾಗಿ ಚಿಂತನೆ ಮತ್ತು ವಿಶ್ಲೇಷಣೆಗಳ ಅರಿವನ್ನು (knowledge-understanding) ಸ್ಪಷ್ಟಗೊಳಿಸುವ ಮತ್ತು ಸತ್ವಯುತಗೊಳಿಸುವ ಮಾನಸಿಕ ಪ್ರಕ್ರಿಯೆಗಳು ಎಂದೂ ನೀವು ಶೈಕ್ಷಣಿಕ ಮನೋವಿಜ್ಞಾನದಲ್ಲಿ ಸೈದ್ಧಾಂತಿಕವಾಗಿ ಅರಿತಿದ್ದೀರಿ. ಇದು ಪಠ್ಯವಸ್ತು ಅಂದರೆ ಸಾಹಿತ್ಯದ ವಿಶ್ಲೇಷಣೆಯಿಂದ ಆಗಬೇಕು. ಪ್ರೌಢಶಾಲಾ ಹಂತದ ಕನ್ನಡ ಭಾಷಾಶಿಕ್ಷಣವು– ಸಾಹಿತ್ಯ ಶಿಕ್ಷಣವೂ ಆಗುವುದರಿಂದ ಸಾಹಿತ್ಯ ವಿಶ್ಲೇಷಣ ಶಕ್ತಿಯನ್ನು ವಿದ್ಯಾರ್ಥಿಗಳು ಬೆಳಸಿಕೊಳ್ಳಲು ಕನ್ನಡಭಾಷಾ ಪಠ್ಯಕ್ರಮ ಅನುಕೂಲಕರವಾಗಿರಬೇಕು.

ಕಥೆ, ಕವನ, ನಾಟಕ, ಪ್ರಬಂಧ ಇವುಗಳ ರಚನೆ ಸೃಷ್ಟಿಯಾದರೆ; ಅವು ಹೇಗಿವೆ ಎಂದು ಚಿಂತಿಸಿ ಪ್ರತಿಕ್ರಿಯಿಸುವುದು– ವಿಶ್ಲೇಷಣೆ /ವಿಮರ್ಶೆ ಆಗುತ್ತದೆ. ಎರಡೂ ಒಂದೇ ನಾಣ್ಯದ ಎರಡು ಮುಖಗಳು.

ಕೃತಿಕಾರರು (ಕವಿಗಳು ಮತ್ತು ಲೇಖಕರು) ತಾವು ಅಧ್ಯಯನ ಮಾಡಿ ಪಡೆದ ಜ್ಞಾನ, ತಮ್ಮ ಜೀವನಾನುಭವ, ಆಲೋಚನೆ, ಭಾವನೆ, ಕಲ್ಪನಾಶಕ್ತಿಗಳನ್ನು ಮೇಳೈಸಿ ಅವುಗಳನ್ನು ಸುಸಂಬದ್ಧವಾಗಿ ಕಲಾತ್ಮಕ ಶೈಲಿಯಲ್ಲಿ ಹೆಣೆದು ಸಹೃದಯ ಓದುಗರಿಗೆ ಸಾಹಿತ್ಯರೂಪದಲ್ಲಿ ನೀಡಿರುತ್ತಾರೆ. ಇದರಿಂದ ಸಹೃದಯಿಗಳ (ವಿದ್ಯಾರ್ಥಿಗಳ) ಸ್ಪಂದನೆಯಾಗಬೇಕು.. ಆಗ ಮಾತ್ರ ಆ ಸಾಹಿತ್ಯದ ಸಾರ್ಥಕತೆಯಾಗುತ್ತದೆ. ಅಂದರೆ ಪಠ್ಯಕ್ರಮದಲ್ಲಿ ಒದಗಿಸಿದ ಸಾಹಿತ್ಯವು ವಿದ್ಯಾರ್ಥಿಗಳ ಗ್ರಹಿಕೆಗೆ ಪೂರ್ಣವಾಗಿ ದಕ್ಕಬೇಕು. ಸಾಹಿತ್ಯ ವಿದ್ಯಾರ್ಥಿಗಳು ಆ ಕೃತಿಯೊಳಗೆ (ಗದ್ಯ/ ಪದ್ಯ ಪಾಠದೊಳಗೆ) ಪ್ರವೇಶಿಸಿ ಒಳನೋಟಗಳನ್ನು ತಿಳಿಯಬೇಕು ಮತ್ತು ಅನುಭವಿಸಬೇಕು. ಇವೆಲ್ಲವೂ ಕೃತಿ/ಪಠ್ಯಾಂಶದ ವಿಶ್ಲೇಷಣೆಯಿಂದ ಸಾಧ್ಯವಾಗುತ್ತದೆ.

ಸಾಹಿತ್ಯಕೃತಿಯನ್ನು ಅಥವಾ ಒಂದು ಲೇಖನವನ್ನು ವಿಶ್ಲೇಷಿಸುವುದು ಎಂದರೆ ಕರ್ತೃ ಹೇಳಬಯಸುವ ವಿಷಯವೇನು, ವಿಷಯದಲ್ಲಿರುವ ಅಂಶಗಳೇನು, ವಿಷಯ ವಿವರಣೆಯಲ್ಲಿ ಕರ್ತೃವಿನ ಉದ್ದೇಶವೇನು, ವಿಷಯ ವಿವರಣೆಯಲ್ಲಿ ಸಾಧಕ–ಬಾಧಕಗಳಾವುವು ಎಂದು ಕಂಡುಕೊಳ್ಳುವುದು.

ವಿಶ್ವ ಸಾಹಿತ್ಯದಲ್ಲಿ ಮೊತ್ತ ಮೊದಲ ವಿಮರ್ಶಕನೆನಿಸಿಕೊಂಡ ಅರಿಸ್ಟಾಟಲ್‌ನಿಂದ ಹಿಡಿದು ಅನೇಕರ ಬಗ್ಗೆ ನೀವು ತಿಳಿದಿರಬಹುದು. ಭಾರತೀಯ ಕಾವ್ಯಮೀಮಾಂಸೆಯಲ್ಲಿ ಕಾವ್ಯಲಕ್ಷಣಗಳ ಬಗ್ಗೆ ಹೇಳಿರುವುದೇ ಮುಖ್ಯ ಹೊರತು ವಿಶ್ಲೇಷಣೆ ಅಥವಾ ವಿಮರ್ಶೆಗಳಲ್ಲ. ಪಾಶ್ಚಾತ್ಯ ಪ್ರಭಾವದಿಂದ ಕಳೆದ ಶತಮಾನದಲ್ಲಿ ಆಧುನಿಕ ಕನ್ನಡ ಸಾಹಿತ್ಯದೊಂದಿಗೆ ಸಾಹಿತ್ಯ ವಿಶ್ಲೇಷಣೆ– ವಿಮರ್ಶೆ ಆರಂಭವಾದವು.

ವಿಶ್ಲೇಷಣೆ– ವಿಮರ್ಶೆಗೆ ಆಧಾರ ಅಥವಾ ಮಾನದಂಡಗಳು ಬೇಕಲ್ಲವೇ? ಅದಕ್ಕಾಗಿ ಕೃತಿ ವಿಶ್ಲೇಷಣೆಗೆ (1) ಅನ್ವಯಿಕ ಅಥವಾ ಪ್ರಾಯೋಗಿಕ ವಿಮರ್ಶೆ (2) ಸಾಮಾಜಿಕ ವಿಮರ್ಶೆ (3) ಮನೋವಿಶ್ಲೇಷಣಾತ್ಮಕ ವಿಮರ್ಶೆಯ ಕೆಲವು ಅಂಶಗಳನ್ನು ಶಿಕ್ಷಕರು ತಿಳಿದಿರುವುದು ಅನುಕೂಲಕರ. ಕನ್ನಡ ಪಠ್ಯಕ್ರಮದ ಪಾಠಗಳ ಆಳವಾದ ಗ್ರಹಿಕೆಗೆ ಯಾವ ವಿಮರ್ಶೆಯನ್ನು ಅನುಸರಿಸಬೇಕಾಗುತ್ತದೆ ಎಂದು ಶಿಕ್ಷಕರು ನಿರ್ಧರಿಸಿಕೊಳ್ಳಬೇಕು.

**ಪ್ರಾಯೋಗಿಕ/ಅನ್ವಯಿಕ ವಿಮರ್ಶೆ/ ವಿಶ್ಲೇಷಣೆಯಲ್ಲಿ ಮುಖ್ಯವಾದ ಅಂಶಗಳು:**

- ಕೃತಿಯ ಒಳಹೊಕ್ಕು– ಕವಿ ಶಕ್ತಿಯನ್ನು ಗುರುತಿಸುವುದು.
- ಕೃತಿಯಲ್ಲಿರುವ ಸಾಮಾಜಿಕ ಸಂದರ್ಭಗಳನ್ನು ವಿಶ್ಲೇಷಿಸುವುದು. (ಹಿಂದಿನ – ಇಂದಿನ ಸಾಮಾಜಿಕ ಸಂದರ್ಭಗಳನ್ನು ಹೋಲಿಸುವುದು)
- ಕೃತಿಕಾರನ ಅಭಿವ್ಯಕ್ತಿಯ ತಂತ್ರ ವಿಶ್ಲೇಷಿಸುವುದು.
- ಸಹೃದಯತೆಯಿಂದ ಓದುವುದು.
- ಕವಿ/ಲೇಖಕ ನಿಷ್ಠವಾಗುವುದಕ್ಕಿಂತ ಕೃತಿನಿಷ್ಠ ಧೋರಣೆಯಲ್ಲಿ ಓದುವುದು.
- ಬದುಕಿಗೆ ಹತ್ತಿರವಾಗಿದೆಯೇ ಎಂದು ಪರಿಶೀಲಿಸುವುದು.
- ಕೃತಿ/ಲೇಖನ ತತ್ವ ಅಥವಾ ಸಿದ್ಧಾಂತಗಳನ್ನು ಆಧರಿಸಿದೆಯೇ ಎಂದು ನೋಡುವುದು.

**ಸಾಮಾಜಿಕ ವಿಮರ್ಶೆ/ ವಿಶ್ಲೇಷಣೆಯಲ್ಲಿ ಮುಖ್ಯವಾದ ಅಂಶಗಳು**

- ಸಮಾಜಶಾಸ್ತ್ರದ ತತ್ವಗಳ ಆಧಾರಗಳಿವೆಯೇ ಎಂದು ಗಮನಿಸುವುದು;
- ಸಾಮಾಜಿಕ, ನೈತಿಕ, ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯುವುದು;
- ಜನತೆಯಲ್ಲಿ ಸಾಮಾಜಿಕ ಪ್ರಜ್ಞೆ ಮೂಡಿಸುವಂತಿದೆಯೇ ಎಂದು ಗುರುತಿಸುವುದು;
- ಮಾನವ ಮನಸ್ಸು ವ್ಯಕ್ತವಾಗುವ ಚಟುವಟಿಕೆಗಳ ವಿಶ್ಲೇಷಣೆ ಇದೆಯೇ ಎಂದು ಗುರುತಿಸುವುದು;
- ಮಾನವೀಯ ಅನುಭವಗಳ ಒಳನೋಟವಿದೆಯೇ ಎಂದು ಗಮನಿಸುವುದು;
- ಸಮಕಾಲೀನ ವಾಸ್ತವತೆಯನ್ನು ಗುರುತಿಸುವುದು;
- ಸಾಹಿತ್ಯ ರಚನೆಯಾದ ಪ್ರದೇಶ, ಕಾಲಪ್ರಜ್ಞೆಯ ಹಿನ್ನೆಲೆಯಲ್ಲಿ ಕೃತಿಯನ್ನು ಗಮನಿಸುವುದು.

**ಮನೋವೈಜ್ಞಾನಿಕ ವಿಮರ್ಶೆ/ ವಿಶ್ಲೇಷಣೆಯಲ್ಲಿ ಮುಖ್ಯವಾದ ಅಂಶಗಳು**

- ಅಂತರಾವಲೋಕನದಿಂದ ವಿಶ್ಲೇಷಿಸುವುದು;
- ಕವಿಯ ವ್ಯಕ್ತಿತ್ವದ ಜೊತೆಯಲ್ಲಿ ಕೃತಿಯ ಪಾತ್ರಗಳಲ್ಲಿ ಒಡಮೂಡಿದ ವ್ಯಕ್ತಿತ್ವ, ಸ್ವಭಾವಗಳನ್ನು ಔಚಿತ್ಯಪೂರ್ಣವಾಗಿ ಮನಶ್ಶಾಸ್ತ್ರದ ಹಿನ್ನೆಲೆಯಲ್ಲಿ ಪರಿಶೀಲಿಸುವುದು;
- ಕೃತಿಯಲ್ಲಿ ಅಡಗಿರುವ ಕಲ್ಪನೆಯ ಅಭಿವ್ಯಕ್ತಿಗೆ ಮನಶ್ಶಾಸ್ತ್ರೀಯ ಕಾರಣಗಳನ್ನು ಹುಡುಕುವುದು;
- ಮನೋವ್ಯಾಪಾರಗಳೊಡನೆ ಸಾಮಾಜಿಕ ಸಂದರ್ಭಗಳ ಪರಿಶೀಲನೆ ಮಾಡುವುದು.

## III. ಸೈದ್ಧಾಂತಿಕ ಭಾಷಾಂಶಗಳು ಮತ್ತು ಭಾಷಾ ಅಭ್ಯಾಸಗಳು

- ವರ್ಣಮಾಲೆ – ವರ್ಣಗಳ ಉಚ್ಚರಣಾ ಸ್ಥಾನಗಳು, ಸಂಯುಕ್ತಾಕ್ಷರಗಳು, ದೇಶ್ಯ – ಅನ್ಯದೇಶ್ಯ ಪದಗಳು– ಸಂಧಿಗಳು – ನಾಮಪದ– ಲಿಂಗ, ವಚನ–ವಾಕ್ಯ ವಿಧಗಳು- ಸಮಾಸ; ಛಂದಸ್ಸು– ಪ್ರಾಸ,

ಗಣ – ಶಬ್ದಾಲಂಕಾರ – ಗಣಗಳು – ಷಟ್ಪದಿ ಇವಿಷ್ಟೂ ನಾವು ಎಂಟನೇ ತರಗತಿಯ ಪಠ್ಯ ಕ್ರಮದಲ್ಲಿ ಕಾಣುತ್ತೇವೆ. ಹೀಗೆ ಒಂಬತ್ತು ಮತ್ತು ಹತ್ತನೆ ತರಗತಿಯ ಪಠ್ಯ ಕ್ರಮದಲ್ಲಿ ಭಾಷಾಂಶಗಳನ್ನು ಗುರುತಿಸಿ.

**IV.** ಗ್ರಹಿಕೆ, ಓದುಗಾರಿಕೆ, ಮಾತುಗಾರಿಕೆ ಮತ್ತು ಬರೆವಣಿಗೆ ಕೌಶಲಗಳ ಚಟುವಟಿಕೆಗಳು ಭಾಷಾ ಪಠ್ಯಕ್ರಮದಲ್ಲಿ ಇರಬೇಕು.

**V.** ಭಾಷೆಗೆ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದ ಪಠ್ಯೇತರ ಚಟುವಟಿಕೆಗಳು ಭಾಷಾ ಪಠ್ಯಕ್ರಮದ ಭಾಗವಾಗಬೇಕು. ವಾಗುತ್ತದೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

1. ಕೆಳಗಿನ ಹೇಳಿಕೆಗಳು ಸರಿಯೇ/ ತಪ್ಪೇ ಎಂಬುದನ್ನು ಕೊಟ್ಟಿರುವ ಆವರಣದಲ್ಲಿ ಸೂಚಿಸಿ.
(ಅ) ಭಾಷಾ ಪಠ್ಯ ಕ್ರಮ ಎಂದರೆ ಸಾಹಿತ್ಯ ಪಾಠಗಳ ಮೂಲಕ ಭಾಷಾ ಅನುಭವಗಳನ್ನೂ ಒದಗಿಸುವುದು (....)
(ಬ) ಪ್ರಸ್ತುತ ಭಾಷಾ ಪಠ್ಯಕ್ರಮದಲ್ಲಿ ಕೇವಲ ಆಧುನಿಕ ಸಾಹಿತ್ಯ ವಸ್ತುವನ್ನು ಮಾತ್ರ ನೀಡಿದರೆ ಸಾಕು (....)
(ಕ) ವಿದ್ಯಾರ್ಥಿಗಳ ಸಾಹಿತ್ಯಾಸಕ್ತಿ ಅರಳಿಸಲು ಕಾಲಾತೀತವಾದ ಲೇಖನ ವಿಚಾರ (theme) ಗಳು ಇರಬೇಕು(...)
(ಡ) ಪ್ರೌಢಶಾಲಾ ಪಠ್ಯಕ್ರಮವು ಆಲಂಕಾರಿಕ ಭಾಷಾ ಸ್ವಭಾವವನ್ನು ಪರಿಚಯಿಸುವಂತಿರಬೇಕು (....)
(ಇ) ಭಾಷಾ ಪಠ್ಯಕ್ರಮವು ವಿದ್ಯಾರ್ಥಿಗಳು ಪರೀಕ್ಷೆಗಳನ್ನು ನಿರ್ವಹಿಸಲು ಅಗತ್ಯವಾದ 'ಭಾಷೆಯ ಬಳಕೆ'ಯ ಅನುಕೂಲಕ್ಕಾಗಿಯೇ ಸಿದ್ಧವಾಗಬೇಕು(...)

### 3.1.4. ಸಾರಾಂಶಿಸೋಣ

- ಪಠ್ಯಕ್ರಮವು ಬೋಧನೆಯ ಉದ್ದೇಶಗಳನ್ನು ರೂಪಿಸುವ ತಾತ್ವಿಕ ನೆಲೆಯನ್ನು, ಉದ್ದೇಶ ಸಾಧನೆಗೆ ಸೂಕ್ತವಾದ ವಿಷಯ ಸಂಪತ್ತನ್ನೂ, ವಿಷಯ ಬೋಧನೆ ಮತ್ತು ಕಲಿಕೆ ಕ್ರಮ ಮತ್ತು ಉದ್ದೇಶಿತ ಫಲ ಸಾಧನೆಯನ್ನು ಒರೆಹಚ್ಚುವ ಘಟಕಗಳನ್ನು ಹೊಂದಿರುತ್ತದೆ.
- 2005 ರ ಪಠ್ಯಕ್ರಮ ಚೌಕಟ್ಟು ಹೊಂದಿದ್ದ ವೈಶಿಷ್ಟ್ಯಗಳು, ಜೀವನಾದ್ಯಂತ ಕಲಿಕೆ, ಪಠ್ಯದಾಚೆಗಿನ ಕಲಿಕೆ, ಜ್ಞಾನ ಸಂರಚನೆಯ ಕಲಿಕೆ.
- ವೈವಿಧ್ಯತೆ, ಸಮನ್ವಯ, ಸಾಮಾಜಿಕ–ಸಾಂಸ್ಕೃತಿಕ ರಾಷ್ಟ್ರೀಯ ಮೌಲ್ಯ ಪರಂಪರೆಯ ರಕ್ಷಣೆ, ನಮ್ಯತೆ, ಸಮಷ್ಟಿ ಪ್ರಜ್ಞೆ, ಮೌಲ್ಯಾಧಾರಿತವಾಗಿರುವುದು – ಇವು ಪಠ್ಯಕ್ರಮ ರಚನೆಯ ತತ್ವಗಳು,
- ಭಾಷಾಪಠ್ಯಕ್ರಮವು ಭಾಷಾ ಅನುಭವಗಳ ಮೂಲಕ ಉನ್ನತ ಗ್ರಹಿಕಾ ಮತ್ತು ಅಭಿವ್ಯಕ್ತಿ ಕೌಶಲಗಳ ಬರೆವಣಿಗೆಗೆ ಯೋಜಿಸುವುದು ಮತ್ತು ಸೃಜನಶೀಲತೆಯ ಪೋಷಣೆಗೆ ಮಾರ್ಗದರ್ಶಿಸಬೇಕು.
- ಕನ್ನಡ ಭಾಷಾ ಪಠ್ಯಕ್ರಮವು ಸಮಾಜ, ಪರಿಸರ, ಕಲೆ– ಸಾಹಿತ್ಯ, ಕ್ರೀಡೆ– ಸಾಹಸ, ಸಾಹಿತ್ಯ, ನೀತಿ ಸಾಹಿತ್ಯ–,ಮಹಾತ್ಮರ ವೃತ್ತಾಂತ, ಭಾರತೀಯತೆ ಮತ್ತು ಕನ್ನಡಿಗರ ಹಿರಿಮೆ, ವಿಜ್ಞಾನ ಪ್ರಪಂಚದ ಸಾಧನೆ (ವೈಜ್ಞಾನಿಕ ಮನೋಭಾವ) – ಈ ವಸ್ತು ವಿಚಾರಗಳನ್ನೊಳಗೊಂಡಿರಬೇಕು.
- ಕನ್ನಡ ಭಾಷಾ ಪಠ್ಯಕ್ರಮವು ಕನ್ನಡ ಸಾಹಿತ್ಯ ಪ್ರಕಾರಗಳ ಪರಿಚಯ, ವ್ಯಾಕರಣ, ಅಲಂಕಾರ, ಛಂದಸ್ಸುಗಳ ಪರಿಚಯದ ರೂಪುರೇಖೆಗಳನ್ನು ನೀಡಬೇಕು.

- ಸಾಹಿತ್ಯದ ಒಡಲಿನಲ್ಲಿರುವ ಸಾಮಾಜಿಕ, ನೈತಿಕ, ಆಧ್ಯಾತ್ಮಿಕ ಮೌಲ್ಯಗಳನ್ನು ಗೋಚರಿಸುವಂತೆ ಪಠ್ಯಕ್ರಮದಲ್ಲಿ ಅಳವಡಿಸಬೇಕು.

**3.1.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1 ಮತ್ತು 2**

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

(1) ಕ – (ಕಲಿಕಾ ಫಲಕ್ಕಾಗಿ ಕಲಿಕಾ ಸರಣಿಗಳ ವ್ಯವಸ್ಥೆ)
(2) ಬ – (ದೂರದೃಷ್ಟಿ ಇರುವುದು)
(3) ಕ – (ವ್ಯಕ್ತಿ ವಿಕಾಸ ಮತ್ತು ಸಮುದಾಯದ ಪ್ರಗತಿ)

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

(1) (ಅ) – ಸರಿ (ಬ) – ತಪ್ಪು
(ಕ) – ಸರಿ (ಡ) – ಸರಿ
(ಇ) – ತಪ್ಪು

**3.1.6. ಘಟಕಾಂತ್ಯ ಅಭ್ಯಾಸಗಳು**

1. ಪಠ್ಯಕ್ರಮದ ಅರ್ಥ, ಸ್ವರೂಪ ಮತ್ತು ತತ್ವಗಳನ್ನು ವಿವರಿಸಿರಿ.
2. 'ಸಾಹಿತ್ಯ ಮತ್ತು ಭಾಷಾ ದೃಷ್ಟಿ' ಯಿಂದ 'ಕನ್ನಡ ಭಾಷಾ ಪಠ್ಯಕ್ರಮ'ವು ಹೇಗಿರಬೇಕು ಎಂಬುದನ್ನು ಚರ್ಚಿಸಿ.

**3.1.7. ಪರಾಮರ್ಶನ ಸೂಚಿ**


1. ಡಾ. ಮಹಾಬಲೇಶ್ವರ ರಾವ್: ಪ್ರೌಢಶಾಲೆಗಳಲ್ಲಿ ಕನ್ನಡ ಬೋಧನೆ
2. ಕೆ. ಸಚ್ಚಿದಾನಂದಯ್ಯ: ಕನ್ನುಡಿಯ ಕಲಿಕೆ, ಸತ್ಯಶ್ರೀ ಪ್ರಕಾಶನ, ಮೈಸೂರು
3. ಭ. ಮಲ್ಲಿಕಾರ್ಜುನ ಮತ್ತು ಎಸ್.ಎಸ್. ಯದುರಾಜನ್: ನಿರಂತರ, ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆ, ಮೈಸೂರು
4. ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ (ಸಂಪುಟ–1) ಕ.ರಾ. ಮು. ವಿ., ಮೈಸೂರು
5. ಕರಿಯರ ವಿಶ್ವ ಕೋಶ: ಜ್ಞಾನಗಂಗೋತ್ರಿ, ಕಲೆ, ಸಾಹಿತ್ಯ ಸಂಪುಟ –5 ಕರ್ನಾಟಕ ಸಹಕಾರಿ ಪ್ರಕಾಶನ–ಬೆಂಗಳೂರು
6. ಡಾ.ಶಿವರುದ್ರಪ್ಪ ಜಿ.ಎಸ್ : ವಿಮರ್ಶೆಯ ಪೂರ್ವ ಪಶ್ಚಿಮ, ಸಾರಸ ವಿಹಾರ,ಸರಸ್ವತಿಪುರಂ, ಮೈಸೂರು
7. https://www.the windward school.org
8. https://scholar space.manoa.hawai.edu>[PDF]
9. https://www.the classroom.com>eng
10. www.ncert.nic>Pdf.>nefsc[PDF]
11. apfstatic.S3.ap-south-lamazonaws.com>...
12. https://www.research gate.net>[PDF]
13. www.yourarticlelibrary.com>11sa-NPE-1986

## ಬ್ಲಾಕ್ 3 : ಕನ್ನಡ ಪಠ್ಯಕ್ರಮ ಮತ್ತು ಪಠ್ಯೇತರ ಚಟುವಟಿಕೆಗಳು

## ಘಟಕ 2 : ಪ್ರೌಢಶಾಲಾ ಕನ್ನಡ ಪಠ್ಯಕ್ರಮದ ವಿಮರ್ಶೆ

**ಘಟಕದ ರಚನೆ**

3.2.1. ಕಲಿಕೆಯ ಉದ್ದೇಶಗಳು
3.2.2. ಪೀಠಿಕೆ
3.2.3. ಕಲಿಕೆಯ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು
3.2.3.1. ಪಠ್ಯಕ್ರಮದ ವಿಮರ್ಶೆಯ ಅರ್ಥ ಮತ್ತು ವ್ಯಾಪ್ತಿ
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1
3.2.3.2. ಪ್ರೌಢಶಾಲಾ ಕನ್ನಡ ಭಾಷಾ ಪಠ್ಯಕ್ರಮದ ವಿಮರ್ಶೆ
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2
3.2.4. ಸಾರಾಂಶಿಸೋಣ
3.2.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1 ಮತ್ತು 2
3.2.6. ಘಟಕಾಂತ್ಯ ಅಭ್ಯಾಸಗಳು
3.2.7. ಪರಾಮರ್ಶನ ಸೂಚಿ

### 3.2.1 ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿ ಶಿಕ್ಷಕ ಶಿಕ್ಷಕಿಯರು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು;

- ಪಠ್ಯಕ್ರಮ ವಿಮರ್ಶೆಯ ಅರ್ಥ ಮತ್ತು ಅಗತ್ಯವನ್ನು ವಿವರಿಸುವರು;
- ಪಠ್ಯಕ್ರಮ ವಿಮರ್ಶೆಯ ಕ್ರಮವನ್ನು ತಿಳಿಸುವರು;
- ಭಾಷಾಪಠ್ಯಕ್ರಮ ವಿಮರ್ಶೆಯಲ್ಲಿ ಮುಖ್ಯವಾದ ಅಂಶಗಳನ್ನು ಪಟ್ಟಿ ಮಾಡುವರು;
- ಕನ್ನಡಭಾಷಾ ಪಠ್ಯಕ್ರಮದ ವಿಮರ್ಶೆಯ ಹಂತಗಳನ್ನು ವಿವರಿಸುವರು; ಮತ್ತು
- ಪುಸ್ತಕ ಕನ್ನಡ ಭಾಷಾ ಪಠ್ಯ ಕ್ರಮವನ್ನು ವಿಮರ್ಶಿಸುವರು.

### 3.2.2. ಪೀಠಿಕೆ

ನೀವು ಹಿಂದಿನ ಘಟಕದಲ್ಲಿ ಭಾಷಾಪಠ್ಯಕ್ರಮದ ಸ್ವರೂಪದ ಬಗ್ಗೆ ಅಧ್ಯಯನ ಮಾಡುವಿರಿ. ಆದ್ದರಿಂದ ಪ್ರೌಢಶಾಲಾ ಭಾಷಾ ಪಠ್ಯಕ್ರಮವು ಹೇಗಿರಬೇಕೆಂಬುದರ ಬಗ್ಗೆ ಕೆಳಗೆ ನೀಡಿರುವ ಪಟ್ಟಿಯಲ್ಲಿ ಸರಿಯಾದ ಹೇಳಿಕೆಗಳನ್ನು ಗುರುತಿಸಿರಿ.

**ಚಟುವಟಿಕೆ**

ಪ್ರೌಢಶಾಲಾ ಭಾಷಾ ಪಠ್ಯಕ್ರಮವು, ವಿದ್ಯಾರ್ಥಿಗಳು

1. ಭಾಷೆಯನ್ನು ಅನುಭವಾತ್ಮಕವಾಗಿ ಕಲಿಯುವಂತೆ ಮಾಡಬೇಕು.
2. ಮಾಧ್ಯಮಿಕ ಹಂತದಲ್ಲಿ ಗಳಿಸಿದ ಭಾಷಾ ಸಾಮರ್ಥ್ಯಗಳನ್ನೇ ದೃಢಪಡಿಸಿಕೊಳ್ಳುವಂತಿರಬೇಕು.
3. ಪಠ್ಯದಾಚೆಗಿನ ಸಂದರ್ಭಗಳಿಂದಲೂ ಭಾಷೆಯನ್ನು ಕಲಿಯುವಂತೆ ಮಾಡಬೇಕು.
4. ಮುಖ್ಯವಾಗಿ ಪರೀಕ್ಷೆಗಳಲ್ಲಿ ಹೆಚ್ಚು ಅಂಕಗಳನ್ನು ಗಳಿಸಲು ಅನುಕೂಲವಾಗಿರಬೇಕು.
5. ಆಯ್ದ ವಿಷಯದ ಬಗ್ಗೆ ವಿವಿಧ ಪುಸ್ತಕಗಳಿಂದ ಮಾಹಿತಿ ಸಂಗ್ರಹಿಸಿ ಟಿಪ್ಪಣಿ ಮಾಡಿಕೊಳ್ಳುವಂತಿರಬೇಕು.

6. ಸೃಜನಶೀಲವಾಗಿ ಗ್ರಹಿಸುವಂತೆ ಮತ್ತು ಅಭಿವ್ಯಕ್ತಿಸುವಂತೆ ಮಾಡಬೇಕು.
7. ಭಾಷಾ ಪಠ್ಯ ಪುಸ್ತಕಗಳನ್ನು ಮಾತ್ರ ಅಧ್ಯಯನ ಮಾಡುವಂತಾದರೆ ಸಾಕು.
8. ಸಾಹಿತ್ಯದ ವಿವಿಧ ಪ್ರಕಾರಗಳನ್ನು ಗುರುತಿಸಿ ಆಸಕ್ತಿ ಬೆಳೆಸಿಕೊಳ್ಳಬೇಕು.

ಉತ್ತರ (ಸರಿಯಾದ ಹೇಳಿಕೆಗಳ ಸಂಖ್ಯೆ) ______________________

ನೀವು ಮೇಲಿನ ಪ್ರತಿ ಹೇಳಿಕೆಗಳನ್ನು ಪರಿಶೀಲಿಸಿ (2) (4) ಮತ್ತು (7) ಹೇಳಿಕೆಗಳನ್ನು ಹೊರತುಪಡಿಸಿ ಉಳಿದವುಗಳು ಸರಿಯೆಂದು ತೀರ್ಮಾನಿಸಿದ್ದರೆ ಪ್ರೌಢಶಾಲಾ ಭಾಷಾಪಠ್ಯಕ್ರಮದ ಸ್ವರೂಪವನ್ನು ಅರ್ಥೈಸಿಕೊಂಡಿರುವಿರಿ.

ವಿದ್ಯಾರ್ಥಿಗಳು ಕನ್ನಡ ಭಾಷೆಯ–ಸ್ವರೂಪ, ಕನ್ನಡ ಸಾಹಿತ್ಯದ ವೈವಿಧ್ಯ ಮತ್ತು ವೈಶಿಷ್ಟ್ಯಗಳನ್ನು ತಿಳಿದು, ಭಾಷೆಯ ಕೌಶಲಗಳಲ್ಲಿ ಉನ್ನತ ಮಟ್ಟವನ್ನು ಸಾಧಿಸಲು ಕನ್ನಡ ಭಾಷಾ ಪಠ್ಯಕ್ರಮ ಸಹಾಯವಾಗುವಂತಿರಬೇಕು ಎಂದು ಬಲ್ಲಿರಿ. ಇದನ್ನು ದೃಢಪಡಿಸಿಕೊಳ್ಳಲು, ಮಾಡಬೇಕಾದ ಕಾರ್ಯವೇ ಕನ್ನಡ ಪಠ್ಯಕ್ರಮದ ವಿಮರ್ಶೆ, ನಮ್ಮ ಶಿಕ್ಷಣ ಕ್ರಮವು 2005 ನೆಯ ರಾಷ್ಟ್ರೀಯ ಪಠ್ಯಕ್ರಮವನ್ನು ಇದುವರೆಗೆ ಅನುಸರಿಸಿದೆ ಎಂದು ಬಲ್ಲಿರಿ. ಅದರೊಂದಿಗೆ 2007ರ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟನ್ನು ಗಮನಿಸಲಾಗಿದೆ ಎಂದು ತಿಳಿದಿರುವಿರಿ.

ಪಠ್ಯಕ್ರಮ ವಿಮರ್ಶಿಸುವಾಗ ಪಠ್ಯಕ್ರಮ ಯಾವ ಉದ್ದೇಶ ಅಥವಾ ಯಾವ ಆಶಯಗಳ ಈಡೇರಿಕೆಗಾಗಿ ರಚನೆಯಾಗಿರುವುದು ಎಂಬುದನ್ನು ಮತ್ತು ಆ ಉದ್ದೇಶಗಳ ಸಾಧನೆಗೆ ಯಾವ ಪಠ್ಯವಸ್ತು ವಿವರವನ್ನು ಹಾಗೂ ಕಲಿಕಾ ಚಟುವಟಿಕೆಗಳನ್ನು ಬಳಸಿಕೊಳ್ಳಬಯಸುತ್ತದೆ ಎಂಬುದನ್ನು ಪರಾಮರ್ಶಿಸಬೇಕಾಗುತ್ತದೆ.

ಕೊನೆಯದಾಗಿ ಆದರೆ ಅತಿಮುಖ್ಯವಾದ ಮತ್ತೊಂದು ಅಂಶವನ್ನು ನಾವಿಲ್ಲಿ ಪರಿಗಣಿಸಬೇಕು. ಏನೆಂದರೆ ಕಲಿಕೆ ಮತ್ತು ಬೋಧನೆ ಅನೇಕ ಸವಾಲುಗಳನ್ನು ಎದುರಿಸುತ್ತಿರುವ ಸಮಯದಲ್ಲಿ ಶಿಕ್ಷಣವು ಸಮಕಾಲೀನವಾಗಲು ನಿರಂತರವಾಗಿ ಬದಲಾವಣೆಗಳನ್ನು ಒಪ್ಪಿಕೊಳ್ಳುವುದು ಅನಿವಾರ್ಯ. ಆ ಬದಲಾವಣೆಗಳನ್ನು ಗುರುತಿಸಿಕೊಳ್ಳಲು ಪಠ್ಯಕ್ರಮ ವಿಮರ್ಶೆ ಸಹಾಯವಾಗುವುದು. ಈ ಪಠ್ಯಕ್ರಮದ ವಿಮರ್ಶೆ ಎಂದರೇನು, ಅದರ ಸ್ವರೂಪವೇನು ಎಂಬುದನ್ನು ಈ ಘಟಕದಲ್ಲಿ ವಿಚಾರಮಾಡೋಣ.

### 3.2.3. ಕಲಿಕೆಯ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

**ಪಠ್ಯಕ್ರಮ ವಿಮರ್ಶೆ**

ವಿದ್ಯಾರ್ಥಿಗಳೇ ನೀವು ಬ್ಲಾಕ್ – 1ರಲ್ಲಿ ಅಧ್ಯಯನ ಮಾಡಿದ ವಿಚಾರಗಳನ್ನು ತುಸು ಜ್ಞಾಪಿಸಿಕೊಳ್ಳಿ. ಪ್ರೌಢಶಾಲಾ ಪಠ್ಯಕ್ರಮವು ಮೂರು ವರ್ಷಗಳಲ್ಲಿ (8, 9 ಮತ್ತು 10 ನೆ ತರಗತಿ) ಪ್ರಥಮ ಭಾಷೆಯ ಉದ್ದೇಶಗಳನ್ನು ಪಟ್ಟಿ ಮಾಡಿರುವುದನ್ನು ತಿಳಿದಿದ್ದೀರಿ.

ಅವುಗಳನ್ನು ಮತ್ತೊಮ್ಮೆ ಪುನರಾವರ್ತಿಸೋಣ. ಆಲಿಸಿ ಮತ್ತು ಓದಿ ಸರಿಯಾಗಿ ಮತ್ತು ವೇಗವಾಗಿ ಗ್ರಹಿಸುವ ಸಾಮರ್ಥ್ಯ, ಪರಿಣಾಮಕಾರಿಯಾಗಿ ಮೌಖಿಕವಾಗಿ ಮತ್ತು ಲಿಖಿತವಾಗಿ ಅಭಿವ್ಯಕ್ತಿಸುವ ಸಾಮರ್ಥ್ಯ, ಸ್ವಂತಿಕೆ, ಚಿಂತನೆ, ಕಲ್ಪನೆ, ಸೌಂದರ್ಯಪ್ರಜ್ಞೆ ಮತ್ತು ಸಂಸ್ಕೃತಿಯ ಬಗೆಗೆ ಒಲವು ತೋರುವ ಗುಣಗಳ ಬೆಳವಣಿಗೆ, ಸಾಹಿತ್ಯ ಪ್ರಕಾರಗಳ ಜ್ಞಾನ ಮತ್ತು ಕೃತಿಕಾರರ ವಿಶಿಷ್ಟ ಪರಿಚಯ ಹಾಗೂ ವಿದ್ಯಾರ್ಥಿಯ ಸರ್ವತೋಮುಖ ವ್ಯಕ್ತಿತ್ವ ವಿಕಾಸ – ಎಂಬಿವೇ ಆ ಉದ್ದೇಶಗಳು.

ಉದ್ದೇಶಗಳ ಸಾಧನೆಗೆ ಸೂಕ್ತವಾದ ಪಠ್ಯಸಾಮಗ್ರಿಯನ್ನು ಆಯ್ದುಕೊಂಡು, 1986ರ ರಾಷ್ಟ್ರೀಯ ಶಿಕ್ಷಣನೀತಿ ಸೂಚಿಸುವ ಸಾಮಾಜಿಕ ನೈತಿಕ, ಆಧ್ಯಾತ್ಮಿಕ ಮೌಲ್ಯಗಳನ್ನು ಒಳಗೊಂಡಂತೆ ಪ್ರೌಢಶಾಲಾ ಪಠ್ಯಕ್ರಮವನ್ನು ರೂಪಿಸಬೇಕು, ಅವುಗಳನ್ನೇ ಆಧಾರವಾಗಿಟ್ಟುಕೊಂಡು ಪಠ್ಯಪುಸ್ತಕಗಳು ರಚನೆಯಾಗಬೇಕೆಂದು ನಿರ್ದೇಶನವಿದೆ.

**3.2.3.1. ಪಠ್ಯಕ್ರಮದ ವಿಮರ್ಶೆಯ ಅರ್ಥ ಮತ್ತು ವ್ಯಾಪ್ತಿ**

ಪಠ್ಯಕ್ರಮ ಎಂದರೆ ಏನೆಂಬುದನ್ನು ಹಿಂದಿನ ಘಟಕದಲ್ಲಿ ಅರಿತಿದ್ದೀರಿ. ಅಂತೆಯೇ ಕಲಿಯುವವರಲ್ಲಿ ನಿರ್ದಿಷ್ಟವಾದ ಮತ್ತು ಅಪೇಕ್ಷಿತವಾದ ವರ್ತನೆ ಅಥವಾ ಕಲಿಕೆ ಅಥವಾ ಕಲಿಕೆಯ ಫಲವನ್ನು ಉಂಟುಮಾಡಲು ಶಾಲಾ ಸನ್ನಿವೇಶ ಅಥವಾ ಕಲಿಕಾ ಸನ್ನಿವೇಶದಲ್ಲಿ ಒದಗಿಸಲಾಗುವ ಎಲ್ಲ ರೀತಿಯ ಕಲಿಕಾ ಅನುಭವಗಳ ಸರಣಿಗಳ ವ್ಯವಸ್ಥೆಯೇ ಪಠ್ಯಕ್ರಮ. ಶಾಲಾ ಪಠ್ಯ ಕ್ರಮ ಯಾವಾಗಲೂ 'ಸಮಕಾಲೀನ'ವಾಗಿರಬೇಕು. ಆ ಕಾರಣಕ್ಕಾಗಿ ಪಠ್ಯಕ್ರಮವನ್ನು ನಿರಂತರವಾಗಿ ಪರಿಷ್ಕರಣಕ್ಕೆ ಒಳಪಡಿಸಬೇಕು. ಈ ಜವಾಬ್ದಾರಿಯನ್ನು ನಮ್ಮ ದೇಶದಲ್ಲಿ ಎನ್.ಸಿ.ಇ.ಆರ್.ಟಿ. ಹೊತ್ತಿದ್ದು, ಪಠ್ಯಕ್ರಮ ವಿಕಸನ ಕಾರ್ಯದಲ್ಲಿ ತೊಡಗುತ್ತದೆ. ರಾಜ್ಯಗಳ ಮಟ್ಟದಲ್ಲಿ ಡಿ.ಎಸ್.ಇ.ಆರ್.ಟಿ. ಈ ಜವಾಬ್ದಾರಿ ತೆಗೆದುಕೊಳ್ಳುತ್ತದೆ.

ಎನ್.ಸಿ.ಇ.ಆರ್.ಟಿ.ಯು ಪಠ್ಯಕ್ರಮ ವಿಕಸನದ ಕಾರ್ಯದಲ್ಲಿ ಪರಿಗಣಿಸಬೇಕಾದ ಮಾರ್ಗದರ್ಶಿ ಸೂತ್ರ ಗಳನ್ನು ಸೂಚಿಸಿರುವುದನ್ನು ನೀವು ಈಗಾಗಲೇ ತಿಳಿದಿರುವಿರಿ. ಅವುಗಳನ್ನು ನೆನೆಪಿಸಿಕೊಂಡು ಕೆಳಗಿನ ಪ್ರಶ್ನೆಗಳನ್ನು ಉತ್ತರಿಸಿ.

ಬಿಟ್ಟ ಸ್ಥಳವನ್ನು ಆವರಣದಲ್ಲಿ ಕೊಟ್ಟಿರುವ ಉತ್ತರಗಳಿಂದ ಆಯ್ದು ತುಂಬಿ:

1. ಪಠ್ಯದಲ್ಲಿ ಕೊಡುವ ಜ್ಞಾನವು ಸಂಬಂಧಿಸಿರಬೇಕಾದ ಅಂಶ ________________
2. ಕಲಿಕೆಯ ವಿಧಾನಗಳಲ್ಲಿ ತಪ್ಪಿಸಬೇಕಾದುದು ________________
3. ಪಠ್ಯ ಕ್ರಮವು ಸಂಪದ್ಭರಿತವಾಗಲು ಇರಬೇಕಾದ ಗಮನ________________
4. ಕಲಿಕೆಯನ್ನು ದೃಢಪಡಿಸಿಕೊಳ್ಳುವ ಪರೀಕ್ಷೆಗಳ ಲಕ್ಷಣ ________________

(ಅ) ಪಠ್ಯ ಪುಸ್ತಕಗಳಾಚೆ (ಬ) ನಮ್ಯತೆ (ಕ) ಅಂಧಾನುಕರಣೆ (ಡ) ನಿಜಜೀವನ

ನೀವು ಕ್ರಮವಾಗಿ 1–ಡ, 2–ಕ, 3–ಅ, 4–ಬ ಎಂದು ಗುರುತಿಸಿದ್ದರೆ ಸರಿಯಾಗಿ ಉತ್ತರಿಸಿದ್ದೀರಿ. ಪಠ್ಯಕ್ರಮ ವಿಮರ್ಶೆಯಲ್ಲಿ ಈ ಮಾರ್ಗದರ್ಶಿ ಅಂಶಗಳೂ ಅಗತ್ಯವಾಗುವವು. ಒಂದು ಪಠ್ಯಕ್ರಮದ ವಿಮರ್ಶೆಯನ್ನು ಮಾಡುವಾಗ ಉತ್ತಮ ಪಠ್ಯಕ್ರಮದ ಮೂಲಲಕ್ಷಣಗಳ ಹಿನ್ನೆಲೆಯಲ್ಲಿ ಎಷ್ಟರಮಟ್ಟಿಗೆ ಆ ಲಕ್ಷಣಗಳನ್ನು ಪರಿಗಣಿಸಲಾಗಿದೆ ಎಂದು ಗುರುತಿಸುವ ಕಾರ್ಯ ಅಗತ್ಯ. ಪಠ್ಯಕ್ರಮದ ಉತ್ತಮ ಅಂಶಗಳನ್ನು ಎತ್ತಿ ತೋರುವುದು ಇಲ್ಲಿಯ ಮುಖ್ಯ ಕಾರ್ಯವಾಗುತ್ತದೆ. ಕೊರತೆಗಳಿದ್ದರೆ ಸಲಹಾತ್ಮಕ ಸೂಚನೆಗಳನ್ನು ನೀಡಬಹುದು. ವಿಮರ್ಶೆ ಮಾಡುವ ಮುನ್ನ ವಿಮರ್ಶಿಸಬೇಕಾದ ಪಠ್ಯಕ್ರಮವನ್ನು ಸರಿಯಾಗಿ ಅರ್ಥಮಾಡಿಕೊಳ್ಳುವುದು, ಪಠ್ಯಕ್ರಮದ ಉದ್ದೇಶಗಳನ್ನು ಅರ್ಥಮಾಡಿಕೊಳ್ಳುವುದು, ಪಠ್ಯಕ್ರಮದಲ್ಲಿರುವ ಪಠ್ಯವಿಷಯದ ವಸ್ತುವಿವರಗಳನ್ನು ಅರಿತುಕೊಳ್ಳುವುದು ಅಗತ್ಯವೆಂಬುದನ್ನು ಗಮನಿಸಬೇಕಾಗುತ್ತದೆ. ಪಠ್ಯದ ವಿಷಯವಸ್ತುಗಳು (ಅಂದರೆ ಭಾಷಾಂಶಗಳು ಮತ್ತು ಸಾಹಿತ್ಯಾಂಶಗಳು) ಕಲಿಕೆಗೆ ಸೂಕ್ತವಾದ ಕಲಿಕಾ ಚಟುವಟಿಕೆಗಳನ್ನು, ಅನುಭವಗಳನ್ನು ಒದಗಿಸಲು ಅನುಕೂಲಕರವಾಗಿದೆಯೇ ಎಂಬುದನ್ನು ಗುರುತಿಸುವುದು, ಕಲಿಕಾ ಸಾಮಗ್ರಿಗಳನ್ನು ಬಳಸಲು ಸಾಧ್ಯತೆಗಳನ್ನು ಖಚಿತಪಡಿಸಿಕೊಳ್ಳುವುದು, ಮತ್ತು ಭಾಷಾಕಲಿಕೆಯ ಮೌಲ್ಯಮಾಪನ ಚಟುವಟಿಕೆಗಳು ಸೂಕ್ತವಾಗಿವೆಯೇ ಎಂದು ಕಂಡುಕೊಳ್ಳುವುದು ಅಗತ್ಯ. ಅನಂತರವಷ್ಟೇ ಪಠ್ಯಕ್ರಮ ವಿಮರ್ಶೆಗೆ ತೊಡಗಬೇಕು.

**ಭಾಷಾ ಪಠ್ಯಕ್ರಮ ವಿಮರ್ಶೆಯ ಮಹತ್ವ**

ಒಂದು ಹೊಸ ಪುಸ್ತಕ ರಚನೆಯಾದಾಗ ಅದು ಓದುಗರ ಕೈ ಸೇರಲು ಲೋಕಾರ್ಪಣೆಗೆ ಒಳಗಾಗುವುದನ್ನು ಬಲ್ಲಿರಿ. ಆ ಸಂದರ್ಭದಲ್ಲಿ ಕೃತಿಯನ್ನು ವಿಮರ್ಶಾತ್ಮಕವಾಗಿ ಪರಿಚಯಿಸುವುದನ್ನು ನೀವು ಗಮನಿಸಿರಬಹುದು. ಹಾಗೆಯೇ ಚಲನಚಿತ್ರವೊಂದು ಶುಕ್ರವಾರ ಬಿಡುಗಡೆಯಾದರೆ ಶನಿವಾರವೇ ಅದರ ವಿಮರ್ಶೆಯನ್ನು ಪತ್ರಿಕೆಗಳಲ್ಲಿ ಓದಿರುತ್ತೀರಲ್ಲವೇ? ಕ್ರಿಕೆಟ್ ಪಂದ್ಯವೂ ನಡೆದ ನಂತರ ವಿಮರ್ಶೆಗೆ ಒಳಗಾಗುತ್ತದೆ. ಈ ಎಲ್ಲ ಸಂದರ್ಭಗಳಲ್ಲಿ ವಿಮರ್ಶೆಗೆ ಗುರಿಯಾದ ಕೃತಿ, ಚಲನಚಿತ್ರ ಮತ್ತು ಕ್ರೀಡೆಯ ಗುಣಲಕ್ಷಣಗಳು ಮೆಚ್ಚುಗೆಯ ಅಂಶಗಳು ಪ್ರಕಟವಾಗುವವು.  ಹಾಗೆಯೇ ಕೊರತೆಗಳನ್ನು ಗುರುತಿಸಲಾಗುವುದು. ಹೀಗೆಯೇ ಪಠ್ಯಕ್ರಮವೂ ವಿಮರ್ಶೆಗೆ ಒಳಗಾಗುತ್ತದೆ. ಪಠ್ಯಕ್ರಮ ವಿಮರ್ಶೆ ಅನೇಕ ಕಾರಣಗಳಿಂದ ಪ್ರಮುಖವಾಗುತ್ತದೆ:

- ವಿಮರ್ಶೆಯ ಮೂಲಕ ವ್ಯಕ್ತವಾದ ಉತ್ತಮ ಅಂಶಗಳು ಪಠ್ಯಕ್ರಮ ಕಾರ್ಯಗತಗೊಳಿಸುವಾಗ ವಿಶೇಷ ಕಾಳಜಿ ಮತ್ತು ಜಾಗರೂಕತೆಯಿಂದ ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರಲು ಪ್ರೇರಕವಾಗುವುದು;
- ಕೊರತೆಗಳಿದ್ದರೆ ತಕ್ಷಣವೇ ಅದನ್ನು ಸುಧಾರಿಸಿ ಬಳಸಲು ಪ್ರಯತ್ನಗಳು ಜರಗುವವು.  ಕಲಿಕೆಯ ಚಟುವಟಿಕೆ ಮತ್ತು ಅನುಭವಗಳನ್ನು ಬದಲಿಸಲು, ಹೆಚ್ಚಿಸಲು ಮತ್ತು ವಿದ್ಯಾರ್ಥಿಗಳ ಸಕ್ರಿಯ ಪಾತ್ರವನ್ನು ದೃಢಪಡಿಸಿಕೊಳ್ಳಲು ಸಾಧ್ಯವಾಗುವುದು;
- ಪಠ್ಯಕ್ರಮವನ್ನು ಮುಂದುವರಿಸಿಕೊಂಡು ಹೋಗಲು ನಿರ್ಧರಿಸಿಕೊಳ್ಳಲು ಆಧಾರವಾಗುವುದು. ಸಂಕಲನಾತ್ಮಕ ಮತ್ತು ರೂಪಣಾತ್ಮಕ ಮೌಲ್ಯಮಾಪನ ಕ್ರಮಗಳನ್ನು ಸೂಕ್ತವಾಗಿ ಕೈಗೊಳ್ಳಲು ಸಹಾಯವಾಗುವುದು;
- ಸಮಸ್ಯೆಗಳಿದ್ದರೆ ಶೀಘ್ರವಾಗಿ ಗುರುತಿಸಿ ಪರಿಹಾರಗಳನ್ನು ಮತ್ತು ಸುಧಾರಣೆಗಳನ್ನು ಸಕಾಲದಲ್ಲಿ ಕಂಡುಕೊಳ್ಳಲು ನೆರವಾಗುವುದು;
- ಪಠ್ಯಕ್ರಮದ ಯಶಸ್ಸಿನ ಅಂಶಗಳನ್ನು ಬಲಗೊಳಿಸಲು ಸಹಾಯವಾಗುವುದು;
- ಹೆಚ್ಚಿನ ಯಶಸ್ಸಿಗಾಗಿ ಜ್ಞಾನಸ್ಫೋಟ ಮತ್ತು ತಂತ್ರಜ್ಞಾನದ ಪ್ರಗತಿಯ ಕಾರಣದಿಂದ ಬೆಳಕಿಗೆ ಬರುವ ನವೀನ ಆಚರಣೆಗಳನ್ನು ರೂಡಿಸಿಕೊಳ್ಳಲು ನೆರವಾಗುವುದು;
- ಪಠ್ಯಕ್ರಮವನ್ನು ಮನೋವೈಜ್ಞಾನಿಕವಾಗಿ ರೂಪಿಸಲು ಅಗತ್ಯವಾದ ಬದಲಾವಣೆಗಳನ್ನು ತರಲು ಸಾಧ್ಯಮಾಡಿಕೊಡುವುದು;
- ವಿದ್ಯಾರ್ಥಿಗಳ ಕಲಿಕೆಯನ್ನು, ಸಾಧನೆಯನ್ನು ವಸ್ತುನಿಷ್ಠವಾಗಿ ಮಾಪನ ಮಾಡಲು ಅಗತ್ಯವಾದ ಬದಲಾವಣೆಗಳನ್ನು ಸೂಚಿಸುವುದು;
- ಭಾಷಾ ಬೆಳವಣಿಗೆಯಲ್ಲಾಗುವ ಹೊಸ ತಿರುವುಗಳು, ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಶಬ್ದಸಂಪತ್ತು, ಹೊಸದಾಗಿ ಸೇರುವ ಪದಪುಂಜ, ನುಡಿಗಟ್ಟುಗಳ ಬೆಳಕಿನಲ್ಲಿ ಭಾಷಾಪಠ್ಯಕ್ರಮದ ವಿಮರ್ಶೆ ಅಗತ್ಯವಾಗುವುದು.
- ವಿಪುಲವಾಗಿ ಮತ್ತು ವೈವಿಧ್ಯಮಯವಾಗಿ ಬೆಳೆಯುತ್ತಿರುವ ದೇಶಿಯ ಸಾಹಿತ್ಯದಲ್ಲಾಗುವ ಹೊಸ ತಿರುವುಗಳನ್ನು ಪರಿಚಯಿಸಲು ಪಠ್ಯಕ್ರಮ ವಿಮರ್ಶೆ ಅಗತ್ಯವಾಗುವುದು.

**ಭಾಷಾ ಪಠ್ಯಕ್ರಮದ ವಿಮರ್ಶೆಗೆ ಆಧಾರ ಅಂಶಗಳು**

ಭಾಷಾ ಪಠ್ಯಕ್ರಮ ವಿಮರ್ಶೆಯೂ ಒಂದು ಯೋಜಿತ ಕಾರ್ಯವಾಗಿದ್ದು ಈ ಕೆಳಗಿನ ಅಂಶಗಳಿಗೆ ಸಂಬಂಧಿಸಿದಂತೆ ವಿಶ್ಲೇಷಣೆಯನ್ನು ಕೈಗೊಳ್ಳಬೇಕಾಗುತ್ತದೆ.

- ಭಾಷಾಕಲಿಕೆಯ ಧ್ಯೇಯಗಳು (ಉದ್ದೇಶಗಳನ್ನು ಒಳಗೊಂಡು)
- ಭಾಷಾ ಪಠ್ಯವಸ್ತು (content)
- ಕಲಿಕಾ ಸಾಮಗ್ರಿಗಳು

- ಗುರಿಗಳ ಸಾಧನೆಗೆ ಕೈಗೊಳ್ಳುವ ಕಲಿಕೆಯ ಚಟುವಟಿಕೆಗಳು ಮತ್ತು ಅವುಗಳ ಕಲಿಕೆಯ ಫಲಗಳು.
- ಭಾಷಾ ಕಲಿಕೆಯ ಮೌಲ್ಯಮಾಪನ

ಭಾಷಾ ಪಠ್ಯಕ್ರಮ ವಿಮರ್ಶೆಯ ಆಧಾರವನ್ನು ಈ ರೀತಿಯೂ ಪರಿಗಣಿಸಬಹುದು:

- **ಉದ್ದೇಶಿತ ಪಠ್ಯಕ್ರಮ:** ವಿದ್ಯಾರ್ಥಿಗಳು ಏನು ಕಲಿಯಬೇಕೆಂಬುದುರ ಬಗ್ಗೆ ಶಿಕ್ಷಕರು ಆಶಿಸುವ ಒಂದು ಅಧಿಕೃತ ಯೋಜನೆಯೇ ಉದ್ದೇಶಿತ ಪಠ್ಯಕ್ರಮವಾಗಿರುತ್ತದೆ.
- **ಸಾಧಿತ ಪಠ್ಯಕ್ರಮ:** ಭಾಷೆ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದ ಜ್ಞಾನ, ಕೌಶಲಗಳು ಮತ್ತು ಆಸಕ್ತಿ/ ಮನೋಭಾವಗಳಿಗೆ ಸಂಬಂಧಿಸಿದಂತೆ ವಾಸ್ತವವಾಗಿ ಕಲಿತದ್ದು ಸಾಧಿತ ಪಠ್ಯಕ್ರಮವಿನಿಸಿಕೊಳ್ಳುತ್ತದೆ.

ಉದ್ದೇಶಿತ ಪಠ್ಯಕ್ರಮವು ಸಾಧಿತ ಪಠ್ಯಕ್ರಮವಾಗಿ ರೂಪುಪಡೆಯಲು ಹೇಗೆ ಅನುಕೂಲಕರವಾಗಿದೆ ಎಂದು ಚರ್ಚಿಸುವುದೇ ಪಠ್ಯಕ್ರಮ ವಿಮರ್ಶೆಯಾಗುತ್ತದೆ. ಇದು ಭಾಷಾಶಿಕ್ಷಣಕ್ಕೆ ಸಂಬಂಧಿಸಿರುವುದರಿಂದ **'ಭಾಷಾ ಪಠ್ಯಕ್ರಮ ವಿಮರ್ಶೆ'** ಎನಿಸಿಕೊಳ್ಳುತ್ತದೆ.

ಪಠ್ಯಕ್ರಮವು (curriculum) ಪಠ್ಯವಸ್ತುವಿಗಿಂತ ವ್ಯಾಪಕವಾಗಿದ್ದು ಇದು ಪಠ್ಯವಸ್ತುವಿನ ವಿವರಗಳನ್ನು ಮಾತ್ರವಲ್ಲದೆ ವಿದ್ಯಾರ್ಥಿಗಳ ಅಪೇಕ್ಷಿತ ಕಲಿಕಾ ಸಾಧನೆಯನ್ನು ಅಳೆಯುವ ಕ್ರಮಗಳನ್ನೂ ಒಳಗೊಂಡಿರುತ್ತದೆ. ಭಾಷಾ ಕಲಿಕೆ ಮತ್ತು ಬೋಧನೆ, ಪಠ್ಯವಸ್ತು ಮತ್ತು ವಿಷಯದ ಆಯ್ಕೆಯು ತರಗತಿಯಲ್ಲಿನ ಅಭಿಪ್ರೇರಣೆಗೆ ಮತ್ತು ರಚನಾತ್ಮಕ ಕಲಿಕೆಯ ಸಿದ್ಧಾಂತಕ್ಕೆ ಸಂಬಂಧಿಸಿದ ಅಂಶಗಳು. ಪಠ್ಯಕ್ರಮ ರಚನೆಯ ತತ್ವ/ ನಿಯಮಗಳ ಆಧಾರದಿಂದಲೂ ಪಠ್ಯಕ್ರಮ ವಿಶ್ಲೇಷಣೆಯನ್ನು ಮಾಡಬಹುದು.

ಪಠ್ಯಕ್ರಮ ವಿಶ್ಲೇಷಣೆ ಮತ್ತು ವಿಮರ್ಶೆ ಮಾಡುವಾಗ ಪಠ್ಯಕ್ರಮ ರಚನೆಯ ತತ್ವಗಳಿಗನುಗುಣವಾಗಿ ಕೆಳಗಿನ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಬೇಕು.

| | |
|---|---|
| ಆಸಕ್ತಿಯ ತತ್ವ | ಪಠ್ಯಕ್ರಮ ವಿದ್ಯಾರ್ಥಿಗಳಿಗೆ ಆಸಕ್ತಿದಾಯಕವಾಗಿದೆಯೇ? |
| ನಮ್ಯತೆಯ ತತ್ವ | ವಿದ್ಯಾರ್ಥಿಗಳ ಅಗತ್ಯ ಮತ್ತು ಸಮಕಾಲೀನ ಸನ್ನಿವೇಶದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಲು ಅವಕಾಶವಿದೆಯೇ? |
| ಕೌಶಲಗಳು ಮತ್ತು ಚಟುವಟಿಕೆಯ ತತ್ವ | ಕೌಶಲಗಳನ್ನು ಬೆಳೆಸಲು ಪೂರಕವಾಗಿದೆಯೇ?<br>ಚಟುವಟಿಕೆಗಳು ಸಾಕಷ್ಟು ಸಂಖ್ಯೆಯಲ್ಲಿದ್ದು, ಉದ್ದೇಶ ಸಾಧನೆಗೆ ಅನುಕೂಲಿಸುತ್ತವೆಯೇ? |
| ಸಹ ಸಂಬಂಧ ತತ್ವ | ಪಠ್ಯಕ್ರಮದಲ್ಲಿ ಭಾಷಾಂಶಗಳು ಮತ್ತು ಸಾಹಿತ್ಯಾಂಶಗಳನ್ನು ಒಂದುಗೂಡಿಸಿ ಹೇಳಿಕೊಡುವ/ ಕಲಿಯುವ ಸಾಧ್ಯತೆಗಳು ವಿಪುಲವಾಗಿವೆಯೇ? |
| ವ್ಯಕ್ತಿ ವಿಭಿನ್ನತೆಯ ತತ್ವ | ಪಠ್ಯಕ್ರಮವು ವಿಭಿನ್ನ ಸಂಸ್ಕೃತಿಯ ವಿದ್ಯಾರ್ಥಿಗಳಿಗೆ ಉದ್ದೇಶಿತವಾದುದನ್ನು ಕಲಿಯಲು ಅನುಕೂಲಿಸುತ್ತದೆಯೇ? |
| ಬೋಧನೆಯ ತತ್ವ | ಪಠ್ಯಕ್ರಮದ ವಿವಿಧ ಅಂಶಗಳು 'ಸರಳತೆಯಿಂದ ಸಂಕೀರ್ಣತೆಯೆಡೆಗೆ' ತತ್ವವನ್ನು ಪಾಲಿಸಲು ಅವಕಾಶಮಾಡಿಕೊಡುತ್ತದೆಯೇ? |
| ಉಪಯುಕ್ತತೆಯ ತತ್ವ | ಪಠ್ಯಕ್ರಮವು ವಿದ್ಯಾರ್ಥಿಗಳ ಭವಿಷ್ಯ ಜೀವನವನ್ನು ರೂಪಿಸಲು ಅನುಕೂಲಕರವಾಗಿದೆಯೇ? |
| ಸೃಜನಶೀಲತೆಯ ತತ್ವ | ವಿದ್ಯಾರ್ಥಿಗಳಲ್ಲಿ ಸೃಜನಶೀಲ ಸಾಮರ್ಥ್ಯವನ್ನು ಬೆಳೆಸಲು ಸಮರ್ಥವಾಗಿದೆಯೇ? |
| ವಿರಾಮಕಾಲದ ಸದ್ವಿನಿಯೋಗ ತತ್ವ | ವಿದ್ಯಾರ್ಥಿಗಳು ವಿರಾಮಕಾಲದ ಸದ್ವಿನಿಯೋಗ ಮಾಡಿಕೊಳ್ಳಲು ಮಾರ್ಗದರ್ಶನ ಮಾಡುತ್ತದೆಯೇ? |
| ಸಮಷ್ಟಿ ಪ್ರಜ್ಞೆಯ ತತ್ವ | ಪಠ್ಯಕ್ರಮವು ದೇಶಭಕ್ತಿ, ಸಹಜೀವನ, ಇತ್ಯಾದಿ ಮೌಲ್ಯಪ್ರಜ್ಞೆ ಮೂಡಿಸುತ್ತದೆಯೇ? |

ಈ ಮೇಲಿನ ಹಲವು ತತ್ವಗಳನ್ನು 2005ರ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನಲ್ಲೂ (ಎನ್.ಸಿ.ಎಫ್) ಉಲ್ಲೇಖಿಸಲಾಗಿದೆ. ಈ ದಾಖಲೆಯು ಪ್ರಮುಖವಾಗಿ ಕೆಳಗಿನ ಅಂಶಗಳನ್ನು ಗಮನಿಸಿದೆ.

ಕಲಿಕೆಯನ್ನು ಜೀವನಾಗತ್ಯಕ್ಕೆ ಜೋಡಿಸುವುದು ; ಕಂಠಪಾಠ ವಿಧಾನ ತೊರೆದು ವಿದ್ಯಾರ್ಥಿಗಳೇ ಜ್ಞಾನ ಸಂರಚಿಸುವುದು; ಪಠ್ಯಪುಸ್ತಕದಾಚೆಗಿನ ಕಲಿಕೆಯನ್ನು ವಿಸ್ತರಿಸುವುದು; ಕಲಿಕಾ ಅನುಭವಗಳಿಂದ ಜ್ಞಾನಾಭಿವೃದ್ಧಿ; ಪ್ರಜಾಸತ್ತಾತ್ಮಕ ನೀತಿಯನುಸಾರ ವಿದ್ಯಾರ್ಥಿಗಳ ಅವಶ್ಯಕತೆಗಳಿಗೆ ತಕ್ಕಂತೆ ಸ್ಪಂದಿಸುವುದು; ಶಿಕ್ಷಣವನ್ನು ಇಂದಿನ ಮತ್ತು ಭವಿಷ್ಯದ ಜೀವನಾವಶ್ಯಕತೆಗಳಿಗೆ ಹೊಂದುವಂತೆ ಮಾಡುವುದು; ವಿಷಯಗಳನ್ನು ಸಮಗ್ರದೃಷ್ಟಿಯಲ್ಲಿ ಗ್ರಹಿಸಿ ಬೋಧಿಸುವುದು; ಶಾಲಾ ಹೊರಗಿನ ಬದುಕಿಗೆ ಜ್ಞಾನ ಸಂಯೋಜನೆ ಮಾಡುವುದು. ಪಠ್ಯಕ್ರಮವು ಈ ಅಂಶಗಳಿಗೆ ಅನುಗುಣವಾಗಿದೆಯೇ ಎಂಬುದನ್ನೂ ಗಮನಿಸಿಕೊಳ್ಳಬೇಕು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

ಅ) ಈ ಕೆಳಗಿನವುಗಳಲ್ಲಿ ಭಾಷಾ ಪಠ್ಯಕ್ರಮ ವಿಮರ್ಶೆಗೆ ಆಧಾರವಾಗಿರುವ ಅಂಶಗಳನ್ನು ಪತ್ತೆ ಮಾಡಿರಿ:

1. ಶಾಲೆಯ ವಿವಿಧ ವಿಷಯ ತರಗತಿಗಳ ವೇಳಾಪಟ್ಟಿ
2. ಭಾಷಾ ಕಲಿಕೆಯ ಧ್ಯೇಯೋದ್ದೇಶಗಳು
3. ಸ್ಥಳೀಯ ಕಲೆ ಮತ್ತು ಇತಿಹಾಸ
4. ಭಾಷೆಯ ಸಾಹಿತ್ಯ ಮತ್ತು ಸೈದ್ಧಾಂತಿಕ ಅಂಶಗಳು
5. ವಿರಾಮಕಾಲದ ಚಟುವಟಿಕೆಗಳು
6. ಭಾಷಾಕಲಿಕೆಯ ಸಾಮಗ್ರಿಗಳು ಮತ್ತು ಚಟುವಟಿಕೆಗಳು
7. ಶಾಲೆಯ ಕ್ರೀಡಾ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು
8. ಭಾಷಾ ಕಲಿಕೆಯ ರೂಪಣ ಮೌಲ್ಯಮಾಪನ ಮತ್ತು ಸಂಕಲನಾತ್ಮಕ ಮೌಲ್ಯಮಾಪನ

ಉತ್ತರ:...........................................................................................

ಆ) ಕೆಳಗಿನ ಹೇಳಿಕೆಗಳು ಭಾಷಾಪಠ್ಯಕ್ರಮ ರಚನೆಯ ಯಾವ ತತ್ವಗಳಿಗೆ ಸಂಬಂಧಿಸಿವೆ ಎಂಬುದನ್ನು ಆವರಣದಲ್ಲಿರುವ ಆಯ್ಕೆಗಳಲ್ಲಿ ಗುರುತಿಸಿ.

1. ವಿದ್ಯಾರ್ಥಿಗಳೆ ಸ್ವಇಚ್ಛೆಯಿಂದ ಅನೇಕ ಪಾಠಗಳನ್ನು ಆಯ್ದು ಓದಿದರು.
2. ವಿದ್ಯಾರ್ಥಿಗಳು ವ್ಯಾವಹಾರಿಕ ಪತ್ರಗಳನ್ನು ಪತ್ರಿಕಾ ವರದಿಯನ್ನು ರಚಿಸಿದರು.
3. ಪಠ್ಯಕ್ರಮ ಸೂಚಿಸಿದ ವಿಷಯವಸ್ತುವಿಗೆ ಕೆಲವು ವಿದ್ಯಾರ್ಥಿಗಳು ಕವಿತೆಯನ್ನು ಮತ್ತೆ ಕೆಲವರು ಕಥೆಯನ್ನು ರಚಿಸಿದರು.
4. ವಿದ್ಯಾರ್ಥಿಗಳು ಚರ್ಚಿಸಿ ಸಮಾರಂಭಕ್ಕೆ ನಾಟಕವನ್ನು ಮತ್ತು ಭಾವಗೀತೆಗಳನ್ನು ಆಯ್ಕೆಮಾಡಿದರು.
5. ನಾಟಕ ರೂಪದ ಪಾಠ ಸಂಭಾಷಣೆಗಳನ್ನು ಕಥಾಂಶವನ್ನು ಬಹುವಾಗಿ ಮೆಚ್ಚಿದರು.

ಉತ್ತರ:...........................................................................................

(i) ಉಪಯುಕ್ತತೆಯ ತತ್ವ (ii) ಸಹಸಂಬಂಧ ತತ್ವ (iii) ಆಸಕ್ತಿಯ ತತ್ವ (iv) ಕೌಶಲಗಳ ತತ್ವ (v) ಸೃಜನಶೀಲತೆಯ ತತ್ವ (vi) ಸಮಷ್ಟಿ ಪ್ರಜ್ಞೆಯ ತತ್ವ (vii) ಸಹಸಂಬಂಧ ತತ್ವ

**ಭಾಷಾ ಪಠ್ಯಕ್ರಮದ ವಿಮರ್ಶೆಯ ರೂಪುರೇಖೆ**

ಭಾಷಾ ಪಠ್ಯಕ್ರಮವನ್ನು ವಿಮರ್ಶಿಸುವಾಗ ಅನುಸರಿಸಬಹುದಾದ ಹಂತಗಳನ್ನು ಸ್ಪಷ್ಟಪಡಿಸಿಕೊಳ್ಳಬೇಕು. ಅವು ಕೆಳಕಂಡಂತಿವೆ:

1. ಭಾಷಾಕಲಿಕೆಯ ಗುರಿಗಳನ್ನು ಗುರುತಿಸಿಕೊಳ್ಳುವುದು (ರಾಷ್ಟ್ರೀಯ ಗುರಿಗಳ ಹಿನ್ನೆಲೆಯಲ್ಲಿ)
2. ಭಾಷಾ ಪಠ್ಯಕ್ರಮದ ಪಠ್ಯವಸ್ತು ಅಥವಾ ಪಠ್ಯಾಂಶಗಳು ಭಾಷಾ ಕಲಿಕೆಯ ಗುರಿಗಳ ಸಾಧನೆಗೆ ಪೂರಕವಾಗಿವೆಯೇ ಎಂಬುದನ್ನು ಗಮನಿಸಬೇಕು;
3. ಭಾಷಾಪಠ್ಯಕ್ರಮ ಸೂಚಿಸುವ ಪಠ್ಯಾಂಶಗಳಲ್ಲಿ ಯಾವ ಪಠ್ಯಾಂಶವು ನಿರ್ದಿಷ್ಟವಾಗಿ ಭಾಷಾ ಬೋಧನೆಯ ಯಾವ ಗುರಿ ಸಾಧನೆಗೆ ಪೂರಕವಾಗುತ್ತದೆ ಎಂಬುದು ಸ್ಪಷ್ಟವಾಗಬೇಕು;
4. ಪಠ್ಯ (ವಿಷಯ/ ಸಾಹಿತ್ಯ) ವಸ್ತು (content)ವು ಭಾಷಾ ಬೋಧನೆಯ ಗುರಿಗಳು ಹಾಗೂ ಬೋಧನಾ-ಕಲಿಕೆಯ ಚಟುವಟಿಕೆಗಳ ನಡುವಣ ಸಾಮರಸ್ಯವಿರಬೇಕು.
5. ಗುರಿಗಳ ಸಾಧನೆಗೆ ಸಮರ್ಪಕ ಮಾಪನ ಸಾಧನಗಳನ್ನೂ ಕ್ರಮಗಳನ್ನೂ ಗುರುತಿಸಿರಬೇಕು.

### 3.2.3.2. ಪ್ರೌಢಶಾಲಾ ಕನ್ನಡ ಭಾಷಾ ಪಠ್ಯಕ್ರಮದ ವಿಮರ್ಶೆ

ಪ್ರೌಢಶಾಲಾ ಕನ್ನಡ ಪಠ್ಯಕ್ರಮದಲ್ಲಿ ಪ್ರಥಮಭಾಷಾ, ದ್ವಿತೀಯಭಾಷಾ ಮತ್ತು ತೃತೀಯ ಭಾಷಾ ಪಠ್ಯ ಕ್ರಮವಿರುವುದೆಂದು ತಿಳಿದಿದ್ದೀರಿ. ಇಲ್ಲಿ ನಾವು ಭಾಷಾ ಪಠ್ಯಕ್ರಮ ವಿಮರ್ಶೆಗೆ ಪ್ರಥಮ ಭಾಷಾ ಕನ್ನಡ ಪಠ್ಯಕ್ರಮಕ್ಕೆ ಅನ್ವಯಿಸಿ ಉದಾಹರಣೆಯಾಗಿ ಅಧ್ಯಯನ ಮಾಡೋಣ.

**ಭಾಷಾ ಪಠ್ಯಕ್ರಮ ವಿಮರ್ಶೆಮಾಡುವಾಗ ಗಮನಿಸಬೇಕಾದ ಮಾನದಂಡಗಳಿಗನುಗುಣವಾಗಿ ವಿಮರ್ಶೆ ಮಾಡಲು ಪ್ರಯತ್ನಿಸೋಣ.**

**ಮಾನದಂಡ 1. ಪ್ರೌಢಶಾಲಾ ಹಂತದ ಭಾಷಾ (ಪ್ರಥಮ) ಕಲಿಕೆಯ ಗುರಿಗಳನ್ನು ಗಮನಿಸಿಕೊಳ್ಳಲಾಗಿದೆಯೇ?**

ಈ ವಿಷಯವನ್ನು ಗಮನಿಸುವಾಗ ಭಾಷಿಕ ಗುರಿಗಳು ಮತ್ತು ಸಾಹಿತ್ಯ ಸಂಬಂಧಿ ಗುರಿಗಳೆರಡನ್ನೂ ಗುರುತಿಸಿಕೊಳ್ಳಲಾಗಿದೆಯೇ ಎಂಬುದನ್ನು ಗಮನಿಸಿಕೊಳ್ಳಬೇಕು. ಈ ಗುರಿಗಳು ಹೀಗಿವೆ:

**ಭಾಷಿಕ ಗುರಿಗಳು** (ಸಾಮರ್ಥ್ಯಗಳ ಪಟ್ಟಿ)

- ಆಲಿಸಿ ಸಾರ ಸಂಗ್ರಹಿಸುವುದು;
- ವೇಗವಾಗಿ ಮತ್ತು ಸ್ವತಂತ್ರವಾಗಿ ಸೂಕ್ತ ಶೈಲಿಯಲ್ಲಿ ಸ್ವತಂತ್ರವಾಗಿ ಓದುವುದು;
- ಆಕರ ಗ್ರಂಥಗಳಿಂದ ವಿಷಯ ಸಂಗ್ರಹಿಸುವುದು;
- ಅಂತರ್ದೃಷ್ಟಿ ಮತ್ತು ಆನಂದಕ್ಕಾಗಿ ಓದುವುದು;
- ತಪ್ಪಿಲ್ಲದೆ ಸ್ಪಷ್ಟವಾಗಿ ಮತ್ತು ನಿಖರವಾಗಿ ಮಾತು ಮತ್ತು ಬರಹಗಳಲ್ಲಿ ಅಭಿವ್ಯಕ್ತಿಸುವುದು;
- ವಿಸ್ತೃತ ಪದಸಂಪತ್ತನ್ನು ಗಳಿಸುವುದು;
- ಕ್ರಿಯಾತ್ಮಕ ವ್ಯಾಕರಣ ಮತ್ತು ಸೈದ್ಧಾಂತಿಕ ಭಾಷಾಅಂಶಗಳನ್ನು ಗುರುತಿಸುವುದು.

**ಸಾಹಿತ್ಯದ ಗುರಿಗಳು**

- ಕನ್ನಡಭಾಷಾ ಸಾಹಿತ್ಯದ ಪ್ರಮುಖ ಪ್ರಕಾರಗಳ ವೈಶಿಷ್ಟ್ಯ ಗುರುತಿಸುವುದು
- ಕನ್ನಡ ಭಾಷೆಯ(ಪ್ರಾತಿನಿಧಿಕ) ಸಾಹಿತ್ಯ ಕರ್ತೃಗಳ ಪರಿಚಯ ಹೊಂದುವುದು
- ಸೌಂದರ್ಯಪ್ರಜ್ಞೆ, ಸೃಜನಶೀಲತೆ, ಕಲ್ಪನೆ ಮತ್ತು ಸಂಸ್ಕೃತಿಯ ಅಂಶಗಳನ್ನು ಗುರುತಿಸಿ ಮೆಚ್ಚುವುದು
- ವ್ಯಕ್ತಿತ್ವ ವಿಕಾಸಕ್ಕೆ ಪ್ರೇರಕ ಮತ್ತು ಪೋಷಕವಾಗುವ ಜೀವನಮೌಲ್ಯ ಮತ್ತು ಪ್ರಜಾಪ್ರಭುತ್ವ ಮೌಲ್ಯಗಳನ್ನು ಅನುಸರಿಸುವುದು.

**ವಿಮರ್ಶೆ:** ಈ ಎಲ್ಲ ಗುರಿಗಳನ್ನೂ ಗುರುತಿಸಿಕೊಳ್ಳಲಾಗಿದೆ. ಇದು ಪಠ್ಯವಸ್ತುವಿಮರ್ಶೆಯಿಂದ ಗೋಚರವಾಗುತ್ತದೆ.

**ಮಾನದಂಡ 2. ಭಾಷಾ ಕಲಿಕೆಯ ಗುರಿಗಳ ಸಾಧನೆಗೆ ಸೂಕ್ತ ಪಠ್ಯಾಂಶಗಳಿವೆಯೇ?**

ಮೇಲೆ ತಿಳಿಸಿದ ಪ್ರತಿ ಉದ್ದೇಶಕ್ಕೆ ಸಂಬಂಧಿಸಿದ ಪಠ್ಯಾಂಶಗಳಿವೆಯೇ ಎಂಬುದನ್ನು ಗುರುತಿಸುವುದು.
ಜೊತೆಗೆ ಸ್ಮಿತ್ ಸ್ಟಾನ್ಲೇ ಮತ್ತು ಶೋರ್ಸ್(1957) ಇವರುಗಳು ಪಠ್ಯಾಂಶ ಅಥವಾ ವಿಷಯ ವಸ್ತುವನ್ನು ಆಯ್ಕೆ ಮಾಡುವಾಗ ಗಮನಿಸಬೇಕಾದ ಅಂಶಗಳನ್ನು ಕುರಿತು ನೀಡಿರುವ ಮಾಹಿತಿಯನ್ನೂ ಗಣನೆಗೆ ತೆಗೆದುಕೊಳ್ಳಬಹುದು:

ಆಯ್ಕೆ ಮಾಡುವ ವಿಷಯ ವಸ್ತುವು

1. ಮಹತ್ವದ ಜ್ಞಾನಾಂಶವಾಗಿರುವುದೇ?
2. ವಿದ್ಯಾರ್ಥಿಗಳಿಗೆ ಉಪಯುಕ್ತವಾಗಿದೆಯೇ?
3. ಕಲಿಕಾರ್ಥಿಗೆ ಆಸಕ್ತಿಯುತವಾಗಿದೆಯೇ?
4. ಪ್ರಜಾಪ್ರಭುತ್ವ ಸಮಾಜವನ್ನು ಬಲಪಡಿಸಲು ಸೂಕ್ತವಾಗಿದೆಯೇ?
5. ವಿಶ್ವಸನೀಯತೆಯಿಂದ ಕೂಡಿದೆಯೇ?
6. ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಪೂರಕವಾಗಿದೆಯೇ?

ಈ ಎಲ್ಲ ವಿಷಯಗಳಿಗೆ ಕನ್ನಡ ಭಾಷಾ ಪಠ್ಯಕ್ರಮದ ವಿಮರ್ಶೆ ಮಾಡುವಾಗ ಕೆಳಗಿನ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಬೇಕು. ಇದಕ್ಕಾಗಿ ಕೆಳಗಿನಂತೆ ಒಂದು ಪ್ರಶ್ನಾವಳಿಯನ್ನು ತಯಾರಿಸಿಕೊಳ್ಳಬಹುದು.

- ಓದುಗಾರಿಕೆಗೆ (ಸ್ವತಂತ್ರವಾಗ ಓದಲು, ಚಿಂತನೆಗಾಗಿ ಓದಲು, ಪ್ರಶಂಸೆಗಾಗಿ ಓದಲು) ಪೂರಕವಾದ ಪಠ್ಯಾಂಶಗಳಿವೆಯೇ?
- ಬಾಯ್ದೆರೆಯಾಗಿ ವಿವರಿಸಲು, ನಿರೂಪಿಸಲು, ಚರ್ಚಿಸಲು ಸೂಕ್ತ ಪಠ್ಯಾಂಶಗಳಿವೆಯೆ?
- ಉತ್ತರಗಳು, ಪ್ರಬಂಧ, ಟಿಪ್ಪಣಿ, ಭಾವಾನುವಾದ ಸಂಭಾಷಣಾ ಲೇಖನ ರೂಪಿಸುವ ಸಾಮರ್ಥ್ಯಗಳನ್ನು ಬೆಳೆಸಲು ಪಠ್ಯಾಂಶಗಳಿವೆಯೇ?
- ವಿದ್ಯಾರ್ಥಿಗಳ ಕನ್ನಡ ಪದಶಕ್ತಿಯನ್ನು ಹೆಚ್ಚಿಸುವಂತೆ ಗಮನ ತೆಗೆದುಕೊಳ್ಳಲಾಗಿದೆಯೇ?
- ಕನ್ನಡ ವ್ಯಾಕರಣವನ್ನು (ವರ್ಣ, ಪದ, ವಾಕ್ಯಗಳಿಗೆ ಸಂಬಂಧಿಸಿದ) ಸಮಗ್ರವಾಗಿ ಪರಿಚಯಿಸಲು ಸಮರ್ಪಕವಾದ ಪಠ್ಯಾಂಶಗಳಿವೆಯೇ?
- ಕನ್ನಡ ಛಂದಸ್ಸು ಅಲಂಕಾರಗಳ ಸೈದ್ಧಾಂತಿಕ ವಿವರಗಳನ್ನು ಕಲಿಯಲು ಅಗತ್ಯವಾದ ಪಠ್ಯಾಂಶಗಳಿವೆಯೇ?
- ಕನ್ನಡ ಸಾಹಿತ್ಯ ಪ್ರಕಾರಗಳ ಪರಿಚಯ ಮಾಡುವ ಸಾಹಿತ್ಯ ಭಾಗಗಳನ್ನು ಸೂಚಿಸಲಾಗಿದೆಯೇ?
- ಕನ್ನಡ ಕೃತಿಕಾರರ ಪ್ರಾತಿನಿಧಿಕ ಪರಿಚಯವಿದೆಯೇ?
- ಲೇಖನ ಕಲೆಯನ್ನು ಪರಿಚಯಿಸುವ (ವಿಸ್ತರಣ, ಪ್ರಬಂಧ ಪತ್ರ, ಸಂಕ್ಷೇಪಣ, ವರದಿ . ಇತ್ಯಾದಿ) ಪಠ್ಯಾಂಶಗಳನ್ನು ಒಳಗೊಂಡಿದೆಯೇ?

**ವಿಮರ್ಶೆ:** ಈ ಎಲ್ಲ ಅಂಶಗಳಿಗೆ ಪೂರಕವಾದ ಪಠ್ಯಗಳಿವೆ.

1. **ಪುಸ್ತಕ 8 ಮತ್ತು 10ನೇ ತರಗತಿಯ ಪ್ರಥಮಭಾಷಾ ಪಾಠ**ದ ಪಠ್ಯಗಳಲ್ಲಿ ಗದ್ಯ ಮತ್ತು ಪದ್ಯ ಪಾಠಗಳು ತಲಾ ಎಂಟೆಂಟು ಪಾಠಗಳಿರುವವು. 9ನೇ ತರಗತಿಯಲ್ಲಿ 9 ಗದ್ಯ ಮತ್ತು 6 ಪದ್ಯ ಪಾಠಗಳಿದ್ದು ಗದ್ಯ–ಪದ್ಯ ಸಾಹಿತ್ಯ ಸ್ವರೂಪ ಪರಿಚಯಿಸುವ ಪಾಠಗಳಿವೆ.
2. **ಗ್ರಹಿಕಾ ಕೌಶಲ ಪೋಷಣೆಗೆ:** ಓದುವ ಕ್ರಮ ಸೂಚನೆ ಮತ್ತು ಅಪರಿಚಿತ ಪದಗಳ ಅರ್ಥ ವಿವರಗಳನ್ನು ಒದಗಿಸಲಾಗಿದೆ. ಪಠ್ಯಧಾರ ಟಿಪ್ಪಣಿಗಳಿಂದ ಪೂರ್ವಜ್ಞಾನ ಒದಗಿಸಲಾಗಿದೆ. ಅಭ್ಯಾಸ ಮಾಲಿಕೆಯಲ್ಲಿ ಗ್ರಹಿಕೆ ಪರೀಕ್ಷೆಯ ಮಾಲಿಕೆಗಳಿವೆ.

3. **ಅಪರಿಚಿತ ಪದಗಳಿಗೆ ಅರ್ಥ** ಒದಗಿಸಿ ಗ್ರಹಿಕೆಗೂ ಪದಶಕ್ತಿ ವೃದ್ಧಿಗೂ ಪೂರಕವಾಗಿದೆ, ಪಠ್ಯಾಧಾರಿತ ಪದಕೋಶ ಇದೆ.
4. **ಪಠ್ಯದೊಡನೆ ಪರಿಚಿತ ವ್ಯಾಕರಣ ಕುರಿತಾದ** ಅಭ್ಯಾಸಗಳು ಮತ್ತು ಸೈದ್ಧಾಂತಿಕ ಭಾಷಾಭ್ಯಾಸಕ್ಕೆ ಹೊಸ ವ್ಯಾಕರಣಾಂಶಗಳಿಗೆ ಶಾಸ್ತ್ರೀಯ ವ್ಯಾಕರಣ ಒದಗಿಸಲಾಗಿದೆ. ಹಾಗೆಯೇ ಛಂದಸ್ಸು ಮತ್ತು ಅಲಂಕಾರಗಳ ಸೈದ್ಧಾಂತಿಕ ವಿವರವೊದಗಿಸಿದೆ.
5. **ಪಠ್ಯ ಸಂಬಂಧಿ ಸಾಹಿತ್ಯಾಂಶಗಳಿಗೆ** ಪೂರಕ ಓದಿನ ಸೂಚನೆಗಳನ್ನು ನೀಡಲಾಗಿದೆ.
6. **ಲೇಖನ ಕಲೆಗೆ ಸಂಬಂಧಿಸಿದಂತೆ,** ವಿವಿಧ ರೀತಿಯ ಪತ್ರ ರಚನೆ, ಪತ್ರಿಕಾ ವರದಿ ರಚನೆಗೆ ಮಾದರಿಗಳಿವೆ.
7. ಉಪ ಪಠ್ಯವಸ್ತುವಿಲ್ಲದ ಕಾರಣ ಪ್ರಬಂಧ ರಚನೆಗೆ ಕೆಲವು ವಿಷಯಗಳ ಸೂಚನೆ ನೀಡಲಾಗಿದೆ.
8. **ಉಪ ಪಠ್ಯ ಪುಸ್ತಕ** ವಿಲ್ಲದ ಕಾರಣ ಪ್ರಬಂಧ ರಚನೆಗೆ ಕೆಲವು ವಿಷಯಗಳ ಸೂಚನೆ ನೀಡಲಾಗಿದೆ.
9. **ಪಠ್ಯ ಕ್ರಮದಲ್ಲಿ ಪದ್ಯ ಕಂಠಪಾಠ,** ಗೀತಗಾಯನ, ಚರ್ಚಾಸ್ಪರ್ಧೆ, ಪ್ರವಾಸ, ನಾಟಕಾಭಿನಯ ಚಟುವಟಿಕೆಗಳನ್ನು ಕೈಗೊಳ್ಳಲು ಸೂಚನೆಗಳಿವೆ.
10. **ಬೆಳಗಿನ ಪ್ರಾರ್ಥನಾ ಸಭೆ** (assembly) ಯಿಂದ ಆರಂಭವಾಗುವ ಶಾಲಾ ಚಟುವಟಿಕೆಗಳಲ್ಲಿ ಆಲಿಸುವ, ಹಾಡುವ, ವಾರ್ತಾ ವಾಚನ ಮಾಡುವ, ಅತಿಥಿಗಳ ಭಾಷಣ ಕೇಳುವ ಚಟುವಟಿಕೆಗಳಿಂದ ಭಾಷಾ ಮತ್ತು ಸಾಹಿತ್ಯಕ ಚಟುವಟಿಕೆಗಳಿಂದ ಭಾಷಾ ಪಠ್ಯಕ್ರಮದ ನಿರ್ವಹಣೆಯಾಗುವುದು.

**ಮಾನದಂಡ 3. ಭಾಷಾಪಠ್ಯಕ್ರಮ ಸೂಚಿಸುವ ಪಠ್ಯಾಂಶಗಳಲ್ಲಿ ಯಾವ ಪಠ್ಯಾಂಶವು ನಿರ್ದಿಷ್ಟವಾಗಿ ಭಾಷಾ ಬೋಧನೆಯ ಯಾವ ಗುರಿ ಸಾಧನೆಗೆ ಪೂರಕವಾಗುತ್ತದೆ ಎಂಬುದು ಸ್ಪಷ್ಟವಾಗುತ್ತದೆಯೇ?**

ವಿಮರ್ಶೆ: ಪ್ರಸಕ್ತ ಪ್ರೌಢಶಾಲಾ ಕನ್ನಡ ಭಾಷಾ ಪಠ್ಯಕ್ರಮದಲ್ಲಿ ಭಾಷಾರೂಪ ಆಧಾರದ ಮೇಲೆ ಇರುವ ಪಾಠಗಳ ಪ್ರಮಾಣ ಹೀಗಿದೆ:

| | | |
|---|---|---|
| ಹಳೆಗನ್ನಡ | 5 | 10.63% |
| ನಡುಗನ್ನಡ | 11 | 23.40% |
| ಹೊಸಗನ್ನಡ | 32 | 68.08% |

ಹಳಗನ್ನಡ ಪಾಠ ಸಾಮಗ್ರಿಗಳು ಪದವಿಂಗಡಣಾ ಸಹಿತ ಓದುವ ಕ್ರಮದ ಸೂಚನೆಯೊಂದಿಗೆ ಪರಿಚಯಿಸುವುದರಿಂದ ವಿದ್ಯಾರ್ಥಿ ಸ್ನೇಹಿಯಾಗಿರುವುದು ಮತ್ತು ಕಲಿಯಲು ಸಾಧ್ಯವಾಗಿಸುವ ತತ್ವ ಅನುಸರಿಸಿ ಮತ್ತು ವಿಚಾರಗಳ ಸ್ಪಷ್ಟ ಗ್ರಹಿಕೆಗೆ ಅನುಕೂಲವಾಗಿದೆ.

ಪ್ರೌಢಶಾಲಾ ಕನ್ನಡ ಭಾಷಾ ಪಠ್ಯಕ್ರಮವೂ ವಿದ್ಯಾರ್ಥಿಗಳಿಗೆ ಸಾಹಿತ್ಯಕ ಕೌಶಲ್ಯ ಬೆಳೆಸಲು ಸೂಕ್ತವಾಗಿ ಕನ್ನಡ ಸಾಹಿತ್ಯದ ಪರಿಚಯವನ್ನು ಒದಗಿಸಿದೆ. ಸಾಹಿತ್ಯದ ವಿವಿಧ ಪ್ರಕಾರಗಳು ಅಭ್ಯಾಸಕ್ಕೆ ಅನುಕೂಲಕರವಾಗಿದೆ. ಈ ಅಂಶವನ್ನು ಕೆಳಗಿನ ಪಟ್ಟಿಯಿಂದ ತಿಳಿಯಬಹುದು.

| **ಗದ್ಯ ಸಾಹಿತ್ಯ ಪ್ರಕಾರಗಳು** | | | **ಪದ್ಯ ಸಾಹಿತ್ಯ ಪ್ರಕಾರಗಳು** | | |
|---|---|---|---|---|---|
| ಸಣ್ಣಕಥೆ | 06 | 24% | ಕಂದ ಪದ್ಯ ಪಾಠ | 2 | 8.6% |
| ನಾಟಕ | 03 | 12% | ಚಂಪೂ | 1 | 4.3% |
| ಪ್ರಬಂಧ/ ಲೇಖನ | 07 | 28% | ಷಟ್ಪದಿ | 5 | 21.7% |
| ವ್ಯಕ್ತಿ ಚಿತ್ರ ಮತ್ತು ಜೀವನ ಚರಿತ್ರೆ | 03 | 12% | ವಚನ ಸಾಹಿತ್ಯ | 3 | 13.04% |
| ಪ್ರವಾಸಕಥನ | 03 | 12% | ದಾಸ ಸಾಹಿತ್ಯ | 1 | 4.3% |
| ಶಾಸನ ಸಾಹಿತ್ಯ | 1 | 4% | ಸಾಂಗತ್ಯ | 1 | 4.3% |
| ಆತ್ಮ ಕಥನ | 1 | 4% | ಭಾವಗೀತೆ/ ದೇಶ ಭಕ್ತಿಗೀತೆ | 8 | 34.78% |

| | | | | | |
|---|---|---|---|---|---|
| ಹಳೆಗನ್ನಡ ಗದ್ಯ | 1 | 4% | ಜಾನಪದ | 1 | 4.34% |
| ಜಾನಪದ ಗದ್ಯ | 1 | 4% | ಬಂಡಾಯ | 1 | 4.34% |

ಸಾಹಿತ್ಯಾಭಿರುಚಿಯಲ್ಲಿ ಸಾಮಾನ್ಯವಾಗಿ ವ್ಯಕ್ತಿ ಭಿನ್ನತೆಗಳಿರುವುದು ಸಹಜ. ಸಾಹಿತ್ಯ ಪ್ರಕಾರಗಳ ವೈವಿಧ್ಯವನ್ನು ಈ ಕನ್ನಡ ಪಠ್ಯಕ್ರಮದಲ್ಲಿ ಕಾಣುವುದರಿಂದ ವಿದ್ಯಾರ್ಥಿಗಳ ಭಿನ್ನತೆಗೆ ತಕ್ಕಂತೆ ವಾಚನಾಸಕ್ತಿಗಳಲ್ಲಿ ವೈವಿಧ್ಯವಿರುವುದನ್ನು ಇಲ್ಲಿ ಸೂಕ್ತವಾಗಿ ಪರಿಗಣಿಸಲಾಗಿದೆ. ಶಾಲಾ ನಂತರದ ವಾಚನಾಸಕ್ತಿಯಲ್ಲಿ ಕತೆ ಮತ್ತು ಲೇಖನಗಳೇ ಪ್ರಧಾನವಾಗಿರುವವು ಎಂಬ ಅಂಶ ಇಲ್ಲಿ ವ್ಯಕ್ತವಾಗುತ್ತಿದೆ.

ಕಾವ್ಯಪ್ರಕಾರಗಳಲ್ಲಿ ಭಾವಗೀತೆಯ ಪಾಠಗಳ ಹೆಚ್ಚಾಗಿದ್ದು ಗೀತಸಾಹಿತ್ಯ ಪ್ರಧಾನ ಪಡೆದಿದೆ. ಸುಗಮ ಸಂಗೀತ ಕಾರ್ಯಕ್ರಮ (ಮೊಬೈಲ್ ಮತ್ತು ಅಡಕ ಮುದ್ರಿಕೆಗಳು ಸುಲಭವಾಗಿ ದೊರೆತು) ಗಳು ಶಾಲೆಯಲ್ಲಿ ಹೆಚ್ಚಾಗಿ ನಡೆಯುವುದಕ್ಕೂ ಇಂಬು ಕೊಡುವಂತಿದೆ. ಈ ಪಠ್ಯಕ್ರಮದಲ್ಲಿ ರಗಳೆಯ ಛಂದಸ್ಸಿನ ಪರಿಚಯದ ಕೊರತೆಯಿದೆ.

**ವಿಷಯ ವಸ್ತು ವೈವಿಧ್ಯ:**

ಸಾಹಿತ್ಯಲೋಕಕ್ಕೆ ಇಂತಹದ್ದೇ ನಿರ್ದಿಷ್ಟ ವಿಷಯವಾಗಿ ಇರಬೇಕೆಂಬ ಸಂಕುಚಿತತೆ ಇಲ್ಲ ಎಂದು ಬಲ್ಲಿರಿ. ಲೋಕದ ಸರ್ವ ವಿಚಾರಗಳು ಸಾಹಿತ್ಯದ ತೆಕ್ಕೆಯಲ್ಲಿ ಸ್ಥಾನ ಪಡೆಯುವುದು.

ಈಗಾಗಲೇ ನೀವು ಮೊದಲ ಘಟ್ಟದಲ್ಲಿ ಕನ್ನಡ ಪಠ್ಯ ಸಾಮಗ್ರಿಗೆ ಆಧಾರವಾಗಬಲ್ಲ ವಿವಿಧ ವಿಷಯಗಳ ಪಟ್ಟಿಯನ್ನು ಅರಿತಿದ್ದೀರಿ. ಪ್ರಸಕ್ತ ಪ್ರೌಢಶಾಲಾ ಕನ್ನಡ ಭಾಷಾ ಪಠ್ಯ ಕ್ರಮದಲ್ಲಿ ಪರಿಗಣಿಸಿರುವ ವಿಷಯ ವೈವಿಧ್ಯತೆಯ ತತ್ವವನ್ನು ಈ ಕೆಳಗಿನ ಪಟ್ಟಿಯಲ್ಲಿ ಗುರುತಿಸಬಹುದು:

| **ವಿಷಯ ಸ್ವರೂಪ** | | % | **ವಿಷಯ ಸ್ವರೂಪ** | | % |
|---|---|---|---|---|---|
| ಸಾಮಾಜಿಕ ಸಮಸ್ಯೆ | 5 | 10.4 | ಪ್ರವಾಸ/ ಭೌಗೋಳಿಕ | 2 | 4.12 |
| ವನ್ಯಜೀವಿಗಳು | 1 | 2.08 | ಜಾನಪದ ಕಲೆ ಸಾಹಿತ್ಯ | 3 | 6.25 |
| ಉದ್ಯೋಗ/ ಗುಡಿಕೈಗಾರಿಕೆ | 1 | 2.08 | ವೈಜ್ಞಾನಿಕ ಸಾಹಿತ್ಯ | 2 | 4.16 |
| ಮಹಾತ್ಮರ ಜೀವನ | 5 | 10.4 | ಪರಿಸರ ಸಂಬಂಧಿ | 2 | 4.16 |
| ಐತಿಹಾಸಿಕ/ ಪೌರಾಣಿಕ | 7 | 14.5 | ವೈಚಾರಿಕ ಲೇಖನ | 1 | 2.08 |
| ಭಕ್ತಿ- ನೀತಿ, ನೈತಿಕತೆ | 13 | 27.08 | ಮಹಿಳಾ ಜೀವನ | 1 | 2.08 |
| ಭಾರತೀಯತೆ, ವಿಶ್ವ ಪ್ರಜ್ಞೆ | 5 | 10.41 | | | |

ಪಠ್ಯಕ್ರಮ ರಚನೆಯ ತತ್ವಗಳು ವಿಷಯ, ವಸ್ತುವೈವಿಧ್ಯದಲ್ಲಿ ಹೀಗೆ ಪ್ರತಿಬಿಂಬಿತವಾಗಿದೆ:

ಅ.(1) ಬೌದ್ಧಿಕ ಮತ್ತು ಮಾನಸಿಕ ಬೆಳವಣಿಗೆ ತತ್ವ ( ಮಹಾತ್ಮರ ಜೀವನ, ವೈಚಾರಿಕತೆಯ ಪಠ್ಯ)

(2) ಸಮಷ್ಟಿ ಪ್ರಜ್ಞೆಯ ತತ್ವ ( ಸಾಮಾಜಿಕ ಸಮಸ್ಯೆ, ಭಾರತೀಯತೆ, ವಿಶ್ವ ಪ್ರಜ್ಞೆಯ ವಸ್ತುವುಳ್ಳ ಪಾಠಗಳು)

(3) ಉಪಯುಕ್ತತೆಯ ತತ್ವ (ಉದ್ಯೋಗ, ಪರಿಸರ, ವೈಚಾರಿಕ)

(4) ಸಹ ಸಂಬಂಧಿ ತತ್ವ( ಭಾಷಾಂಶ, ಪದ, ನುಡಿಗಟ್ಟು ಗಾದೆಗಳೊಂದಿಗೆ ಸಾಹಿತ್ಯ-ವಿಚಾರದ ಬೆಸುಗೆ)

(5) ಸೃಜನಶೀಲತೆಯ ತತ್ವ (ಜನಪದ ಕಲೆ, ಲಲಿತಪ್ರಬಂಧ, ಪ್ರಕೃತಿಸೌಂದರ್ಯದ ಪಠ್ಯ)

(6) ವೈಜ್ಞಾನಿಕ ಪ್ರಜ್ಞೆಯ ತತ್ವ – (ವಿಜ್ಞಾನ ಸಾಹಿತ್ಯ ಭಾಗ, ವೈಚಾರಿಕ ಲೇಖನ, ಪ್ರವಾಸಸಾಹಿತ್ಯ)

(7) ನಿಷ್ಠೆಯನ್ನು ಬೆಳೆಸುವ ತತ್ವ (ಸಮಾಜ, ರಾಷ್ಟ್ರ, ಸಂಸ್ಕೃತಿ, ಧಾರ್ಮಿಕತೆ- ಸಂಬಂಧಿಸಿದಂತೆ ಪೌರಾಣಿಕ- ಐತಿಹಾಸಿಕ ವಸ್ತುವುಳ್ಳ ಪಠ್ಯಗಳು)

ಆ) ಸಮಾನತೆ, ಜಾತ್ಯಾತೀತತೆ, ಸಹಕಾರ, ಶುಚಿತ್ವ, ಸೌಜನ್ಯ, ಕರ್ತವ್ಯ ಪಾಲನೆ, ಪ್ರಾಮಾಣಿಕತೆ, ಚಿತ್ತಶುದ್ಧಿ, ಪರಧರ್ಮ ಸಹಿಷ್ಣುತೆ, ಪರೀಕ್ಷಿಸಿ ತಿಳಿಯುವ ಕುತೂಹಲ, ಕ್ರಮಬದ್ಧತೆ, ವಿಧೇಯತೆ, ಅಹಿಂಸೆ, ನಿಷ್ಕಪಟತೆ ಮುಂತಾದ ಮೌಲ್ಯಗಳು ಹಾಸುಹೊಕ್ಕಾಗಿ ಪಾಠಾಂಶಗಳಲ್ಲಿ ಬಂದಿವೆ.

(ಇ) ಪಠ್ಯವಸ್ತು ವಿಶ್ಲೇಷಣೆಯಲ್ಲಿ ಒಂದು ಎದ್ದು ಕಾಣುವ ಕೊರತೆ ಎಂದರೆ ಕನ್ನಡ ಪ್ರೌಢಶಾಲಾ ಪಠ್ಯಕ್ರಮದ ಒಟ್ಟು 47 ಪಾಠಗಳಲ್ಲಿ ಕೇವಲ ನಾಲ್ಕು ಪಾಠಗಳು ಮಾತ್ರ ಲೇಖಕಿಯರು ಬರೆದ ಪಾಠಗಳಾಗಿವೆ. ಮಹಿಳೆಯರನ್ನು ಕುರಿತ ಪಠ್ಯ ವಸ್ತು ಇರುವ ಪಾಠಗಳು ಕೇವಲ ಆರು ಮಾತ್ರ. ಅವುಗಳಲ್ಲೂ ನಾಲ್ಕು ಪಾಠಗಳಲ್ಲಿ ಮಹಿಳೆಯ ಪಾತ್ರ ಗೌಣವಾಗಿದೆ. ಪೋಷಕ ಅಧ್ಯಯನ ಪಾಠಗಳಲ್ಲಿ ಹದಿನಾಲ್ಕರಲ್ಲಿ ಕೇವಲ ಎರಡು ಪಠ್ಯಗಳು ಮಹಿಳೆಯರಿಂದ ರಚಿತವಾಗಿವೆ ಮತ್ತು ಮೂರು ಪಾಠಗಳು ಮಹಿಳೆಯರ ಕುರಿತ ಪಾಠಗಳಾಗಿವೆ.

ಪ್ರೌಢಶಾಲಾ ಪಠ್ಯಕ್ರಮದಲ್ಲಿ ಮಹಿಳಾ ಬರೆಹಗಾರರಿಗೆ ಮತ್ತು ಮಹಿಳೆಯರ ವ್ಯಕ್ತಿತ್ವ, ಸಾಧನೆ ಮುಂತಾದ ಅಂಶಗಳ ಕುರಿತ ಪಠ್ಯ ವಸ್ತುವಿಗೆ ಹೆಚ್ಚಿನ ಪ್ರಾತಿನಿಧ್ಯ ದೊರಕ ಬೇಕಾಗಿರುವುದು. ಪಠ್ಯಕ್ರಮ ವಿಮರ್ಶೆಯಲ್ಲಿ ನಿಖರವಾಗಿ ಪ್ರಕಟಪಡಿಸುವ ವಿಚಾರವಾಗಿದೆ. ದೇಶದ ಸ್ವತಂತ್ರ ಅಂದೋಳನದಲ್ಲಿ, ಸಮಾಜಮುಖಿ ಕಾರ್ಯ ನಿರ್ವಹಣೆಯಲ್ಲಿ ಸಾಹಿತ್ಯ, ವಿಜ್ಞಾನ, ವೈದ್ಯಕೀಯ, ಆಡಳಿತ, ದುಡಿಮೆಯ ಕ್ಷೇತ್ರದಲ್ಲಿ ಇತ್ಯಾದಿಯಾಗಿ ಅನೇಕ ಕ್ಷೇತ್ರಗಳಲ್ಲಿ ಮಹಿಳೆಯರ ಕೊಡುಗೆಯನ್ನು ಗುರುತಿಸಬೇಕಾಗಿದೆ. ಆ ಬಗ್ಗೆ ಪಠ್ಯಕ್ರಮ ರಚನಾಕಾರರ, ಶಿಕ್ಷಣ ನೀತಿ ಚಿಂತಕರ ಗಮನ ಇನ್ನೂ ಹೆಚ್ಚಬೇಕಾಗಿದೆ.

**ಮಾನದಂಡ 4. ಪಠ್ಯ (ವಿಷಯ/ ಸಾಹಿತ್ಯ) ವಸ್ತು (content)ವು ಭಾಷಾ ಬೋಧನೆಯ ಗುರಿಗಳು ಹಾಗೂ ಬೋಧನಾ- ಕಲಿಕೆಯ ಚಟುವಟಿಕೆಗಳ ನಡುವಣ ಸಾಮರಸ್ಯವಿದೆಯೇ?**

ವಿಮರ್ಶೆ; ಪ್ರತಿ ಪಾಠದಲ್ಲಿ (ಗದ್ಯ-ಪದ್ಯ) ಭಾಷಾ ಬೋಧನೆಯ ಎಲ್ಲ ಗುರಿಗಳನ್ನು ಸಾಧಿಸಲಾಗದು.

ಹಾಗೆ ನಿರ್ದಿಷ್ಟ ಪಡಿಸದಿದ್ದರೂ ಪ್ರೌಢಶಾಲೆಯ ಪ್ರತಿ ಪಾಠದಲ್ಲಿ ಬೆಳೆಸಬಹುದಾದ ಭಾಷಾ ಸಾಮರ್ಥ್ಯ ಮತ್ತು ಸಾಹಿತ್ಯ ಜ್ಞಾನ ಗುರುತಿಸಿಕೊಂಡು ಬೋಧನಾ ಕಲಿಕಾ ಚಟುವಟಿಕೆಗಳನ್ನು ಗುರುತಿಸಿಕೊಳ್ಳಬಹುದು.
ಉದಾಹರಣೆಯಾಗಿ ಹತ್ತನೇ ತರಗತಿಯ ಪಠ್ಯಕ್ರಮ ತೆಗೆದುಕೊಳ್ಳೋಣ
ಪಠ್ಯಾಂಶಗಳು (1) ಪಂಥಾಹ್ವಾನ (ಹಳೆಗನ್ನಡ ಗದ್ಯ- ಭಾಷಾಂಶ/ ಸಾಹಿತ್ಯಾಂಶ)

| ಗುರಿಗಳು ( ಉದ್ದೇಶಗಳು) | ಬೋಧನಾ/ ಕಲಿಕೆಯ ಚಟುವಟಿಕೆ |
|---|---|
| ಕಥಾವಸ್ತು ಗ್ರಹಿಕೆ- ಆಲಿಸುವಿಕೆ | ಶಿಕ್ಷಕರಿಂದ -ಕೃತಿ , ಕರ್ತೃ ಪೂರ್ವಕತೆ -ವಿವರಣೆ |
| ಪದವಿ ಗ್ರಹಿಸುವಿಕೆ- (ಪದಗಳ ಅರ್ಥ ಗ್ರಹಿಕೆ ಹಳೆಗನ್ನಡ- ಹೊಸಗನ್ನಡ ರೂಪದಲ್ಲಿ ಬದಲಾವಣೆ) | ಶಿಕ್ಷಕರಿಂದ ಪದ ವಿಗ್ರಹಿಸಿ, ಅರ್ಥಾಭಿವ್ಯಕ್ತಿಯೊಂದಿಗೆ ಭಾವ ಯುಕ್ತ 'ಓದುಗಾರಿಕೆ ' ಮತ್ತು 'ವಿವರಣೆ' ಉಪನ್ಯಾಸ |
| ರೂಪಾಂತರಿಸುವುದು | ವಿದ್ಯಾರ್ಥಿಗಳಿಂದ ಬಾಯ್ದೆರೆಯಾಗಿ ಹೊಸಗನ್ನಡದಲ್ಲಿ ಅನುವಾದಿಸಲು ಅನುಕೂಲಿಸುವುದು<br>ಕಥೆಯ ಪರಿಕಲ್ಪನಾ ನಕ್ಷೆ ತಯಾರಿಸುವುದು |
| ರಚನೆ ಕಾರ್ಯ ಬರವಣಿಗೆ | ವಿದ್ಯಾರ್ಥಿಗಳನ್ನು ಇಬ್ಬರು/ ಮೂವರಂತೆ ತಂಡ ಮಾಡಿ ಕಥೆಯನ್ನು ( ಚರ್ಚಿಸುತ್ತಾ) ರಚಿಸಿ ಬರೆಯುವುದು |
| ಹೊಸಗನ್ನಡ ರೂಪ | ಹಳೆಗನ್ನಡಕ್ಕೆ- ಹೊಸಗನ್ನಡ ರೂಪ ನೀಡಲು ಕೇಳುವುದು ( ಬದಲಾವಣೆ ಪಟ್ಟಿ ಮಾಡುವುದು |
| ವಿಭಕ್ತಿ ಪ್ರತ್ಯಯಗಳು | ಹಳೆಗನ್ನಡದ ವಿಭಕ್ತಿ ಪ್ರತ್ಯಯ ಪಟ್ಟಿ |
| ಸಂಕ್ಷೇಪಣ ಬರೆಹ | ಕಥೆಯ ಸಾರ/ ಸಂದೇಶ / ಮೌಲ್ಯವನ್ನು ಎರಡು ವಾಕ್ಯಗಳಲ್ಲಿ ಬರೆಯುವುದು |

| | |
|---|---|
| | ಕಥೆಯನ್ನು 1/3 ಭಾಗಕ್ಕೆ ಇಳಿಸಿ ಬರೆಯುವುದು<br>ಇದೇ ರೀತಿ ವೃಕ್ಷಸಾಕ್ಷಿ ಪಂಚತಂತ್ರ ಕಥೆಯ ಪಾಠಕ್ಕೂ ಅನ್ವಯಿಸಬಹುದು |

**II. ಲೇಖನ ಕಲೆ ಪ್ರಬಂಧ ರಚನೆ**

| | |
|---|---|
| ವಿಷಯ ಪಟ್ಟಿ ಮಾಡಿಸುವುದು<br><br>ಪ್ರಬಂಧ ವಿಧ ವರ್ಗೀಕರಣ<br><br>ತಂಡಗಳಲ್ಲಿ ಪ್ರಬಂಧ ರಚನೆ (ಸಹಕಾರಿ ಕಲಿಕಾ ವಿಧಾನ) | – ಪ್ರಬಂಧ ಪರಿಕಲ್ಪನೆ– ಪ್ರಬಂಧ ಲೇಖನದ ಹಂತಗಳ ಬಗ್ಗೆ ಪೂರ್ವ ಜ್ಞಾನ ಪರೀಕ್ಷೆ<br>– ಪಠ್ಯ ಪುಸ್ತಕದ ಪುಟ ( 12) ಓದಲು ತಿಳಿಸಿ<br>– ಪ್ರಬಂಧದ ಮೂರು ವಿಧ ಹೆಸರಿಸಲಿ<br>– ಮೂರು ಪ್ರಬಂಧ ಲೇಖನ ಓದಿರಿ– ವಿದ್ಯಾರ್ಥಿಗಳು ವಿಧ ಗುರುತಿಸಲಿ<br>– ಕಪ್ಪು ಹಲಗೆ ಮೇಲೆ–ಮೂರು ವಿಧದ ಪ್ರಬಂಧ ಶೀರ್ಷಿಕೆ– ಶಿಕ್ಷಕರು ಇಪ್ಪತ್ತು ಪ್ರಬಂಧ ವಿಷಯಗಳನ್ನು ಚೀಟಿಗಳಲ್ಲಿ ಬರೆದಿಟ್ಟು– ಪೆಟ್ಟಿಗೆಗಳಿಂದ ಒಬ್ಬೊಬ್ಬ ವಿದ್ಯಾರ್ಥಿ ಒಂದೊಂದು ತೆಗೆದು ಆ ವಿಷಯ ಯಾವ ಯಾವ ವಿಧದ ಪ್ರಬಂಧ– ಏಕೆ ಎಂದು ತಿಳಿಸಲು<br>– ಮೂರು ವಿದ್ಯಾರ್ಥಿಗಳಂತೆ ತಂಡ ಮಾಡಿ –ಪ್ರತಿ ತಂಡ ಒಂದು ವಿಷಯ ಆಯ್ದು ಚರ್ಚಿಸಿ ಪ್ರಬಂಧ ಬರೆದು– ಮೌಲ್ಯಮಾಪನಕ್ಕೆ ನೀಡುವುದು. |

**III.** ಪ್ರವಾಸ ಕಥನ (ಸಾಹಿತ್ಯ) ಪ್ರಬಂಧ (1) ಅಮೇರಿಕಾದಲ್ಲಿ ಗೊರೂರು – ಲಲಿತಪ್ರಬಂಧ (2) ವ್ಯಾಘ್ರಗೀತೆ

| ಉದ್ದೇಶ | ಚಟುವಟಿಕೆಗಳು–ಅನುಭವಗಳು |
|---|---|
| ವಿಷಯ ಗ್ರಹಿಕೆ<br>ಕಥನ ಸ್ವರೂಪ/ ಪ್ರವಾಸಕಥನ<br><br>ಸಂವಿಧಾನ– ಗುರುತಿಸುವುದು<br>ಗದ್ಯದ ಶೈಲಿ<br><br>ಸಾಹಿತ್ಯ– ಸಂಸ್ಕೃತಿ<br>ಹಿರಿಮೆ ಕುರಿತು<br><br>ಅಭಿವ್ಯಕ್ತಿಸುವ ಕಲೆ<br>ಲೇಖನ ಕಲೆ | • ವಿದ್ಯಾರ್ಥಿಗಳ ತಂಡ ರಚನೆ –ಪ್ರತಿ ಸದಸ್ಯ ಪಾಠ– ಮೌನವಾಗಿ ಓದಿ ಮುಖ್ಯ ವಿಚಾರ (ಗೊರೂರರ ವೇಶಭೂಷಣ, ಖಾದಿ ಬಟ್ಟೆಯ ವೈಶಿಷ್ಟ್ಯವನ್ನು ಶಾಲಾ ವಿದ್ಯಾರ್ಥಿಗಳಿಗೆ ಪರಿಚಯಿಸುವುದು<br>ವಿದ್ಯುತ್ ಒಲೆಯಿಂದಾದ ಅಪಾಯಗಳ ಕುರಿತು ಚರ್ಚೆ ಮುಖ್ಯಾಂಶ ಟಿಪ್ಪಣಿ<br>– ಹಾಸ್ಯ ಶೈಲಿ ಗುರುತಿಸುವುದು<br>• ವಿದ್ಯಾರ್ಥಿಗಳು ಕೈಗೊಂಡ ಪ್ರವಾಸವನ್ನು ಕಥನ ರೂಪದಲ್ಲಿ ಎರಡು ಪುಟಗಳಲ್ಲಿ ಬರೆಯಿಸುವುದು +<br>ಓದಿಸಿ ಚರ್ಚೆ<br>• ಪ್ರಭು ಶಂಕರರ ಕೃತಿ ಪರಿಚಯ– ಓದಿಸುವುದು |

**iv) ಜೀವನ ದೃಷ್ಟಿ**

| | |
|---|---|
| ವಾಚನ ಕೌಶಲ<br><br>ಆಳವಾದ ಓದು | • ‘ಅಂತರ್ ಜೀವಿಯ’ ವ್ಯಕ್ತಿತ್ವ ಸ್ವರೂಪ ಕುರಿತು ಶಿಕ್ಷಕ ಉಪನ್ಯಾಸ<br>• ಸ್ವಾಮಿ ವಿವೇಕಾನಂದ, ಮಹರ್ಷಿ ಅರವಿಂದ, ಕವಿ |

| | |
|---|---|
| ಸಾರಾಸಂಗ್ರಹದ ಓದು | ರವೀಂದ್ರ, ಶಾರದಾ ಮಾತೆ.. ಮುಂತಾದವರ– ಜೀವನ ದೃಷ್ಟಿಯ ಸಂಕ್ಷಿಪ್ತ ಪರಿಚಯದ ಹೊತ್ತಗೆ ನೀಡಿ ಓದಿ– ಗ್ರಹಿಸಿ ಸಾರಾ ಹೇಳಲು ಕೇಳುವುದು |

| | |
|---|---|
| V) ಛಂದಸ್ಸು ಪರಿಕಲ್ಪನೆಗಳ ಕಲಿಕೆ ಕಂದ, ಖ್ಯಾತ ಕರ್ನಾಟಕ ವೃತ್ತ, ಅಲಂಕಾರ | ಅನುಗಮನ –ನಿಗಮನ ವಿಧಾನಗಳ ಬಳಕೆ |
| VI ಹಳೆಗನ್ನಡ ನಡುಗನ್ನಡ | ಗಮಕ,ವಾಚನ, ಕಥಾಂಶ ಗ್ರಹಿಕೆ ಭಾವಾನುವಾದ<br>ಗೀತ ಸುರುಳಿಗಳ ಬಳಕೆ –ಅನುಕರಣ ವಾಚನ ಇತ್ಯಾದಿ |

**ಮಾನದಂಡ 5. ಗುರಿಗಳ ಸಾಧನೆಗೆ ಸಮರ್ಪಕ ಮಾಪನ ಸಾಧನಗಳನ್ನೂ ಕ್ರಮಗಳನ್ನೂ ಗುರುತಿಸಿರಬೇಕು.**

ವಿಮರ್ಶೆ: ಕೌಶಲಗಳ ಕಲಿಕೆಯ ಸಾಧನೆಯನ್ನು– ಮೌಲ್ಯಮಾಪನ ಮಾಡಲು ರೂಪಣಾತ್ಮಕ ಮಾಪನ ಸಾಧನಗಳನ್ನು ಸೂಚಿಸಲಾಗಿದೆ. ಸೂಕ್ತವಾದ ದರ್ಜಾಮಾಪನ, ತಾಳೆಪಟ್ಟಿಗಳನ್ನು ರೂಪಿಸಿಕೊಂಡು ಮಾಪನ ಮಾಡಲು ಅವಕಾಶಗಳಿವೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

1. ಭಾಷಾ ಪಠ್ಯಕ್ರಮ ವಿಮರ್ಶೆಗೆ ಅನುಸರಿಸಬೇಕಾದ ಐದು ಹಂತಗಳನ್ನು ಪಟ್ಟಿ ಮಾಡಿರಿ

1. ____________________ 2. ______________________

3. ___________________ 4. ______________________

5. ___________________

### 3.2.4. ಸಾರಾಂಶಿಸೋಣ

- ಕಲಿಯುವವರಲ್ಲಿ ನಿರ್ದಿಷ್ಟವಾದ ಮತ್ತು ಅಪೇಕ್ಷಿತವಾದ ವರ್ತನೆ ಅಥವಾ ಕಲಿಕೆ ಅಥವಾ ಕಲಿಕೆಯ ಫಲವನ್ನು ಉಂಟುಮಾಡಲು ಶಾಲಾ ಸನ್ನಿವೇಶ ಅಥವಾ ಕಲಿಕಾ ಸನ್ನಿವೇಶದಲ್ಲಿ ಒದಗಿಸಲಾಗುವ ಎಲ್ಲ ರೀತಿಯ ಕಲಿಕಾ ಅನುಭವಗಳ ಸರಣಿಗಳ ವ್ಯವಸ್ಥೆಯೇ ಪಠ್ಯಕ್ರಮ.
- ಪಠ್ಯಕ್ರಮ ವಿಮರ್ಶೆ ಅನೇಕ ಕಾರಣಗಳಿಂದ ಪ್ರಮುಖವಾಗುತ್ತದೆ.
- ಭಾಷಾ ಪಠ್ಯಕ್ರಮ ವಿಮರ್ಶೆಯೂ ಒಂದು ಯೋಜಿತ ಕಾರ್ಯವಾಗಿದ್ದು ಈ ಕೆಳಗಿನ ಅಂಶಗಳಿಗೆ ಸಂಬಂಧಿಸಿದಂತೆ ವಿಶ್ಲೇಷಣೆಯನ್ನು ಕೈಗೊಳ್ಳಬೇಕಾಗುತ್ತದೆ: ಭಾಷಾಕಲಿಕೆಯ ಧ್ಯೇಯಗಳು, ಭಾಷಾ ಪಠ್ಯವಸ್ತು (content), ಕಲಿಕಾ ಸಾಮಗ್ರಿಗಳು ಮತ್ತು ಗುರಿಗಳ ಸಾಧನೆಗೆ ಕೈಗೊಳ್ಳುವ ಕಲಿಕೆಯ ಚಟುವಟಿಕೆಗಳು ಮತ್ತು ಅವುಗಳ ಕಲಿಕೆಯ ಫಲಗಳು ಮತ್ತು ಭಾಷಾ ಕಲಿಕೆಯ ಮೌಲ್ಯಮಾಪನ.
- ಭಾಷಾ ಪಠ್ಯಕ್ರಮವನ್ನು ವಿಮರ್ಶಿಸುವಾಗ ಅನುಸರಿಸಬಹುದಾದ ಹಂತಗಳನ್ನು ಸ್ಪಷ್ಟಪಡಿಸಿಕೊಳ್ಳಬೇಕು. ಅವು ಹೀಗಿವೆ: ಭಾಷಾಕಲಿಕೆಯ ಗುರಿಗಳನ್ನು ಗುರುತಿಸಿಕೊಳ್ಳುವುದು (ರಾಷ್ಟ್ರೀಯ ಗುರಿಗಳ ಹಿನ್ನೆಲೆಯಲ್ಲಿ), ಭಾಷಾ ಪಠ್ಯಕ್ರಮದ ಪಠ್ಯವಸ್ತು ಅಥವಾ ಪಠ್ಯಾಂಶಗಳು ಭಾಷಾ ಕಲಿಕೆಯ ಗುರಿಗಳ ಸಾಧನೆಗೆ ಪೂರಕವಾಗಿವೆಯೇ ಎಂಬುದನ್ನು ಗಮನಿಸಬೇಕು, ಭಾಷಾಪಠ್ಯಕ್ರಮ ಸೂಚಿಸುವ ಪಠ್ಯಾಂಶಗಳಲ್ಲಿ ಯಾವ ಪಠ್ಯಾಂಶವು ನಿರ್ದಿಷ್ಟವಾಗಿ ಭಾಷಾ ಬೋಧನೆಯ ಯಾವ ಗುರಿ ಸಾಧನೆಗೆ ಪೂರಕವಾಗುತ್ತದೆ ಎಂಬುದು ಸ್ಪಷ್ಟವಾಗಬೇಕು; ಪಠ್ಯ (ವಿಷಯ/ ಸಾಹಿತ್ಯ) ವಸ್ತು (content)ವು ಭಾಷಾ ಬೋಧನೆಯ ಗುರಿಗಳು ಹಾಗೂ ಬೋಧನಾ– ಕಲಿಕೆಯ ಚಟುವಟಿಕೆಗಳ ನಡುವಣ

ಸಾಮರಸ್ಯವಿರಬೇಕು, ಗುರಿಗಳ ಸಾಧನೆಗೆ ಸಮರ್ಪಕ ಮಾಪನ ಸಾಧನಗಳನ್ನೂ ಕ್ರಮಗಳನ್ನೂ ಗುರುತಿಸಿರಬೇಕು.

- ಈ ಹಂತಗಳು ಮತ್ತು ಇತರ ನಿರ್ದೇಶಿತ ಅಂಶಗಳಿಗನುಗುಣವಾಗಿ ಭಾಷಾ ಪಠ್ಯಕ್ರಮದ ವಿಮರ್ಶೆ ನಡೆಯಬೇಕು.

### 3.2.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1 ಮತ್ತು 2

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ - 1**

ಅ) 2, 4, 6 ಮತ್ತು 8 ನೆಯ ಅಂಶಗಳು

ಆ) ಅ – (iii) ಬ – (i) ಕ – (v) ಡ – (vi) ಇ – (vii)

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ - 2**

ಸ್ವ ಕಲಿಕಾ ಸಾಮಗ್ರಿ 3.3.3.2 ಗಮನಿಸಿ.

### 3.2.6. ಘಟಕಾಂತ್ಯ ಅಭ್ಯಾಸಗಳು

1. ಭಾಷಾ ಪಠ್ಯಕ್ರಮ ವಿಮರ್ಶೆಯ ಅಗತ್ಯವನ್ನು ಸಮರ್ಥಿಸಿರಿ.
2. ಭಾಷಾ ಪಠ್ಯಕ್ರಮ ವಿಮರ್ಶೆಯ ಹಂತಗಳನ್ನು ವಿವರಿಸಿ.
3. ಕನ್ನಡ ಭಾಷಾ ಪಠ್ಯಕ್ರಮ ವಿಮರ್ಶೆಯಲ್ಲಿ ಪರಿಗಣಿಸಬೇಕಾದ ಅಂಶಗಳನ್ನು ಮತ್ತು ತತ್ವಗಳನ್ನು ವಿವರಿಸಿ.

### 3.2.7. ಪರಾಮರ್ಶನ ಸೂಚಿ


1. ಪ್ರೌಢಶಾಲೆಯ ಕನ್ನಡ (ಪ್ರಥಮ, ದ್ವಿತೀಯ ಮತ್ತು ತೃತೀಯ) ಭಾಷಾ ಪಠ್ಯ ಪುಸ್ತಕಗಳು, ಕರ್ನಾಟಕ ಪಠ್ಯ ಪುಸ್ತಕ ಸಂಘ, ಬೆಂಗಳೂರು
2. ಶಿಕ್ಷಣ ವಿಷಯ ವಿಶ್ವ ಕೋಶ – ಸಂಪುಟ –1 ಕಾರಾಮುವಿ, ಮಾನಸ ಗಂಗೋತ್ರಿ, ಮೈಸೂರು
3. ಭ.ಮಲ್ಲಿಕಾರ್ಜುನ ಮತ್ತು ಎಸ್.ಎಸ್ ಯದುರಾಜನ್: "ನಿರಂತರ" ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು
4. classcraft.com; why is curriculum important? Mellisa williams
5. bchmsg.volasite.com ; analysis of school curriculum at different stages
6. https://www.researchgate.net>2822
7. www.vkmaheshwari.com> critical appraisal of existing of curriculum/syllabus Dr.V.K. Maheshwari PH.D
8. www.Pitt.edu>Pdf>curranal (PDF) what is curriculum analysis- JD Jansen
9. https://www.researchgate.net>2822 (PDF) EFL curriculum analysis : A case study Research gate
10. www.projec2061.org>sci a maths analysis procedure for curriculum materials.
11. https://www.researchgate>3218(PDF) A critical analysis of the primary school curriculum research gate.
12. https://aptstatic.53.ap-south-1amazo.was.com using many Kannada language in a class room illustrated with a context of Yadgir by M.Geetha.

## ಬ್ಲಾಕ್ 3 : ಕನ್ನಡ ಪಠ್ಯಕ್ರಮ ಮತ್ತು ಪಠ್ಯೇತರ ಚಟುವಟಿಕೆಗಳು

### ಘಟಕ 3 : ಭಾಷಾ ಪಠ್ಯಪುಸ್ತಕಗಳು

**ಘಟಕದ ರಚನೆ**

3.3.1. ಕಲಿಕೆಯ ಉದ್ದೇಶಗಳು
3.3.2. ಪೀಠಿಕೆ
3.3.3. ಕಲಿಕೆಯ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು
3.3.3.1. ಪಠ್ಯಪುಸ್ತಕಗಳ ಸ್ವರೂಪ ಮತ್ತು ಮಹತ್ವ
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1
3.3.3.2. ಕನ್ನಡ ಭಾಷಾ ಪಠ್ಯಪುಸ್ತಕಗಳ ಸ್ವರೂಪ
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2
3.3.4. ಸಾರಾಂಶಿಸೋಣ
3.3.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1 ಮತ್ತು 2
3.3.6. ಘಟಕಾಂತ್ಯ ಅಭ್ಯಾಸಗಳು
3.3.7. ಪರಾಮರ್ಶನ ಸೂಚಿ

**3.3.1. ಕಲಿಕೆಯ ಉದ್ದೇಶಗಳು**

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿ ಶಿಕ್ಷಕ ಶಿಕ್ಷಕಿಯರು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು;

- ಪಠ್ಯಪುಸ್ತಕಗಳ ಅಗತ್ಯವನ್ನು ಸಮರ್ಥಿಸುವರು;
- ಭಾಷಾ ಪಠ್ಯಪುಸ್ತಕಗಳ ರಚನೆಯಲ್ಲಿ ಗಮನಿಸಬೇಕಾದ ತತ್ವಗಳನ್ನು ಪಟ್ಟಿ ಮಾಡುವರು;
- ಕನ್ನಡ ಭಾಷಾ ಪಠ್ಯಪುಸ್ತಕದ ಬಾಹ್ಯ ಲಕ್ಷಣಗಳನ್ನು ತಿಳಿಸುವರು;
- ಕನ್ನಡ ಭಾಷಾಪಠ್ಯದ ಆಂತರಿಕ ಗುಣ ಲಕ್ಷಣಗಳನ್ನು ತಿಳಿಸಿ, ವಿಶ್ಲೇಷಿಸುವರು; ಮತ್ತು
- ಆಂತರಿಕ ಗುಣಲಕ್ಷಣಗಳನ್ನು ಭಾಷೆಯ ಮತ್ತು ಸಾಹಿತ್ಯದ ದೃಷ್ಟಿಯಿಂದ ಅರ್ಥೈಸುವರು.

**3.3.2. ಪೀಠಿಕೆ**

ಇಂದಿನ ಶಾಲಾಶಿಕ್ಷಣವು ಶ್ರೇಣೀಕೃತವಾಗಿದೆ ಎಂದು ಬಲ್ಲಿರಿ. ವಿದ್ಯಾರ್ಥಿಗಳು ವಿವಿಧ ವಯೋಮಾನಕ್ಕನುಗುಣವಾಗಿ ಸೂಕ್ತ ಜ್ಞಾನ, ತಿಳಿವಳಿಕೆ, ಕೌಶಲಗಳು, ಮತ್ತು ಮನೋಭಾವ ಆಸಕ್ತಿಗಳನ್ನು ಹೊಂದಿರಬೇಕಾಗಿರುವುದೇ ಆಗಿದೆ. ಯಾವ ಶ್ರೇಣಿಯಲ್ಲಿ ಎಷ್ಟನ್ನು, ಏನನ್ನು ಕಲಿಯಬೇಕು, ಹೇಗೆ ಕಲಿಯಬೇಕು ಎಂಬುದನ್ನು ನಿರ್ಧರಿಸುವ ವ್ಯವಸ್ಥೆಯಿದೆ. ಎಷ್ಟನ್ನು ಬೋಧಿಸಬೇಕು ಎಂಬುದಕ್ಕಾಗಿ 'ಪಠ್ಯಕ್ರಮ' ರೂಪಿತವಾಗಿದೆ ಎಂಬುದನ್ನು ಹಿಂದಿನ ಎರಡು ಘಟಕಗಳಲ್ಲಿ ತಿಳಿದಿರುವಿರಿ. ಪರಿಣಾಮಕಾರಿಯಾಗಿ ಪಠ್ಯಕ್ರಮವನ್ನು ಜಾರಿಗೊಳಿಸುವುದಕ್ಕಾಗಿ ಪಠ್ಯಪುಸ್ತಕಗಳು ಸಾಧನಗಳಾಗಿವೆ.

ಏಳನೇ ತರಗತಿ ಮುಗಿಸುವ ವೇಳೆಗೆ ವಿದ್ಯಾರ್ಥಿಗಳು ಭಾಷಾಕಲಿಕೆಯಲ್ಲಿ (ಕನ್ನಡ) ಸಾಧಿಸಬೇಕಾದ ಮೂಲ ಕಲಿಕಾ ಸಾಮರ್ಥ್ಯಗಳನ್ನು ನೀವು ತಿಳಿದಿರುವಿರಿ. ಆ ಸಾಮರ್ಥ್ಯಗಳ ಕಲಿಕೆಗೂ ಅಭಿವೃದ್ಧಿಗೂ ಪಠ್ಯ

ಪುಸ್ತಕಗಳೇ ಆಧಾರ (ಮಾರ್ಗಸೂಚಿ) ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ. ನೀವು ಬೋಧಿಸುವಾಗ ಪ್ರತಿಪಾತದಲ್ಲಿ ಬೆಳೆಸಬೇಕಾದ ಮೂಲ ಕಲಿಕಾ ಸಾಮರ್ಥ್ಯ ಉಲ್ಲೇಖಿಸಿರುವುದನ್ನು ಗಮನಿಸಿರಬೇಕಲ್ಲವೇ? ಸಮಗ್ರ ಶಿಕ್ಷಣವೇ ಪಠ್ಯಪುಸ್ತಕಗಳನ್ನು ಕೇಂದ್ರವಾಗಿರಿಸಿಕೊಂಡಿವೆ. ಪರೀಕ್ಷೆಗಳಿಗೂ ಇವೇ ಆಧಾರವಾಗಿವೆ. ಭಾಷೆಯ ಬೋಧನೆಗೂ ಕಲಿಕೆಗೂ ಪಠ್ಯಪುಸ್ತಕವೇ ಮುಖ್ಯ ಸಾಧನವಾಗಿದೆ.

ಈ ಪಠ್ಯಪುಸ್ತಕಗಳು ಅಮೂಲ್ಯ ಕಲಿಕಾ ಸಂಪನ್ಮೂಲವಾಗಿದ್ದು ಇದನ್ನು ಅತ್ಯಂತ ಜವಾಬ್ದಾರಿಯಿಂದ ಜಾಗರೂಕತೆಯಿಂದ ರೂಪಿಸಬೇಕಾಗಿದೆ. ಪ್ರತಿ ಶಿಕ್ಷಕನಿಗೂ/ಶಿಕ್ಷಕಿಗೂ ಇದನ್ನು ರೂಪಿಸುವುದು ಹೇಗೆ ಎಂಬುದರ ಅರಿವು ಬಹಳ ಮುಖ್ಯ. ಈ ಹಿನ್ನೆಲೆಯಲ್ಲಿ ಪಠ್ಯಪುಸ್ತಕದ ಮಹತ್ವ, ಲಕ್ಷಣಗಳು ಮತ್ತು ರೂಪಿಸುವಾಗ ಗಮನಿಸಿಕೊಳ್ಳಬೇಕಾದ ಅಂಶಗಳನ್ನು ಈ ಘಟಕದಲ್ಲಿ ವಿಚಾರಮಾಡೋಣ.

### 3.3.3. ಕಲಿಕೆಯ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

"ತರಗತಿಯಲ್ಲಿ ಉಪಯೋಗಿಸುವುದಕ್ಕೆ ಎಂದೇ ಪರಿಣತರು ಎಚ್ಚರಿಕೆಯಿಂದ ಸಿದ್ಧಪಡಿಸಿದ ವಸ್ತು ವಿವರ ಮತ್ತು ಬೋಧನೆಗೆ ಅಗತ್ಯವಾದ ಸಹಾಯಕ ಸಾಮಗ್ರಿಗಳನ್ನು ಒಳಗೊಂಡ ವಸ್ತುವೇ ಕಲಿಕಾ ಸಾಮಗ್ರಿಯೇ ಪಠ್ಯಪುಸ್ತಕ ಎಂಬುದಾಗಿ ತಜ್ಞರು ಪಠ್ಯಪುಸ್ತಕವನ್ನು ವಿವರಿಸಿದ್ದಾರೆ. ಪಠ್ಯಪುಸ್ತಕಗಳನ್ನು ವಿಷಯ ಪ್ರಧಾನ ಅಥವಾ ಜ್ಞಾನ ಪ್ರಧಾನ ಮತ್ತು ಭಾಷಾ ಪ್ರಧಾನ ಎಂದು ಎರಡು ವರ್ಗಗಳನ್ನಾಗಿ ವಿಂಗಡಿಸಬಹುದು.

ನಿರ್ದಿಷ್ಟ ಜ್ಞಾನಶಾಖೆಗೆ ಸಂಬಂಧಿಸಿದ ವಿಷಯಗಳ ಸಮಗ್ರ ಸಂಯೋಜನೆಯೇ ಪಠ್ಯಪುಸ್ತಕವಾಗುವುದು. ಇವು ಅಧ್ಯಾಪಕರಿಗೆ ಬೋಧನೆಯಲ್ಲಿ ಮತ್ತು ವಿದ್ಯಾರ್ಥಿಗಳಿಗೆ ಕಲಿಕೆಯಲ್ಲಿ ಪ್ರಯೋಜನಕಾರಿಯಾದ ಸಂಪನ್ಮೂಲವಾಗಿದೆ. ಇಂದು ಇದು ಮುದ್ರಿತ ಮತ್ತು ಡಿಜಿಟಲ್ ರೂಪಗಳೆರಡರಲ್ಲೂ ಲಭ್ಯವಾಗಿವೆ.

### 3.3.3.1. ಪಠ್ಯಪುಸ್ತಕಗಳ ಸ್ವರೂಪ ಮತ್ತು ಮಹತ್ವ

ಶಿಕ್ಷಣದ ಗುರಿಗಳ ಸಾಧನೆಗಾಗಿ ಶಿಕ್ಷಣತಜ್ಞರು ಪಠ್ಯಕ್ರಮ (curriculum)ವನ್ನೂ ಅದನ್ನು ಅನುಸರಿಸಿ ವಿಷಯ ತಜ್ಞರು ಪಠ್ಯವಸ್ತು(syllabus)ವನ್ನೂ ರೂಪಿಸುವರು. ಆ ಪಠ್ಯವಸ್ತುವಿನ ರೂಪುರೇಷೆಯನ್ನು ಆಧರಿಸಿ ಪರಿಣಿತರು ಪಠ್ಯಪುಸ್ತಕ (text book)ವನ್ನು ರಚಿಸುವರು. ಈ ರೀತಿ ಸಿದ್ಧವಾಗುವ ಪಠ್ಯಪುಸ್ತಕವು ಬೋಧನೆ ಮತ್ತು ಕಲಿಕೆಯ ಅಧಿಕೃತ ಸಾಮಗ್ರಿಯಾಗಿರುವುದು. ಅಧಿಕೃತತೆಗೆ ಕಾರಣ ಪಠ್ಯಪುಸ್ತಕದ ವಸ್ತು ಏಕಕರ್ತೃವಿನಿಂದ ರಚಿತವಾಗುವುದಿಲ್ಲ. ಹಲವಾರು ಪರಿಣಿತರು ವಿಶೇಷ ಶ್ರಮ, ತಜ್ಞತೆ ಮತ್ತು ಜವಾಬ್ದಾರಿಗಳಿಂದ ಇದನ್ನು ಸಿದ್ಧಗೊಳಿಸುವರು. ಪಠ್ಯಪುಸ್ತಕದ ಪರಿಕಲ್ಪನೆ ಗ್ರೀಕ್ ತತ್ವಜ್ಞಾನಿ ಅರಿಸ್ಟಾಟಲ್‌ನಷ್ಟೇ ಪ್ರಾಚೀನವಾದುದು ಮತ್ತು ಪ್ರಾಚೀನ ಗ್ರೀಕ್, ಚೀನಾ, ಈಜಿಪ್ಟ್ ಹಾಗೂ ನಮ್ಮ ದೇಶದಲ್ಲಿ ಪರಿಚಯವಾಗಿತ್ತೆಂಬುದಕ್ಕೆ ದಾಖಲೆಗಳಿವೆ.

ಪಠ್ಯಪುಸ್ತಕಗಳು ಬೋಧಿಸಬೇಕಾದ ವಿಷಯಕ್ಕೆ ಸಂಬಂಧಿಸಿದಂತೆ ಒಂದು ರಚನೆಯನ್ನೂ ಕ್ರಮವನ್ನೂ ವ್ಯವಸ್ಥೆಯನ್ನೂ ನೀಡಿ ಬೋಧನೆಗೆ ಬುನಾದಿಯನ್ನು ಒದಗಿಸುತ್ತದೆ.

- ಶಿಕ್ಷಣವು ನಿರ್ದಿಷ್ಟವಾಗಿ ಸಾಗಲು ಮತ್ತು ನಿರಂತರತೆಯನ್ನು ಕಾಪಾಡಿಕೊಂಡು ಗುರಿಯನ್ನು ಸುಗಮವಾಗಿ ತಲುಪಲು ಪಠ್ಯಪುಸ್ತಕಗಳು ಅಗತ್ಯ;
- ಪಠ್ಯಪುಸ್ತಕಗಳು ವಿಷಯದ ಅರ್ಥಗ್ರಹಣ ಮತ್ತು ಅಭಿವ್ಯಕ್ತಿ ಕೌಶಲಗಳ ಬೆಳವಣಿಗೆ ಆಧಾರವಾಗಿರುತ್ತವೆ;
- ವಿದ್ಯಾರ್ಥಿಗಳಲ್ಲಿ ಸ್ವಯಂ ಅಧ್ಯಯನಕ್ಕೆ ಅಡಿಪಾಯ ಹಾಕುವುದು ಮತ್ತು ಓದುಗಾರಿಕೆ ಹವ್ಯಾಸವಾಗಿ ಬೆಳೆಯಲು ಸಹಾಯವಾಗುತ್ತವೆ.
- ಶಾಲಾ ನಂತರದ ವೇಳೆಯಲ್ಲಿ ಅಭ್ಯಾಸ ಕೈಗೊಳ್ಳಲು ಮತ್ತು ಪರೀಕ್ಷೆಗಳಿಗೆ ಸಿದ್ಧತೆ ಮಾಡಿಕೊಳ್ಳಲು ಪಠ್ಯಪುಸ್ತಕಗಳು ನೆರವಾಗುತ್ತವೆ.

- ಪಠ್ಯಪುಸ್ತಕಗಳು ಶಿಕ್ಷಕರ ಕೈಪಿಡಿಯಾಗಿ ಎಂತಹ ವಿದ್ಯಾರ್ಥಿಗಳಿಗೆ ಏನನ್ನು ಹೇಗೆ ಕ್ರಮಬದ್ಧವಾಗಿ, ಬೋಧಿಸಬೇಕು, ವಿದ್ಯಾರ್ಥಿಗಳ ಕಲಿಕೆಯನ್ನು ಹೇಗೆ ಮಾಪನ ಮಾಡಬೇಕು ಎಂಬೆಲ್ಲ ಅಂಶಗಳಿಗೆ ಅಗತ್ಯವಾದ ಪೂರ್ವ ಸಿದ್ಧತೆ ಮಾಡಿಕೊಳ್ಳಲು ಸಹಾಯವಾಗುತ್ತವೆ.
- ಪರೀಕ್ಷೆಗಳೂ ಪಠ್ಯಪುಸ್ತಕಗಳನ್ನೇ ಆಧರಿಸಿಕೊಂಡಿರುತ್ತವೆ.
- ರಾಷ್ಟ್ರೀಯ ಶಿಕ್ಷಣ ನೀತಿಗೆ ಅನುಗುಣವಾದ ಶಿಕ್ಷಣಕ್ರಮವನ್ನು ಸೂಚಿಸುವ ಪಠ್ಯಪುಸ್ತಕಗಳು ದೇಶದ ಪ್ರಗತಿಗೆ ಮತ್ತು ಮುಂದಿನ ಪ್ರಜೆಗಳಾದ ಇಂದಿನ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಾಸಕ್ಕೆ ಆಧಾರವಾಗಿದೆ.
- ಭಾಷಾಕಲಿಕೆ (ಶಾಲೆಗಳಲ್ಲಿ) ಅಕ್ಷರ ಜ್ಞಾನದ ಮೂಲಕ ಪಠ್ಯಪುಸ್ತಕಗಳಿಂದಲೇ ಪ್ರಾರಂಭವಾಗುತ್ತದೆ .ಅಂದರೆ ಭಾಷಾ ಪಠ್ಯಪುಸ್ತಕಗಳು ಪ್ರಾಥಮಿಕ ಒಂದನೇ ತರಗತಿಯಿಂದಲೇ ಮೊದಲ್ಗೊಂಡು ಎಲ್ಲಾ ತರಗತಿಗಳಲ್ಲೂ ಪ್ರಾಧಾನ್ಯವನ್ನು ಪಡೆದಿದೆ.
- ಎಂದೆಂದಿಗೂ ಶಿಕ್ಷಣದಲ್ಲಿ ಪಠ್ಯಪುಸ್ತಕದ ಪ್ರಾಧಾನ್ಯ ಹೆಚ್ಚು. ಆದ್ದರಿಂದ ಪಠ್ಯಪುಸ್ತಕದ ರಚನೆಯ ಹೊಣೆಗಾರಿಕೆಯನ್ನು ಅರಿತು ಸರ್ಕಾರ ಪಠ್ಯಪುಸ್ತಕಗಳ ರಾಷ್ಟ್ರೀಕರಣ ಮಾಡಿದೆ.

ಭಾಷಾ ಬೋಧನೆಯಲ್ಲಿ ಪಠ್ಯಪುಸ್ತಕದ ಪಾತ್ರವನ್ನು ಎಫ್.ಎಲ್. ಬಿಲ್ಲೋಸ್ (F.L.Billows) ರವರ ಅಭಿಪ್ರಾಯವನ್ನು ಶ್ರೀ. ಅನಂತರಾಮುರವರು ಹೀಗೆ ಪಟ್ಟಿಮಾಡಿದ್ದಾರೆ:

- ಪಠ್ಯಪುಸ್ತಕವು ಶಿಕ್ಷಕರಿಗೆ ಮಾರ್ಗದರ್ಶನ
- ವಿದ್ಯಾರ್ಥಿಗಳಿಗೆ ಸ್ಮರಣ ಸಾಧನ
- ಕಲಿತ ವಿಷಯದ ಶಾಶ್ವತ ದಾಖಲೆ
- ಭಾಷಾಭ್ಯಾಸದಲ್ಲಿ ವಿಶಾಲಕ್ಷೇತ್ರದ ಒಂದು ಸಾಮಾನ್ಯ ಸೂತ್ರ.
- ವಿದ್ಯಾರ್ಥಿಗಳ ಅನುಭವವನ್ನು ಶ್ರೀಮಂತಗೊಳಿಸುವ ಸಾಮಗ್ರಿ
- ವಾಚನದ ಅಭ್ಯಾಸ ಕ್ಷೇತ್ರ

ಒಟ್ಟಿನಲ್ಲಿ ಉತ್ತಮ ಪಠ್ಯಪುಸ್ತಕದಿಂದಲೇ ರೂಪಿಸಲ್ಪಟ್ಟ ಪಠ್ಯಕ್ರಮವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಸಾಧ್ಯ.

**ಭಾಷಾ ಪಠ್ಯಪುಸ್ತಕಗಳ ರಚನಾ ತತ್ವಗಳು**

ಭಾಷಾ ಪಠ್ಯಕ್ರಮವು ಭಾಷಾ ಬೋಧನೆಯ ಗುರಿಗಳು ಮತ್ತು ಉದ್ದೇಶಗಳು, ವಿಷಯ/ ಪಠ್ಯಾಂಶ, ಬೋಧನಾ–ಕಲಿಕಾ ಉಪಕ್ರಮಗಳು, ಮೌಲ್ಯಮಾಪನಗಳನ್ನು ಒಳಗೊಳ್ಳುತ್ತದೆ. ಈ ನಾಲ್ಕು ಪೂರಕಾಂಶಗಳನ್ನು ವ್ಯಕ್ತಪಡಿಸುವುದೇ ಪಠ್ಯ ಪುಸ್ತಕದ ಪ್ರಧಾನ ಕಾರ್ಯವಾಗಿದೆ. ಪಠ್ಯಪುಸ್ತಕಗಳನ್ನು ಎನ್.ಸಿ.ಇ.ಆರ್.ಟಿ ಮಾರ್ಗದರ್ಶನದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯ ಅನ್ವಯ ವಿದ್ಯಾರ್ಥಿಗಳ ಸರ್ವತೋಮುಖ ವಿಕಾಸದ ಆಶಯದೊಂದಿಗೆ ಮಾನವೀಯ ಮೌಲ್ಯಗಳನ್ನು ಆಧರಿಸಿ, ಪಠ್ಯವಸ್ತುವನ್ನು(syllabus) ಅನುಸರಿಸಿ ತಯಾರಿಸಬೇಕು. ಈ ಹಿನ್ನೆಲೆಯಲ್ಲಿ ಭಾಷಾ ಪಠ್ಯಪುಸ್ತಕ ರಚನೆಯ ತತ್ವಗಳನ್ನು ಹೀಗೆ ಗುರುತಿಸಬಹುದು.

**ಅ. ಗುರಿಗಳು ಮತ್ತು ಉದ್ದೇಶಗಳಿಗೆ ಸಂಬಂಧಿಸಿದ ತತ್ವಗಳು**

- **ವಿದ್ಯಾರ್ಥಿಕೇಂದ್ರಿತ ತತ್ವ:** ಕೌಮಾರ್ಯಕ್ಕೆ ಕಾಲಿಡುತ್ತಿರುವ ವಿದ್ಯಾರ್ಥಿಗಳ ಬೌದ್ಧಿಕ, ಭಾವನಾತ್ಮಕ ಮತ್ತು ಮಾನಸಿಕ ಬೆಳವಣಿಗೆಗೆ ಪೋಷಕವಾಗುವಂತೆ ರಚನೆಯಾಗಬೇಕು.

- **ಸೃಜನಶೀಲತೆಯ ತತ್ವ:** ವಿದ್ಯಾರ್ಥಿಗಳಲ್ಲಿ ಭಾವಗಳು, ಕುತೂಹಲ, ಸಾಹಸ ಇತ್ಯಾದಿ ಗುಣಗಳು ವಿಕಸಿಸಿ ವ್ಯಕ್ತವಾಗಲು ತವಕಗೊಳ್ಳುತ್ತಿರುವ ಹಂತದಲ್ಲಿರುತ್ತಾರೆ. ಇದು ಹೊರಹೊಮ್ಮಲು ಅವಕಾಶವಿರಬೇಕು. ಪಠ್ಯಪುಸ್ತಕದ ವಿಷಯ, ಕತೆ, ಕವನಗಳಂತಹ ಪಠ್ಯದ ಮೂಲಕ ಸೃಜನಶೀಲತೆಯನ್ನು ಜಾಗೃತಗೊಳಿಸಬೇಕು.
- **ಮಾನವೀಯ ಮೌಲ್ಯಗಳ ತತ್ವ:** ಸಹಕಾರ, ಸ್ನೇಹ, ನ್ಯಾಯ, ಸತ್ಯ- ನೀತಿ, ನಿಷ್ಠೆ, ಪ್ರಾಮಾಣಿಕತೆ, ಅನಾಥರ ಸೇವೆ, ಅಹಿಂಸೆ ಮುಂತಾದ ಮಾನವೀಯ ಮೌಲ್ಯಗಳನ್ನು ಪಠ್ಯಪುಸ್ತಕವು ಪ್ರತಿನಿಧಿಸಬೇಕು.
- **ಪ್ರಜಾಪ್ರಭುತ್ವ ಮೌಲ್ಯ ಮತ್ತು ರಾಷ್ಟ್ರೀಯ ಭಾವೈಕ್ಯತೆಯ ತತ್ವ:** ಸ್ವಾತಂತ್ರ್ಯ-ಸಮಾನತೆ, ರಾಷ್ಟ್ರೀಯತೆ, ವ್ಯಕ್ತಿಗೌರವ, (ವಿಶ್ವ)ಭ್ರಾತೃತ್ವದ ಆದರ್ಶದ ಅಂಶಗಳನ್ನು ಒಳಗೊಂಡಿರಬೇಕು. ಪ್ರಗತಿಶೀಲ ಚಿಂತಕರಾಗಲು, ವೈಜ್ಞಾನಿಕ ಮನೋಭಾವ ಬೆಳೆಸಲು ಸಾಧಕವಾಗಿರಬೇಕು.
- **ವೈಯಕ್ತಿಕ ಭಿನ್ನತೆಯ ತತ್ವ:** ವಿದ್ಯಾರ್ಥಿಗಳ ವೈವಿಧ್ಯದ ವಿಚಾರ, ಭಾವನೆಗಳನ್ನು ಗುರುತಿಸಿ ಪೋಷಿಸುವಂತಿರಬೇಕು.

**(ಬ) ವಿಷಯ ಅಥವಾ ಪಠ್ಯಾಂಶಕ್ಕೆ ಸಂಬಂಧಿಸಿದ ತತ್ವಗಳು:**

- **ಸಾಹಿತ್ಯ ತತ್ವ:** ವಿವಿಧ ಸಾಹಿತ್ಯ ಪ್ರಕಾರಗಳನ್ನು ಪರಿಚಯ ಮಾಡಿಕೊಡುವಂತಿರಬೇಕು. ಸಾಹಿತ್ಯ, ಜ್ಞಾನ ವಿಸ್ತರಿಸುವ ಸಾಹಿತ್ಯಾಭಿರುಚಿ ಬೆಳೆಸುವಂತಿರಬೇಕು. ಪ್ರಾಚೀನರಿಂದ ಆಧುನಿಕರವರೆಗೆ ಲೇಖಕರ ಮತ್ತು ಕವಿಗಳ ಕೃತಿಗಳನ್ನು ಪ್ರಾತಿನಿಧಿಕವಾಗಿ ಪರಿಚಯಿಸುವಂತಿರಬೇಕು.
- **ಸಾಂಸ್ಕೃತಿಕ ತತ್ವ:** ದೇಶದ ಮತ್ತು ನಾಡಿನ ವೈವಿಧ್ಯಮಯ ಸಂಸ್ಕೃತಿಗಳ ನಡುವೆ ಏಕತೆ ತರಬಲ್ಲ ಸಂಸ್ಕೃತಿ- ಪರಂಪರೆಗಳನ್ನು ಪರಿಚಯಿಸುವಂತಿರಬೇಕು. ನಮ್ಮ ಸಾಂಸ್ಕೃತಿಕ ಪರಂಪರೆಯ ಅರಿವಿನೊಂದಿಗೆ ಅಭಿಮಾನ ಮೂಡಿಸುವಂತಿರಬೇಕು.
- **ಭಾಷಾವೈವಿಧ್ಯ, ವೈಶಿಷ್ಟ್ಯಗಳ ತತ್ವ:** ಪಠ್ಯಪುಸ್ತಕವು ಭಾಷೆಯ-ಸ್ವರೂಪ, ಭಾಷೆಯ ವೈವಿಧ್ಯ, ವೈಶಿಷ್ಟ್ಯಗಳನ್ನು ಶಬ್ದ ಶ್ರೀಮಂತಿಕೆಯನ್ನು ಪರಿಚಯಿಸುವಂತಿರಬೇಕು.

**(ಕ) ಬೋಧನಾ-ಕಲಿಕೆಯ ಉಪಕ್ರಮಗಳಿಗೆ ಸಂಬಂಧಿಸಿದ ತತ್ವಗಳು**

- **ಚಟುವಟಿಕೆಯ ತತ್ವ:** ವಿದ್ಯಾರ್ಥಿಗಳು ಸ್ವಾಭಾವಿಕವಾಗಿಯೇ ಕ್ರಿಯಾಶೀಲರಾಗಿರುವುದನ್ನು ಗಮನದಲ್ಲಿಟ್ಟುಕೊಂಡು ಅವರ ಮಾನಸಿಕ, ಶಾರೀರಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಅವಕಾಶ ಕಲ್ಪಿಸಬೇಕು. ಇದಕ್ಕಾಗಿ ಪಾಠಂತ್ಯದಲ್ಲಿ ಸಂಬಂಧಿತ ಚಟುವಟಿಕೆಗಳನ್ನು ಕೊಡಬೇಕು. ರಚನೆ, ಸಂಗ್ರಹ, ಅಧ್ಯಯನ, ವಿಮರ್ಶೆ, ಗಾಯನ, ಅಭಿನಯಗಳಿಗೆ ಪ್ರೇರಕವಾಗುವ ಚಟುವಟಿಕೆಗಳನ್ನು ಕೊಡಬೇಕು.
- **ಸಮನ್ವಯ ತತ್ವ:** ಪಠ್ಯಪುಸ್ತಕಗಳು ಯಾವುದೇ ಒಂದು ಅಂಶದ ವಿವರಣೆಗೆ ಸೀಮಿತವಾಗದೆ ಗದ್ಯ, ಪದ್ಯಗಳಲ್ಲಿ, ಕಥೆ, ಜೀವನಚರಿತ್ರೆ, ನಾಟಕ, ಪ್ರಬಂಧಗಳನ್ನು ಉಳಿದ ಕಲಿಕಾ ವಿಷಯಗಳೊಂದಿಗೆ ಸಮನ್ವಯಗೊಳಿಸಿ ರಚಿಸಬೇಕು.
- **ನಿರಂತರತೆ ಮತ್ತು ಸಮಗ್ರತೆಯ ತತ್ವ:** ಪಠ್ಯದಲ್ಲಿ ಅಡಕವಾದ ವಿಷಯಗಳು ನಿರಂತರತೆ ಹೊಂದಿದ್ದು, ಪರಸ್ಪರ ಸಂಬಂಧ ಹೊಂದಿರಬೇಕು. ಪಾಠಗಳು ಪಠ್ಯದಲ್ಲಿ ಏಕ ಸ್ವರೂಪವನ್ನು ತರುವಂತಿರಬೇಕು.
- **ಉಪಯುಕ್ತತೆಯ ತತ್ವ:** ಪಠ್ಯದಲ್ಲಿ ಕಲಿತ ಜ್ಞಾನ ನಿಜಜೀವನದಲ್ಲಿ ಅಳವಡಿಸಿಕೊಳ್ಳುವಂತೆ, ವ್ಯಾವಹಾರಿಕ ಪ್ರಪಂಚದಲ್ಲಿ ಬಳಸಿಕೊಳ್ಳುವಂತೆ ಕಲಿಕಾ ಚಟುವಟಿಕೆಗಳನ್ನು ಸೂಚಿಸಬೇಕು. ಭಾಷಾಕೌಶಲಗಳ ಬಳಕೆಗೆ ಕಲಿಕಾ ಅಭ್ಯಾಸಗಳನ್ನು ಒದಗಿಸಿರಬೇಕು.
- **ಜೀವನಾನುಭವಗಳ ತತ್ವ:** ಕುಟುಂಬ, ಸಮಾಜ, ಪರಿಸರ, ಸಾಮಾಜಿಕ, ಚಾರಿತ್ರಿಕ, ಆರ್ಥಿಕ ಪದ್ಧತಿ ಮುಂತಾದ ಅಂಶಗಳಿಂದ ಜೀವನಾನುಭವಕ್ಕೆ ಸಂಬಂಧಿಸಿದ ಕಲ್ಪನೆಗಳನ್ನು ಮೂಡಿಸುವಂತಿರಬೇಕು.

- **ಮೌಲ್ಯಮಾಪನ ತತ್ವ:** ಕಲಿಕೆಯ ಅನುಭವಗಳ ಸಫಲತೆ ಮತ್ತು ವಿದ್ಯಾರ್ಥಿಗಳ ಕಲಿಕೆಯನ್ನು ನಿರಂತರ ಮೌಲ್ಯಮಾಪನ ಮಾಡಲು ಸೂಕ್ತ ವಿವಿಧ ಮೌಲ್ಯಮಾಪನ ತಂತ್ರಗಳನ್ನು ಆಧರಿಸಿ ಚಟುವಟಿಕೆಗಳನ್ನು ಒಳಗೊಂಡಿರಬೇಕು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

ಕೆಳಗಿನ ಹೇಳಿಕೆಗಳಲ್ಲಿ ಕೆಲವು ಸರಿ ಮತ್ತು ಕೆಲವು ತಪ್ಪಾಗಿವೆ. ಅವುಗಳನ್ನು ಗುರುತಿಸಿ ಉತ್ತರದ ಜಾಗದಲ್ಲಿ ಹೇಳಿಕೆಯ ಸಂಖ್ಯೆಯನ್ನು ಬರೆಯಿರಿ:

1. ಹಲವಾರು ಪರಿಣಿತರು ಜಾಗರೂಕತೆಯಿಂದ ರಚಿಸುವುದರಿಂದ ಪಠ್ಯಪುಸ್ತಕಗಳು ಅಧಿಕೃತವಾಗುವವು.
2. ಪಠ್ಯಕ್ರಮ (curriculum) ಆಧರಿಸಿ ನೇರವಾಗಿ ಪಠ್ಯಪುಸ್ತಕವನ್ನು ರಚಿಸಲಾಗುವುದು.
3. ಭಾಷಾ ಅಧ್ಯಾಪಕರಿಗೆ ಭಾಷಾ ಪಠ್ಯಪುಸ್ತಕಗಳೇ ಸಂಪೂರ್ಣವಾಗಿ ಆಧಾರವಾಗುವವು.
4. ಪಠ್ಯಪುಸ್ತಕಗಳನ್ನು ಪರಿಣಿತರೇ ರಚಿಸುವುದರಿಂದ ಮುದ್ರಿಸುವ ಮುನ್ನ ಕ್ಷೇತ್ರಪರೀಕ್ಷೆ ಅನಗತ್ಯವಾಗುತ್ತದೆ.
5. ಪ್ರಾದೇಶಿಕ ಭಾಷಾ ಪಠ್ಯಪುಸ್ತಕಗಳೂ ರಾಷ್ಟ್ರೀಯತೆ, ಪ್ರಜಾಪ್ರಭುತ್ವ ಮೌಲ್ಯಗಳಂತಹ ರಾಷ್ಟ್ರೀಯಗುರಿಗಳನ್ನು ಪರಿಗಣಿಸಬೇಕು.

ಉತ್ತರ: ಸರಿ ____________________ ತಪ್ಪು ____________________

**3.3.3.2. ಕನ್ನಡ ಭಾಷಾ ಪಠ್ಯಪುಸ್ತಕಗಳ ಸ್ವರೂಪ**

ಭಾಷಾಬೋಧನ ಕಾರ್ಯಕ್ರಮದಲ್ಲಿ ಪಠ್ಯಪುಸ್ತಕವು ಪ್ರಧಾನ ಅಂಗವಾಗಿದ್ದು, ಕೆಲವು ಸಂದರ್ಭಗಳಲ್ಲಿ ವಿದ್ಯಾರ್ಥಿಗಳಿಗೆ ದೊರೆಯುವ ಬಹುತೇಕ ಭಾಷಾ ವಿವರಗಳಿಗೆ ಮತ್ತು ತರಗತಿಯಲ್ಲಿ ನಡೆಯುವ ಭಾಷಾ ಅಭ್ಯಾಸಗಳಿಗೆ ಪ್ರಮುಖ ಆಧಾರವಾಗಿದೆ. "ಭಾಷಾ ಪಠ್ಯಪುಸ್ತಕವು ಚಿಂತನೆಯ ಮತ್ತು ಅಧ್ಯಯನದ ಹೊಸ ಮಾರ್ಗಗಳನ್ನು ತೆರೆಯುತ್ತದೆ ಮತ್ತು ಅನುಭವಗಳನ್ನು ವಿಸ್ತರಿಸುತ್ತದೆ" ಎಂದು ಎಫ್.ಎಲ್. ಬಿಲ್ಲೋಸ್ (F.L. Billows- The techniques of Language teaching- page 71) ತಿಳಿಸಿದ್ದಾರೆ. ಭಾಷಾಪಠ್ಯಪುಸ್ತಕವನ್ನು ಈಗಾಗಲೇ ರೂಪಿತವಾಗಿರುವ ಪಠ್ಯವಸ್ತು ಮತ್ತು ಉದ್ದೇಶಗಳ ಅನುಸಾರ ರಚಿಸಿರಬೇಕು. ಕಥೆ, ಸಂಭಾಷಣೆ, ವರ್ಣನೆ, ನಿರೂಪಣೆ, ನಾಟಕ, ಪತ್ರ, ಪ್ರಬಂಧ ಇತ್ಯಾದಿಗಳನ್ನು ಸೂಕ್ತ ರೀತಿಯಲ್ಲಿ ಬಳಸಿಕೊಂಡು ಸಾಹಿತ್ಯ ಪ್ರಕಾರಗಳ ವೈವಿಧ್ಯವನ್ನು ಪರಿಚಯಿಸುವಂತಿರಬೇಕು.

ಕನ್ನಡ ಭಾಷಾ ಪಠ್ಯಪುಸ್ತಕಗಳು ಉತ್ತಮ ಗುಣಮಟ್ಟದಲ್ಲಿ ರಚನೆಯಾಗಲು ಕೆಲವು ಪ್ರಮುಖ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು ಎಂದು ತಜ್ಞರು ಅಭಿಪ್ರಾಯಪಡುತ್ತಾರೆ. ಅವು:

- ಕನ್ನಡ ಭಾಷೆಯಲ್ಲಿ ಲಭ್ಯವಿರುವ ವಿಪುಲ ಸಾಹಿತ್ಯ–ವಿಚಾರ (content);
- ನಿರ್ದಿಷ್ಟ ತರಗತಿಯ ಬೋಧನಾ ಉದ್ದೇಶಗಳು;
- ರಾಷ್ಟ್ರೀಯ ಗುರಿಗಳು (ಪ್ರಜಾಪ್ರಭುತ್ವ ತತ್ವ ಆಧಾರಿತ);
- ವಿದ್ಯಾರ್ಥಿಗಳ ಆಸಕ್ತಿ, ಸಾಮರ್ಥ್ಯ ಮತ್ತು ವ್ಯಕ್ತಿ ವ್ಯತ್ಯಾಸಗಳು; ಮತ್ತು
- ಶಾಲೆಯಲ್ಲಿ ಕನ್ನಡ ಭಾಷಾ ಬೋಧನೆಗೆ ದೊರಕುವ ಒಟ್ಟು ಬೋಧನಾವಧಿ ಇತ್ಯಾದಿ.

ಪ್ರಸ್ತುತ ಜಾರಿಯಲ್ಲಿರುವ ಪ್ರೌಢಶಾಲಾ ಕನ್ನಡ ಪಠ್ಯಪುಸ್ತಕಗಳು 2005– ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಸೂಚಿಸಿದ ನೆಲೆಯಾಧರಿಸಿ ರಚನೆಯಾಗಿವೆ ಎಂದು ಬಲ್ಲಿರಿ. ಅಲ್ಲದೆ ಅವು 1986ರ ರಾಷ್ಟ್ರೀಯ ಶಿಕ್ಷಣ ನೀತಿಗೆ

ಮತ್ತು ಆನಂತರದ ದಶಕಗಳಲ್ಲಾದ ಶೈಕ್ಷಣಿಕ ಆಧುನಿಕತೆಗೆ ಪೂರಕವಾಗಿರಬೇಕು ಎಂಬುದನ್ನು ಗಮನಿಸಿವೆ. ಇವುಗಳೊಂದಿಗೆ ಪಠ್ಯಪುಸ್ತಕ ರಚನಾ ತತ್ವಗಳಿಗೆ ಅನುಸಾರವಾಗಿಯೂ ರೂಪಿತವಾಗಿವೆ. ಈ ಹಿನ್ನೆಲೆಯಲ್ಲಿ ಕನ್ನಡಭಾಷಾ ಪಠ್ಯಪುಸ್ತಕಗಳ ಗುಣಲಕ್ಷಣಗಳನ್ನು ಬಾಹ್ಯ ಲಕ್ಷಣಗಳು ಮತ್ತು ಆಂತರಿಕ ಗುಣ ಲಕ್ಷಣಗಳು (ಪಾಠಗಳ ಭಾಷೆ ಮತ್ತು ವಸ್ತು ವಿಷಯವೆರಡನ್ನು ಒಳಗೊಂಡು) ಎಂದು ಎರಡು ಆಯಾಮಗಳಲ್ಲಿ ಅಧ್ಯಯನ ಮಾಡಬಹುದು.

**(ಅ) ಭಾಷಾ ಪಠ್ಯಪುಸ್ತಕ ಬಾಹ್ಯ ಲಕ್ಷಣಗಳು:**

ಪ್ರಾಥಮಿಕ – ಮಾಧ್ಯಮಿಕ ಹಂತದ ಭಾಷಾಬೋಧನೆ ಮಾಡಿರುವ ನಿಮಗೆ ಆ ಪಠ್ಯಪುಸ್ತಕಗಳ ಬಾಹ್ಯ ಸ್ವರೂಪದ ಮುಖ್ಯ ಅಂಶಗಳು ತಿಳಿದೇ ಇವೆ. ಅವುಗಳನ್ನು ಚೌಕಟ್ಟಿನಲ್ಲಿ ಪಟ್ಟಿ ಮಾಡಿ:

**ಅಭ್ಯಾಸ:**

ನೀವು ಪುಸ್ತಕದ ಗಾತ್ರ, ವಿನ್ಯಾಸ, ಆಕರ್ಷಕ ರಕ್ಷಾಪುಟ ಮತ್ತು ಅದರ ಗುಣಮಟ್ಟ, ಉಪಯೋಗಿಸಿದ ಕಾಗದದ ಗುಣಮಟ್ಟ, ಮುದ್ರಣದ ಗುಣಮಟ್ಟ, ಅಕ್ಷರಗಳ ಗಾತ್ರ ಮತ್ತು ಬೆಲೆ ಎಂಬ ಅಂಶಗಳನ್ನು ಪಟ್ಟಿ ಮಾಡಿರುತ್ತೀರಿ.

ಪ್ರೌಢಶಾಲಾ ಹಂತದ ಪಠ್ಯಪುಸ್ತಕಗಳ ಗಾತ್ರವು 8 X 5, ಮಾಧ್ಯಮಿಕ ಹಂತದಲ್ಲಿ 8 X 6 ಇರಬೇಕು. ಆರನೇ ತರಗತಿಯಿಂದ ಹತ್ತನೇ ತರಗತಿವರೆಗಿನ ಪಠ್ಯಪುಸ್ತಕಗಳಲ್ಲಿ ಪಾಠ ಮತ್ತು ಅಭ್ಯಾಸ ಭಾಗಗಳ ಅಕ್ಷರಗಳ ಗಾತ್ರವು ಹನ್ನೆರಡು (12) ಆಗಿರುತ್ತದೆ. ಕೆಳಗಿನ ತರಗತಿಗಳ ಪಠ್ಯದಲ್ಲಿ ಅಕ್ಷರಗಳ ಗಾತ್ರ 18 ರಿಂದ 14ರ ವರೆಗೆ ಇರುತ್ತದೆ.

ಪಠ್ಯಪುಸ್ತಕಗಳ ರಕ್ಷಾಕವಚವು ಪುಸ್ತಕದ ಹೆಸರು, (ಸಿರಿ ಕನ್ನಡ, ನುಡಿ ಕನ್ನಡ, ಸವಿ ಕನ್ನಡ) ತರಗತಿ, ಪ್ರಕಾಶಕರ ಹೆಸರು, ಕರ್ನಾಟಕ ಸರ್ಕಾರದ ಲಾಂಛನವನ್ನು ಒಳಗೊಂಡಿರಬೇಕು. ಒಳಗಿನ ಪುಟಗಳಿಗೆ ಬಳಸಿದ ಹಾಳೆಗಳು ಶುಭ್ರ ಬಿಳಿಯಾಗಿರಬೇಕು, ತೆಳುವಾಗಿರಬಾರದು. ಒಟ್ಟಿನಲ್ಲಿ ವಿನ್ಯಾಸ ಸುಂದರವಾಗಿ ಆಕರ್ಷಕವಾಗಿರಬೇಕು ಮತ್ತು ಮುದ್ರಣ ದೋಷ ರಹಿತವಾಗಿರಬೇಕು. ಪುಸ್ತಕದ ಬೆಲೆ ಪೋಷಕರ ಕೈಗೆಟುಕುವಂತಿರಬೇಕು.

- ಇವುಗಳೊಂದಿಗೆ ಬೋಧಿಸುವ ಶಿಕ್ಷಕರಿಗೆ ಅನುಕೂಲವಾಗಲು ಮುನ್ನುಡಿಯನ್ನು ಹೊಂದಿರಬೇಕು.
- ಪಾಠಾನುಕ್ರಮಣಿಕೆಯೊಂದಿಗೆ ಪುಟಸಂಖ್ಯೆ ಇದ್ದರೆ ವಿದ್ಯಾರ್ಥಿ– ಶಿಕ್ಷಕರಿಬ್ಬರಿಗೂ ಅನುಕೂಲ.
- ಆರಂಭದಲ್ಲಿ ರಾಷ್ಟ್ರಗೀತೆ ಮತ್ತು ನಾಡಗೀತೆ ಇರಬೇಕು. ಕನ್ನಡದಲ್ಲಿ ರಾಷ್ಟ್ರಗೀತೆಯ ಅರ್ಥವಿವರವನ್ನು ಕೊಡುವುದು ಅಪೇಕ್ಷಿತ.
- ಬೋಧಕರಿಗೆ ನೆರವಾಗುವಂತಹ ಸೂಚನೆಗಳನ್ನು ಒದಗಿಸಬೇಕು.

**ಆ) ಕನ್ನಡ ಭಾಷಾ ಪಠ್ಯ ಪುಸ್ತಕದ ಆಂತರಿಕ ಲಕ್ಷಣಗಳು**

ಭಾಷಾಪಠ್ಯಪುಸ್ತಕದ ಆಂತರಿಕ ಲಕ್ಷಣಗಳು ಪೂರ್ಣವಾಗಿ ಪಠ್ಯವಿಚಾರವನ್ನೇ (content) ಕೇಂದ್ರೀಕರಿಸುತ್ತದೆಂದು ನೀವು ತಿಳಿದಿರುವಿರಿ. ಭಾಷಾ ಬೋಧನೆಯ ಉದ್ದೇಶಗಳನ್ನು ಬಲ್ಲಿರಿ.

**ಅಭ್ಯಾಸ:** ಪಠ್ಯ ವಿಚಾರಕ್ಕೆ ಸಂಬಂಧಿಸಿದಂತೆ ಇರಬೇಕಾದ ಗುಣ ಲಕ್ಷಣಗಳನ್ನು ಪಟ್ಟಿಮಾಡಿ:

- ಪ್ರತಿ ಇಯತ್ತೆಯ ಕನ್ನಡ ಭಾಷಾ ಬೋಧನೆಯ ಗುರಿಗಳನ್ನು ಉದ್ದೇಶಗಳನ್ನು ಸಾಧಿಸಲು ಅನುವುಮಾಡಿಕೊಡಬೇಕು;
- ನಿರ್ದಿಷ್ಟ ವಯೋಹಂತದ ವಿದ್ಯಾರ್ಥಿಗಳ ಆಸಕ್ತಿಗೆ ತಕ್ಕಂತೆ ವೈವಿಧ್ಯಮಯವಾಗಿರಬೇಕು;
- ವಿದ್ಯಾರ್ಥಿಗಳ ವಯೋಮಟ್ಟಕ್ಕೆ ತಕ್ಕಂತೆ ರೂಪಿತವಾಗಿರಬೇಕು;
- ಪದ, ನುಡಿಗಟ್ಟು, ಗಾದೆ ಮಾತುಗಳು, ಘೋಷಣೆ ವಾಕ್ಯಗಳನ್ನು ಹೊಂದಿರಬೇಕು;
- ಕನ್ನಡ ಗದ್ಯ  ಮತ್ತು ಪದ್ಯ ಸಾಹಿತ್ಯ ಪ್ರಕಾರಗಳ ವೈವಿಧ್ಯವನ್ನು ಪರಿಚಯಿಸುವಂತಿರಬೇಕು;
- ಪಾಠೋತ್ತರ ಅಭ್ಯಾಸಗಳು ಭಾಷೆ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿರಬೇಕು.

**ಅಭ್ಯಾಸ:** ಕನ್ನಡ ಭಾಷಾ ಪಠ್ಯಪುಸ್ತಕ ರಚನೆಯ ಕಾರ್ಯದಲ್ಲಿ ಕೆಳಗಿನ ಯಾವ ಸೂತ್ರಗಳು ಪ್ರಧಾನವಾಗುತ್ತವೆ?

i) ಕವಿ/ ಲೇಖಕರುಗಳಾದ ಆಯ್ಕೆ
ii) ಪಠ್ಯವಿಚಾರದ ಆಯ್ಕೆ
iii) ಭಾಷಾ ಅಭ್ಯಾಸಗಳು ಮತ್ತು ಚಟುವಟಿಕೆಗಳ ಆಯ್ಕೆ
iv) ಪಠ್ಯ ವಿಚಾರದ ಶ್ರೇಣೀಕರಣ
v) ಪಠ್ಯ ವಿಚಾರದ ಪ್ರಸ್ತುತೀಕರಣ

ಉತ್ತರ ____________________

ನಿಮ್ಮ ಉತ್ತರಗಳು (ii) (iv) ಮತ್ತು (v) ಆಗಿದ್ದರೆ ಸರಿಯಾಗಿ ವಿವೇಚಿಸಿದ್ದೀರಿ.

**1. ಪಠ್ಯ ವಿಚಾರದ ಅಥವಾ ಪಠ್ಯ ಸಾಮಗ್ರಿಯ ಆಯ್ಕೆ**

- ಎಂಟರಿಂದ ಹತ್ತನೆ ತರಗತಿಗಳ(ಪ್ರಥಮ, ದ್ವಿತೀಯ ಮತ್ತು ತೃತೀಯ) ಕನ್ನಡ ಭಾಷಾ ಪಠ್ಯಪುಸ್ತಕಗಳನ್ನು ಅಭ್ಯಸಿಸುವ ವಿದ್ಯಾರ್ಥಿಗಳು, ಈಗಾಗಲೇ ಅಧ್ಯಯನ ಮಾಡಿರುವ ಪಠ್ಯ ವಿಚಾರಗಳು "ಯಾವುವು" ಮತ್ತು "ಎಷ್ಟು" ಎಂಬುದನ್ನು ಮೊದಲು ಗಮನಿಸಬೇಕು.
- ಈ ಬಗ್ಗೆ ನಾವು ಈಗಾಗಲೇ ಇದೇ ಬ್ಲಾಕ್‌ನ ಮೊದಲ ಘಟಕದಲ್ಲಿ ನೀಡಿರುವ ಹದಿನಾರು ವಿಷಯ ಸಾಮಗ್ರಿಯನ್ನು ಒಳಗೊಂಡ ಪಟ್ಟಿಯ ಅಂಶಗಳನ್ನು ಗಮನಿಸಿಕೊಳ್ಳಬೇಕು;
- ಆ ಪಠ್ಯ ಸಾಮಗ್ರಿ ಪಟ್ಟಿಯಲ್ಲಿ ವಿದ್ಯಾರ್ಥಿಗಳು ಹಿಂದಿನ ತರಗತಿಗಳಲ್ಲಿ ಯಾವೆಲ್ಲ ಅಂಶಗಳನ್ನು ಅಧ್ಯಯನ ಮಾಡಿದ್ದಾರೆಂದು ಗುರುತಿಸಿಕೊಳ್ಳಬೇಕು. ಇದರಿಂದ ಪಠ್ಯವಿಚಾರದ ಪುನರುಕ್ತಿಯಾಗದಂತೆ ನಿಗಾ ವಹಿಸಲು ಸಾಧ್ಯವಾಗುತ್ತದೆ.
- ಆಯ್ಕೆಮಾಡಿಕೊಂಡ ವಿಚಾರ ಕುರಿತು ದೊರಕುವ ಸಾಹಿತ್ಯ (ಲೇಖಕ/ ಕವಿಗಳ ಗದ್ಯ – ಪದ್ಯ)ವನ್ನು ಸಂಗ್ರಹಿಸಿ ಅಧ್ಯಯನ ಮಾಡಬೇಕು. ಆ ಭಾಗದಲ್ಲಿ ಬರುವ ಭಾಷಾಂಶಗಳ ಸೂಕ್ತತೆಯನ್ನೂ ಗಮನಿಸಬೇಕು.
- ಅಯ್ಕೆ ಮಾಡಿಕೊಳ್ಳುವ ಪಠ್ಯವಿಚಾರವು ನಿಖರವಾಗಿದ್ದು, ಆ ತರಗತಿಗೆ ಹೊಂದುವಂತಿರಬೇಕು.
- ಪಠ್ಯವಿಚಾರವು ಕನ್ನಡ ಬೋಧನೆಯ ಭಾಷಾ ಸಂಬಂಧಿ ಮತ್ತು ಸಾಹಿತ್ಯ ಸಂಬಂಧಿ ಉದ್ದೇಶಗಳ ಈಡೇರಿಸುವಿಕೆಯ ದೃಷ್ಟಿಯಿಂದ ಸೂಕ್ತವಾಗಿರಬೇಕು.
- ಪ್ರಾದೇಶಿಕ ಸಾಂಸ್ಕೃತಿಕ, ಸಾಹಿತ್ಯಿಕ ಮತ್ತು ರಾಷ್ಟ್ರೀಯ ಗುರಿಗಳ ಪೋಷಣೆಗೆ ಪಠ್ಯವಿಷಯಗಳು ಪೂರಕವಾಗಿವೆ ಎಂಬುದನ್ನು ಪಡಿಸಿಕೊಳ್ಳಬೇಕು.
- ಪಠ್ಯಸಾಮಗ್ರಿಯ ಸಾಹಿತ್ಯಪ್ರಕಾರದ (ಕಥೆ/ ನಾಟಕ/ ವಿಮರ್ಶೆ) ಸೂಕ್ತತೆಯನ್ನು ಕುರಿತು ಗಮನಹರಿಸಬೇಕು. ವಿಷಯ ನಿರೂಪಣೆಯಲ್ಲಿ ಬರುವ ಭಾವಾಂಶವು ಯಾವುದೇ ಪ್ರಚೋದನೆ ಮತ್ತು ಟೀಕೆಗೆ ಗುರಿಯಾಗದಂತೆ ಎಚ್ಚರಿಕೆ ವಹಿಸಬೇಕು.
- ಪಠ್ಯವಿಚಾರದ ಆಯ್ಕೆಗೆ ಪಠ್ಯಪುಸ್ತಕ ರಚನಾ ಸಮಿತಿಯವರು ಗಮನಿಸಬಹುದಾದ ವಿಷಯಗಳನ್ನು ತಜ್ಞರು ಸೂಚ್ಯವಾಗಿ ಹೀಗೆ ಪಟ್ಟಿಮಾಡಿದ್ದಾರೆ: ಮಹಾನ್ ವ್ಯಕ್ತಿಗಳು – ಸಾಹಸಗಳು – ಶೌರ್ಯ – ಪ್ರವಾಸಗಳು – ಇತರ ದೇಶಗಳ ಜನ – ಜೀವನ – ಸಂಪರ್ಕ – ವ್ಯವಸ್ಥೆ – ನಾಟಕಗಳು – ಜ್ವಲಂತ ಸಮಸ್ಯೆಗಳು – ಆಟೋಟಗಳು – ಸಾಧಕರ ಕಥೆ – ಪ್ರಾಣಿ ಪಕ್ಷಿಗಳ (ಜೀವನ) ಕಥೆಗಳು – ರಾಷ್ಟ್ರೀಯ ಸಮಸ್ಯೆಗಳು – ಸಂಸ್ಕೃತಿಯ ಅಂಶಗಳು– ಮೌಢ್ಯ ನಿವಾರಣೆ ಇತ್ಯಾದಿ.

**2. ಪಠ್ಯ ಸಾಮಗ್ರಿಯ ಶ್ರೇಣೀಕರಣ**

ನೀವು ಪ್ರಾಥಮಿಕ, ಮಾಧ್ಯಮಿಕ ಹಂತಗಳ ಕನ್ನಡ ಭಾಷಾ ಪಠ್ಯಪುಸ್ತಕಗಳ ನಿರ್ಮಾಣದಲ್ಲಿ ಇರುವ ಶ್ರೇಣೀಕರಣದ ಆಧಾರವನ್ನು ತಿಳಿದಿರುವಿರಿ.

**ಅಭ್ಯಾಸ**

ಈ ಕೆಳಗೆ ನೀಡಿರುವ ಅಂಶಗಳನ್ನು ಕೆಳಗಿನ ಹಂತದ ಮತ್ತು ಪ್ರೌಢಶಾಲಾ ಹಂತದ ಪಠ್ಯವಿಚಾರದ ಶ್ರೇಣೀಕರಣದ ಆಧಾರಗಳೆಂದು ವರ್ಗೀಕರಿಸಿರಿ.

(1) ಸಾಹಿತ್ಯ ಪ್ರಕಾರಗಳ ಪರಿಚಿತತೆ (2) ಭಾವಾಂಶ (3) ಸಂಕೀರ್ಣತೆ (4) ಆಸಕ್ತಿಗಳ ಬದಲಾವಣೆ (5) ಭಾವಾಂಶ (6) ಮನೋಭಾವಗಳು

ಉತ್ತರ: (ಕೆಳಗಿನ ಹಂತ)

ಪ್ರೌಢ ಹಂತ.

ಕೆಳಗಿನ ಹಂತಗಳಲ್ಲಿ ಕೇವಲ ಭಾವಾಂಶ, ಭಾಷಾಂಶ ಮತ್ತು ಸಾಹಿತ್ಯ ಪ್ರಕಾರಗಳ ದೃಷ್ಟಿಯಿಂದ ಶ್ರೇಣೀಕರಣವಾದರೆ ಪ್ರೌಢಶಾಲಾ ಹಂತದಲ್ಲಿ ಮೇಲಿನ ಎಲ್ಲವನ್ನೂ ದೃಷ್ಟಿಯಲ್ಲಿರಿಸಿಕೊಳ್ಳಬೇಕು.

(i) ಇವುಗಳಲ್ಲದೆ ಪಾಠಗಳ ಗಾತ್ರ ಮತ್ತು ಬೋಧನಾಂಶಗಳ ಸಂಖ್ಯೆಯನ್ನು ಅನುಸರಿಸಿ ಸುಲಭದಿಂದ ಕಷ್ಟದ ಕಡೆಗೆ ಸಾಗುವಂತೆ ಶ್ರೇಣೀಕರಿಸಬೇಕು. (ii) ನೂತನ ವಿಧಾನಗಳಾದ ಅಂತರ್ಗತ ಉಪಕ್ರಮ (integrated approach) ರಚನಾ ಉಪಕ್ರಮ (constructive approach) ಹಾಗೂ ಸುರುಳಿಯಾಕಾರದ ಉಪಕ್ರಮ(spiral approach)ಗಳನ್ನು ಅಳವಡಿಸಬೇಕು.

**3. ಪಠ್ಯ ವಿಚಾರದ ಪ್ರಸ್ತುತೀಕರಣ ಅಥವಾ ಪ್ರತಿಪಾದನೆ**

**ಚಟುವಟಿಕೆ:**
ಪ್ರಸ್ತುತ ಒಂಬತ್ತು ಅಥವಾ ಹತ್ತನೆಯ ತರಗತಿಯ ಪಠ್ಯಪುಸ್ತಕದ ಒಂದು **ಹೊಸಗನ್ನಡ** ಮತ್ತು ಒಂದು **ಹಳೆಗನ್ನಡ** ಪಾಠಗಳ ಪ್ರಸ್ತುತಿ ಕ್ರಮ ಗುರುತಿಸಿರಿ.
'ಶೀರ್ಷಿಕೆ'ಯಿಂದ ಹಿಡಿದು 'ಪೂರಕ ಓದಿ' ನವರೆಗೆ ಸಾಹಿತ್ಯ ಅಥವಾ ಪಠ್ಯಾಂಶ ಹಾಗೂ ಅಭ್ಯಾಸಗಳವರೆಗೆ ವಿದ್ಯಾರ್ಥಿಗಳಿಗೆ ಅನುಕೂಲಕರವಾಗಿ ಸಂಯೋಜಿಸಿರುವುದನ್ನು ಗುರುತಿಸಿದ್ದೀರಲ್ಲವೆ? ಭಾಷಾಪಾಠದ ಪ್ರಸ್ತುತೀಕರಣವನ್ನು ಹೀಗೆ ಅಳವಡಿಸಿಕೊಳ್ಳುವುದು ಸಾಮಾನ್ಯವಾಗಿದೆ.

**ಅ) (i) ಪಾಠಗಳು:** ಪ್ರತಿ ಪಾಠವು ಅದರ ಸಾಹಿತ್ಯಪ್ರಕಾರ (ಸಣ್ಣಕಥೆ, ಪ್ರವಾಸ, ಪ್ರಬಂಧ, ನಾಟಕ) ವಸ್ತುವಿನ್ಯಾಸ, ಪಾಠದ ವ್ಯಾಪ್ತಿ ಮತ್ತು ಭಾಷಾಶೈಲಿ ಇವು ಪರಸ್ಪರ ಸಂಬಂಧಿಸಿರಬೇಕು. ಇವುಗಳೊಂದಿಗೆ ಪಾಠದ ವಸ್ತು(ಅದರ ಆಕರ) ಮತ್ತು ಉದ್ದೇಶವನ್ನು ಸೂಚಿಸಬೇಕು. ಪಾಠದ ಬೆಳವಣಿಗೆಯಲ್ಲಿ ಕ್ರಮಾನುಗತಿ, ಸುಸಂಬದ್ಧತೆ, ವಿವಿಧ ಘಟಕಗಳ ನಡುವೆ ಅಂತರ್ ಸಂಬಂಧ ಇರಬೇಕು.

**(ii) ಪಾಠಗಳ ವಿಷಯಗಳನ್ನು** ಹಲವು ಮೂಲಗಳಿಂದ ಸಂಗ್ರಹಿಸುವುದರಿಂದ ಕೆಲವು ಅಪರೂಪದ/ ಅಪರಿಚಿತ ವಿಚಾರಗಳ ಬಗೆಗೆ ವಿವರಣೆಯನ್ನು, ಪೂರ್ವ ಕಥೆಯನ್ನು ಟಿಪ್ಪಣಿಗಳಂತೆ ನೀಡಬೇಕು. ಪಾರಿಭಾಷಿಕ ವಿಚಾರಗಳ ವಿವರಣೆಯನ್ನೂ ಕೊಡಬೇಕು.

(iii) ಪಠ್ಯಭಾಗದಲ್ಲಿ ಬಂದ **ಪಾರಿಭಾಷಿಕ ಪದಗಳ** ಮತ್ತು ಪೌರಾಣಿಕ ಪದಗಳ ಪರಿಕಲ್ಪನೆಗಳ, ಸನ್ನಿವೇಶಗಳ ನಿಖರವಾದ ಅರ್ಥ ವಿವರಗಳನ್ನು ಒದಗಿಸಬೇಕು.
ವಿಶಿಷ್ಟವಾದ ನುಡಿಗಟ್ಟು, ಗಾದೆ, ಸೂಕ್ತಿ ಇತ್ಯಾದಿಗಳ ಬಳಕೆಯಾಗಿದ್ದರೆ ಅವುಗಳ ಸ್ಪಷ್ಟತೆಗಾಗಿ ವಿವರಗಳನ್ನು ನೀಡಬೇಕು.

**iv) ಚಿತ್ರಗಳು** (ರೇಖಾ ಚಿತ್ರಗಳು, ಭಾವಚಿತ್ರಗಳು): ಕೆಳಗಿನ ತರಗತಿಗಳಲ್ಲಿ ಚಿತ್ರಗಳ ಅಗತ್ಯ ಹೆಚ್ಚಾಗಿರುತ್ತದೆ. ಪ್ರೌಢಶಾಲಾ ಹಂತದಲ್ಲಿ ಚಿತ್ರಗಳ ಅಗತ್ಯ ಹೆಚ್ಚಾಗಿರುವುದಿಲ್ಲ. ಅವು ಪಠ್ಯವಸ್ತುವಿಗೆ ಪೂರಕವಾಗಿರಬೇಕು. ಚಿತ್ರಗಳ ಗಾತ್ರ, ಬಣ್ಣ ಮತ್ತು ವಿವರಗಳನ್ನು ಎಚ್ಚರಿಕೆಯಿಂದ ನೀಡಬೇಕು. ಪ್ರಕೃತಿಯ ಚಿತ್ರಗಳನ್ನು ಮತ್ತು ಭಾವಚಿತ್ರ ದೊರಕುವ ಕವಿ, ಬರೆಹಗಾರರ ಚಿತ್ರಗಳನ್ನು ಬರೆಯಿಸದೆ ಭಾವಚಿತ್ರಗಳನ್ನೇ ಬಳಸುವುದು ಸೂಕ್ತ ಮತ್ತು ಗೌರವ ಕೂಡ.

**v) ಲೇಖಕರ/ ಕವಿಗಳ ವಿಚಾರ –** ಲೇಖಕರ ಜನನ, ಸ್ಥಳ, ವಿದ್ಯಾರ್ಹತೆ, ಹುದ್ದೆ, ರಚಿಸಿದ ಕೃತಿಗಳು, ಪಡೆದ ಪ್ರಶಸ್ತಿ, ಗೌರವ ವಿವರಗಳನ್ನು ನೀಡಬೇಕು.

**ಆ) ಅಭ್ಯಾಸಗಳು:**

(i) ಪಾಠದಲ್ಲಿ ಬಂದಿರುವ ವಿಷಯ ವಿಚಾರ, ಅದರ ಬೋಧನಾ ಉದ್ದೇಶಗಳು, ಪರೀಕ್ಷಾ ತಂತ್ರಗಳು, ಬೋಧನಾ ತಂತ್ರಗಳು ಇತ್ಯಾದಿಯನ್ನು ಪರಿಗಣಿಸಿ ಅಭ್ಯಾಸಗಳನ್ನು ನೀಡಬೇಕು. ವಿವಿಧ ರೀತಿಯ ಪ್ರಶ್ನೆಗಳು, ಪಾಠದ ವಸ್ತುವಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳು ಕಲಿಯಲು ಅಪೇಕ್ಷಿಸಿರುವ ವ್ಯಾಕರಣ ಮತ್ತು ಭಾಷಾಂಶಗಳ ಕಲಿಕೆಯನ್ನು ಪರೀಕ್ಷಿಸುವ ಪ್ರಶ್ನೆಗಳು, ಭಾಷಾ ಕೌಶಲಗಳನ್ನು ಪರೀಕ್ಷಿಸುವ ಪ್ರಶ್ನೆಗಳು ಇರಬೇಕು.

ii) ಅನ್ವಯ ರೂಪದ ಪ್ರಶ್ನೆಗಳು, ಚಟುವಟಿಕೆಗಳು ಪ್ರಾಯೋಗಿಕವಾಗಿಯೂ ವಾಸ್ತವಿಕವಾಗಿಯೂ ಇರಬೇಕು.

ಇ) ಮೇಲಿನ ವಿಷಯಗಳು ಪಾಠದ ಪ್ರಸ್ತುತಿಗೆ ಸಂಬಂಧಿಸಿದವುಗಳು. ಇಡೀ ಪುಸ್ತಕದ ಪ್ರಸ್ತುತಿಯನ್ನೂ ಗಮನಿಸಬೇಕು. ಪಾಠಗಳ ಜೋಡಣೆಯಲ್ಲಿ ಯಾವುದರ ಅನಂತರ ಯಾವುದು ಬರಬೇಕು ಎಂಬುದೂ ಮುಖ್ಯ. ವಿವಿಧ ಸಾಹಿತ್ಯ ಪ್ರಕಾರಗಳು, ಭಾಷಾಶೈಲಿ, ವಸ್ತುವಿನ್ಯಾಸಗಳನ್ನೂ ಗಮನಿಸಬೇಕು. ಕೆಲವು ಪಠ್ಯಪುಸ್ತಕಗಳಲ್ಲಿ ಭಾಷಾರೂಪದ ಮತ್ತು ಕನ್ನಡ ಸಾಹಿತ್ಯ ಸಾಗಿಬಂದ ಕ್ರಮ ಅನುಸರಿಸಿ ಹಳೆಗನ್ನಡ ಪಾಠಗಳನ್ನು ನಂತರ ನಡುಗನ್ನಡ ಮತ್ತು ಹೊಸಗನ್ನಡ ಪದ್ಯಗಳನ್ನು ಜೋಡಿಸುವುದನ್ನು ಕಾಣುತ್ತೇವೆ.

**ಈ) ಇತರ ಅಂಶಗಳು:** ಪಠ್ಯಪುಸ್ತಕದ ಕೊನೆಯಲ್ಲಿ ಪಠ್ಯಾಧಾರಿತ ಪದಕೋಶ ನೀಡುವುದು. ಪಠ್ಯಪುಸ್ತಕದ ಒಂದು ಉತ್ತಮ ಲಕ್ಷಣ. ಇವುಗಳನ್ನು ನಿಘಂಟಿನಲ್ಲಿ ಕೊಡುವಂತೆ ಅಕಾರಾದಿಯಾಗಿ ನೀಡಲಾಗುತ್ತದೆ. ಸಾಮಾನ್ಯವಾಗಿ ವಿದ್ಯಾರ್ಥಿಗಳಿಗೆ ಪರಿಚಿತವಿರುವ ಪದಗಳನ್ನು ನಿಘಂಟಿನಲ್ಲಿ ನೀಡಬೇಕಾಗಿಲ್ಲ. ಪಾರಿಭಾಷಿಕ ಪದಗಳ ವಿವರಗಳನ್ನೂ ಪದದ ವ್ಯುತ್ಪತ್ತಿ ವಿವರವನ್ನೂ ನೀಡಬೇಕು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

ಕೊಟ್ಟಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಗುರುತಿಸಿ.

1. ಎಫ್.ಎಲ್. ಬಿಲ್ಲೋಸ್‌ರವರ ಪ್ರಕಾರ ಭಾಷಾ ಪಠ್ಯಪುಸ್ತಕಗಳು__________
   ಅ. ಅಭಿವ್ಯಕ್ತಿ ಶಕ್ತಿಯನ್ನು ಬೆಳೆಸಬೇಕು.
   ಆ. ಚಿಂತನೆ ಮತ್ತು ಅಧ್ಯಯನದ ಹೊಸ ಮಾರ್ಗಗಳನ್ನು ಬೆಳೆಸಬೇಕು.
   ಇ. ಶೈಲಿ ವೈವಿಧ್ಯ ಮತ್ತು ಭಾಷಾ ವೈವಿಧ್ಯವನ್ನು ಹೊಂದಿರಬೇಕು.

2. ಪಠ್ಯಪುಸ್ತಕ ರಚನಾ ಸಮಿತಿಯ ಅಧ್ಯಕ್ಷರ ಮುನ್ನುಡಿಯ ವಿವರದ ಗಮನ__________
   ಅ. ಪೋಷಕರು ಬ. ವಿದ್ಯಾರ್ಥಿಗಳು ಕ. ಶಿಕ್ಷಕರು

3. ಪೋಷಕ ಅಧ್ಯಯನ ವಿಭಾಗದಲ್ಲಿ ನಾಲ್ಕೈದು ಪಾಠಗಳಿರುವುದರ ಉದ್ದೇಶ__________
   ಅ. ಗದ್ಯ, ಪದ್ಯ ಮತ್ತು ನಾಟಕಗಳ ಸ್ವರೂಪ ತಿಳಿಯುವುದು.
   ಬ. ಸ್ವತಂತ್ರವಾಗಿ ಗ್ರಹಿಸುವ ಸಾಮರ್ಥ್ಯ ಮತ್ತು ವಾಚನ ಶಕ್ತಿ ಬೆಳೆಸುವುದು.
   ಕ. ವಿರಾಮ ಕಾಲವನ್ನು ಸದ್ವಿನಿಯೋಗ ಮಾಡಿಕೊಳ್ಳುವುದು.

4. ಪಠ್ಯಾಧಾರಿತ ಟಿಪ್ಪಣಿ ನೀಡುವುದರಿಂದಾಗುವ ಪ್ರಯೋಜನ __________
   ಅ. ಪೂರ್ವ ಕಥೆ ತಿಳಿಯುವುದು.
   ಬ. ಆಕರ ಆಕೃತಿಯ ವಿವರಗಳು ತಿಳಿಯುವವು.
   ಕ. ಹೊಸ ಪದ. ಪದಾರ್ಥ, ಪಾತ್ರ, ಸ್ಥಳ, ಘಟನೆಗಳ ಮಾಹಿತಿ ದೊರಕುವುದು.

### 3.3.4. ಸಾರಾಂಶೀಸೋಣ

- ಪಾಠ ಪ್ರಣಾಳಿಕೆ ಸೂಚಿಸುವ ವಿಷಯ / ಪಠ್ಯಾಂಶ ಆಧರಿಸಿ ತರಗತಿ ಬೋಧನೆಗೆ ಮತ್ತು ವಿದ್ಯಾರ್ಥಿಗಳ ಕಲಿಕೆಗೆ ಅಗತ್ಯವಾದ ಸಾಮಗ್ರಿಗಳನ್ನು ಎಚ್ಚರಿಕೆಯಿಂದ ತಯಾರಿಸಿದ ಪುಸ್ತಕವೇ ಪಠ್ಯಪುಸ್ತಕ.
- ಪಠ್ಯ ಪುಸ್ತಕ ಪರಿಕಲ್ಪನೆ ಪ್ರಾಚೀನ ಗ್ರೀಸ್‌ನಲ್ಲಿ ಇತ್ತು.
- ಭಾಷಾ ಪಠ್ಯಪುಸ್ತಕಗಳು ಸಾಹಿತ್ಯ ಜ್ಞಾನ ಗ್ರಹಿಕೆ ಮತ್ತು ಅಭಿವ್ಯಕ್ತಿ ಕೌಶಲ್ಯಗಳು ವಿಕಾಸಕ್ಕೆ ಆಧಾರವಾಗಿದೆ.
- ಪಠ್ಯಪುಸ್ತಕ ರಚನೆಯು ಭಾಷಾ ಬೋಧನೆಯ ಗುರಿಗಳು, ಪಠ್ಯಾಂಶ ಅಥವಾ ಸಾಹಿತ್ಯ ವಿವರ, ಬೋಧನಾ ಕಲಿಕೆಯ ಉಪಕ್ರಮ ಮತ್ತು ಮೌಲ್ಯಮಾಪನ ಎಂಬ ನಾಲ್ಕು ಆಯಾಮಗಳನ್ನು ಹೊಂದಿರುತ್ತದೆ.
- ಕನ್ನಡ ಭಾಷಾ ಪಠ್ಯಪುಸ್ತಕಗಳು 2005ರ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟನ್ನು ಅನುಸರಿಸಿ ರಚನೆಯಾಗಿವೆ.
- ಪಠ್ಯಪುಸ್ತಕ ರೂಪಿಸುವಾಗ ಪಠ್ಯಪುಸ್ತಕ ರಚನೆಯ ತತ್ವಗಳನ್ನು ಗಮನಿಸಬೇಕು.
- ಭಾಷಾ ಪಠ್ಯಪುಸ್ತಕ ಸ್ವರೂಪವನ್ನು ಬಾಹ್ಯ ಲಕ್ಷಣಗಳು ಮತ್ತು ಆಂತರಿಕ ಲಕ್ಷಣಗಳೆಂದು ಗುರುತಿಸಬಹುದು. ಆಂತರಿಕ ಲಕ್ಷಣಗಳು ಪ್ರತಿ ಪಠ್ಯದ ಆಯ್ಕೆ, ಅವುಗಳ ಶ್ರೇಣೀಕರಣ, ಪ್ರಸ್ತುತೀಕರಣ, ವಿಚಾರದ ಆಯ್ಕೆ, ಒಟ್ಟು ಪಠ್ಯಗಳ ಆಯ್ಕೆ, ಅವುಗಳ ಶ್ರೇಣೀಕರಣ, ಅಭ್ಯಾಸಗಳು ಈ ಎಲ್ಲ ಅಂಶಗಳನ್ನು ಗುರುತಿಸಿಕೊಳ್ಳಬೇಕು.

### 3.3.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1 ಮತ್ತು 2

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

ಸರಿ ಉತ್ತರಗಳು: 1 ಮತ್ತು 5

ತಪ್ಪು ಉತ್ತರಗಳು: 2, 3 ಮತ್ತು 4

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ - 2**

1. ಬ – ಚಿಂತನೆ ಮತ್ತು ಅಧ್ಯಯನ
2. ಕ – ಶಿಕ್ಷಕರಿಗೆ
3. ಬ – ಸ್ವತಂತ್ರ ಗ್ರಹಿಕೆ – ವಾಚನಾಸಕ್ತಿ
4. ಕ – ಪದ, ಪಾತ್ರ, ಘಟನೆ, ಸ್ಥಳ ಇತ್ಯಾದಿ ಮಾಹಿತಿ

### 3.3.6. ಘಟಕಾಂತ್ಯ ಅಭ್ಯಾಸಗಳು

1. ಭಾಷಾ ಪಠ್ಯಪುಸ್ತಕ ರಚನಾ ತತ್ವಗಳನ್ನು ಪಟ್ಟಿಮಾಡಿರಿ.
2. ಕನ್ನಡ ಭಾಷಾ ಪಠ್ಯಪುಸ್ತಕಗಳ ಸ್ವರೂಪವನ್ನು ವಿವರಿಸಿ.
3. ಕನ್ನಡ ಭಾಷಾ ಪಠ್ಯಪುಸ್ತಕದ ಆಂತರಿಕ ಗುಣಕ್ಷಣಗಳನ್ನು ವಿವರಿಸಿ.

### 3.3.7. ಪರಾಮರ್ಶನ ಸೂಚಿ


1. ಕನ್ನಡ ಬೋಧನಾ ಸಂಪದ: ಡಿ.ಎಸ್.ಇ.ಆರ್.ಟಿ. ಬೆಂಗಳೂರು

2. ಡಾ. ಮಹಾಬಲೇಶ್ವರರಾವ್: ಪ್ರೌಢಶಾಲೆಯಲ್ಲಿ ಕನ್ನಡ ಬೋಧನೆ, ನವಕರ್ನಾಟಕ ಪ್ರಕಾಶನ
3. ಉಮಾದೇವಿ ಕೆ.ಆರ್.: ವಿಷಯಾಧಾರಿತ ಕನ್ನಡ ಭಾಷಾ ಬೋಧನೆ 2005 ಬೆಂಗಳೂರು, ಜ್ಞಾನ ಈಪಿಕಾ ಪ್ರಕಾಶನ, ಬೆಂಗಳೂರು
4. ಡಾ. ಕೊಂಗವಾಡ ಎನ್.ಬಿ.: ಕನ್ನಡ ಬೋಧನೆ(2005), ವಿದ್ಯಾನಿಧಿ ಪ್ರಕಾಶನ, ಗದಗ
5. https://www.edb.gov.HK>selection (text book selection criteria-edb)
6. https://www.researchgate.net>3282 (what makes a good language text book
7. https://www.deccanherald.com
8. www.for tell.organization>content>desigivingforeignlanguage text book-parthasarathy
9. https://www.professorjacjrichards.com>Pdf
10. https://www.rajeevelt.com (role of text book in language teaching and learning-school education
11. https://www.umalusi.org.za(PDF) effective use of text book in class room.

## ಬ್ಲಾಕ್ 3 : ಕನ್ನಡ ಪಠ್ಯಕ್ರಮ ಮತ್ತು ಪಠ್ಯೇತರ ಚಟುವಟಿಕೆಗಳು

## ಘಟಕ 4 : ಪಠ್ಯ ಪುಸ್ತಕಗಳ ವಿಮರ್ಶೆ, ವಿಧಾನ

**ಘಟಕದ ರಚನೆ**


3.4.1. ಕಲಿಕೆಯ ಉದ್ದೇಶಗಳು

3.4.2. ಪೀಠಿಕೆ

3.4.3. ಕಲಿಕೆಯ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

3.4.3.1. ಪಠ್ಯಪುಸ್ತಕಗಳ ವಿಮರ್ಶೆಯ ಅಗತ್ಯ ಮತ್ತು ಮಹತ್ವ

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1

3.4.3.2. ಪಠ್ಯಪುಸ್ತಕ ವಿಮರ್ಶೆಯ ವಿಧಾನ / ರೂಪುರೇಖೆ

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2

3.4.4. ಸಾರಾಂಶಿಸೋಣ

3.4.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು - 1 ಮತ್ತು 2

3.4.6. ಘಟಕಾಂತ್ಯ ಅಭ್ಯಾಸಗಳು

3.4.7. ಪರಾಮರ್ಶನ ಸೂಚಿ


### 3.4.1. ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿ ಶಿಕ್ಷಕ ಶಿಕ್ಷಕಿಯರು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು;

- ಕನ್ನಡ ಭಾಷಾ ಪಠ್ಯಪುಸ್ತಕ ರಚನೆಯ ಲಕ್ಷಣ ( ಮುಖ್ಯವಾಗಿ ಆಂತರಿಕ ) ಗಳನ್ನು ಗುರುತಿಸುವರು;
- ಭಾಷಾ ಪಠ್ಯಪುಸ್ತಕ ವಿಮರ್ಶೆಯ ಅಗತ್ಯವನ್ನು (ಶಿಕ್ಷಕ ಮತ್ತು ವಿದ್ಯಾರ್ಥಿಗಳ ದೃಷ್ಟಿಯಲ್ಲಿ) ಸ್ಪಷ್ಟವಾಗಿ ವಿವರಿಸುವರು;
- ಪಠ್ಯಪುಸ್ತಕ ವಿಮರ್ಶೆಯ ಪ್ರಕ್ರಿಯೆಯಲ್ಲಿ ಅನುಸರಿಸುವ ಹಂತಗಳನ್ನು ವಿವರಿಸುವರು; ಮತ್ತು
- ಭಾಷಾ ಪಠ್ಯ ಪುಸ್ತಕವನ್ನು ಕ್ರಮಬದ್ಧವಾಗಿ ವಿಮರ್ಶಿಸುವರು.

### 3.4.2. ಪೀಠಿಕೆ

ಪಠ್ಯಕ್ರಮವನ್ನು ಕಾರ್ಯರೂಪಕ್ಕೆ ತರುವಲ್ಲಿ ಪಠ್ಯಪುಸ್ತಕಗಳು ಅತ್ಯಗತ್ಯ ಸಾಧನ ಎಂದು ನೀವು ತಿಳಿದಿರುವಿರಿ. ಆದ್ದರಿಂದ ಪಠ್ಯಪುಸ್ತಕದ ಪಠ್ಯಾಂಶ ಮತ್ತು ಪಠ್ಯಾಂಶ ರಚನೆಯ ಕ್ರಮ ಎರಡೂ ಮುಖ್ಯವಾದ ಪಾತ್ರ ವಹಿಸಿ ಶಿಕ್ಷಣದ ಉದ್ದೇಶಗಳನ್ನು ಸಫಲಗೊಳಿಸುತ್ತವೆ.

ಪಠ್ಯಪುಸ್ತಕ ವಿಮರ್ಶೆ ಅಥವಾ ವಿಶ್ಲೇಷಣೆಯು ಪಠ್ಯಪುಸ್ತಕದ ಉತ್ತಮ ಲಕ್ಷಣಗಳನ್ನು ಗುರುತಿಸುವುದು, ಮಾತ್ರವಲ್ಲದೆ ಮತ್ತು ಅವುಗಳ ಪರಿಣಾಮಕಾರಿತ್ವವನ್ನು ಸಮರ್ಥಿಸುವುದು. ಈ ರೀತಿಯ ವಿಮರ್ಶೆಯು ವಿವಿಧ ಪ್ರಕಾರದಲ್ಲಿರುವ ಸಾಹಿತ್ಯಾಂಶಗಳು(ಪಾಠಗಳು), ಅವುಗಳನ್ನು ಸಂಯೋಜಿಸಿರುವ ರೀತಿ, ಭಾಷಾ ಅಭ್ಯಾಸಗಳನ್ನು ರಚಿಸಿರುವ ರೀತಿ ಎಲ್ಲವನ್ನು ಒರೆಹಚ್ಚಲು ಸಹಾಯವಾಗುವುದು. ಕೊನೆಗೆ ಅಗತ್ಯವಿದ್ದರೆ ಪಠ್ಯಪುಸ್ತಕ ಸುಧಾರಣೆಗೆ ರಚನಾತ್ಮಕ ಸಲಹೆಗಳನ್ನು ನೀಡಲು ಅವಕಾಶಮಾಡಿಕೊಡುವುದು. ಈ ಕಾರಣಕ್ಕಾಗಿ ಅಧ್ಯಾಪಕರು ಪಠ್ಯಪುಸ್ತಕವನ್ನು ವಿಮರ್ಶಿಸುವ ರೀತಿ ಮತ್ತು ಆ ಮಾರ್ಗದಲ್ಲಿ ಗಣನೆಗೆ ತೆಗೆದುಕೊಳ್ಳಬೇಕಾದ ಅಂಶಗಳನ್ನು ತಿಳಿದಿರಬೇಕು. ಈ ವಿಷಯವನ್ನು ಪ್ರಸ್ತುತ ಘಟಕದಲ್ಲಿ ವಿಚಾರ ಮಾಡೋಣ.

### 3.4.3. ಕಲಿಕೆಯ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

**ಪಠ್ಯಪುಸ್ತಕಗಳ ವಿಮರ್ಶೆ**

ಮೊದಲ ಬ್ಲಾಕ್‌ನಲ್ಲಿ ತಿಳಿದುಕೊಂಡ ಕನ್ನಡ ಭಾಷಾ ಬೋಧನೆ (ಪ್ರೌಢಶಾಲೆ 8, 9 ಮತ್ತು 10ನೇ ತರಗತಿಯಲ್ಲಿ)ಯ ಉದ್ದೇಶಗಳನ್ನು ಆ ಉದ್ದೇಶಗಳ ಸಾಧನೆಗೆ ಆಯ್ಕೆ ಮಾಡಬೇಕಾದ ಪಠ್ಯ ಸಾಮಗ್ರಿ ಮತ್ತು ರಾಷ್ಟ್ರೀಯ ಶಿಕ್ಷಣ ನೀತಿಯು ಸೂಚಿಸಿರುವ ಮುಖ್ಯ ಮೌಲ್ಯಗಳನ್ನು ಇಲ್ಲಿ ನೆನಪಿಸಿಕೊಳ್ಳುವುದು ಅಗತ್ಯ. ನಾವು ವಿಚಾರಮಾಡಲು ಹೊರಟಿರುವುದು ಪಠ್ಯಪುಸ್ತಕದ ವಿಮರ್ಶೆಯೇ ಹೊರತು ಪಠ್ಯಪುಸ್ತಕದ ಮೌಲ್ಯಮಾಪನವಲ್ಲ. ಆಂದರೆ ಪಠ್ಯಪುಸ್ತಕ ವಿಮರ್ಶೆಯು ಪಠ್ಯ ಪುಸ್ತಕದಲ್ಲಿ ಏನಿವೆ ಎಂಬುದರ ವಿವರಣಾತ್ಮಕ ವಿಶ್ಲೇಷಣೆ ಹೊರತು ಮೌಲ್ಯಮಾಪನವಲ್ಲ. ಇದು 'ಪಠ್ಯಪುಸ್ತಕದಲ್ಲಿ' ಏನೇನು ಅಂಶಗಳು ಇವೆ ಎಂಬುದರ ವಸ್ತುನಿಷ್ಠ ವಿವರಣೆಯಾಗಿರುತ್ತದೆ. ಅಂದರೆ ಗದ್ಯದ ವಿವಿಧ ಪ್ರಕಾರಗಳ ಪಾಠಗಳು – ಪದ್ಯದ ವಿವಿಧ ಪ್ರಕಾರದ ಪಾಠಗಳು, ವ್ಯಾಕರಣ, ಛಂದಸ್ಸು, ಅಲಂಕಾರ ಸಂಬಂಧಿ ಪಠ್ಯಾಂಶಗಳಿವೆಯೇ, ಶಾಸ್ತ್ರ ಸಂಬಂಧಿ ಅಂಶಗಳು ಸಾಕಷ್ಟು ವಿವರಣೆಗಳನ್ನು ಹೊಂದಿವೆಯೇ ಅಥವಾ ಅಡಕಗೊಳಿಸಲಾಗಿದೆಯೋ ಎಂಬುದನ್ನು ತಿಳಿಯುವುದು ಪಠ್ಯಪುಸ್ತಕ ವಿಮರ್ಶೆಯಲ್ಲಿ ಕೈಗೊಳ್ಳುವ ಕಾರ್ಯವಾಗಿದೆ. (ಪಠ್ಯಪುಸ್ತಕ ವಿಮರ್ಶೆ ಮುಂದೆ ಪಠ್ಯಪುಸ್ತಕ ಮೌಲ್ಯಮಾಪನಕ್ಕೆ ಆಧಾರವಾಗಲೂಬಹುದು)

ಸಾಮಾನ್ಯವಾಗಿ ಭಾಷಾ ಪಠ್ಯಪುಸ್ತಕ ವಿಮರ್ಶೆಯನ್ನು ಉತ್ತಮ ಭಾಷಾ ಪಠ್ಯಪುಸ್ತಕದ ಮಾನದಂಡಗಳನ್ನು (criteria) ಆಧರಿಸಿ ಕೈಗೊಳ್ಳಲಾಗುವುದು.

#### 3.4.3.1. ಪಠ್ಯಪುಸ್ತಕಗಳ ವಿಮರ್ಶೆಯ ಅಗತ್ಯ ಮತ್ತು ಮಹತ್ವ

ನೀವು ಹಿಂದಿನ ಘಟಕದಲ್ಲಿ ಭಾಷಾ ಪಠ್ಯ ಪುಸ್ತಕಗಳ ಸ್ವರೂಪ ಮತ್ತು ಅವುಗಳ ಮಹತ್ವವನ್ನು ತಿಳಿದಿದ್ದೀರಿ. ರಾಜ್ಯ ಸರ್ಕಾರದ ಶಿಕ್ಷಣ ಇಲಾಖೆಯ ನೇತೃತ್ವದಲ್ಲಿ ಪಠ್ಯಪುಸ್ತಕ ರಚನಾ ಸಮಿತಿ ರೂಪುಗೊಳ್ಳುವುದು. ಅನುಭವಿ ಶಿಕ್ಷಕರ ತಂಡಗಳು ಕಲೆತು ಕಾರ್ಯಾಗಾರ ನಡೆಸಿ ಆ ಮೂಲಕ ಪಠ್ಯಪುಸ್ತಕಗಳನ್ನು ರಚಿಸುವರು. ಕಳೆದ ಮೂರು ದಶಕಗಳಿಂದ ಪಠ್ಯಪುಸ್ತಕಗಳನ್ನು ಸಾರ್ವತ್ರಿಕವಾಗಿ ಬಳಕೆಗೆ ತರುವ ಮುನ್ನ ಕ್ಷೇತ್ರಪರೀಕ್ಷೆ (tryout)ಗೆ ಒಳಪಡಿಸುತ್ತಾರೆ ಎಂಬುದನ್ನು ನೀವು ಗಮನಿಸಬೇಕು. ಆದಾಗ್ಯೂ ಎಲ್ಲಾ ರೀತಿಯಿಂದಲೂ ಮಾದರಿ ಎನಿಸಿಕೊಳ್ಳುವ ಪಠ್ಯಪುಸ್ತಕಗಳಿರುವುದು ಕಷ್ಟಸಾಧ್ಯ. ಪಠ್ಯಪುಸ್ತಕಗಳಲ್ಲಿ ಕುಂದುಕೊರತೆಗಳು ನುಸುಳಿದ್ದರೆ, ಪತ್ತೆ ಮಾಡಲು ಮತ್ತು ಸುಧಾರಿಸಲು ಪಠ್ಯಪುಸ್ತಕ ವಿಮರ್ಶೆ ಸಹಾಯ ಮಾಡುತ್ತದೆ.
ಪಠ್ಯಪುಸ್ತಕ ವಿಮರ್ಶೆಯ ಅಗತ್ಯವನ್ನು ಈ ರೀತಿ ಸೂಚಿಸಬಹುದು.




ಪಠ್ಯ ಒದಗಿಸುವ ಸಾಮಗ್ರಿ ಏನು? ಅದು ಯಾವ ಸ್ವರೂಪದಲ್ಲಿದೆ? ಅದರ ಆಶಯವೇನು? ಅದರ ಕಲಿಕೆಗೆ ಯಾವ ಸಹಾಯಕಗಳಿವೆ? ಎಂಬೆಲ್ಲ ಅಂಶಗಳನ್ನು ನಿರ್ಧರಿಸಲು ಶಿಕ್ಷಕರಿಗೆ ಪಠ್ಯಪುಸ್ತಕ ವಿಮರ್ಶೆಯು ಸಹಾಯಮಾಡುವುದು. ಭಿನ್ನ ಸಾಮರ್ಥ್ಯದ ವಿದ್ಯಾರ್ಥಿಗಳಿಗೆ ಪಠ್ಯವನ್ನು ಎಟುಕುವಂತೆ ಮಾಡಲು ಪಠ್ಯದಿಂದಾಚೆಗೆ ಕೈಗೊಳ್ಳಬಹುದಾದ ಚಟುವಟಿಕೆಗಳ ಬಗ್ಗೆ ಫಲಪ್ರದವಾಗಿ ಚಿಂತಿಸಲು ವಿಮರ್ಶೆ ಸಹಾಯವಾಗುವುದು. ಮತ್ತೊಂದು ದೃಷ್ಟಿಯಲ್ಲಿ ಪಠ್ಯಪುಸ್ತಕ ಸೂಚಿಸುವ ಚಟುವಟಿಕೆಗಳನ್ನು ಕ್ರಿಯಾರೂಪಕ್ಕೆ ತರುವಲ್ಲಿ ಇರುವ ಸಾಧ್ಯಾಸಾಧ್ಯತೆಗಳ ಬಗ್ಗೆ ಇದು ಬೆಳಕು ಚೆಲ್ಲಬಹುದು. ಪಠ್ಯಕ್ರಮದ ಆಶೋತ್ತರಗಳನ್ನು ಈಡೇರಿಸಲು ಪಠ್ಯಪುಸ್ತಕದ ಪಠ್ಯಾಂಶ ಮತ್ತು ಅದರ ಸಂರಚನೆ ಹಾಗೂ ಸೂಚಿತ ಚಟುವಟಿಕೆಗಳು ಸಾಧನಗಳೆಂಬುದನ್ನು ನಾವಿಲ್ಲಿ ಸ್ಮರಿಸಬೇಕು. ಅವುಗಳೊಂದಿಗೆ ವಿದ್ಯಾರ್ಥಿಗಳ ಕಲಿಕೆಯಲ್ಲಿ ಧನಾತ್ಮಕ ಪ್ರಭಾವ ಬೀರುವ ಇತರ ಅಂಶಗಳನ್ನು ಗುರುತಿಸಿಕೊಳ್ಳಲು ಪಠ್ಯಪುಸ್ತಕ ವಿಮರ್ಶೆ ನೆರವಾಗುವುದು. ಶಿಕ್ಷಕರು ಕಲೆತು ವಿಮರ್ಶಿಸಿದಾಗ ಪಾಠಾಂಶವನ್ನು ಯಾವ ರೀತಿಯಲ್ಲಿ ಪ್ರಸ್ತಾಪಿಸಲಾಗಿದೆ ಎಂಬುದನ್ನು ಆಳವಾಗಿ ವಿಶ್ಲೇಷಿಸಲೂ ಸಾಧ್ಯವಾಗಬಹುದು.

- ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ ಬಳಸುವ ಬಗ್ಗೆ ವ್ಯಕ್ತೀಕರಿಸಿದ ಬೋಧನೆ (individualized instruction) ನೀಡಲು ಪಠ್ಯಪುಸ್ತಕ ವಿಮರ್ಶೆಯು ವಿಶೇಷ ಸಲಹೆಗಳನ್ನು ಒದಗಿಸುವುದು;
- ಪಠ್ಯಪುಸ್ತಕದ ಪಾಠಗಳ ವಿನ್ಯಾಸವನ್ನು ಮತ್ತು ಪಾಠಾಂಶ (text material) ಗಳನ್ನು ವಿಮರ್ಶಾತ್ಮಕವಾಗಿ ನೀಡಿದ್ದೇ ಆದರೆ ವಿದ್ಯಾರ್ಥಿಗಳಿಗೆ ಪಠ್ಯಾಂಶವು ಹೆಚ್ಚು ಅರ್ಥಪೂರ್ಣವಾಗಿ ಉಪಯುಕ್ತವೆನಿಸಬಹುದು.

- ಭಾಷಾ ಅಭ್ಯಾಸಗಳನ್ನು ವಿಶ್ಲೇಷಿಸಿದಾಗ ವಿದ್ಯಾರ್ಥಿಗಳು ಹೆಚ್ಚು ಕ್ರಿಯಾತ್ಮಕವಾಗಿ ಮತ್ತು ಸೃಜನಶೀಲವಾಗಿ ಕಲಿಕೆಯಲ್ಲಿ ಪಾಲ್ಗೊಳ್ಳಬಹುದು.
- ಭಾಷಾಪಠ್ಯಪುಸ್ತಕ ವಿಮರ್ಶೆ ಕೈಗೊಂಡಾಗ 'ಹೆಚ್ಚಿನ ಓದು' ವಿಭಾಗದಲ್ಲಿ ಸೂಚಿಸಿರುವ ಪುಸ್ತಕಗಳ ಲಭ್ಯತೆ ಮತ್ತು ಕೈಗೊಳ್ಳಬೇಕಾದ ಚಟುವಟಿಕೆಗಳ ನಿಖರತೆ, ನಿರ್ದಿಷ್ಟತೆ ಮತ್ತು ಸಾಧ್ಯತೆಗಳ ಬಗ್ಗೆ ಚರ್ಚಿಸಿ ಸಾಧನೆಯ ಕ್ರಮಗಳನ್ನು ಯೋಜನೆ(project)ಗಳಾಗಿ ಕೈಗೊಳ್ಳಬಹುದು;
- ಪಠ್ಯಪುಸ್ತಕದ ಯಾವ ಚಟುವಟಿಕೆಗಳು ವ್ಯಾವಹಾರಿಕ ಕನ್ನಡ, ಮಾತುಗಾರಿಕೆ, ಬರಹ ಮತ್ತು ಕೌಶಲಗಳನ್ನು ಬೆಳೆಸಲು ಸಹಾಯಕವಾಗುತ್ತದೆ ಎಂಬುದನ್ನು ಗುರುತಿಸಿಕೊಳ್ಳುವುದು ವಿಮರ್ಶೆಯಿಂದ ಸಾಧ್ಯ;
- ಪಾಠಗಳ ಪೂರ್ವಕಥೆಯ ವಿವರಗಳು ಸಾಕಷ್ಟು ಇವೆಯೆ, ಇನ್ನೂ ಹೆಚ್ಚಿನ ವಿವರ ಕೊಡಬೇಕಾದ ಅಗತ್ಯವಿದೆಯೆ, ಎಂದೂ ಸಮೀಕ್ಷಿಸಬಹುದು;
- ಹಳೆಗನ್ನಡ – ನಡುಗನ್ನಡ ಪಾಠಗಳನ್ನು ವಿದ್ಯಾರ್ಥಿಗಳು ಸ್ವತಂತ್ರವಾಗಿ ಓದಲು ಅಗತ್ಯ ಸಾಮಗ್ರಿ ಅಥವಾ ಚಟುವಟಿಕೆಗಳನ್ನು ಒದಗಿಸಲಾಗಿದೆಯೆಂದು ದೃಢಪಡಿಸಿಕೊಳ್ಳಬಹುದು.

ಒಟ್ಟಾರೆ ಪಠ್ಯ ಪುಸ್ತಕ ವಿಮರ್ಶೆಯ ಮಹತ್ವವನ್ನು ಸಂಗ್ರಹವಾಗಿ ಹೀಗೆ ಪಟ್ಟಿಮಾಡಬಹುದು:

- ಪಠ್ಯಪುಸ್ತಕದ ಗುರಿಗಳನ್ನು ಮತ್ತು ಉದ್ದೇಶಗಳನ್ನು ಪಠ್ಯಕ್ರಮದಲ್ಲಿ ಸೂಚಿತವಾದ ಗುರಿಗಳೊಂದಿಗೆ ಹೋಲಿಸಲು ಸಹಾಯಮಾಡುವುದು;
- ಪಾಠಗಳ ಮೂಲಕ ಪಠ್ಯಪುಸ್ತಕದ ಮಟ್ಟ ಮತ್ತು ನಿರೀಕ್ಷೆಗಳನ್ನು ಗುರುತಿಸಿಕೊಳ್ಳಲು ಸಹಾಯಮಾಡುವುದು;
- ಪ್ರೌಢಶಾಲಾ ಹಂತದ ಭಾಷಾ ಕಲಿಕೆಯಲ್ಲಿ ಅತ್ಯಂತ ಮುಖ್ಯವಾದ ಅಧ್ಯಯನ ಮತ್ತು ಸಾಹಿತ್ಯ ಕೌಶಲ ವಿಕಾಸಕ್ಕೆ ನೀಡಿರುವ ಪ್ರಾಮುಖ್ಯತೆ ತೃಪ್ತಿಕರವಾಗಿದೆಯೇ ಎಂಬುದನ್ನು ಕಂಡುಕೊಳ್ಳಲು ಸಹಾಯಮಾಡುವುದು;
- ಪಠ್ಯಪುಸ್ತಕದ ಪಠ್ಯಾಂಶಗಳು ಕನ್ನಡ ಸಾಹಿತ್ಯದ ಪ್ರಾತಿನಿಧಿಕ ಪರಿಚಯಕ್ಕೆ ಸಾಕಷ್ಟಿದೆಯೇ ಎಂದು ಗುರುತಿಸಲು ಸಹಕಾರಿಯಾಗುವುದು;
- ಕೌಶಲಗಳೊಂದಿಗೆ ಕ್ರಿಯಾತ್ಮಕ ಮತ್ತು ಶಾಸ್ತ್ರೀಯ ವ್ಯಾಕರಣ, ಜ್ಞಾನ, ಸೌಂದರ್ಯ ಪ್ರಜ್ಞೆ ಮತ್ತು ಪ್ರಶಂಸಾ ಮನೋಭಾವ, ಮೌಲ್ಯ ಸಂವರ್ಧನೆಗಳಿಗೆ ಅವಕಾಶವಿರುವ ಪಠ್ಯಾಂಶ (topic)ಗಳು ಪರಿಗಣಿತವಾಗಿವೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಸಹಾಯಮಾಡುವುದು;
- ಪಾಠಗಳ ಸಂಖ್ಯೆ ಮತ್ತು ವ್ಯಾಪ್ತಿ ತರಗತಿಯ ಮಟ್ಟಕ್ಕಿವೆಯೇ ಮತ್ತು ಕಲಿಕೆಗೆ ಬೇಕಾಗಿರುವ ಕಾಲ ವ್ಯಾಪ್ತಿಗಳನ್ನು ಪರಿಗಣಿಸಲಾಗಿವೆಯೇ ಎಂದು ಕಂಡುಕೊಳ್ಳಲು ಸಹಕಾರಿಯಾಗುವುದು;
- ರಚನಾತ್ಮಕ ವಿಧಾನದ ಅಳವಡಿಕೆ, ಅದಕ್ಕೆ ಅಗತ್ಯವಾದ ಕಲಿಕಾ ಅನುಭವಗಳಿಗೆ ಮಾರ್ಗದರ್ಶನ, ಗುಣಮಟ್ಟದ ಚಟುವಟಿಕೆಗಳ ಸೂಚನೆ ಇವು ಸೂಕ್ತವಾಗಿವೆಯೇ ಎಂಬುದನ್ನು ಗುರುತಿಸಿಕೊಳ್ಳಲು ಪಠ್ಯಪುಸ್ತಕ ವಿಮರ್ಶೆ ಅನುವು ಮಾಡಿಕೊಡುವುದು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

1. ಭಾಷಾ ಪಠ್ಯ ಪುಸ್ತಕ ವಿಮರ್ಶೆಯು ಏಕೆ ಅಗತ್ಯ? ತಲಾ ಮೂರು ಸಮರ್ಥನೆಯನ್ನು ನೀಡಿರಿ.

1. ಶಿಕ್ಷಕರ ದೃಷ್ಟಿಯಿಂದ

-------------------------

-------------------------

2. ವಿದ್ಯಾರ್ಥಿಗಳ ದೃಷ್ಟಿಯಿಂದ

------------------------

------------------------

**3.4.3.2. ಪಠ್ಯ ಪುಸ್ತಕ ವಿಮರ್ಶೆಯ ವಿಧಾನ / ರೂಪುರೇಖೆ**

ಇದುವರೆಗೂ ನಾವು ತಿಳಿದುಕೊಂಡ ಭಾಷಾ ಪಠ್ಯಪುಸ್ತಕದ ಗುಣಲಕ್ಷಣಗಳನ್ನು ಆಧಾರವಾಗಿಟ್ಟುಕೊಂಡು ವಿಮರ್ಶಿಸಲು ಸಹಾಯವಾಗುವಂತೆ ಒಂದು ರೂಪುರೇಖೆಯನ್ನು ಸ್ಥೂಲವಾಗಿ ಈ ಕೆಳಗಿನಂತೆ ಪಟ್ಟಿ ಮಾಡಿಕೊಳ್ಳಬಹುದು.

**1. ಪಠ್ಯಪುಸ್ತಕದ ಬಾಹ್ಯಲಕ್ಷಣಗಳು**

- ಪುಸ್ತಕದ ಆಕಾರ – ಗಾತ್ರ ಬಳಕೆಗೆ ಸುಲಭವಾಗಿದೆಯೆ?
- ರಕ್ಷಾಕವಚ – ಆಕರ್ಷಕವೂ ಬಾಳಿಕೆ ಬರುವಂತಹದೂ ಆಗಿದೆಯೇ?
- ಪುಸ್ತಕ ಬಂಧ – ಹೊಲಿಗೆ ಭದ್ರವಾಗಿದೆಯೇ?
- ರಕ್ಷಾ ಕವಚದಲ್ಲಿ – ಶೀರ್ಷಿಕೆ, ತರಗತಿಯ ಉಲ್ಲೇಖ, ಪ್ರಕಾಶಕರು ಮುದ್ರಣ ಇತ್ಯಾದಿ ವಿವರಗಳಿವೆಯೇ?
- ಮುದ್ರಣ ಸ್ವರೂಪ – ಅಕ್ಷರಗಳ ಗಾತ್ರ, ಆಕಾರ, ಅಂದ, ಮುದ್ರಣ, ವಿನ್ಯಾಸ ಸಮರ್ಪಕವಾಗಿದೆಯೇ?
- ಮುದ್ರಣ ದೋಷಗಳಿವೆಯೆ? ಇದ್ದರೆ ದೋಷಗಳ ತಿದ್ದುಪಡಿಗಳನ್ನು ನೀಡಲಾಗಿದೆಯೇ?
- ಪುಸ್ತಕವನ್ನು ಉಚಿತವಾಗಿ ನೀಡಲಾಗುತ್ತದೆಯೇ? ಇಲ್ಲವಾದರೆ ಬೆಲೆ ಕೈಗೆಟುಕುವಂತಿದೆಯೇ?
- ಪಠ್ಯ ಪುಸ್ತಕ ರಚನಾ ಸಮಿತಿ ಮತ್ತು ಪರಿಶೀಲನ ಸಮಿತಿ ಸದಸ್ಯರ ವಿವರಗಳಿವೆಯೇ?
- ಮಾರ್ಗದರ್ಶನವನ್ನು ಪೀಠಿಕಾ ಭಾಗದಲ್ಲಿ ನೀಡಲಾಗಿದೆಯೇ?

**2. ಪಠ್ಯ ಪುಸ್ತಕದ ಸಾಮಾನ್ಯ ಸ್ವರೂಪ**

- ಶೀರ್ಷಿಕೆ– ಆಕರ್ಷಕವಾಗಿದೆಯೇ? ಅರ್ಥಪೂರ್ಣವಾಗಿ ಮತ್ತು ಔಚಿತ್ಯ ಪೂರ್ಣವಾಗಿದೆಯೇ?
- ಯಾವ ಆಧಾರದ ಮೇಲೆ ಯಾವ ಉದ್ದೇಶಗಳ ಸಫಲತೆಗೆ ರಚನೆಯಾಗಿದೆ? ಎಂಬ ವಿವರಗಳಿವೆಯೆ? ನಿರ್ದಿಷ್ಟ ಸೂಚನೆಗಳಿವೆಯೇ?
- ಬೋಧಕರಿಗೆ ಅನುಕೂಲವಾಗುವಂತೆ ಪಠ್ಯಪುಸ್ತಕ ಸಮಿತಿಯ ಅಧ್ಯಕ್ಷರು ಸೂಚನೆ–ಆಶಯಗಳನ್ನು ನೀಡಿದ್ದಾರೆಯೆ?
- ಪಾಠ ಸೂಚಿ– ಪಾಠಾನುಕ್ರಮಣಿಕೆ, ಪುಟ ಸಂಖ್ಯೆ ನೀಡಲಾಗಿದೆಯೇ?
- ಚಿತ್ರಗಳು ಸಮರ್ಪಕವಾಗಿವೆಯೇ? ಸೂಕ್ತವಾಗಿವೆಯೇ? ಅನಿವಾರ್ಯವಾಗಿವೆಯೇ?
- ಪಾರಿಭಾಷಿಕ ಪದ – ಪದ ಕೋಶ ನೀಡಲಾಗಿದೆಯೇ?
- ಸಂಕ್ಷೇಪಾಕ್ಷರಗಳ ಬಳಕೆಯಾಗಿದ್ದಲ್ಲಿ– ಆ ಸೂಚಿಯ ಸೂಕ್ತ ವಿವರಣೆ ನೀಡಲಾಗಿದೆಯೇ?

**3. ಭಾಷಾ ಪಠ್ಯಪುಸ್ತಕದ ಪಠ್ಯ ವಿಷಯವಿಶ್ಲೇಷಣೆ**

- ಪ್ರೌಢಶಾಲಾ ಶಿಕ್ಷಣದ ಗುರಿಗಳ ಸಾಧನೆಗೆ ಪೂರಕವೆ?
- ಪಠ್ಯ ಸೂಚಿ ಅಥವಾ ಪಠ್ಯವಸ್ತುವಿನ (syllabus) ಸ್ವರೂಪಕ್ಕೆ ಅನುಗುಣವಾಗಿದೆಯೆ?

i) ಪಠ್ಯಾಂಶ / ಪಠ್ಯವಿಷಯ(content) ವ್ಯವಸ್ಥೆಯು

- ಸಾಹಿತ್ಯ ಪ್ರಕಾರಗಳ ವೈವಿಧ್ಯವನ್ನು ಪ್ರಾತಿನಿಧಿಕವಾಗಿ ಪರಿಚಯಿಸುತ್ತವೆಯೆ?
  (ಪ್ರಬಂಧ, ವ್ಯಕ್ತಿ ಚಿತ್ರ, ಕಥೆ, ನಾಟಕ ಇತ್ಯಾದಿ)
- ಪದ್ಯಪ್ರಕಾರಗಳ ವೈವಿಧ್ಯ ಪರಿಚಯಿಸುವ ಪಾಠಗಳಿವೆಯೆ?
  (ಕಂದ, ಚಂಪೂ, ರಗಳೆ, ಷಟ್ಪದಿ, ತ್ರಿಪದಿ, ಭಾವಗೀತೆ)
- ಭಾಷಾ ವೈವಿಧ್ಯ ಪರಿಚಯಿಸುವುದೇ?
  (ಹಳೆಗನ್ನಡ, ನಡುಗನ್ನಡ, ಹೊಸಗನ್ನಡ ರೂಪಗಳ ಪರಿಚಯಕ್ಕೆ ಗಮನಿಸಲಾಗಿದೆಯೇ?)
- ಹೊಸಗನ್ನಡ ಸಾಹಿತ್ಯದ ಪ್ರಮುಖ ಧಾರೆ ಅಥವಾ ಪಂಥಗಳ ಪರಿಚಯಿಸುವುದೇ?
  (ನವೋದಯ, ನವ್ಯ, ಪ್ರಗತಿಶೀಲ, ದಲಿತ ಬಂಡಾಯ ಅಥವಾ ನವ್ಯೋತ್ತರ ಮಾರ್ಗಗಳ ಸ್ಥೂಲ ಪರಿಚಯ)
- ವಸ್ತು ವೈವಿಧ್ಯವನ್ನು ಗಮನಕ್ಕೆ ತೆಗೆದುಕೊಳ್ಳಲಾಗಿದೆಯೇ?
  (ಪೌರಾಣಿಕ, ಐತಿಹಾಸಿಕ, ವೈಜ್ಞಾನಿಕ, ಸಾಮಾಜಿಕ  ಮತ್ತು ಜಾನಪದ)
- ಪಾಠ ಪ್ರತಿಪಾದನ ಕ್ರಮ ವ್ಯವಸ್ಥಿತವಾಗಿದೆಯೇ?
- ಸಾಹಿತ್ಯ ಚರಿತ್ರೆಯ ಅನುಸಾರ ಪ್ರಾಚೀನದಿಂದ ಆಧುನಿಕ (ಅಥವಾ ಹಳೆಗನ್ನಡದಿಂದ ಹೊಸಗನ್ನಡ)ರ ಸಾಹಿತ್ಯ ಕ್ರಮವನ್ನು ಅನುಸರಿಸಲಾಗಿದೆಯೇ?

**4. ಪಠ್ಯ ವಿಷಯ ನಿರೂಪಣೆಯ ವಿಶ್ಲೇಷಣೆ**

ಇಲ್ಲಿ ಗಮನಿಸಬೇಕಾದ ಅತಿ ಮುಖ್ಯ ಅಂಶವೇನೆಂದರೆ, ಪ್ರಾಥಮಿಕ, ಹಿರಿಯ ಪ್ರಾಥಮಿಕ ಹಂತದ ಭಾಷಾ ಪಠ್ಯಪುಸ್ತಕಗಳಲ್ಲಿ ಪಠ್ಯಪುಸ್ತಕ ಸಮಿತಿಯವರು ರಚಿಸುವ ಕೆಲವು ಪಾಠಗಳು ಇರುತ್ತವೆ. ಆದರೆ ಪ್ರೌಢ ಹಂತದ ಪಠ್ಯಪುಸ್ತಕಗಳಲ್ಲಿ ವಿವಿಧ ಲೇಖಕರು, ಕವಿಗಳು ಬರೆದ ಕನ್ನಡ ಗದ್ಯ–ಪದ್ಯ (ಅನುವಾದಿತವೂ ಆಗಿರಬಹುದು) ಭಾಗಗಳಿಂದ ಆಯ್ದ ಪಾಠಗಳನ್ನು ಅಳವಡಿಸಿಕೊಂಡಿರಲಾಗುತ್ತದೆ. ಈ ಅಂಶವನ್ನು ಗಮನದಲ್ಲಿ ಇಟ್ಟುಕೊಂಡು ಪಠ್ಯಾಂಶ ನಿರೂಪಣೆ ಬಗ್ಗೆ ವಿಮರ್ಶಿಸಬೇಕು.

ಪಠ್ಯಾಂಶ ವಿಷಯದ ನಿರೂಪಣೆಯು ಈ ಕೆಳಗಿನಂತಿದೆಯೇ?

- ವಿದ್ಯಾರ್ಥಿಗಳ ಮಾನಸಿಕ ಮಟ್ಟಕ್ಕೆ ಮತ್ತು ಭಾವನೆಗಳಿಗೆ ಅನುಗುಣವಾಗಿವೆಯೇ?
- ಆಸಕ್ತಿ, ಅಭಿರುಚಿಗಳನ್ನು ಪೋಷಿಸುತ್ತವೆಯೇ?
- ವಿಚಾರ/ ಭಾವನೆಗಳ ನಿರೂಪಣೆಯಲ್ಲಿ ಸ್ಪಷ್ಟತೆ, ಸರಳತೆ ಕಾಣುವುದೇ
- ಪಾಠಗಳು ಆಸಕ್ತಿಯುತವಾಗಿವೆಯೇ?
- ಸಾಹಿತ್ಯಾಸಕ್ತಿ, ಸಾಹಿತ್ಯಾಭಿರುಚಿ, ಸೃಜನಶೀಲತೆಗೆ ಪೂರಕವಾಗಿದೆಯೇ?
- ವೈಯುಕ್ತಿಕ ಭಿನ್ನತೆ, ಪ್ರಾದೇಶಿಕ ಸೊಗಡು, ಸಾಂಸ್ಕೃತಿಕ ಭಿನ್ನತೆಯ ಪರಿಚಯಗಳಿಗೆ ಗಮನ ಕೊಡಲಾಗಿದೆಯೇ?
- ಕನ್ನಡ ಭಾಷಾಶೈಲಿಯ ವೈವಿಧ್ಯವನ್ನು  ಪರಿಚಯಿಸುವುದೇ?
- ವಿದ್ಯಾರ್ಥಿಗಳ ಶಬ್ದಸಂಪತ್ತನ್ನು ಹೆಚ್ಚಿಸಲು ಸಹಾಯಕವಾಗಿದೆಯೇ?
- ಕನ್ನಡ ನಾಡು–ನುಡಿ, ದೇಶದ ವೈವಿಧ್ಯತೆ, ಭಾವೈಕ್ಯತೆ, ಜಾತ್ಯತೀತತೆ ಇವುಗಳಿಗನುಗುಣವಾಗಿ ರೂಪಿತವಾಗಿದೆಯೇ??

- ಇಂದಿನ ಯುಗಕ್ಕೆ ಬೇಕಾದ ವೈಜ್ಞಾನಿಕ ಮನೋಭಾವಗಳನ್ನು ಬೆಳೆಸುತ್ತದೆಯೇ?
- ವಿದ್ಯಾರ್ಥಿಗಳೂ ಸ್ವಪ್ರೇರಿತರಾಗಿ ವಾಚನಾಸಕ್ತಿ ಬೆಳೆಸಿಕೊಳ್ಳಲು ಪ್ರೋತ್ಸಾಹಕವಾಗಿದೆಯೇ?

**5. ಕರ್ತೃ ಮತ್ತು ಕೃತಿ ವಿಚಾರ ಪರಿಚಯ**

- ಪಾಠದೊಡನೆ/ ಕರ್ತೃಗಳ ಭಾವಚಿತ್ರದೊಂದಿಗೆ ಸಾಕಷ್ಟು ಪರಿಚಯ ಮಾಹಿತಿ ಕೊಡಲಾಗಿದೆಯೇ? ಆ ವಿವರಗಳು ಸಮರ್ಪಕವೆ? ಅತಿಮುಖ್ಯ ಮಾಹಿತಿ ಏನಾದರೂ ಬಿಟ್ಟುಹೋಗಿರುವುದೇ?
- ಪ್ರೌಢಶಾಲಾ ಹಂತದಲ್ಲಿ ಪರಿಚಯಿಸಬೇಕಾಗಿದ್ದ ಪ್ರಮುಖ ಕವಿ/ ಲೇಖಕರನ್ನು ತಪ್ಪದೆ ಸೇರಿಸಲಾಗಿದೆಯೇ?
- ಆಯ್ದ ಪಾಠಗಳು ಲೇಖಕರು/ ಕವಿಗಳನ್ನು ಸೂಕ್ತವಾಗಿ ಪ್ರತಿನಿಧಿಸುತ್ತದೆಯೇ?
- ಲೇಖಕರ/ ಕವಿಗಳ ಸಾಹಿತ್ಯಕೃಷಿ/ಸಾಮರ್ಥ್ಯ– ಅವರ ನಿಲುವು ಚಿಂತನೆಗಳ ಬಗ್ಗೆ ಗಮನಿಸಲಾಗಿದೆಯೇ?

**6. ಕಲಿಕೆಯ ಚಟುವಟಿಕೆಗಳು**

- ಪಠ್ಯಾಂಶದ (ಗದ್ಯ–ಪದ್ಯ) ಗ್ರಹಿಕೆಗೆ, ಚಿಂತನೆಗೆ, ಅಭಿವಕ್ತಿಗೆ ಪೋಷಕ ಚಟುವಟಿಕೆಗಳು ಇವೆಯೇ? ಅವು ಸಮರ್ಪಕವಾಗಿವೆಯೇ?
- ಪಾಠ್ಯಾಂತದಲ್ಲಿ ಅಭ್ಯಾಸ ಪ್ರಶ್ನೆಗಳು ಸಾಕಷ್ಟು ಇವೆಯೇ? ಇವುಗಳ ಗುಣಮಟ್ಟ ತೃಪ್ತಿಕರವೇ? ಎಲ್ಲ ರೀತಿಯ ಪ್ರಶ್ನೆಗಳನ್ನು ಅಳವಡಿಸಿಕೊಳ್ಳಲಾಗಿದೆಯೇ? ಈ ಪ್ರಶ್ನೆಗಳು ಉದ್ದೇಶಿತ ಗುರಿ ಸಾಧನೆಯ ಕುರಿತು ಮಾಹಿತಿ ನೀಡಲು ಸಮರ್ಥವಾಗಿವೆಯೇ?
- ಲೇಖನ ಕಲೆಯನ್ನು ಬೆಳೆಸುವ ಅಭ್ಯಾಸ ಚಟುವಟಿಕೆಗಳು ಮತ್ತು ಸೂಕ್ತವಾಗಿವೆಯೇ?
- ವ್ಯಾಕರಣ, ಛಂದಸ್ಸು ಮತ್ತು ಅಲಂಕಾರ ಇನ್ನಿತರ ಸೈದ್ಧಾಂತಿಕ ಭಾಷಾಕಲಿಕೆಗೆ ಹೇಗೆ ಅವಕಾಶ ನೀಡಲಾಗಿವೆ? ಅವು ಪರಿಣಾಮಕಾರಿಯಾಗಿವೆಯೇ?
- ಹಳಗನ್ನಡ, ನಡುಗನ್ನಡ ಪಾಠಗಳಾದಲ್ಲಿ ಪಠ್ಯಸಾರವನ್ನು ಕಲಿಕಾರ್ಥಿಗಳು ಸ್ವತಂತ್ರವಾಗಿ ಗ್ರಹಿಸಲು ಅಗತ್ಯ ಸಹಾಯವನ್ನು ಕಲ್ಪಿಸಲಾಗಿದೆಯೇ?

ಸ್ಥೂಲವಾಗಿ ನೀಡಿರುವ ಈ ಅಂಶಗಳ ಹಿನ್ನೆಲೆಯಲ್ಲಿ ಪಠ್ಯಪುಸ್ತಕವು ಎಷ್ಟರಮಟ್ಟಿಗೆ ಪರಿಣಾಮಕಾರಿಯಾಗಿದೆ ಎಂದು ವಿಮರ್ಶಿಸಬಹುದು. ಹೀಗೆ ವಿಮರ್ಶಿಸುವಾಗ ಪಠ್ಯಪುಸ್ತಕದ ಉತ್ತಮ ಅಂಶಗಳನ್ನು ಬೆಳಕಿಗೆ ತರಬೇಕು, ಕೊರತೆಗಳನ್ನು (ಇದ್ದಲ್ಲಿ) ಪುನಃ ಪುನಃ ಓದಿ, ಚಿಂತಿಸಿ, ಅನುಭವಸ್ಥರೊಡನೆ ಚರ್ಚಿಸಿ, ಸ್ಪಷ್ಟಪಡಿಸಿಕೊಂಡ ನಂತರವೇ ಪ್ರಸ್ತಾಪಿಸಬೇಕು. ಕೊರತೆಗಳನ್ನು ಗುರುತಿಸುವಾಗ ಸಮರ್ಥವಾದ ಪೂರಕ ಆಧಾರಗಳನ್ನು ನೀಡಬೇಕು. ಪೂರ್ಣಪಠ್ಯಪುಸ್ತಕದ ವಿಮರ್ಶೆ ಮಾಡುವ ಮುನ್ನ ಎಲ್ಲ ಪಾಠಗಳನ್ನು ಆಳವಾಗಿ ಅಧ್ಯಯನ ಮಾಡಬೇಕು. ಪರಿಚಿತವಿಲ್ಲದ ಸಾಹಿತ್ಯ–ವಿಚಾರ, ಕೃತಿ, ಲೇಖನ, ಪರಿಕಲ್ಪನೆ, ಪದ ವಿಶೇಷಗಳನ್ನು ಗುರುತಿಸಿಕೊಂಡು ಸಾಕಷ್ಟು ಅಧ್ಯಯನ ಮಾಡಿ ವಿಮರ್ಶೆ ಮಾಡಲು ತೊಡಗಬೇಕು. ಸಲಹೆ ನೀಡುವ ಮುನ್ನ ಹಿಂದಿನ ಪಠ್ಯಪುಸ್ತಕ, ಸಾಧ್ಯವಿದ್ದಲ್ಲಿ ಇತರ ರಾಜ್ಯಗಳ ಭಾಷಾ ಪಠ್ಯ ಪುಸ್ತಕಗಳ ಉತ್ತಮಾಂಶಗಳನ್ನು ಗಮನಿಸಿಕೊಳ್ಳುವುದು ಒಳಿತು. ಕೇಂದ್ರೀಯ ಪಠ್ಯಕ್ರಮದ ಭಾಷಾ ಪಠ್ಯಪುಸ್ತಕಗಳ ಉತ್ತಮ ಮತ್ತು ವಿಶಿಷ್ಟ ಅಂಶಗಳನ್ನು ಗಮನಿಸಿಕೊಳ್ಳುವುದರಿಂದ ಪಠ್ಯಪುಸ್ತಕ ವಿಮರ್ಶೆಯು ಹೆಚ್ಚು ಉಪಯುಕ್ತವಾಗುತ್ತದೆ.

**ಪಠ್ಯಪುಸ್ತಕಗಳ ವಿಮರ್ಶೆ – ಒಂದು ಉದಾಹರಣೆ**

ಪಠ್ಯಪುಸ್ತಕ ವಿಮರ್ಶೆಗೆ ಗುರುತಿಸಲಾಗಿರುವ ರೂಪುರೇಖೆಗಳ ಹಿನ್ನೆಲೆಯಲ್ಲಿ ಪ್ರೌಢಶಾಲೆಯ ಒಂದು ಕನ್ನಡ ಪಠ್ಯ ಪುಸ್ತಕವನ್ನು ಸ್ಥೂಲವಾಗಿ ವಿಮರ್ಶಿಸೋಣ. ಆಯ್ದುಕೊಂಡ ಪಠ್ಯಪುಸ್ತಕ; 9ನೇ ತರಗತಿಯ, ಪ್ರಥಮ

ಭಾಷಾ ಕನ್ನಡ ಪಠ್ಯಪುಸ್ತಕ, 'ಸಿರಿಕನ್ನಡ' ಇದು ಕರ್ನಾಟಕ ಸರ್ಕಾರದ ಆಶ್ರಯದಲ್ಲಿ, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ) ದಿಂದ ರಚಿತವಾಗಿದೆ.

**1. ಪಠ್ಯಪುಸ್ತಕ ಬಾಹ್ಯಲಕ್ಷಣಗಳು**

- ಈ ಪಠ್ಯಪುಸ್ತಕವು ಆಯತಾಕಾರದಲ್ಲಿದ್ದು (18.5×24.5 ಸೆಂಟಿಮೀಟರ್) ಅಳತೆಯು ವಿದ್ಯಾರ್ಥಿಗಳು ಎಡ ಮತ್ತು ಬಲಬದಿಯ ಹಾಳೆಗಳನ್ನು ತೆರೆದು ಓದಲು ಅನುಕೂಲವಾಗಿದೆ.
- ರಕ್ಷಾಕವಚವು ಆಕರ್ಷಕ ಮತ್ತು ಕಣ್ಣಿಗೆ ಹಿತವೆನಿಸುವ ಮಧ್ಯಮ ಛಾಯೆಯ ಬಣ್ಣಗಳಲ್ಲಿದೆ. 220 GSM Art Board ನ ದಪ್ಪ ಕಾಗದ ಬಳಕೆಯಾಗಿದ್ದು ಬಾಳಿಕೆ ಬರುವಂತಿದೆ.
- ಪುಸ್ತಕದ ಬಂಧ ಉತ್ತಮವಾಗಿದೆ. ಐದು ಸೆಕ್ಷನ್ ಹೊಲಿಗೆಗಳಿಂದ ಮಾಡಿರುವುದರಿಂದ ಹಾಳೆಗಳು ಮುಂದಕ್ಕೆ ಸರಿದು ಬರದಂತೆ ಭದ್ರವಾಗಿದೆ. ಐದಾರು ವರ್ಷಗಳು ಕಳೆದಿದ್ದರೂ ಹೊಲಿಗೆ ದೃಢವಾಗಿದೆ.
- ರಕ್ಷಾಕವಚದಲ್ಲಿ ಶೀರ್ಷಿಕೆಯ ಅಕ್ಷರಗಳು ದೊಡ್ಡ ಗಾತ್ರ (ಸುಮಾರು ಒಂದು ಅಂಗುಲ) ದಲ್ಲಿ ಕನ್ನಡ ಧ್ವಜದ ಎರಡು ಬಣ್ಣಗಳನ್ನು ಬಳಸಿ ಮುದ್ರಿಸಲಾಗಿದೆ. 9 ಮತ್ತು ಒಂಬತ್ತನೆಯ ಎಂದು ಅಂಕಿ ಮತ್ತು ಅಕ್ಷರಗಳಲ್ಲಿ ಸ್ಪಷ್ಟವಾಗಿ ಗೋಚರಿಸುವಂತೆ ಮುದ್ರಿಸಲಾಗಿದೆ. ಪ್ರಕಾಶಕರು ಕರ್ನಾಟಕ ಪಠ್ಯಪುಸ್ತಕ ಸಂಘ ಮತ್ತು ವಿಳಾಸ ಚೌಕಟ್ಟಿನಲ್ಲಿ ಕಾಣುವಂತೆ ಮುದ್ರಿತವಾಗಿದೆ.
- ಮುದ್ರಣ ಸ್ವರೂಪವು ತೃಪ್ತಿಕರವಾಗಿದೆ. 70 gsm ಮ್ಯಾಪಲಿಥೋ ಕಾಗದ ಬಳಕೆಯಾಗಿದೆ. ಇದರ ಗುಣಮಟ್ಟ ಉತ್ತಮವಾಗಿದೆ. ಅಕ್ಷರಗಳ ಗಾತ್ರ ಓದಲು ಅನುಕೂಲಕರವಾಗಿದೆ. ಕನ್ನಡದ ಸಹಜ ಸ್ವರೂಪವಾದ ದುಂಡಾಕಾರದಲ್ಲಿ ಅಂದವಾಗಿ ಮುದ್ರಣವಾಗಿದೆ. ಪ್ರತಿ ಹಾಳೆಗೆ ನಾಲ್ಕು ಬದಿಗಳಲ್ಲೂ ಮಾರ್ಜಿನ್ ಇದ್ದು ಅಚ್ಚುಕಟ್ಟಾಗಿದೆ. ಶೀರ್ಷಿಕೆ, ಉಪಶೀರ್ಷಿಕೆಗಳ ಗಾತ್ರ ದೊಡ್ಡದಾಗಿದ್ದು ಗಮನಸೆಳೆಯುವಂತಿದೆ. ಶೀರ್ಷಿಕೆ, ಅಭ್ಯಾಸ, ಸೂಚನೆಗಳನ್ನು ದಟ್ಟ ಬಣ್ಣದಲ್ಲಿಟ್ಟಿರುವುದೂ ಅನುಕೂಲಕರವಾಗಿದೆ.
- ಪುಸ್ತಕಗಳು ಉಚಿತ ವಿತರಣೆಗೂ (6,42,161 ಪ್ರತಿಗಳು ) ಮತ್ತು ಮಾರಾಟಕ್ಕೂ ( 1,47,321 ಪ್ರತಿಗಳು) ಲಭ್ಯವೆಂದು ತಿಳಿಸಿದೆ. ಮಾರಾಟ ಬೆಲೆ ಕೇವಲ 38=00 ರೂಪಾಯಿಗಳಾಗಿದ್ದು ವಿದ್ಯಾರ್ಥಿಗಳ ಕೈಗೆಟುಕುವ ಬೆಲೆಯಲ್ಲಿದೆ.
- ಮುನ್ನುಡಿಯ ನಂತರ ಪಠ್ಯ ಪುಸ್ತಕ ರಚನಾ ಸಮಿತಿಯ ಅಧ್ಯಕ್ಷರು (ಡಾ.ಸಿ.ಎನ್. ರಾಮಚಂದ್ರ) ಮತ್ತು ಸದಸ್ಯರ ಹೆಸರು ವಿಳಾಸಗಳು ಮುದ್ರಿತವಾಗಿವೆ. ಪರಿಶೀಲಕರ, ಸಂಪಾದಕ ಮಂಡಳಿಯ ಸದಸ್ಯರ ಹೆಸರು ವಿಳಾಸಗಳಿವೆ. ಪಠ್ಯಪುಸ್ತಕ ಸಂಘದಿಂದ ನೇಮಕವಾದ ಸಂಯೋಜಕರ, ಮಾರ್ಗದರ್ಶಕರ ಹೆಸರು ಮತ್ತು ವಿಳಾಸ ಮುದ್ರಿತವಾಗಿವೆ.

**2. ಪಠ್ಯಪುಸ್ತಕದ ಸಾಮಾನ್ಯ ಸ್ವರೂಪ**

**i) ಶೀರ್ಷಿಕೆ:** 'ಸಿರಿಕನ್ನಡ' ಆಕರ್ಷಕ, ಔಚಿತ್ಯಪೂರ್ಣವಾಗಿದೆ ಏಕೆಂದರೆ 'ಸಿರಿ' ಎಂಬ ಪದ ಸಂಪದ್ಭರಿತ ಎಂಬ ಅರ್ಥದಿಂದ ತಕ್ಷಣ ಮನಸ್ಸಿಗೆ ಸಂತಸ, ಹೆಮ್ಮೆ ಮತ್ತು ಅಭಿಮಾನ ಭಾವಗಳನ್ನುಂಟುಮಾಡುವುದು. ಇದು ಅರ್ಥಪೂರ್ಣವೂ ಆಗಿದೆ ಎಂದರೆ ಕನ್ನಡ ಸಾಹಿತ್ಯ ಶತಶತಮಾನಗಳ ಇತಿಹಾಸವುಳ್ಳ ಹೇರಳವಾದ ಸಾಹಿತ್ಯ ಸೃಷ್ಟಿಯನ್ನು ಹೊಂದಿದೆ ಎಂದು ತಿಳಿಸುತ್ತದೆ.

**ii) ಮುನ್ನುಡಿ:** ಪಠ್ಯ ಪುಸ್ತಕ ರಚನೆಯ ನಿರ್ದೇಶಕರು ಮತ್ತು ಸಂಯೋಜಕರು ಸುಮಾರು ಒಂದುವರೆ ಪುಟಗಳಲ್ಲಿ ಬರೆದಿರುವ ಮುನ್ನುಡಿಯನ್ನು ಕೆಳಗಿನ ಅಂಶಗಳನ್ನು ನೀಡಿದ್ದಾರೆ.

- 2005 ರ ರಾಷ್ಟ್ರೀಯ ಪಠ್ಯಕ್ರಮ ನಿರ್ದೇಶಿಸಿರುವ ವೈಶಿಷ್ಟ್ಯಗಳನ್ನು ಅನುಸರಿಸಲಾಗಿದೆ. ಕಲಿಕೆಯನ್ನು ಜೀವನದ ಅವಶ್ಯಕತೆಗಳಿಗೆ ಜೋಡಿಸುವ, ವಿದ್ಯಾರ್ಥಿಗಳ ಜ್ಞಾನ ಸಂರಚಿಸುವ ಮತ್ತು ಸಮಗ್ರ ದೃಷ್ಟಿಯ ಬೋಧನೆಗೆ ಅನುಕೂಲಕರವಾಗಿ ರಚಿಸಿರುವುದು
- ಪಠ್ಯಪುಸ್ತಕ ರಚನೆಗೆ – ಅಂತರ್ಗತ ವಿಧಾನ, ರಚನಾತ್ಮಕ ಮತ್ತು ಸುರುಳಿಯಾಕಾರದ ವಿಧಾನ ಬಳಸಿರುವುದು.
- ವಿಷಯ ವಿವರಣೆ ಮತ್ತು ಅಭ್ಯಾಸಗಳು ಚಿಂತನ ಪ್ರಚೋದಕವಾಗಿರುವುದು. ಮೌಲ್ಯಗಳಿಗೂ ಒತ್ತು ನೀಡಿ ವ್ಯಕ್ತಿತ್ವ ವಿಕಾಸಕ್ಕೆ ಪ್ರಯತ್ನಿಸಿರುವುದು.
- ಭಾಷಾಕಲಿಕೆಯ ಪ್ರಮುಖ ಪ್ರೌಢ ಕೌಶಲಗಳ ಕಲಿಕೆಗೆ ಮತ್ತು ಕಲಿಯುವ ಕಲೆಗೆ ಪ್ರೇರಕವಾಗುವಂತೆ ಗಮನಿಸಿರುವುದು.

ಪಠ್ಯಪುಸ್ತಕ ರಚನಾ ಸಮಿತಿಯ ಅಧ್ಯಕ್ಷರು ಬೋಧಕರಿಗೆ ಕೆಲವು ಅಗತ್ಯ ಮಾಹಿತಿಗಳನ್ನು ಹೀಗೆ ನೀಡಿದ್ದಾರೆ:

- ಭಾಷಾ ಕಲಿಕೆ ಮತ್ತು ಜ್ಞಾನ ಸಂವರ್ಧನೆಗೆ ಆದ್ಯತೆ ನೀಡಿ ಸಾಮಾಜಿಕ–ಸಾಂಸ್ಕೃತಿಕ, ಪ್ರಾದೇಶಿಕ ಮತ್ತು ಲಿಂಗ ಸಮಾನತೆಯ ಮೌಲ್ಯವನ್ನು ಕಾಪಾಡಿರುವುದು.
- ಪಠ್ಯಾಂಶಗಳಲ್ಲಿ ವೈವಿಧ್ಯತೆ ಕಾಪಾಡಿ, ಆಯ್ದ ಸಾಹಿತ್ಯಪ್ರಕಾರದ ಭಾಗಗಳನ್ನು ಅರ್ಥೈಸಿಕೊಳ್ಳಲು ಪ್ರಾಯೋಗಿಕ ಕ್ರಿಯಾತ್ಮಕ ಭಾಷಿಕ ಕ್ರಮಗಳನ್ನು ಮತ್ತು ಸೈದ್ಧಾಂತಿಕ ವಿಚಾರಗಳನ್ನು ನೀಡಲಾಗಿದೆ
- ವಿದ್ಯಾರ್ಥಿಗಳ ದೃಷ್ಟಿಯಿಂದ 'ಮುನ್ನಯಾರಿ' ನೀಡಿ ಸ್ಪಷ್ಟ ಗ್ರಹಿಕೆಗೆ ಅನುವುಮಾಡಿದೆ. ಗದ್ಯ–ಪದ್ಯಗಳ ಓದು–ಗ್ರಹಿಕೆ–ಪ್ರಶಂಸೆ–ಅಭ್ಯಾಸಗಳಿಗೆ ಗಮನಹರಿಸಿದೆ. ನಿಗದಿತ ಪಾಠವನ್ನು ಅರ್ಥೈಸಬೇಕಾದ ಅನುಕ್ರಮಣಿಕೆಯ ವಿವರಣೆ ಅಧ್ಯಕ್ಷರು ನೀಡಿರುವ ಈ ಎಲ್ಲ ಮಾಹಿತಿಗಳು ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಹೆಚ್ಚಿನ ಸ್ಪಷ್ಟತೆಯನ್ನು ಮತ್ತು ಪ್ರೇರಣೆಯನ್ನು ನೀಡಿದೆ.

**iii)** ಪಾಠ ಸೂಚಿಯನ್ನು ಎರಡು ಭಾಗಗಳಲ್ಲಿ ಪಠ್ಯ ಪ್ರಧಾನ ಅಧ್ಯಯನ ಮತ್ತು ಪೋಷಕ ಅಧ್ಯಯನ ಎಂದು ವಿಂಗಡಿಸಿದ್ದಾರೆ. ಪ್ರಧಾನ ಅಧ್ಯಯನ ಭಾಗದಲ್ಲಿ ಗದ್ಯ–ಪದ್ಯ ಪಾಠಗಳ ಶೀರ್ಷಿಕೆ ಲೇಖಕ– ಕವಿಗಳ ಹೆಸರನ್ನು ಮತ್ತು ಪ್ರತಿ ಪಾಠದ ಆರಂಭ ಪುಟಸಂಖ್ಯೆ ಮುದ್ರಿತವಾಗಿರುವುದು ಅನುಕೂಲಕರವಾಗಿದೆ. ಸಾಹಿತ್ಯದ ಯಾವ ಪ್ರಕಾರಕ್ಕೆ ಸೇರುತ್ತದೆಂಬ ಅಂಶವನ್ನೂ ಆವರಣದಲ್ಲಿ ಕೊಟ್ಟಿರುವುದು ಗಮನಿಸಬೇಕಾದ ಉತ್ತಮ ಅಂಶ. ಪೋಷಕ ಅಧ್ಯಯನ ಭಾಗದಲ್ಲೂ ಈ ಅಂಶವನ್ನೂ ಕಾಣಬಹುದು.

**iv)** 161 ಪುಟಗಳ ಪಠ್ಯ ವಿವರಗಳಿದ್ದು ಏಳು ಪುಟಗಳಲ್ಲಿ ಪದಕೋಶವಿದೆ. ಚಿತ್ರ ಸೂಚಿಯ ಅಂಶ ಇಲ್ಲಿ ಕಂಡು ಬಂದಿಲ್ಲ. ಕಂಡುಬಂದಿಲ್ಲ. ಇದು ಪ್ರಾಥಮಿಕ ತರಗತಿಗಳ ಪುಸ ಪ್ರಮಾಣದಲ್ಲಿರುವುದು ಉದಾಹರಣೆಗೆ ಗದ್ಯಪಾಠ (ಪ್ರಾಮಾಣಿಕತೆ)ದಲ್ಲಿ ಚಿತ್ರವಿಲ್ಲದಿದ್ದರೂ ಬಾಧಕವಾಗುತ್ತಿರಲಿಲ್ಲ. ರಮ್ಯಸೃಷ್ಟಿ ಪದ್ಯಕ್ಕೆ ರೇಖಾಚಿತ್ರವಿಲ್ಲದೆ ಕಲ್ಪನೆಗೆ ಬರಬಹುದಿತ್ತೇನೋ. ಗದ್ಯ ಪಾಠ – 03 ಜಯಪುರದ ಮುಖ್ಯ ಬೀದಿಗಳ ವರ್ಣ ಚಿತ್ರ ಇದ್ದಿದ್ದರೆ ಗದ್ಯ ಪಾಠ–6 ಜನಪದ ಕಲೆಗಳ ವೈಭವ – ಬಣ್ಣದ ಚಿತ್ರಗಳ ಅಗತ್ಯವೇನೋ ಗದ್ಯ ಪಾಠ–08– ಇಂಬಳ (ಜಿಗಣಿ) ಸಾಮಾನ್ಯವಾಗಿ ಕಾಲಿನ ಮೇಲೆ ಹತ್ತುವುದಲ್ಲವೆ?

**v) ಪಾರಿಭಾಷಿಕ ಪದಗಳಿಗೆ ಸಂಬಂಧಿಸಿದಂತೆ**

- ಗದ್ಯ, ಪದ್ಯ ಪಾಠಾಂತ್ಯದಲ್ಲಿ– ಪಾರಿಭಾಷಿಕ ಪದಗಳ ಅರ್ಥ ವಿವರ ಸೂಕ್ತವಾಗಿ ನೀಡಲಾಗಿದೆ.
- ಕೊನೆಯಲ್ಲಿ ಪಠ್ಯಧಾರಿತ ಪದಕೋಶವನ್ನು ನೀಡಲಾಗಿದೆ. ಪದಗಳ ಪಕ್ಕದಲ್ಲಿ ಸಂಕೇತಾಕ್ಷರಗಳಲ್ಲಿ ಆ ಪದಗಳ ವ್ಯಾಕರಣ ವಿಚಾರವನ್ನು ಸಂಕೇತಾಕ್ಷರಗಳಲ್ಲಿ ಸೂಚಿಸಬಹುದಿತ್ತು.

**3. ಪಠ್ಯ ವಿಷಯದ ವಿಶ್ಲೇಷಣೆ**

i) ಪ್ರೌಢ ಶಾಲಾ ಪಠ್ಯಕ್ರಮ ಸೂಚಿಸುವಂತೆ ಗ್ರಹಿಕಾ ಮತ್ತು ಅಭಿವ್ಯಕ್ತಿ ಕೌಶಲಗಳ ಅಭಿವೃದ್ಧಿ- ಪದಸಂಪತ್ತಿನ ವೃದ್ಧಿ- ಸಂಸ್ಕೃತಿಯ ಅಭಿಮಾನ, ಸಾಹಿತ್ಯ ಪ್ರಕಾರಗಳ ಜ್ಞಾನ- ಸಾಹಿತ್ಯಾಭಿರುಚಿ ಬೆಳವಣಿಗೆ- ವ್ಯಕ್ತಿತ್ವ ವಿಕಾಸ- ಮೌಲ್ಯಪ್ರಜ್ಞೆ (ಬ್ಲಾಕ್- ಒಂದು - ಮೊದಲ ಘಟಕ ನೋಡಿ) ಶಾಂತಿ, ಸಹನೆ, ಪ್ರಾಮಾಣಿಕತೆ, ಆದರ್ಶ ವ್ಯಕ್ತಿತ್ವ ಪರಿಚಯ, ಶಿಷ್ಟ ಪಾಲನಾ ನೀತಿ, ಸಮಾಜದಲ್ಲಿ ಸಮಾನತೆಯ ಸ್ಥಾಪನೆ, ವೈಜ್ಞಾನಿಕ ಮನೋಭಾವ, ಜನಪದ ಕಲೆಗಳ ರಕ್ಷಣೆಯ ಮೌಲ್ಯ ಮುಂತಾದ ಗುರಿಗಳ ಸಾಧನೆಗೆ ಸೂಕ್ತವಾಗಿ ಗದ್ಯಪಾಠಗಳು ಪೂರಕವಾಗಿವೆ.

- ಸಾಮಾಜಿಕ ಸಮಸ್ಯೆ (07 ನೇ ಪಾಠ), ನೀತಿಕಥೆ ವಿಜ್ಞಾನೋಪಾಸನೆ (08), ಪ್ರವಾಸ ಕೇಂದ್ರ (03) ವಿಚಾರ ಪ್ರಚೋದಕ ನಾಟಕ (05) ಗಳು ಪಠ್ಯ ಸೂಚಿಯ ಪ್ರಕಾರ ಇವೆ.
- ಪದ್ಯ ಭಾಗಗಳಲ್ಲಿ ಒಳಿತಿನ ಜಯದ ಆಶಯ, ಪ್ರಕೃತಿಯ ರಮ್ಯತೆ, ಮೌಢ್ಯ, ಮತ್ತು ಕೀಳರಿಮೆಗಳನ್ನು ಕಿತ್ತೊಗೆಯುವ ಹೊಸ ಭಾವ ಉಕ್ಕಿಸುವ ಪದ್ಯ, ತತ್ವಪದಗಳು, ಪಠ್ಯ ಸೂಚಿಗೆ ಅನುಗುಣವಾಗಿದೆ
- ಪಠ್ಯದಲ್ಲಿ ಒಂಬತ್ತು ಗದ್ಯಪಾಠಗಳು, ಆರು ಪದ್ಯಪಾಠಗಳಿರುವವು. ಪೋಷಕ ಅಧ್ಯಯನಕ್ಕೆ ಎರಡು ಪದ್ಯ, ಎರಡು ಗದ್ಯ ಮತ್ತು ಒಂದು ನಾಟಕ ಪಾಠಗಳಿವೆ.

ii) ಪಠ್ಯಾಂಶ ವ್ಯವಸ್ಥೆ

- ಆರಂಭದ ಗದ್ಯದ ಸ್ವರೂಪ(01), ಸಣ್ಣಕತೆ(02), ಪ್ರವಾಸ ಕಥನ(03), ವ್ಯಕ್ತಿ ಚಿತ್ರ (04), ನಾಟಕ(05), ಆತ್ಮಕಥನ(07), ವೈಜ್ಞಾನಿಕ ಪ್ರಬಂಧ(08), ಪಾಠಗಳು ಗದ್ಯ ಪ್ರಕಾರಗಳನ್ನು ಪರಿಚಯಿಸುತ್ತವೆ
- ಕಂದ(01), ಸಾಂಗತ್ಯ(04), ಷಟ್ಪದಿ(06) ಗಳೊಂದಿಗೆ ಆಧುನಿಕ ಭಾವಗೀತೆ, ತತ್ವ ಪದಗಳ ಪಾಠಗಳಿವೆ.
- ಹಳೆಗನ್ನಡದ (ಒಂದು ಗದ್ಯ ಪಾಠ ಒಂದು ಪದ್ಯ ಪಾಠ), ನಡುಗನ್ನಡದ (ಒಂದು ಗದ್ಯದೊಂದಿಗೆ- ಎರಡು ಪದ್ಯಗಳಿವೆ)
- ಹೊಸಗನ್ನಡದ ಪ್ರತೀಕವಾಗಿ ಹೊಸಹಾಡು ಪದ್ಯ(03,) ದಲಿತದ ದನಿಯ ಗದ್ಯ(07), ಪರಿಚಯವಿದೆ.
- ಪೌರಾಣಿಕ (01, 05, 06,ನೇ ಪಾಠಗಳು), ವೈಜ್ಞಾನಿಕ(08), ಸಾಮಾಜಿಕ (03), ವಸ್ತು ವೈವಿಧ್ಯಗಳಿವೆ ವೈವಿಧ್ಯದ ಪಾಠಗಳಿವೆ.

**(iii) ವಿಷಯ ಪ್ರತಿಪಾದನೆ ಕ್ರಮ**

ಗದ್ಯಪಾಠಗಳು ಸಾಹಿತ್ಯ ಚರಿತ್ರೆಯ ಅನುಸಾರ ಪ್ರಾಚೀನದಿಂದ ಆಧುನಿಕ ಮತ್ತು ಹಳೆಗನ್ನಡದಿಂದ ಹೊಸಗನ್ನಡ ಕ್ರಮದಲ್ಲಿವೆ. ಪದ್ಯಪಾಠಗಳು ಕ್ರಮಾನುಗತಿ ಕ್ರಮ(ಸ್ಪೈರಲ್)ದಲ್ಲಿ ಜೋಡಿಸಲ್ಪಟ್ಟಿವೆ.

**iv)** ವಾಚನಾಭಿರುಚಿ ಮತ್ತು ಸಾಹಿತ್ಯಾಸಕ್ತಿ ಮೂಡಿಸಲು ಸೂಕ್ತವಾಗುವಂತೆ ಕಾದಂಬರಿ ಭಾಗ, ನಾಟಕ ಭಾಗ, ವೈಚಾರಿಕ ಲೇಖನ ರೂಪದ ಗದ್ಯಭಾಗಗಳು ಉತ್ತಮವಾಗಿವೆ. ಜೊತೆಗೆ ಗಜಲ್ ರೂಪದ ಪದ್ಯವೊಂದು ಪೋಷಕ ಅಧ್ಯಯನ ಭಾಗದಲ್ಲಿದೆ.

**4. ಪಠ್ಯ ವಿಷಯ ನಿರೂಪಣೆ ವಿಶ್ಲೇಷಣೆ**

ಈ ಒಂಬತ್ತನೆ ತರಗತಿಯ ಸಿರಿಗನ್ನಡ ಹೊತ್ತಿಗೆಯಲ್ಲಿ (1) ಜನಪದ ಕಲೆಗಳ ವೈಭವ ಮತ್ತು (2) ಡಾ. ರಾಧಾಕೃಷ್ಣನ್ ಕುರಿತ ಪಾಠ (3) ಸಮಾಗಮ ಪಾಠಗಳು – ಪಠ್ಯಪುಸ್ತಕ ಸಮಿತಿಯವರು ರಚಿಸಿರುವುದು ಎಂಬುದನ್ನು ನೀವು ಗಮನಿಸಬೇಕು. ಉಳಿದೆಲ್ಲ ಪಾಠಗಳು ವಿವಿಧ ಲೇಖಕರು, ಕವಿಗಳು ಬರೆದಿರುವುವು.

- ಹೊಸಗನ್ನಡ ಪಾಠಗಳೆಲ್ಲಾ ಸರಳ, ಸ್ಪಷ್ಟವಾಗಿರುವುದು ವಿದ್ಯಾರ್ಥಿಗಳು ಸ್ವತಂತ್ರವಾಗಿ ಅಧ್ಯಯನ ಮಾಡುವಂತಿವೆ.
- ಸಮಾಗಮ ನಾಟಕ ಪಾಠ – ಅಭಿನಯಾತ್ಮಕವಾಗಿ ವಾಚಿಸಲು ಅನುಕೂಲವಾಗಿದ್ದು, ಸಾಹಿತ್ಯಾಸಕ್ತಿ ಮೂಡಿಸುವಂತಿದೆ.

| ಪಾಠಗಳು | ಸಾಹಿತ್ಯಾಂಶಗಳು / ಪಾಠ ನಿರೂಪಣೆ/ ಮೌಲ್ಯ | ಭಾಷಾಂಶಗಳು / ಭಾಷಾ ಕೌಶಲಗಳು |
|---|---|---|
| 1. ಪಂಥಾಹ್ವಾನ (ಹಳೆಗನ್ನಡ) (ಕಥೆಯ ರೂಪ) | ವಿದ್ಯುಚ್ಚೋರ– ಯಮದಂಡ ಗೆಳೆಯರ ಪಂಥ ಸಂಬಂಧಿಸಿದ ಕಥೆಯ ನಿರೂಪಣೆ<br><br>ಸತ್ಯಧರ್ಮ ಪ್ರಾಮಾಣಿಕತೆಗಳಿಗೇ ಜಯ | ಟಿಪ್ಪಣಿಯಲ್ಲಿ ಹಳೆಗನ್ನಡ, ಪದ ಮತ್ತು ಪರಿಕಲ್ಪನೆಗಳಿಗೆ ಅರ್ಥ ವಿವರಗಳಿವೆ<br><br>ಹೊಸಗನ್ನಡದಲ್ಲಿ ಕಥೆ ನಿರೂಪಿಸಲು ಕೇಳಿ ಮಾತುಗಾರಿಕೆ ಮತ್ತು ಕಥೆ ಹೆಣೆಯುವ ಸೃಜನಶೀಲತೆ |
| 2. ಪ್ರಾಮಾಣಿಕತೆ (ಆಧುನಿಕ ಸಣ್ಣ ಕತೆ) | ನಿಸ್ಪೃಹ ಅಧಿಕಾರಿಗೆ ಮೇಲಧಿಕಾರಿ (ಪರಿಚಿತ) ಯಿಂದಲೇ ತೊಂದರೆ– ಶೋಷಣೆ ಮತ್ತು<br>ಅಧಿಕಾರದ ಅಮಲಿನ ಪ್ರಭಾವ<br><br>ಕಾರ್ಯಕ್ಷಮತೆ ಪ್ರಾಮಾಣಿಕತೆ – ಸ್ನೇಹ– ಸಾಮಾಜಿಕ ಮೌಲ್ಯಗಳ ರಕ್ಷಣೆ ಅಗತ್ಯ | ಉತ್ತಮ ಪುರುಷ ಮಧ್ಯಮ ಪುರುಷಗಳ ಬಳಕೆ– ನೇರ ಸಂಭಾಷಣೆಯ ಸಹಿತ ಕಥೆಯ ನಿರೂಪಣೆ<br><br>ಸರಳ ಕಥೆಗಳ ರಚನೆಯ ಸಾಮರ್ಥ್ಯ |
| 3. ಬೆಡಗಿನ ತಾಣ ಜಯಪುರ (ಪ್ರವಾಸ ಪ್ರಬಂಧ ಲೇಖನ) | ಜಯಪುರದ ಐತಿಹಾಸಿಕ – ಸಾಂಸ್ಕೃತಿಕ ಮಹತ್ವ<br><br>ಕಲೆ, ಜನಜೀವನ – ವರ್ಣನಾತ್ಮಕ ಪ್ರಬಂಧ<br><br>ಜಂತರ್ ಮಂತರ್ ಪ್ರಯೋಗಾಲಯ ವಿವರ<br><br>ಪ್ರವಾಸಗಳನ್ನು ಜ್ಞಾನಾನುಭವಗಳ ಮಾಧ್ಯಮವಾಗಿ ಕಾಣಬೇಕೆಂಬ ಮೌಲ್ಯ/ ಸಂಸ್ಕೃತಿ ವೈವಿಧ್ಯದ ಪ್ರಶಂಸೆ | ಕಂಡದ್ದನ್ನು ವರ್ಣನಾತ್ಮಕ/ ವಿವರಣಾತ್ಮಕ ಶೈಲಿಯಲ್ಲಿ ಬರೆಯುವ ಕೌಶಲ<br><br>ಪ್ರವಾಸ ಸಾಹಿತ್ಯಗಳನ್ನು ಓದುವ ಆಸಕ್ತಿ ಬೆಳೆಸುವಂತಿದೆ. |
| 4. ಆದರ್ಶ ಶಿಕ್ಷಕ ಸರ್ವಪಲ್ಲಿ ರಾಧಾಕೃಷ್ಣನ್<br>ವ್ಯಕ್ತಿ ಚಿತ್ರ (ಪಠ್ಯಪುಸ್ತಕ ಸಮಿತಿ | ಸ್ಟಾಲಿನ್ ಮಾತು– ಶ್ರೇಷ್ಠ ಅಧ್ಯಾಪಕರಾಗಿ ಸೇವೆ– ಮೈಸೂರಿನ ಬೀಳ್ಕೊಡುಗೆ– ಹಿಂದೂ ಧರ್ಮ | ವ್ಯಕ್ತಿ ಚಿತ್ರಣ ಶೈಲಿಯ ಗ್ರಹಿಕೆ<br><br>ಮೈಸೂರಿನಿಂದ ಬೀಳ್ಕೊಡುಗೆಯ |

| | | |
|---|---|---|
| ರಚಿಸಿದ ಪಾಠ) | ಮತ್ತು ತತ್ವಶಾಸ್ತ್ರದ, ಶಿಕ್ಷಣ ಕುರಿತ ಕೃತಿಗಳು ಎಲ್ಲಾ ವಿವರಗಳಿಂದ ಉತ್ತಮ ವ್ಯಕ್ತಿ ಚಿತ್ರ ಪ್ರಬಂಧ | ವಿವರ ಒಂದು ಶಬ್ದ ಚಿತ್ರದ ದೃಷ್ಟಾಂತ ಲೇಖನಿಗೆ ಮಾದರಿ |
| 5. ಸಮಾಗಮ (ಅನುವಾದ ನಾಟಕ) | ಭೀಮಸೇನ-ಘಟೋತ್ಕಜರ ಕಾಳಗ ವಿವರ ಅಪರೂಪದ ವಸ್ತು ವಿವರ- ವಚನಪಾಲನೆಯ ಮೌಲ್ಯ ದೊಂದಿಗೆ 'ಶಿಷ್ಟಪಾಲನಾ' ನೀತಿಯನ್ನು ಪ್ರಸ್ತುತಪಡಿಸುತ್ತದೆ<br><br>ಪಠ್ಯಾಧಾರ ಟಿಪ್ಪಣಿ- ನಮ್ಮ ಭಾರತೀಯ ಪೌರಾಣಿಕ ಸಾಹಿತ್ಯ- ಸಂಸ್ಕೃತ ನಾಟಕಗಳ ಪರಿಚಯಿಸುವುದು | ನಾಟಕ ಸ್ವರೂಪದ ಪರಿಚಯ ಸರಳ ಸಂಭಾಷಣ ಚಾತುರ್ಯ ಬೆಳೆಸಲು ಅಭಿನಯ ಕೌಶಲಕ್ಕೆ ಪ್ರೇರಕವಾಗಿದೆ<br><br>ನಾಟಕ ಸಾಹಿತ್ಯದಲ್ಲಿ ಆಸಕ್ತಿ ಬೆಳೆಸುವುದು |
| 6. ಹರಲೀಲೆ (ಹರಿಹರ) ಕನ್ನಡ ನಡುಗನ್ನಡ | ನಂಬಿಯಣ್ಣನ ರಗಳೆ ಯಲ್ಲಿನ- ವೃದ್ಧ ಮಹೇಶ್ವರನ ಅಭಿನಯ- ಹಾಸ್ಯದ ಹಾವಭಾವ- ನಡೆನುಡಿಗಳ ವರ್ಣನೆ ಇದೆ<br><br>ಈ ಪಾಠ ಎಲ್ಲ ವಿದ್ಯಾರ್ಥಿಗಳ ಕಲ್ಪನೆಗೆ ಎಟುಕಬಲ್ಲದೇ ಎಂಬ ಅನುಮಾನ | ನಡುಗನ್ನಡ ಭಾಷಾ ಶೈಲಿ ಗಮನೀಯ<br><br>ಕಥಾ ನಿರೂಪಣೆಯ ಶೈಲಿ ಆಕರ್ಷಕವಾಗಿದೆ.<br><br>ವಿದ್ಯಾರ್ಥಿಗಳಿಂದ ಹೊಸಗನ್ನಡದಲ್ಲಿ ಕಥೆಯಂತೆ ಹೇಳಿಸಿ ಮಾತುಗಾರಿಕೆ ಪೋಷಿಸಲು ಸಹಾಯಕವಾಗಿದೆ. |

| ಪಾಠಗಳು | ಸಾಹಿತ್ಯಾಂಶಗಳು /ಪಾಠ ನಿರೂಪಣೆ/ ಮೌಲ್ಯ | ಭಾಷಾಂಶಗಳು/ ಭಾಷಾ ಕೌಶಲಗಳು |
|---|---|---|
| 7. ಇತಿಹಾಸದ ಚಕ್ಕಡಿ (ಆತ್ಮಕಥೆ) | ಅರವಿಂದ ಮಾಲಗತ್ತಿ ಯವರು ತಮ್ಮ ಶಿಕ್ಷಣಕ್ಕಾಗಿ ಎದುರಿಸಿದ ಎಡರು-ತೊಡರುಗಳು ವಿವರಗಳು ಸರಳ ಸುಂದರವಾಗಿ ಮೂಡಿವೆ.<br><br>ಸಾಮಾಜಿಕ ಸಮಾನತೆಯ ಮೌಲ್ಯದ ಮಹತ್ವವನ್ನು ಪರಿಣಾಮಕಾರಿಯಾಗಿ ಪ್ರಭಾವಿಸುವಂತಿದೆ. | ಆತ್ಮಕಥೆಯ ಸಾಹಿತ್ಯ ಪ್ರಕಾರದ (ಗದ್ಯ -ಪದ್ಯ ಮಿಶ್ರಿತ) ವಿಶಿಷ್ಟ ಲೇಖನ ಪರಿಚಯ- ಸ್ವಾರಸ್ಯಕರ<br><br>ಪ್ರತಿಫಲಿತ ಚಿಂತನೆ- ಪ್ರತಿಫಲಿತ ಬರೆಹಗಳ ಅಭ್ಯಾಸ ರಚನೆಗೆ ಪ್ರೇರಕ |
| 8. ಅಚ್ಚರಿಯ ಜೀವಿ ಇಂಬಳ (ವೈಜ್ಞಾನಿಕ ಪ್ರಬಂಧ) | ಇಂಬಳ – ಜಿಗಣೆ ಹಿಡುಕ ಪೀಠಿಕೆಯಿಂದ ಚಾರಣದ ಅನುಭವ ವಿವರ- ಜಿಗಣೆ ಚಿಕಿತ್ಸೆ ಬಂಗೂನ ಚಿಕಿತ್ಸಾ ವಿಧಾನ ವಿವರಗಳನ್ನು ಕುತೂಹಲಕರವಾಗಿಟ್ಟ ಲೇಖನ. | ಅಂಕಣ ಲೇಖನ ಸ್ವರೂಪ ಪರಿಚಯಿಸುವುದು<br>ವೈಜ್ಞಾನಿಕ ಪ್ರಬಂಧ ಸ್ವರೂಪ ಪರಿಚಯ |
| 9. ಜನಪದ ಕಲೆಗಳ ವೈಭವ | ವೀರಗಾಸೆ- ಕಂಸಾಳೆ- ಡೊಳ್ಳುಕುಣಿತ- ಯಕ್ಷಗಾನಗಳ | ಜನಪದ ಹಾಡುಗಳ ಸಂಗ್ರಹ ಮತ್ತು ಹಾಡುವ ಆಸಕ್ತಿ ಬೆಳೆಸುವುದು |

| | | |
|---|---|---|
| | ಪರಿಚಯಾತ್ಮಕ ಲೇಖನಗಳು. ಜನಪದ ಸಂಸ್ಕೃತಿ ಪರಿಚಯಿಸುವ ಆಸಕ್ತಿಪೂರ್ಣ ಅಂಕಣಗಳಾಗಿವೆ. | ವಿಶ್ವಕೋಶದ ಲೇಖನಗಳ ವಾಚನಾಸಕ್ತಿ ಹಾಡು, ಒಗಟು ಸಂಗ್ರಹಾಸಕ್ತಿಗೆ ಪ್ರೇರಕ. |
| ಪದ್ಯಭಾಗ | | |
| 1) ಬಲಿಯನಿತ್ತೊಡೆ ಮುನಿವೆಂ (ಕಂದ –ಹಳೆಗನ್ನಡ) | ಅಹಿಂಸೆಯೇ ಪರಮಧರ್ಮ – ಎಂಬ ಶ್ರೇಷ್ಠ ಮೌಲ್ಯವನ್ನು ಎತ್ತಿ ಹಿಡಿಯಲು– ಮಾರಿದತ್ತ ರಾಜನ ಮನಃ ಪರಿವರ್ತನೆಯನ್ನು ಅಭಯರುಚಿ ಅಭಯಮತಿ ಮಕ್ಕಳು ಸಾಧಿಸಿದ ಪ್ರಸಂಗ. | ವ್ಯಕ್ತಿತ್ವ ಪ್ರಶಂಸೆಯನ್ನು ವಿದ್ಯಾರ್ಥಿಗಳು ಸ್ವಂತ ಶೈಲಿಯಲ್ಲಿ ಅಭಿವ್ಯಕ್ತಿಸಲು ಪೂರಕವಾಗಿದೆ |
| 2) ರಮ್ಯಸೃಷ್ಟಿ | ಪ್ರಕೃತಿ ಸೌಂದರ್ಯ– ಸೂರ್ಯೋದಯ ಚೆಲವು ರಮ್ಯವಾಗಿ ವರ್ಣಿತವಾಗಿದೆ. | ಲಯ, ಪ್ರಾಸ, ಸ್ವಾರಸ್ಯ ಪೂರ್ಣ ವರ್ಣನೆಯ ವೈಶಿಷ್ಟ್ಯಗಳಿವೆ. |
| 3) ಹೊಸಹಾಡು | ನವೋದಯ ಪದ್ಯವು– ಹಳೆಯ ಮೌಢ್ಯ ಕಿತ್ತೊಗೆದು , ಹೊಸ ಹುರುಪು, ಆಶಯ ಭಾವಗಳಿಂದ ಹೊಸ ಜೀವನ ನಡೆಸಬೇಕು– ಎಂಬ ಸಂದೇಶ ಹೊಂದಿದೆ. | ಪ್ರಾಸ, ಲಯ, ದಟ್ಟ ಭಾವ ಗುಣಗಳಿಂದ ಹಾಡಲು ಪ್ರೇರೇಪಿಸುವಂತಿದೆ. |
| 4) ಸಿರಿಯನಿನ್ನೇನು ಬಣ್ಣಿಪೆನು | ಭರತನ ಆಳ್ವಿಕೆಯ ವೈಭವ ವರ್ಣನೆ | ಪದಸಂಪತ್ತು, ವರ್ಣನ ಶಕ್ತಿಗಳನ್ನು ಗಮನಿಸುವಂತಿದೆ. |
| 5) ಸಾರ್ಥಕ ರಕ್ಷಣೆ | ಸುಳಾದಿ ಮೂಲಕ ದಾಸ ಸಾಹಿತ್ಯ ಮತ್ತು ತತ್ವಪದ ಮೂಲಕ ಶರೀಫರ ಸಾಹಿತ್ಯ. | ಟಿಪ್ಪಣಿಯು ವಿದ್ಯಾರ್ಥಿಗಳ ವಾಚನ ಮತ್ತು ಅರ್ಥಗ್ರಹಿಕೆ ಆಧಾರವಾಗಿದೆ. |
| 6) ಹರಿಶ್ಚಂದ್ರಕಾವ್ಯ ದೇವಿ ಮಹಾತ್ಮೆ | ವಿಶ್ವಾಮಿತ್ರರಿಂದ ಒದಗಿದ ಸಂಕಷ್ಟಗಳ ವರ್ಣನೆ (ಸತ್ಯ, ನಿಷ್ಠೆ ಮೆರೆದ ಹರಿಶ್ಚಂದ್ರ)<br><br>ಕನ್ನಡ ನಾಡಿನ ಹಿರಿಮೆಯ ವಿವರ– ನಾಡಿನ ಬಗ್ಗೆ ಹೆಮ್ಮೆ | ವಾರ್ಧಕ ಮತ್ತು ಭಾಮಿನಿ ಷಟ್ಪದಿಯ ಪರಿಚಯ, ಪ್ರಾಸಗಳ ಸೊಬಗು ಗಮನಾರ್ಹ. |

ಒಟ್ಟಿನಲ್ಲಿ ಹದಿನೈದು ಪಾಠಗಳು ಸಾಂಸ್ಕೃತಿಕ ವೈವಿಧ್ಯ ಶೈಲಿಯ, ನಾಡು–ನುಡಿಯ ಹಿರಿಮೆಯ ಅರಿವು ನೀಡುತ್ತಾ ಜಾತ್ಯತೀತತೆ, ವೈಜ್ಞಾನಿಕ ಮನೋಭಾವ ಬೆಳೆಸುವ ದಿಸೆಯಲ್ಲಿ ಉತ್ತಮ ಪಾಠಗಳಾಗಿವೆ.

ಪೋಷಕ ಅಧ್ಯಯನ ಪಾಠಗಳೂ ವಿದ್ಯಾರ್ಥಿಗಳಲ್ಲಿ ಗ್ರಹಿಕೆ, ಸಾಮರ್ಥ್ಯ ಮತ್ತು ವಾಚನ ಶಕ್ತಿ ಮೂಡಿಸುವಂತಿವೆ.

5. ಎಲ್ಲಾ ಗದ್ಯಪಾಠಗಳ ಕರ್ತೃಗಳ ವಿಚಾರ (ಶಿವಕೋಟ್ಯಾಚಾರ್ಯ, ಸಾರಾ ಅಬೂಬಕ್ಕರ್, ಶಿವರಾಮ ಕಾರಂತ, ಹರಿಹರ, ಅರವಿಂದ ಮಾಲಗತ್ತಿ, ಸತ್ಯನಾರಾಯಣ ಭಟ್ಟರ) ಬಗ್ಗೆ ಪರಿಚಯ ಮಾಹಿತಿಯನ್ನು ಸವಿವರವಾಗಿ ನೀಡಲಾಗಿದೆ.

- ಕವಿಗಳ ಕುರಿತ (ಜನ್ನ, ಮಧುರಚೆನ್ನ, ಕಯ್ಯಾರ, ಕಿಞ್ಞಣ್ಣರೈ, ರತ್ನಾಕರವರ್ಣಿ, ವಾದಿರಾಜ, ಶಿಶುನಾಳ ಷರೀಫ, ರಾಘವಾಂಶ, ಸತ್ಯ ವಿಠ್ಠಲ) ಪರಿಚಯವೂ ಆದರಣೀಯವಾಗಿ ಮೂಡಿಬಂದಿದೆ.

- ಆಕರ ಕೃತಿಗಳ ಬಗ್ಗೆ ಸೂಕ್ತ ಮಾಹಿತಿಯನ್ನು ಒದಗಿಸಿ ವಿದ್ಯಾರ್ಥಿಗಳು ಕನ್ನಡ ಸಾಹಿತ್ಯ ಪರಂಪರೆಯ ಬಗ್ಗೆ ತಿಳಿಯಲು ಸಾಧ್ಯವಾಗಿಸಿದೆ.
- ಮೂರು ತರಗತಿ (8, 9, 10) ಗಳ ಪಠ್ಯಗಳ ಪಾಠಗಳನ್ನು ಅವಲೋಕಿಸಿದಾಗ ರನ್ನ ಕವಿಯ ಪರಿಚಯ ವಾಗಿಲ್ಲದಿರುವುದು ಕಂಡುಬರುತ್ತದೆ. ರಾಷ್ಟ್ರಕವಿಗಳೆನಿಸಿಕೊಂಡ ಮೂವರೂ ಕವಿಗಳ ಪರಿಚಯವಾಗಿರುವುದು ಗಮನಾರ್ಹ.

**5. ಕಲಿಕೆಯ ಚಟುವಟಿಕೆಗಳು**

ನೀವು ಪ್ರಸ್ತುತ ಕನ್ನಡ ಪಠಪುಸ್ತಕಗಳಲ್ಲಿ ಪಾಠಗಳನ್ನು ಸಂಯೋಜಿಸಿರುವ ಕ್ರಮವನ್ನು ಗಮನಿಸಿರುತ್ತೀರಿ.

**ಅಭ್ಯಾಸ**

ಪ್ರಸ್ತುತ ಒಂಬತ್ತನೇ ತರಗತಿ ಪ್ರಥಮ ಭಾಷೆಯ ಕನ್ನಡ ಪಠ್ಯ ಪುಸ್ತಕದ ಪ್ರತಿ ಗದ್ಯ /ಪ್ರತಿ ಪದ್ಯಪಾಠದ ಆರಂಭದಲ್ಲಿ ಒಂದು ಚೌಕಟ್ಟಿನಲ್ಲಿ 'ಮುನ್ನಯಾರಿ' ಕೊಟ್ಟಿರುವುದನ್ನು ಕಾಣುವಿರಿ ಇದರ ಮೂಲ ಉದ್ದೇಶವೇನು (ಅ)ಕರ್ತೃ/ ಕವಿ ವಿಚಾರ ವಿವರಿಸಲು (ಬ) ಪಾಠಕ್ಕೆ ಪೀಠಿಕೆ ಹಾಕಲು (ಕ) ಪಾಠದ ಸ್ಪಷ್ಟ ಅರ್ಥೈಸುವಿಕೆಯ ಆಧಾರವಾಗಲು (ಡ) ಓದುವಿಕೆಗೆ ಪ್ರೇರೇಪಿಸಲು

ಉತ್ತರ _______________

ಅಗತ್ಯವಾದಲ್ಲಿ ಪಠ್ಯಪುಸ್ತಕದ ಪಾಠವೊಂದನ್ನು ಪರಿಶೀಲಿಸಿರಿ. ನಿಮ್ಮ ಉತ್ತರ (ಕ) ಆಗಿದ್ದರೆ ಸರಿಯಾಗಿ ವಿಶ್ಲೇಷಿಸುವಿರಿ. ಇದು ವಿದ್ಯಾರ್ಥಿಗಳಿಗೆ ಒಂದು ಒಳ್ಳೆಯ ಕಲಿಕೆಯ ಚಟುವಟಿಕೆಯಾಗಿದೆ.

**ಅಭ್ಯಾಸ**

ಪ್ರತಿ ಪದ್ಯ/ ಗದ್ಯಪಾಠದ ಕಲಿಕೆಯ ಮುನ್ನ 'ಅರ್ಥೈಸಿ – ಓದಿ' ಎಂಬ ಪದ ಪಟ್ಟಿಯನ್ನು ನೀಡಿರುವುದು ಏಕೆಂದರೆ,

(ಅ) ಪಠ್ಯ ಭಾಗದ ಓದು ಸುಲಭವಾಗುವುದು
(ಬ) ವಿಶೇಷ ಪರಿಕಲ್ಪನಾ ಪದಗಳನ್ನು ಗಮನಿಸಿ ಭಾವ ಗ್ರಹಿಸುವುದು
(ಕ) ಓದುವಿಕೆಯನ್ನು ಖಚಿತಪಡಿಸುವುದು ಸಾಧ್ಯ
(ಡ) ಓದುವಾಗ ವಿಷಯ ಗ್ರಹಿಕೆ ತಡೆಯಿಲ್ಲದೆ ಸಾಗುವುದು
ಉತ್ತರ _______________

ನೀವು ಯಾವ ಉತ್ತರವನ್ನು ಬರೆದರೂ ಸರಿ, ಏಕೆಂದರೆ ಎಲ್ಲವೂ ಪಠ್ಯದ ಗ್ರಹಣಯುಕ್ತ ಓದುಗಾರಿಕೆಯ ಉದ್ದೇಶಕ್ಕೆ ಪೂರಕವಾಗಿದೆ. ಇದು ವಿಷಯ ಗ್ರಹಿಕೆಯೊಂದಿಗೆ ಹೊಸಪದ, ನುಡಿಗಟ್ಟುಗಳ ಕಲಿಕೆಗೆ ಮತ್ತು ಶಬ್ದಸಂಪತ್ತನ್ನು ಹೆಚ್ಚಿಸಿಕೊಳ್ಳಲು ಸಹಾಯವಾಗುವುದು.

ಮೇಲಿನ ಎರಡು ಚಟುವಟಿಕೆಗಳೂ ಪಠ್ಯಾಂಶಗಳ ಗ್ರಹಿಕೆಗೆ ಮತ್ತು ಚಿಂತನೆಗೆ ಸಹಾಯಕವಾಗಿವೆ.

**i)** ಪಂಥಾಹ್ವಾನ, ಹರಲೀಲೆ ಎಂಬ ಹಳೆಗನ್ನಡ, ನಡುಗನ್ನಡದ ಪಾಠಗಳಿಗೆ; ಬಲಿಯನಿತ್ತೊಡೆ ಮುನಿವೆಂ, ಕಾವ್ಯ ಸಂಗಮ ಎಂಬ ಹಳೆಗನ್ನಡ ಮತ್ತು ನಡುಗನ್ನಡದ ಪದ್ಯಪಾಠಗಳು ಅಂತ್ಯದಲ್ಲಿ ಪದ ವಿಂಗಡಣಾ ಓದು ನೀಡಿದೆ ಮತ್ತು ಪೂರ್ವ ಕಥೆಯ ವಿವರವಾದ ಪ್ರಸ್ತಾಪ ಮಾಡಲಾಗಿದೆ. ಇದು ವಿದ್ಯಾರ್ಥಿಗಳಿಗೆ ಅತ್ಯಗತ್ಯವಾದ ಕಲಿಕೆಯ ಚಟುವಟಿಕೆ (ಶಿಕ್ಷಕರು ತರಗತಿಯಲ್ಲಿ ಬೋಧಿಸುವಾಗ ಕೇಳುವ ಮಾತ್ರದಿಂದ ವಿದ್ಯಾರ್ಥಿಗಳು ಸ್ವತಂತ್ರವಾಗಿ

ಓದಿಕೊಳ್ಳಲು ಸಾಧ್ಯವಾಗದಿರಬಹುದು). ಇದರ ಅಭ್ಯಾಸದಿಂದ ಆ ಪಠ್ಯ ಭಾಗದ ಮುಂದಿನ ಭಾಗ ಅಥವಾ ಚರಣಗಳನ್ನೂ **ಓದುವ ಶಕ್ತಿ ಬಳಸಿಕೊಳ್ಳಬಲ್ಲರು.**

**ii)** ನೀಡಿರುವ ಪದ ಮತ್ತು ಪದಗಳ ಅರ್ಥವಿವರವು ವಿದ್ಯಾರ್ಥಿಗಳಿಗೆ ಹಳೆಗನ್ನಡ ಮತ್ತು ನಡುಗನ್ನಡ ಪದಗಳ ಅರ್ಥ ಪರಿಚಯ ಮಾಡಿ ಸ್ವತಂತ್ರವಾಗಿ ಸಾಹಿತ್ಯಾಂಶ ಗ್ರಹಿಸಲು ಸಹಾಯವನ್ನೊದಗಿಸುತ್ತವೆ.

**iii)** ಪಠ್ಯಾಧಾರ ಟಿಪ್ಪಣಿಯು– ಪಠ್ಯವಿಚಾರ ಮತ್ತು ಭಾವಾರ್ಥ ಗ್ರಹಿಕೆಗೆ ಅಗತ್ಯವಾದ ಪರಿಕಲ್ಪನೆಗಳನ್ನು ಸರಳವಾಗಿ ಪರಿಚಯಿಸುತ್ತವೆ. ಪದ ಸಂಪತ್ತಿನೊಂದಿಗೆ ಸಾಹಿತ್ಯ ಜ್ಞಾನವನ್ನು ವೃದ್ಧಿಗೊಳಿಸುವ ಚಟುವಟಿಕೆಯಾಗಿದೆ. ವಿದ್ಯಾರ್ಥಿಗಳ ಸ್ವತಂತ್ರ ಓದಿಗೆ ಪರಾಮರ್ಶೆಯನ್ನು ಒದಗಿಸುತ್ತದೆ.

ಮೇಲಿನ ಮೂರು ಚಟುವಟಿಕೆಗಳು ಒಟ್ಟಾರೆ ಕನ್ನಡ ಗದ್ಯ ಪದ್ಯಾದಿಗಳನ್ನು ಅರ್ಥಪೂರ್ಣವಾಗಿ ಓದಲು ಮತ್ತು ಪದ ಶಕ್ತಿಯನ್ನು ಬೆಳೆಸಿಕೊಳ್ಳಲು ಪರಿಣಾಮಕಾರಿಯಾದ ಚಟುವಟಿಕೆಗಳಾಗಿವೆ.

**iv)** ಪಾಠ್ಯಾಂತ್ಯ ಚಟುವಟಿಕೆಗಳು:

**ಅಭ್ಯಾಸ**

ಪ್ರತಿ ಗದ್ಯ / ಪದ್ಯ ಪಾಠದ ಅಂತ್ಯದ ಅಭ್ಯಾಸ ಭಾಗದಲ್ಲಿ ಮೂರು ರೀತಿಯ ಅಭ್ಯಾಸ ಚಟುವಟಿಕೆಗಳನ್ನು ಕಾಣುವಿರಿ. ಆ ಭಾಗಗಳಲ್ಲಿ ಯಾವ ಕಲಿಕೆಯ ಉದ್ದೇಶಗಳನ್ನು ಗಮನಿಸಲಾಗಿದೆ.

| ಪೋಷಕ ಅಭ್ಯಾಸ | ಪ್ರೇರಣ ಅಭ್ಯಾಸ | ಸೈದಾಂತಿಕ ಅಭ್ಯಾಸ |
|---|---|---|
| | | |

ಪಠ್ಯಪುಸ್ತಕದ ಸಹಾಯದಿಂದ ಸೂಕ್ಷ್ಮವಾಗಿ ಅವಲೋಕಿಸಿ ಪತ್ತೆಮಾಡಿರಿ. (1) ಪೋಷಕ ಅಭ್ಯಾಸದಲ್ಲಿ ನಿಗದಿತ ಪಠ್ಯಾಂಶದ ಕುರಿತ ವಸ್ತುನಿಷ್ಠ ಪ್ರಶ್ನೆಗಳು (2) ಪಠ್ಯದ ವಿಷಯ ಗ್ರಹಿಕೆಯ ದೀರ್ಘ ಉತ್ತರಾಪೇಕ್ಷಿ ಪ್ರಶ್ನೆಗಳು (3) ಸೈದ್ಧಾಂತಿಕ ಭಾಷಾ ವಿವರ ಆಧಾರಿತ ಗ್ರಹಿಕೆಯ ಮತ್ತು ಅನ್ವಯ ಪ್ರಶ್ನೆಗಳಿರುತ್ತವೆ.

ಪೋಷಕ ಅಭ್ಯಾಸ ವಿಭಾಗದ ಪ್ರಶ್ನೆಗಳು:

- ಒಂದು ಅಥವಾ ಎರಡು ವಿಧಗಳ ವಸ್ತುನಿಷ್ಠ ಪ್ರಶ್ನೆಗಳನ್ನು ನೀಡಲಾಗಿದೆ.
- ಪ್ರಶ್ನೆಗಳು ಪಾಠದ ವಿಷಯದ ಮೇಲೆ, ವ್ಯಾಕರಣಾಂಶ ಮತ್ತು ಪದಸಂಪತ್ತಿಗೆ ಸಂಬಂಧಿಸಿ, ಖಚಿತ ಮತ್ತು ನಿರ್ದಿಷ್ಟ ಜ್ಞಾನ ಪರೀಕ್ಷಿಸಲು ನೀಡಲಾಗಿದೆ. (1) ಇಲ್ಲಿ ವಿಮರ್ಶಿಸಬಹುದಾದ ಅಂಶವೆಂದರೆ ಈ ಭಾಗದ ಪ್ರಶ್ನೆಗಳು ಸಾಹಿತ್ಯಾಂಶದ ಬದಲು ಭಾಷಾಂಶಗಳ ಮೇಲೆ ಇದ್ದರೆ ಸೂಕ್ತ (2) ಭಾಷಾಂಶಗಳಲ್ಲೂ ತಿಳುವಳಿಕೆ ಮತ್ತು ಅನ್ವಯದ ಉದ್ದೇಶಗಳಿಗೆ ಸಂಬಂಧಿಸಿದ ಪ್ರಶ್ನೆಗಳಿದ್ದರೆ ಉತ್ತಮ.

**ಪ್ರೇರಣ ಅಭ್ಯಾಸದ ಪ್ರಶ್ನೆಗಳು:**

ಆಯಾ ಪಾಠಗಳ ಸಾಹಿತ್ಯಾಂಶ ಸಂಬಂಧಿಸಿದಂತೆ ಒಂದು ವಾಕ್ಯದಲ್ಲಿ, ಮೂರು ನಾಲ್ಕು ವಾಕ್ಯಗಳಲ್ಲಿ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸುವ ಮತ್ತು ಸಂದರ್ಭ ಸ್ವಾರಸ್ಯ ಅಪೇಕ್ಷಿಸುವ ಪ್ರಶ್ನೆಗಳು ಇವೆ.

ಎಲ್ಲ ಪ್ರಶ್ನೆಗಳು ಉತ್ತಮವಾಗಿ ನಿಗದಿತ ಪಠ್ಯವಿಷಯ ಗ್ರಹಿಕೆಯನ್ನು ಪರೀಕ್ಷಿಸಲು ಸೂಕ್ತವಾಗಿವೆ. ಬರೆವಣಿಗೆ ಮತ್ತು ಮಾತುಗಾರಿಕೆ ಕೌಶಲಗಳ ಅಭ್ಯಾಸಕ್ಕೆ ಉತ್ತಮ ಚಟುವಟಿಕೆಗಳಾಗಿವೆ.

**ಸೈದ್ಧಾಂತಿಕ ಭಾಷಾಭ್ಯಾಸ ಭಾಗದಲ್ಲಿ:**

(i) ಶಾಸ್ತ್ರೀಯ ವ್ಯಾಕರಣದ ಪರಿಚಯ ಮತ್ತು ನಿಗಮನ ವಿಧಾನಗಳನ್ನು ಅನುಸರಿಸಲಾಗಿದೆ. ಇದು ಸೂಕ್ತವೂ ಆಗಿದೆ. (ಕಾರಣ ಮಾಧ್ಯಮಿಕ ಹಂತದಲ್ಲಿ ಸೈದ್ಧಾಂತಿಕ ಅಂಶಗಳ ಪರಿಕಲ್ಪನೆಗಳನ್ನು ಪ್ರಾಯೋಗಿಕ ವ್ಯಾಕರಣ ರೂಪದಲ್ಲಿ ನೀಡಿರುವುದನ್ನು ತಿಳಿದಿದ್ದೀರಿ) ಕೊನೆಯಲ್ಲಿ ಚಿಕ್ಕ ಉತ್ತರ ಮಾದರಿ ಪ್ರಶ್ನೆಗಳನ್ನು ಸೂಕ್ತವಾಗಿ ನೀಡಲಾಗಿದೆ. ಹಳೆಗನ್ನಡ, ವಿಭಕ್ತಿ ಪ್ರತ್ಯಯಗಳನ್ನು ಉತ್ತಮವಾಗಿ ಪರಿಚಯಿಸಲಾಗಿದೆ.

ವ್ಯಾಕರಣಕ್ಕೆ ಅನುಸರಿಸಿದಂತೆಯೇ ಛಂದಸ್ಸು ಮತ್ತು ಅಲಂಕಾರ ಕಲಿಕೆಗೂ ಚಟುವಟಿಕೆಗಳನ್ನು ನೀಡಲಾಗಿದೆ.

(ii) ಪೂರಕ ಓದು

- ಈ ಶೀರ್ಷಿಕೆಯಲ್ಲಿ ಚಟುವಟಿಕೆಗಳನ್ನು ಪಠ್ಯೇತರ ಕೃತಿಗಳನ್ನು ಆಧಾರ ಕೃತಿಗಳನ್ನು ಓದುವ ಸಲಹೆ ಇದೆ.
- ವಿವಿಧ ಪ್ರಕಾರದ(ನಾಟಕ , ಆತ್ಮ ಕಥನ, ಕವನ ಸಂಗ್ರಹ ) ಪುಸ್ತಕಗಳನ್ನು ಓದುವ ಸಲಹೆ ಇದೆ.

(ಸೂಚಿಸಿದ ಕೃತಿಗಳನ್ನು ದೊರಕಿಸಿಕೊಳ್ಳಬಹುದಾದ ಕ್ರಮಗಳನ್ನು ತಿಳಿಸಿದರೆ ಹೆಚ್ಚು ಅನುಕೂಲಕರ ವೆನಿಸುವುದು)

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

1. ಪಠ್ಯ ಪುಸ್ತಕ ಸಮಿತಿಯ ಅಧ್ಯಕ್ಷರು ಮುನ್ನುಡಿಯಲ್ಲಿ ಬೋಧಕರಿಗೆ ನೀಡಿರುವ ಯಾವುದಾದರೂ ನಾಲ್ಕು ಮಾಹಿತಿಗಳನ್ನು ಪಟ್ಟಿ ಮಾಡಿ.
2. ಪಠ್ಯ ಪುಸ್ತಕದಲ್ಲಿ ನೀಡಿರುವ ಕಲಿಕೆಯ ಚಟುವಟಿಕೆಗಳ ವೈವಿಧ್ಯ ಮತ್ತು ಅವುಗಳ ಅನುಕೂಲಗಳನ್ನು ಪಟ್ಟಿ ಮಾಡಿರಿ.
3. ಪಠ್ಯ ವಿಷಯ ನಿರೂಪಣೆಯ ವಶಿಷ್ಟ್ಯಗಳನ್ನು ತಲಾ ಒಂದು ಗದ್ಯ ಮತ್ತು ಒಂದು ಪದ್ಯ ಪಾಠದ ಮೂಲಕ ವಿವರಿಸಿ.

**3.4.4. ಸಾರಾಂಶಿಸೋಣ**

- ಪಠ್ಯ ಪುಸ್ತಕ ವಿಮರ್ಶೆಯು ಪಠ್ಯಾಂಶಗಳ ವಿವರಣಾತ್ಮಕ ವಿಶ್ಲೇಷಣೆ ಹೊರತು ಪಠ್ಯ ಪುಸ್ತಕ ಮೌಲ್ಯ ಮಾಪನವಲ್ಲ.
- ಪಠ್ಯಪುಸ್ತಕ ವಿಮರ್ಶೆ ಮಾಡುವಾಗ ಪಾಠದ ಸಾಹಿತ್ಯ ಪ್ರಕಾರ, ಪಠ್ಯಾಂಶ ವಿವರ(content) ವೈಶಿಷ್ಟ, ಸಾಹಿತ್ಯ ವಿಶೇಷ ಮತ್ತು ಮೌಲ್ಯ, ಭಾಷಾವೈಶಿಷ್ಟ, ಶಾಸ್ತ್ರ ಸಂಬಂಧ ಅಂಶಗಳನ್ನು ಗುರುತಿಸುಕೊಳ್ಳುವುದಾಗಿರುತ್ತದೆ.
- ಪಠ್ಯ ಪುಸ್ತಕ ವಿಮರ್ಶೆಯ ಅಗತ್ಯವನ್ನು ಶಿಕ್ಷಕರ ದೃಷ್ಟಿಯಿಂದ ಪಠ್ಯ ಕ್ರಮದ ಗುರಿ ಸಾಧನೆಯ ಮತ್ತು ಬೋಧನೆಗೆ ಯೋಜನೆ ಮಾಡಿಕೊಳ್ಳುವ ದೃಷ್ಟಿಯಿಂದ ಅಗತ್ಯ ಎಂದು ಹೇಳಬಹುದು. ವಿದ್ಯಾರ್ಥಿಗಳ ದೃಷ್ಟಿಯಿಂದ ಸ್ವತಂತ್ರ ವಾಚನ, ಆಳವಾದ ವಾಚನ, ವಿಶ್ಲೇಷಣಾತ್ಮಕ ವಾಚನ ಮತ್ತು ಅಧ್ಯಯನ ಕೌಶಲ ಬೆಳವಣಿಗೆ, ನಿಯೋಜಿತ ಕಾರ್ಯ ಪೂರೈಕೆ, ಸೃಜನಶೀಲ ಚಟುವಟಿಕೆ ಪೂರಕವಾಗುವಂತೆ ಬಳಸಿಕೊಳ್ಳಲು ಸಹಾಯಕ ಎಂದು ಹೇಳಬಹುದು.
- ಪಠ್ಯ ಪುಸ್ತಕ ವಿಮರ್ಶೆಯು ಪಠ್ಯಪುಸ್ತಕದ ಬಾಹ್ಯ ಲಕ್ಷಣಗಳು ಮತ್ತು ಸಾಮನ್ಯ ಸ್ವರೂಪದ ಲಕ್ಷಣಗಳ ವಿಶ್ಲೇಷಣೆಯನ್ನೂ ಆಂತರಿಕ ಲಕ್ಷಣಗಳಲ್ಲಿ ಪಠ್ಯ ವಿಷಯದ ಆಯ್ಕೆ (ಸಾಹಿತ್ಯ ಪ್ರಕಾರ ವೈವಿಧ್ಯ ಮತ್ತು ಪಠ್ಯ ವಸ್ತು ವೈವಿಧ್ಯವಿರುವಂತೆ) ವಿಷಯ ಪ್ರತಿಪಾದನ ಕ್ರಮದ ವಿಶ್ಲೇಷಣೆಯನ್ನೂ ಒಳಗೊಳ್ಳುತ್ತದೆ.

- ಪಠ್ಯ ವಿಷಯ ನಿರೂಪಣೆಯ ವಿಶ್ಲೇಷಣೆಯಲ್ಲಿ ವಿದ್ಯಾರ್ಥಿಗಳ ಮಾನಸಿಕ ಮಟ್ಟಕ್ಕೆ ವಿಷಯದ ಸೂಕ್ತತೆ, ವಿಷಯದ ವಿವರಣೆಯಲ್ಲಿರುವ ಸಾಹಿತ್ಯ ವಿಶೇಷತೆಗಳ ವೈವಿಧ್ಯ, ಶೈಲಿವೈವಿಧ್ಯಗಳನ್ನು ಮೌಲ್ಯ–ಸಂದೇಶಗಳನ್ನು ಗುರುತಿಸುವುದು ಮುಖ್ಯವಾಗಿರುತ್ತದೆ.
- ಕೃತಿಕಾರರ ಮತ್ತು ಕೃತಿಗಳ ಪರಿಚಯ, ಆಸಕ್ತಿ ಪೋಷಕ ಪಾಠಗಳ ಅಳವಡಿಕೆ, ಅವುಗಳ ಸಮರ್ಪಕತೆಯನ್ನು ಕುರಿತೂ ವಿಮರ್ಶಿಸುವುದು ಅಗತ್ಯ.
- ಕಲಿಕೆಯ ಚಟುವಟಿಕೆಗಳ ಸಮರ್ಪಕ ಸಂಖ್ಯೆ ಮತ್ತು ಗುಣಮಟ್ಟದ ವಿಶ್ಲೇಷಣೆಯನ್ನೂ ಪಠ್ಯಪುಸ್ತಕ ವಿಮರ್ಶೆಯ ಸಂದರ್ಭದಲ್ಲಿ ಗುರುತಿಸಬೇಕು.

### 3.4.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1 ಮತ್ತು 2

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

(ಅ) ಶಿಕ್ಷಕರ ದೃಷ್ಟಿಯಿಂದ: (1) ಪಠ್ಯದ ಆಶಯದ ನಿಖರತೆ (2) ಪಠ್ಯಕ್ರಮದ ಗುರಿ ಸಾಧನೆ (3) ಪಠ್ದ ವ್ಯಾಪ್ತಿ ನಿರ್ಧರಿಸಲು (4) ಕಲಿಕಾ ಚಟುವಟಿಕೆಗಳನ್ನು ರೂಪಿಸಲು

(ಆ) ವಿದ್ಯಾರ್ಥಿಗಳ ದೃಷ್ಟಿಯಿಂದ: (1)ವಾಚನ ತರಬೇತಿ (2)ನಿಯೋಜಿತ ಕಾರ್ಯ ಕೈಗೊಳ್ಳಲು (3) ಪೂರಕ ಕೈಗೊಳ್ಳಲು (4) ಅಭ್ಯಾಸಗಳನ್ನು ಪೂರೈಸಲು (5) ಸ್ವ ಮೌಲ್ಯಮಾಪನ

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

ಪಠ್ಯಪುಸ್ತಕ ಸಮಿತಿಯವರು– ಬೋಧಕರಿಗೆ ನೀಡಿರುವ ಮಾಹಿತಿ

1. ಸ್ವ ಕಲಿಕೆ ಮತ್ತು ಬೋಧನಾಂಶಗಳ ಸಮತೋಲನ
2. ಮಾನವೀಯ ಮೌಲ್ಯಗಳಿಗೆ ಒತ್ತು ಕೊಡುವುದು
3. ಮುನ್ತಯಾರಿ, ಅರ್ಥೈಸಿ ಓದು, ಕರ್ತೃ ಭಾವ ನೀಡಿರುವುದು
4. ಪಠ್ಯಾಧಾರ ಟಿಪ್ಪಣಿ, ಪಠ್ಯಾಧಾರ ಪೂರಕ ವಿಷಯಾಂಶ ನೀಡಿರುವುದು
5. ವಿಶೇಷ ಪರಿಕಲ್ಪನಾ ಪದಗಳನ್ನು ನೀಡಿರುವ ಉದ್ದೇಶ

### 3.4.6. ಘಟಕಾಂತ್ಯ ಅಭ್ಯಾಸಗಳು

1. "ಕನ್ನಡ ಭಾಷಾ ಶಿಕ್ಷಕರು ಪಠ್ಯಪುಸ್ತಕಗಳನ್ನು ಆಧರಿಸಿ ಬೋಧಿಸುವುದರೊಂದಿಗೆ ಕನ್ನಡ ಪಠ್ಯ ಪುಸ್ತಕ ವಿಮರ್ಶೆಯನ್ನೂ ಮಾಡುವ ಅಗತ್ಯವನ್ನು ಸಮರ್ಥಿಸಿರಿ.
2. ಭಾಷಾ ಪಠ್ಯಪುಸ್ತಕ ವಿಮರ್ಶೆಯಲ್ಲಿ ಪರಿಗಣಿಸಬೇಕಾದ ಅಂಶಗಳನ್ನು ವಿವರಿಸಿ.
3. ಪ್ರೌಢಶಾಲೆಯ ಯಾವುದಾದರೊಂದು ಕನ್ನಡ ಪಠ್ಯಪುಸ್ತಕದ ಗದ್ಯ ಅಥವಾ ಪದ್ಯಭಾಗವನ್ನು ವಿಮರ್ಶಿಸಿರಿ.

### 3.4.7. ಪರಾಮರ್ಶನ ಸೂಚಿ


1. ಕನ್ನಡ ಬೋಧನ ಸಂಪದ: ಡಿ.ಎಸ್.ಇ.ಆರ್.ಟಿ., ಬೆಂಗಳೂರು.
2. ಡಾ. ಮಹಾಬಲೇಶ್ವರ ರಾವ್: ಪ್ರೌಢಶಾಲೆಗಳಲ್ಲಿ ಕನ್ನಡ ಬೋಧನೆ, ನವ ಕರ್ನಾಟಕ ಪ್ರಕಾಶನ, ಬೆಂಗಳೂರು
3. ಕೆ. ಸಚ್ಚಿದಾನಂದಯ್ಯ : ಕನ್ನುಡಿಯ ಕಲಿಕೆ, ಸತ್ಯಶ್ರೀ ಪ್ರಕಾಶನ, ಮೈಸೂರು
4. ಡಾ. ಆರ್. ಚಲಪತಿ : ನುಡಿಯೊಡನೆ, ಧಾತ್ರಿ ಪ್ರಕಾಶನ ಬೆಂಗಳೂರು

**ಜಾಲ ಕೊಂಡಿಗಳು**


1. https://www.researchgate.net>2752(PDF)A Framework for text book analysis
2. https://media.neliti.com>media(PDF) a text book analysis
3. https://www.acedemia>criticalanalysis of text books of English (PDF)
4. Ijset.ncert.nic.in>pdf-files [PDF] an evaluative study of text book in higher sea level.
5. https://www.researchgate.net(PDF) A critical review of literature on English language teaching text book
6. https://bright classroom ideas.com>…..

## ಬ್ಲಾಕ್ 3 : ಕನ್ನಡ ಪಠ್ಯಕ್ರಮ ಮತ್ತು ಪಠ್ಯೇತರ ಚಟುವಟಿಕೆಗಳು

### ಘಟಕ 5 : ಪಠ್ಯ ಆಧಾರಿತ ಚಟುವಟಿಕೆಗಳು

**ಘಟಕದ ರಚನೆ**

3.5.1. ಕಲಿಕೆಯ ಉದ್ದೇಶಗಳು
3.5.2. ಪೀಠಿಕೆ
3.5.3. ಕಲಿಕೆಯ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು
3.5.3.1. ಸೈದ್ಧಾಂತಿಕ ಭಾಷಾ ಅಂಶಗಳ ಕಲಿಕೆಗೆ ಚಟುವಟಿಕೆಗಳು
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1
3.5.3.3. ಶಬ್ದಭಂಡಾರದ ಬೆಳವಣಿಗೆಗೆ ಚಟುವಟಿಕೆಗಳು
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ - 2
3.5.3.3. ಸಾಹಿತ್ಯ ಸಂಬಂಧಿ ಅಂಶಗಳ ಅರಿವು ಮೂಡಿಸುವ ಚಟುವಟಿಕೆಗಳು
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ - 3
3.5.4. ಸಾರಾಂಶಿಸೋಣ
3.5.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು - 1 2 ಮತ್ತು 3
3.5.6. ಘಟಕಾಂತ್ಯ ಅಭ್ಯಾಸಗಳು
3.5.7. ಪರಾಮರ್ಶನ ಸೂಚಿ

**3.5.1. ಕಲಿಕೆಯ ಉದ್ದೇಶಗಳು**

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿ ಶಿಕ್ಷಕ ಶಿಕ್ಷಕಿಯರು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು;

- ವಿದ್ಯಾರ್ಥಿಗಳ ಕನ್ನಡ ಭಾಷಾ ಪ್ರಭುತ್ವಕ್ಕೆ ಪೂರಕವಾದ ಭಾಷಾಸೈದ್ಧಾಂತಿಕ ಅಂಶಗಳನ್ನು ಗುರುತಿಸುವರು;
- ಸೈದ್ಧಾಂತಿಕ ಅಂಶಗಳಾದ ವ್ಯಾಕರಣ, ಛಂದಸ್ಸು ಅಲಂಕಾರ ಸಂಬಂಧಿ ಅಂಶಗಳನ್ನು ಗುರುತಿಸಿ ಅದನ್ನು ಕಲಿಸಲು ಚಟುವಟಿಕೆಗಳನ್ನು ರಚಿಸುವರು;
- ಕನ್ನಡ ಭಾಷೆಯ ಪದಗಳ ಸ್ವರೂಪವನ್ನು ವಿಶ್ಲೇಷಿಸುವರು;
- ವಿದ್ಯಾರ್ಥಿಗಳಲ್ಲಿ ಕನ್ನಡ ಪದಸಂಪತ್ತಿನ ಬೆಳವಣಿಗೆಗೆ ಚಟುವಟಿಕೆಗಳನ್ನು ರೂಪಿಸಿ, ಅನ್ವಯಿಸುವರು;
- ಸಾಹಿತ್ಯ ಸಂಬಂಧಿ ರಚನಾತ್ಮಕ ಚಟುವಟಿಕೆಗಳನ್ನು ಪಟ್ಟಿ ಮಾಡುವರು;
- ಪಠ್ಯದಲ್ಲಿರುವ ಸಾಹಿತ್ಯಾಂಶ ಆಧರಿಸಿ ರಚನಾತ್ಮಕ ಚಟುವಟಿಕೆಗಳನ್ನು ನಿರ್ವಹಿಸುವ ಕ್ರಮವನ್ನು ವಿವರಿಸುವರು; ಮತ್ತು
- ರಚನೆ, ರೂಪಾಂತರ, ಅನುವಾದಕ್ಕೆ ಸಂಬಂಧಿಸಿದ ಚಟುವಟಿಕೆಗಳನ್ನು ಕೈಗೊಳ್ಳಲು ಸಮರ್ಥರಾಗುವರು.

**3.5.2. ಪೀಠಿಕೆ**

ವಿದ್ಯಾರ್ಥಿಗಳು ಪ್ರೌಢಶಾಲಾ ಹಂತಕ್ಕೆ ಬರುವ ವೇಳೆಗೆ ಕನ್ನಡ ಭಾಷೆಯನ್ನು ಸ್ವಲ್ಪಮಟ್ಟಿಗೆ ಕರಗತ ಮಾಡಿಕೊಂಡಿರುತ್ತಾರೆ. ಈ ಹಂತದಲ್ಲಿ ಅದಕ್ಕೆ ಮತ್ತಷ್ಟು ಸಂಸ್ಕಾರದ ನೆಲೆ ಉಂಟಾಗಬೇಕು. ವಿದ್ಯಾರ್ಥಿಗಳು ಭಾಷಾ ಕೌಶಲಗಳನ್ನು, ಭಾಷಾಪ್ರೌಢಿಮೆಯನ್ನು, ವಿಷಯಜ್ಞಾನ, ಸಾಹಿತ್ಯಾಭಿರುಚಿ ಮೊದಲಾದವುಗಳನ್ನು ಮತ್ತಷ್ಟು ಪ್ರಬುದ್ಧ ಗೊಳಿಸಿಕೊಳ್ಳಬೇಕು. ಈ ದಿಕ್ಕಿನಲ್ಲಿ ಪ್ರಯತ್ನಶೀಲರಾಗಲು ಪಠ್ಯಪುಸ್ತಕಗಳು 'ಮುನ್ನುಡಿಯಿಂದ ಹಿಡಿದು ಪೂರಕ ಓದಿನವರೆಗೂ' ಅಗತ್ಯವಾದ ಅನೇಕ ಪದ, ಅರ್ಥ, ಪಠ್ಯಾಧಾರ ಟಿಪ್ಪಣಿ, ವ್ಯಾಕರಣ ಮತ್ತಿತರ ಸೈದ್ಧಾಂತಿಕ ಭಾಷಾಭ್ಯಾಸ ಚಟುವಟಿಕೆಗಳನ್ನು ಒದಗಿಸಿದೆ.

ನೀವು ಈಗಾಗಲೇ ಪಾಠಗಳನ್ನು ಭಾವಯುಕ್ತವಾಗಿ, ಶುದ್ಧವಾಗಿ ಓದುವುದು, ಆಶುಭಾಷಣಗಳಲ್ಲಿ ಭಾಗವಹಿಸುವುದು, ವಿಷಯವನ್ನು ಸರಿಯಾಗಿ ಗ್ರಹಿಸುವುದು, ಸ್ವತಂತ್ರವಾಗಿ ಪ್ರಶ್ನೆಗಳಿಗೆ ಬಾಯ್ದೆರೆಯಾಗಿ ಮತ್ತು ಲಿಖಿತವಾಗಿ ಉತ್ತರಿಸುವುದು ಮುಂತಾದ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸುವಂತೆ ಅವಕಾಶ ನೀಡಿರುವಿರಿ. ಭಾಷಾಪ್ರಭುತ್ವದ ಬೆಳವಣಿಗೆಗೆ ವೈವಿಧ್ಯಮಯವಾದ ಚಟುವಟಿಕೆಗಳನ್ನು ಹಮ್ಮಿಕೊಳ್ಳಬಹುದು. ಈ ಚಟುವಟಿಕೆಗಳು ನಿರ್ದಿಷ್ಟ ಉದ್ದೇಶದಿಂದ ಅಪೇಕ್ಷಿತ ರೀತಿಯಲ್ಲಿ ನಡೆಯಬೇಕು. ಈ ಹಿನ್ನೆಲೆಯಲ್ಲಿ ಭಾಷಾಬೋಧನಾ ತರಗತಿಗಳಲ್ಲಿ ಅನುಸರಿಸಬಹುದಾದ ಚಟುವಟಿಕೆಗಳನ್ನು ಈ ಘಟಕದಲ್ಲಿ ವಿಚಾರಮಾಡೋಣ.

### 3.5.3. ಕಲಿಕೆಯ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

ಭಾಷಾ ಬೋಧನೆಯ ಉದ್ದೇಶಗಳನ್ನು ಕ್ರಿಯಾಶೀಲವಾಗಿ ಸಾಧಿಸಲು ತರಗತಿ ಚಟುವಟಿಕೆಗಳು ಮತ್ತು ತರಗತಿ ಹೊರಗಿನ ಇತರ ಪೂರಕ ಚಟುವಟಿಕೆಗಳು ಅತ್ಯಂತ ಸಹಕಾರಿಯಾಗುತ್ತವೆ. ಹಾಗಾಗಿ ಈ ಚಟುವಟಿಕೆಗಳ ಕುರಿತು ಆಳವಾಗಿ ಕಲಿಯೋಣ. ಅಧ್ಯಯನ ಸೌಲಭ್ಯಕ್ಕಾಗಿ ಚಟುವಟಿಕೆಗಳನ್ನು ಸೈದ್ಧಾಂತಿಕ ಭಾಷಾಅಂಶಗಳ ಕಲಿಕೆಗೆ ಚಟುವಟಿಕೆಗಳು, ಶಬ್ದಭಂಡಾರದ ಬೆಳವಣಿಗೆಗೆ ಚಟುವಟಿಕೆಗಳು ಮತ್ತು ಸಾಹಿತ್ಯ ಸಂಬಂಧಿ ಅಂಶಗಳ ಅರಿವು ಮೂಡಿಸುವ ಚಟುವಟಿಕೆಗಳು ಎಂದು ವಿಭಾಗಿಸಿಕೊಳ್ಳಬಹುದು.

ಚಟುವಟಿಕೆಗಳನ್ನು ರೂಪಿಸುವ ಸಂದರ್ಭದಲ್ಲಿ ಕೆಳಗಿನ ಅಂಶಗಳನ್ನು ಗಮನಿಸಿಕೊಳ್ಳಬೇಕು:

- ಚಟುವಟಿಕೆಯ ಮೂಲಕ ಸಾಧಿಸಬೇಕಾದ ಉದ್ದೇಶಗಳು ಅಧ್ಯಾಪಕರು ಮತ್ತು ವಿದ್ಯಾರ್ಥಿಗಳಿಬ್ಬರಿಗೂ ಸ್ಪಷ್ಟವಾಗಿ ತಿಳಿದಿರಬೇಕು;
- ಚಟುವಟಿಕೆಗಳನ್ನು ಅಧ್ಯಾಪಕರು ತಾವೊಬ್ಬರೇ ಅಥವಾ ವಿದ್ಯಾರ್ಥಿಗಳ ಜೊತೆಗೂಡಿ ರೂಪಿಸಬಹುದು;
- ಚಟುವಟಿಕೆ ನೀಡುವ ಮೊದಲು ಆ ಚಟುವಟಿಕೆ ಅಪೇಕ್ಷಿಸುವ ಅಂಶಗಳನ್ನು ವಿದ್ಯಾರ್ಥಿಗಳಿಗೆ ಸ್ಪಷ್ಟವಾಗಿ ತಿಳಿಸಬೇಕು;
- ಚಟುವಟಿಕೆಗೆ ಅಗತ್ಯವಾದ ವಸ್ತುಗಳು, ಉಪಕರಣಗಳು ವಿದ್ಯಾರ್ಥಿಗಳ ಬಳಿ ಇದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು;
- ಉದ್ದೇಶಗಳಿಗನುಗುಣವಾಗಿ ಚಟುವಟಿಕೆಗಳ ಕೋಠಿಯನ್ನು ಅಥವಾ ಸಂಗ್ರಹವನ್ನು ತಯಾರಿಸಿಕೊಳ್ಳುವುದು ಒಳ್ಳೆಯದು;
- ಚಟುವಟಿಕೆ ಬಯಸುವ ಸಾಮರ್ಥ್ಯಗಳು ವಿದ್ಯಾರ್ಥಿಗಳಲ್ಲಿವೆಯೇ ಎಂಬುದನ್ನು ಗುರುತಿಸಿಕೊಳ್ಳಬೇಕು;
- ಚಟುವಟಿಕೆಗಳನ್ನು ವಿದ್ಯಾರ್ಥಿಗಳ ಅಗತ್ಯ ಮತ್ತು ಸನ್ನಿವೇಶಕ್ಕನುಗುಣವಾಗಿ ಬದಲಿಸಿಕೊಳ್ಳುವಂತೆ ನಮ್ಯತೆಯನ್ನು ಉಳಿಸಿಕೊಳ್ಳಬೇಕು.

### 3.5.3.1. ಸೈದ್ಧಾಂತಿಕ ಭಾಷಾ ಅಂಶಗಳ ಕಲಿಕೆಗೆ ಚಟುವಟಿಕೆಗಳು

**(ಅ) ವ್ಯಾಕರಣಕ್ಕೆ ಸಂಬಂಧಿಸಿದ ಅಂಶಗಳ ಕಲಿಕೆಗೆ ಚಟುವಟಿಕೆಗಳು**

ವ್ಯಾಕರಣಕ್ಕೆ ಸಂಬಂಧಿಸಿದ ಅಂಶಗಳನ್ನು ಕಲಿಸುವಾಗ ಕೆಳಗಿನ ಚಟುವಟಿಕೆಗಳನ್ನು ಅನ್ವಯಿಸಿಕೊಳ್ಳಬಹುದು:

**1. ಕಾರ್ಯಕ್ರಮಾನ್ವಯ ಕಲಿಕೆ**

ಇದನ್ನು ವ್ಯಾಕರಣ ಕಲಿಕೆಯಲ್ಲಿ ಪರಿಣಾಮಕಾರಿಯಾಗಿ ಬಳಸಿಕೊಳ್ಳಬಹುದಾದ ಚಟುವಟಿಕೆಯಾಗಿದೆ. ಪ್ರತಿ ಚೌಕಟ್ಟಿನಲ್ಲಿ ವಿದ್ಯಾರ್ಥಿ ಪ್ರಶ್ನೆಯೊಂದಿಗೆ ಉತ್ತರಿಸಿ ಮುಂದಿನ ಚೌಕಟ್ಟಿನಲ್ಲಿ ತನ್ನ ಉತ್ತರವನ್ನು ಸರಿ ಉತ್ತರದೊಂದಿಗೆ ಹೋಲಿಸಿಕೊಳ್ಳುತ್ತಾನೆ/ಳೆ.

ಉದಾಹರಣೆ:

| **ಸರಿ / ಉತ್ತರಗಳು** | 1 | ಶ್ರೀ ರಾಮನು ಕಾಡಿಗೆ ಹೋದನು<br>ಈ ವಾಕ್ಯದಲ್ಲಿ ಬಳಸಲಾಗಿರುವ ಮೂರು ಪದಗಳನ್ನು ಕನ್ನಡ ವ್ಯಾಕರಣದ ಹಿನ್ನೆಲೆಯಲ್ಲಿ ಏನೆಂದು ಗುರುತಿಸಬಹುದು? |
|---|---|---|
| ಕರ್ತೃ, ಕರ್ಮ ಮತ್ತು ಕ್ರಿಯೆ | 2 | ಶಬರಿಯು ಶ್ರೀರಾಮನನ್ನು ಕಂಡಳು.<br>ಅವಳು ಹಣ್ಣನ್ನು ಕೊಟ್ಟಳು.<br>ಅಡಿಗೆರೆ ಎಳೆದ ಪದಗಳನ್ನು ಏನೆಂದು ಗುರುತಿಸಬಹುದು? |
| ಕ್ರಿಯಾಪದಗಳು | 3 | ಈ ವಾಕ್ಯದಲ್ಲಿ ಶಬರಿ ಎಂಬುದು ಕರ್ತೃಪದವಾದರೆ ________ ಮತ್ತು________ಕ್ರಿಯಾಪದಗಳಾಗಿವೆ. |
| ಕಂಡಳು ಕೊಟ್ಟಳು | 4 | ಆ ಎರಡು ವಾಕ್ಯಗಳಲ್ಲಿ ________ ಮತ್ತು ______ಎಂಬ ಪದಗಳು ಕರ್ಮಪದಗಳಾಗಿವೆ. |

| | | |
|---|---|---|
| ಶ್ರೀರಾಮನನ್ನು ಹಣ್ಣನ್ನು | 5 | ಹೀಗೆ ವಾಕ್ಯಗಳಲ್ಲಿ ಸಾಮಾನ್ಯವಾಗಿ ಕರ್ತೃ ಮತ್ತು ಕ್ರಿಯಾ ಪದಗಳೊಂದಿಗೆ ________ ಇರುತ್ತದೆ |
| ಕರ್ಮ ಪದ | 6 | ಶಬರಿ ಬಂದಳು<br>ಅವಳು ನಲಿದಳು<br>ಮೇಲಿನ ವಾಕ್ಯಗಳಲ್ಲಿ ಕರ್ಮಪದ, ಕ್ರಿಯಾಪದ ಮತ್ತು ಕರ್ತೃಪದಗಳಲ್ಲಿ ಯಾವ ಪದವು ಕಾಣಬರುವುದಿಲ್ಲ? |
| ಕರ್ಮಪದ | 7 | ________ ಮತ್ತು ________ ಪದಗಳಿಗೆ ಅಕರ್ಮಕ ಕ್ರಿಯಾಪದಗಳು ಎಂದು ಹೆಸರು. |
| ಬಂದಳು ನಲಿದಳು | 8 | ಬಂದಳು ಮತ್ತು ನಲಿದಳು. ಈ ಕ್ರಿಯಾಪದಗಳಿಗೆ ಯಾವ ಪದದ ಅಗತ್ಯವಿಲ್ಲ ? |
| ಕರ್ಮಪದ | 9 | ಕಂಡಳು ಮತ್ತು ಕೊಟ್ಟಳು ಎಂಬ ಕ್ರಿಯಾಪದಗಳಿಗೆ ಕರ್ಮಪದ ಅಗತ್ಯವಿರುವುದರಿಂದ ಇವುಗಳನ್ನು ________ ಕ್ರಿಯಾಪದಗಳು ಎನ್ನಲಾಗುವುದು. |
| ಸಕರ್ಮಕ | 10 | ಕೆಳಗಿನವುಗಳಲ್ಲಿ ಸಕರ್ಮಕ ಮತ್ತು ಅಕರ್ಮಕ ಕ್ರಿಯಾಪದಗಳನ್ನು ವರ್ಗೀಕರಿಸಿ<br>(ಅ) ಮಲಗಿದನು (ಬ) ತಿಂದನು (ಕ) ಬಿಡುವಳು (ಡ) ನಿಂತನು (ಇ) ತರುವರು (ಪ) ಹಂಚಿದರು (ಜ) ಹೋದಳು |

| **ಸಕರ್ಮಕ** | **ಅಕರ್ಮಕ** |
|---|---|
| ಬ. | ಅ |
| ಕ | ಡ |
| ಇ | ಜ |
| ಪ. | |

ಈ ಕಾರ್ಯಕ್ರಮ ಕಲಿಕಾ ವಿಧಾನವನ್ನು ವ್ಯಾಕರಣ ಕಲಿಕೆಗೆ ಬಳಸಿಕೊಂಡಂತೆ ಛಂದಸ್ಸು ಮತ್ತು ಅಲಂಕಾರಗಳ ಕಲಿಕೆಯಲ್ಲೂ ಬಳಸಿಕೊಳ್ಳಬಹುದು.
ಉದಾಹರಣೆಯಾಗಿ ಕಂದಪದ್ಯದ ಛಂದೋ ಲಕ್ಷಣ ಕಲಿಕೆ ಅಥವಾ ಉಪಮಾಲಂಕಾರದ ಕಲಿಕೆಗೆ ಚಟುವಟಿಕೆಯಾಗಿ ರಚಿಸಿರಿ.

**2. ಪದವ್ಯವಸ್ಥೆಯ ಪರಿಚಯ:**
ವಾಕ್ಯದಲ್ಲಿ ಪದವ್ಯವಸ್ಥೆಯಿದೆ. ಈ ವ್ಯವಸ್ಥೆಯನ್ನು ಸ್ಪಷ್ಟಪಡಿಸಲು ಕೆಳಗಿನ ಚಟುವಟಿಕೆ ನೀಡಬಹುದು:
**ಚಟುವಟಿಕೆ:**
ಸೂಚನೆ: ಈ ಕೆಳಗಿನ ಉದಾಹರಣ ವಾಕ್ಯಗಳನ್ನು ಗಮನಿಸಿ, ಅವುಗಳಲ್ಲಿ ಕಾಣಬರುವ ದೋಷಗಳನ್ನು ಗುರುತಿಸಿ. (2 ಮತ್ತು 3 ನೇ ಕಾಲಂಗಳನ್ನು ತುಂಬಿಸದೆ ನೀಡಿರಿ. ಉದಾಹರಣೆಗಾಗಿ ಇಲ್ಲಿ ತುಂಬಿಸಲಾಗಿದೆ).

| ತಪ್ಪು ವಾಕ್ಯಗಳು | ತಪ್ಪು ಎಂದು ಗುರುತಿಸಲು ಕಾರಣ | ಸರಿಯಾದ ವಾಕ್ಯಗಳು |
|---|---|---|
| ದನಗಳು ಹುಲ್ಲುಗಾವಲಿನಲ್ಲಿ ಮೇಯುತ್ತಿದೆ. | 'ಮೇಯುತ್ತಿವೆ' ಎಂದಾಗಬೇಕು. | ದನಗಳು ಹುಲ್ಲುಗಾವಲಿನಲ್ಲಿ ಮೇಯುತ್ತಿವೆ. |
| ನನ್ನಲ್ಲಿ ಅನೇಕ ಪುಸ್ತಕಗಳಿದೆ. | 'ಪುಸ್ತಕಗಳಿವೆ' ಎಂದಾಗಬೇಕು | ನನ್ನಲ್ಲಿ ಅನೇಕ ಪುಸ್ತಕಗಳಿವೆ. |
| ನಾಯಿಗಳು ಕಂದುಬಣ್ಣದವಾಗಿರುತ್ತದೆ. | 'ಕಂದುಬಣ್ಣದವಾಗಿರುತ್ತವೆ' ಎಂದಾಗಬೇಕು | ನಾಯಿಗಳು ಕಂದುಬಣ್ಣದವಾಗಿರುತ್ತವೆ. |

ವಿದ್ಯಾರ್ಥಿಗಳಿಗೆ ನಿಗಮನದ ಮೂಲಕ ವ್ಯಾಕರಣದ ನಿಯಮವನ್ನು ಗುರುತಿಸಲು ತಿಳಿಸಿ.
ಅಪೇಕ್ಷಿತ ನಿಗಮನ: "ನಾಮಪದಗಳು ಬಹುವಚನದಲ್ಲಿರುವಾಗ ಕ್ರಿಯಾಪದವೂ ಬಹುವಚನದಲ್ಲಿರಬೇಕು".

**ಅಕರ್ಮಕ/ಸಕರ್ಮಕ ಕ್ರಿಯಾಪದಗಳು**
ಅಕರ್ಮಕ ಧಾತು (ಅಕರ್ಮಕ ಕ್ರಿಯಾಪದ)ಗಳ ಬಗ್ಗೆ ತಿಳಿದಿರುವಿರಿ.  ಈ ಉದಾಹರಣೆಗಳನ್ನು ಗಮನಿಸಿ:

| | |
|---|---|
| ಮಕ್ಕಳು ಮಲಗಿದರು | ತಾಯಿಯು ಮಕ್ಕಳನ್ನು ಮಲಗಿಸಿದಳು |
| ವಿದ್ಯಾರ್ಥಿಗಳು ಓದಿದರು | ಅಧ್ಯಾಪಕರು ವಿದ್ಯಾರ್ಥಿಗಳನ್ನು ಓದಿಸಿದರು |

ಅಧ್ಯಾಪಕಿ: ಈ ಎರಡು ಗುಂಪಿನ ವಾಕ್ಯಗಳ ನಡುವೆ ಇರುವ ವ್ಯತ್ಯಾಸವೇನು?
ಅಪೇಕ್ಷಿತ: ಮೊದಲ ಗುಂಪು ಅಕರ್ಮಕ ಕ್ರಿಯಾಪದಗಳನ್ನೊಳಗೊಂಡಿದೆ. ಎರಡನೆಯ ಗುಂಪು ಸಕರ್ಮಕ ಕ್ರಿಯಾಪದಗಳನ್ನೊಳಗೊಂಡಿದೆ.
ಅಧ್ಯಾಪಕಿ: ಸರಿ. ಅಕರ್ಮಕ ಕ್ರಿಯಾಪದಗಳು ಸಕರ್ಮಕವಾಗಿರುವುದು ಹೇಗೆ?
ಅಪೇಕ್ಷಿತ: "ಮತ್ತೊಂದು ಕರ್ತೃಪದವನ್ನು ಸೇರಿಸುವುದರಿಂದ ಅಕರ್ಮಕ ಕ್ರಿಯಾಪದವು ಸಕರ್ಮಕವಾಗುತ್ತದೆ".ಕಜ

**3. ಸಮಾಸ ಪ್ರಕರಣ**

| | | |
|---|---|---|
|  | **ಸಮುದ್ರದ+ ಒಳಗೆ–ಸಮುದ್ರದೊಳಗೆ** | **ಸಮುದ್ರದ ಒಳಗೆ** |
|  | **ಬಾನು + ಎತ್ತರ–ಬಾನೆತ್ತರ** | **ಬಾನಿನಷ್ಟು ಎತ್ತರ** |

ಅಧ್ಯಾಪಕಿ: ಎರಡನೇ ಕಾಲಂನ ಪದಗಳಲ್ಲಿ ಸಂಧಿಕಾರ್ಯವಾಗಿದೆ ಎಂದೂ ಮೂರನೇ ಕಾಲಂನ ಪದಗಳಲ್ಲಿ ಸಮಾಸವಾಗಿದೆ ಎಂದೂ ಹೇಳುತ್ತೇವೆ. ಸಂಧಿ ಮತ್ತು ಸಮಾಸಗಳು ಎಂದರೇನು ಮತ್ತು ಅವುಗಳ ನಡುವಿನ ವ್ಯತ್ಯಾಸವೇನು ತಿಳಿಸಿ.
ಅಪೇಕ್ಷಿತ ನಿಗಮನ: ಸಂದಿಕಾರ್ಯವು ವಿಭಕ್ತಿ ಪ್ರತ್ಯಯಗಳಿಗೆ ಸಂಬಂಧಿಸಿದುದಲ್ಲ; ಸಮಾಸದಲ್ಲಿ ವಿಭಕ್ತಿ ಪ್ರತ್ಯಯಗಳ ಪಾತ್ರ ಪ್ರಮುಖವಾಗುತ್ತದೆ.
ಸಂಧಿಯು ಅಕ್ಷರಗಳ ಸೇರುವಿಕೆಗೆ ಸಂಬಂಧಿಸಿದುದು; ಸಮಾಸವು ಪದಗಳ ಸೇರುವಿಕೆಗೆ ಸಂಬಂಧಿಸಿದುದು.

4. ಪಠ್ಯ ಆಧರಿಸಿ ಭಾಷೆಗೆ ತಕ್ಕಂತೆ 'ಪ್ರಾಯೋಗಿಕ ವ್ಯಾಕರಣ(functional grammar) ಬೋಧಿಸಬೇಕು. ಪಾಠದ ವಿಷಯದೊಡನೆ ಅನೌಪಚಾರಿಕವಾಗಿ ಪಾಠದಲ್ಲಿ ಬರುವ ವ್ಯಾಕರಣಾಂಶವನ್ನು ಅರಿವಿಗೆ ತರುವುದು ಅಗತ್ಯ.

| |
|---|
| "ಈ ಮರಕ್ಕೆ ಹಸಿರಿನಿಂದ ನಳನಳಿಸುವ, ಫಲಪುಷ್ಪ ಮತ್ತು ನೆರಳು ಕೊಡುವ ವರವನ್ನು ನೀಡು" |

('ತಿಳಿ ಕನ್ನಡ' – 10ನೇ ತರಗತಿಯ ಮೊದಲ ಪಾಠ – ದ್ವಿತೀಯ ಭಾಷೆ).
ಮರಕ್ಕೆ ಎಂಬ ಪದವನ್ನು ಗಮನಿಸಿ. ನೀವು ಈಗಾಗಲೇ ವಿಭಕ್ತಿ ಪ್ರತ್ಯಯಗಳ ಕುರಿತು ಕಲಿತಿದ್ದೀರಿ. 'ಮರಕ್ಕೆ' ಎಂಬ ಪದದಲ್ಲಿ ಯಾವ ವಿಭಕ್ತಿ ಪ್ರತ್ಯಯ ಇದೆ?
ಅಪೇಕ್ಷಿತ: ಚತುರ್ಥೀ ವಿಭಕ್ತಿ ಪ್ರತ್ಯಯ
ಅಧ್ಯಾಪಕಿ: ಇದೇ ಪದಕ್ಕೆ ಎಲ್ಲ ವಿಭಕ್ತಿ ಪ್ರತ್ಯಯಗಳನ್ನು ಪ್ರಯೋಗಿಸಿ ವಾಕ್ಯದಲ್ಲಿ ಬಳಸಿ.

| | | |
|---|---|---|
|  | ಪ್ರಥಮಾ ವಿಭಕ್ತಿ | ಉದಾಹರಣೆ: ಮರವು ಬರಡಾಗಿದೆ. |
| | | |
|  | ದ್ವಿತೀಯಾ ವಿಭಕ್ತಿ | |
|  | ತೃತೀಯಾ ವಿಭಕ್ತಿ | |
|  | ಚತುರ್ಥೀ ವಿಭಕ್ತಿ | |
|  | ಪಂಚಮೀ ವಿಭಕ್ತಿ | |
|  | ಷಷ್ಠೀ ವಿಭಕ್ತಿ | |
|  | ಸಪ್ತಮೀ ವಿಭಕ್ತಿ | |

**5. ವಚನಗಳ ಪರಿಚಯ: (ತಿಳಿ ಕನ್ನಡ, ದ್ವಿತೀಯ ಭಾಷೆ, ಪಾಠ 6)**

ಕನ್ನಡದಲ್ಲಿ ಪದಗಳು ಬಹುವಚನ ರೂಪ ಪಡೆಯುವಾಗ ಸಾಮಾನ್ಯವಾಗಿ 'ಗಳು' 'ಅರು' ಅಥವಾ 'ಅಂದಿರು' ಎಂಬ ಪ್ರತ್ಯಯಗಳಲ್ಲಿ ಒಂದನ್ನು ಸೇರಿಕೊಳ್ಳುತ್ತವೆ. ಕೆಳಗಿನ ಚಿತ್ರಗಳ ಸಹಾಯದಿಂದ ಪದಗಳನ್ನು ಗುರುತಿಸಿ ಅವುಗಳಿಗೆ ಯಾವ ಬಹುವಚನ ಪ್ರತ್ಯಯ ಸೇರುತ್ತದೆ ತಿಳಿಸಿ.



7. **ಛಂದಸ್ಸಿನ ಕಲಿಕೆಗೆ ಸಂಬಂಧಿಸಿದ ಚಟುವಟಿಕೆಗಳು:**

**ಅ. ಕೆಳಗೆ ಸೂಚಿಸಿರುವ ವಿನ್ಯಾಸಕ್ಕೆ ಅನುಗುಣವಾದ ಪದಗಳನ್ನು ಕಂಡುಹಿಡಿಯಿರಿ.**

| | | |
|---|---|---|
| 1 | **ಉದಾಹರಣೆ:** ᑌ ᑌ ᑌ | **ನಮನ** |
| 2 | ᑌ – ᑌ – ᑌ | |
| 3 | – – – – | |
| 4 | – ᑌ – ᑌ | |
| 5 | ᑌᑌᑌᑌᑌ | |

**ಆ. ಕೆಳಗೆ ಪದ್ಯದ ಒಂದು ಸಾಲಿನ ಪದಗಳಿಗೆ ಪ್ರಸ್ತಾರ ಹಾಕಲಾಗಿದೆ. ಅವುಗಳು ಸರಿಯಾಗಿದೆಯೇ ಎಂಬುದನ್ನು ಗುರುತಿಸಿ, ಸರಿಯಿದ್ದರೆ 'ಸರಿ' ಎಂದು ಗುರುತಿಸಿ. ಸರಿ ಇಲ್ಲದಿದ್ದರೆ ಕಾರಣ ತಿಳಿಸಿ ಸರಿಪಡಿಸಿ.**

ತಿರುಕನೊರ್ವನೂರ ಮುಂದೆ ಮುರುಕು ಧರ್ಮ ಶಾಲೆಯಲ್ಲಿ :

**ಇ. ಛಂದಸ್ಸಿನ ಪರಿಚಯ ಮಾಡುವಲ್ಲಿ ಅನ್ವಯಿಸಿಕೊಳ್ಳಬಹುದಾದ ಇತರ ಚಟುವಟಿಕೆಗಳು:**

**ಇತರ ಚಟುವಟಿಕೆಗಳು:** ಈಗಾಗಲೇ ನೀವು ಬೋಧಿಸಿರುವ ಪದ್ಯಗಳನ್ನು ವಿದ್ಯಾರ್ಥಿಗಳ ಗಮನಕ್ಕೆ ತಂದು ಪದ್ಯರಚನೆಯ ಕೆಲವು ಸರಳ ಲಕ್ಷಣಗಳನ್ನು ಗುರುತಿಸಲು ಕೇಳಿ. ಉದಾಹರಣೆಗೆ: ಪಾದಗಳ (ಸಾಲು) ಸಂಖ್ಯೆ, ಪ್ರತಿ ಪಾದದಲ್ಲಿ ಬಂದಿರುವ ಅಕ್ಷರಗಳ ಸಂಖ್ಯೆ ಆಗಿರಬಹುದು. ಹಾಗೆಯೇ ಆದಿಪ್ರಾಸ, ಅಂತ್ಯಪ್ರಾಸ, ಒಳ ಪ್ರಾಸ ಇತ್ಯಾದಿ.

- ಆ ನಿಯಮ (ಲಕ್ಷಣ) ಗಳಿಗೆ ಅನುಗುಣವಾಗಿ ಕೊಟ್ಟ ಒಂದು ಪದ್ಯವನ್ನು ರಚಿಸುವ ಚಟುವಟಿಕೆ ನೀಡಬಹುದು.
- ವಿದ್ಯಾರ್ಥಿಗಳನ್ನು ನಾಲ್ಕು/ಐದು ತಂಡಗಳಾಗಿ ವಿಂಗಡಿಸುವುದು; ಆ ಪ್ರತಿ ತಂಡಕ್ಕೆ ಭಿನ್ನ ಛಂದೋ ಪ್ರಕಾರದಲ್ಲಿರುವ (ಪದ್ಯಗಳ) ಒಂದೊಂದು ಚರಣವನ್ನು ಮಿಂಚು ಪಟ್ಟಿಗಳಲ್ಲಿ ಬರೆದು ನೀಡುವುದು; ತಂಡದ ಸದಸ್ಯರು ಪ್ರಸ್ತಾರ ಹಾಕಿ ಛಂದೋ ಲಕ್ಷಣಗಳನ್ನು ಗುರುತಿಸಲು ಕೇಳುವುದು. ಕೊಟ್ಟ ಹಾಳೆಗಳಲ್ಲಿ ಬರೆಯಲು ಹೇಳುವುದು; ಕೊನೆಯಲ್ಲಿ ಪ್ರತಿ ತಂಡದ ಒಬ್ಬೊಬ್ಬ ಸದಸ್ಯ ಓದಿ ಹೇಳಲು ತಿಳಿಸುವುದು; ಶಿಕ್ಷಕರು ಅಂಕಗಳನ್ನು ನೀಡಿ ಹಿಮ್ಮಾಹಿತಿ ನೀಡುವುದು ಒಂದು ಉತ್ತಮ ಚಟುವಟಿಕೆಯಾಗಬಹುದು.
- ಮೂರು ಅಕ್ಷರಗಳುಳ್ಳ ಅನೇಕ ಮಿಂಚು ಪಟ್ಟಿಗಳನ್ನು(flash cards) ತಯಾರಿಸಿಕೊಂಡು; ತರಗತಿಯ (ಎಂಟನೆಯ) ಮಕ್ಕಳನ್ನು ಮೂರು ಅಥವಾ ನಾಲ್ಕು ತಂಡ ಮಾಡಿ; ಒಬ್ಬೊಬ್ಬ ವಿದ್ಯಾರ್ಥಿ ಬಂದು

ಪಟ್ಟಿಯನ್ನು ಎತ್ತಿಕೊಂಡು ಕ್ಷಣದಲ್ಲೇ(pick and tell) ಪ್ರಸ್ತಾರ ಹಾಕಿ ಅಕ್ಷರಗಣದ ಹೆಸರು ಹೇಳಲು ಕೇಳಬಹುದು. ವಿಜೇತ ತಂಡವನ್ನು ಗುರುತಿಸಬಹುದು.

**ಈ. "ಕನ್ನಡ ಕಾವ್ಯ ಕಾಮನಬಿಲ್ಲು" (ಛಂದೋರೂಪಗಳ ಪರಿಚಯ)**

ಈ ಶೀರ್ಷಿಕೆಯಡಿಯಲ್ಲಿ ಹಿರಿಯ ಲೇಖಕ ಮತ್ತು ವಿಮರ್ಶಕರಾದ ಡಾ. ಸಿ.ಎನ್. ರಾಮಚಂದ್ರನ್ ಅವರ ಪರಿಕಲ್ಪನೆಯಲ್ಲಿ ಕನ್ನಡದ ಛಂದೋರೂಪಗಳ ದರ್ಶನ ಮಾಡಿಸುವ ವೀಡಿಯೋ ಕಾರ್ಯಕ್ರಮವಿದು. "ಛಂದೋ ರೂಪವೆಂದರೆ, ಪದ್ಯಗಳ ಸಾಲುಗಳ ಹಾಗೂ ಸಾಲುಗಳಲ್ಲಿ ಬರುವ ಸ್ವರ–ವ್ಯಂಜನ ಅಕ್ಷರಗಳ ವಿಶಿಷ್ಟ ಮಧುರ ಜೋಡಣೆ. ಕನ್ನಡ ಕಾವ್ಯ ಚರಿತ್ರೆಯಲ್ಲಿ ಇಂತಹ ಜೋಡಣೆಗಳು ಕಾಲಕಾಲಕ್ಕೆ ಬದಲಾಗಿದೆ. ಈ ಯೋಜನೆಯಲ್ಲಿ ಕನ್ನಡ ಕಾವ್ಯಗಳ ಪ್ರತಿಯೊಂದು ಛಂದೋರೂಪಕ್ಕೂ ಸಂಗೀತ (ಗೇಯಾಂಶ) ಸ್ಪರ್ಶ ನೀಡಲಾಗಿದೆ" ಎಂದು ಡಾ.ರಾಮಚಂದ್ರನ್ ರವರು ಹೇಳಿದ್ದಾರೆ. ಅಲ್ಲದೆ ಇದರ ಉದ್ದೇಶವನ್ನು ಹೀಗೆ ಹೇಳಿದ್ದಾರೆ: "ಭಿನ್ನ ಕಾಲಘಟ್ಟದಲ್ಲಿನ ಕನ್ನಡ ಕವಿಗಳು ಉಪಯೋಗಿಸಿರುವ ಭಿನ್ನ ಛಂದೋರೂಪಗಳನ್ನು ಸಂಕ್ಷಿಪ್ತವಾಗಿ ಪರಿಚಯಿಸುವುದು, ಆಯಾ ರೂಪಗಳ ಪ್ರಾತಿನಿಧಿಕ ಪದ್ಯಗಳನ್ನು ಗಾಯನದ ಮೂಲಕ ಪ್ರಸ್ತುತಪಡಿಸುವುದು ಈ ಯೋಜನೆಯ ಉದ್ದೇಶ" ಎಂದೂ ಹೇಳಿದ್ದಾರೆ. ಕನ್ನಡ ಪಠ್ಯಪುಸ್ತಕಗಳ ಪದ್ಯಭಾಗ ದಲ್ಲಿ ವಿವಿಧ ಛಂದೋ ರೂಪದ ಪದ್ಯಗಳನ್ನು ಅಧ್ಯಯನ ಮಾಡಬೇಕಾಗಿರುವ ವಿದ್ಯಾರ್ಥಿಗಳಿಗೂ ಬೋಧಿಸಬೇಕಾಗಿರುವ ಶಿಕ್ಷಕರಿಗೂ ಇದೊಂದು ಅತ್ಯಂತ ಉಪಯುಕ್ತ ಪಠ್ಯಸಂಬಂಧಿ ಚಟುವಟಿಕೆಗಳಿಗೆ ಬಳಸಿಕೊಳ್ಳಬಹುದಾದ ಆಕರವೂ ಸಾಧನವೂ ಆಗಿದೆ. ಪ್ರತಿ ಒಂದೊಂದು ಎಪಿಸೋಡಿನಲ್ಲಿ ಒಂದು ಪದ್ಯ( ಹಾಡು) ಮತ್ತು ಆಯಾ ಛಂದೋಪ್ರಕಾರದ ಪರಿಚಯ ವಿವರ ಇರುತ್ತದೆ. ಪ್ರತಿ ವಿಡಿಯೋ ಯೂಟ್ಯೂಬ್‌ನಲ್ಲಿ " ಕನ್ನಡ ಕಾವ್ಯ ಕಾಮನಬಿಲ್ಲು" ಹೆಸರಿನಲ್ಲಿ ಅಪ್ಲೋಡ್ ಆಗಿದೆ. ಶಿಕ್ಷಕರು ಇದನ್ನು ಪಠ್ಯ ಬೋಧನೆಯ ಆರಂಭ ಅಥವಾ ಅಂತ್ಯದಲ್ಲಿ ಪರಿಣಾಮಕಾರಿಯಾಗಿ ಬಳಸಿಕೊಳ್ಳಬಹುದು.

ಈ ವಿಡಿಯೋಗಳನ್ನು ವೀಕ್ಷಿಸಲು ಬಳಸಬೇಕಾದ ಕೊಂಡಿ.

https://www.YouTube.com/watch?v=KyCHCyhLubQ&list=PLtwIoJsCrSo401W3kPnvwerQILcOBHY91

ಹಳೆಗನ್ನಡ, ನಡುಗನ್ನಡ ಕಾವ್ಯಗಳಿಗೆ ಈ ಸ್ವರೂಪ ನೀಡಿರುವುದು ಕನ್ನಡ ಬೋಧನೆಗೆ ಬಳಸಿಕೊಳ್ಳಬಹುದಾದ ಚಟುವಟಿಕೆಗಳಿಗೆ ಅತ್ಯುತ್ತಮ ಆಕರವಾಗಿದೆ.

**8. ಶಬ್ದಾಲಂಕಾರದ ಅರಿವು ಮೂಡಿಸಲು ಚಟುವಟಿಕೆಗಳು**

ಪ್ರಾಸಾನುಪ್ರಾಸಗಳ ಶಬ್ದಾಲಂಕಾರವನ್ನು ನೀವೀಗಾಗಲೇ ಅರಿತಿರುವಿರಿ. ಪದ್ಯದ ಪ್ರತಿಪಾದದ ಒಂದನೆಯ ಮತ್ತು ಎರಡನೆಯ ಸ್ವರಗಳ ನಡುವಿನ ಒಂದೇ ರೀತಿಯ ವ್ಯಂಜನಾಕ್ಷರ ಬರುವುದನ್ನು 'ಪ್ರಾಸ' ಎಂದು ಬಲ್ಲಿರಿ. ಪ್ರಾಸದ ಅನುಸಂಧಾನದಿಂದಾಗಿ ಕವಿತೆಯು ಅಥವಾ ಕವಿಯ ಉಕ್ತಿಯು (ಭಾಷೆಯು) ನಾದ ಗುಣದಿಂದ ಕಂಗೊಳಿಸುತ್ತದೆ ಎಂಬುದನ್ನು ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಸಾಮಾನ್ಯ ಓದುಗರು ಮರೆಯುವಂತಿಲ್ಲ. ಕನ್ನಡ ಕೈಪಿಡಿ (ಭಾಗ–1) ಯಲ್ಲಿ ಓದಿದ ಈ ಕೆಳಗಿನ ಸಾಲು ಥಟ್ಟನೆ ನೆನಪಿಗೆ ಬಂದಿರಬೇಕಲ್ಲವೇ?

| |
|---|
| ಉದಾಹರಣೆ: "ಎಳೆಗಿಳಿಗಳ ಬಳಗಗಳು ನಳನಳಿಸಿ ಬೆಳೆದ ಕಳವೆಯ<br>ಎಳೆಯ ಕಾಳಿಗೆ ಎಳಸಿ ಬಂದವು" |

ಹೀಗೆ ನೀವೂ ಚಿಂತಿಸಿ ನಾನಾ ರೀತಿಯಲ್ಲಿ ಪದ ಸಂಯೋಗ ಮಾಡಿ ಪ್ರಾಸದ ಸೊಬಗನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಬಹುದು ಮತ್ತು ಭಾಷೆಯ ನಾದ ಗುಣವನ್ನು ಅವರ ಅನುಭವಕ್ಕೆ ತರಬಹುದು. (ಬಹುಶಃ ಹರಟೆ ಚಾವಡಿಯ ಅಲ್ಲಮಪ್ರಭುವಿನಂತಿರುವ ಕಣ್ಣನ್ ವಿದ್ವಾಂಸರ ಮಾತುಗಾರಿಕೆ ನೆನಪಿಸಿಕೊಳ್ಳುತ್ತಿರಬಹುದು).

- ಈ ಕೆಳಗಿನ ಒಂದು ಪ್ರಾಸಯುಕ್ತ ರಚನೆಯನ್ನು ಕೇವಲ ಉದಾಹರಣೆಯಾಗಿ ಗಮನಿಸಿರಿ:

"ಹುಡುಗರು ಹೊರಗೆ ಹೋಗದೆ ಹರಟೆ ಹೊಡೆಯದೆ ಹೊತ್ತು ಹಾಳುಗೆಡಹದೆ ಹಲವು ಹೊತ್ತಿಗೆಗಳನ್ನು ಹುಡುಕಿ ತಂದು, ಹರಕೆ ಹೊತ್ತಂತೆ ಹಠ ಹಿಡಿದು ಹೊಗಳಿಕೆಯನ್ನೂ ಹಂಬಲಿಸದೆ ಓದಿದರು".

ಇದರಲ್ಲಿ 'ಹ' ಕಾರದಿಂದ ಮೊದಲಾಗುವ ಅಂದರೆ ಪ್ರಾಸವಿರುವ ಪದ ಸಂಯೋಜನೆ ಇದೆ.(ಅ/ಆ-ಹ/ಹಾ) ಉಚ್ಚಾರಗಳನ್ನು ಕಲಿಸುವುದಕ್ಕೂ ಇದನ್ನು ಬಳಸಬಹುದು) 'ಹ' ವ್ಯಂಜನಾಕ್ಷರವು ಪುನರಾವರ್ತನೆಯಾಗಿ ಪ್ರಾಸದ ಪ್ರಭಾವವನ್ನು ತೋರುತ್ತಿದೆ.

- ವಿದ್ಯಾರ್ಥಿಗಳನ್ನು ತಲಾ ನಾಲ್ಕು ವಿದ್ಯಾರ್ಥಿಗಳ ವಿವಿಧ ತಂಡಗಳನ್ನಾಗಿ ಮಾಡಿರಿ. ಆದಿಪ್ರಾಸ ಅಥವಾ ಅಂತ್ಯಪ್ರಾಸ ಅಥವಾ ಒಳಪ್ರಾಸ ಪದರಚನೆ ಮಾಡಿ, ಪ್ರತಿಯೊಂದನ್ನು ವಾಕ್ಯದಲ್ಲಿ ಬಳಸಲು ತಿಳಿಸಿರಿ. ನಂತರ ಪ್ರತಿ ತಂಡದ ಒಬ್ಬೊಬ್ಬರಿಂದ ಓದಿಸಿ ಅಂಕಗಳನ್ನು ನೀಡಿ.
- ಪಠ್ಯದ ಒಂದು ಪದ್ಯ ಬೋಧನೆಯ ವೇಳೆಯಲ್ಲಿ ಪ್ರಾಸ ಗುರುತಿಸಲು ಕಲಿತ ನಂತರ ಬೇರೊಂದು ಪಠ್ಯೇತರ ಪದ್ಯವನ್ನು ಹಾಡಿ ಅಥವಾ ವಾಚಿಸಿ ಅದರಲ್ಲಿ ಬಂದಿರುವ ಪ್ರಾಸಗಳನ್ನು ಗುರುತಿಸಲು ಕೇಳಬಹುದು.
- ಪಠ್ಯದಲ್ಲಿರುವ ಡಾ. ಜಿ.ಎಸ್. ಶಿವರುದ್ರಪ್ಪರವರ 'ಸಂಕಲ್ಪ ಗೀತೆ' ಪದ್ಯ ಬೋಧಿಸಿದಾಗ 'ಣ' ಅಂತ್ಯಪ್ರಾಸ ಗಮನಕ್ಕೆ ತಂದು ಈ ಕೆಳಗಿನ ಚಟುವಟಿಕೆ ಕೊಡಬಹುದು.

**ಸೂಚನೆ:** ಪದ್ಯದ ಕೊನೆಯ ಪಾದ ಹೇಳಿಸಿ, ಅದೇ ಧಾಟಿಯಲ್ಲಿ ಕೆಲವು ಸಾಲುಗಳನ್ನು ಹೀಗೆ ರಚಿಸಿದರೆ ಬಿಟ್ಟು ಜಾಗದಲ್ಲಿ ಬಳಸಬಹುದಾದ 'ಣ' ಅಂತ್ಯ ಪ್ರಾಸ ಪದಗಳನ್ನು ತುಂಬಿರಿ.

ಅದಕ್ಕಾಗಿ
ನಾಡಿನ ಜನರೆಲ್ಲ ________________
ಸ್ನೇಹದ ಕೊಂಡಿಯ ______________
ಕಟ್ಟಿದ ಭರವಸೆಗಳ ______________
ಶ್ರಮದಿ ಅನುದಿನ ______________
ಪಡೆದ ಫಲವನು ______________
(ಅಗತ್ಯಬಿದ್ದರೆ - ಹಂಚೋಣ, ನೆನೆಯೋಣ, ದುಡಿಯೋಣ, ಬೆಸೆಯೋಣ, ಒಂದಾಗೋಣ ಎಂಬ ಪದಗಳನ್ನು ಪದಗಳ ಸುಳುಹುಗಳನ್ನು ನೀಡಿರಿ).

**9. ಅರ್ಥಾಲಂಕಾರದ ಚಟುವಟಿಕೆಗಳು**

ಅರ್ಥಾಲಂಕಾರಗಳ ಬೋಧನೆಯು ವಿದ್ಯಾರ್ಥಿಗಳಿಗೂ ಶಿಕ್ಷಕರಿಗೂ ವಿನೂತನವಾದ ಅನುಭವ, ಸಂತೋಷ ಮತ್ತು ತೃಪ್ತಿಯನ್ನು ತಂದುಕೊಡುವವು. ಅರ್ಥಾಲಂಕಾರಗಳು ಬಹುವಾಗಿ ಕಲ್ಪನೆಯ ವಿಚಾರ ಮತ್ತು ಕಾಲ್ಪನಿಕ ಸಂಬಂಧಗಳ ಸುತ್ತ ಸುತ್ತುತ್ತವೆ. ಇದು ಯಾವುದೇ ಸಾಹಿತ್ಯದಲ್ಲಿ ಬಳಕೆಯಾಗುವ ಭಾಷಾವಿಶೇಷವಾಗಿದೆ, ಅದರಲ್ಲೂ ಪದ್ಯಸಾಹಿತ್ಯದಲ್ಲಿ ಇನ್ನೂ ಹೆಚ್ಚು ಎನ್ನಬಹುದು. ಪ್ರಕೃತಿಯ ವಿಶೇಷಗಳು, ಮುಂಗಾರುಮಳೆಯ ಮನೋಹರತೆಯೂ ಆಗಬಹುದು ಪ್ರಳಯ, ಚಂಡಮಾರುತಗಳ ರೌದ್ರನರ್ತನವೂ ಆಗಬಹುದು, ಸೂರ್ಯೋದಯ-ಸೂರ್ಯಾಸ್ತಗಳ ರಮಣೀಯತೆಯೂ ಆಗಬಹುದು. ಕರೋನ ತಂದ ಕಷ್ಟಸಂಕೋಲೆಗಳೂ ವರ್ಣಿತವಾಗಿರುವುದನ್ನು ಮಾಧ್ಯಮಗಳಲ್ಲಿ ಕಂಡಿರಬಹುದು. ರಾಜ್ಯದ, ರಾಷ್ಟ್ರದ, ವ್ಯಕ್ತಿಗಳ, ನಾಯಕರ ಮತ್ತು ಪುಟಾಣಿಗಳ ಸಾಧನೆಗಳನ್ನು ವರ್ಣಿಸಿರುವುದನ್ನೂ ಕಂಡಿರಬಹುದು. ಅಂದರೆ ಹಿಗ್ಗು, ನೋವು-ನಲಿವುಗಳನ್ನು ಹೇಳಿಕೊಳ್ಳುವಲ್ಲಿ ಅಲಂಕಾರಗಳ ಬಳಕೆ ಗುರುತಿಸಬಹುದು. ಈ ಎಲ್ಲ ಸಂದರ್ಭಗಳಲ್ಲಿ ಬಹುವಾಗಿ ಬಳಕೆಯಾಗಿರುವ ಅಲಂಕಾರಗಳು ಯಾವುವು ಎಂದು ವಿದ್ಯಾರ್ಥಿಗಳಿಗೆ ಕೇಳಿದರೆ ಥಟ್ಟನೆ ಬರುವ ಉತ್ತರಗಳು

ಉಪಮ, ರೂಪಕ, ದೃಷ್ಟಾಂತ, ಉತ್ಪ್ರೇಕ್ಷೆ ಅಲ್ಲವೆ? ಇವುಗಳ ಬಗ್ಗೆ ಮತ್ತು ಇವುಗಳ ಬೋಧನಾಕ್ರಮ ಬಗ್ಗೆ ನೀವು ತಿಳಿದಿರುವಿರಿ.

**ಈ ಸನ್ನಿವೇಶದಲ್ಲಿ ಬಳಸಬಹುದಾದ ಕೆಲವು ಚಟುವಟಿಕೆಗಳನ್ನು ಚಿಂತಿಸೋಣ:**

- ಥಟ್ ಅಂತ ಹೇಳಿ: ತರಗತಿಯನ್ನು ಎರಡು ತಂಡಗಳನ್ನಾಗಿ ಮಾಡಿ, ಅಲಂಕಾರ ಬಳಕೆಯಾಗಿರುವ ಸಾಲು ಅಥವಾ ಪದ್ಯ/ ಚರಣವನ್ನು ಕಾರ್ಡುಗಳಲ್ಲಿ(flash card) ತೋರಿಸಿ. ಅಲಂಕಾರದ ಹೆಸರು ಹೇಳಿಸುವುದು, ಉತ್ತರ ತಪ್ಪಾದರೆ ಎರಡನೆ ತಂಡಕ್ಕೆ ಕೇಳಬಹುದು. ಅಲಂಕಾರದ ಲಕ್ಷಣವನ್ನು ಅನ್ವಯಿಸಲು ಹೇಳಬಹುದು.
- ಪಠ್ಯಪುಸ್ತಕದಲ್ಲಿ ಪರಿಚಯವಾದ ಅರ್ಥಾಲಂಕಾರಗಳಿಗೆ ಸಂಬಂಧಿಸಿದ ಆದರೆ ಪಠ್ಯೇತರ ಅನೇಕ ಉದಾಹರಣೆಗಳನ್ನು ಸಂಗ್ರಹಿಸಿ ತಂದು ಅವುಗಳನ್ನು ಉಪಮ/ ರೂಪಕ/ ಉತ್ಪ್ರೇಕ್ಷೆ ಮತ್ತು ದೃಷ್ಟಾಂತ ಅಲಂಕಾರಗಳ ಶೀರ್ಷಿಕೆಯಡಿ ವರ್ಗೀಕರಿಸಲು ಹೇಳಬಹುದು.
- ಪಠ್ಯಪುಸ್ತಕದಿಂದ ಯಾವುದಾದರೂ ನಾಲ್ಕು ಅಂಶಗಳನ್ನು ಆಯ್ದುಕೊಳ್ಳಿ. ಅದು ಸ್ಥಳ, ವ್ಯಕ್ತಿ , ಚಿಕ್ಕ ಘಟನೆ, ವಸ್ತು ಏನಾದರೂ ಆಗಿರಬಹುದು. ಎರಡು ನಿಮಿಷ ಕಾಲಾವಕಾಶ ನೀಡಿ, ಆ ಎರಡು ನಿಮಿಷಗಳಲ್ಲಿ ಆಯ್ದ ಅಂಶಕ್ಕೆ ಕೆಲವು ಉಪಮೇಯಗಳನ್ನು ಬರೆಯಲು ಹೇಳಿ. ಆ ಉಪಮೇಯ ಅನ್ವಯಿಸಿದ ಕಾರಣವನ್ನು ಬರೆಯಲು ಹೇಳಬಹುದು. ಅದರಂತೆ ರೂಪಕ, ಶ್ಲೇಷೆ ಮುಂತಾದವುಗಳಿಗೆ ಇದೇ ರೀತಿ ಅಭ್ಯಾಸ ನೀಡಬಹುದು.
  - ಇದೇ ರೀತಿ ಪ್ರಚಲಿತ ಘಟನೆ ಅಥವಾ ವಾರ್ತಾಪತ್ರಿಕೆಗಳಿಂದಲೂ (ಚಂಡಮಾರುತ, ಕೋವಿಡ್‌ಗಳನ್ನು ವಿವಿಧ ಪತ್ರಿಕೆಗಳು ವರ್ಣಿಸಿರುವ ರೀತಿಯ ವಿವರ) ಅಭ್ಯಾಸ ಸಾಮಗ್ರಿಯನ್ನು ತಯಾರಿಸಿ ಬಳಸಬಹುದು.
  - ವಿದ್ಯಾರ್ಥಿಗಳು ಕಲ್ಪನೆ ಮಾಡಿಕೊಂಡು ಅರ್ಥಾಲಂಕಾರ ಬಳಸಿಕೊಂಡು ಚಿಕ್ಕ ಗದ್ಯ ಅಥವಾ ಪದ್ಯರೂಪದಲ್ಲಿ ಬರೆಯಲು ಹೇಳಬಹುದು. ಉದಾಹರಣೆಗೆ ಪುಸ್ತಕ / ಕಂಪ್ಯೂಟರ್/ಛತ್ರಿ/ ಮೊಬೈಲ್‌ಗೆ ಜೀವ ಬಂದಿದೆ ಎಂದು ಕಲ್ಪಿಸಿಕೊಂಡು ವರ್ಣಿಸುವುದು.
  - ಕವಿಯೊಬ್ಬರು ಶ್ರೀರಾಮ ಮತ್ತು ಸುಗ್ರೀವರ ನಡುವಿನ ಮಿತ್ರತ್ವದ ಪರಿಯನ್ನು ಹೀಗೆ ಆಲಂಕಾರಿಕವಾಗಿ ಗುರುತಿಸಿದ್ದಾರೆ. ಇಂತಹ ಪದ್ಯಗಳನ್ನು ವಿದ್ಯಾರ್ಥಿಗಳ ಗಮನಕ್ಕೆ ತರುವುದು.

    ಮರವು ಬಳ್ಳಿಗೆ, ದೋಣಿ ನೀರಿಗೆ<br>
    ಮರುತ ಹಕ್ಕಿಗೆ, ಹೂವು ದುಂಬಿಗೆ<br>
    ನೆರಳು ದೇಹಕೆ, ಮುಗಿಲು ಧರಣಿಗೆ<br>
    ಹಾಲುಸಕ್ಕರೆಗೆ ನರರದೊರೆ– ವಾನರದೊರೆ<br>
    ಉಭಯರ ನಡುವೆ ಅನ್ಯೋನ್ಯ

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

**1. ಇವುಗಳಲ್ಲಿ ವ್ಯಾಕರಣ ಸಂಬಂಧಿ ಚಟುವಟಿಕೆಗಳ ಅನ್ವಯದ ಅಗತ್ಯ ಇಲ್ಲದ ಸನ್ನಿವೇಶ________________**

ಅ. ಮಹಾಪ್ರಾಣದ ಒತ್ತುಗಳಲ್ಲಿ ಗೊಂದಲವಾದಾಗ

ಬ. ದೇಶ್ಯ ಪದಗಳ ತಪ್ಪು ಪ್ರಯೋಗವಾದಾಗ

ಕ. ಕರ್ತೃ – ಕ್ರಿಯೆಗಳಿಗನುಗುಣವಾಗಿ ಲಿಂಗ ಮತ್ತು ವಚನ ಇದ್ದಾಗ

ಡ. ಸಂಧಿ ಮತ್ತು ಸಮಾಸ ಪದಗಳ ವ್ಯತ್ಯಾಸ ತಿಳಿಸಲು

**2. ವಿದ್ಯಾರ್ಥಿಗಳಲ್ಲಿ ಕಲ್ಪನಾತ್ಮಕ ಚಿಂತನೆ ಮತ್ತು ಅಭಿವ್ಯಕ್ತಿ ಸಾಮರ್ಥ್ಯ ಬೆಳೆಸಲು ಅಗತ್ಯವಾದುದು_______________**

ಅ. ಭಾಷಾ ನಿಯಮದ ಚಟುವಟಿಕೆಗಳು

ಬ. ಪ್ರಾಸಗಳ ವಿಧಗಳ ಜ್ಞಾನ ನೀಡುವುದು

ಕ. ವಿವಿಧ ಛಂದೋ ಪ್ರಕಾರಗಳನ್ನು ಪರಿಚಯಿಸುವುದು

ಡ. ಅರ್ಥಲಂಕಾರದ ವಿಪುಲ ಉದಾಹರಣೆಗಳನ್ನು ಒದಗಿಸುವುದು

**3.5.3.2. ಶಬ್ದ ಭಂಡಾರದ ಬೆಳವಣಿಗೆಗೆ ಚಟುವಟಿಕೆಗಳು**

'ಧನದಾರಿದ್ರ್ಯವಿದ್ದರೂ ಪರವಾಗಿಲ್ಲ ಪದ(ಶಬ್ದ)ದಾರಿದ್ರ್ಯ ಇರಬಾರದು! ಎಂದು ಶಿಕ್ಷಕರು ಹೇಳುವುದುಂಟು. ಏಕೆಂದರೆ ಭಾಷಾ ಶಕ್ತಿಯಿರುವುದೇ ವೈವಿಧ್ಯಮಯ ಪದಗಳನ್ನು ಬಳಸುವುದರಲ್ಲಿ ಎಂಬುದು ಸತ್ಯ ಸಂಗತಿ. ಪದಸಂಪತ್ತನ್ನು ಹೆಚ್ಚಿಸುವುದು ಭಾಷಾ ಶಿಕ್ಷಣದ ಪ್ರಮುಖ ಗುರಿಗಳಲ್ಲಿ ಒಂದಾಗಿದೆ ಎಂದೂ ನೀವು ತಿಳಿದಿರುವಿರಿ. ಹಾಗಾದರೆ ವಿದ್ಯಾರ್ಥಿಗಳ ಶಬ್ದ ಭಂಡಾರವನ್ನು ತುಂಬುವುದು ಹೇಗೆ? ಸಾಮಾನ್ಯವಾಗಿ ತಕ್ಷಣ ಕೊಡುವ ಸಲಹೆಗಳು ದಿನಾ ತಪ್ಪದೆ ಪತ್ರಿಕೆಗಳನ್ನು ಓದುವುದು. ಮಕ್ಕಳ ಕಥೆ ಪುಸ್ತಕಗಳನ್ನು ಓದುವುದು, ಪತ್ರಿಕೆಗಳಲ್ಲಿ (ದೂರದರ್ಶನ) ಬರುವ ಪದಬಂಧಗಳಿಗೆ ಉತ್ತರಿಸುವುದು ಇತ್ಯಾದಿ ವಾಸ್ತವವಾಗಿ ಪರೀಕ್ಷೆಗಳಿಗೆ ಬೇಕಾಗುವ ಉತ್ತರ, ವ್ಯಾಕರಣ ಪದಗಳಿಗಷ್ಟೇ ಹಲವು ವಿದ್ಯಾರ್ಥಿಗಳು ಸೀಮಿತವಾಗುತ್ತಿರುವ ಈ ಕಾಲದಲ್ಲಿ ಕೆಲವು ನಿಖರವಾದ ಚಟುವಟಿಕೆಗಳನ್ನು ಚಿಂತಿಸಿ, ರೂಪಿಸಿ, ಬಳಸಿಕೊಳ್ಳುವುದು ಅಗತ್ಯವೆನಿಸುವುದಲ್ಲವೇ.

ವಿದ್ಯಾರ್ಥಿಗಳ ಪದಶಕ್ತಿ ಹೆಚ್ಚಿಸಲು ಪ್ರಸ್ತುತ ಪಠ್ಯಪುಸ್ತಕಗಳಲ್ಲಿ ಪಾಠ್ಯಾಂತದಲ್ಲಿ ಪದಸಂಬಂಧಿ ಚಟುವಟಿಕೆಗಳು ಈ ರೀತಿ ಕಂಡುಬರುತ್ತವೆ:

1. ಪದ– ಅರ್ಥ (ಗದ್ಯಾರ್ಥ/ ಪದ್ಯಾರ್ಥ)
2. ಸಮನಾರ್ಥ / ವಿರುದ್ಧಾರ್ಥ/ ನಾನಾರ್ಥ;
3. ಅರ್ಥ ವ್ಯತ್ಯಾಸ ತಿಳಿಸಿ (ಗ್ರಹ– ಗೃಹ, ಕೃತಜ್ಞ– ಕೃತಘ್ನ)
4. ಬಿಡಿಸಿ ಬರೆಯಿರಿ (ನೀನೆಂದೈತರುವೆ> ನೀನು+ಎಂದು+ಐತರುವೆ)
5. ಧೈರ್ಯಶಾಲಿ ಇದರಂತೆ 'ಶಾಲಿ' ಪದ ಭಾಗ ಬಂದಿರುವ ಪದಗಳನ್ನು ಪಟ್ಟಿ ಮಾಡಿ
6. ವಂತ, ಗಾರ, ಇಗ ಮುಂತಾದ ಪ್ರತ್ಯಯ ಹೊಂದಿರುವ ಪದಗಳನ್ನು ಬರೆಯಿರಿ
7. ಪದವನ್ನು ವಾಕ್ಯದಲ್ಲಿ ಬಳಸಿರಿ.

(ಸಾಮಾನ್ಯವಾಗಿ ಬೋಧನಾ ಕಾಲದಲ್ಲಿ (1) ನೇರವಾಗಿ ಪದದ ಅರ್ಥವನ್ನು ಕಲಿಯಲು ತಿಳಿಸುವುದು (2) ಪದವು ಬಳಕೆಯಾಗುವ ಸಂದರ್ಭ ಬಳಸಿ ಅದರ ಸಹಾಯದಿಂದ ಅರ್ಥ ಮತ್ತು ಬಳಕೆಯನ್ನು ಕಲಿಯುವಂತೆ ಮಾಡುವ ಎರಡು ವಿಧಾನಗಳನ್ನು ಗಮನಿಸಿರುತ್ತೀರಿ. ಎರಡನೆ ವಿಧಾನ ಉತ್ತಮ ಎಂದೂ ತಿಳಿದಿರುವಿರಿ)

ಎಲ್ಲಾ ರೀತಿಯ ಪದಜ್ಞಾನ ಪರೀಕ್ಷೆಯೊಂದಿಗೆ ಪದಗಳ ಬೋಧನಾ ಚಟುವಟಿಕೆಯಲ್ಲಿ ಮುಖ್ಯವಾಗಿ ಈ ಕೆಳಗಿನ ಆರು ಪದ ಸಂಬಂಧಿ ಅಂಶಗಳನ್ನು ತಿಳಿದಿರುವರೇ ಎಂದು ದೃಢಪಡಿಸಿಕೊಳ್ಳಬೇಕು.

i) ಪದದ ಉಚ್ಚಾರ ಮತ್ತು ಕಾಗುಣಿತ (ii) ವ್ಯಾಕರಣ ವಿಚಾರ (ಲಿಂಗ, ವಚನ, ಪುರುಷ, ಕಾಲ ಇತ್ಯಾದಿ) (iii) ಪದರಚನೆ (ಪದ+ಕಾಲ; ಪ್ರಕೃತಿ+ ಪ್ರತ್ಯಯ= ಮಳೆ + ಅನ್ನು; ಉಪಸರ್ಗ+ ಪ್ರಕೃತಿ= ಸತ್ + ಆಚಾರ = ಸದಾಚಾರ) (iv) ಪದ ನಿಷ್ಪತ್ತಿ=(1) ಧರ್ಮಿಷ್ಠ > ಧರ್ಮಕ್ಕೆ ನಿಷ್ಠೆಯಿಂದಿರುವವನು/ ಧರ್ಮ ಚಿಂತನೆಯಲ್ಲಿ ತೊಡಗಿಸಿಕೊಂಡವನು (2) ಕುಶಾಗ್ರಮತಿ = ದರ್ಬೆಯ ತುದಿಯಂತೆ ತೀಕ್ಷ್ಣವಾದ ಮಿದುಳುಳ್ಳವನು (ಅಥವಾ

ನೇಗಿಲ ಮೊನೆಯಂತೆ ಕಠಿಣವಾದ ವಿಷಯಗಳನ್ನು ಕತ್ತರಿಸಬಲ್ಲದು ಎಂದೂ ಅರ್ಥ) (v) ಪದದ ಸಮಾನಾರ್ಥ ಮತ್ತು ವಿರುದ್ಧಾರ್ಥ (vi) ಬಳಕೆ– ವಾಕ್ಯ (ಅಥವಾ ಸೂಕ್ತ ಸಂದರ್ಭದಲ್ಲಿ ಬಳಕೆ)

ಚಟುವಟಿಕೆಯಾಗಿ ಪಾಠಗಳಲ್ಲಿರುವ ಕೆಲವು ಪದಗಳನ್ನು ಕೊಟ್ಟು ಮೇಲಿನ ಆರು ಅಂಶಗಳನ್ನು ಬರೆಯಲು ತಿಳಿಸಬಹುದು.

**ಶಬ್ದ ಸಂಪತ್ತಿನ ಅಭಿವೃದ್ಧಿ**

- ಪ್ರತಿ ವಿದ್ಯಾರ್ಥಿ ನಿಘಂಟು ಹೊಂದಿರುವಂತೆ ಕಡ್ಡಾಯ ಮಾಡಿ ಪಾಠಗಳಲ್ಲಿ ಬರುವ ಪದಗಳಿಗೆ ಅರ್ಥ ಹುಡುಕಲು ತಿಳಿಸಬೇಕು. ಆನಂತರ ಆ ಪದಗಳಿಗೆ ಸಮಾನಾರ್ಥ ಮತ್ತು ವಿರುದ್ಧಾರ್ಥ ಬರೆಯಲು ಹೇಳಬಹುದು. ಆಯ್ದುಕೊಂಡ ಪದ ಸಕ್ರಿಯ ಪದ/ ನುಡಿಗಟ್ಟು ಆಗಿದ್ದರೆ ವಾಕ್ಯದಲ್ಲಿ ಬಳಸಲು ಕೇಳಬಹುದು.
- ವಿದ್ಯಾರ್ಥಿಗಳನ್ನು ಪುಟ್ಟ ತಂಡಗಳಾಗಿ ಮಾಡಿ, ಪ್ರತಿ ತಂಡವು ತಮ್ಮ ಪಠ್ಯಪುಸ್ತಕದ ಪಾಠಗಳಲ್ಲಿ ಬರುವ ಹೊಸಪದಗಳನ್ನು (ಸುಮಾರು ಇಪ್ಪತ್ತು–ಇಪ್ಪತ್ತೈದು ಪದಗಳನ್ನು)ಆಯ್ದು ಅವುಗಳನ್ನು ಅಕಾರಾದಿಯಾಗಿ ಜೋಡಿಸಿ ಅರ್ಥ, ಸಮಾನಾರ್ಥ, ವಿರುದ್ಧ ಪದಗಳನ್ನು ಬರೆದು ಶಬ್ದಕೋಶ/ ನಿಘಂಟು ರಚಿಸಲು ತಿಳಿಸಬಹುದು.
- ಪ್ರತಿ ವಿದ್ಯಾರ್ಥಿ ತಂಡ (ಮೂವರು/ ನಾಲ್ವರು) ದಿನಪತ್ರಿಕೆಯ (ಪ್ರಜಾವಾಣಿ, ವಿಜಯ ಕರ್ನಾಟಕ ಇತ್ಯಾದಿ) ಸಂಪಾದಕೀಯ ಓದಿ ಅದರಲ್ಲಿ ಅವರಿಗೆ ಹೊಸ ಶಬ್ದವೆನಿಸಿದ್ದನ್ನು ಸಂಗ್ರಹಿಸಿ ಅದರ ಅರ್ಥ ಪತ್ತೆಮಾಡಿ ನಿಘಂಟು ಮಾಡಲು ತಿಳಿಸಬಹುದು. ವಾರ ಅಥವಾ ಪಕ್ಷಕ್ಕೊಮ್ಮೆ ಶಿಕ್ಷಕರು ಅವುಗಳನ್ನು ಗಮನಿಸಬಹುದು.
- ಒಂದೇ ಅಕ್ಷರದಿಂದ ಆರಂಭವಾಗುವ ಹೆಸರುಳ್ಳ ವಿದ್ಯಾರ್ಥಿಗಳನ್ನು ತಂಡಗಳಾಗಿ ಮಾಡಿ 'ಆ' ಅಕ್ಷರದಿಂದಲೇ ಆರಂಭವಾಗುವ ಹೊಸಪದಗಳನ್ನು ಸಂಗ್ರಹಿಸಿ ಸಕ್ರಿಯ/ನಿಷ್ಕ್ರಿಯ ಪದಗಳನ್ನು ಪ್ರತ್ಯೇಕಿಸಿ ಅವುಗಳನ್ನು ಅಕಾರಾದಿಯಾಗಿ ಜೋಡಿಸಿ, ಅರ್ಥ ಬರೆಯಲು, ಸಕ್ರಿಯ ಪದಗಳಿಗೆ ವಾಕ್ಯಗಳನ್ನು ಮಾಡಲು ಚಟುವಟಿಕೆ ನೀಡಬಹುದು.
- ವಿದ್ಯಾರ್ಥಿಗಳು ತಮ್ಮ ಪಠ್ಯ ಮತ್ತು ಇತರ ಪುಸ್ತಕಗಳಿಂದ ಆರು ಮತ್ತು ಆರಕ್ಕಿಂತ ಹೆಚ್ಚು ಅಕ್ಷರಗಳುಳ್ಳ, ಪದಗಳನ್ನು ಸಂಗ್ರಹಿಸಿ ತರಲು ಹೇಳಬಹುದು. ತರಗತಿಯಲ್ಲಿ ಇಬ್ಬಿಬ್ಬರು ಕುಳಿತು, ಅದರ ಅರ್ಥ ಹುಡುಕಿ, ವಾಕ್ಯದಲ್ಲೂ ಬಳಸಿ ಒಂದು ಸಕ್ರಿಯ ನಿಘಂಟಿನಂತೆ ಮಾಡಲು ಕೇಳಬಹುದು. (ಅತಿ ಉದ್ದವಾದ ಪದಗಳನ್ನು ಹುಡುಕಿ ತರಲು ಕೇಳಬಹುದು).
- ಪದರಚನೆಯ ವಿನ್ಯಾಸ: ಈಗಾಗಲೇ ನೀವು ಸಮಾಸ, ತದ್ಧಿತ ಮತ್ತು ಕೃದಂತಗಳಿಂದ ಪದ ಸ್ವರೂಪದಲ್ಲಿ ಬದಲಾವಣೆಯಾಗುವುದು ಎಂದೂ ಅವು 'ಸಾಧಿತ ಪದಗಳಾಗಿ' ಮಾರ್ಪಾಡುವವು ಎಂದೂ ಬಲ್ಲಿರಿ. ಅಂದರೆ ಹೊಸ ಪದ ರಚನೆಯಾಗುವುದೆಂದೂ ಅಧ್ಯಯನ ಮಾಡಿರುವಿರಿ. ಅಗತ್ಯಕ್ಕೆ ತಕ್ಕಂತೆ ಭಾಷಿಗರು ಹೊಸ ಪದ ರಚನೆ ಮಾಡುವವರು.. ಎಂದು ತಿಳಿದಿದ್ದೀರಿ. ಈ ಬಗ್ಗೆ ಅಧ್ಯಯನ ಮಾಡಿಯೂ ಇದ್ದೀರಿ. ಇಲ್ಲಿ ವ್ಯಾಕರಣಕ್ಕೆ ಹೊರತಾಗಿ ಪದರಚನೆಯ ವಿನ್ಯಾಸ ಕುರಿತು ಗಮನಿಸಿರಿ.

- ಪ್ರಸ್ತುತ ಹತ್ತನೇ ತರಗತಿಯ 'ಸಿರಿಗನ್ನಡ' ದಲ್ಲಿ ಗದ್ಯ ಭಾಗದಲ್ಲಿ ಬಂದಿರುವ ಈ ಪದಗಳನ್ನು ಗಮನಿಸಿರಿ. ಯಾಂತ್ರೀಕರಣ, ವಿದ್ಯುದೀಕರಣ(ಪಾಠ 2) ಜಾಗತೀಕರಣ (ಪಾಠ 6), ಕಲೋಪಾಸಕ(ಪಾಠ–3) ಶತಮಾನೋತ್ಸವ (ಪಾಠ –5). ಹೀಗೆಯೇ ಪತ್ರಿಕೆಗಳಲ್ಲಿ ಬಂದಿರುವ ಕೆಲವು ಪದಗಳನ್ನೂ ಗಮನಿಸಿರಿ.ಚಿತ್ರೋದ್ಯಮ, ಮತ್ಸ್ಯೋದ್ಯಮ, ಕ್ಷೀರೋದ್ಯಮ, ಪುಷ್ಪೋದ್ಯಮ; ಚಿತ್ರೋತ್ಸವ, ಫಿಲ್ಮೋತ್ಸವ, ಹಾಸ್ಯೋತ್ಸವ, ಶತಮಾನೋತ್ಸವ; ನಿಲ್ದಾಣ, ತಂಗುದಾಣ, ಅಡಗುದಾಣ ಇತ್ಯಾದಿ.

ಪ್ರಶ್ನೆ: ಈ  ಎಲ್ಲ ಹೊಸ ಶಬ್ದಗಳು ಹೇಗೆ ರಚನೆಯಾಗಿವೆ?
ಉತ್ತರ: ________________________________

- **ಕೆಳಗಿನ ಪಟ್ಟಿಗಳಲ್ಲಿರುವ ವಾಕ್ಯಗಳನ್ನು ಗಮನಿಸಿ. ಅಡಿಗೆರೆ ಹಾಕಿರುವ ಪದಗಳ ಅರ್ಥವ್ಯತ್ಯಾಸ ತಿಳಿಸಿ.**

| 1 | 2 |
|---|---|
| ನನಗೆ ಅಧಿಕ ಕೆಲಸದಿಂದ ತಲೆನೋವು ಬಂದಿದೆ. | ಕೊರೋನಾದಿಂದ ಪರೀಕ್ಷೆಗಳನ್ನು ನಡೆಸುವುದು ತಲೆನೋವಾಗಿದೆ. |
| ಬೆಸ್ತರು ಮೀನು ಹಿಡಿಯಲು ಬಲೆ ಬೀಸಿದರು. | ಲಂಚಕೋರರನ್ನು ಹಿಡಿಯಲು ಅಧಿಕಾರಿಗಳು ಬಲೆ ಬೀಸಿದರು. |
| ತುಂಟ ಹುಡುಗರು ಗೋಡೆಯ ಚಿತ್ರಕ್ಕೆ ಮಸಿ ಬಳಿದರು. | ಆತನ ವ್ಯಕ್ತಿತ್ವಕ್ಕೇ ಮಸಿ ಬಳಿದರು. |

- ಕೆಳಗಿನ ವಾಕ್ಯಗಳಲ್ಲಿ ಅಡಿಗೆರೆ ಹಾಕಿರುವ ಪದಗಳನ್ನು ಏನೆಂದು ಕರೆಯುತ್ತೇವೆ? ಇವುಗಳನ್ನು ಯಾವ ಸಂದರ್ಭದಲ್ಲಿ ಬಳಸುತ್ತೇವೆ?
  –ಬ್ರಿಟಿಷರು ಭಾರತದ ಅನೇಕ ಸಂಸ್ಥಾನಗಳನ್ನು ಹೊಂಚುಹಾಕಿ ತಮ್ಮ ವಶಕ್ಕೆ ತೆಗೆದುಕೊಂಡಿದ್ದರು.
  –ಎಸ್. ಪಿ. ಬಾಲಸುಬ್ರಹ್ಮಣ್ಯಮ್‌ರವರ ಹಾಡುಗಾರಿಕೆ ಆಲಿಸಿ ಸಭಿಕರು ತಲೆದೂಗಿದರು.
  –ಜೆ. ಪಿ. ರಾಜರತ್ನಂ ರವರ 'ರತ್ನನ್ ಪದಗಳು' ಓದಿ ಬೀಚಿಯವರು ಮಂತ್ರಮುಗ್ಧರಾದರು.
  –ಮಲೆನಾಡಿನ ಪ್ರಕೃತಿ ದೃಶ್ಯ ಪ್ರವಾಸಿಗರನ್ನು ಸೆರೆಹಿಡಿಯಿತು.
- ಪಠ್ಯಪುಸ್ತಕದ ವಿವಿಧ ಪಾಠಗಳಲ್ಲಿ ಬರುವ ನುಡಿಗಟ್ಟನ್ನು ಪಟ್ಟಿ ಮಾಡಿಕೊಂಡು ನೀವು ಪರಿಚಯಿಸಿ ನಂತರ ತರಗತಿಯ ವಿದ್ಯಾರ್ಥಿ ತಂಡ (ಇಬ್ಬರು/ ಮೂವರ) ಗಳಿಗೆ ಹಂಚಿ ಹೊಸ ಸನ್ನಿವೇಶಗಳಿಗೆ ಅನ್ವಯಿಸಿ ಬರೆದು ತರಲು ಹೇಳಬಹುದು.
- ನುಡಿಗಟ್ಟುಗಳನ್ನು ಕಥೆಯ ರೂಪ, ಸಂಭಾಷಣ ಪ್ರಸಂಗ ಮತ್ತು ನಾಟಕ ಭಾಗಗಳಲ್ಲಿ ಅಳವಡಿಸಿ ಪರಿಚಯಿಸಲೂ ಬಹುದು.
- 'ಕನ್ನಡ ರತ್ನಕೋಶದಲ್ಲಿ' (ಕನ್ನಡ ಅಭಿವೃದ್ಧಿ ಪ್ರಾಧಿಕಾರ ಪ್ರಕಟಣೆ) ನುಡಿಗಟ್ಟುಗಳೆಂಬ ಶೀರ್ಷಿಕೆಯಡಿ ಸುಮಾರು ನಾಲ್ಕು ನೂರಕ್ಕೂ ಹೆಚ್ಚು ನುಡಿಗಟ್ಟುಗಳನ್ನು ಅಕಾರಾದಿಯಾಗಿ ಅರ್ಥಸಮೇತ ಪಟ್ಟಿಮಾಡಲಾಗಿದೆ. ವಿದ್ಯಾರ್ಥಿಗಳು ಅದರಿಂದ ಹತ್ತಿಪ್ಪತ್ತು ನುಡಿಗಟ್ಟುಗಳನ್ನು ಆಯ್ದು ವಾಕ್ಯಗಳಲ್ಲಿ ಬಳಸಿ ಬರೆದು ತಿಳಿಸಬಹುದು. ತರಗತಿಯಲ್ಲಿ ಓದಿಸಿ ಅವಶ್ಯವಾದಲ್ಲಿ ತಿದ್ದುಪಡಿ ಮಾಡಬಹುದು. ಇದರಿಂದ ನುಡಿಗಟ್ಟು ಕೋಶವನ್ನೇ ವಿದ್ಯಾರ್ಥಿಗಳು  ರಚಿಸಬಹುದು.
- ವಿದ್ಯಾರ್ಥಿಗಳು ರೂಪಕಗಳಿರುವ ನುಡಿಗಟ್ಟುಗಳನ್ನು ಸಂಗ್ರಹಿಸಿ ಅದರಲ್ಲಿರುವ ಹಿನ್ನೆಲೆಯನ್ನು ಸಂಕ್ಷಿಪ್ತವಾಗಿ ಬರೆಯಲು ತಿಳಿಸಬಹುದು. ಉದಾಹರಣೆಗೆ ಅಳಿಲುಸೇವೆ, ಕಪಿಮುಷ್ಟಿ, ರಾಮಬಾಣ, ಸುಗ್ರೀವಾಜ್ಞೆ, ಲಕ್ಷ್ಮಣರೇಖೆ, ಉತ್ತರನ ಪೌರುಷ ಇತ್ಯಾದಿ. ಒಬ್ಬೊಬ್ಬ ವಿದ್ಯಾರ್ಥಿ ಒಂದೊಂದು ಇಂತಹ ನುಡಿಗಟ್ಟಿನ ವಿವರಣೆಯನ್ನು ಸಂಗ್ರಹಿಸಿ ಬರೆದು ತಂದು ಓದಲು ಹೇಳಬಹುದು.

- ಇದನ್ನು ಇನ್ನೂ ಒಂದು ಭಿನ್ನರೀತಿಯ ಚಟುವಟಿಕೆಯಲ್ಲೂ ನೀಡಬಹುದು.

ಸೂಚನೆ: ಈ ಕೆಳಗಿನವುಗಳು ಪ್ರಸಿದ್ಧ ಪುರಾಣ ಪುರುಷರ ನಾಮಬಲದಿಂದ ವಿಶಿಷ್ಟ ನುಡಿಗಟ್ಟಾಗಿವೆ. ಅವುಗಳನ್ನು ಪತ್ತೆ ಮಾಡಿ – ಭಾವಾರ್ಥ ಬರೆದು ವಾಕ್ಯದಲ್ಲೂ ಬಳಸಿರಿ.

| | | ಅರ್ಥ | ವಾಕ್ಯ ರಚನೆ |
|---|---|---|---|
| 1 | ಉದಾ: ಭಗೀರಥ ಪ್ರಯತ್ನ | | |
| 2 | ..........................ರಾಜ್ಯ | | |
| 3 | . ..ಕಾಟ | | |
| 4 | ...ಕಲಹ | | |
| 5 | ..ನೀತಿ | | |
| 6 | ..ಪ್ರಶ್ನೆ | | |
| 7 | ..ಪಾಶಾ | | |
| 8 | ..ರೇಖೆ | | |
| 9 | ..ಅಜ್ಞೆ | | |
| 10 | ..ಆಲಿಂಗನ | | |

- ದ್ವಿತೀಯ ಮತ್ತು ತೃತೀಯ ಭಾಷಾ ವಿದ್ಯಾರ್ಥಿಗಳಿಗೆ ಈ ಕೆಳಗಿನ ಚಟುವಟಿಕೆಯನ್ನು ನೀಡಿ ನುಡಿಗಟ್ಟು ಮತ್ತು ಅವುಗಳ ಭಾವಾರ್ಥ ಸರಿಹೊಂದಿಸಿ ಕೊಟ್ಟು ಸಂದರ್ಭ ಸುಳುಹು ನೀಡಿ ವಾಕ್ಯ ರಚಿಸಲು ಹೇಳಬಹುದು.

| | ನುಡಿಗಟ್ಟುಗಳು | ಅರ್ಥ ( ಭಾವ) | ಸಂದರ್ಭ ಸುಳುಹು | ವಾಕ್ಯ ರಚನೆ |
|---|---|---|---|---|
| 1 | ತಲೆ ಎತ್ತು | ಮೆಚ್ಚು | ಕೈಗಾರಿಕೆಗಳು | |
| | ಕಂಗೊಳಿಸು | ದ್ವೇಷಿಸು | ಬೃಂದಾವನ ತೋಟ | |
| | ತಲೆದೂಗು | ಏಳಿಗೆ ಹೊಂದು | ಹಾಡಿದ ರೀತಿ /ಚರ್ಚೆ | |
| | ವಿಷಕಾರು | ಹಿಂಬಾಲಿಸು | ದುರ್ಯೋಧನ | |
| | ಕೈ ಹಾಕು | ಆರಂಭಿಸಿ | ಹೊಸ ಉದ್ಯೋಗ | |
| | | ಮನೋಹರವಾಗಿ ಕಾಣು | | |

- ನುಡಿಗಟ್ಟುಗಳ ವರ್ಗೀಕರಣ: ನುಡಿಗಟ್ಟುಗಳನ್ನು ಅವುಗಳ ವ್ಯಾಕರಣ ವರ್ಗವನ್ನು ಗುರುತಿಸಿ (1) ಕ್ರಿಯಾ ಸೂಚಿ ನುಡಿಗಟ್ಟು (2) ನಾಮ ಸೂಚಿ ನುಡಿಗಟ್ಟು ಮತ್ತು(3) ಕ್ರಿಯಾವಿಶೇಷಣ ನುಡಿಗಟ್ಟುಗಳೆಂದು ವರ್ಗೀಕರಿಸುವ ಕ್ರಮವಿದೆ. ಉದಾಹರಣೆಯಾಗಿ ಇಲ್ಲಿ ಮೂರು ವಿಭಾಗಗಳಲ್ಲಿ ಪಟ್ಟಿಮಾಡಿರುವ ನಿಮಗೆ ಪರಿಚಿತ ನುಡಿಗಟ್ಟುಗಳ ವ್ಯಾಕರಣ ವಿಶೇಷವನ್ನು ಗಮನಿಸಿ. ಇವುಗಳಲ್ಲಿ ಪ್ರತಿ ವರ್ಗದ ನುಡಿಗಟ್ಟುಗಳನ್ನು ಗುರುತಿಸಿ.

| 1 | 2 | 3 |
|---|---|---|
| ಕೈ ಕೊಡು | ಅಜಗಜಾಂತರ | ಸಿಟ್ಟು ನೆತ್ತಿಗೇರು |
| ಹೊಂಚುಹಾಕು | ಪುಸ್ತಕ ಬದನೆಕಾಯಿ | ಪಿತ್ತ ನೆತ್ತಿಗೇರು |
| ತಲೆದೂಗು | ಹಿತ್ತಾಳೆ ಕಿವಿ | ಬಾಯಿತುಂಬಾ ಹೊಗಳು |

| | | |
|---|---|---|
| ದಂಬಾಲು ಬೀಳು | ಬಿಸಿಬಿಸಿ ಸುದ್ದಿ | ಕಣ್ಣುಮುಚ್ಚಿ ತಗೋ (ಒಪ್ಪಿಕೊ) |
| ತಲೆ ಕೊಡು | ಹನುಮಂತನ ಬಾಲ | ಸೆರಗೊಡ್ಡಿ ಬೇಡು |
| ಬಾಲ ಬಿಚ್ಚು | ಸಿಂಹಪಾಲು | ಕಿವಿಗೊಟ್ಟು ಕೇಳು |

- 'ಕನ್ನಡ ರತ್ನಕೋಶ' ದ ಕೊನೆಯಲ್ಲಿ ಪಟ್ಟಿಮಾಡಿರುವ(ನಾನೂರು) ನುಡಿಗಟ್ಟುಗಳಲ್ಲಿ, ಈ ಮೇಲೆ ತಿಳಿಸಿದ ಮೂರು ವರ್ಗಕ್ಕೆ ತಲಾ ಹತ್ತು ನುಡಿಗಟ್ಟುಗಳನ್ನು ಹುಡುಕಿ ಸಂಗ್ರಹಿಸಿ ಅವುಗಳನ್ನು ವಾಕ್ಯಗಳಲ್ಲಿ ಪ್ರಯೋಗಿಸಿ. ಹೀಗೆ ಎಲ್ಲ ವಿದ್ಯಾರ್ಥಿಗಳ ರಚನೆಗಳನ್ನು ಸಂಗ್ರಹಿಸಿ ನುಡಿಗಟ್ಟಿನ ನಿಘಂಟನ್ನು ತಯಾರಿಸಲು ಮಾರ್ಗದರ್ಶಿಸಿರಿ.

- **ಪದಬಂಧಗಳು**

ಪತ್ರಿಕೆಗಳಲ್ಲಿ ದೂರದರ್ಶನದ 'ಥಟ್ ಅಂತ ಹೇಳಿ' ಕಾರ್ಯಕ್ರಮಗಳಲ್ಲಿ ವೈವಿಧ್ಯಮಯವಾದ ಪದಬಂಧಗಳನ್ನು ಕಂಡಿರುತ್ತೀರಲ್ಲವೇ? ಇಂತಹ ಭಾಷಾ ಚಟುವಟಿಕೆಗಳನ್ನು ಪಠ್ಯಪುಸ್ತಕಗಳಲ್ಲೂ ಬಳಸಲಾಗಿದೆ. ಮಿಗಿಲಾಗಿ ಇದು ನಿಮ್ಮ ಹವ್ಯಾಸವೂ ಆಗಿರಬಹುದು. ಇದಕ್ಕೆ ಪದರಂಗ, ಪದಕ್ರೀಡೆ, ಪದಹೆಣಿಕೆ, ಪದಕಟ್ಟಡ, ಒರೆಮಣಿ, ಚಕ್ರಬಂಧ ಎಂದೂ ಹೆಸರುಗಳಿವೆ. ಇವುಗಳನ್ನು ಶಬ್ದಭಂಡಾರದ ಬೆಳವಣಿಗೆಗಾಗಿ ಪರಿಣಾಮಕಾರಿಯಾಗಿ ಬಳಸಿಕೊಳ್ಳಬಹುದು.

ಪದರಂಗ ಎಂದರೇನು? ಇನ್ನೊಂದು ಪದಗಳನ್ನು ಕಂಡುಹಿಡಿಯುವ ಆಟ; ಕೊಟ್ಟ (ಅಡ್ಡಸಾಲು ಮತ್ತು ಉದ್ದಸಾಲು) ಸುಳುಹು ಮತ್ತು ಅಕ್ಷರ ಸಂಖ್ಯೆಗನುಗುಣವಾಗಿ ಅಕ್ಷರ ತುಂಬುವುದು. ರಂಗವು ಬಹುತೇಕ ಚೌಕ ಅಥವಾ ಆಯತಾಕಾರದಲ್ಲಿ ಕಪ್ಪು ಮತ್ತು ಬಿಳುಪಿನ ಮನೆಗಳಿಂದಾಗಿರುತ್ತದೆ. ಇವು ಸಿದ್ಧ ಗ್ರಿಡ್(grid) ರೂಪದಲ್ಲಿಯೇ ದೊರೆಯುವವು. ಅನೇಕ ಪತ್ರಿಕೆಗಳಿಗೆ ಪದರಂಗ ರಚಿಸುವ ಎ.ಎನ್. ಪ್ರಹ್ಲಾದರಾವ್ 'ಪದರಂಗ ರಚನೆಯ ಬ್ರಹ್ಮ' ಎನಿಸಿಕೊಂಡಿದ್ದಾರೆ ಮತ್ತು ಗಿನ್ನಿಸ್ ದಾಖಲೆಯನ್ನೂ ಮಾಡಿದ್ದಾರೆ ಎಂಬುದನ್ನು ನೀವು ತಿಳಿದಿರಬಹುದು. ಅವರ ಸಲಹೆಗಳನ್ನನುಸರಿಸಿ ಪದರಂಗ ರಚಿಸಬಹುದು.

'ಥಟ್ ಅಂತ ಹೇಳಿ' ಎಂಬ ಡಾ. ನ. ಸೋಮೇಶ್ವರರ ಪ್ರಸಿದ್ಧ ದೂರದರ್ಶನ ಕಾರ್ಯಕ್ರಮ ನೀವು ವೀಕ್ಷಿಸಲೇಬೇಕು. ಅಲ್ಲಿ ಪದರಂಗಕ್ಕೆ ಸಂಬಂಧಿಸಿದ ಒಂದು ಚಟುವಟಿಕೆ ಇರುತ್ತದೆ.

- **ಒಗಟುಗಳು**

**ಕೆಳಗಿನ ಒಗಟು ಬಿಡಿಸಿ**

| |
|---|
| "ನೀರಲ್ಲೇ ಹುಟ್ಟೋದು ನೀರಲ್ಲೇ ಬೆಳೆಯೋದು<br>ನೀರು ತಾಕಿದರೆ ಮಟಮಾಯ ..! ಏನದು ? |

ಉತ್ತರ: ಉಪ್ಪು

ಒಗಟು ಎಂದರೆ ಸಮಸ್ಯಾತ್ಮಕವಾಗಿ, ವಿವರಣಾತ್ಮಕವಾಗಿ ಕೇಳುವ ಪ್ರಶ್ನೆಗೆ ಒಂದು ಪದದ ಉತ್ತರ ಹೇಳುವುದು. ದೇವುಡು ನರಸಿಂಹ ಶಾಸ್ತ್ರಿಯವರ ಪ್ರಕಾರ, "ಒಂದು ವಸ್ತುವನ್ನು ಮತ್ತೊಂದು ವಸ್ತುವಿನ ವಾದದಿಂದ ಚಮತ್ಕಾರಯುಕ್ತವಾಗಿ ವರ್ಣಿಸುವುದು ಆ ವಸ್ತುವನ್ನು ಕಂಡು ಹಿಡಿಯುವಂತೆ ಹೇಳುವುದು ಒಗಟು." (ಒಡಪು, ಒಡಗತೆ ಎಂಬ ಪದಗಳೂ ಬಳಕೆಯಲ್ಲಿವೆ). ಒಗಟುಗಳು ಚಿಂತನೆಗೆ ಹಚ್ಚುವುದರೊಂದಿಗೆ ಭಾಷೆಯ ಸೊಗಸಾದ ಬಳಕೆಗೂ ಅವಕಾಶ ನೀಡುತ್ತದೆ. ಪ್ರಾಸಬದ್ಧ ರಚನೆ, ವ್ಯಾಖ್ಯೆಮಾಡುವ ಮತ್ತು ವರ್ಣಿಸಿ

ಹೇಳುವ ಭಾಷಾಲಕ್ಷಣ ಒಗಟುಗಳ ವೈಶಿಷ್ಟ್ಯ. ಆದ್ದರಿಂದ ಭಾಷಾಪಾಠಗಳಲ್ಲಿ ಒಗಟು ರಚಿಸುವ, ಒಗಟನ್ನು ಬಿಡಿಸುವ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಬಳಸಬಹುದು.

ಬಹುಶಃ ನೀವು ಕೇಳಿರಬಹುದಾದ ಈ ಒಗಟಿಗೆ ಉತ್ತರ ಹೇಳಿ:

**"ಹರನ ಹಾರನ ಆಹಾರನ ಸುತನ ದೇವನ ಮಡದಿಯಂ**
**ಕದ್ದೊಯ್ದವನ ಅನುಜನ ಮಡದಿಯನಗೊಲಿದಿರ್ಪಳ್"**

1. ಆಕೆ ಯಾರು? ಉತ್ತರ: ________________
2. ಅಲ್ಲಿರುವ ಒಗಟನ್ನು ಬಿಡಿಸಿರಿ ______________

(ಹರನ ಹಾರ – ಹಾವು, ಹಾವಿನ ಆಹಾರ– ವಾಯು, ವಾಯುವಿನ ಮಗ – ಹನುಮಂತ, ಹನುಮಂತನ ದೇವ – ಶ್ರೀರಾಮ, ಶ್ರೀರಾಮನ ಮಡದಿ – ಸೀತೆ, ಸೀತೆಯ ಕದ್ದೊಯ್ದವನು – ರಾವಣ, ರಾವಣನ ತಮ್ಮ – ಕುಂಭಕರ್ಣ, ಕುಂಭಕರ್ಣನನ್ನು ಆಲಂಗಿಸಿದ್ದು – ನಿದ್ರಾಂಗನೆ).

- ತರಗತಿಯ ವಿದ್ಯಾರ್ಥಿಗಳನ್ನು ಮೂರು ಅಥವಾ ನಾಲ್ಕು ತಂಡಗಳಾಗಿ ಮಾಡಿ ಅವರಿಗೆ (ಶೈಕ್ಷಣಿಕವಾಗಿ ಲಾಭವಿರುವ) ಒಗಟು ಕೇಳಿ ಉತ್ತರ ಮತ್ತು ಸಮರ್ಥನೆ ನೀಡಲು ಹೇಳಿ ಅಂಕಗಳನ್ನು ನೀಡುತ್ತ ಉತ್ತಮ ಚಟುವಟಿಕೆ ಕೈಗೊಳ್ಳಬಹುದು (ಡಾ. ರಾಗೌರವರ ' ನಮ್ಮ ಒಗಟುಗಳು' ಪುಸ್ತಕ ಓದಿ ಸಂಗ್ರಹಿಸಿ ಕೊಳ್ಳಿ). ಪತ್ರಿಕೆಗಳು ಮತ್ತು ವಾಟ್ಸಪ್ ಮೂಲಕ ಕೆಲವು ಒಗಟುಗಳನ್ನು ಸಂಗ್ರಹಿಸಿರಿ ಮತ್ತು ತರಗತಿಯಲ್ಲಿ ಸಾಧ್ಯವಾದಾಗಲೆಲ್ಲ ಬಳಸಿರಿ.

**ಉದಾಹರಣೆಗಳು:**

(I) ಕಾಲಾರು ತಲೆ ಮೂರು ತ್ರಿಮೂರ್ತಿಯಲ್ಲ,
ಬಾಲಂಗಳೆರಡು ಕಿವಿ ನಾಲ್ಕು ಮೃಗವಲ್ಲ,
ಕರ ನಾಲ್ಕು ನಿಡು ಮೂಗಿದೆ ಗಜವಲ್ಲ
ಗುರು ಶಿವನ ಪದವ ಹೇಳುವನೊಬ್ಬ ಬಲ್ಲ

(ii) ನಟ್ಟನಡುವಿನ ಕಂಬ,
ಕಂಬದ ಮೇಲೆ ಡಿಂಬ,
ಡಿಂಬದ ಮೇಲೆ ನಾಗಲೂಟ,
ನಾಗಲೂಟದ ಮೇಲೆ ಇಬ್ಬರ ಓಡಾಟ . ಯಾರು ಆ ಇಬ್ಬರು?

iii) ಕೆಣಕು–ತಿಣಕು
ಪಿತನ ವಿವಾಹ ಮಾಡಿದವನು ..
ಪಿತಗೆ ಆಯಸ್ಸು ನೀಡಿದವನು ..
ಪಿತನಿಗಾಗಿ ಮಾತೆಯ ಶಿರ ತೆಗೆದವನು ..
ಪಿತನ ತಲೆಯನ್ನೇ ಕಡಿದವನು ..
ಪಿತನ ಭಾವಮೈದುನನ್ನು ಕೊಂದವನು ..
ಪಿತನ ಹೊತ್ತೊಯ್ದವನಿಂದ ಬಿಡಿಸಿದವನು ..
ಪಿತನ ವರ ನೆರವೇರಿಸಲು ವನವ ಸೇರಿದವನು ..

ಉತ್ತರಗಳು: (i) ಗಣಪತಿ (ii) ಮೂಗು, ಕಣ್ಣು (iii) ಭೀಷ್ಮ, ಯಯಾತಿ, ಪರಶುರಾಮ, ಶಿವ (ಬ್ರಹ್ಮನ ತಲೆ), ಕೃಷ್ಣ (ಕಂಸ), ವರುಣ (ವಸುದೇವ), ಶ್ರೀ ರಾಮ)

- ಕವಿ ಕುಮಾರವ್ಯಾಸ ಈ ಕೆಳಗಿನ ಚರಣದಲ್ಲಿ ಇಟ್ಟಿರುವ ಒಗಟನ್ನು ಬಿಡಿಸಿರಿ.

  ವೇದಪುರುಷನ ಸುತನ ಸುತನ ಸ<br>
  ಹೋದರನ ಹೆಮ್ಮಗನ ಮಗನ ತ<br>
  ಳೋದರಿಯ ಮಾತುಳನ ರೂಪನನತುಳ ಭುಜಬಲದಿ<br>
  ಕಾದಿ ಗೆಲಿದನನಣ್ಣನವ್ವೆಯ<br>
  ನಾದಿನಿಯ ಜಠರದಲಿ ಜನಿಸಿದ<br>
  ನಾದಿ ಮೂರುತಿ ಸಲಹೊ ಗದಿಗೊಮ ವೀರನಾರಾಯಣ.

**ತೃತೀಯ ಭಾಷೆಯಾಗಿ ಕನ್ನಡ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ನೀಡಬಹುದಾದ ಚಟುವಟಿಕೆಗಳಿಗೆ ಉದಾಹರಣೆಗಳು:**

- ಪ್ರತಿಯೊಬ್ಬರೂ ಅಕ್ಷರಾನುಕ್ರಮಣಿಕೆಯಲ್ಲಿ ಒಂದು ಅಕ್ಷರವನ್ನು ಆರಂಭದಲ್ಲಿಟ್ಟು, ವಾಕ್ಯ ಹೆಣೆಯಲು ತಿಳಿಸಬೇಕು. ಉದಾಹರಣೆಗೆ: 'ಅ' ಎಂಬ ಅಕ್ಷರದಿಂದ ಪ್ರಾರಂಭಿಸಿ 'ಅರಮನೆಯ ದೀಪಾಲಂಕಾರ ಕಣ್ಣಿಗೆ ಹಬ್ಬದಂತಾಗಿದೆ'; 'ಆ' – ಇಂದ ಆರಂಭಿಸಲು 'ಆಗುಂಬೆಯ ಸೂರ್ಯಾಸ್ತ ಸೊಗಸಾಗಿದೆ' ಅಥವಾ 'ಆಲದ ಮರ ಎಷ್ಟು ವಿಶಾಲವಾಗಿ ಹರಡಿದೆ'. 'ಇ'– 'ಇಬ್ಬನಿಯು ಮುತ್ತಿನ ಮಣಿಯಂತೆ ಕಂಗೊಳಿಸುತ್ತಿದೆ'; 'ಈ' – 'ಈಸಬೇಕು ಇದ್ದು ಜಯಿಸಬೇಕು ಎಂಬುದು ಒಂದು ಗಾದೆ ಮಾತು ಮತ್ತು ಕವಿ ಮಾತು' . ಇತ್ಯಾದಿ.
- ಕೆಳಗಿನ ಪದಜೋಡಿಗಳನ್ನು ಸರಿಯಾಗಿ ಉಚ್ಚರಿಸಿ, ಬರೆದು ಅರ್ಥ ತಿಳಿಸಲು (ಸಾಧ್ಯವಾದರೆ ವಾಕ್ಯದಲ್ಲಿ ಬಳಸಲು) ಪುಟ್ಟ ಚಟುವಟಿಕೆ ನೀಡಿರಿ.
- ಉದಾಹರಣೆ: ಬಾನು – ಭಾನು; ಧ್ಯಾನ – ಧಾನ್ಯ; ಪ್ರಧಾನ – ಪ್ರದಾನ ; ಪ್ರಕಾರ – ಪ್ರಾಕಾರ; ಪಥ – ಪಂಥ ;
- ಕೃತಜ್ಞ– ಕೃತಘ್ನ; ಜನಪದ– ಜಾನಪದ; ವಚನ– ವಾಚನ;

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ - 2**

'ಅ' ಪಟ್ಟಿಯಲ್ಲಿ ಕೊಟ್ಟಿರುವ ಕಲಿಕೆಯ ಫಲಗಳನ್ನು ಪಡೆಯಲು 'ಬ' ಪಟ್ಟಿಯ ಚಟುವಟಿಕೆಯನ್ನು ಸರಿ ಹೊಂದಿಸಿರಿ.

| ಅ | ಬ |
|---|---|
| ಭಾಷಾ ಪ್ರಭುತ್ವ ಗಳಿಸಲು | ಪದರಂಗಗಳನ್ನು ನಿರ್ವಹಿಸುವುದು |
| ಪದಗಳ ಶುದ್ಧರೂಪ ತಿಳಿಯಲು | ಒಗಟುಗಳನ್ನು ಕಟ್ಟುವುದು |
| ವಿವರಣಾತ್ಮಕವಾಗಿ– ಚಮತ್ಕಾರದಿಂದ ಅಭಿವ್ಯಕ್ತಿಸಲು | ನುಡಿಕಟ್ಟುಗಳನ್ನು ಸಂಗ್ರಹಿಸಿ ಬಳಸುವುದು |
| ಪದಸಂಪತ್ತು ಪಡೆಯಲು | ಭಾಷಾ ಸೂತ್ರಗಳನ್ನು ಅನ್ವಯಿಸುವುದು |
| | ನಿಘಂಟುಗಳನ್ನು ಬಳಸುವುದು |

### 3.5.3.3. ಸಾಹಿತ್ಯ ಸಂಬಂಧಿ ಅಂಶಗಳ ಅರಿವು ಮೂಡಿಸುವ ಚಟುವಟಿಕೆಗಳು

**ಚಿಂತನಾ ನಕ್ಷೆ:**

ಎಂಟನೇ ತರಗತಿಯ ಸಿರಿಗನ್ನಡ ಪಠ್ಯಪೋಷಕ ಅಧ್ಯಯನ ಭಾಗದಲ್ಲಿ "ಸಾರ್ಥಕ" ಎಂಬ ದಿನಕರ ದೇಸಾಯಿಯವರ ಪದ್ಯವಿದೆ. ಆ ಪದ್ಯವನ್ನು ವಾಚಿಸಿದ ಮೇಲೆ ವಿದ್ಯಾರ್ಥಿಗಳನ್ನು ಕುರಿತು ಹೀಗೆ ಕೇಳಿ: "ನನ್ನ ದೇಹದ ಬೂದಿ" ಎಲ್ಲೆಲ್ಲಿ ಹಾಕಬೇಕು ಎಂದು ಹೇಳಿದ್ದಾರಲ್ಲವೆ? ಇದಕ್ಕೆ ಸಂಬಂಧಿಸಿದಂತೆ ನಿಮ್ಮ ಮನಸ್ಸಿನಲ್ಲಿ ಮೂಡುವ ವಿಚಾರಗಳನ್ನು / ಭಾವಗಳನ್ನು ಟಿಪ್ಪಣಿ ಮಾಡಿರಿ. ಪಾಠದೊಂದಿಗೆ ಸಂಬಂಧವಿರಲೇಬೇಕೆಂಬ ಕಡ್ಡಾಯವಿಲ್ಲ. ಮನಸ್ಸಿಗೆ ಅನಿಸಿದ್ದನ್ನು ಮುಕ್ತವಾಗಿ ಬರೆಯಿರಿ . ಹಾಗೆ ಅನ್ನಿಸಿದ್ದಕ್ಕೆ ಕಾರಣಗಳನ್ನು ಬರೆಯಬೇಕು".

ಹೀಗೆ ಸಿ.ಪಿ.ಕೆ.ಯವರ 'ಗ್ರಂಥಾಲಯದಲ್ಲಿ' ಪದ್ಯ ಅಥವಾ 'ಮಹಿಳೆ ಮತ್ತು ಶಿಕ್ಷಣ' – ಸಬಿಹಾ ಭೂಮಿಗೌಡ ರವರ ವೈಚಾರಿಕ ಲೇಖನದ ಪಾಠಕ್ಕೆ ಚಟುವಟಿಕೆ ನೀಡಿರಿ.

ಈ ಚಟುವಟಿಕೆಯು ವಿದ್ಯಾರ್ಥಿಗಳಲ್ಲಿ ಅಧ್ಯಯನ ಮಾಡಿದ ಪದ್ಯ /ಗದ್ಯ ಪಾಠದ ವಿಷಯ ಒಳಹೊಕ್ಕು ಚಿಂತಿಸಲು ಮತ್ತು ಅದನ್ನು ವ್ಯಕ್ತ ಮಾಡಲು ಪ್ರೇರಣೆ ನೀಡುವುದು.

**ಚಿಂತನ ಲೇಖನ ರಚನೆ**

ಸಾರ್ಥಕ ಬದುಕಿನ ಸಾಧಕ (ಎಂಟನೇ ತರಗತಿ ಪಠ್ಯ) ಆದರ್ಶ ಶಿಕ್ಷಕ ಸರ್ವಪಲ್ಲಿ ರಾಧಾಕೃಷ್ಣನ್ (ಒಂಬತ್ತನೆ ತರಗತಿ ಪಠ್ಯ) ಭಾಗ್ಯಶಿಲ್ಪಿ ಸರ್.ಎಂ. ವಿಶ್ವೇಶ್ವರಯ್ಯ (ಹತ್ತನೇ ತರಗತಿ ಪಠ್ಯ) ಪಾಠಗಳು 'ಉನ್ನತ ವ್ಯಕ್ತಿತ್ವ' ಹೊಂದುವ ಬಗ್ಗೆ ಗಮನಸೆಳೆಯುತ್ತವಲ್ಲವೆ? ಈ ಹಿನ್ನೆಲೆಯಲ್ಲಿ 'ವ್ಯಕ್ತಿತ್ವ'ಗಳ ಕುರಿತು 'ಚಿಂತನ' ಲೇಖನ ರಚನೆಯ ಚಟುವಟಿಕೆ ಕೈಗೊಳ್ಳಬಹುದು. ವಿದ್ಯಾರ್ಥಿಗಳ ತಂದೆ, ತಾಯಿಯರ ವ್ಯಕ್ತಿತ್ವವನ್ನು ಕುರಿತು ಒಂದು ಪುಟ್ಟ ಪ್ರಬಂಧ ಬರೆಯಲು ಸೂಚಿಸಬಹುದು.

**ವ್ಯಕ್ತಿತ್ವ ಚಿತ್ರಣ**

'ಉನ್ನತ ವ್ಯಕ್ತಿತ್ವ ಗಳಿಸಬೇಕು' ಎಂದು ಹೇಳುವುದನ್ನು ಕೇಳಿದ್ದೇವೆ. ವ್ಯಕ್ತಿತ್ವ ಎಂದರೇನು ಎಂಬ ಪ್ರಶ್ನೆ ಮೂಡುತ್ತದಲ್ಲವೆ? ಒಬ್ಬರ ಹಾಗೆ ಇನ್ನೊಬ್ಬರ ರೂಪ, ಮಾತಿನ ರೀತಿ, ವರ್ತನೆ ಇಲ್ಲದಿರುವುದೇ ವ್ಯಕ್ತಿತ್ವವೆ? ಅಥವಾ ವ್ಯಕ್ತಿಯಲ್ಲಿ ಎದ್ದುಕಾಣುವ ವಿಶೇಷತೆಯೇ? ಧೀರ, ಜಾಣ, ಕುಶಲಿಗಳಾದವರನ್ನು ಉತ್ತಮ ವ್ಯಕ್ತಿತ್ವ ಉಳ್ಳವರು ಎಂದು ಹೇಳಬಹುದೇ? ಈ ಬಗ್ಗೆ ಸ್ವಲ್ಪ ಚಿಂತಿಸಿದಾಗ ಇವು ವ್ಯಕ್ತಿತ್ವದ ಮಹತ್ತಾದ ಲಕ್ಷಣಗಳಲ್ಲ ಎಂದೂ ಅನಿಸತೊಡಗುವುದು.

ವ್ಯಕ್ತಿತ್ವ ಎನ್ನುವುದು ಅಮೂರ್ತ. ಅದು ಅಂತರಂಗದ ಲಕ್ಷಣ. ಅದು ರೂಪ, ಅಂತಸ್ತು, ಮಾತು, ನಡವಳಿಕೆಯ ಹೊರಗಿನ ಲಕ್ಷಣವಲ್ಲ ಹಾಗೂ ಈ ಹೊರಲಕ್ಷಣ ಇಲ್ಲದ ವ್ಯಕ್ತಿಯೂ ಉತ್ತಮ ವ್ಯಕ್ತಿತ್ವ ಹೊಂದಿರಬಹುದು. ಏಕೆಂದರೆ ವ್ಯಕ್ತಿತ್ವವು ಸಾರವಿರುವ ಶೀಲ ಮತ್ತು ಗುಣಗಳಿಂದಾದುದು. ಈ ಗುಣಗಳು ಸೂಕ್ತ ಸಂದರ್ಭಗಳಲ್ಲಿ– ಸನ್ನಿವೇಶಗಳಲ್ಲಿ ಪ್ರಕಾಶವಾಗುವುವು. ಅಂತಹವರು ವ್ಯಕ್ತಿತ್ವಶಾಲಿಗಳು. ಈ ಒಳಲಕ್ಷಣಗಳಿಗೆ ರೂಪ, ಅಂತಸ್ತು, ಮಾತು ಎಂಬ ಹೊರ ಲಕ್ಷಣಗಳು ಇರಲೇಬೇಕೆಂದಿಲ್ಲ. ಇದ್ದರೆ ಶೋಭೆ ಇರದಿದ್ದರೆ ಕುಂದಲ್ಲ. ಡಿವಿಜಿಯವರ (ಜ್ಞಾನ), ನಿಸ್ವಾರ್ಥ ಗುಣ ; ವಿಶ್ವೇಶ್ವರಯ್ಯನವರ ಪರಿಶ್ರಮ, ನಿಷ್ಠೆ, ಸಂಕಲ್ಪಶಕ್ತಿ; ರಾಧಾಕೃಷ್ಣನ್ ರವರ (ಪಾಂಡಿತ್ಯ),ಶ್ರದ್ಧಾಪೂರ್ವಕ ಸಚ್ಚಾರಿತ್ಯ ಮೌಲ್ಯಗಳು ಅವರ ಅಂತರಂಗದ ಲಕ್ಷಣಗಳು. ಅವು ಒಳಗಿನ ಬೆಳಗು ಮತ್ತು ವರ್ಚಸ್ಸು. ಇದೇ ಉನ್ನತ ವ್ಯಕ್ತಿತ್ವ.

ನಿಮ್ಮ ವಿದ್ಯಾರ್ಥಿಗಳು' ಗೆಳೆತನ' ಎಂಬ ಪದ್ಯ; 'ಭೂಮಿಗಿಳಿದ ಬೃಹಸ್ಪತಿ' ನಾಟಕ, ಸರ್ವಜ್ಞನ ವಚನಗಳನ್ನು ಓದಿರುತ್ತಾರೆ. ಗೆಳೆತನದ ಬಗ್ಗೆ ಅನೇಕ ವಿಚಾರಗಳನ್ನು ತಿಳಿದಿರುತ್ತಾರೆ. 'ಸ್ನೇಹ' ಎಂಬ ವಿಚಾರ ಕುರಿತು ' ಚಿಂತನ ಲೇಖನ' ಬರೆಯಲು ತಿಳಿಸಿ. ಮಾರ್ಗದರ್ಶಿಸಿ.

**ಸಂಭಾಷಣೆ ರಚನೆ**

ಭಾಷಾ ಪಾಠಗಳಲ್ಲಿ ಬರುವ ಕಥೆ (ಒಂಬತ್ತನೇ ತರಗತಿಯ – ಪ್ರಾಮಾಣಿಕತೆ' ಎಂಬ ಆಧುನಿಕ ಸಣ್ಣಕಥೆ, ವೃಕ್ಷ ಸಾಕ್ಷಿಯೆಂಬ ಪಂಚತಂತ್ರದ ವಿಶಿಷ್ಟ ಕತೆ) ಪೌರಾಣಿಕ ಪದ್ಯ ಭಾಗ (ಕೌರವೇಂದ್ರನ ಕೊಂದೆ ನೀನು– ಹತ್ತನೇ ತರಗತಿ) ಐತಿಹಾಸಿಕ ಪದ್ಯಭಾಗ ಹಲಗಲಿ ಬೇಡರು) ಜೀವನ ಚರಿತ್ರೆಯ ಕೆಲವು ಘಟನೆಗಳು, ವಿವರಣೆಗಳು ಮೊದಲಾದವುಗಳನ್ನು ಸಂಭಾಷಣಾ ಕಥೆಯ ರೂಪಕ್ಕೆ ತರಲು ಹೇಳಬಹುದು.

ಶಬರಿ (ಹತ್ತನೆಯ ತರಗತಿಯ ಗದ್ಯಪಾಠ - ಗೇಯ ನಾಟಕ) ಪಾಠವನ್ನು ಗೇಯ ನಾಟಕ ಅಥವಾ ಹೊಸಗನ್ನಡ ರೂಪಕ್ಕೆ ತಂದು, ಸಂಭಾಷಣೆಗಳನ್ನು ರಚಿಸಿ ನಾಟಕಾಭಿನಯಕ್ಕೆ ತರಬೇತು ನೀಡಬಹುದು. ಹೀಗೆಯೇ 'ಬಿಲ್ಲಹಬ್ಬ' ಪಾಠವನ್ನು ಇನ್ನೂ ಸಂಕ್ಷಿಪ್ತ ರೂಪದ ನಾಟಕ ತರಲು ವಿದ್ಯಾರ್ಥಿಗಳು– ಶಿಕ್ಷಕರು ಸೇರಿ ರಚನ ಕಾರ್ಯ ಕೈಗೊಳ್ಳಬಹುದು).

**ಕವಿ ಪರಿಚಯ:** ಪದ್ಯದ ಪಾಠಗಳ ಮೂಲಕ ಪರಿಚಯವಾದ ಕುವೆಂಪು, ಬೇಂದ್ರೆ, ಕಾರಂತ, ಜಿ.ಎಸ್. ಶಿವರುದ್ರಪ್ಪ ಮುಂತಾದವರ ಕವಿಜಯಂತಿ ಏರ್ಪಡಿಸಿ, ಅವರ ಜೀವನ, ಸಾಧನೆ, ಕೊಡುಗೆಗಳನ್ನು ಕುರಿತು ಪರಿಚಯ, ಅವರ ಕೃತಿಗಳ ಕೆಲ ಭಾಗಗಳ ವಾಚನ ಮಾಡಲು ವಿದ್ಯಾರ್ಥಿಗಳಿಗೆ ತರಬೇತು ನೀಡಿ ಕಾರ್ಯಕ್ರಮ ಕೈಗೊಂಡು ಅವರ ಸಾಹಿತ್ಯ ಪರಿಚಯಕ್ಕೆ ಪುಸ್ತಕ ಪ್ರದರ್ಶನ ಏರ್ಪಡಿಸಬಹುದು.

**ಪತ್ರಿಕಾ ವರದಿ ರಚನೆ** – ಶಾಲೆಯಲ್ಲಿ ನಡೆದ ವಾರ್ಷಿಕೋತ್ಸವ, ಕ್ರೀಡೋತ್ಸವ , ವಿಜ್ಞಾನ ಸಪ್ತಾಹ, ರಾಜ್ಯೋತ್ಸವ ವರದಿಯನ್ನು ಪತ್ರಿಕೆಗಾಗಿ ರಚಿಸಲು ಚಟುವಟಿಕೆ ನೀಡಿರಿ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3**

1. ವಿದ್ಯಾರ್ಥಿಗಳ ಅಭಿವ್ಯಕ್ತಿ ಕೌಶಲ ಅಭಿವೃದ್ಧಿಗೆ ಪೂರಕವಾದ ಮೂರು ಸಾಹಿತ್ಯ ಸಂಬಂಧಿ ಚಟುವಟಿಕೆಗಳನ್ನು ಸಂಕ್ಷಿಪ್ತವಾಗಿ ಪರಿಚಯಿಸಿರಿ.
2. ಕವಿಜಯಂತಿ ಏರ್ಪಡಿಸುವಾಗ ಹಮ್ಮಿಕೊಳ್ಳಬೇಕಾದ ಕನಿಷ್ಠ ನಾಲ್ಕು ಚಟುವಟಿಕೆಗಳನ್ನು ಪಟ್ಟಿ ಮಾಡಿರಿ.

**3.5.4. ಸಾರಾಂಶಿಸೋಣ**

- ಪಠ್ಯ ಆಧಾರಿತ ಚಟುವಟಿಕೆಗಳು ಪ್ರೌಢಶಾಲಾ ಹಂತದ ವಿದ್ಯಾರ್ಥಿಗಳಲ್ಲಿ ಸೈದ್ಧಾಂತಿಕ ಭಾಷಾಂಶಗಳ ಮೇಲೆ ಹಿಡಿತ ಸಂಪಾದಿಸಲು ಸಹಾಯ ಮಾಡಬೇಕು.
- ವಿದ್ಯಾರ್ಥಿಗಳ ಪದಶಕ್ತಿಯನ್ನು ಶ್ರೀಮಂತ ಗೊಳಿಸಬೇಕು; ಅದಕ್ಕಾಗಿ ಚಟುವಟಿಕೆಗಳನ್ನು ತೊಡಗಿಸಬೇಕು.
- ಪ್ರೌಢ ಭಾಷಾಅಧ್ಯಯನದಿಂದ ಸಾಹಿತ್ಯ ಕೌಶಲಗಳು ವಿಕಸಿಸಲು ಪಠ್ಯ ಆಧರಿಸಿ ಚಟುವಟಿಕೆಗಳನ್ನು ಕೈಗೊಳ್ಳಬೇಕು.
- ಸೈದ್ಧಾಂತಿಕ ಭಾಷಾ ಚಟುವಟಿಕೆಗಳಿಗಾಗಿ– ಕಾರ್ಯಕ್ರಮಾನ್ವಯ ಕಲಿಕಾ ವಿಧಾನ; ವಾಕ್ಯ ವಿಶ್ಲೇಷಣೆ ಮತ್ತು ವಾಕ್ಯದಲ್ಲಿ ಪದಗಳ ಕ್ರಮ ವಿಶ್ಲೇಷಿಸಿ ನಿಯಮಗಳ ನಿರೂಪಣೆ, ಸಂಧಿ ಮತ್ತು ಸಮಾಸ ಪದಗಳ ರಚನೆ, ಬಹುವಚನ ಪ್ರತ್ಯಯ ಬರುವ ಸಂದರ್ಭ ತಿಳಿಯಲು ಚಟುವಟಿಕೆಗಳನ್ನು ನೀಡಬಹುದು.

- ಛಂದಸ್ಸು ಮತ್ತು ಅಲಂಕಾರ ಕಲಿಕೆಗೆ ಚಟುವಟಿಕೆಗಳನ್ನು ನೀಡಬಹುದು.
- ಪದಸಂಪತ್ತನ್ನು ಹೆಚ್ಚಿಸಲು ಅರ್ಥವ್ಯತ್ಯಾಸ; ಪ್ರತ್ಯೇಕೀಕರಣ, ಉಪಸರ್ಗ ಜೋಡಣೆ, ನಿಘಂಟು ಬಳಸುವ ಚಟುವಟಿಕೆ, ನುಡಿಗಟ್ಟುಗಳ ಸಂಗ್ರಹ ಮತ್ತು ಬಳಕೆಯ ಚಟುವಟಿಕೆಗಳನ್ನು ನೀಡಬಹುದು.
- ಪದಬಂಧ ರಚಿಸಿ ಸಮಯ ಮಿತಿ ಕೊಟ್ಟು ಪೂರ್ಣಗೊಳಿಸುವ ಚಟುವಟಿಕೆ ನೀಡಬಹುದು
- ಒಗಟುಗಳು ಬಿಡಿಸುವುದು ಮತ್ತು ಸಂಗ್ರಹಿಸುವುದು ಹಾಗೂ ರಚಿಸುವುದು ಇವೂ ಭಾಷಾಕಲಿಕೆಗೆ ಉತ್ತಮ ಚಟುವಟಿಕೆಗಳು;
- ಸಾಹಿತ್ಯ ಸಂಬಂಧಿಯಾಗಿ ಚಿಂತನಾ ನಕ್ಷೆ ರಚನೆ, ಚಿಂತನ ಲೇಖನ, ಸಂಭಾಷಣಾ ರಚನೆ, ಪತ್ರಿಕೆಗಳಿಂದ ಲೇಖನ ಸಂಗ್ರಹ ಇತ್ಯಾದಿ ಚಟುವಟಿಕೆಗಳು ಪ್ರಯೋಜನಕಾರಿಯಾಗುತ್ತವೆ;

### 3.5.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು - 1, 2 ಮತ್ತು 3

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**
1–ಕ, 2–ಡ

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

| ಅ | ಬ |
|---|---|
| 1 | ಕ |
| 2 | ಇ |
| 3 | ಬ |
| 4 | ಅ |

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3**
ಸ್ವ ಕಲಿಕಾ ಸಾಮಗ್ರಿ 3.5.3.3 ರ ವಿವರಗಳನ್ನು ಗಮನಿಸಿ.

### 3.5.6. ಘಟಕಾಂತ್ಯ ಅಭ್ಯಾಸಗಳು

1. ಸೈದ್ಧಾಂತಿಕ ಭಾಷಾ ಅಂಶಗಳು ಯಾವುವು? ಅವುಗಳಿಗೆ ಹಮ್ಮಿಕೊಳ್ಳಲಾಗುವ ಚಟುವಟಿಕೆಗಳನ್ನು ಪಟ್ಟಿಮಾಡಿರಿ.
2. ಕನ್ನಡ ಪದಸಂಪತ್ತನ್ನು ವೃದ್ಧಿಗೊಳಿಸಲು ಯಾವುದಾದರು ಐದು ಚಟುವಟಿಕೆಗಳನ್ನು ನಿರ್ವಹಿಸುವ ಕ್ರಮದೊಂದಿಗೆ ವಿವರಿಸಿರಿ.
3. ಪಠ್ಯ ಆಧಾರದಿಂದ ಸಾಹಿತ್ಯ ಕೌಶಲ ಬೆಳಸಲು ಬಳಸಬಹುದಾದ ನಾಲ್ಕು ಚಟುವಟಿಕೆಗಳನ್ನು ವರ್ಣಿಸಿರಿ.

### 3.5.7. ಪರಾಮರ್ಶನ ಸೂಚಿ


1. ಸಿರಿಕನ್ನಡ, ಸಿರಿಗನ್ನಡ, ಸವಿಗನ್ನಡ– ಪ್ರೌಢಶಾಲಾ ಕನ್ನಡ ಪಠ್ಯಪುಸ್ತಕಗಳು, ಪಠ್ಯಪುಸ್ತಕ ನಿರ್ದೇಶನಾಲಯ, ಡಿ.ಎಸ್.ಇ.ಆರ್, ಟಿ. ಬೆಂಗಳೂರು
2. ಕನ್ನಡ–ಸಂಪದ , ಪ್ರಥಮ ಡಿ.ಎಡ್ ಕನ್ನಡ ಪಠ್ಯಪುಸ್ತಕ, ಡಿ.ಎಸ್.ಇ.ಆರ್. ಟಿ. ಬೆಂಗಳೂರು
3. ಪ್ರಾ. ವೆಂ.ಆಚಾರ್ಯ: ಪದಾರ್ಥ ಚಿಂತಾಮಣಿ; ನವ ಕರ್ನಾಟಕ ಪ್ರಕಾಶನ –2011

4. ಕನ್ನಡ ಭಾಷೆ ಮತ್ತು ಭೋಧನೆ ; ಶಿಕ್ಷಕರ ಕೈಪಿಡಿ, ಆರ್.ಐ.ಇ, ಮೈಸೂರು
5. ನಿರಂಜನ ವಾನಳ್ಳಿ : ಪರಿಣಾಮಕಾರೀ ಸಂವಹನ ಕಲೆ, ವಿಸ್ಮಯ ಪ್ರಕಾಶನ, ಮೈಸೂರು
6. ಡಾ. ಮಹಾಬಲೇಶ್ವರ ರಾವ್: ಪ್ರೌಢಶಾಲೆಗಳಲ್ಲಿ ಕನ್ನಡ ಬೋಧನೆ, ನವಕರ್ನಾಟಕ ಪ್ರಕಾಶನ, ಬೆಂಗಳೂರು
7. https://www.love.edu>writingcentre (grammer exercises)
8. https://www.teaching English.org.uk>
9. https://www.academia.edu>co.cu

# ಬ್ಲಾಕ್ 3 : ಕನ್ನಡ ಪಠ್ಯಕ್ರಮ ಮತ್ತು ಪಠ್ಯೇತರ ಚಟುವಟಿಕೆಗಳು

## ಘಟಕ 6 : ಪಠ್ಯೇತರ ಚಟುವಟಿಕೆಗಳು

**ಘಟಕದ ರಚನೆ**


3.6.1. ಕಲಿಕೆಯ ಉದ್ದೇಶಗಳು
3.6.2. ಪೀಠಿಕೆ
3.6.3. ಕಲಿಕೆಯ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು
3.6.3.1. ಪಠ್ಯೇತರ ಚಟುವಟಿಕೆಗಳು
3.6.3.2. ಶಾಲಾ ಹೊರಗಿನ ಚಟುವಟಿಕೆಗಳು
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1
3.6.3.3. ಶಾಲೆಯಲ್ಲಿ ಏರ್ಪಡಿಸುವ ಪಠ್ಯೇತರ ಚಟುವಟಿಕೆಗಳು
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2
3.6.4. ಸಾರಾಂಶಿಸೋಣ
3.6.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು - 1 ಮತ್ತು 2
3.6.6. ಘಟಕಾಂತ್ಯ ಅಭ್ಯಾಸಗಳು
3.6.7. ಪರಾಮರ್ಶನ ಸೂಚಿ


### 3.6.1. ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿ ಶಿಕ್ಷಕ ಶಿಕ್ಷಕಿಯರು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು;

- ಪಠ್ಯೇತರ ಚಟುವಟಿಕೆಗಳನ್ನು ಪಟ್ಟಿ ಮಾಡುವರು;
- ಶಾಲಾ ಸನ್ನಿವೇಶದಲ್ಲಿ ಮತ್ತು ಶಾಲೆಯ ಹೊರಗೆ ನಡೆಸುವ ಚಟುವಟಿಕೆಗಳ ಮಹತ್ವ ಗುರುತಿಸುವರು;
- ಕ್ಷೇತ್ರ ಪ್ರವಾಸ ಏರ್ಪಡಿಸುವ ಕ್ರಮವನ್ನು ವಿವರಿಸುವರು;
- ಶಾಲೆಯಲ್ಲಿ ಪುಸ್ತಕ ಪ್ರದರ್ಶನದ ಏರ್ಪಾಡು ಮಾಡುವ ಉದ್ದೇಶ ಮತ್ತು ಕ್ರಮವನ್ನು ವಿವರಿಸುವರು;
- ವಿಶೇಷೋಪನ್ಯಾಸದ ಮಹತ್ವ ತಿಳಿಸುವರು;
- 'ಭಿತ್ತಿ ಪತ್ರಿಕೆ' ಪ್ರಕಟಣೆಯ ಕ್ರಮ ವಿವರಿಸುವರು; ಮತ್ತು
- ಸೃಜನಶೀಲ ಸಾಮರ್ಥ್ಯ ಬೆಳೆಸುವ ಕಾರ್ಯಕ್ರಮಗಳನ್ನು ವಿವರಿಸುವರು.

### 3.6.2. ಪೀಠಿಕೆ

ಕನ್ನಡ ಭಾಷಾ ಕಲಿಕೆಯ ಪಯಣದಲ್ಲಿ ಭಾಷೆ ಮತ್ತು ಸಾಹಿತ್ಯ (ವಿಷಯ) ಎರಡಕ್ಕೂ ಸಂಬಂಧಪಟ್ಟಂತೆ ಅನೇಕ ಪಠ್ಯೇತರ ಚಟುವಟಿಕೆಗಳತ್ತ ಶಿಕ್ಷಕರು ಗಮನಹರಿಸುವುದು ಇಂದೆಂದಿಗಿಂತಲೂ ಮುಖ್ಯವಾಗಿದೆ. ಕನ್ನಡ ಭಾಷಾ ಶಿಕ್ಷಣದ ಮೂಲಕ ನಾಡಿನ ಸಂಸ್ಕೃತಿ, ನಡೆ–ನುಡಿ, ಜೀವನವಿಧಾನ, ವ್ಯಕ್ತಿ ಸಾಧನೆ, ಜೀವನ ಮೌಲ್ಯಗಳನ್ನು ಮತ್ತು ವಿವಿಧ ಸಂಸ್ಕೃತಿಗಳ ಪರಿಚಯಿಸುತ್ತಿದ್ದೇವೆ. ಜಾಗತೀಕರಣದಿಂದ, ವಿವಿಧ ಸಂಸ್ಕೃತಿಗಳ ಪರಿಚಯ ಮತ್ತು ಪ್ರಭಾವವು, ಭಾಷೆ ಮತ್ತು ಸಾಹಿತ್ಯದ ಮೇಲೆ ಆಗುತ್ತಿದೆ. ಭಾಷೆಯ ಬೆಳವಣಿಗೆ ತೀವ್ರಗತಿಯಲ್ಲಿ ಸಾಗುತ್ತಿದೆ. ಸಮೂಹಮಾಧ್ಯಮಗಳು ವ್ಯಾಪಕವಾಗಿ ಪ್ರಭಾವಿಸುತ್ತಿವೆ. ಆದ್ದರಿಂದ ಭಾಷಾಶಿಕ್ಷಣಕ್ಕೆ ಮತ್ತು ಸಾಹಿತ್ಯಾಭಿರುಚಿಗೆ ಕೇವಲ ಪಠ್ಯ ಚಟುವಟಿಕೆಗಳು ಸಾಕಾಗದು. ಪಠ್ಯೇತರ ಚಟುವಟಿಕೆಗಳನ್ನೂ ಶಿಕ್ಷಕರು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕಾಗಿದೆ. 'ದೇಶ ತಿರುಗಿ ನೋಡು, ಕೋಶ ತೆಗೆದು ನೋಡು' ಎಂಬ ಗಾದೆಯನ್ನು ಬಲ್ಲಿರಿ. ಈ

ಕಾರಣದಿಂದಾಗಿ ಭಾಷಾ ಉದ್ದೇಶಗಳನ್ನು ಸಾಧಿಸಲು ಅನುಕೂಲಿಸುವ ಪಠ್ಯೇತರ ಚಟುವಟಿಕೆಗಳಾವುವು ಎಂಬುದನ್ನು ಈ ಘಟಕದಲ್ಲಿ ವಿಚಾರಮಾಡೋಣ.

### 3.6.3. ಕಲಿಕೆಯ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

#### 3.6.3.1. ಪಠ್ಯೇತರ ಚಟುವಟಿಕೆಗಳು

ಯಾವುದೇ ಶಿಕ್ಷಣ ವ್ಯವಸ್ಥೆಯಲ್ಲಿ ಪಠ್ಯಕ್ರಮವನ್ನು ಪಠ್ಯ ಸಂಬಂಧಿ ಮತ್ತು ಪಠ್ಯೇತರ ಚಟುವಟಿಕೆಗಳ ಮೂಲಕ ಗುರುತಿಸಲಾಗುತ್ತದೆ ಎಂದು ತಿಳಿದಿರುವಿರಿ. ಒಂದು ದೃಷ್ಟಿಯಲ್ಲಿ ಎರಡರ ಚಟುವಟಿಕೆಗಳಲ್ಲಿ ಭಿನ್ನತೆಗಳಿದ್ದರೂ ಅವು ಪರಸ್ಪರ ಪೂರಕವಾಗಿರುತ್ತವೆಂಬುದನ್ನು ಮರೆಯಬಾರದು. ನಿಗದಿತ ಪಠ್ಯಕ್ಕೆ ಸಂಬಂಧಿಸಿದಂತಹ ಚಟುವಟಿಕೆಗಳನ್ನು ತರಗತಿ ಕೋಣೆ ಅಥವಾ ಕಾರ್ಯಗಾರಗಳಲ್ಲಿ ಕೈಗೊಂಡಾಗ ಅವು ಪಠ್ಯಾಧಾರಿತ ಚಟುವಟಿಕೆಗಳು ಎನಿಸಿಕೊಳ್ಳುವುವು.

ಪಠ್ಯೇತರ ಚಟುವಟಿಕೆಗಳು ವಿದ್ಯಾರ್ಥಿಗಳ ಅಭಿವ್ಯಕ್ತಿ ಸಾಮರ್ಥ್ಯವನ್ನು ಪೋಷಿಸುವ , ಚಿಂತನ ಶಕ್ತಿಯನ್ನು ತೀವ್ರಗೊಳಿಸುವ, ಪ್ರಶಂಸಾ ಗುಣ ಮೂಡಿಸುವ, ಸೃಜನಶೀಲತೆಯನ್ನು ಹೊರತರುವ, ಜೀವನಾನುಭವಗಳನ್ನು ವಿಸ್ತರಿಸುವ ಚಟುವಟಿಕೆಗಳಾಗಿರುತ್ತವೆ.

ಅಧ್ಯಯನ ಸೌಲಭ್ಯಕ್ಕಾಗಿ ಅವುಗಳನ್ನು ಶಾಲೆಯ ಹೊರಗೆ ನಡೆಸುವ ಚಟುವಟಿಕೆಗಳು ಮತ್ತು ಶಾಲೆಯಲ್ಲಿ ನಡೆಸುವ ಚಟುವಟಿಕೆಗಳು ಎಂದು ಗುರುತಿಸಿಕೊಳ್ಳೋಣ.

#### 3.6.3.2. ಶಾಲೆಯ ಹೊರಗಿನ ಚಟುವಟಿಕೆಗಳು

**ಅಭ್ಯಾಸ**

ಕನ್ನಡ ಭಾಷಾ ವಿದ್ಯಾರ್ಥಿಗಳನ್ನು ಕ್ಷೇತ್ರ ಪ್ರವಾಸಕ್ಕೆ ಕರೆದೊಯ್ಯಲು ಯಾವ ಅಂಶಗಳ ಆಧಾರದ ಮೇಲೆ ಕ್ಷೇತ್ರವನ್ನು ಆಯ್ಕೆ ಮಾಡುವಿರಿ ಎಂಬುದನ್ನು ಪಟ್ಟಿ ಮಾಡಿರಿ.

.
.
.
.
.

ಬಹುಶಃ ನೀವು ಕನ್ನಡ ನಾಡಿನ ಸಾಂಸ್ಕೃತಿಕ ಕೇಂದ್ರ, ಕವಿಗಳ ಜನ್ಮಸ್ಥಳ, ನಿಸರ್ಗ ಸೌಂದರ್ಯದ ತಾಣ, ಚಾರಿತ್ರಿಕ ಸ್ಥಳಗಳು, ಪಕ್ಷಿಧಾಮ ಮುಂತಾದ ಆಧಾರಾಂಶಗಳನ್ನು ಪಟ್ಟಿ ಮಾಡಿರಬಹುದು.

**1. ಕ್ಷೇತ್ರ ಪ್ರವಾಸ:** ಇದನ್ನು ಶೈಕ್ಷಣಿಕ ಪ್ರವಾಸ ಎಂದು ವಿದ್ಯಾರ್ಥಿಗಳಿಗೆ ಅರಿವಾಗುವಂತೆ ನಡೆಸಬೇಕು. ಐತಿಹಾಸಿಕ (ಬೇಲೂರು, ಹಂಪಿ, ಚಿತ್ರದುರ್ಗ) ಸಾಂಸ್ಕೃತಿಕ (ಮೈಸೂರು, ಬೆಂಗಳೂರು) ಪ್ರಾಕೃತಿಕ (ಚಿಕ್ಕಮಗಳೂರು, ಶಿವಮೊಗ್ಗ, ಕುಪ್ಪಳ್ಳಿ) ಮಹತ್ವದ ಸ್ಥಳವೊಂದಕ್ಕೆ ಒಂದೆರಡು ದಿನಗಳ ಪ್ರವಾಸ ಕೈಗೊಂಡು ಪ್ರತ್ಯಕ್ಷಾನುಭವ ನೀಡಬಹುದು. ವಸ್ತುಸಂಗ್ರಹಾಲಯ (ಬೆಂಗಳೂರು, ಜಾನಪದ ಲೋಕ) ಗಳಿಗೆ ಭೇಟಿ ನೀಡುವ ಮುನ್ನ ಅನುಮತಿ ಪತ್ರ ರಚನೆ ತರಗತಿಯಲ್ಲೇ ಕೈಗೊಳ್ಳಬಹುದು. ವೀಕ್ಷಿಸುವಾಗ ಮಾರ್ಗದರ್ಶಿ (ಗೈಡ್) ಗಳಿಂದ

ಪಡೆಯಬೇಕಾದ ಮಾಹಿತಿಗೆ ಪ್ರಶ್ನಾವಳಿ ರಚಿಸಿಕೊಳ್ಳಲು ತಿಳಿಸಿ, ಪ್ರತಿ ವಿದ್ಯಾರ್ಥಿ ಮಾಹಿತಿಯ ಟಿಪ್ಪಣಿ ಮಾಡಿಕೊಂಡು ಶಾಲೆಗೆ ಹಿಂದಿರುಗಿದ ನಂತರ ವರದಿಯನ್ನು (ಅಗತ್ಯ ಚಿತ್ರಗಳನ್ನು ಸೇರಿಸಿ) ಪ್ರಬಂಧ ರೂಪದಲ್ಲಿ ಬರೆಯಲು ನಿಯೋಜಿತ ಕಾರ್ಯ ನೀಡಬಹುದು.
ಕ್ಷೇತ್ರಪ್ರವಾಸಗಳಿಂದ ಭಾಷಾಗುರಿಗಳನ್ನು ಸಾಧಿಸಲು ಅನೇಕ ರೀತಿಯ ಅವಕಾಶಗಳಿವೆ:

ವಿದ್ಯಾರ್ಥಿಗಳು ವಿವಿಧ ಸ್ಥಳಗಳನ್ನು ಪ್ರತ್ಯಕ್ಷವಾಗಿ ವೀಕ್ಷಿಸುವುದರಿಂದ ಕಲ್ಪನೆಗೆ ವಾಸ್ತವತೆಯ ಮೆರುಗನ್ನೂ ನೀಡಲು ಶಕ್ತರಾಗುತ್ತಾರೆ, ಪಕ್ಷಿಧಾಮ, ಮತ್ಸ್ಯಾಲಯ, ನದಿ ತೀರಗಳನ್ನು ವೀಕ್ಷಿಸುವ ಅನುಭವದಿಂದ ವಿದ್ಯಾರ್ಥಿಗಳಿಗೆ ಕವಿ ಮನ ಹೊಂದಲು ಸಾಧ್ಯ. ಸ್ಮಾರಕಗಳ ಇತಿಹಾಸ, ಶಿಲ್ಪಕಲೆಯ ಕುಸುರಿಕಲೆ ವೀಕ್ಷಿಸಿ ಬೆರಗಾಗುವ ಅನುಭವ ವಿದ್ಯಾರ್ಥಿಗಳ ಪಾಲಿಗೆ ದೊರೆಯುವುದು.

ವಿದ್ಯಾರ್ಥಿಗಳು ಬರೆವಣಿಗೆಯಲ್ಲಿ ಸ್ವಂತಿಕೆಯನ್ನು ಸಾಧಿಸಲು ಅನುವು ಮಾಡಿಕೊಡುವುದು;
ಪ್ರವಾಸದ ಕುರಿತಾದ ಮಾತುಕತೆ, ಸಂದರ್ಶನ, ಕಿರುಉಪನ್ಯಾಸಗಳ ಮೂಲಕ ವಿದ್ಯಾರ್ಥಿಗಳ ಮೌಖಿಕ ಸಂವಹನ ಸಾಮರ್ಥ್ಯ ಬೆಳೆಯಲು ಅವಕಾಶವಾಗುವುದು;

**ಕವಿಗಳು, ಸಾಹಿತಿಗಳು, ಕಥೆಗಾರರು ಮೊದಲಾದವರ ಜನ್ಮ ಸ್ಥಳಗಳಿಗೆ ಭೇಟಿ,** ಅವರ ಹೆಸರಿನ ವಸ್ತುಸಂಗ್ರಹಾಲಯಗಳಿಗೆ ಪ್ರವಾಸ ಮಾಡುವುದರಿಂದ ಅವರ ಕುರಿತಾದ ಗೌರವ, ಪ್ರೀತಿ ಹೆಚ್ಚಾಗಬಹುದು;

**ಕ್ಷೇತ್ರ ಪ್ರವಾಸದ ಸ್ಥಳಗಳು:**
ಕುವೆಂಪುರವರ ಕುಪ್ಪಳ್ಳಿ, ಗೋವಿಂದ ಪೈಗಳ ಮಂಜೇಶ್ವರ, ಕಾರಂತರ ಪುತ್ತೂರಿನ ಬಾಲವನ, ಮುದ್ದಣ್ಣನ ನಂದಳಿಕೆ, ಲಕ್ಷ್ಮೀಶನ ದೇವನೂರು, ಬಸವನ ಬಾಗೇವಾಡಿ, ಕುಮಾರವ್ಯಾಸನ ಕೋಳಿವಾಡ ಮುಂತಾದ ಸ್ಥಳಗಳಿಗೆ ಪ್ರವಾಸ ಹೋಗಬಹುದು.

**2. ವಸ್ತು ಪ್ರದರ್ಶನ ವೀಕ್ಷಣೆ:** 'ಭಾರತದರ್ಶನ' (ರೈಲು ಸಂಗ್ರಹಾಲಯ) ಸ್ಥಳೀಯ ಜಾತ್ರೆ ಮತ್ತು ಅದರ ಅಂಗವಾಗಿ ನಡೆಯುವ ವಸ್ತುಪ್ರದರ್ಶನಗಳಿಗೆ ಭೇಟಿ, ನಟನೆ, ರಂಗಾಯಣ (ಮೈಸೂರು) ಹೆಗ್ಗೋಡು ಕಲಾ ಕೇಂದ್ರಗಳಿಗೆ ಭೇಟಿ, ಕಲಾಪ್ರದರ್ಶನಗಳ ವೀಕ್ಷಣೆ ಮತ್ತು ಆ ಬಗ್ಗೆ ಉಪನ್ಯಾಸ ಏರ್ಪಡಿಸಬಹುದು.

**3. ಪುಸ್ತಕ ಪ್ರದರ್ಶನ:** ಕನ್ನಡ ರಾಜ್ಯೋತ್ಸವ ಸಂದರ್ಭಗಳಲ್ಲಿ, ಜಿಲ್ಲಾ / ತಾಲ್ಲೂಕು ಸಾಹಿತ್ಯ ಸಮ್ಮೇಳನ ಕಾರ್ಯಕ್ರಮಗಳ ಅಂಗವಾಗಿ ಜಿಲ್ಲಾ ಗ್ರಂಥಾಲಯ ಅಥವಾ ಇನ್ನಿತರ ಕೇಂದ್ರಗಳಲ್ಲಿ ಪುಸ್ತಕ ಪ್ರದರ್ಶನ ಏರ್ಪಡಿಸುವ ರೂಢಿ ಇದೆ. ಅಂತಹ ಸಂದರ್ಭಗಳಲ್ಲಿ, ವಿದ್ಯಾರ್ಥಿಗಳನ್ನು ಕರೆದೊಯ್ದು ಕವಿ ಅಥವಾ ಸಾಹಿತ್ಯ ಪ್ರಕಾರ ಅನುಸರಿಸಿ ಜೋಡಿಸಿಟ್ಟ ಕೃತಿಗಳನ್ನು, ಶಾಸನಗಳ ಪ್ರತಿಕೃತಿಗಳನ್ನು ವೀಕ್ಷಿಸಲು ಅವಕಾಶ ದೊರಕಿಸಬಹುದು. ಅಲ್ಲಿಯೇ ಲೇಖಕರ, ವಿಮರ್ಶಕರ ಅಥವಾ ಕವಿ, ಕೃತಿಯ ಬಗ್ಗೆ ಸಂಶೋಧನೆ ಮಾಡಿರುವವರಿಂದ ಕಿರು ಭಾಷಣ ಏರ್ಪಡಿಸಬಹುದು ಮತ್ತು ಭಾಷಣಕಾರರ ಸಂದರ್ಶನವನ್ನೂ ಕೈಗೊಳ್ಳಬಹುದು.

**4. ಯಕ್ಷಗಾನ ಬಯಲಾಟ ಪ್ರದರ್ಶನ:** ಇವು ಪ್ರಾದೇಶಿಕ ಮಹತ್ವ ಪಡೆದಿರುವುದರಿಂದ ನಾಡಿನ ಎಲ್ಲ ಭಾಗಗಳ ವಿದ್ಯಾರ್ಥಿಗಳಿಗೆ ಪ್ರತ್ಯಕ್ಷವಾಗಿ ವೀಕ್ಷಿಸಲು ಸಾಧ್ಯವಿಲ್ಲ. (ದೂರದರ್ಶನ ಕಾರ್ಯಕ್ರಮ ಹೊರತು) ಆದರೆ ರಾಜ್ಯೋತ್ಸವ, ದಸರಾ ಮಹೋತ್ಸವ, ಗಣೇಶೋತ್ಸವ, ಸಮ್ಮೇಳನ, ಜಾತ್ರೆ ಮುಂತಾದ ಸಂದರ್ಭಗಳಲ್ಲಿ ಈ ಕಲೆಗಳು ಪ್ರಚಲಿತವಾಗಿರುವ ಕಡೆಗಳಲ್ಲಿ ಜರಗುವವು. ಅಂತಹ ಅವಕಾಶಗಳನ್ನು ಬಳಸಿಕೊಂಡು ವಿದ್ಯಾರ್ಥಿಗಳನ್ನು ಕರೆದೊಯ್ಯುವುದು ಒಳಿತು. ವೀಕ್ಷಿಸಿದ ಕಾರ್ಯಕ್ರಮದ ಪುಟ್ಟ ವರದಿ ತಯಾರಿಸಲು ಶಿಕ್ಷಕರು ಮಾರ್ಗದರ್ಶಿಸಬಹುದು.

**5. 'ಕಲಾಭವನದ' ವಾರಾಂತ್ಯ ಚಟುವಟಿಕೆಗಳು:** ಜಿಲ್ಲಾ ಮತ್ತು ತಾಲ್ಲೂಕುಗಳಲ್ಲಿ (ಬಹುತೇಕವಾಗಿ ಸಮುದಾಯ ಭವನ ಅಥವಾ ಕಲಾಭವನಗಳು ಸಾಹಿತ್ಯಿಕ, ಕಲಾತ್ಮಕ ಚಟುವಟಿಕೆಗಳನ್ನೂ ಏರ್ಪಡಿಸುತ್ತವೆ. ಇವು ಕಥಾ ಕಾಲಕ್ಷೇಪ, ನೃತ್ಯ, ಯಕ್ಷಗಾನ, ಕವಿಗೋಷ್ಠಿ, ವಿಚಾರ ಸಂಕಿರಣ, ನಾಟಕ, ಹರಟೆ, ನಗೆಹಬ್ಬ, ಇತ್ಯಾದಿ ಚಟುವಟಿಕೆಗಳಾಗಿರಬಹುದು. (i) ಇವುಗಳನ್ನು ವೀಕ್ಷಿಸಿ ಅವುಗಳ ಪುಟ್ಟ ವರದಿ ಬರೆದು ತರಲು ತಿಳಿಸಬಹುದು. (ii) ಆ ಸಾಹಿತ್ಯ ಕಾರ್ಯಕ್ರಮದ ವಿಶೇಷಾಂಶಗಳನ್ನು ಕುರಿತು 'ಮೆಚ್ಚುಗೆಯ ಪತ್ರ'ವನ್ನು ವಿದ್ಯಾರ್ಥಿಗಳು ರಚಿಸಲು ತಿಳಿಸಬಹುದು ಮತ್ತು ವಿದ್ಯಾರ್ಥಿಗಳು ಆ ಪತ್ರಗಳನ್ನು ದಿನಪತ್ರಿಕೆಗೆ ಕಳುಹಿಸಲು ಮಾರ್ಗದರ್ಶಿಸಬಹುದು (iii) ಶಾಲೆಯಲ್ಲಿ ವಿದ್ಯಾರ್ಥಿ ಸಂಘದ ಚಟುವಟಿಕೆಗಳಲ್ಲಿ ಓದಿ ತಿಳಿಸಬಹುದು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

'ಎ' ಪಟ್ಟಿಯಲ್ಲಿರುವ ಚಟುವಟಿಕೆಗಳಿಂದ ಆಗುವ ಭಾಷಾ ಶಿಕ್ಷಣದ ಅನುಕೂಲ 'ಬಿ' ಪಟ್ಟಿಯಲ್ಲಿ ಸೂಚಿಸಬೇಕು ಅವುಗಳನ್ನು ಹೊಂದಿಸಿರಿ.

| | 'ಎ' | 'ಬಿ' | |
|---|---|---|---|
| 1 | ಕ್ಷೇತ್ರ ಪ್ರವಾಸ ಕೈಗೊಳ್ಳುವುದು | ಕಲೆ ಮತ್ತು ಸಂಸ್ಕೃತಿಯ ಅರಿವು | ಅ |
| 2 | ಪುಸ್ತಕ ಪ್ರದರ್ಶನ | ಕಲ್ಪನೆಗೆ ವಾಸ್ತವತೆಯ ಮೆರಗು | ಬ |
| 3 | ಕಲಾಭ ವನ ವಾರಾಂತ್ಯ | ಕನ್ನಡ ಪದಸಂಪತ್ತು | ಕ |
| 4 | ವಸ್ತುಸಂಗ್ರಹಾಲಯ ಭೇಟಿ | ಕೃತಿ ಪರಿಚಯ | ಡ |
| 5 | ಥಟ್ಟಂತ ಹೇಳಿ ಕೆಲವು ಪ್ರಶ್ನೆಗಳು | ಸಾಂಸ್ಕೃತಿಕ ಚಟುವಟಿಕೆಗಳ ವೀಕ್ಷಣೆ | ಇ |
| 6 | ಲೇಖನ ಸಂಪುಟಗಳ ರಚನೆ | ಅಭಿನಯ ತರಬೇತಿ | ಪ |
| | | ಆಳವಾದ ಸಾಮರ್ಥ್ಯ | ಜ |

### 3.6.3.2. ಶಾಲೆಯಲ್ಲಿ ಏರ್ಪಡಿಸುವ ಪಠ್ಯೇತರ ಚಟುವಟಿಕೆಗಳು

**1. ವಿಶೇಷೋಪನ್ಯಾಸ:**

ಶಿಕ್ಷಕ: ಕುಂತಿಯ ಪತಿ ಯಾರು?
ವಿದ್ಯಾರ್ಥಿ: ವಿಭೀಷಣ ಸಾರ್
ಶಿಕ್ಷಕರ: ಭೀಷ್ಮ ಯಾರು?
ವಿದ್ಯಾರ್ಥಿ: ದ್ರೌಪದಿಯ ತಂದೆ ಸಾರ್

ಇಂತಹ ಬೆಚ್ಚಿ ಬೀಳಿಸುವ ಉತ್ತರಗಳು ಡಾ. ಗುರುರಾಜ ಕರಜಗಿಯವರ ಗಮನಕ್ಕೆ ಬಂತಂತೆ. ಈ ಅನರ್ಥಕಾರಿ ಉತ್ತರಗಳ ಹಿಂದೆ ಇರುವ ವಿದ್ಯಾರ್ಥಿಗಳ ಅಜ್ಞಾನ ಹೊಡೆದೋಡಿಸಲು ಮಾನ್ಯ ಕರಜಗಿಯವರು ಕಾಲೇಜಿನಲ್ಲಿ ವಾರಕ್ಕೊಮ್ಮೆ ಒಂದು ತಾಸಿನ 'ಗಮಕ– ವ್ಯಾಖ್ಯಾನ' ಕಾರ್ಯಕ್ರಮ ಹಮ್ಮಿಕೊಂಡರಂತೆ. ಅದರಲ್ಲಿ ತಜ್ಞರಿಂದ ಮಹಾಕಾವ್ಯಗಳ ಪರಿಚಯ. ಯಾರಿಗೂ ಕಡ್ಡಾಯಗೊಳಿಸಲಿಲ್ಲವಂತೆ. ಆಸಕ್ತರು ನೆರೆದು ಆಲಿಸುವುದು ಎಂದು ಆರಂಭವಾಯಿತಂತೆ. ಕ್ರಮೇಣ ಜನಪ್ರಿಯ ನೆಚ್ಚಿನ ಕಾರ್ಯಕ್ರಮವಾಯಿತಂತೆ .ಅಲ್ಲೇ ಪ್ರಶ್ನೋತ್ತರ – ಸಂವಾದ– ಚರ್ಚೆಯ ಆಯಾಮಗಳು ಸೇರಿಕೊಂಡವು. ಇದು ಉತ್ತಮ ಸಾಹಿತ್ಯಿಕ ಕಾರ್ಯಕ್ರಮ. ಹೀಗೆ ಶಾಲಾ– ಕಾಲೇಜುಗಳಲ್ಲಿ ಇತಿಹಾಸ, ವಿಜ್ಞಾನ, ಸಾಹಿತ್ಯ, ಕಲೆ ಸಂಬಂಧಿ ವಿಶೇಷ ಉಪನ್ಯಾಸಗಳನ್ನು ಪಕ್ಷಕ್ಕೊ, ತಿಂಗಳಿಗೊ ಒಮ್ಮೆ ಏರ್ಪಡಿಸಬಹುದಲ್ಲವೇ?

- ಪ್ರೌಢ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ವಿಶೇಷ ಉಪನ್ಯಾಸದ ವಿಷಯದ 'ಸಾರಲೇಖ'(synopsis) ಒದಗಿಸುವುದೂ ಒಳಿತು. ಇದರಿಂದ ಏನು ಗ್ರಹಿಸಬೇಕು, ಏಕೆ ಗ್ರಹಿಸಬೇಕೆಂದು ಸ್ಪಷ್ಟವಾಗುವುದು. ಈ

ಚಟುವಟಿಕೆಯಿಂದ ವಿದ್ಯಾರ್ಥಿಗಳು ಟಿಪ್ಪಣಿ ಮಾಡಿಕೊಳ್ಳುವುದರಲ್ಲಿ ನಿಖರತೆ- ನಿರ್ದಿಷ್ಟತೆ ಹೊಂದಬಲ್ಲರು.

- "ಗದ್ಯ- ಪದ್ಯ"ಪಾಠಾಂತ್ಯದ ಹೆಚ್ಚಿನ ಓದಿಗೆ ಸೂಚಿಸಿದ ಕರ್ತೃ/ ಕೃತಿಗಳ ಬಗ್ಗೆ 'ಪರಿಚಯಾತ್ಮಕ ಉಪನ್ಯಾಸ' ಏರ್ಪಡಿಸುವುದೂ ಉಪಯುಕ್ತವಾಗಬಹುದಲ್ಲವೇ?

## 2. ಭಿತ್ತಿ ಪತ್ರಿಕೆ

ವಿವೇಕಾನಂದ ಶಾಲೆ, ಮೈಸೂರು- ಗ್ರಾಮ ಭಾಗದ ಮಕ್ಕಳೇ ಹೆಚ್ಚಾಗಿ ಬರುವ ಶಾಲೆ ತರಗತಿಗಳ ಹೊರ ಕಾರಿಡಾರ್ ನಲ್ಲಿ ನನ್ನ ಗಮನ ಸೆಳೆದದ್ದು **'ಕಾಜಾಣ'** ಎಂಬ ಗೋಡೆ ಪತ್ರಿಕೆ. ಅದರಲ್ಲಿದ್ದ ಒಕ್ಕಣೆಯಲ್ಲಿ ವಿದ್ಯಾರ್ಥಿಗಳಿಂದ ರಚಿತವಾದ ಕವಿತೆ, ಚುಟುಕ, ಲೇಖನಗಳು ನಿಜಕ್ಕೂ ಮಾದರಿಯೇ. ಎಲ್ಲ ಶಾಲೆಗಳೂ ಇಂತಹ ಕಾರ್ಯಕ್ರಮವನ್ನು ಒಪ್ಪವಾಗಿ ಕೈಗೊಳ್ಳಬೇಕು. ಇದಕ್ಕಾಗಿ ಯಾವೆಲ್ಲ ಅಂಶಗಳನ್ನು ಗಮನಿಸಬೇಕೆಂದು ನೋಡೋಣ.

- ವಿದ್ಯಾರ್ಥಿಗಳ ಬರವಣಿಗೆಯನ್ನು ಸಂಗ್ರಹಿಸಿ 'ಸಂಪಾದನೆ'(edit) ಮಾಡಲು ವಿದ್ಯಾರ್ಥಿ ಸದಸ್ಯರನ್ನು ಒಳಗೊಂಡಂತೆ ಶಿಕ್ಷಕರೂ ಸೇರಿ ಸಂಪಾದನೆ ಸಮಿತಿ ರಚಿಸಿಕೊಳ್ಳಬೇಕು.
- ಬರಹ ದೋಷ- ವಿಷಯ ದೋಷಗಳಿಲ್ಲದಂತೆ ಲೇಖನಗಳಿರಬೇಕು. ವೈವಿಧ್ಯಮಯ ರಚನೆಗಳಿಗೆ ಅವಕಾಶ ನೀಡಬೇಕು, ಆಕರ ಕೃತಿಗಳನ್ನು ಕೊಟ್ಟು ಲೇಖನ ಬರೆಯಲು ಮಾರ್ಗದರ್ಶಿಸಬೇಕು.
- ಶಾಲೆಯ ಕಾರ್ಯಕ್ರಮಗಳ ವರದಿಗಳನ್ನು ಆಗಾಗ ಪ್ರಕಟಿಸಬೇಕು. ಭಾಷಾ ವಿದ್ಯಾರ್ಥಿಗಳ ಸಹಭಾಗಿತ್ವ ಹೆಚ್ಚಿಸಲು ರಸಪ್ರಶ್ನೆಗಳು, ಸ್ವರಚಿತ ಕವನ ಜೊತೆಗೆ ಶೀರ್ಷಿಕೆ ಕೊಡಿ, ಪದಬಂಧಗಳು, ಕೈಗೊಂಡ ಪ್ರವಾಸ ಪತ್ರ, ಒಗಟುಗಳನ್ನು, ಅಪೂರ್ಣ ಕತೆ- ಮುಕ್ತಾಯ ಬರೆಹ, ಓದುಗರ ಓಲೆ ಬರೆಯಲು ಅಂಕಣಗಳನ್ನೂ ಒದಗಿಸಬೇಕು.
- ಇದನ್ನು ಸಾಪ್ತಾಹಿಕ ಅಥವಾ ಪಾಕ್ಷಿಕವಾಗಿ ಕೈಗೊಳ್ಳಬಹುದು. ತಿಂಗಳಿಗೊಮ್ಮೆ ಸಮಿತಿಯ ಸದಸ್ಯರು- ಶಿಕ್ಷಕರು ಸೇರಿ ಸುಧಾರಣೆಗಳ ಬಗ್ಗೆ ಚರ್ಚಿಸಬೇಕು.
- ಆಗಾಗ ನಡೆಯುವ ಅಂತರ್-ಶಾಲಾ 'ಭಿತ್ತಿಪತ್ರಿಕೆ' ಸ್ಪರ್ಧೆಗೂ ಭಿತ್ತಿಪತ್ರಿಕೆಯ ಪ್ರತಿಯನ್ನು ಕಳುಹಿಸಬಹುದು.
- ಭಿತ್ತಿ ಪತ್ರಿಕೆಯ 'ಶೀರ್ಷಿಕೆ ಮತ್ತು ವಿನ್ಯಾಸ' ಸೂಚಿಸಲು ವಿದ್ಯಾರ್ಥಿಗಳಿಗೆ ಪುಟ್ಟ ಸ್ಪರ್ಧೆ ಏರ್ಪಡಿಸಬಹುದು ಮತ್ತು ಭಿತ್ತಿ ಪತ್ರಿಕೆಯ ವಿವಿಧ ಭಾಗಗಳಿಗೆ 'ತಲೆ ಬರೆಹ' ಸೂಚಿಸುವ ಅವಕಾಶ ಕಲ್ಪಿಸಬಹುದು.
- ವಿದ್ಯಾರ್ಥಿಗಳು ಒಳ್ಳೆಯ ಬರೆಹಗಾರರಾಗಲು 'ಶಾಲಾಪತ್ರಿಕೆ' ಉತ್ತಮ ಅವಕಾಶ ಕಲ್ಪಿಸುವುದು. ಅದಕ್ಕಾಗಿ 'ವಿದ್ಯಾರ್ಥಿ ಬರಹಗಾರರಿಗೆ ಕೆಳಗಿನ ಅಂಶಗಳನ್ನು ತಿಳಿದುಕೊಳ್ಳಲು ಸೂಚಿಸಬೇಕು:
  –ಏನು ಬರೆಯುತ್ತಿದ್ದೇನೆ ಎಂಬ ಸ್ಪಷ್ಟ ಅರಿವು
  –ಅದನ್ನು ಒಂದು ಚೌಕಟ್ಟಿಗೆ ಒಳಪಡಿಸುವುದು
  –ಕಾಗುಣಿತದ ಕುರಿತಾದ ಎಚ್ಚರವಿರಬೇಕು, ಅಕ್ಷರ ತಪ್ಪಾಗಬಾರದು;
  –ಸವಕಲಾದ ಉಪಮೆ ಮತ್ತು ಉದ್ಧರಣೆಗಳನ್ನು ಬಳಸದೆ ಹೊಸಪದಗಳು, ಪದಪುಂಜಗಳನ್ನು ಬಳಸಬೇಕು;
  –ಹೇಳುವುದನ್ನು ಸೂಕ್ತ ಪದಗಳ ಸಹಾಯದಿಂದ ಸಂಗ್ರಹವಾಗಿ ಹೇಳಬೇಕು;
- ವರ್ಷಕ್ಕೊಮ್ಮೆ 'ಶಾಲಾ ಪತ್ರಿಕೆ' ಯನ್ನು ಹೊರತರಬಹುದು. ಪ್ರತಿ ತರಗತಿಯಿಂದ ಒಬ್ಬಿಬ್ಬರು ಪ್ರತಿನಿಧಿಗಳನ್ನು ಆಯ್ಕೆ ಮಾಡಿಕೊಂಡು ಶಾಲಾ ಪತ್ರಿಕೆ ಸಮಿತಿಯ ಸದಸ್ಯರಾಗಿ ನೇಮಿಸಿಕೊಂಡು ಶಿಕ್ಷಕರು ಮಾರ್ಗದರ್ಶನ ಮಾಡಬೇಕು. ಶಾಲಾ ಭಿತ್ತಿ ಪತ್ರಿಕೆಯನ್ನು ದಕ್ಷ ರೀತಿಯಲ್ಲಿ ಕೈಗೊಂಡರೆ ಕ್ರಮೇಣ ಶಾಲಾ

ಪತ್ರಿಕೆಗೆ ಲೇಖನಗಳನ್ನು, ಕವನ, ವಿಮರ್ಶೆ, ಏಕಾಂಕ ನಾಟಕ, ಕತೆ ಮುಂತಾದವುಗಳನ್ನು ಬರೆಯಬಲ್ಲರು. ಮುಂದೆ ಪತ್ರಿಕೆಗಳಿಗೆ ಕಳುಹಿಸುವ ಲೇಖನ ಬರೆಯಬಲ್ಲವರಾಗಬಹುದು.

**3. ಚರ್ಚಾ / ಭಾಷಣ ಸ್ಪರ್ಧೆ**

ಅಂತರ್ ಶಾಲಾ ಚರ್ಚಾಸ್ಪರ್ಧೆ, ಚರ್ಚಾಕೂಟಗಳನ್ನು ಏರ್ಪಡಿಸಿ ಭಾಷಣ ಚಾತುರ್ಯ, ವಾದ ಸ್ಫೂರ್ತಿ ಬೆಳೆಸಬಹುದು.

ವಾದಾತ್ಮಕವಾದ ಮೂರು ವಿಷಯಗಳನ್ನು ಕಾರ್ಯಕ್ರಮದ ಒಂದೆರಡು ದಿನಗಳ ಮುನ್ನ ಸೂಚಿಸಬೇಕು. ಸ್ಪರ್ಧೆಯ ಕಾರ್ಯಕ್ರಮದ ದಿನ ಒಂದನ್ನು ಚೀಟಿ ಎತ್ತಿ ಪ್ರಕಟಿಸಬೇಕು. ಇದಕ್ಕಾಗಿ ವಿದ್ಯಾರ್ಥಿಗಳನ್ನು ಸಿದ್ಧಗೊಳಿಸುವ ಹೊಣೆ ಶಿಕ್ಷಕರದಾಗಿರುತ್ತದೆ.

ಈ ಚಟುವಟಿಕೆಯಲ್ಲಿ ವಿದ್ಯಾರ್ಥಿಗಳು ಗಮನಿಸಿಕೊಳ್ಳಬೇಕಾದ ಅಂಶಗಳು:

- ತಪ್ಪಿಲ್ಲದೆ ಗಟ್ಟಿಯಾಗಿ– ಸ್ಪಷ್ಟವಾಗಿ ಮಾತನಾಡುವುದು
- ವಿಷಯ ತಪ್ಪು ಅಥವಾ ವಿರೋಧದ ಹಾದಿ ಹಿಡಿಯದಿರುವುದು
- ವಾದಿ– ಪ್ರತಿವಾದಿ– ಶಿಷ್ಟ ನಡವಳಿಕೆ ತೋರುವುದು
- ಬೇರೆಯವರು ಹೇಳಿಕೊಟ್ಟಂತೆ ಕಂಠಪಾಠ ಮಾಡುವುದಕ್ಕಿಂತ ಸ್ವಂತ ಚಿಂತನೆಯನ್ನು ಬಳಸುವುದು
- ವಾದಿಸುವಾಗ ಪ್ರಬಲ ಮಂಡನೆ– ಪ್ರಬಲ ಖಂಡನೆಗೆ ಒತ್ತು ನೀಡುವ ಬಗ್ಗೆ ಗಮನ ಹರಿಸಲು ತಿಳಿಸಬೇಕು. ಎದುರಾಳಿಯ ಮಾತಿನ ಬಗ್ಗೆ ವ್ಯಂಗ್ಯ–ಕುಹಕ ತೋರದಂತೆ ಮಾತನಾಡುವುದು

ಈ ಚಟುವಟಿಕೆಯಲ್ಲಿ ವಿದ್ಯಾರ್ಥಿಗಳು ಗಮನಿಸಿಕೊಳ್ಳಬೇಕಾದ ಅಂಶಗಳು:
ಚರ್ಚೆಗೆ/ಭಾಷಣಕ್ಕೆ ಸೂಕ್ತವಾದ, ಭಿನ್ನಾಭಿಪ್ರಾಯವಿರುವ ವಿಷಯವನ್ನು ನೀಡುವುದು;
ವಿದ್ಯಾರ್ಥಿಗಳು ತಯಾರಿ ನಡೆಸಲು ಸಾಕಷ್ಟು ಕಾಲಾವಕಾಶ ನೀಡುವುದು;
ಸಮರ್ಥ ತೀರ್ಪುಗಾರರನ್ನು ಕರೆತರುವುದು; ವಿಷಯ ಪರಿಣಿತರನ್ನು ಆಹ್ವಾನಿಸಿ ಚರ್ಚೆ, ವಾದ, ವೈಖರಿ, ವಿಷಯ ಮಂಡನೆ ಬಗ್ಗೆ ಪ್ರಗತಿದಾಯಕ ಹಿಮ್ಮಾಹಿತಿ ಕೊಡಲು ಏರ್ಪಾಟು ಮಾಡುವುದು;

ಚರ್ಚೆಯ ಒಟ್ಟು ಪ್ರಕ್ರಿಯೆಯಲ್ಲಿ ಯಾವೆಲ್ಲ ಅಂಶಗಳನ್ನು ಗಮನಿಸಲಾಗುತ್ತದೆ ಮತ್ತು ಪ್ರತಿಯೊಂದಕ್ಕೆ ನಿಗದಿಯಾದ ಅಂಕಗಳೆಷ್ಟು ಎಂಬುದನ್ನು ನಿಖರವಾಗಿ ಚರ್ಚಾಸ್ಪರ್ಧೆಗೆ ಮೊದಲೇ ವಿದ್ಯಾರ್ಥಿಗಳಿಗೆ ತಿಳಿಸುವುದು.

**4. ಶಾಲಾ ಪುಸ್ತಕ ಪ್ರದರ್ಶನ**

ನಮ್ಮ ಅಜ್ಜ ಹೀಗೆ ಹೇಳುತ್ತಿದ್ದರು: 'ಚಿಕ್ಕವಯಸ್ಸಿನಲ್ಲೇ ಪುಸ್ತಕಗಳನ್ನು ಓದುವ ಅಭ್ಯಾಸ ಶುರು ಮಾಡುತ್ತಾರೋ ಅವರು ಎಂದಿಗೂ ಒಂಟಿ ಎಂದು ಭಾವಿಸರು. ಅದು ಅವರಿಗೆ ಹವ್ಯಾಸವಾಗಿ ಬಿಡುತ್ತದೆ. ಅವರಿಗೆ ಬೇಸರ.. ಬೇಗುದಿ ಕಾಡುವುದಿಲ್ಲ. ನಮ್ಮ ದೇಹಕ್ಕೆ ಆಹಾರ ಹೇಗೋ ಹಾಗೆ ಮನಸ್ಸಿಗೆ ಪುಸ್ತಕಗಳು ಆಹಾರ' ಎಂದು. ಇದು ನಿಜ ಅಲ್ಲವೇ? ಮಕ್ಕಳಿಗೆ ಪಠ್ಯಪುಸ್ತಕಕ್ಕೆ ಹೊರತಾಗಿ ಅನ್ಯ ಪುಸ್ತಕ ವಿಸ್ಮಯ ಲೋಕ ತೆರೆದು ತೋರಲು 'ಪುಸ್ತಕ ಪ್ರದರ್ಶನ'. ಒಂದು ಉತ್ತಮ ಚಟುವಟಿಕೆಯಾಗುವುದು.

- ವರ್ಷಕ್ಕೆ ಒಮ್ಮೆ ಅಥವಾ ಆರು ತಿಂಗಳಿಗೆ ಒಮ್ಮೆ ಇದನ್ನು ಆಯೋಜಿಸಬಹುದು. ಕನ್ನಡ ರಾಜ್ಯೋತ್ಸವ ಮಾಸದಲ್ಲಿ ನಿಯೋಜಿಸಿ ಎರಡು ಮೂರು ದಿನಗಳವರೆಗೆ ತೆರೆದಿರಬಹುದು;

- ಈ ಪ್ರದರ್ಶನವನ್ನು ಶಾಲೆಯ ಗ್ರಂಥಾಲಯದಲ್ಲಿ ಅಥವಾ ಸಭಾಭವನದ ಒಂದು ನಿರ್ದಿಷ್ಟ ಭಾಗದಲ್ಲಿ ಏರ್ಪಡಿಸಬಹುದು. ವಿದ್ಯಾರ್ಥಿಗಳಿಂದ, ಶಿಕ್ಷರುಗಳಿಂದ ಹಿರಿಯ ವಿದ್ಯಾರ್ಥಿಗಳಿಂದ (ಸಾಧ್ಯವಿದ್ದಲ್ಲಿ ಮಾರಾಟಗಾರರಿಂದಲೂ) ಪುಸ್ತಕಗಳನ್ನು ಸಂಗ್ರಹಿಸಬೇಕು;
- ವಿಷಯ, ಸಾಹಿತ್ಯ ಪ್ರಕಾರ, ಲೇಖಕರ ಕೃತಿಗಳ ಕ್ರಮ ಅನುಸರಿಸಿ ಜೋಡಿಸಲು ತಿಳಿಸಬಹುದು; ಶೀರ್ಷಿಕೆಗಳನ್ನು ರಚಿಸಲು ತಿಳಿಸಬೇಕು;
- ಶಿಕ್ಷಕರು ಮತ್ತು ವಿದ್ಯಾರ್ಥಿ ಪ್ರತಿನಿಧಿಗಳ ಸಹಯೋಗದಲ್ಲಿ ಪುಸ್ತಕಗಳ ಬಗೆಗೆ ಮಾಹಿತಿಯನ್ನು ನೀಡಲು ಟಿಪ್ಪಣಿ ತಯಾರಿಸಿಕೊಳ್ಳಬೇಕು. ಪ್ರದರ್ಶನದ ಸ್ಥಳದಲ್ಲಿ ವಿದ್ಯಾರ್ಥಿ ಪ್ರತಿನಿಧಿಗಳು ನಿಂತು ವೀಕ್ಷಕರಿಗೆ ವಿವರಣೆ ನೀಡಲು ತರಬೇತಿ ನೀಡಬೇಕು;
- ಕವಿಗಳ, ಲೇಖಕರ ಭಾವಚಿತ್ರಗಳನ್ನು, ಶಾಸನಗಳ ಚಿತ್ರಗಳನ್ನು, ಪಾಠಗಳಲ್ಲಿ ಪರಿಚಯವಾದ ಮತ್ತು ಇತರ ನಾಟಕ– ನೃತ್ಯಗಳ ದೃಶ್ಯಗಳ ಚಿತ್ರಪಟಗಳನ್ನು ಪ್ರದರ್ಶಿಸಬಹುದು;
- ಪುಸ್ತಕಗಳ ಓದುವಿಕೆಗೆ ಸಂಬಂಧಿಸಿದ ಘೋಷವಾಕ್ಯಗಳನ್ನು ಬರೆದ ಫಲಕಗಳನ್ನು ತಯಾರಿಸಿ, ಅವುಗಳನ್ನು ಪ್ರದರ್ಶನದ ಸ್ಥಳದಲ್ಲಿ ತೂಗುಹಾಕಬಹುದು;
- ಪುಸ್ತಕಗಳ ಪ್ರದರ್ಶನ ವೀಕ್ಷಿಸಲು ವೇಳಾಪಟ್ಟಿ ರಚಿಸಿ ವಿದ್ಯಾರ್ಥಿಗಳ ತಂಡವನ್ನು ವೀಕ್ಷಿಸಲು ಬಿಡಬೇಕು;
- ಪರಿಚಯವಾದ ಕೃತಿ– ಕೃತಿಕಾರರು ಮತ್ತಿತರ ಅಂಶಗಳನ್ನು ಆಧರಿಸಿ ಒಂದು 'ರಸಪ್ರಶ್ನೆ' ಕಾರ್ಯಕ್ರಮ ಆಯೋಜಿಸಿ ಕೊಳ್ಳಬಹುದು;
- ಐದಾರು ತಂಡಗಳನ್ನು ರಚಿಸಿಕೊಂಡು (ಥಟ್ ಅಂತ ಹೇಳು – ಕಾರ್ಯಕ್ರಮದಂತೆ) ಏರ್ಪಡಿಸಬೇಕು. ಉಳಿದ ವಿದ್ಯಾರ್ಥಿಗಳು ಕುಳಿತು ವೀಕ್ಷಿಸಲು ಅನುವು ಮಾಡಿಕೊಡಬೇಕು) ವೀಕ್ಷಕರಿಗೂ ಪ್ರಶ್ನೆ–ಬಹುಮಾನ ಆಯೋಜಿಸಬೇಕು;
- ಪುಸ್ತಕ ಪ್ರದರ್ಶನದ ಅವಧಿಯಲ್ಲಿ ಪರಿಚಯವಾದ ಕೃತಿಗಳ ಬಗ್ಗೆ ಟಿಪ್ಪಣಿಯನ್ನು ಒಂದು ಪುಸ್ತಕದಲ್ಲಿ ಬರೆದಿಡಲು ತಿಳಿಸಬೇಕು.

**5. ಸೃಜನಶೀಲ ಚಟುವಟಿಕೆಗಳು**

**ನುಡಿಚಿತ್ರ ಅಥವಾ ಶಬ್ದಚಿತ್ರ ಲೇಖನ:**

"ಜಯಪುರದ ಜನರು ಅದರಲ್ಲೂ ಹೆಂಗಸರು ರಂಗುರಂಗಿನ ಲಂಗ, ಪಾಯಿಜಾಮಾ, ದಾವಣಿ (ಮೇಲುದ) ಸೀರೆ, ರವಿಕೆ ತೊಡುವವರು. ಅದರಲ್ಲೂ ಕೆಂಪು, ಕಿತ್ತಳೆ, ಹಳದಿ ಎಂದರೆ ಪ್ರಾಣ. ನಿತ್ಯವೂ ಹೋಳಿ ಹುಣ್ಣಿಮೆ ಮಾಡುವವರಂತೆ ಬಣ್ಣದ ಚೆಲ್ಲಾಟ ಅವರ ಬಣ್ಣಗಳಲ್ಲಿ, ಗಂಡಸರೂ ರಂಗುರಾಯರೇ. ಅವರ ಪಂಚೆ, ಅಂಗಿಗಳಲ್ಲಿ ರಂಗು ಕಾಣಿಸದಿದ್ದರೂ ಅವರು ಮುಂಡಾಸಿನ ಮೂವತ್ತು ಮೊಳಗಳಲ್ಲಿ ಮುನ್ನೂರು ಬಣ್ಣಗಳನ್ನು ಮೆರೆಸುವುದುಂಟು.

(ಒಂಬತ್ತನೆ ತರಗತಿ ಪಠ್ಯದ– ಗದ್ಯ ಪಾಠ: ಬೆಡಗಿನ ತಾಣ ಜಯಪುರ)

ಬರೆಹಗಾರ ನುಡಿಯಲ್ಲೇ ಚಿತ್ರವನ್ನೋ, ದೃಶ್ಯವನ್ನೋ, ಶಿಲ್ಪವನ್ನೋ, ವ್ಯಕ್ತಿತ್ವವನ್ನೋ, ಘಟನೆಯನ್ನೋ ಕಣ್ಣಿಗೆ ಕಟ್ಟಿದಂತೆ ವರ್ಣಿಸುವುದೇ ನುಡಿ ಚಿತ್ರ.

ಕವಿ ಕುವೆಂಪು ಅವರ ಕಾನೂರ ಹೆಗ್ಗಡತಿ ಕಾದಂಬರಿಯಲ್ಲಿ ಮಲೆನಾಡಿನ ವರ್ಣನೆ ಕಣ್ಣಿಗೆ ಕಟ್ಟಿದಂತಾಗಿ ನುಡಿ ಚಿತ್ರಗಳನ್ನು ಕಾಣುತ್ತೇವೆ ಮತ್ತು ಮನಸ್ಸಿನಲ್ಲಿ ಅಚ್ಚೊತ್ತಿಕೊಳ್ಳುತ್ತೇವೆ.

- 'ನುಡಿಚಿತ್ರ' ಸೃಜನಶೀಲತೆ ಅರಳುವ ತಾಣ. ನುಡಿ ಚಿತ್ರದ ಬರೆವಣಿಗೆಗೆ ಆರಂಭ, ಮುಕ್ತಾಯ ಹೀಗೇ ಇರಬೇಕೆಂಬ ನಿಯಮವಿಲ್ಲ. ಆದರೆ ಓದುವಾಗ ನಮಗೆ ಆಪ್ತವೆನಿಸಬೇಕು.
- ಒಂದು ವಿಷಯ, ಒಂದು ಅನುಭವ, ಬರೆಹಗಾರನ ಚಿಂತನೆ, ಭಾಷಾಶಕ್ತಿ ಮತ್ತು ಸೃಜನಾತ್ಮಕತೆಯಿಂದ ನುಡಿಚಿತ್ರ ಸೃಷ್ಟಿಯಾಗುತ್ತದೆ.
- ಪಠ್ಯ ಪುಸ್ತಕದ ಗದ್ಯ ಮತ್ತು ಪದ್ಯ ಭಾಗಗಳಲ್ಲಿ ನುಡಿಚಿತ್ರಗಳಂತಹ ಉದಾಹರಣೆಗಳು ದೊರಕುತ್ತವೆ. ವಿದ್ಯಾರ್ಥಿಗಳು ಅವುಗಳನ್ನು ಗುರುತಿಸುವಂತೆ ಮಾಡಬಹುದು

**ಸಣ್ಣ ಕಥೆಯ ರಚನೆಯ ಚಟುವಟಿಕೆಗಳು:** ಇದು ಬರೆಹ ಕೌಶಲ್ಯಕ್ಕೆ ಸಂಬಂಧಿಸಿದ ಉತ್ತಮ ಚಟುವಟಿಕೆ. ಕಲ್ಪನೆಯನ್ನು ಬಳಸಿಕೊಂಡು ಸಹಜ ಓಟದಲ್ಲಿ (ವ್ಯಾಕರಣ ಚೌಕಟ್ಟಿನಲ್ಲಿದ್ದರೂ) ಹರಿಯುವ ಸುಲಭವಾಗಿ ಅರ್ಥಮಾಡಿಕೊಳ್ಳಬಲ್ಲ ಬರೆಹ. ಇದರಲ್ಲಿ (1) ಪಾತ್ರ (2) ಸನ್ನಿವೇಶ (ಸಂಕ್ಷಿಪ್ತ ಆದರೆ ಕಲಾತ್ಮಕ) (3) ಕಥಾವಸ್ತು/ ಸರಳ ಆದರೆ ಆಸಕ್ತಿಯುತ) (4) ಕುತೂಹಲ, ಗೊಂದಲ /ಘರ್ಷಣೆ (5) ಒಂದು ತಿರುಳು/ ಸಂದೇಶ – ಇವು ಕಥೆಯ ಪ್ರಮುಖ ಅಂಶಗಳು. ಕಥೆಯನ್ನು ಉತ್ತಮ ಪುರುಷ ಅಥವಾ ಪ್ರಥಮ ಪುರುಷದಲ್ಲಿ ನಿರೂಪಿಸಬಹುದು. ಕಥಾರಚನೆಗೆ ಸಂಬಂಧಿಸಿದಂತೆ ಕೆಳಗಿನ ಚಟುವಟಿಕೆಗಳನ್ನು ಹಮ್ಮಿಕೊಳ್ಳಬಹುದು:

- ಕಥೆಯ ಪ್ರಾರಂಭವನ್ನು ಕೊಟ್ಟು ಅಂತ್ಯವನ್ನು ಬರೆಯಲು ತಿಳಿಸುವುದು;
- ಕಥೆಯ ಅಂತ್ಯವನ್ನು ಕೊಟ್ಟು ಪ್ರಾರಂಭವನ್ನು ಬರೆಯಲು ತಿಳಿಸುವುದು;
- ಕಥೆಯ ಆದಿ ಮತ್ತು ಅಂತ್ಯಗಳನ್ನು ಕೊಟ್ಟು ನಿರೂಪಣೆಗೆ ಜೀವತುಂಬಲು ಹೇಳುವುದು;
- ಕಥೆಯನ್ನು ತರಗತಿಯಲ್ಲಿ ಒಬ್ಬರು ಪ್ರಾರಂಭಿಸಿ ಉಳಿದವರು ಮುಂದುವರಿಸುವಂತೆ ತಿಳಿಸುವುದು;
- ಚಿತ್ರ ತೋರಿಸಿ ಕಥೆ ಬರೆಯಲು ಸೂಚಿಸುವುದು
- ಪಾತ್ರಗಳನ್ನು ಬದಲಿಸಿ ಕಥೆ ಹೆಣೆಯಲು ಸಹಾಯಮಾಡುವುದು;
- ಸಂಭಾವನಾತ್ಮಕ ಅಂಶಗಳನ್ನು ನೀಡಿ ಕಥೆ ಮುಂದುವರಿಸಲು ಹೇಳುವುದು
- ಕಥೆಯ ಮಧ್ಯೆ ಕೆಲವು ಘಟನೆಗಳನ್ನು ತೆಗೆದು ಇತರ ಘಟನೆಗಳನ್ನು ಜೋಡಿಸಲು ಹೇಳುವುದು ಇತ್ಯಾದಿ.

**ಲಲಿತ ಪ್ರಬಂಧ ರಚನೆ**

ಥಟ್ಟನೆ ಎ.ಎನ್. ಮೂರ್ತಿರಾಯರು ಮತ್ತು ಕುವೆಂಪುರವರ ನೆನಪಾಗಿರಬೇಕಲ್ಲವೇ? ವ್ಯಾಘ್ರಗೀತೆ, ಅಜ್ಜಯನ ಅಭ್ಯಂಜನ ಪ್ರಬಂಧಗಳನ್ನು (ಹಾಗೆ ತೀ.ನಂ.ಶ್ರೀಯವರ ನಂತರು, ಪಡುಕೋಣೆ ರಮಾನಂದ ರಾಯರ ಕೊಡೆಯ ವಿಚಾರ) ಓದಿರುತ್ತೀರಿ ಅಲ್ಲವೇ? ಸಂಕ್ರಾಂತಿ ಹಬ್ಬದ ಸಂದರ್ಭದಲ್ಲೂ ಪತ್ರಿಕೆಗಳು ಪ್ರಕಟಿಸುವ ಲಲಿತ ಪ್ರಬಂಧ ಕೆಲವನ್ನು ತಂದು ತರಗತಿಯಲ್ಲಿ ಓದಿರಿ. ಲಲಿತ ಪ್ರಬಂಧಗಳ ಸ್ವರೂಪ ತಿಳಿಸಿ, ವಿದ್ಯಾರ್ಥಿಗಳೂ ರಂಜನೀಯ ಶೈಲಿಯಲ್ಲಿ ಬರೆಯಲು ಅವಕಾಶ ಕಲ್ಪಿಸಿರಿ.

ಉತ್ತಮ ಪ್ರಬಂಧಗಳನ್ನು ತರಗತಿಯಲ್ಲಿ ಓದಿಸಿ ಪ್ರಬಂಧ ರಚನೆಗೆ ಅಭಿಪ್ರೇರಣೆ ನೀಡಬಹುದು;

- ಕಾಲ್ಪನಿಕ ಪತ್ರಗಳನ್ನು ಲೇಖನದಂತೆ ಬರೆಯಬಹುದು. ಉದಾಹರಣೆಗೆ – ಅಳಿವಿನಂಚಿನಲ್ಲಿರುವ 'ಗುಬ್ಬಚ್ಚಿ' ತನ್ನ ಸಂತತಿಯನ್ನು ಉಳಿಸಿಕೊಡಿ ಎಂದು ಮಾನವರಿಗೆ ಬೇಡಿಕೆ ಪತ್ರಬರೆಯಲು ಹೇಳುವಂತೆ.
- ಹಲವು ವರ್ಷಗಳ ಹಿಂದೆ ಪ್ರಜಾವಾಣಿಯಲ್ಲಿ ಗಿರೀಶ ದೊಡ್ಡಮನಿಯವರು 'ಬಲರಾಮನ ವಿದಾಯ ಪತ್ರ' ಎಂಬ ಕಾಲ್ಪನಿಕ ಪತ್ರ ಬರೆದಿದ್ದರು. ದಸರಾದಲ್ಲಿ ಅಂಬಾರಿ ಹೊರುತ್ತಿದ್ದ ಬಲರಾಮ (ಆನೆ) ಮೈಸೂರಿನ ಮಹಾಜನರಿಗೆ ಹೃದಯಪೂರ್ವಕ ನಮನಗಳನ್ನು ತಿಳಿಸುತ್ತಾ ಉತ್ತಮ ಪುರುಷದಲ್ಲಿ ಬರೆದ

ನುಡಿಚಿತ್ರವನ್ನೊಳಗೊಂಡ ಪತ್ರ ಪ್ರಬಂಧವಿದು. (ನಿರಂಜನ ವಾನಳ್ಳಿಯವರ 'ಬರೆವಣಿಗೆ ಒಂದು ಕಲೆ' ಕೃತಿಯಲ್ಲಿ– ಪುಟ– 39).

**6. ಕವಿಗೋಷ್ಠಿ /ಕವನ ರಚನೆ ಸ್ಪರ್ಧೆ ಚಟುವಟಿಕೆಗಳು:** ವಿದ್ಯಾರ್ಥಿಗಳಿಗೆ ಕವನ ರಚಿಸಲು ಪ್ರೇರಣೆ, ಸಲಹೆ ಮಾರ್ಗದರ್ಶನ ನೀಡಿ ವರ್ಷಕ್ಕೆ ಎರಡು ಮೂರು ಸಲ ಈ ಅವಕಾಶ ಕಲ್ಪಿಸಬಹುದು. ಇದಕ್ಕಾಗಿ ಈ ಕೆಳಗಿನ ಅಂಶಗಳನ್ನು ಪರಿಗಣಿಸಬಹುದು.

- ಚಿತ್ರಕ್ಕೊಂದು ಕವಿತೆ ರಚಿಸಿ (ಉದಾಹರಣೆಯಾಗಿ ಮಯೂರ ಮಾಸಪತ್ರಿಕೆಯಲ್ಲಿರುವ 'ಕಲ್ಪನೆ– ಕಾವ್ಯ' ಭಾಗ ನೋಡಿ) ಎಂದು ಒಂದು ಅಥವಾ ಎರಡು ಚಿತ್ರ (ಭಾವ ಚಿತ್ರ)ಗಳನ್ನು ಪ್ರಕಟಿಸಿ ಹಲಗೆಯಲ್ಲಿ ಪ್ರದರ್ಶಿಸಿ– ಹಸ್ತಪ್ರತಿ ಕೊಡುವ ಅಂತಿಮ ದಿನಾಂಕ ತಿಳಿಸಿ. ಅದಕ್ಕೆ ಮೆಚ್ಚುಗೆಯ ಅಭಿಪ್ರಾಯಗಳನ್ನೂ ಬಹುಮಾನವನ್ನು ಬರೆದು ಪ್ರಕಟಿಸಿ ಹಲಗೆಯಲ್ಲಿ ಹಾಕಿರಿ.
- ಚುಟುಕ, ಹನಿಗವನ ರಚನೆಗೆ ಪ್ರೇರಣೆ, ಮಾರ್ಗದರ್ಶನ ನೀಡಿರಿ. ಉದಾಹರಣೆಯಾಗಿ ದುಂಡಿರಾಜ್, ದಿನಕರ ದೇಸಾಯಿ, ಸಿ.ಪಿ. ಕೃಷ್ಣಕುಮಾರರ, ಬೇಂದ್ರೆ ಮಂಜುನಾಥ ಮುಂತಾದವರ ಕವಿತೆಗಳನ್ನು ಓದಿ– ಮತ್ತು ವಿದ್ಯಾರ್ಥಿಗಳಿಂದ ಓದಿಸಿರಿ. ಜಪಾನಿ ಕವಿ ಭಾಶೋರವರ ಹೈಕು ಕವಿತೆಗಳನ್ನು ಪರಿಚಯಿಸಬಹುದು.
- ವಿದ್ಯಾರ್ಥಿಗಳು ಸ್ವರಚಿತ ಕವನಗಳನ್ನು ಆಯ್ದುಕೊಂಡು, ತರಗತಿಯಲ್ಲಿ 'ತಿಂಗಳ ಕವಿತೆ' ಎಂಬ ಶೀರ್ಷಿಕೆಯಲ್ಲಿ ಕವಿಗೋಷ್ಠಿ ಏರ್ಪಡಿಸಿರಿ. ಹಿಮ್ಮಾಹಿತಿ ನೀಡಿ ಪ್ರೋತ್ಸಾಹಿಸಬಹುದು.

**7. ವಾಕ್ ಚಾತುರ್ಯ ಕಾರ್ಯಕ್ರಮ/ ಸ್ಪರ್ಧೆ**

ಕವಿಗಳ, ಲೇಖಕರ, ಚಿಂತಕರ, ಇತಿಹಾಸ ಪುರುಷರ, ವಾಗ್ಮಿಗಳ ಭಾಷಣವನ್ನು ಯಥಾವತ್ತಾಗಿ ಅನುಸರಿಸುವುದು ಒಂದು ಅತ್ಯುತ್ತಮ ಭಾಷಿಕ ಚಟುವಟಿಕೆ. ಮೂಲ ಭಾಷಣಕಾರರ ನಿಲುವು (ಭಂಗಿ) ಅನುಸರಿಸಿ ಮಾತಿನ ಶೈಲಿ ಮತ್ತು ಭಾವಾಭಿವ್ಯಕ್ತಿ ಯೊಂದಿಗೆ ಸ್ಪಷ್ಟವಾಗಿ ಭಾಷಣ ಮಾಡಬೇಕು.

ತಕ್ಷಣ ನಿಮಗೆ ಸ್ವಾಮಿ ವಿವೇಕಾನಂದರು ಚಿಕಾಗೋ ಧರ್ಮ ಸಮ್ಮೇಳನದಲ್ಲಿ ನೀಡಿದ ಭಾಷಣ ನೆನಪಾಗಿರಬೇಕು !!

ಪ್ರಸಿದ್ಧವಾದ ಮತ್ತು ಮುಖ್ಯವೂ ಆದ ಭಾಷಣವೊಂದನ್ನು ಮೂಲದಂತೆಯೇ ಪುನರ್ ಭಾಷಣ ಮಾಡುವುದನ್ನೇ ವಾಕ್ ಚಾತುರ್ಯ ಭಾಷಣ ಎನ್ನುತ್ತಾರೆ. ಇದು ಮೂಲ ಭಾಷಣಕಾರರ ಕೌಶಲ, ತಂತ್ರ ಅನುಸರಿಸಿ ಮಾಡುವಂತಹದಾಗಿರುತ್ತದೆ.

**8. ವಾಗ್ಯುದ್ಧ ಕಾರ್ಯಕ್ರಮ:** (ವರ್ಬ್ಯಾಟಲ್ ಕನ್ನಡ ಜಿ ವಾಹಿನಿಯಲ್ಲಿ ನಡೆಯುವ ಕಾರ್ಯಕ್ರಮ) ಒಂದೊಂದು ತಂಡದಲ್ಲಿ ಇಬ್ಬಿಬ್ಬರು ಸ್ಪರ್ಧಿಗಳಿದ್ದು, ತಂಡಗಳು ಆಯ್ದ ವಿಷಯದ ಬಗ್ಗೆ ಪರ–ವಿರೋಧ ಮಾತಾಡಬೇಕು. ಜೊತೆಗೆ ಶಿಕ್ಷಕರೂ ವಾದ ಚುರುಕಾಗುವಂತೆ ಪ್ರಶ್ನೆಗಳನ್ನು ಹಾಕಿ ವಿದ್ಯಾರ್ಥಿಗಳ ವಾದ ತೀವ್ರವಾಗುವಂತೆ ಮಾಡಬಹುದು.

**9. ಗ್ರಂಥಾಲಯ ಚಟುವಟಿಕೆ:** ಅಭಿವೃದ್ಧಿ ಹೊಂದಿದ ಮತ್ತು ಹೊಂದುತ್ತಿರುವ ದೇಶಗಳಲ್ಲಿ ಪಠ್ಯೇತರ ಚಟುವಟಿಕೆಯಾಗಿ ರಜಾದಿನಗಳಲ್ಲೂ ವಿದ್ಯಾರ್ಥಿಗಳು ಶಾಲೆಯ ಗ್ರಂಥಾಲಯಗಳಿಗೆ ಬಂದು ಕಾಲ ಕಳೆಯಬಹುದು. ಅಂದರೆ ಆಡಿಯೋ, ವಿಡಿಯೋ ಕಥೆ ಹೇಳುವ ಮತ್ತು ಹೇಳಿಸುವ ಕಥೆಗಳನ್ನು ಓದುವ ಅವಕಾಶ ಕಲ್ಪಿಸಿ ಓದುವ ಸಂಸ್ಕಾರ ಕಲ್ಪಿಸುತ್ತಾರೆ. ನಮ್ಮಲ್ಲಿ ಹತ್ತನೆಯ ತರಗತಿ ಹನ್ನೆರಡನೆ ತರಗತಿಯ

ವಿದ್ಯಾರ್ಥಿಯೂ ಗ್ರಂಥಾಲಯ ಬಳಸದಿರುತ್ತಾನೆ/ಳೆ. ಈಗ ಬಹುತೇಕ ಪ್ರೌಢಶಾಲೆಗಳಲ್ಲಿ ಗ್ರಂಥಾಲಯಗಳಿದ್ದು ಒಂದು ಸಾವಿರದಿಂದ ಎಂಟು, ಹತ್ತು ಸಾವಿರ ಪುಸ್ತಕಗಳಿರುವ ಗ್ರಂಥಾಲಯಗಳಿವೆಯಂತೆ. ಆದರೂ ಕಂಪ್ಯೂಟರ್‌ನಲ್ಲೇ ಎಲ್ಲಾ ಸಿಗುವಾಗ ಹಳೆಯ ಪುಸ್ತಕಗಳ ಸಹವಾಸ ಬೇಕೆ ಎಂಬ ಅಜ್ಞಾನ ಇರುವವರು ಇದ್ದಾರೆ ಎಂಬ ಆರೋಪವಿದೆ. ಪ್ರಗತಿ ಹೊಂದಿದ ದೇಶಗಳು ಗ್ರಂಥಾಲಯ ಬಳಕೆಗೆ ಪ್ರಾಧಾನ್ಯ ಕೊಡುತ್ತಿವೆ ಎಂಬುದನ್ನು ಅರಿವಿಗರ ಗಮನಕ್ಕೆ ತರಬೇಕಾಗಿದೆ.

**10. ಜಾನಪದ ಸಾಹಿತ್ಯ– (ಪಠ್ಯಕ್ಕೆ ಪೂರಕ ಚಟುವಟಿಕೆಯಾಗುವುದು)**

ಗ್ರಾಮೀಣ ಪ್ರದೇಶದ ಮಕ್ಕಳಿಗೆ ಪರಿಚಿತವಾಗಿರುವ ಲಾವಣಿ, ಹಂತಿ ಪದ, ಸೋಬಾನೆ ಪದ, ಬೀಸುವ ಕಲ್ಲಿನ ಪದ, ಕುಟ್ಟೋ ಪದ, ರಿವಾಯತ್ ಪದ (ಮೊಹರಂ ಆಚರಣೆಯಲ್ಲಿ ಹಾಡುವ ಪದ)ಗಳಲ್ಲಿ ಪರಿಸರ ಪ್ರಜ್ಞೆ, ಜಲ–ಭೂ ಸಂರಕ್ಷಣೆ, ಜೀವನಮೌಲ್ಯ– ಮಾನವೀಯತೆ, ಪರೋಪಕಾರ ಸಂಬಂಧಿ ವಿಷಯಗಳಿವೆ. ಕಥೆ, ಹಾಡು ಮತ್ತು ಒಗಟು ರೂಪದಲ್ಲಿರುವುದನ್ನು ಪಠ್ಯಕ್ಕೆ ಸಂಬಂಧಿಸಿದ ಚಟುವಟಿಕೆಯನ್ನಾಗಿ ಗುರುತಿಸಿಕೊಳ್ಳಬೇಕು. ಅಂತಹ ಸಾಹಿತ್ಯವನ್ನು ಸಂಗ್ರಹ ಮಾಡಲು ಶಾಲೆಯಲ್ಲಿ ಪ್ರದರ್ಶನ ಮಾಡಲು, ಜನಪದ ಕಲಾವಿದರನ್ನು ಸಂದರ್ಶನ ಮಾಡುವ ಚಟುವಟಿಕೆಗಳನ್ನು ಒಳಗೊಳ್ಳಬಹುದು.

**11. ಚಲನಚಿತ್ರ ಪ್ರದರ್ಶನ ಮತ್ತು ಚಿತ್ರ ವಿಮರ್ಶೆ**

ವಿದೇಶದ ಒಂದು ಶಾಲೆಯಲ್ಲಿ ಶಿಕ್ಷಕರೊಬ್ಬರು ತರಗತಿಯಲ್ಲಿ ಒಂದು ತಾಸಿನ ಚಲನಚಿತ್ರವೊಂದನ್ನು ತೋರಿಸಿದರಂತೆ. ಅನಂತರ ಒಂದು ತಾಸು ಆ ಚಲನ ಚಿತ್ರದ ಬಗ್ಗೆ ಚರ್ಚೆ ಮಾಡಲು ಅವಕಾಶ ನೀಡಿದರಂತೆ. ವಿದ್ಯಾರ್ಥಿಗಳು ಉದ್ದೇಶಪೂರ್ವಕವಾಗಿ ಚಿಂತಿಸಲು ಮತ್ತು ಚರ್ಚಿಸುತ್ತಾ ಬಾಯ್ದೆರೆ ಚಟುವಟಿಕೆಯಲ್ಲಿ ಪರಿಣಾಮಕಾರಿಯಾಗಿ ತೊಡಗಿಕೊಳ್ಳಲು ಅವಕಾಶವಾಯಿತಂತೆ. ಇಂತಹ ಚಟುವಟಿಕೆಯನ್ನು ನಾವೂ –ಮಕ್ಕಳ ಚಲನಚಿತ್ರಗಳಾದ ಬೆಟ್ಟದ ಹೂವು, ಕೊಟ್ರೇಶಿ ಕನಸು, ಎಳೆಯರು ನಾವು ಗೆಳೆಯರು, ಫುಟ್ ಪಾತ್, ಗುಬ್ಬಚ್ಚಿಗಳು– ಇಂತಹ ಚಲನ ಚಿತ್ರಗಳ ಮೂಲಕ– ಹಮ್ಮಿಕೊಳ್ಳಬಹುದು. ಅನಂತರ ವಿದ್ಯಾರ್ಥಿಗಳನ್ನು ನಾಲ್ಕಾರು ತಂಡಗಳಾಗಿ ವಿಭಾಗಿಸಿ, ಪ್ರತಿ ತಂಡದವರು ಅಭಿಪ್ರಾಯ ವ್ಯಕ್ತಪಡಿಸಲು ಹೇಳಬಹುದು. ಕೊನೆಯಲ್ಲಿ ಅಭಿಪ್ರಾಯಗಳ ಕುರಿತಾದ ಸ್ಪಷ್ಟೀಕರಣ ಮತ್ತು ಚರ್ಚೆಗಳಿಗೆ ಅವಕಾಶ ನೀಡಿ, ಒಟ್ಟು ಕಾರ್ಯಕ್ರಮದ ವರದಿ ತಯಾರಿಸಲು ಸೂಚಿಸಬಹುದು.

**12. ನಾಟಕ ಪ್ರದರ್ಶನ**

ಶಾಲೆಯ ಹಿರಿಯ ವಿದ್ಯಾರ್ಥಿಗಳು ಅಥವಾ ಹಳೆಯ ವಿದ್ಯಾರ್ಥಿಗಳಲ್ಲಿ ಆಯ್ದ ಕೆಲವರಿಂದ ಪ್ರಸಿದ್ಧವಾಗಿರುವ ನಾಟಕಗಳನ್ನು (ಶ್ರೀ ಕೃಷ್ಣ ರಾಯಭಾರ/ ಸಂಧಾನ, ಮಹಾರಾತ್ರಿ, ಕಿಸಾಗೌತಮಿ , ಪೂರರವ ಮತ್ತು ಅಲೆಗ್ಸಾಂಡರ್, ಏಕಲವ್ಯ, ಅಂಗುಲಿಮಾಲ ಇತ್ಯಾದಿ) ಆಯ್ದು, ಅಭಿನಯ ತರಬೇತಿ ನೀಡಿ ನಾಟಕ ಪ್ರದರ್ಶನ ಏರ್ಪಡಿಸಬಹುದು. ವೀಕ್ಷಿಸಿದ ವಿದ್ಯಾರ್ಥಿಗಳು ಪ್ರಶಂಸೆ / ವಿಮರ್ಶೆ ಮಾಡಲು ಅವಕಾಶ ನೀಡಬಹುದು. ಇದರಿಂದ ಸಾಹಿತ್ಯಾಭಿರುಚಿಯೂ ಬೆಳೆಯುವುದು. ರಂಗಾಯಣದ (ಮೈಸೂರು) ಅಥವಾ ಸ್ಥಳೀಯ ರಂಗಕಲಾವಿದರನ್ನು ಬರಮಾಡಿಕೊಂಡು ಶಾಲಾವಿದ್ಯಾರ್ಥಿಗಳಿಗೆ ರಂಗ ತರಬೇತಿ ಕಾರ್ಯಗಾರ ಏರ್ಪಡಿಸಬಹುದು. ಆ ಕಾರ್ಯಗಾರದಲ್ಲಿ ಪಠ್ಯದಲ್ಲಿ ಬರುವ ಪಾಠವನ್ನು ಆಧರಿಸಿ ತರಬೇತಿ ನೀಡಬಹುದು. ದೂರದರ್ಶನದ ಜೀ ಕನ್ನಡ ವಾಹಿನಿಯಲ್ಲಿ ಪ್ರದರ್ಶನವಾದ ಡ್ರಾಮಾ ಜೂನಿಯರ್ಸ್ ಮಕ್ಕಳ ನಾಟಕಗಳನ್ನು ವಿದ್ಯಾರ್ಥಿಗಳ ನೆನಪಿಗೆ ತಂದು ಪ್ರೇರೇಪಿಸಬಹುದು.

**13. ಸ್ಕಿಟ್/ ಹಗುರ ವಿಡಂಬನೆಯ ಚಿಕ್ಕ ನಾಟಕ/**

ನಿಮಗೆಲ್ಲ ಇದು ಚಿರಪರಿಚಿತ (ಯೂಟ್ಯೂಬ್‌ನಲ್ಲಿ ಅನೇಕ ಸ್ಕಿಟ್‌ಗಳು ಲಭ್ಯ) ಶಾಲಾ ವಿದ್ಯಾರ್ಥಿಗಳೂ ಅನೇಕ ಸ್ಕಿಟ್‌ಗಳನ್ನು ಪ್ರದರ್ಶಿಸಿರುತ್ತಾರೆ ಮತ್ತು ನೋಡಿರುತ್ತಾರೆ. ಶಾಲೆಗಳಲ್ಲಿ ವರ್ಷದಲ್ಲೊಮ್ಮೆಯಾದರೂ ಸ್ಕಿಟ್ ಸ್ಪರ್ಧಾ ಕಾರ್ಯಕ್ರಮವನ್ನು ಏರ್ಪಡಿಸಬಹುದು. ಇದಕ್ಕಾಗಿ ವಿದ್ಯಾರ್ಥಿಗಳಿಗೆ ಕೆಲವು ಸೂಚನೆಗಳನ್ನು ನೀಡಬೇಕು:

- ಉತ್ತಮ ನಿರೂಪಣಾ ವಿಷಯ(theme) ಇರಬೇಕು
- ಉತ್ತಮ ಮೌಲ್ಯವನ್ನು ಪ್ರತಿಪಾದಿಸುವಂತಿರಬೇಕು;
- ಸಂಭಾಷಣೆಯನ್ನು ವಿದ್ಯಾರ್ಥಿಗಳೇ ಬರೆಯಬೇಕು;
- ಹೆಚ್ಚಿನ ವೆಚ್ಚವಿಲ್ಲದೆ ವೇಷ ಭೂಷಣ ಮತ್ತು ರಂಗ ಪರಿಕರಗಳನ್ನು (props) ವಿದ್ಯಾರ್ಥಿಗಳೇ ತಯಾರಿಸಿಕೊಳ್ಳಬೇಕು;
- ಸಭಿಕರಾಗಿರುವ ಸಹ ವಿದ್ಯಾರ್ಥಿಗಳಿಂದ ಮತ್ತು ಶಿಕ್ಷಕರಿಂದ ಹಿಮ್ಮಾಹಿತಿ (feedback) ಬರ ಮಾಡಿಕೊಳ್ಳಬಹುದು.
- ತೀರ್ಪುಗಾರರು ಗಮನಿಸುವ ಅಂಶಗಳನ್ನು ಕಾರ್ಯಕ್ರಮವನ್ನು ಪ್ರಕಟಿಸುವಾಗಲೇ ಪ್ರಕಟಿಸಬೇಕು.

**14. ಪುಸ್ತಕ ಕೂಟ (book club)**

ಕೂಟದ ಸದಸ್ಯರು (ತರಗತಿಯ ಎಲ್ಲ ವಿದ್ಯಾರ್ಥಿಗಳೂ ಆದರೆ ಉತ್ತಮ) ಹದಿನೈದು ದಿನಕ್ಕೆ ಅಥವಾ ತಿಂಗಳಿಗೆ ಒಮ್ಮೆ ಸೇರಬಹುದು. ಪ್ರತಿಯೊಬ್ಬರು ಐದು ನಿಮಿಷದೊಳಗೆ ತಾವು ಓದಿದ ಪುಸ್ತಕ (ಪಠ್ಯ ಪುಸ್ತಕ ಬಿಟ್ಟು) ಅದರ ಲೇಖಕರು ಅದರ ವಿಷಯ , ಅದರ ಕುರಿತಾದ ಅಭಿಪ್ರಾಯ ಇವುಗಳನ್ನು ತಿಳಿಸಬೇಕು. ಇದರಿಂದ ವಿದ್ಯಾರ್ಥಿಯ ಓದುಗಾರಿಕೆ, ಗ್ರಹಿಕೆ, ಸಂಗ್ರಹವಾಗಿ ಹೇಳುವ ಸಾಮರ್ಥ್ಯಗಳು ಬೆಳೆಯುವವು. ಸಾಹಿತ್ಯಾಭಿರುಚಿಯೂ ಮೂಡುವುದು. ಶಿಕ್ಷಕರು ಓದಬಹುದಾದ ಕೃತಿಗಳ ಬಗ್ಗೆ ತಿಳಿಸಬಹುದು. (ಮುಖ ಹೊತ್ತಿಗೆಯ (fb) ಬುಕ್ ಬ್ರಹ್ಮ(book Brahma) ಅಂಕಣದಲ್ಲಿ ಲೇಖಕರು, ಚಿಂತಕರು, ಲೇಖನಗಳನ್ನು ಬರೆಯುವುದನ್ನೂ ಶಿಕ್ಷಕರಾದ ನೀವು ಪರಾಮರ್ಶಿಸಬಹುದು.
#BookBrahma#Kannada#Article#writers#Poets#Critics)

**15. ಕಲಿಕಾ ದಿನಚರಿ:** ವಿದ್ಯಾರ್ಥಿಗಳೇ ನೀವು 'ಕಲಿಕಾ ದಿನಚರಿ' (learning log)ಗಳ ಬಗ್ಗೆ ಡಿ.ಎಡ್. ಶಿಕ್ಷಣ ಪಡೆಯುವಾಗಲೇ ತಿಳಿದಿದ್ದೀರಿ. ಇದು ವಿದ್ಯಾರ್ಥಿಗಳ ಬರವಣಿಗೆಯ ದಾಖಲೆ ಎಂದು ಬಲ್ಲಿರಿ. ಇದರಲ್ಲಿ ವಿದ್ಯಾರ್ಥಿಗಳು ತಾವು ಬರೆದ ಪುಟ್ಟ ಲೇಖನ, ಟಿಪ್ಪಣಿ, ಹನಿಗವನ, ಚುಟುಕ, ಕಿರುಗತೆ, ಸ್ಕಿಟ್, ವೀಕ್ಷಿಸಿದ ಚಲನಚಿತ್ರ/ ನಾಟಕದ ವಿಮರ್ಶೆಗಳನ್ನು ಬರೆದು ದಾಖಲಿಸಬಹುದು. ಇದು ವಿದ್ಯಾರ್ಥಿಗಲ್ಲಿರುವ ಸೃಜನಶೀಲತೆಗೆ ಪೋಷಣೆ ನೀಡುವುದು.

ಅನುಭವ ಹೆಚ್ಚುತ್ತ ಹೋದಂತೆ ಶಿಕ್ಷಕರು ತಾವೇ ಚಿಂತಿಸಿ ಸೃಜನಶೀಲವಾದ ಅನೇಕ ಪಠ್ಯೇತರ ಚಟುವಟಿಕೆಗಳನ್ನು ಹಮ್ಮಿಕೊಂಡು ವಿದ್ಯಾರ್ಥಿಗಳ ಸಾಹಿತ್ಯ ಕೌಶಲ ಮತ್ತು ಭಾಷಾ ಕೌಶಲಗಳು ಉತ್ತಮಗೊಳ್ಳುವಂತೆ ಮಾಡಬಹುದು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**
ಅತ್ಯಂತ ಸೂಕ್ತ ಉತ್ತರಗಳನ್ನು ಆಯ್ದು ಬಿಟ್ಟ ಸ್ಥಳವನ್ನು ತುಂಬಿರಿ:

**1. ವಿಶೇಷೋಪನ್ಯಾಸದಿಂದ ಆಗುವ ಪ್ರಮುಖ ಉಪಯೋಗ____________**

ಅ) ಕುಶಲ ಕಲೆಯ ಕಲಿಕೆ
ಬ) ವ್ಯಕ್ತಿಪರಿಚಯ
ಕ) ಜ್ಞಾನಾಭಿವೃದ್ಧಿ
ಡ) ವಿರಾಮದ ಉಪಯೋಗ

**2. ಶಾಲಾ 'ಭಿತ್ತಿ ಪತ್ರಿಕೆ' ಯಿಂದ ವಿದ್ಯಾರ್ಥಿಗಳು____________**

ಅ) ಹೊಸಪದಗಳನ್ನು ಕಲಿಯುವವರು
ಬ) ಕೈ ಬರೆಹ ಸುಧಾರಿಸಬಹುದು
ಕ) ಪರೀಕ್ಷೆಗೆ ಸಿದ್ಧರಾಗಬಹುದು
ಡ) ಒಳ್ಳೆಯ ಬರಹಗಾರರಾಗುವರು

**3. 'ನುಡಿ ಚಿತ್ರ 'ಲೇಖನವು ಬೆಳೆಸುವುದು ____________**

ಅ) ಚರ್ಚಾ ಶಕ್ತಿ
ಬ) ಚೌಕಟ್ಟಿಗೆ ಒಳಪಟ್ಟ ಸೃಜನಶೀಲತೆ
ಕ) ಪತ್ರ ಲೇಖನ ಶಕ್ತಿ
ಡ) ವರದಿ ಮಾಡುವ ಶೈಲಿ

**4. ಸಣ್ಣ ಕತೆಯ ರಚನೆಯು ____________**

ಅ) ಸ್ಪರ್ಧಾತ್ಮಕ ಭಾವನೆಯನ್ನು ಬೆಳೆಸುತ್ತದೆ
ಬ) ವೈಜ್ಞಾನಿಕ ಬರೆಹ ಶಕ್ತಿಯನ್ನು ಬೆಳೆಸುತ್ತದೆ
ಕ) ಮನರಂಜನಾತ್ಮಕವಾಗಿರುತ್ತದೆ
ಡ) ಕಲ್ಪನೆಯೊಂದಿಗೆ ಸಹಜ ಮತ್ತು ವ್ಯಾಕರಣ ಮೀರಿದ ಸಾಹಿತ್ಯಕ ಬರಹವಾಗಿದೆ

**5. ಹಗುರ ವಿಡಂಬನೆಯ ನಾಟಕ (ಸ್ಕಿಟ್) ಸ್ಪರ್ಧೆಯಿಂದ ಬೆಳೆಸಬಹುದಾದ ಸಾಮರ್ಥ್ಯ ____________**

ಅ) ಸಂಭಾಷಣೆ ರಚನೆ
ಬ) ಅಭಿನಯ ಕಲೆ
ಕ) ಸಂದೇಶ ನೀಡುವಿಕೆ
ಡ) ಮೇಲಿನ ಎಲ್ಲವೂ

### 3.6.4. ಸಾರಾಂಶಿಸೋಣ

- ಭಾಷಾ ಶಿಕ್ಷಣದ ಉದ್ದೇಶಗಳ ಸಾಧನೆಗೆ ನಾವು ಅನೇಕ ಪಠ್ಯೇತರ ಚಟುವಟಿಕೆಗಳನ್ನು ಹಮ್ಮಿಕೊಳ್ಳಬಹುದು. ಇವುಗಳು ಶಾಲೆಯ ಹೊರಗೆ ಮತ್ತು ಶಾಲೆಯಲ್ಲಿ ಕೈಗೊಳ್ಳಬಹುದಾದ ಚಟುವಟಿಕೆಗಳಾಗಿವೆ.

- ಕ್ಷೇತ್ರ ಪ್ರವಾಸವು– ಸಾಂಸ್ಕೃತಿಕ, ಪ್ರಾಕೃತಿಕ, ವಿಜ್ಞಾನ ಕೇಂದ್ರಗಳಿಗೆ ಭೇಟಿ – ಪ್ರತ್ಯಕ್ಷಾನುಭವ, ಸೌಂದರ್ಯಾಸ್ವಾದನೆ, ಮೌಖಿಕ ಅಭಿವ್ಯಕ್ತಿ ಮತ್ತು ಬರೆವಣಿಗೆಯ ಕೌಶಲ ಬೆಳೆಸಿಕೊಳ್ಳಲು ಸಹಾಯವಾಗುವುದು.
- ವಸ್ತುಪ್ರದರ್ಶನ, ಪುಸ್ತಕ ಪ್ರದರ್ಶನಗಳ ಭೇಟಿಯಿಂದ ಸಾಂಸ್ಕೃತಿಕ ವಿವರ, ಸಮಕಾಲೀನ ಸಾಹಿತ್ಯ ವಿವರಗಳನ್ನೂ ಪಡೆಯಬಹುದು. ವ್ಯಾವಹಾರಿಕ ಭಾಷಾ ಕೌಶಲ್ಯಗಳ ವಿಕಾಸಕ್ಕೆ ಇದು ಸಹಾಯವಾಗುವುದು.
- ಲೇಖನ ರಚನೆಯಿಂದ ವಿದ್ಯಾರ್ಥಿಗಳ ವಾಚನಾಸಕ್ತಿ ಮತ್ತು ಲೇಖನ ಕಲೆಗೆ ಪ್ರೇರಣೆ ದೊರೆಯುವುದು.
- ವಿಶೇಷೋಪನ್ಯಾಸ ಕಾರ್ಯಕ್ರಮವು ವಿದ್ಯಾರ್ಥಿಗಳ ಜ್ಞಾನ ವಿಸ್ತರಿಸುವುದರಿಂದ ಟಿಪ್ಪಣಿ ರಚನೆ, ಚರ್ಚೆ, ವಾಚನಾಭಿರುಚಿಗೆ ಸಹಾಯಕ.
- ಭಿತ್ತಿ ಪತ್ರಿಕೆಗಳು ವಿದ್ಯಾರ್ಥಿಗಳ ಅಭಿವ್ಯಕ್ತಿಗೆ ಪ್ರೇರಣೆ ನೀಡುವುದು. ಪತ್ರಿಕೋದ್ಯಮ ಜಗತ್ತು ಪರಿಚಯವಾಗಬಹುದು.
- ಪುಸ್ತಕ ಪ್ರದರ್ಶನಗಳಿಂದ ಶಾಲೆಗಳಲ್ಲಿ ಪುಸ್ತಕ ಪ್ರದರ್ಶನ ಏರ್ಪಡಿಸುವ ಕ್ರಮ ಅರಿವಾಗುವುದು. ಅನೇಕ ಕೃತಿಗಳ ಮತ್ತು ಕರ್ತೃಗಳ ಪರಿಚಯ ಮತ್ತು ಅವರ ಕುರಿತಾದ ಆಸಕ್ತಿ ಉಂಟಾಗುವುದು
- ಸೃಜನಶೀಲ ಚಟುವಟಿಕೆಗಳು ವಿದ್ಯಾರ್ಥಿಗಳಲ್ಲಿ ರಚನೆಯ ಸ್ಫೂರ್ತಿ, ವಾಚನ ಹವ್ಯಾಸ, ವಾಕ್ ಚಾತುರ್ಯ ಬೆಳೆಸುವುದು.
- ಪುಸ್ತಕ ಕೂಟಗಳಿಂದ ಶಾಲಾ ವಿದ್ಯಾರ್ಥಿಗಳು ಪುಸ್ತಕ ಕೂಟದ ಸದಸ್ಯರಾಗಿ ಪಠ್ಯೇತರ ಪುಸ್ತಕಗಳನ್ನು ಓದುವ ಹವ್ಯಾಸ ಮಾಡಿಸಿಕೊಳ್ಳುವಂತೆ ಶಿಕ್ಷಕರು ಗಮನಿಸಬಹುದು.
- ಶಾಲಾ ವಿದ್ಯಾರ್ಥಿಗಳು 'ಕಲಿಕಾ ದಿನಚರಿ' ಪಾಲಿಸುವ ಮೂಲಕ ಸ್ವತಂತ್ರ ಮತ್ತು ಸೃಜನಶೀಲ ಸಾಮರ್ಥ್ಯ ಬೆಳೆಸಿಕೊಳ್ಳುವಂತೆ ಮಾಡಬಹುದು.

### 3.6.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು - 1 ಮತ್ತು 2

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

| ಎ. | ಬಿ. |
|---|---|
| 1 | ಬ |
| 2 | ಡ |
| 3 | ಇ |
| 4 | ಅ |
| 5 | ಕ |
| 6 | ಜಿ |

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

ಬಿಟ್ಟ ಜಾಗ ತುಂಬಿರಿ.

1 - ಕ 4 – ಡ

2 - ಡ 5 – ಡ

**3.6.6. ಘಟಕಾಂತ್ಯ ಅಭ್ಯಾಸಗಳು**

1. ಭಾಷಾ ಕಲಿಕೆಯಲ್ಲಿ ಪಠ್ಯೇತರ ಚಟುವಟಿಕೆಗಳ ಮಹತ್ವವನ್ನು ವಿಶದೀಕರಿಸಿ.
2. ಕನ್ನಡ ಭಾಷಾ ಕಲಿಕೆಗೆ ಸಹಾಯವಾಗುವ ಯಾವುದಾದರೂ ಐದು ಶಾಲೆಯೊಳಗೆ ನಡೆಸುವ ಚಟುವಟಿಕೆಗಳನ್ನು ಮತ್ತು ಶಾಲೆಯ ಹೊರಗೆ ನಡೆಸಬಹುದಾದ ಚಟುವಟಿಕೆಗಳನ್ನು ಉದ್ದೇಶ, ಸ್ವರೂಪ, ಸೂಚನೆ ಮತ್ತು ಗಮನಿಸಬೇಕಾದ ಅಂಶಗಳೊಂದಿಗೆ ವಿವರಿಸಿ.
3. ವಿದ್ಯಾರ್ಥಿಗಳ ಸೃಜನಶೀಲತೆಯನ್ನು ಪೋಷಿಸಲು ಸೂಕ್ತ ಚಟುವಟಿಕೆಗಳನ್ನು ವಿವರಿಸಿ.

**3.6.7. ಪರಾಮರ್ಶನ ಸೂಚಿ**


1. ಡಾ. ಮಹಾಬಲೇಶ್ವರ ರಾವ್: ಪ್ರೌಢಶಾಲೆಗಳಲ್ಲಿ ಕನ್ನಡ ಬೋಧನೆ, ನವಕರ್ನಾಟಕ ಪ್ರಕಾಶನ, ಬೆಂಗಳೂರು
2. ಕನ್ನಡ ಸಂಪದ: ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯ, ಬೆಂಗಳೂರು
3. ನಿರಂಜನ ವಾನಳ್ಳಿ: ಬರೆವಣಿಗೆ ಒಂದು ಕಲೆ, ವಿಸ್ಮಯ ಪ್ರಕಾಶನ, ಮೈಸೂರು
4. ಸಾನ್ವಿ ಚಿರಂತನ: ಹವ್ಯಾಸಗಳು, ಚಿನ್ಮಯ ಪ್ರಕಾಶನ, ಬೆಂಗಳೂರು
5. ಡಾ. ಆರ್. ಚಲಪತಿ: ನುಡಿಯೊಡನೆ, ಸಂಶೋಧನಾ ಲೇಖನಗಳ ಸಂಗ್ರಹ,ಧಾತ್ರಿ ಪ್ರಕಾಶನ, ಬೆಂಗಳೂರು
6. ಡಾ.ಬಿ.ಕೊಂಗವಾಡ: ಭಾಷೆ ಮತ್ತು ಕನ್ನಡ ಬೋಧನೆ, ವಿದ್ಯಾನಿಧಿ ಪ್ರಕಾಶನ, ಗದಗ
7. https:// sites.google.com>pccu.edu.for (extra curricular activities-English department web)
8. https:// www.thrteflacademy.com>e ( extra-curricular ideas- The TEFL Academy https://studentski.net>get>u [PDF] extra curricular activitiesJetprogram.org> current [PDF]
9. https:// www researchgate.net> 3325 (PDF) extra-curricular activities for fosteringlanguage and literature in schools

# ಬ್ಲಾಕ್ 4 : ಕನ್ನಡ ಭಾಷಾ ಬೋಧನೆಯಲ್ಲಿ ಪಾಠ ಯೋಜನೆಗಳು ಮತ್ತು ಮೌಲ್ಯಮಾಪನ

## ಘಟಕ 1 : ಪಾಠ ಯೋಜನೆ

**ಘಟಕದ ರಚನೆ**

4.1.1. ಕಲಿಕೆಯ ಉದ್ದೇಶಗಳು
4.1.2. ಪೀಠಿಕೆ
4.1.3. ಕಲಿಕೆಯ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು
4.4.3.1. ಪಾಠ ಯೋಜನೆ ಮತ್ತು ಕನ್ನಡ ಪಾಠ ಯೋಜನೆ
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1
4.4.3.2. ಕನ್ನಡ ಪಾಠ ಯೋಜನೆಯ ಉಪಕ್ರಮಗಳು
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ - 2
4.4.3.3. ಪಾಠ ಯೋಜನೆಯಲ್ಲಿ ಪಠ್ಯ ವಿಶ್ಲೇಷಣೆ
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ - 3
4.1.4. ಸಾರಾಂಶಿಸೋಣ
4.1.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು - 1, 2 ಮತ್ತು 3
4.1.6. ಘಟಕಾಂತ್ಯ ಅಭ್ಯಾಸಗಳು
4.1.7. ಪರಾಮರ್ಶನ ಸೂಚಿ

### 4.1.1. ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿ ಶಿಕ್ಷಕ ಶಿಕ್ಷಕಿಯರು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು;

- ಪಾಠ ಯೋಜನೆಯ ಪರಿಕಲ್ಪನೆಯನ್ನು ವಿವರಿಸುತ್ತಾರೆ;
- 'ಪಾಠ ಯೋಜನೆ ಬೋಧನೆ – ಕಲಿಕೆಗೆ ನೆಲೆ' ಎಂಬ ಮಾತನ್ನು ಕನ್ನಡ ಬೋಧನೆಯ ನೆಲೆಯಲ್ಲಿ ಸಮರ್ಥಿಸುತ್ತಾರೆ;
- ಉತ್ತಮ ಕನ್ನಡ ಪಾಠಯೋಜನೆಯ ಲಕ್ಷಣಗಳನ್ನು ಪಟ್ಟಿಮಾಡುತ್ತಾರೆ;
- ಪಾಠಯೋಜನೆಯ ಉಪಕ್ರಮಗಳನ್ನು ವಿಶ್ಲೇಷಿಸುತ್ತಾರೆ;
- ಪಾಠ ಯೋಜನೆಯ ಹಂತಗಳನ್ನು ವಿಶ್ಲೇಷಿಸುತ್ತಾರೆ;
- ಭಾಷಾ ಬೋಧನೆಯಲ್ಲಿ 'ಮೌಲ್ಯಮಾಪನ ಉಪಕ್ರಮ'ದ ಶ್ರೇಷ್ಠತೆಯನ್ನು ನಿರೂಪಿಸುತ್ತಾರೆ;
- 5 'ಇ' ಕ್ರಮದಲ್ಲಿ ಪಾಠಯೋಜನೆಯ ಕ್ರಮವನ್ನು ಉದಾಹರಣೆ ಸಹಿತ ವಿವರಿಸುತ್ತಾರೆ;
- ಕನ್ನಡ ಪಾಠ ಯೋಜನೆಯಲ್ಲಿ ಪಠ್ಯವಿಶ್ಲೇಷಣೆಯ ವಿಶೇಷ ಕ್ರಮವನ್ನು ವಿವರಿಸುತ್ತಾರೆ; ಮತ್ತು
- 'ಉದ್ದೇಶ ಸಾಧನೆಯ ಮೌಲ್ಯಮಾಪನ ಚಕ್ರ'ವನ್ನು ವಿಶ್ಲೇಷಿಸುತ್ತಾರೆ.

### 4.1.2. ಪೀಠಿಕೆ

ಯೋಜನೆ ಇಲ್ಲದ ಯಾವುದೇ ಕಾರ್ಯ ಸೂತ್ರವಿಲ್ಲದ ಗಾಳಿಪಟದಂತೆ, ತನ್ನ ವ್ಯವಸ್ಥಿತತೆಯನ್ನು ಕಳೆದುಕೊಳ್ಳುತ್ತದೆ. ಈ ಹಿನ್ನೆಲೆಯಲ್ಲಿ ನಿರ್ವಹಿಸುವ ಯಾವುದೇ ಕಾರ್ಯವನ್ನು ಯೋಜನಾಬದ್ಧ ನೆಲೆಯಲ್ಲಿಯೇ ನಿರ್ವಹಿಸಬೇಕು. ಹಾಗಾಗೀ ಯಾವುದೇ ಪ್ರಕ್ರಿಯೆಯು ವ್ಯವಸ್ಥಿತವಾಗಿ ಮುಂದುವರೆಯಲು 'ಯೋಜನೆ'ಯು ಅತ್ಯಂತ ಅವಶ್ಯಕ. ಬೋಧನೆ – ಕಲಿಕೆಯು ಸಂಕೀರ್ಣವಾದ ಪ್ರಕ್ರಿಯೆಯಾಗಿದ್ದು, ಈ ಪ್ರಕ್ರಿಯೆಗೂ ಸೂಕ್ತ

ನೆಲೆಯಲ್ಲಿ 'ಯೋಜನೆ'ಯನ್ನು ರೂಪಿಸುವುದು ಅವಶ್ಯಕ. ಬೋಧನಾ ಯೋಜನೆಯು ಶಿಕ್ಷಕ, ವಿದ್ಯಾರ್ಥಿ, ಅನುಭವ, ಚಟುವಟಿಕೆ ಈ ಎಲ್ಲಾ ಅಂಶಗಳನ್ನು ಕೇಂದ್ರೀಕರಿಸಿಕೊಂಡು ನಿರ್ವಹಿಸುವಲ್ಲಿ ಸಂಕೀರ್ಣತೆಯನ್ನು ಎದುರಿಸುತ್ತಿರುತ್ತದೆ. ಈ ಹಿನ್ನೆಲೆಯಲ್ಲಿ ಪಾಠಯೋಜನೆಯ ಕೇಂದ್ರ ಪ್ರಕ್ರಿಯೆಯಾಗಿ, 'ಪಠ್ಯ ವಿಶ್ಲೇಷಣೆ' ಪ್ರಮುಖ ಪಾತ್ರವನ್ನು ನಿರ್ವಹಿಸುತ್ತದೆ. ಈ 'ಪಠ್ಯ ವಿಶ್ಲೇಷಣೆ'ಯ ಕ್ರಮದಲ್ಲಿ ಬೋಧನಾ ಉದ್ದೇಶಗಳಿಗೆ ಕಲಿಕಾ ಅನುಭವಗಳನ್ನು, ತನ್ಮೂಲಕ ಉದ್ದೇಶಗಳ ಸಾಧನೆಯ ಮೌಲ್ಯಮಾಪನ ಕ್ರಮವನ್ನು ಗುರುತಿಸುವ ಅಗತ್ಯತೆ ಇದೆ. ಈ ಪ್ರಕ್ರಿಯೆಯ ಕುರಿತಂತೆ, 'ಪಾಠಯೋಜನೆ'ಯ ರಚನೆಯ ಜ್ಞಾನ ಹಾಗೂ ಸಂರೂಪಣೆಯನ್ನು ಈ ಘಟಕದಲ್ಲಿ ವಿಚಾರಮಾಡೋಣ.

### 4.1.3. ಕಲಿಕೆಯ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

### 4.4.3.1. ಪಾಠ ಯೋಜನೆ ಮತ್ತು ಕನ್ನಡ ಪಾಠ ಯೋಜನೆ

**ಪಾಠ ಯೋಜನೆ**

ಬೋಧನೆಯು ಸಂಕೀರ್ಣ ಪ್ರಕ್ರಿಯೆ, ಈ ಸಂಕೀರ್ಣತೆಯನ್ನು ಸಡಿಲಗೊಳಿಸಲು, ಬೋಧನೆಗೆ ಯೋಜನೆಯು ಅತ್ಯಾವಶ್ಯಕ. ಈ ಹಿನ್ನೆಲೆಯಲ್ಲಿ ರೂಪುಗೊಂಡ ಪರಿಕಲ್ಪನೆಯೇ 'ಪಾಠಯೋಜನೆ'. ಪಾಠ ಬೋಧನೆಯನ್ನು ಮೂರು ಹಂತಗಳಲ್ಲಿ ನಿರ್ವಹಿಸಬೇಕಾಗುತ್ತದೆ.

1. ಕ್ರಿಯಾಪೂರ್ವ ಹಂತ
2. ಅಂತರ್‌ಕ್ರಿಯಾ ಹಂತ
3. ಪಾಠೋತ್ತರ ಹಂತ

ಅಂತರ್‌ಕ್ರಿಯಾ ಹಂತವು ನಿಜವಾದ ವರ್ಗಬೋಧನೆಯ ಹಂತ ಎನಿಸಿದರೆ, ಪಾಠೋತ್ತರ ಹಂತವು ಬೋಧನಾ / ಕಲಿಕಾ ಚಟುವಟಿಕೆಗಳನ್ನು ಅನ್ವಯಿಸುವ ಚಟುವಟಿಕೆಗಳು ಹಾಗೂ ಮಾರ್ಗದರ್ಶಿತ ಕಾರ್ಯಗಳನ್ನು ನೀಡುವ ಹಂತ ಎನಿಸಿದೆ. ಈ ಹಂತಗಳಿಗೆಲ್ಲಾ ನೆಲೆಯನ್ನು ಒದಗಿಸುವುದು ಕ್ರಿಯಾಪೂರ್ವ ಹಂತವೇ ಆಗಿದೆ. ಈ ಹಂತದಲ್ಲಿಯೇ ಪಾಠಯೋಜನೆಯು ರೂಪುಗೊಳ್ಳುವುದು.

**ಅರ್ಥ:** ಶಿಕ್ಷಕ ವರ್ಗಕೋಣೆಯಲ್ಲಿ ಭಾಷೆ ಅಥವಾ ವಿಷಯ ಬೋಧನೆಗಾಗಿ/ಕಲಿಕೆಗಾಗಿ ಕೈಗೊಳ್ಳಬಹುದಾದ ಕಾರ್ಯಚಟುವಟಿಕೆಗಳ ಯೋಜನೆಯೇ 'ಪಾಠಯೋಜನೆ' ಎನಿಸುತ್ತದೆ.

ನಿಗದಿತ ಅವಧಿಯಲ್ಲಿ ಅಪೇಕ್ಷಿತ ಉದ್ದೇಶ ಸಾಧಿಸಲು, ಬೋಧನಾ/ಕಲಿಕಾ ಅನುಭವಗಳನ್ನು ಮುಂಚಿತವಾಗಿ ಮನಗಂಡು, ತಯಾರಿಸಿದ ಯೋಜನೆಯೇ 'ಪಾಠಯೋಜನೆ' ಎನಿಸುತ್ತದೆ.

ಬೋಧನೆಗಾಗಿ ಪಠ್ಯ ವಿಷಯ ಹಾಗೂ ಕಲಿಕಾ ಅನುಭವಗಳ ರೂಪುರೇಷೆಯನ್ನು ವ್ಯವಸ್ಥಿತವಾಗಿ, ಅನುಕ್ರಮವಾಗಿ ಜೋಡಿಸಲಾಗುವ ಬೋಧನಾ ಪೂರ್ವಯೋಜನೆಯೇ 'ಪಾಠಯೋಜನೆ'.

**ವ್ಯಾಖ್ಯಾನಗಳು:**

ಕಾರ್ಟರ್.ವಿ. ಗುಡ್‌ರವರ ಪ್ರಕಾರ, "ಪಾಠಯೋಜನೆಯು ಒಂದು ಪಾಠದ ಮುಖ್ಯ ಅಂಶಗಳನ್ನು ಬೋಧಿಸುವ ಕ್ರಮಬದ್ಧ ರೂಪುರೇಷೆಯಾಗಿದ್ದು, ಉದ್ದೇಶಗಳು, ಚರ್ಚಿಸುವ ಅಂಶಗಳು, ಪರಾಮರ್ಶನ ಸಾಮಗ್ರಿಗಳು ಹಾಗೂ ನಿಯೋಜಿತ ಕಾರ್ಯಗಳನ್ನು ಒಳಗೊಳ್ಳುತ್ತದೆ."

ಬಿನ್ನಿಂಗ್ ಮತ್ತು ಬಿನ್ನಿಂಗ್‌ರವರ ಅಭಿಪ್ರಾಯದಲ್ಲಿ, "ದಿನನಿತ್ಯದ ಪಾಠಯೋಜನೆಯು ಉದ್ದೇಶಗಳು, ವಿಷಯದ ವಸ್ತುವಿನ ಆಯ್ಕೆ, ವ್ಯವಸ್ಥೆ, ಬೋಧನಾ ವಿಧಾನಗಳ ನಿರ್ಧಾರವನ್ನು ಸ್ಪಷ್ಟಪಡಿಸುವುದು."

ಮಹಾಬಲೇಶ್ವರರಾವ್‌ರವರ ಪ್ರಕಾರ, "ಪಾಠಯೋಜನೆಯೆಂದರೆ, ಅಧ್ಯಾಪಕರು ರೂಪಿಸುವ ತರಗತಿಯ ಅನುಭವಗಳ ಮಾನಸಿಕ ಹಾಗೂ ಭಾವನಾತ್ಮಕ ಕಾಣ್ಕೆ. ಅದು ಬೋಧನಾ ಕ್ರಿಯೆಯ ಮಾನಸಿಕ ತಾಲೀಮು, ಪರಿಣಾಮಕಾರಿ ಬೋಧನೆಯ ಹೃದಯ; ಸದ್ಯೋಭವಿಷ್ಯ ಬೋಧನೆಯ ಒಂದು ಅನುಭವ. ಅದೊಂದು ಬಗೆಯ ಮುನ್ನೋಟ."

ವೀರಪ್ಪ.ಎನ್.ಎಸ್‌ರವರ ಪ್ರಕಾರ, ಪಾಠಯೋಜನೆಯ ಒಂದು ಪಾಠದ ಮುಖ್ಯಾಂಶಗಳನ್ನು ತರಗತಿಯಲ್ಲಿ ಅವನ್ನು ನಿರೂಪಿಸುವ ಕ್ರಮದಲ್ಲಿ ಜೋಡಿಸಿರುವ ಬೋಧನೆಯ ಟಿಪ್ಪಣಿ. ಅದರಲ್ಲಿ ಪಾಠದ ಉದ್ದೇಶ, ಪರಿಚಯ ಮಾಡಬೇಕಾದ ಮುಖ್ಯಾಂಶಗಳು, ಕೇಳಬೇಕಾದ ಪ್ರಶ್ನೆಗಳು, ವಿದ್ಯಾರ್ಥಿಗಳು ಓದಬೇಕಾದ ಪುಸ್ತಕಗಳು, ಆಧಾರಗ್ರಂಥ ಅಥವಾ ಸಹಾಯಕ ಗ್ರಂಥಗಳು, ಪಾಠಕ್ಕೆ ಸಂಬಂಧಿಸಿದಂತೆ, ಹಾಕಿಕೊಡಬೇಕಾದ, ಹಂಚಿಕೆ –ಇವೆಲ್ಲವನ್ನೂ ಸೇರಿಸಿರುವುದುಂಟು.

**ಕನ್ನಡ ಪಾಠ ಯೋಜನೆ:**

ನಿರ್ದಿಷ್ಟ ತರಗತಿಗೆ ಭಾಷಾಬೋಧನೆಗೆ ಸಂಬಂಧಿಸಿದಂತೆ, ನಿಗದಿತ ಗದ್ಯ / ಪದ್ಯ / ವ್ಯಾಕರಣ / ಛಂದಸ್ಸು ಇತ್ಯಾದಿಗಳನ್ನು ಬೋಧನೆಯ ಅನುಕ್ರಮದಲ್ಲಿ ಜೋಡಿಸಿ, ಇವುಗಳಿಗೆ ಯುಕ್ತ ಅನುಭವಗಳನ್ನು ಹೊಂದಿಸಿ, ರೂಪಿಸಲಾಗುವ ಬೋಧನಾಪೂರ್ವ ಯೋಜನೆಯೇ, 'ಕನ್ನಡ ಪಾಠಯೋಜನೆ'.

**ಕನ್ನಡ ಪಾಠ ಯೋಜನೆಯ ಉದ್ದೇಶಗಳು:**

**1. ಭಾಷಾ ಬೋಧನೆಯನ್ನು ವ್ಯವಸ್ಥಿತಗೊಳಿಸುವುದು.**

ಭಾಷಾ ಬೋಧನೆಗೆ ಒಂದು ಯುಕ್ತ ಚೌಕಟ್ಟನ್ನು ಒದಗಿಸುವುದು ಕನ್ನಡ ಪಾಠ ಯೋಜನೆಯ ಧ್ಯೇಯವಾಗಿದೆ. ಭಾಷಾ ಬೋಧನೆಯಲ್ಲಿ ಅನುಕ್ರಮವನ್ನು ಒದಗಿಸುವುದೂ ಇದರ ಪ್ರಮುಖ ಉದ್ದೇಶವಾಗಿದೆ.

**2. ಭಾಷಾ ಕಲಿಕೆಯ ನಿಯಮಗಳಿಗೆ ಅನುಗುಣವಾಗಿ, ಯೋಜಿಸಲು ಅವಕಾಶ ಕಲ್ಪಿಸುವುದು**

ಕಲಿಕೆಯ ನಿಯಮಗಳಾದ ಸಿದ್ಧತಾ ನಿಯಮ, ಅಭ್ಯಾಸ ನಿಯಮ, ಪರಿಣಾಮ ನಿಯಮಗಳ ನೆಲೆಗಟ್ಟಿನಲ್ಲಿ ಭಾಷಾ ಬೋಧನೆಯನ್ನು ಯೋಜಿಸಲು ಅವಕಾಶವನ್ನು ಕಲ್ಪಿಸುವುದು ಪಾಠ ಯೋಜನೆಯ ಪ್ರಮುಖ ಉದ್ದೇಶವಾಗಿದೆ.

**3. ಬೋಧನಾ ಪ್ರಕ್ರಿಯೆಯಲ್ಲಿ ಭಾಷೆಯ ಪ್ರಧಾನ ಹಾಗೂ ಉಪಕೌಶಲಗಳನ್ನು ಸಂಯೋಜಿಸಿ ಕಲಿಸಲು ಯೋಜಿಸುವುದು.**

ಬೋಧನಾ ಪ್ರಕ್ರಿಯೆಯಲ್ಲಿ ಭಾಷೆಯ ಪ್ರಧಾನ ಕೌಶಲಗಳಾದ ಆಲಿಸುವಿಕೆ, ಓದುಗಾರಿಕೆ, ಮಾತುಗಾರಿಗೆ, ಬರೆವಣಿಗೆ ಈ ನಾಲ್ಕು ಮುಖ್ಯ ಕುಶಲತೆಗಳ ಕಲಿಕೆಯನ್ನು ಪೋಷಿಸುವ ಚಟುವಟಿಕೆಯನ್ನು ಯೋಜಿಸುವುದು ಭಾಷಾ ಪಾಠಯೋಜನೆಯ ಪ್ರಮುಖ ಉದ್ದೇಶವಾಗಿದೆ.

**4. ಭಾಷಾ ಕುಶಲತೆಗಳು / ಸಾಮರ್ಥ್ಯಗಳ ಮೌಲ್ಯಮಾಪನಕ್ಕೆ ಆಧಾರ ನೆಲೆಯನ್ನು ಒದಗಿಸುವುದು.**

ವಿವಿಧ ಭಾಷಾ ಕುಶಲತೆಗಳು, ಸಾಮರ್ಥ್ಯಗಳ ಗಳಿಕೆಯನ್ನು ಮೌಲ್ಯಮಾಪನ ಮಾಡುವುದು ಭಾಷಾ ಬೋಧನೆಯ ಪರಮೋದ್ದೇಶವಾಗಿದ್ದು, ಯೋಜನೆಯು ಈ ಪ್ರಕ್ರಿಯೆಗೆ ಆಧಾರ ನೆಲೆಯನ್ನು ಒದಗಿಸುತ್ತದೆ.

**5. ವಿವಿಧ ರೀತಿಯ ಬೋಧನಾ ವಿಧಾನಗಳನ್ನು ಭಾಷಾಬೋಧನೆಯಲ್ಲಿ ಸಂಯೋಜಿಸಲು ನೆರವಾಗುವುದು.**

ಗದ್ಯ ಬೋಧನೆಯಲ್ಲಿ ನಾಟಕೀಕರಣ, ಸಂಭಾಷಣೆ, ಚರ್ಚೆ ಇತ್ಯಾದಿ ವಿಧಾನಗಳು, ಪದ್ಯ ಬೋಧನೆಯಲ್ಲಿ ಹಾಡುಗಾರಿಕೆ, ಕಂಠಪಾಠ ಇತ್ಯಾದಿ ವಿಧಾನ–ತಂತ್ರಗಳು ಖಂಡ, ಅಖಂಡ ಮತ್ತು ಸಂಪೂರ್ಣ ಪದ್ಧತಿಗಳು

ಹಾಗೂ ವ್ಯಾಕರಣ-ಛಂದಸ್ಸಿನ ಬೋಧನೆಯಲ್ಲಿ ನಿಗಮನ – ಅನುಗಮನದಂತಹ ಬೋಧನೆಯ ವಿಧಾನಗಳು ಇವುಗಳನ್ನು ಸಂಯೋಜಿಸಿ, ಬೋಧನೆಯಲ್ಲಿ ವೈವಿಧ್ಯತೆ ತರುವುದು 'ಪಾಠಯೋಜನೆ'ಯ ಪ್ರಮುಖ ಉದ್ದೇಶ ಎನಿಸಿದೆ.

**ಕನ್ನಡ ಭಾಷಾ ಬೋಧನೆಯಲ್ಲಿ ಪಾಠ ಯೋಜನೆಯ ಪ್ರಾಮುಖ್ಯತೆ:**

**1. ಗುರಿ–ಉದ್ದೇಶ ಆಧಾರಿತವಾಗಿ ಬೋಧನೆ/ಕಲಿಕೆ ರೂಪುಗೊಳ್ಳಲು ಸಹಕಾರಿಯಾಗುತ್ತದೆ.**

ಕನ್ನಡ ಭಾಷಾ ಬೋಧನೆಯ ಪ್ರಮುಖ ಧ್ಯೇಯಗಳಾದ ಭಾಷಾಕುಶಲತೆಗಳ ಕಲಿಕೆ, ಅಂತೆಯೇ, ಭಾಷಾ ಸಾಮರ್ಥ್ಯಗಳ ಕಲಿಕೆಗೆ ಪೂರಕವಾಗಿ ಚಟುವಟಿಕೆಗಳನ್ನು ಯೋಜಿಸಲು ಸಹಕಾರಿಯಾಗುತ್ತದೆ.

**2. ಭಾಷಾ ಬೋಧನೆಯನ್ನು ವ್ಯವಸ್ಥಿತಗೊಳಿಸುತ್ತದೆ.**

ಭಾಷಾಬೋಧನೆಯನ್ನು ಅನುಕ್ರಮಗೊಳಿಸುತ್ತದೆಯಾಗಿ, ವ್ಯವಸ್ಥಿತ ಬೋಧನೆಗೆ ಸಹಕಾರಿಯಾಗುತ್ತದೆ. ಉದಾಹರಣೆಗೆ, ಹರ್ಬಾಟ್ ಪಂಚಸೋಪಾನ ಬೋಧನೆಯ ಉಪಕ್ರಮದಲ್ಲಿ ಪೀಠಿಕೆ, ಗುರಿನಿರೂಪಣೆ, ವಿಕಾಸದ ಹಂತದಲ್ಲಿ ಮಾದರಿವಾಚನ, ಅನುಕರಣವಾಚನ, ಭಾಷಾಂಶ, ಸಾಹಿತ್ಯಾಂಶ, ವ್ಯಾಕರಣಾಂಶದ ಬೋಧನೆ, ನಂತರ ಪುನರಾವಲೋಕನ, ಮೌಲ್ಯಮಾಪನ ಈ ಪ್ರಕಾರವಾಗಿ ವಿವಿಧ ಅಂಶಗಳು ವ್ಯವಸ್ಥೆಗೊಳ್ಳುತ್ತವೆ.

**3. ಭಾಷಾ ಬೋಧನೆಯಲ್ಲಿ ಕಲಿಕಾರ್ಥಿಗಳಿಗೆ ಸಕ್ರಿಯವಾಗಿ ಪಾಲ್ಗೊಳ್ಳಲು ಅವಕಾಶವನ್ನು ಕಲ್ಪಿಸುತ್ತದೆ.**

ಭಾಷಾ ಕೌಶಲಗಳ ಕಲಿಕೆ ಸಕ್ರಿಯವಾಗಿ ಬೋದನಾ/ ಕಲಿಕಾ ಚಟುವಟಿಕೆಗಳಲ್ಲಿ ತೊಡಗುವುದು ಉಂಟಾಗುತ್ತದೆ. ಮಾತುಗಾರಿಕೆ, ಓದುಗಾರಿಕೆ, ಬರವಣಿಗೆಯಲ್ಲಿ ತೊಡಗಿಸಿಕೊಳ್ಳಲು ಚಟುವಟಿಕೆಯನ್ನು ಯೋಜಿಸಲು ಸಹಕಾರಿಯಾಗುತ್ತದೆ.

**4. ಕಲಿಕೆಯ ಮನೋವೈಜ್ಞಾನಿಕ ನಿಯಮಗಳಿಗೆ ಪೋಷಕವಾಗಿ, ಚಟುವಟಿಕೆ ಸಂಯೋಜಿಸಲು ಸಹಕಾರಿಯಾಗಿರುತ್ತದೆ.**

ಸಿದ್ಧತೆಯ ನಿಯಮದ ನೆಲೆಗಟ್ಟಿನಲ್ಲಿ, ಪೀಠಿಕೆ, ಅಭ್ಯಾಸದ ನಿಯಮ ಆಧರಿಸಿ ಭಾಷಾಭ್ಯಾಸ ಚಟುವಟಿಕೆ, ಪರಿಣಾಮ ನಿಯಮ ಆಧರಿಸಿ, ಮೌಲ್ಯಮಾಪನದ ರೂಪುರೇಷೆ ಸಂಯೋಜಿಸಲು ಸಹಕಾರಿಯಾಗುತ್ತದೆ.

**5. ಭಾಷಾಸಾಮರ್ಥ್ಯಗಳ ಬೋಧನೆಗೆ ಯುಕ್ತ ವಿಧಾನಗಳನ್ನು ಒದಗಿಸುತ್ತದೆ.**

ಭಾಷಾಸಾಮರ್ಥ್ಯಗಳಾದ ವ್ಯಾಕರಣ - ಛಂದಸ್ಸು ಮುಂತಾದವುಗಳ ಕುರಿತ ಅರಿವು ಮೂಡಿಸಲು ನಿಗಮಾನುಗಮನ ವಿಧಾನಗಳನ್ನು, ಪದ್ಯಬೋಧನಗೆ ಖಂಡ– ಅಖಂಡ ಪದ್ಧತಿಗಳನ್ನು ಯೋಜಿಸುವಲ್ಲಿ ಸಹಕಾರಿಯಾಗಿದೆ.

ಇವುಗಳೊಟ್ಟಿಗೆ,

- ಕಾಲದ ಅಪವ್ಯಯವನ್ನು ತಡೆಯುತ್ತದೆ.
- ಅನವಶ್ಯಕ ಪುನರಾವರ್ತನೆಯನ್ನು ತಡೆಗಟ್ಟುತ್ತದೆ.
- ವಿಷಯ ಸಂಘಟನೆ ಹಾಗೂ ಕಲಿಕೋಪಕರಣಗಳನ್ನು ಸಿದ್ಧಪಡಿಸಿಕೊಳ್ಳುವುದಕ್ಕೆ ಸಹಕಾರಿಯಾಗುತ್ತದೆ.
- ತರಗತಿಯಲ್ಲಿ ಕೈಗೊಳ್ಳಬಹುದಾದ ಬೋಧನಾ ಚಟುವಟಿಕೆಗಳ ಬಗೆಗೆ ಸ್ಪಷ್ಟ ಮಾರ್ಗದರ್ಶನ ನೀಡುತ್ತದೆ.
- ಶಿಕ್ಷಕರಲ್ಲಿ ಆತ್ಮವಿಶ್ವಾಸ ಮತ್ತು ಮನೋಸ್ಥೈರ್ಯವನ್ನು ಬೆಳೆಸುತ್ತದೆ.
- ವ್ಯಕ್ತಿಭಿನ್ನತೆ ಆಧರಿಸಿ, ಬೋಧನೆ ಮಾಡಲು ಸಹಕಾರಿಯಾಗುತ್ತದೆ.
- ಕಲಿಕೆಯನ್ನು ಮೌಲ್ಯಮಾಪನ ಮಾಡಿ, ಪ್ರತಿಪುಷ್ಠಿ ನೀಡಲು ಸಹಕಾರಿ.
- ಬೋಧನೆಯಲ್ಲಿ ಒದಗಬಹುದಾದ ಸಂದಿಗ್ಧವನ್ನು ಪೂರ್ವದಲ್ಲಿಯೇ ನಿವಾರಿಸಿಕೊಳ್ಳಲು ಸಾಧ್ಯ.

- ಬೋಧನೆಯಲ್ಲಿ ಕೇಳಬೇಕಾದ ಪ್ರಶ್ನೆಗಳು, ಚಟುವಟಿಕೆಗಳು, ಗೃಹಕಾರ್ಯಗಳು ಇತ್ಯಾದಿಗಳನ್ನು ಬೋಧನೆಗೆ ಪೂರ್ವದಲ್ಲಿಯೇ ನಿಯೋಜಿಸಿಕೊಳ್ಳುವಲ್ಲಿ ಸಹಾಯವಾಗುತ್ತದೆ.

**ಉತ್ತಮ ಕನ್ನಡ ಪಾಠಯೋಜನೆಯ ಲಕ್ಷಣಗಳು**

- ಭಾಷಾಬೋಧನೆಗೆ ಸಂಬಂಧಿಸಿದಂತೆ, ಸಾಮಾನ್ಯ ಹಾಗೂ ನಿರ್ದಿಷ್ಟ ಉದ್ದೇಶಗಳನ್ನು ಸ್ಪಷ್ಟವಾಗಿ ನಿರೂಪಿಸಿರಬೇಕು;
- ಪ್ರತಿಯೊಂದು ಕಲಿಕಾ ಅನುಭವವೂ ನಿರ್ದಿಷ್ಟವಾಗಿ ಗುರುತಿಸಿಕೊಂಡ ಉದ್ದೇಶಗಳನ್ನು ಸಾಧಿಸಲು ಸಹಾಯವಾಗುವಂತಿರಬೇಕು;
- ವಿದ್ಯಾರ್ಥಿಗಳ ಪೂರ್ವಜ್ಞಾನಕ್ಕೆ ಸಂಬಂಧಿಸಿದಂತೆ, ಕಲಿಕಾ ಚಟುವಟಿಕೆಗಳನ್ನು ಯೋಜಿಸಿರಬೇಕು;
- ಭಾಷಾ ಪಾಠಯೋಜನೆಯು ಸಂಕ್ಷಿಪ್ತವಾಗಿರಬೇಕು;
- ಪಠ್ಯಕ್ಕೆ ಸಂಬಂಧಿಸಿದ ಮುಖ್ಯಾಂಶಗಳನ್ನು ಒಳಗೊಂಡಿರಬೇಕು;
- ಭಾಷಾಕೌಶಲಗಳ, ಸಾಮರ್ಥ್ಯಗಳ ಅಭಿವೃದ್ಧಿ ಚಟುವಟಿಕೆಗಳನ್ನು ಒಳಗೊಂಡಿರಬೇಕು;
- ಭಾಷಾಬೋಧನೆಯಲ್ಲಿ ಬಳಸುವ ತಂತ್ರ, ವಿಧಾನ, ವ್ಯೂಹಗಳ ಬಗೆಗೆ ನಮೂದಿಸಿರಬೇಕು;
- ಕಲಿಕಾ ಸಹಾಯಕಗಳನ್ನು ಸ್ಪಷ್ಟವಾಗಿ ನಮೂದಿಸಿರಬೇಕು;
- ವ್ಯಕ್ತಿಭಿನ್ನತೆ ಆಧರಿಸಿ, ಭಾಷಾಕಲಿಕಾ ಚಟುವಟಿಕೆಗಳನ್ನು ಯೋಜಿಸಿರಬೇಕು;
- ಭಾಷಾ ಪಾಠಯೋಜನೆ ಸಂಕೀರ್ಣವಾಗಿರದೇ, ನಮ್ಯವಾಗಿರಬೇಕು;
- ಶಿಶುಕೇಂದ್ರಿತ ಹಾಗೂ ಚಟುವಟಿಕೆ ಕೇಂದ್ರಿತ ನೆಲೆಯಲ್ಲಿ ಪಾಠಯೋಜನೆಯನ್ನು ರೂಪಿಸಿರಬೇಕು;
- ಪಾಠಯೋಜನೆಯು ಸಾಹಿತ್ಯಾಂಶ, ಭಾಷಾಂಶ, ವ್ಯಾಕರಣಾಂಶದ ಪ್ರಧಾನ ನೆಲೆಯಡಿಯಲ್ಲಿ ವಿಶ್ಲೇಷಿತ ಸ್ವರೂಪದಲ್ಲಿರಬೇಕು;
- ಭಾಷಾಬೋಧನಾ ಉದ್ದೇಶಗಳು, ಕಲಿಕಾ ಅನುಭವಗಳು, ಮೌಲ್ಯಮಾಪನಾಂಶಗಳು ಪರಸ್ಪರ ಸಹಸಂಬಂಧಿತ ನೆಲೆಯಲ್ಲಿರಬೇಕು;
- ಬೋಧನೆಗೆ ಸಂಬಂಧಿಸಿದಂತೆ ಸೂಕ್ತ ನಿದರ್ಶನ, ಉದಾಹರಣೆಗಳು ಇರಬೇಕು;
- ಮುಕ್ತಾಯದ ಹೇಳಿಕೆಯನ್ನು ಜೋಡಿಸಿರಬೇಕು;
- ವಿಕಾಸ, ಮೌಲ್ಯಮಾಪನ, ಪೀಠಿಕೆ ಇತ್ಯಾದಿ ಪ್ರಶ್ನೆಗಳನ್ನು ಸೂಕ್ತವಾಗಿ ಸಂಯೋಜಿಸಿಬೇಕು.
- ಪುನರಾವಲೋಕನ ಪ್ರಶ್ನೆಗಳು, ಅಭ್ಯಾಸ ಚಟುವಟಿಕೆಗಳು ಸ್ಪಷ್ಟವಾಗಿ, ಸಂಕ್ಷಿಪ್ತವಾಗಿರಬೇಕು.
- ಕಪ್ಪುಹಲಗೆ ಸಾರಾಂಶ ಉತ್ತಮವಾಗಿ ನಿರೂಪಿತವಾಗಿರಬೇಕು.
- ಗೃಹಕಾರ್ಯ, ಪರಾಮರ್ಶನ ಸಾಮಗ್ರಿಗಳು ಎಲ್ಲವನ್ನೂ ಸ್ಪಷ್ಟವಾಗಿ ನಿರೂಪಿಸಿರಬೇಕು. ಗೃಹಕಾರ್ಯ ವೈವಿಧ್ಯತೆಯ ನೆಲೆಯಲ್ಲಿರಬೇಕು.
- ಪಾಠಯೋಜನೆಯು ಯಾವುದಾದರೂ ಉಪಕ್ರಮವನ್ನು ಅನುಸರಿಸುತ್ತಿದ್ದಲ್ಲಿ, ಅದಕ್ಕೆ ಯುಕ್ತವಾಗಿ ಯೋಜಿಸಿರಬೇಕು. ಉದಾಹರಣೆಗೆ, ಹರ್ಬಾರ್ಟನ ಪಂಚ ಸೋಪಾನಗಳನ್ನು ಆಧರಿಸಿ, ಯೋಜಿಸುವಾಗ ಪೀಠಿಕೆ, ಗುರಿನಿರೂಪಣೆ, ವಿಕಾಸ, ಪುನರಾವಲೋಕನ, ಗೃಹಕಾರ್ಯ–ಈ ಅನುಕ್ರಮವನ್ನು ಅನುಸರಿಸುತ್ತಿರಬೇಕು.

ಇವುಗಳಲ್ಲದೆ ಪಾಠಯೋಜನೆಯಲ್ಲಿ ಬಾಹ್ಯ ಲಕ್ಷಣಗಳನ್ನು ಹೀಗೆ ಗುರುತಿಸಬಹುದಾಗಿದೆ.

- ಲಿಖಿತ ರೂಪದಲ್ಲಿ ಇರಬೇಕು.
- ಚಿತ್ತುಗಳಿಲ್ಲದೇ ನಿರ್ವಹಿಸಿರಬೇಕು.
- ಪಠ್ಯ ಸಂಬಂಧಿತ ಚಿತ್ರಗಳನ್ನು ಸಂಯೋಜಿಸಿ, ಆಕರ್ಷಕಗೊಳಿಸಬಹುದು.
- ಅತಿ ವಿವರಣೆಯನ್ನು ಒಳಗೊಳ್ಳದೇ, ಚಿಕ್ಕದಾಗಿ, ಚೊಕ್ಕದಾಗಿ ನಿರ್ವಹಿಸಿರಬೇಕು.
- ಪಾಠಯೋಜನೆಯನ್ನು ಅವಶ್ಯಕವಿದ್ದಲ್ಲಿ ಸ್ತಂಭ/ ಅಡ್ಡಸಾಲುಗಳನ್ನು ಬಳಸಿ ಯೋಜಿಬಹುದಾಗಿದೆ.
- ಪ್ರತಿ ಹಂತದ ಚಟುವಟಿಕೆ ಯೋಜಿಸುವಾಗ ಸೂಕ್ತ ಶೀರ್ಷಿಕೆಯಡಿಯಲ್ಲಿ ಯೋಜಿಸಬಹುದಾಗಿದೆ. ಉದಾಹರಣೆಗೆ, ಪೀಠಿಕೆ, ಗುರಿನಿರೂಪಣೆ ಇತ್ಯಾದಿ.

ಈ ಬಾಹ್ಯ ಹಾಗೂ ಆಂತರಿಕ ಅಂಶಗಳನ್ನು ಸಂಯೋಜಿಸಿ, ಕನ್ನಡ ಪಾಠಯೋಜನೆಯನ್ನು ನಿರೂಪಿಸಿದಲ್ಲಿ, ಪಾಠಬೋಧನೆಯ ಯಶಸ್ವಿಯಾಗುತ್ತದೆ. ಅಂತೆಯೇ ಪರಿಣಾಮಕಾರಿಯಾಗಿ ಮೂಡಿಬರುತ್ತದೆ.

**ಗಮನಿಸಿ:** ಕನ್ನಡ ಪಾಠಯೋಜನೆಯಲ್ಲಿ ಗಟ್ಟಿವಾಚನ ಹಾಗೂ ಮೌನವಾಚನಗಳೆರಡಕ್ಕೂ ಅವಕಾಶವನ್ನು ಕಲ್ಪಿಸಬೇಕು.

**ಕನ್ನಡ ಪಾಠ ಯೋಜನೆಯು ವಿಶೇಷವಾಗಿ ಒಳಗೊಂಡಿರಬೇಕಾದ ಅಂಶಗಳು**

- ಭಾಷಾ ಬೋಧನೆಗೆ ಸಂಬಂಧಿಸಿದಂತೆ, ಯುಕ್ತ ಸಾಮಾನ್ಯ ಮತ್ತು ನಿರ್ದಿಷ್ಟ ಉದ್ದೇಶಗಳನ್ನು ರಚಿಸಿಕೊಂಡಿರಬೇಕು;
- ಮಾದರಿ ವಾಚನ, ಅನುಕರಣ ವಾಚನ, ಗಟ್ಟಿವಾಚನ ಹಾಗೂ ಮೌನವಾಚನಗಳಿಗೆ ಅವಕಾಶವನ್ನು ಕಲ್ಪಿಸಿಕೊಂಡಿರಬೇಕು;
- ಆಲಿಸುವಿಕೆ, ಮಾತುಗಾರಿಕೆ, ಓದುಗಾರಿಕೆ, ಬರವಣಿಗೆ ಮುಂತಾದ ಕೌಶಲಗಳ ಅಭಿವ್ಯಕ್ತಿ, ಅಭ್ಯಾಸಗಳನ್ನು ಸಂಯೋಜಿಸಿರಬೇಕು;
- ಪದಸಂಪತ್ತು ಹಾಗೂ ವಾಕ್ಯರಚನಾ ಚಟುವಟಿಕೆಗಳನ್ನು ಪಾಠಯೋಜನೆಯಲ್ಲಿ ಸಂಯೋಜಿಸಿರಬೇಕು;
- ಪಾಠಯೋಜನೆಯಲ್ಲಿ ಪದ್ಯದ ಕವಿ, ಕಾವ್ಯ–ಸಾಹಿತ್ಯದ ವಿವರಗಳು, ಭಾಷಾಶೈಲಿಯ ವಿವರಗಳ ಅಂಶವನ್ನು ಸಂಯೋಜಿಸಿರಬೇಕು;
- ಸಹಜ ಮಾತು ಮತ್ತು ಚರ್ಚೆಗಳಿಗೆ ಅವಕಾಶ ಕಲ್ಪಿಸಿರಬೇಕು;
- ಗದ್ಯಬೋಧನೆಯಲ್ಲಿ ವ್ಯಾಕರಣಾಂಶವನ್ನು ಅಳವಡಿಸಿರಬೇಕು;
- ಪದ್ಯ ಯೋಜನೆಯಾದಲ್ಲಿ ಗಾಯನ, ಅಲಂಕಾರ, ಛಂದಸ್ಸಿನ ಅಂಶಗಳನ್ನು ಸಂಯೋಜಿಸಿರಬೇಕು;
- ಭಾಷಾ ಸಾಮರ್ಥ್ಯವನ್ನು ಪೋಷಿಸುವ ಚಟುವಟಿಕೆಗಳನ್ನು ಯೋಜಿಸಬೇಕು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ –1**

ಪಾಠ ಯೋಜನೆ ಎಂದರೇನು? ಕನ್ನಡ ಪಾಠ ಯೋಜನೆಯ ಪ್ರಮುಖ ಅಂಶಗಳು ಯಾವುವು?

**4.4.3.2. ಕನ್ನಡ ಪಾಠ ಯೋಜನೆಯ ಉಪಕ್ರಮಗಳು**

ಪಾಠಯೋಜನೆಯನ್ನು ತಯಾರಿಸಲು ಹಲವಾರು ಉಪಕ್ರಮಗಳು ಜಾರಿಯಲ್ಲಿದ್ದು, ಅವುಗಳಲ್ಲಿ ಸಾಂಪ್ರದಾಯಿಕವಾಗಿ ಅನುಸರಿಸಲಾದ ಹರ್ಬಾರ್ಟನ ಉಪಕ್ರಮ ಮತ್ತು ಈಚೆಗೆ ಅನುಸರಿಸಲಾಗುತ್ತಿರುವ ರಚನಾತ್ಮಕ ಕಲಿಕಾ ಉಪಕ್ರಮ ಆಧಾರಿತ ಪಾಠಯೋಜನೆಗಳು ಪ್ರಮುಖವಾಗಿವೆ.

ವರ್ತನಾತ್ಮಕವಾದದ ಹಿನ್ನೆಲೆಯಲ್ಲಿ ಹರ್ಬಾರ್ಟನ ಉಪಕ್ರಮವನ್ನೇ ಬಹಳ ಕಾಲದವರೆಗೆ ಅನುಸರಿಸಲಾಗುತ್ತಿದ್ದು, ಇಂದು ನಾವು ಗುರುತಿಸಿಕೊಂಡಿರುವ ರಚನಾವಾದದ ಬೆಳಕಿನಲ್ಲಿ ಪಾಠಯೋಜನೆಯ ಸ್ವರೂಪವನ್ನು ಬದಲಿಸಿಕೊಳ್ಳಲಾಗಿದೆ. ಈ ಹಿನ್ನೆಲೆಯಲ್ಲಿ '7 ಇ' ಉಪಕ್ರಮ, '5 ಇ ಉಪಕ್ರಮ' ಇವುಗಳನ್ನೂ ಗುರುತಿಸಿಕೊಳ್ಳಲಾಗಿದೆ. ಇವಷ್ಟೇ ರಚನಾವಾದ ಆಧರಿತ ಪಾಠಯೋಜನೆಗೆ ಉಪಕ್ರಮಗಳು ಎಂದು ಭಾವಿಸಬಾರದು. ಇವು ರಚನಾವಾದದ ಹಿನ್ನೆಲೆಯಲ್ಲಿ ರೂಪಿಸಿಕೊಳ್ಳಬಹುದಾದ ಪಾಠಯೋಜನೆಗಳಿಗೆ ಉದಾಹರಣೆಗಳಷ್ಟೆ ಎಂಬುದು ನೆನಪಿರಬೇಕು.

ಇಂದಿನ ಪಾಠಯೋಜನೆಯ ರೂಪುರೇಷೆಗೆ ಹಿನ್ನೆಲೆಯಾಗಿ ಇಲ್ಲಿ ಹರ್ಬಾರ್ಟನ ಉಪಕ್ರಮವನ್ನೂ ನಂತರ ರಚನಾವಾದ ಆಧರಿತ ಉಪಕ್ರಮಗಳನ್ನೂ ವಿಚಾರಮಾಡಲಾಗಿದೆ.

**ಹರ್ಬಾರ್ಟನ ಉಪಕ್ರಮ**

ಪಾಠಯೋಜನೆಗೆ ವಿಶಿಷ್ಟ ಆಯಾಮವನ್ನು ಒದಗಿಸಿದ ಕೀರ್ತಿ ಜರ್ಮನಿಯ ಜಾನ್ ಫ್ರೆಡ್ರಿಕ್ ಹರ್ಬಾರ್ಟ (1776–1840)ನಿಗೆ ಸಲ್ಲುತ್ತದೆ. ಶಿಕ್ಷಣ ಮನೋವೈಜ್ಞಾನದ ನೆಲೆಗಟ್ಟಿನಲ್ಲಿ ರೂಪಿಸಲಾಗುವ ಪಾಠಯೋಜನೆಗೆ ನಿರ್ದಿಷ್ಟವಾದಂತಹ ಸ್ವರೂಪವನ್ನು ಹರ್ಬಾರ್ಟ್ ನೀಡಿದ್ದಾನೆ. ಹರ್ಬಾರ್ಟ್ ಪಾಠಯೋಜನೆಯು 'ಕಲಿಕೆಯ ಸಂಚಯ ಸಿದ್ಧಾಂತ (Approceptive Mass theory of Learning)' ವನ್ನು ಆಧರಿಸಿದೆ.

ಈ 'ಕಲಿಕೆಯ ಸಂಚಯ' ಸಿದ್ಧಾಂತದ ಪ್ರಕಾರ, ಹೊಸ ಕಲಿಕೆಯ ಸ್ವರೂಪವು ಹಿಂದಿನ ಕಲಿಕೆಯ ಸಂಚಯನಾಂಶಗಳಿಂದ ರೂಪುಗೊಳ್ಳುತ್ತದೆ. ಈ ಸಿದ್ಧಾಂತದ ಪ್ರಭಾವ ಅತನು ರೂಪಿಸಿದ ಹಂತಗಳಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ಹರ್ಬಾರ್ಟ್ ಪಾಠಬೋಧನೆ ಐದು ಹಂತಗಳಲ್ಲಿ ನೆರವೇರುತ್ತದೆ ಎಂದು ಸ್ಪಷ್ಟಪಡಿಸುತ್ತಾನೆ. ಇವುಗಳನ್ನೇ ಹರ್ಬಾಟ್‌ನ 'ಪಂಚ ಸೋಪಾನ'ಗಳೆನ್ನುತ್ತಾರೆ.

**ಹರ್ಬಾಟ್‌ನ ಪಂಚಸೋಪಾನಗಳು**

**1. ಸಿದ್ಧತೆಗೊಳಿಸುವುದು**

ಹೊಸಜ್ಞಾನಕ್ಕೆ ಸಂಬಂಧಿಸಿದ ಪೂರ್ವಜ್ಞಾನವನ್ನು ನೆನಪಿಗೆ ತರುವ ಪುನರಾವರ್ತನಾ ಕಾರ್ಯವನ್ನು ಈ ಹಂತವು ಒಳಗೊಳ್ಳುತ್ತದೆ. ಪಾಠ ಪ್ರಸ್ತಾವನೆಯನ್ನು ಪ್ರತಿನಿಧಿಸುವ ಈ ಹಂತವು ಮಗುವಿನ ಪೂರ್ವಜ್ಞಾನ ಪ್ರಶ್ನಿಸುವ ಪ್ರಶ್ನೆ, ಚಟುವಟಿಕೆ ಇತ್ಯಾದಿಗಳನ್ನು ಅಪೇಕ್ಷಿಸುತ್ತದೆ. ಉದಾಹರಣೆಗೆ, 'ಬಿಲ್ಲಹಬ್ಬ' ನಾಟಕ ಭಾಗದ ಬೋಧನೆಗೂ ಮುನ್ನ, ಕಂಸನಿಗೆ ಅಶರೀರವಾಣಿ ನುಡಿದ ಪ್ರಸಂಗವನ್ನು ಕುರಿತಂತೆ, ಕತೆಯನ್ನು ಹೇಳಿ, ಇಂದಿನ ತರಗತಿಗೆ ಅದನ್ನು ಹೊಂದಿಸುವುದು.

**2. ಪ್ರಸ್ತುತ ಪಡಿಸುವುದು / ಪಾಠ ಬೆಳವಣಿಗೆ**

ಇದನ್ನು ನಿಜವಾದ 'ಪಾಠಬೋದನೆಯ ಹಂತ' ಎಂದೇ ಗುರುತಿಸಲಾಗುತ್ತದೆ. ಶಿಕ್ಷಕನು ವಿದ್ಯಾರ್ಥಿಗಳಿಗೆ ಹೊಸ ಅನುಭವಗಳನ್ನು ಒದಗಿಸಲು ಈ ಹಂತದಲ್ಲಿ ವಿವಿಧ ತಂತ್ರ–ಸಾಧನ–ಸಲಕರಣೆಗಳನ್ನು ಉಪಯೋಗಿಸಿಕೊಳ್ಳಲು ಸಂಘಟಿಸುತ್ತಾನೆ.

ಪ್ರಶ್ನೆಗಳು, ಉದಾಹರಣೆಗಳು, ವಿವರಣೆಗಳು, ಪ್ರತ್ಯಕ್ಷ ದೃಷ್ಟಾಂತಗಳು, ಪಾಠೋಪಕರಣಗಳು, ಬಹುಮಾಧ್ಯಮಗಳ ಉಪಯೋಗ ಮುಂತಾದ ತಂತ್ರ–ಸಾಧನಗಳನ್ನು ಬಳಸಬಹುದಾಗಿದೆ,. ಆದರೆ ವಿಕಾಸವನ್ನು ಸಂಘಟಿಸುವ ಸಂದರ್ಭದಲ್ಲಿ ಪೂರ್ವಕಲಿಕಾ ಅನುಭವಗಳೊಂದಿಗೆ ಸಹಸಂಬಂಧವನ್ನು ರೂಪಿಸುವುದು ಅನಿವಾರ್ಯ. ಉದಾಹರಣೆಗೆ, ಸಂಧಿ–ಸಮಾಸ ನಿಯಮಗಳನ್ನು ಉದಾಹರಣೆ ಸಹಿತ ನಿರೂಪಿಸುವುದು.

**3. ಸಹಯೋಗಗೊಳಿಸುವುದು ಮತ್ತು ತುಲನೆ**

ಹೊಸದಾಗಿ ಕಲಿತ ಅನುಭವಗಳನ್ನು ಹಿಂದೆ ಕಲಿತ ಅನುಭವಗಳೊಂದಿಗೆ ಹೋಲಿಸಿ, ಸಹಯೋಗಗೊಳಿಸುವುದು ಈ ಹಂತದಲ್ಲಿ ಪ್ರಮುಖವಾಗುತ್ತದೆ. ಉದಾಹರಣೆಗೆ, ಅಕ್ಷರದಿಂದ ಪದ, ಪದದಿಂದ ವಾಕ್ಯ, ವಾಕ್ಯದಿಂದ ವಾಕ್ಯವೃಂದಗಳ ಕಲಿಕೆ ಹೀಗೆ ಸಹಯೋಗಗೊಳಿಸುವುದು.

**4. ಸಾಮಾನ್ಯೀಕರಣಗೊಳಿಸುವುದು**

ಒಂದು ವಿಷಯದ ಕುರಿತ ಕಲಿತ ವಿಭಿನ್ನ ಮತ್ತು ಬಿಡಿ ಬಿಡಿ ವಿಚಾರಗಳ ಆಧಾರದ ಮೇಲೆ ಸಾಮಾನ್ಯ ನಿಯಮ ಅಥವಾ ಸಿದ್ಧಾಂತ ಅಥವಾ ತತ್ತ್ವ ರೂಪಿಸುವುದು ಈ ಹಂತದ ಗಮನ.

ಉದಾಹರಣೆಗೆ, ನಡೆಯುವುದು, ಹಾಡುವುದು, ಓಡುವುದು, ಕೇಳುವುದು ಇವುಗಳೆಲ್ಲವು ಕ್ರಿಯೆಯನ್ನೇ ಸೂಚಿಸುತ್ತವೆ. ಹಾಗಾದಲ್ಲಿ ಕ್ರಿಯೆಯನ್ನು ಸೂಚಿಸುವ ಪದವನ್ನು 'ಕ್ರಿಯಾಪದ' ಎನ್ನುವರು ಎಂದು ಸಾಮಾನ್ಯೀಕರಿಸಬಹುದಾಗಿದೆ. ಶಿಕ್ಷಕ ಅನುಗಮನ ಪದ್ಧತಿಯನ್ನು ಅನುಸರಿಸುವ ಸಂದರ್ಭದಲ್ಲಿ ಈ ಹಂತ ಮಹತ್ವದ್ದೆನಿಸುತ್ತದೆ.

**5. ಅನ್ವಯಗೊಳಿಸುವುದು**

ಕಲಿತ ಹೊಸಜ್ಞಾನವನ್ನು ಅಂತಹುದೇ ಹೊಸ ಸನ್ನಿವೇಶಗಳಿಗೆ ಅನ್ವಯಿಸುವುದೇ ಈ ಹಂತದ ಯೋಜನಾಕಾರ್ಯ. ಇದು ಪಾಠದ ಕೊನೆಯ ಹಂತ.

ಉದಾಹರಣೆಗೆ, ಪ್ರಬಂಧದ ಸ್ವರೂಪ ಹೇಳಿಕೊಟ್ಟ ನಂತರ, ಮಾದರಿಯಂತೆ ಪ್ರಬಂಧ ರಚಿಸುವುದು.

ಇತ್ತೀಚೆಗೆ ಹರ್ಬಾರ್ಟ್‌ನ ಪಂಚಸೋಪಾನವನ್ನು ಈ ರೀತಿಯಲ್ಲಿ ಪರಿಷ್ಕರಿಸಲಾಗಿದೆ.

1. ಸಿದ್ಧತೆಗೊಳಿಸುವುದು
2. ಪ್ರಸ್ತುತ ಪಡಿಸುವುದು
3. ಪುನರಾವರ್ತನೆ ಮಾಡುವುದು.
4. ಮೌಲ್ಯಮಾಪನ ಮಾಡುವುದು.
5. ಗೃಹಕಾರ್ಯ ನೀಡುವುದು.

**ಪಾಠ ಯೋಜನೆಯ ಹಂತಗಳು**

**1. ಪೀಠಿಕೆ (ಪೂರ್ವಸಿದ್ಧತೆ)**

ಕಲಿಕೆಯ ಸಿದ್ಧತೆಯ ನಿಯಮದ ಮೇಲೆ ಈ ಹಂತವನ್ನು ನಿರೂಪಿಸಲಾಗಿದೆ. ಭಾಷಾಪಠ್ಯಕ್ಕೆ ಸಂಬಂಧಿಸಿದಂತೆ, ಕುತೂಹಲ, ಆಸಕ್ತಿ ಕೆರಳಿಸುವ ಚಟುವಟಿಕೆಗಳನ್ನು ಸಂಯೋಜಿಸಿರಬೇಕು. ಭಾಷಾ ಸಾಮರ್ಥ್ಯಗಳ ಕಲಿಕೆಯನ್ನು ಪ್ರಚೋದಿಸುವ ಪ್ರಶ್ನೆ, ಉದಾಹರಣೆ, ನಿದರ್ಶನಗಳು, ಪ್ರಾತ್ಯಕ್ಷಿಕೆ, ಸಂಭಾಷಣೆ, ನಾಟಕೀಕರಣ, ಚಿತ್ರಪಟಗಳ ಬಳಕೆ ಇತ್ಯಾದಿ ಚಟುವಟಿಕೆಗಳನ್ನು ಸಂಯೋಜಿಸಬೇಕು.

ಉದಾಹರಣೆಗೆ, 8ನೇ ತರಗತಿಯ, 'ಬಿಲ್ಲಹಬ್ಬ' ಪಠ್ಯವನ್ನು ಬೋಧಿಸುವ ಸಂದರ್ಭದಲ್ಲಿ ಮಕ್ಕಳಿಗೆ ಆಸಕ್ತಿಯನ್ನು ಮೂಡಿಸುವ ಸಲುವಾಗಿ ಶ್ರೀಕೃಷ್ಣನ ಜನ್ಮಕತೆಯನ್ನು ಪೂರ್ವ ಚಟುವಟಿಕೆಯಾಗಿ ನಾಟಕೀಕರಣಗೊಳಿಸಬಹುದಾಗಿದೆ. 'ನಾಟಕೀರಣ' ಮಾತುಗಾರಿಕೆ ಸಾಮರ್ಥ್ಯವನ್ನು ಅನ್ವೇಷಿಸುವ

ಚಟುವಟಕೆಯಾಗಿದೆ. ಮಕ್ಕಳ ಪೂರ್ವಜ್ಞಾನವನ್ನು ಆಧರಿಸಿ, ಪೀಠಿಕಾ ಚಟುವಟಿಕೆಯನ್ನು ಯೋಜಿಸಬೇಕಾಗುತ್ತದೆ. ಈ ಪೀಠಿಕಾ ಹಂತಕ್ಕೂ ಮುಂದಿನ ವಿಕಾಸದ ಹಂತಕ್ಕೂ ಉದ್ದೇಶ ನಿರೂಪಣೆ ಕೊಂಡಿಯಂತೆ ಕಾರ್ಯ ನಿರ್ವಹಿಸುತ್ತದೆ.

**ಉದ್ದೇಶ ನಿರೂಪಣೆ**

ಪಠ್ಯದ ಮುಖ್ಯಾಂಶಗಳು, ಕೇಂದ್ರಭಾವನೆಯನ್ನು ಪ್ರತಿಬಿಂಬಿಸುವಂತೆ ಗುರಿಯನ್ನು ಪೀಠಿಕೆ ಹಾಗೂ ವಿಕಾಸದ ನಡುವೆ ಸಂಯೋಜಿಸುವ ಹಂತವೇ 'ಉದ್ದೇಶ ನಿರೂಪಣೆ'ಯಾಗಿದೆ.

ಉದ್ದೇಶ ನಿರೂಪಣೆಯು ಉಪಾಧ್ಯಾಯ ಹಾಗೂ ವಿದ್ಯಾರ್ಥಿಗಳು ಬೋಧನಾ / ಕಲಿಕಾ ಪ್ರಕ್ರಿಯೆಯಲ್ಲಿ ಸಾಧಿಸಬೇಕಾದ ಗುರಿಗಳಾಗಿದ್ದು, ಸ್ಪಷ್ಟವಾಗಿ, ನಿರ್ದಿಷ್ಟವಾಗಿ, ಅರ್ಥಪೂರ್ಣವಾಗಿ ಇದನ್ನು ನಿರೂಪಿಸಬೇಕು. ಪಾಠವನ್ನು ಬೋಧಿಸಬೇಕಾದ/ ಕಲಿಯಬೇಕಾದ ವ್ಯಾಪ್ತಿ ಇದರ ಮೂಲಕ ಸ್ಪಷ್ಟವಾಗಿ ನಿರೂಪಿತವಾಗಬೇಕು. ಉದಾಹರಣೆಗೆ 8ನೇ ತರಗತಿಯ ಗದ್ಯಭಾಗ 'ತಲಕಾಡಿನ ವೈಭವ' ಗದ್ಯಭಾಗದ ಮೊದಲ ತರಗತಿಯಲ್ಲಿ, ಗುರಿನಿರೂಪಣೆಯನ್ನು ಹೀಗೆ ನಿರ್ವಹಿಸಬಹುದು. ಇಂದಿನ ತರಗತಿಯಲ್ಲಿ 'ತಲಕಾಡಿನ ವೈಭವ' ಎಂಬ ಗದ್ಯ ಭಾಗದಲ್ಲಿ, ನಿಲ್‌ಮನೆ ಪ್ರಸಂಗ, ತಲಕಾಡಿನ ಇತಿಹಾಸದ ವೈಭವ, ತಲಕಾಡು, 'ಕಲಾಶ್ರೀ ವಿಹರಿಸುವ ನಂದನವನ' – ಈ ಕುರಿತು ತಿಳಿದುಕೊಳ್ಳೋಣ.

**2. ಪಾಠದ ಬೆಳವಣಿಗೆ / ವಿಕಾಸ**

ಕನ್ನಡ ಭಾಷಾಬೋಧನೆಯಲ್ಲಿ ವ್ಯಾಪಕ ಚಟುವಟಿಕೆಯನ್ನೊಳಗೊಂಡ ಇದು ಮಹತ್ವಪೂರ್ಣ ಹಂತವಾಗಿದ್ದು, ನೈಜವಾಗಿ ಭಾಷಾಸಾಮರ್ಥ್ಯಗಳ ಕಲಿಕೆ ಹಾಗೂ ಗಳಿಕೆ ಇಲ್ಲಿಯೇ ನೆರವೇರಬೇಕಾಗುತ್ತದೆ. ಓದುಗಾರಿಕೆ ಸಾಮರ್ಥ್ಯದ ಅಭಿವೃದ್ಧಿಗಾಗಿ ಮಾದರಿವಾಚನ, ಅನುಕರಣವಾಚನ, ಮೌನವಾಚನದ ಚಟುವಟಿಕೆಗಳನ್ನು ಈ ಹಂತದಲ್ಲಿಯೇ ನಡೆಸಬೇಕಾಗುತ್ತದೆ.

ಕರ್ತೃ, ಕವಿ ಪರಿಚಯವನ್ನು ಗದ್ಯ, ಪದ್ಯ ಬೋಧನೆಗಾಗಿ, ಪದ್ಯ–ಗದ್ಯಗಳ ಮೊದಲ ಅಥವಾ ಕೊನೆಯ ಪಾಠದಲ್ಲಿ ಯೋಜಿಸಬಹುದು. ಭಾಷಾಂಶದ ಅಭಿವೃದ್ಧಿಗಾಗಿ ಭಾಷಾ ಚಟುವಟಿಕೆಗಳನ್ನು ಸಂಯೋಜಿಸಿರಬೇಕು. ಸಾಹಿತ್ಯಾಂಶಕ್ಕೆ ಸಂಬಂಧಿಸಿದಂತೆ, ವಿವರಣೆ, ಉದಾಹರಣೆ, ಪ್ರದರ್ಶನ, ಪ್ರಾತ್ಯಕ್ಷಿಕೆ, ನಾಟಕೀಕರಣ, ಹೋಲಿಕೆ, ವ್ಯತ್ಯಾಸ, ವಿಶ್ಲೇಷಣೆ, ವಿಮರ್ಶೆ, ವರ್ಣನೆ ಇತ್ಯಾದಿ ವಿಧಾನಗಳನ್ನು ಈ ಹಂತದಲ್ಲಿ ಸಂಯೋಜಿಸಬೇಕು. ತದನಂತರ, ಗದ್ಯಪಾಠವಾದಲ್ಲಿ ವ್ಯಾಕರಣ, ಪದ್ಯಪಾಠವಾದಲ್ಲಿ ಛಂದಸ್ಸನ್ನು ಅನುಗಮನ, ನಿಗಮನ, ಕ್ರೀಡಾ ವಿಧಾನರೀತ್ಯ ಸಂಯೋಜಿಸಬೇಕು. ಪಾಠಯೋಜನೆಯನ್ನು ಸಂರೂಪಿಸುವಾಗ, ಉದ್ದೇಶ, ಬೋಧನಾ–ಕಲಿಕಾ ಚಟುವಟಿಕೆಗಳು, ಮೌಲ್ಯಮಾಪನ ಚಟುವಟಿಕೆಗಳನ್ನು ಪಾರಸ್ಪರಿಕ ನೆಲೆಯಲ್ಲಿ ಸಂಯೋಜಿಸಬೇಕು. ಕಲಿಕಾ ಸಹಾಯಕಗಳನ್ನು ಸಂಯೋಜಿಸುವ ಬಗೆಯನ್ನು ಪಾಠಯೋಜನೆಯಲ್ಲಿ ಸ್ಪಷ್ಟಪಡಿಸಬೇಕು.

8ನೇ ತರಗತಿಯ ಪಠ್ಯ 'ತಲಕಾಡಿನ ವೈಭವ'ದ ವಿಕಾಸ ಹಂತದ ಚಟುವಟಿಕೆ ಮಾದರಿ ಹೀಗಿದೆ.

| ನಿರ್ದಿಷ್ಟಕಗಳು | ಪಠ್ಯ ವಿಶ್ಲೇಷಣೆ | ಬೋಧನಾ–ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|
| ಪರಿಚಯಿಸುತ್ತಾನೆ<br>ಸ್ಮರಿಸುತ್ತಾನೆ | ಕರ್ತೃ ಪರಿಚಯ:–<br>ತಲಕಾಡಿನ ವೈಭವ – ಹಿರೇಮಲ್ಲೂರು ಈಶ್ವರನ್ | ಶಿಕ್ಷಕರು 'ತಲಕಾಡಿನ ವೈಭವ' ಪ್ರವಾಸ ಕಥನದ ಕರ್ತೃವನ್ನು ಪರಿಚಯಿಸುತ್ತಾನೆ.<br>'ತಲಕಾಡಿನ ವೈಭವ' ಪ್ರವಾಸ ಕಥನದ ಕರ್ತೃ ಯಾರು? | ಪ್ರವಾಸಕಥನ ಎಂದರೇನು/ |

ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಪದ್ಯಬೋಧನೆಯಲ್ಲಿ ಮಾದರಿಗಾಯನ, ಅನುಕರಣಗಾಯನ ಚಟುಚಟಿಕೆಗಳನ್ನು ಯೋಜಿಸಬೇಕು. ಚಟುವಟಿಕೆ, ಅಭ್ಯಾಸ ನಿಯಮಗಳನ್ನು ಅನುಸರಿಸಿ, ಯೋಜನೆಯನ್ನು ರೂಪಿಸಬೇಕು.

ಓದುಗಾರಿಕೆಯನ್ನು ಬೆಳೆಸುವುದಕ್ಕಾಗಿ ಓದುವ ಅಭ್ಯಾಸವನ್ನು ಕೊಡುವಾಗ ಒಂದು ವಿಷಯವನ್ನು ಗಮನದಲ್ಲಿಡಬೇಕು. ವಿದ್ಯಾರ್ಥಿಗಳಿಗೆ ಗಟ್ಟಿಯಾಗಿ ಓದಲು ಹೇಳುವ ಮೊದಲಿಗೆ ಮೌನವಾಗಿ ಓದಿಕೊಳ್ಳಲು ಅವಕಾಶ ಕೊಡಬೇಕು.

**3. ಪುನರಾವರ್ತನೆ**

ಕನ್ನಡ ಭಾಷಾಸಾಮರ್ಥ್ಯ, ಕೌಶಲಗಳ ಅಭಿವೃದ್ಧಿಗೆ ಯೋಜಿಸಲಾದ ಚಟುವಟಿಕೆಗಳನ್ನು ಈ ಹಂತವು ಒಳಗೊಳ್ಳುತ್ತದೆ. ಸಾರಸಂಗ್ರಹದ ಬರಹ, ವಿಸ್ತರಣಾ ಬರಹ, ವರ್ಣನೆ, ಸಂಭಾಷಣೆ, ಚರ್ಚೆ, ವಿಮರ್ಶೆಯಂತಹ ಚಟುವಟಿಕೆಗಳನ್ನು ಮೌಲ್ಯಮಾಪನ ಕಾರ್ಯಕ್ಕಾಗಿ ಯೋಜಿಸಬಹುದಾಗಿದೆ. ಕಪ್ಪುಹಲಗೆ ಸಾರಾಂಶವನ್ನು ಯೋಜಿಸಿ, ನಿರ್ವಹಿಸುವುದು ಈ ಹಂತದ ಪ್ರಕ್ರಿಯೆಯಾಗಿದೆ. ವಸ್ತು–ವಿಷಯ, ಭಾಷಾ ಅಭಿವೃದ್ಧಿ, ನಿರೀಕ್ಷಿತ ಮಟ್ಟದಲ್ಲಿ ಸಾಮರ್ಥ್ಯವನ್ನು ಉತ್ತೇಜಿಸಲು, ವಿವೇಚಿಸಲು ಈ ಹಂತದ ಚಟುವಟಿಕೆಗಳನ್ನು ಯೋಜಿಸಲಾಗುತ್ತದೆ.

**4. ಮೌಲ್ಯಮಾಪನ**

ಪಠ್ಯಾಂಶಗಳ ಅರ್ಥಗ್ರಹಿಕೆ, ಭಾಷಾಸಾಮರ್ಥ್ಯಗಳ ಮೌಲ್ಯಮಾಪನ, ಭಾಷಾಕುಶಲತೆಗಳ ಗಳಿಕೆ ಕುರಿತ ಮೌಲ್ಯಮಾಪನ ಚಟುವಟಿಕೆಗಳನ್ನು ಈ ಹಂತದಲ್ಲಿ ಯೋಜಿಸಬಹುದಾಗಿದೆ. ಬೋಧನೆಯ ಯಶಸ್ಸನ್ನು – ಅಪಯಶಸ್ಸನ್ನು ಈ ಚಟುವಟಿಕೆಗಳು ಪ್ರತಿಫಲಿಸುತ್ತವೆ. ಇದು ಕಲಿಕೆಯ 'ಪರಿಣಾಮ ನಿಯಮ'ವನ್ನು ಆಧರಿಸಿರುತ್ತದೆ. ಬೋಧನೆ / ಕಲಿಕೆಯ ಫಲಿತದ ಅನಾವರಣ ಈ ಹಂತದಲ್ಲಿ ಉಂಟಾಗುತ್ತದೆ.

**5. ಗೃಹಕಾರ್ಯ**

ಇದು ಕಲಿಕೆಯ ಅಭ್ಯಾಸ ನಿಯಮವನ್ನು ಆಧರಿಸಿದೆ. ಕಲಿತ ವಿಷಯ, ಭಾಷಾಂಶಗಳನ್ನು ದೃಢೀಕರಿಸಲು, ಸ್ಥಿರಗೊಳಿಸಲು, ಅನ್ವಯ ಮಾಡಲು ಈ ಹಂತವು ಉಪಯುಕ್ತವಾಗಿ. ವಿರಾಮಕಾಲದ ಸದುಪಯೋಗದ ತಾತ್ತ್ವಿಕ ನೆಲೆಯಲ್ಲಿ ಈ ಹಂತದ ಚಟುವಟಿಕೆಗಳನ್ನು ಯೋಜಿಸಲಾಗುತ್ತದೆ. ಭಾಷಾಬೋಧನೆಯಲ್ಲಿ ನೀಡುವ ಗೃಹಕಾರ್ಯಗಳು ಭಾವನೆ, ವರ್ತನೆ, ಕ್ರಿಯೆ, ಜ್ಞಾನ ಎಲ್ಲದರಲ್ಲಿಯೂ ಸೂಕ್ತ ಪರಿವರ್ತನೆ ತರಬೇಕಾಗುತತದೆ. ಗೃಹಕಾರ್ಯಗಳು ಭಾಷಾ ಬೋಧನೆಯಲ್ಲಿ ಸೃಜನಶೀಲತೆ ಪೋಷಣೆ ಮಾಡುವಂತಿದ್ದಲ್ಲಿ ಉತ್ತಮ. ಉದಾಹರಣೆಗೆ 9 ನೇ ತರಗತಿಯ ಪದ್ಯ 'ರಮ್ಯಸೃಷ್ಟಿ' ಬೋಧನೆ ನಿರ್ವಹಿಸಿವಾಗ, 'ಪ್ರಕೃತಿ' ಕುರಿತ ಸ್ವರಚಿತ ಕವನ ರಚಿಸುವ ಗೃಹಕಾರ್ಯ ನೀಡಬಹುದಾಗಿದೆ.

**ಪಾಠ ಯೋಜನೆಯ ರೂಪುರೇಷೆ**

| | | | |
|---|---|---|---|
| ಶಿಕ್ಷಕರ ಹೆಸರು | ತರಗತಿ | ಪಾಠದ ಸಂಖ್ಯೆ | ದಿನಾಂಕ |
| ಶಾಲೆ | ವಿಷಯ | ಘಟಕ | ಸಮಯ |
| **ಪ್ರಧಾನ ಪರಿಕಲ್ಪನೆಗಳು** | | | |
| ಭಾಷಾಂಶ | ಸಾಹಿತ್ಯಾಂಶ | | ವ್ಯಾಕರಣಾಂಶ |
| ನಿರ್ದಿಷ್ಟ ಉದ್ದೇಶಗಳು | | | |
| ಬೋದನಾ / ಕಲಿಕಾ ಸಂಪನ್ಮೂಲಗಳು | | ಪರಾಮರ್ಶನ ಸಾಮಗ್ರಿಗಳು | |
| | | | |

<table>
<tr><td colspan="2">ನಿರೀಕ್ಷಿತ ಪೂರ್ವಜ್ಞಾನ</td><td colspan="2">ಬೋಧನಾ/ ಕಲಿಕಾ ಚಟುವಟಿಕೆಗಳು</td></tr>
<tr><td colspan="2"></td><td colspan="2"></td></tr>
<tr><td colspan="4">ಗುರಿ ನಿರೂಪಣೆ</td></tr>
<tr><td colspan="4">ವಿಕಾಸ</td></tr>
<tr><td>ನಿರ್ದಿಷ್ಟಕಗಳು</td><td>ಪಠ್ಯವಿಶ್ಲೇಷಣೆ</td><td>ಬೋಧನಾ /ಕಲಿಕಾ ಚಟುವಕೆಗೆಳು</td><td>ಮೌಲ್ಯಮಾಪನ</td></tr>
<tr><td></td><td></td><td></td><td></td></tr>
<tr><td colspan="4">ಮುಕ್ತಾಯದ ಹೇಳಿಕೆ</td></tr>
<tr><td colspan="4">ಪುನರಾವಲೋಕನ</td></tr>
<tr><td>ನಿರ್ದಿಷ್ಟಕಗಳು</td><td colspan="2">ಪುನರಾವಲೋಕನಾ ಚಟುವಟಿಕೆಗಳು</td><td>ಮೌಲ್ಯಮಾಪನ</td></tr>
<tr><td colspan="4">ಮೌಲ್ಯಮಾಪನ</td></tr>
<tr><td colspan="2">ಕಪ್ಪುಹಲಗೆ ಸಾರಾಂಶ</td><td colspan="2">ಮೌಲ್ಯಮಾಪನ ಪ್ರಶ್ನೆಗಳು</td></tr>
<tr><td colspan="2"></td><td colspan="2"></td></tr>
<tr><td colspan="4">ಗೃಹಕಾರ್ಯ</td></tr>
<tr><td colspan="4"></td></tr>
</table>

**ಹರ್ಬಾರ್ಟ್ ಉಪಕ್ರಮದ ಹಿರಿಮೆ:**

1. ಬೋಧನೆಗೆ ಸ್ಪಷ್ಟ ಹಂತಗಳನ್ನು ಒದಗಿಸಿದೆ;
2. ಬೋಧನೆಯನ್ನು ವ್ಯವಸ್ಥಿತವಾಗಿ ಮತ್ತು ಕ್ರಮಬದ್ಧವಾಗಿ ನಡೆಸಲು ಅನುಕೂಲಮಾಡಿಕೊಡುತ್ತದೆ;
3. ಬಹುತೇಕ ಎಲ್ಲಾ ವಿಷಯಗಳ ಬೋಧನೆಗೆ ಉತ್ತಮ ಉಪಕ್ರಮ ಎನಿಸಿದೆ;
4. ಈ ಉಪಕ್ರಮವು ಪೂರ್ವಜ್ಞಾನವನ್ನು ತಳಹದಿಯನ್ನಾಗಿ ಹೊಂದಿದೆ.

**ಹರ್ಬಾರ್ಟ್ ಉಪಕ್ರಮದ ಇತಿಮಿತಿಗಳು:**

1. ವರ್ತನಾ ರೂಪದಲ್ಲಿ ಬೋಧನಾ ಉದ್ದೇಶಗಳನ್ನು ರೂಪಿಸುವುದಿಲ್ಲ;
2. ಜ್ಞಾನಾತ್ಮಕ ಉದ್ದೇಶಗಳನ್ನು ಮಾತ್ರ ಸಾಧಿಸಲು ಸೀಮಿತಗೊಂಡಿದೆ;
3. ಶಿಕ್ಷಕ ಕೇಂದ್ರಿತ ಉಪಕ್ರಮ ಎನಿಸಿದೆ;
4. ಕಲಿಕೆಗಿಂತ ಬೋಧನೆಗೆ ಹೆಚ್ಚಿನ ಒತ್ತು ನೀಡುತ್ತದೆ;
5. ವಿದ್ಯಾರ್ಥಿಗಳ ಭಾಗವಹಿಸುವಿಕೆಗೆ ಹೆಚ್ಚು ಅವಕಾಶವಿಲ್ಲ;
6. ಏಕರೂಪತೆಯನ್ನು ಹೊಂದಿದ್ದು, ಯಾಂತ್ರಿಕವಾಗಿರುತ್ತದೆ;
7. ನಿರಂತರ ಮೌಲ್ಯಮಾಪನ ಮಾಡುವುದಕ್ಕೆ ಇಲ್ಲಿ ಅವಕಾಶವಿಲ್ಲ;
8. ಇದು ಇಡಿಯಾದ ಪ್ರಕ್ರಿಯೆ ಎನಿಸಿದೆ.

**ಮೌಲ್ಯಮಾಪನ ಉಪಕ್ರಮ**

ಪಾಠಯೋಜನೆಗೆ 'ಮೌಲ್ಯಮಾಪನ ಉಪಕ್ರಮವನ್ನು ಜಾರಿಗೆ ತಂದವರು, ಶಿಕ್ಷಣ ತಜ್ಞ ಬೆಂಜಮಿನ್.ಎಸ್.ಬ್ಲೂಮ್‌ರವರು. ಮೌಲ್ಯಮಾಪನ ಉಪಕ್ರಮವು ಮೂರು ಅಂಗಗಳನ್ನು ಹೊಂದಿರುತ್ತದೆ.

**1. ಶೈಕ್ಷಣಿಕ ಉದ್ದೇಶಗಳು:** ಶೈಕ್ಷಣಿಕ ಉದ್ದೇಶಗಳು ಅಂತಿಮ ವರ್ತನೆಗೆ ಸಂಬಂಧಿಸಿದವುಗಳಾಗಿವೆ. ಕಲಿಕಾ ಅನುಭವಗಳಿಂದ ಉಂಟಾಗುವ ಇಚ್ಛಿತ ವರ್ತನಾ ಪರಿವರ್ತನೆಯನ್ನು ಸೂಚಿಸುತ್ತವೆ. ಈ ಉದ್ದೇಶಗಳನ್ನು ಸ್ಪಷ್ಟವಾಗಿ, ನಿರ್ದಿಷ್ಟವಾಗಿ ರೂಪಿಸಬೇಕು. ಇವುಗಳನ್ನು ವರ್ತನಾ ಪರಿವರ್ತನಾ ಪದಗಳಲ್ಲಿ ನಿರೂಪಿಸಬೇಕು. ಉದಾಹರಣೆಗೆ. ವಿದ್ಯಾರ್ಥಿಯು ದೇವಾಲಯ ಪದವನ್ನು ಬಿಡಿಸಿ ಬರೆದು, ಸಂಧಿಯನ್ನು ಹೆಸರಿಸುತ್ತಾನೆ.

**2. ಕಲಿಕಾ ಅನುಭವಗಳು:** ಕಲಿಕಾ ಅನುಭವಗಳು ಉದ್ದೇಶಾಧಾರಿತವಾದವುಗಳು.

ಅ. ನಿರ್ದಿಷ್ಟ ವರ್ತನಾ ಬದಲಾವಣೆಗಳಿಗೆ ಅನುಗುಣವಾಗಿ ಕಲಿಕಾ ಅನುಭವಗಳನ್ನು ಆಯ್ದು, ಕ್ರಮಬದ್ಧವಾಗಿ ಸಂಘಟಿಸಬೇಕು.

**ಉದ್ದೇಶ:** ವಿದ್ಯಾರ್ಥಿಯು ದೇವಾಲಯ ಪದವನ್ನು ಬಿಡಿಸಿ ಬರೆದು, ಸಂಧಿಯನ್ನು ಹೆಸರಿಸುತ್ತಾನೆ

ಈ ಉದ್ದೇಶ ಸಾಧನೆಗೆ ಸವರ್ಣದೀರ್ಘ ಸಂಧಿಯ ನಿಯಮವನ್ನು ನಿಗಮನ ವಿಧಾನದಿಂದ ತಿಳಿಸಿ, ಬಿಡಿಸಿ ಬರೆದು ಸಂಧಿಯನ್ನು ಹೆಸರಿಸಲು 'ದೇವಾಲಯ' ಪದವನ್ನು ನೀಡುವುದು.

ಆ. ಶಿಕ್ಷಕ – ವಿದ್ಯಾರ್ಥಿ, ವಿದ್ಯಾರ್ಥಿ–ವಿದ್ಯಾರ್ಥಿಗಳ ನಡುವೆ ಪರಸ್ಪರ ಅನ್ಯೋನ್ಯ ಕ್ರಿಯೆಯನ್ನು ಯೋಜಿಸುವುದು. ಬೋಧನೆ / ಕಲಿಕೆಯ ಮಾರ್ಗೋಪಾಯವನ್ನು ವಿಷಯದ ಸ್ವರೂಪಕ್ಕೆ ಅನುಗುಣವಾಗಿ, ಪದ್ಧತಿ, ತಂತ್ರಗಳನ್ನು ಆಯ್ಕೆ ಮಾಡುವುದು.

ಉದಾಹರಣೆಗೆ, ಪದ್ಯಬೋಧನೆಯಲ್ಲಿ ಪದ್ಯಭಾಗದ ಅಭ್ಯಾಸಕ್ಕಾಗಿ, 'ಸಾಮೂಹಿಕ ಕಂಠಪಾಠ'ವನ್ನು ಯೋಜಿಸುವುದು.

**3. ಸೂಕ್ತ ಕಲಿಕಾ ಸಾಮಗ್ರಿಗಳನ್ನು ಆಯ್ಕೆ ಮಾಡುವುದು**

ಬೋಧನಾ–ಕಲಿಕೆಯ ಪರಿಣಾಮಕಾರಿತ್ವವನ್ನು ಹೆಚ್ಚಿಸಲು ಸ್ಥಳೀಯ ಸಂಪನ್ಮೂಲಗಳನ್ನು ಆರಿಸುವುದು. ಸಂಪನ್ಮೂಲಗಳು ತಂತ್ರ, ಸಾಧನ, ಪಠ್ಯ, ಇತ್ಯಾದಿ ರೂಪಗಳಲ್ಲಿ ಇರಬಹುದಾಗಿದೆ. ಉದಾಹರಣೆಗೆ, ಪದಗಳ ಅರ್ಥವನ್ನು ಹುಡುಕಲು ಸಮೂಹ ಚಟುವಟಿಕೆ ಹಾಗೂ ನಿಘಂಟು ಉತ್ತಮ ಕಲಿಕಾ ಸಾಮಗ್ರಿಯಾಗಬಲ್ಲದು.

**3. ಮೌಲ್ಯಮಾಪನ**

ಬೋಧನೆ / ಕಲಿಕೆಯ ಫಲದ ಮೌಲ್ಯಮಾಪನ ಇದಾಗಿದೆ. ನಿರ್ದಿಷ್ಟ ಉದ್ದೇಶ ಸಾಧನೆ ಅಥವಾ ಕಲಿಕೆಯ ಮೌಲ್ಯಮಾಪನ ಇಲ್ಲಿಯ ಉಪಕ್ರಮ ಎನಿಸಿದೆ. ಜ್ಞಾನಾತ್ಮಕ, ಮನೋಭಾವನಾತ್ಮಕ, ಕ್ರಿಯಾಜನ್ಯಾತ್ಮಕ ವಲಯದಲ್ಲಿ ಅಪೇಕ್ಷಿತ ವರ್ತನಾ ಪರಿವರ್ತನೆಯನ್ನು ಗುರುತಿಸುವುದೇ ಇಲ್ಲಿನ ಉಪಕ್ರಮ ಎನಿಸುತ್ತದೆ.




ಮೌಲ್ಯಮಾಪನ ಉಪಕ್ರಮದ ಶ್ರೇಷ್ಠತೆಗಳು

**ಮೌಲ್ಯಮಾಪನ ಉಪಕ್ರಮದ ಗುಣಗಳು:**

**1. ಉದ್ದೇಶಗಳನ್ನು ವರ್ತನಾ ಪರಿವರ್ತನಾ ರೂಪದಲ್ಲಿ ಹೇಳಲು ಅವಕಾಶ ಒದಗಿಸುತ್ತದೆ.**

ಉದ್ದೇಶಗಳನ್ನು ವರ್ತನಾ ಪರಿವರ್ತನಾ ಪದದಲ್ಲಿ ನಿರೂಪಿಸುವುದರಿಂದ, ಉದ್ದೇಶ ಸಾಧನೆಯ ಅನುಭವವನ್ನು ಒದಗಿಸುತ್ತದೆ. ಉದಾಹರಣೆಗೆ, ಹೆಸರಿಸುತ್ತಾನೆ, ವಿಶ್ಲೇಷಿಸುತ್ತಾನೆ, ವಿವರಿಸುತ್ತಾನೆ ಇತ್ಯಾದಿ ವರ್ತನಾ ವ್ಯತ್ಯಾಸಗಳನ್ನು ಅನುಭವಕ್ಕೆ ತಂದುಕೊಳ್ಳಬಹುದಾಗಿದೆ.

**2. ಈ ಉಪಕ್ರಮವು ಎಲ್ಲಾ ವಲಯಗಳ ಉದ್ದೇಶಗಳನ್ನು ಸಾಧಿಸುವಲ್ಲಿ ಉತ್ತಮ ಉಪಕ್ರಮ ಎನಿಸಿದೆ.**

ಈ ಉಪಕ್ರಮದಲ್ಲಿ ಜ್ಞಾನಾತ್ಮಕ, ಭಾವನಾತ್ಮಕ, ಕ್ರಿಯಾಜನ್ಯಾತ್ಮಕ ವಲಯಗಳ ಉದ್ದೇಶಗಳನ್ನು ಈ ಸಾಧಿಸಲು ಅವಕಾಶವಿದೆ.

**3. ಇಲ್ಲಿಯ ಸಂಯೋಜನೆಯು ಆದರ್ಶೀಕೃತವಾದುದು.**

ಉದ್ದೇಶಗಳು, ಪಠ್ಯವಸ್ತು ವಿಶ್ಲೇಷಣೆ, ಶಿಕ್ಷಕ / ವಿದ್ಯಾರ್ಥಿಗಳ ಚಟುವಟಿಕೆ ಮತ್ತು ಮೌಲ್ಯಮಾಪನ ಇವುಗಳ ಸರಿಯಾದ, ಸಂಬಂಧಿಸಿದ ಜೋಡಣೆ ಉತ್ತಮ ಎನಿಸಿದೆ. ಕ್ರಮಬದ್ಧತೆ ಇಲ್ಲಿ ಅಭಿವ್ಯಕ್ತಗೊಳ್ಳುತ್ತದೆ.

**4. ಇದೊಂದು ವಿದ್ಯಾರ್ಥಿಕೇಂದ್ರಿತ ಉಪಕ್ರಮವಾಗಿದೆ.**

ವಿದ್ಯಾರ್ಥಿಗಳ ಕಲಿಕೆಯನ್ನು ಕೇಂದ್ರೀಕರಿಸಿರುವ ಉಪಕ್ರಮ ಇದಾಗಿದ್ದು, ಶಿಕ್ಷಕನಿಗೆ ಕೇವಲ ಮಾರ್ಗದರ್ಶಕನ ಪಾತ್ರವನ್ನು ನೀಡುತ್ತದೆ.

**5. ನಿರಂತರ ಮೌಲ್ಯಮಾಪನ ಸಾಧ್ಯ.**

ಪೀಠಿಕೆಯ ಹಂತದಲ್ಲೇ ಪೂರ್ವಜ್ಞಾನ ಪರೀಕ್ಷಿಸಲಾಗುತ್ತದೆ. ಇದರ ಜೊತೆಗೆ ಬೆಳವಣಿಗೆಯ ಪ್ರಶ್ನೆಗಳು, ಪುನರಾವಲೋಕನ ಪ್ರಶ್ನೆಗಳು, ಗೃಹಕಾರ್ಯ ಪ್ರಶ್ನೆಗಳು ನಿರಂತರ ಮೌಲ್ಯಮಾಪನಕ್ಕೆ ಎಡೆಮಾಡಿ ಕೊಡುತ್ತದೆ.

**6. ಕಲಿಕೆಯ ಫಲವನ್ನು ಕಲಿಕೆ ಉಂಟಾದ ತಕ್ಷಣ ಮೌಲ್ಯಮಾಪನ ಮಾಡಲು ಅವಕಾಶ ನೀಡುತ್ತದೆ.**

ವಿಕಸನದ ಹಂತದಲ್ಲಿಯೇ ಮೌಲ್ಯಮಾಪನಕ್ಕೆ ಅವಕಾಶ ಇರುವುದರಿಂದ ಕಲಿಕೆಯ ಫಲವನ್ನು ತಕ್ಷಣದಲ್ಲಿಯೇ ಗುರುತಿಸಬಹುದು. ಉದಾಹರಣೆಗೆ, ಸವರ್ಣದೀರ್ಘ ಸಂಧಿಯ ನಿಯಮ ಹಾಗೂ ಉದಾಹರಣೆಗಳನ್ನು ನೀಡಿದ ನಂತರ, ಆ ನಿಯಮವನ್ನು ಒಳಗೊಂಡ ಪದಗಳನ್ನು ಬಿಡಿಸಿ ಬರೆಯಲು ತಿಳಿಸುವುದು.

**7. ಕಲಿಕಾ ಪ್ರಕ್ರಿಯೆಯಲ್ಲಿ ನಿರಂತರತೆ ತರುವಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತದೆ.**

ಹರ್ಬಾಟ್ ಉಪಕ್ರಮದಂತೆ, ಕಲಿಕಾ ಪ್ರಕ್ರಿಯೆಯನ್ನು ಕಟ್ಟುನಿಟ್ಟಾದ ಪ್ರತ್ಯೇಕ ಅಂಕಗಳನ್ನಾಗಿ ವಿಭಾಗಿಸದಿಲ್ಲರುವುದು ನಿರಂತರತೆಗೆ ಒತ್ತುಕೊಡುವಲ್ಲಿ ಸಹಕಾರಿಯಾಗುತ್ತದೆ.

**ಮೌಲ್ಯಮಾಪನ ಉಪಕ್ರಮದ ಮಿತಿಗಳು:**

1. ನಿರ್ದಿಷ್ಟಕಗಳನ್ನು / ವರ್ತನಾ ರೂಪಿ ಕಲಿಕಾಫಲಗಳನ್ನು ಕೇವಲ ಒಂದೇ ವಲಯಕ್ಕೆ ನಿರ್ದಿಷ್ಟಪಡಿಸಲು ಸಾಧ್ಯವಾಗುವುದಿಲ್ಲ.

ಉದಾಹರಣೆಗೆ, 'ಆಯ್ಕೆ ಮಾಡುತ್ತಾನೆ' ಎಂಬ ನಿರ್ದಿಷ್ಟಕವನ್ನು ಅರ್ಥಗ್ರಹಿಕೆ ಮತ್ತು ಅನ್ವಯನ ಕ್ಷೇತ್ರಗಳಿಗೆ ಅನ್ವಯಿಸಬಹುದಾಗಿದೆ.

2. ಈ ಉಪಕ್ರಮವು ಬೋಧನೆಗೆ ನಿರ್ದಿಷ್ಟ ಹಂತಗಳನ್ನು ನೀಡುವುದಿಲ್ಲ. ಮೌಲ್ಯಮಾಪನ ಉಪಕ್ರಮದಲ್ಲಿ ಹರ್ಬಾಟ್‌ನ ಪಂಚಸೋಪಾನಗಳಂತೆ ನಿರ್ದಿಷ್ಟ ಹಂತಗಳಿಲ್ಲ.

3. ಶಿಕ್ಷಕನಿಗೆ ಹೆಚ್ಚಿನ ಪ್ರಾಮುಖ್ಯತೆ ಇಲ್ಲ.

ಈ ಉಪಕ್ರಮವು ವಿದ್ಯಾರ್ಥಿಕೇಂದ್ರಿತ ಉಪಕ್ರಮವಾಗಿರುವುರಿಂದ, ಶಿಕ್ಷಕನ ಪಾತ್ರ ಅಷ್ಟಾಗಿ ಇರುವುದಿಲ್ಲ. ಹಾಗಾಗಿ ನಿಯಂತ್ರಣ ಕಷ್ಟಸಾಧ್ಯ ಎನಿಸುತ್ತದೆ.

**5'ಇ' ಪಾಠ ಯೋಜನೆ( 5 'E' method):**

ನಮ್ಮ ಒಟ್ಟು ಶಿಕ್ಷಣ ತತ್ವದೃಷ್ಟಿ ಇಂದು ವರ್ತನಾವಾದದಿಂದ ರಚನಾವಾದದ ಕಡೆಗೆ ಬದಲಾಗಿರುವುದು ನಿಮಗೆ ತಿಳಿದಿದೆ. ಈ ಹಿನ್ನೆಲೆಯಲ್ಲಿ ಬೋಧನೆ ಶಿಕ್ಷಕ ಕೇಂದ್ರವಾಗಿರುವುದರ ಬದಲಿಗೆ ವಿದ್ಯಾರ್ಥಿಕೇಂದ್ರಿತವಾಗಬೇಕಾದುದು ಅನಿವಾರ್ಯವಾಗಿದೆ. ಈ ಮೂಲಕ ವಿದ್ಯಾರ್ಥಿ ಅರಿವನ್ನು ಹೀರಿಕೊಳ್ಳುವ ಬದಲಿಗೆ ಅರಿವನ್ನು ಕಟ್ಟಿಕೊಳ್ಳಬೇಕಾಗಿದೆ. ಅದಕ್ಕನುಗುಣವಾದ ಪಾಠಯೋಜನೆ ಇಂದು ರೂಪುಗೊಳ್ಳಬೇಕಾಗಿದೆ. ಇದಕ್ಕಾಗಿ ವಿದ್ಯಾರ್ಥಿಗಳೇ ಕಲಿಯಲು ಅನುವುಮಾಡಿಕೊಡುವ ಚಟುವಟಿಕೆಗಳನ್ನು ಮಾಧ್ಯಮವಾಗಿ ಅಥವಾ ಸಾಧನವಾಗಿ ಬಳಸಿಕೊಂಡು ಆ ಮೂಲಕ ವಿದ್ಯಾರ್ಥಿಗಳು ಅರಿವು ಕಟ್ಟಿಕೊಳ್ಳುವ ಕೆಲಸಕ್ಕೆ ಅನುವಾಗಬೇಕಾಗಿದೆ. ಅಧ್ಯಾಪಕ ತೆರೆಯ ಮರೆಯ ಕಲಿಕಾ ಪೋಷಕನಾಗಬೇಕಾಗಿದೆ. ವಿದ್ಯಾರ್ಥಿಗಳೇ ಕಲಿಯಬೇಕಾದುದನ್ನು ಕಲಿಯಲು ಅಗತ್ಯವಾದ ವಾತಾವರಣವನ್ನು ಸೃಷ್ಟಿಸುವುದು ಅಧ್ಯಾಪಕನ ಕೆಲಸವಾಗಿದೆ.

ಈ ಹಿನ್ನೆಲೆಯಲ್ಲಿ ಪಾಠಗಳನ್ನು ರೂಪಿಸಲು ಹೊರಟ ಸಂದರ್ಭದಲ್ಲಿ, 2005ರ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಒದಗಿಸಿದ ಕೆಲವು ಮಾರ್ಗಸೂಚಿಗಳನ್ನು ಬಿಟ್ಟರೆ ನಮ್ಮಲ್ಲಿ ಹೆಚ್ಚಿನ ಸಾಮಗ್ರಿಗಳು ಇರಲಿಲ್ಲ. ಇದನ್ನು ಹೇಗೆ ಅನ್ವಯಿಸಿಕೊಳ್ಳಬಹುದು ಎಂಬುದರ ಕುರಿತಾಗಿ ಕೆಲವು ಪ್ರಯೋಗಗಳು ನಡೆದಿವೆ. ಅವು ಸಂಪೂರ್ಣವಾಗಿ ಅಪೇಕ್ಷಿತ ಪರಿಣಾಮವನ್ನು ಕೊಡುತ್ತವೆ ಎಂಬ ಖಾತ್ರಿ ಇಲ್ಲದಿದ್ದರೂ ಕೆಲಮಟ್ಟಿಗೆ ಸಹಾಯಕ ರೂಪುರೇಖೆಗಳಾಗಿ ಅವುಗಳನ್ನು ಅಭ್ಯಾಸಮಾಡಬಹುದು. ಈ ಹಿನ್ನೆಲೆಯಲ್ಲಿ 5 'ಇ' ಪಾಠಯೋಜನೆ/ ಬೋಧನೆಗಳನ್ನು ಗಮನಿಸಬಹುದು. ಈ ಉಪಕ್ರಮಗಳು ಉತ್ತಮೀಕರಣಗೊಂಡು ಅಪೇಕ್ಷಿತ ಪರಿಣಾಮಗಳನ್ನು ತೋರಿಸಬೇಕಾಗಿದೆ. ಅದು ನಮ್ಮ ನಿಮ್ಮೆಲ್ಲರ ಕೆಲಸ.

5 'ಇ' ಪಾಠಯೋಜನೆಯು ವಿಶೇಷವಾಗಿ ಚಟುವಟಿಕೆಯಾಧಾರಿತ ಪಾಠಯೋಜನೆಯಾಗಿದ್ದು, ಕಲಿಕಾರ್ಥಿಗಳನ್ನು ತೊಡಗಿಸಿಕೊಳ್ಳುವ, ಅನ್ವೇಷಿಸುವ, ವಿವರಿಸುವ, ವಿಸ್ತರಿಸುವ, ಮೌಲ್ಯಮಾಪನ ಮಾಡುವ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಅವಕಾಶ ನೀಡುವ ವಿಶೇಷ ಪಾಠಬೋಧನಾ ಯೋಜನೆಯಾಗಿದೆ. ಇದು ಪ್ರಮುಖವಾಗಿ ಇಂಗ್ಲಿಷಿನ Engage, Explore, Explain, Elaborate, Evaluate ಎಂಬ 5 ಹಂತಗಳನ್ನು ಒಳಗೊಳ್ಳುತ್ತದೆ. ಇದು ಬಹಳಮಟ್ಟಿಗೆ ಸಹಯೋಗ ಕಲಿಕೆಗೆ ಅವಕಾಶವನ್ನೊದಗಿಸಿ, ವಿದ್ಯಾರ್ಥಿಗಳೇ ಅರಿವು ಮೂಡಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ತೊಡಗಿಕೊಂಡು ಅರಿವು ಕಟ್ಟಿಕೊಳ್ಳಬೇಕೆಂದು ಅಪೇಕ್ಷಿಸುತ್ತದೆ. ಈ ಉಪಕ್ರಮದ ವಿವಿಧ ಹಂತಗಳನ್ನು ವಿಚಾರಮಾಡೋಣ.

**1. ತೊಡಗಿಸಿಕೊಳ್ಳುವಿಕೆ:** ಕಲಿಕಾರ್ಥಿಗಳ ಪೂರ್ವಜ್ಞಾನವನ್ನು ಪ್ರಸ್ತುತ ಕಲಿಕೆಗೆ ಹೊಂದಿಸಲು ಯೋಜಿಸುವ ಚಟುವಟಿಕೆಗಳನ್ನು ತೊಡಗಿಸಿಕೊಳ್ಳುವಿಕೆಯ ಈ ಹಂತವು ಒಳಗೊಳ್ಳುತ್ತದೆ. ಈ ಹಂತದ ಪ್ರಕ್ರಿಯೆಗಳು ಹರ್ಬಾರ್ಟ್‌ನ ಪಂಚಸೋಪಾನದ 'ಪೀಠಿಕಾ ಚಟುವಟಿಕೆ'ಗಳಂತೆಯೇ ಇರುತ್ತವೆ. ಆಲಿಸುವಿಕೆ, ಮಾತುಗಾರಿಕೆ, ಓದುಗಾರಿಕೆ, ಬರೆವಣಿಗೆ, ಅವಲೋಕಿಸುವಿಕೆ, ಕಾರ್ಯನಿರ್ವಹಣೆ, ಅಂತರ್‌ಕ್ರಿಯೆ, ಅಭ್ಯಾಸ, ಪ್ರಯೋಗ ಕೈಗೊಳ್ಳುವುದು, ರಚಿಸುವಿಕೆ ಇತ್ಯಾದಿ ಚಟುವಟಿಕೆಗಳನ್ನು ಈ ಹಂತದಲ್ಲಿ ಅಳವಡಿಸಿಕೊಳ್ಳಬಹುದಾಗಿದೆ.

**‘5 ಇ ಪಾಠಯೋಜನೆ’**

ವಿಷಯ: ಕನ್ನಡ

ಪಾಠ: **“_____________”**

ಒಂದು ನಿರ್ದಿಷ್ಟ ಪಾಠಕ್ಕೆ ಯೋಜಿಸಿಕೊಳ್ಳಬಹುದಾದ ಅಂಶಗಳನ್ನು ಕೆಳಗೆ ಸೂಚಿಸಲಾಗಿದೆ. ಇವು ಉದಾಹರಣೆಗಳಷ್ಟೇ. ಈ ಶೀರ್ಷಿಕೆಗಳ ಅಡಿಯಲ್ಲಿ ಸೂಕ್ತ ಅಂಶಗಳನ್ನು ಯೋಜಿಸಿಕೊಳ್ಳಬೇಕು.

| **ಹಂತ 1: ತೊಡಗಿಸಿಕೊಳ್ಳುವ ಚಟುವಟಿಕೆ(Engage)** | | | |
|---|---|---|---|
| **ಉದ್ದೇಶಿತ ಸಾಮರ್ಥ್ಯಗಳು** | **ಬೋಧನೆ–ಕಲಿಕೆಯ ಚಟುವಟಿಕೆಗಳು** | **ಕಲಿಕೆಗೆ ತಂತ್ರಗಳು** | **ಕಲಿಕಾ ಉಪಕರಣಗಳು** |
| **ಆಲಿಸುವಿಕೆ** | **ಉದಾಹರಣೆ: ಅಧ್ಯಾಪಕರಿಂದ ನಿರೂಪಣೆ** | **ಕಥಾ ನಿರೂಪಣೆ** | **ಕತೆಯನ್ನು ಬಿಂಬಿಸುವ ಚಿತ್ರಗಳು** |

**2. ಅನ್ವೇಷಿಸುವಿಕೆ:** ವಿದ್ಯಾರ್ಥಿಗಳು ಕಲಿಯಬೇಕಾದ ಅಂಶವನ್ನು ಅವರೇ ಪತ್ತೆಹಚ್ಚಲು ಅವಕಾಶ ನೀಡುವ ಚಟುವಟಿಕೆಯನ್ನು ‘ಅನ್ವೇಷಿಸುವಿಕೆ’ಯ ಚಟುವಟಿಕೆ ಒಳಗೊಳ್ಳುತ್ತದೆ. ಅನ್ವೇಷಿಸುವಿಕೆಯಲ್ಲಿ ಬಳಸಬಹುದಾದ ಚಟುವಟಿಕೆಗಳೆಂದರೆ, ಆಲಿಸುವಿಕೆ, ಸಮೂಹಚರ್ಚೆ, ಅರ್ಥಗ್ರಹಿಕೆಯೊಂದಿಗಿನ ವಾಚನ, ಉತ್ತರ ಬರೆಯುವುದು, ಅವಲೋಕಿಸುವಿಕೆ, ಕಾರ್ಯ ನಿರ್ವಹಣೆ, ಅಂತರ್‌ಕ್ರಿಯೆ, ಅಭ್ಯಾಸ, ಪ್ರಯೋಗ ಕೈಗೊಳ್ಳುವುದು, ರಚಿಸುವಿಕೆ, ಪ್ರಶ್ನಿಸುವಿಕೆ, ಸಮಸ್ಯಾ ಪರಿಹಾರ, ಸೃಜಿಸುವಿಕೆ, ಸಂಘಟಿಸುವಿಕೆ ಇತ್ಯಾದಿ.

ಈ ಹಂತದ ಚಟುವಟಿಕೆಗಳಿಗೆ ಮಾದರಿ ಯೋಜನೆ ಈ ಕೆಳಗಿನಂತಿದೆ.

| **ಪಾಠ/ ಉಪಘಟಕ** | **ಉದ್ದೇಶಿತ ಸಾಮರ್ಥ್ಯಗಳು** | **ಉದ್ದೇಶಿತ ಸಾಹಿತ್ಯ/ಭಾಷಾಂಶಗಳು** | **ಬೋಧನೆ–ಕಲಿಕೆಯ ಚಟುವಟಿಕೆಗಳು** | **ಬೋಧನಾ ಕಲಿಕಾ ಉಪಕರಣಗಳು** |
|---|---|---|---|---|
| ------------ | **ಅರ್ಥಗ್ರಹಣದೊಂದಿಗೆ ಗ್ರಹಿಕೆ<br>ಓದುಗಾರಿಕೆ<br>ಆಲಿಸುವಿಕೆ<br>ಬರೆವಣಿಗೆ** | **ಲೇಖಕರು ವಿವರಿಸಿರುವ ---- ಅಂಶಗಳನ್ನು ಅಧ್ಯಾಪಕರ ಮಾರ್ಗದರ್ಶನದ ಸಹಾಯದಿಂದ ಗುರುತಿಸುವುದು/ ಪಾಠಕ್ಕೆ ಸಂಬಂಧಿಸಿದ ಭಾಷಾಂಶ, ಸಾಹಿತ್ಯಾಂಶ ಮತ್ತು ವ್ಯಾಕರಣಾಂಶಗಳನ್ನು ಅರಿತುಕೊಳ್ಳುವುದು.** | **ಗಟ್ಟಿಯಾಗಿ ಓದುವರು<br>ಮೌನವಾಗಿ ಓದುವರು<br>ನಿಘಂಟು ನೋಡಿ ಉತ್ತರಿಸುವರು.** | **ನಿಘಂಟು<br>ಚಿತ್ರಗಳು<br>ಪತ್ರ<br>ಕಾರ್ಯತಖ್ತೆ<br>ಇತ್ಯಾದಿ.** |

**3. ವಿವರಿಸುವಿಕೆ:** ವಿದ್ಯಾರ್ಥಿಗಳು ಅನ್ವೇಷಿಸಿದ ಅಂಶವನ್ನು ತಾವೇ ವಿವರಣೆ ಒದಗಿಸಲು ಅವಕಾಶ ಕಲ್ಪಿಸುವ ಹಂತ ಇದಾಗಿದೆ. ಈ ವಿವರಣೆಯಲ್ಲಿ ವಿವರಣೆ, ಪ್ರಸ್ತುತಿ, ಹೋಲಿಕೆ, ವ್ಯತ್ಯಾಸ, ಉದಾಹರಿಸುವಿಕೆ, ವ್ಯಾಖ್ಯಾನಿಸುವಿಕೆ, ಅಂತರ್‌ಕ್ರಿಯೆ, ಪ್ರಯೋಗ ಕೈಗೊಳ್ಳುವುದು, ರಚಿಸುವಿಕೆ, ವರ್ಣಿಸುವಿಕೆ, ಪ್ರಾತ್ಯಕ್ಷಿಕರಿಸುವಿಕೆ, ಪಟ್ಟಿಮಾಡುವಿಕೆ, ಅನುಕ್ರಮಗೊಳಿಸುವಿಕೆ ಇತ್ಯಾದಿ ಚಟುವಟಿಕೆಗಳಲ್ಲಿ ಸ್ವತಃ ವಿದ್ಯಾರ್ಥಿಗಳೇ ಪಾಲ್ಗೊಳ್ಳುವರು.

| ಪಾಠ/ ಉಪಘಟಕ | ಉದ್ದೇಶಿತ ಸಾಮರ್ಥ್ಯಗಳು | ಉದ್ದೇಶಿತ ಸಾಹಿತ್ಯ/ಭಾಷಾಂಶಗಳು | ಬೋಧನೆ–ಕಲಿಕೆಯ ಚಟುವಟಿಕೆಗಳು | ಬೋಧನಾ ಕಲಿಕಾ ಉಪಕರಣಗಳು |
|---|---|---|---|---|
| --------- | • ಅರ್ಥಗ್ರಹಣದೊಂದಿಗೆ ಗ್ರಹಿಕೆ<br>• ಓದುಗಾರಿಕೆ<br>• ಆಲಿಸುವಿಕೆ<br>• ಬರೆವಣಿಗೆ | • ಪಾಠಭಾಗದ ವಿಷಯಗ್ರಹಣ, ಅಭಿವ್ಯಕ್ತಿ, ವರ್ಣನೆ, ದೃಷ್ಟಾಂತ, ಉದಾಹರಣೆಗಳ ವಿವರಣೆ, ವಿಶೇಷ ಭಾಷಾಂಶ(ಗಾದೆ, ಪಡೆನುಡಿಗಳು), ವ್ಯಾಕರಣಾಂಶಗಳು(ಸಂಧಿ,ಸಮಾಸ ಇತ್ಯಾದಿ) ಮತ್ತು ಸಾಹಿತ್ಯಾಂಶಗಳನ್ನು ವಿಸ್ತರಿಸಿ ಹೇಳುವುದು/ ಬರೆವಣಿಗೆಯಲ್ಲಿ ವ್ಯಕ್ತಪಡಿಸುವುದು. | • ಗಟ್ಟಿಯಾಗಿ ಓದುವರು<br>• ಮೌನವಾಗಿ ಓದುವರು<br>• ಅಭಿನಯಿಸುವರು<br>• ನಿಘಂಟು ನೋಡಿ ಉತ್ತರಿಸುವರು<br>• ಪಟ್ಟಿ ಮಾಡುವರು<br>• ಮುಖ್ಯಾಂಶಗಳನ್ನು ತಮ್ಮದೇ ಮಾತುಗಳಲ್ಲಿ ಹಿಗ್ಗಿಸಿ ಹೇಳುವರು<br>• ಮೆಚ್ಚಿಕೊಂಡ ಅಂಶಗಳಿಗೆ ಕಾರಣ ನೀಡುವರು | • ನಿಘಂಟು<br>• ಚಿತ್ರಗಳು<br>• ಪಠ್ಯ<br>• ಕಾರ್ಯತಖ್ತೆ<br>• ವಿಷಯ ಪರಿಕಲ್ಪನೆಗಳ ಸ್ಪಷ್ಟೀಕರಣಕ್ಕೆ ಚಾರ್ಟುಗಳು ಇತ್ಯಾದಿ |

**4. ವಿಸ್ತರಿಸುವಿಕೆ:** ಕಲಿತ ಅಂಶಗಳನ್ನು ವಿಸ್ತರಿಸಿಕೊಳ್ಳಲು ವಿದ್ಯಾರ್ಥಿಗೆ ಅವಕಾಶ ನೀಡುವ ಚಟುವಟಿಕೆಗಳೇ 'ವಿಸ್ತರಣಾ ಚಟುವಟಿಕೆಗಳು'. ಹೆಚ್ಚುವರಿ ವಿಷಯಗಳ ಸಂಗ್ರಹಣೆ, ವಿಸ್ತರಣಾ ಬರಹ, ಸಂಕ್ಷೇಪಣಾ ಬರಹ, ವಿಸ್ತರಣಾ ಓದು, ಆಳವಾಚನ, ಅಭ್ಯಸಿಸುವಿಕೆ, ಪುನರಾವಲೋಕನ, ಅನ್ವಯಿಸುವಿಕೆ, ಕೌಶಲ ನಿರ್ವಹಣೆ, ವರ್ಣಿಸುವಿಕೆ, ಅನುಕ್ರಮಗೊಳಿಸುವಿಕೆ, ರಚಿಸುವಿಕೆ, ಪ್ರಶಂಸಿಸುವಿಕೆ ಇತ್ಯಾದಿ ಚಟುವಟಿಕೆಗಳನ್ನು ಈ ಹಂತದಲ್ಲಿ ನಿರ್ವಹಿಸಬಹುದಾಗಿದೆ.

ಈ ಹಂತದ ಚಟುವಟಿಕೆಗಳಿಗೆ ಮಾದರಿ ಯೋಜನೆ ಗಮನಿಸಿ:

| ಪಾಠ/ ಉಪಘಟಕ | ಉದ್ದೇಶಿತ ಸಾಮರ್ಥ್ಯಗಳು | ಉದ್ದೇಶಿತ ಸಾಹಿತ್ಯ/ಭಾಷಾಂಶಗಳು | ಬೋಧನೆ–ಕಲಿಕೆಯ ಚಟುವಟಿಕೆಗಳು | ಬೋಧನಾ ಕಲಿಕಾ ಉಪಕರಣಗಳು |
|---|---|---|---|---|
| --------- | • ಅರ್ಥಗ್ರಹಣದೊಂದಿಗೆ ಗ್ರಹಿಕೆ,<br>• ಓದುಗಾರಿಕೆ,<br>• ಆಲಿಸುವಿಕೆ,<br>• ಬರೆವಣಿಗೆ,<br>• ವಿಷಯ ವಿಸ್ತರಣಾ ಸಾಮರ್ಥ್ಯ: ಮೌಖಿಕ, ಲಿಖಿತ | • ವ್ಯಾಕರಣಾಂಶಗಳನ್ನು ಗುರುತಿಸಿ ವಿವರಿಸುವರು, ಹೆಚ್ಚಿನ ಉದಾಹರಣೆಗಳನ್ನು ನೀಡುವರು, ದಿನನಿತ್ಯದ ಪ್ರಯೋಗದಲ್ಲಿ ಕಲಿತ ವ್ಯಾಕರಣಾಂಶಗಳನ್ನು ಭಾಷಾಂಶಗಳನ್ನು ಗುರುತಿಸುವರು.<br>• ಇತರ ಕೃತಿಗಳಲ್ಲಿ ಈ | • ಗಟ್ಟಿಯಾಗಿ ಓದುವರು<br>• ಮೌನವಾಗಿ ಓದುವರು<br>• ಅಭಿನಯಿಸುವರು<br>• ನಿಘಂಟು ನೋಡಿ ಉತ್ತರಿಸುವರು<br>• ಪಟ್ಟಿ ಮಾಡುವರು<br>• ಮುಖ್ಯಾಂಶಗಳನ್ನು | • ನಿಘಂಟು<br>• ಚಿತ್ರಗಳು<br>• ಪಠ್ಯ<br>• ಕಾರ್ಯತಖ್ತೆ<br>• ವಿಷಯ ಪರಿಕಲ್ಪನೆಗಳ ಸ್ಪಷ್ಟೀಕರಣಕ್ಕೆ ಚಾರ್ಟುಗಳು ಇತ್ಯಾದಿ<br>• ಪಠ್ಯ ವಿಷಯಕ್ಕೆ |

| | | | | |
|---|---|---|---|---|
| | | **ಸನ್ನಿವೇಶಗಳು ನಿರೂಪಣೆಗೊಂಡಿರುವುದನ್ನು ಸ್ಮರಿಸಿ ಹೋಲಿಸುವರು (ಉದಾಹರಣೆಗೆ, 'ಬೆಳಗು' ಪದ್ಯವನ್ನು ಕಲಿಯುವಾಗ ಬೆಳಗಿನ ಜಾವವನ್ನು ವರ್ಣಿಸಿರುವ ಇತರ ಪದ್ಯಗಳೊಂದಿಗೆ ಹೋಲಿಕೆ, ವ್ಯತ್ಯಾಸ)** | **ತಮ್ಮದೇ ಮಾತುಗಳಲ್ಲಿ ಹಿಗ್ಗಿಸಿ ಹೇಳುವರು<br>•ಮೆಚ್ಚಿಕೊಂಡ ಅಂಶಗಳಿಗೆ ಕಾರಣ ನೀಡುವರು** | **ಸಂಬಂಧಿಸಿದ ಇತರ ಲೇಖಕರ/ ಕವಿಗಳ ಪದ್ಯಗಳು** |

5. **ಮೌಲ್ಯಮಾಪನ ಮಾಡುವುದು:** ಭಾಷೆಗೆ ಸಂಬಂಧಿಸಿದಂತೆ ಈ ಹಂತ ಬಹಳ ಪ್ರಮುಖವಾಗುತ್ತದೆ. ವಿದ್ಯಾರ್ಥಿಗಳಲ್ಲಿ ಒಂದು ವಿಷಯವನ್ನು ಕುರಿತಂತೆ ಮಾಪನಮಾಡುವ ಸಾಮರ್ಥ್ಯವನ್ನು ಬೆಳೆಸುವುದು ಇಲ್ಲಿನ ಉದ್ದೇಶ. ಇದನ್ನು ಹಲವಾರು ರೀತಿಗಳಲ್ಲಿ ಮಾಡಬಹುದು. ಸಾಹಿತ್ಯದಲ್ಲಿ ರಸಾಸ್ವಾದನೆಯೇ ಒಂದು ಪ್ರಮುಖ ಉದ್ದೇಶವಾದುದರಿಂದ ವಿದ್ಯಾರ್ಥಿಗಳು ತಾವು ಓದಿದ, ಕಲಿತ ಸಾಹಿತ್ಯದ ಭಾಗಗಳನ್ನು ಎಷ್ಟು ಅನುಭವಿಸಿದ್ದಾರೆ, ಅದಕ್ಕೆ ಅವರು ಎಷ್ಟು ಸ್ಪಂದಿಸಿದ್ದಾರೆ ಎಂಬುದನ್ನು ತಿಳಿದುಕೊಳ್ಳುವುದೂ ಮುಖ್ಯವಾಗುತ್ತದೆ. ಸಾಹಿತ್ಯವನ್ನು ಕುರಿತಂತೆ ವಿದ್ಯಾರ್ಥಿಗಳ ತನ್ಮಯತೆಯ ಅರಿವು ಇದರಿಂದ ಅಧ್ಯಾಪಕರಿಗೆ ಆಗಲು ಸಾಧ್ಯವಿದೆ. ಇದನ್ನು ವಿವಿಧ ರೀತಿಗಳಲ್ಲಿ ಕೈಗೊಳ್ಳಬಹುದು.

ಅಧ್ಯಾಪಕರೇ ಆಯಾ ಪಾಠದಲ್ಲಿ ಗಮನಿಸಿಕೊಳ್ಳಬೇಕಾದ ಅಂಶಗಳನ್ನು 'ತಪಶೀಲು ಪಟ್ಟಿ' ಯ ರೂಪದಲ್ಲಿ ನೀಡಿ ಅವು ಪ್ರಸ್ತುತ ಗದ್ಯ/ಪದ್ಯ ಭಾಗದಲ್ಲಿ ಎಷ್ಟರಮಟ್ಟಿಗೆ ಮೂಡಿಬಂದಿವೆ ಎಂದು ಕೇಳಬಹುದು. ಕೆಳಗಿನ ಉದಾಹರಣೆಯನ್ನು ಗಮನಿಸಿ:

**ಕೆಳಗಿನ ಅಂಶಗಳಿಗೆ ಸಂಬಂಧಿಸಿದಂತೆ '------' ಗದ್ಯಭಾಗವನ್ನು ಪರಿಶೀಲಿಸಿ ನಿಮ್ಮ ಅನುಭವಕ್ಕೆ ಬಂದ ಅಂಶಗಳನ್ನು ಕೊನೆಯ ಕಾಲಂನಲ್ಲಿ ಬರೆಯಿರಿ.**

| | | | | |
|---|---|---|---|---|
| ವಸ್ತು | ಅತಿಹೆಚ್ಚು ಆಕರ್ಷಕವಾಗಿದೆ | ಆಕರ್ಷಕವಾಗಿದೆ | ಅಷ್ಟೇನೂ ಆಕರ್ಷಕವಾಗಿಲ್ಲ | ಆಕರ್ಷಕವಾಗಿಲ್ಲ |
| ಭಾಷೆ | ಅತಿ ಸರಳವಾಗಿದೆ | ಸರಳವಾಗಿದೆ | ಅಷ್ಟೇನೂ ಸರಳವಾಗಿಲ್ಲ | ಕಠಿಣವಾಗಿದೆ |
| ವಿವರಣೆ | ಮನಮುಟ್ಟುವಂತಿದೆ | ಸ್ಪಷ್ಟವಾಗಿದೆ | ಅರ್ಥವಾಗಲು ಸ್ವಲ್ಪ ಕಷ್ಟಕರವಾಗಿದೆ | ಬೇಸರ ತರಿಸುತ್ತದೆ |
| ವಿವರಣೆ | ಅತಿ ನಿರರ್ಗಳವಾಗಿದೆ | ನಿರರ್ಗಳವಾಗಿದೆ | ಅಷ್ಟೇನೂ ನಿರರ್ಗಳವಾಗಿಲ್ಲ | ವಿವರಣೆಯಲ್ಲಿ ತಡೆಯಿದೆ. ವಿಷಯ ಎಲ್ಲಿಂದ ಎಲ್ಲಿಗೋ ಹೋಗುತ್ತದೆ. |
| ವಿಷಯ | ಉಪಯುಕ್ತವೂ ಆಕರ್ಷಕವೂ ಆಗಿದೆ | ಉಪಯುಕ್ತವಾಗಿದೆ | ಸ್ವಲ್ಪಮಟ್ಟಿಗೆ ಉಪಯುಕ್ತ, ಆಕರ್ಷಕವಿಲ್ಲ | ಉಪಯುಕ್ತವೂ ಇಲ್ಲ; ಆಕರ್ಷಕವೂ ಅಲ್ಲ. |

ಇವಿಷ್ಟೇ ಅಲ್ಲ. ಹೀಗೆ ಅಗತ್ಯವಾದ ಅಂಶಗಳನ್ನು ನೀಡಿ ವಿದ್ಯಾರ್ಥಿಗಳ ಅನುಭವ ಅಭಿಪ್ರಾಯಕ್ಕೆ ಅನುಗುಣವಾಗಿ ಗುರುತಿಸಲು ಹೇಳಬಹುದು.
ಇದರ ಮುಂದಿನ ಭಾಗವಾಗಿ 'ಈ ಮೇಲಿನ ಅಂಶಗಳ ಆಧಾರದ ಮೇಲೆ ನಿಮಗೆ -------- ಗದ್ಯ/ಪದ್ಯ ಭಾಗ ಮೆಚ್ಚುಗೆಯಾಯಿತೇ ಇಲ್ಲವೇ ಎಂಬುದನ್ನು ಕುರಿತು ಒಂದು ವಾಕ್ಯವೃಂದ ಬರೆಯಿರಿ' ಎಂದೂ ಹೇಳಬಹುದು.

ಇಲ್ಲವೇ ಮುಖ್ಯಾಂಶಗಳನ್ನು ಗುರುತಿಸಿ ಅವರೇ ಮೌಲ್ಯಮಾಪನದ ಅಂಶಗಳನ್ನು ಬರೆಯಲು ಹೇಳಬಹುದು.
ಗದ್ಯ/ಪದ್ಯಭಾಗ: ___________

| ಗದ್ಯಭಾಗದಲ್ಲಿ ಗಮನಿಸಬೇಕಾದ ಅಂಶಗಳು | ಮೆಚ್ಚುಗೆಯಾಯಿತು | ಮೆಚ್ಚುಗೆಯಾಗಲಿಲ್ಲ | ಕಾರಣ |
|---|---|---|---|
| ವಸ್ತು | | | |
| ಭಾಷೆ | | | |
| ವಿವರಣೆ | | | |
| ಪ್ರಸ್ತುತಿ | | | |
| ದೃಷ್ಟಾಂತಗಳು | | | |
| ಭಾಷೆಯ ಬಳಕೆ | | | |
| ನಿರರ್ಗಳತೆ | | | |
| ಸರಳತೆ | | | |
| ಇದೇ ರೀತಿಯ ಇತರ ಗದ್ಯಗಳಿಗೆ ಹೋಲಿಸಿದಾಗ | | | |
| ಹೆಚ್ಚಿನ ಆಲೋಚನೆಗೆ ಒಡ್ಡುತ್ತದೆ | | | |

ಇಲ್ಲಿಯೇ ವಿದ್ಯಾರ್ಥಿಗಳು ಕಲಿಕೆಯನ್ನು ಕಟ್ಟಿಕೊಂಡ ಪ್ರಕ್ರಿಯೆಯನ್ನೂ ಅದರ ಪರಿಣಾಮವಾದ ಕಲಿಕೆಯನ್ನೂ ಮಾಪನಮಾಡಬೇಕು.

ಈ ಮಾಪನ ಪ್ರಕ್ರಿಯೆ ಅಧ್ಯಾಪಕರಿಂದ ಇಲ್ಲವೇ ವಿದ್ಯಾರ್ಥಿಗಳಿಂದ ನಡೆಯಬಹುದು.

ಏನನ್ನು ಮತ್ತು ಹೇಗೆ ಮಾಪನ ಮಾಡಬೇಕು ಎಂಬುದು ಅಧ್ಯಾಪಕ ಮತ್ತು ವಿದ್ಯಾರ್ಥಿಗಳಿಬ್ಬರಿಗೂ ಕಲಿಕೆಯ ಪ್ರಕ್ರಿಯೆ ಆರಂಭವಾಗುವ ಮೊದಲೇ ಸ್ಪಷ್ಟವಿರಬೇಕು.

5 'ಇ' ಆಧಾರಿತ ಪಾಠಯೋಜನೆಯ ಪ್ರಾಮುಖ್ಯತೆಯನ್ನು ಹೀಗೆ ಗುರುತಿಸಬಹುದಾಗಿದೆ:

- ವಿದ್ಯಾರ್ಥಿಕೇಂದ್ರಿತ ಪಾಠಯೋಜನಾ ನಮೂನೆಯಾಗಿದೆ;
- ಅನುಭವಾತ್ಮಕ ಕಲಿಕೆಗೆ ನೆಲೆ ಒದಗಿಸುತ್ತದೆ;
- ಬೋಧನಾ ತಂತ್ರ, ಸಾಧನ, ಚಟುವಟಿಕೆಗಳನ್ನು ಯೋಜಿತವಾಗಿ ಒದಗಿಸಿಕೊಡುತ್ತದೆ;
- ಅನ್ವೇಷಣಾ ಕಲಿಕೆಗೆ ನೆಲೆಯಾಗಿದೆ;
- ಕಲಿತ ಜ್ಞಾನದ ವಿಸ್ತರಣೆಗೆ ನೆಲೆ ಒದಗಿಸುತ್ತದೆ;
- ಸ್ವಯಂ ಮೌಲ್ಯಮಾಪನಕ್ಕೆ ಅವಕಾಶ ಕಲ್ಪಿಸುತ್ತದೆ;
- ಸ್ಥಿರ ಕಲಿಕೆಗೆ ನೆಲೆ ಒದಗಿಸುತ್ತದೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

- ಆಯ್ದ ಭಾಷಾ ಪಾಠವೊಂದಕ್ಕೆ ಹರ್ಬಾರ್ಟ್ ಪಂಚ ಸೋಪಾನ ಆಧರಿಸಿ, ಪಾಠಯೋಜನೆ ತಯಾರಿಸಿ.
- ಆಯ್ದ ಭಾಷಾ ಪಠ್ಯವೊಂದಕ್ಕೆ 5 'ಇ' ಆಧರಿಸಿ, ಪಾಠಯೋಜನೆ ತಯಾರಿಸಿ.
- ಆಯ್ದ ಭಾಷಾ ಪಠ್ಯವೊಂದಕ್ಕೆ, ಪಠ್ಯ ವಿಶ್ಲೇಷಣಾ ಯೋಜನೆಯನ್ನು ತಯಾರಿಸಿ.
- ಆಯ್ದ ಭಾಷಾ ಪಠ್ಯವೊಂದಕ್ಕೆ ಸಂಜ್ಞಾನಾತ್ಮಕ ನಕ್ಷೆಯನ್ನು ತಯಾರಿಸಿ.
- ಆಯ್ದ ಭಾಷಾ ಪಠ್ಯವೊಂದಕ್ಕೆ ಉದ್ದೇಶ ಆಧಾರಿತ ಕಲಿಕಾ ಅನುಭವಗಳು ಹಾಗೂ ಮೌಲ್ಯಮಾಪನವನ್ನು ಹೊಂದಿಸಿದ ಯೋಜನೆ ತಯಾರಿಸಿ.

**4.1.3.3. ಪಾಠ ಯೋಜನೆಯಲ್ಲಿ ಪಠ್ಯ ವಿಶ್ಲೇಷಣೆ**

ಬೋಧನೆಗೆ ಯೋಜನೆ ಪ್ರಮುಖ ಆಧಾರವಾಗಿದ್ದು, ಯೋಜನೆ ಬೋಧನೆಯನ್ನು ವ್ಯವಸ್ಥಿತಗೊಳಿಸುತ್ತದೆ. ಭಾಷಾ ಬೋಧನೆಯನ್ನು ನಿರ್ವಹಿಸುವ ಸಂದರ್ಭದಲ್ಲಿಯೂ ಯೋಜನೆ ಪ್ರಮುಖ ಪಾತ್ರ ವಹಿಸುತ್ತದೆ. ಭಾಷಾ ಪಾಠ ಯೋಜನೆಯನ್ನು ನೆರವೇರಿಸುವ ಸಂದರ್ಭದಲ್ಲಿ ಉದ್ದೇಶ ನಿರೂಪಣೆ, ಪಠ್ಯ ವಿಶ್ಲೇಷಣೆ, ಕಲಿಕಾ ಅನುಭವಗಳನ್ನು ಜೋಡಿಸುವ ಉಪಪ್ರಕ್ರಿಯೆಯನ್ನು ಯೋಜಿಸಬೇಕಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಪಠ್ಯ ವಿಶ್ಲೇಷಣೆ ಪ್ರಮುಖವಾಗುತ್ತದೆ.

**ಪಾಠ ಯೋಜನೆಯಲ್ಲಿ ಪಠ್ಯ ವಿಶ್ಲೇಷಣೆಯ ಅರ್ಥ:**

ಭಾಷಾ ಬೋಧನೆ / ಕಲಿಕೆಗಾಗಿ ಆರಿಸಿದ ಪಠ್ಯವನ್ನು ಪ್ರಧಾನ ಹಾಗೂ ಉಪಪರಿಕಲ್ಪನೆಯನ್ನು ವಿಶ್ಲೇಷಿಸುವ ಪ್ರಕ್ರಿಯೆಯನ್ನು 'ಪಾಠಯೋಜನೆಯಲ್ಲಿ ಪಠ್ಯ ವಿಶ್ಲೇಷಣೆ' ಎನ್ನುವರು.

**ಪಾಠ ಯೋಜನೆಯಲ್ಲಿ ಪಠ್ಯ ವಿಶ್ಲೇಷಣೆಯ ಕ್ರಮ:**

**1. ಪಾಠ ಯೋಜನೆಗಾಗಿ ಘಟಕವನ್ನು ಆರಿಸಿಕೊಳ್ಳುವುದು.**

'ಘಟಕ'ವು ಪರಸ್ಪರ ಅಂತರಿಕ ಸಂಬಂಧವುಳ್ಳ ವಸ್ತು, ಅನುಭವವಗಳ, ಚಟುವಟಿಕೆಗಳ ಅರ್ಥಪೂರ್ಣ ಸಂಘಟನೆಯಾಗಿದ್ದು, ಬೋಧನಾ / ಕಲಿಕಾ ಪ್ರಕ್ರಿಯೆಗೆ ಆರಿಸಿಕೊಳ್ಳಲಾಗುವುದು. ಭಾಷಾ ಬೋಧನೆಗೆ ಭಾಷಾ ಪಠ್ಯಪುಸ್ತಕದಲ್ಲಿರುವ ಯಾವುದೇ ಗದ್ಯ, ಪದ್ಯ, ವ್ಯಾಕರಣ, ಛಂದೋಭಾಗವನ್ನು ಆರಿಸಲಾಗುತ್ತದೆ. ಉದಾಹರಣೆಗೆ, 8ನೇ ತರಗತಿಯ ಗದ್ಯಭಾಗ 'ತಲಕಾಡಿನ ವೈಭವ'.

**2. ಬೋಧನೆಗೆ ಆರಿಸಿದ ಘಟಕವನ್ನು ಉಪಘಟಕಗಳಾಗಿ ವಿಶ್ಲೇಷಿಸುವುದು.**

ಬೋಧನೆಗಾಗಿ ಆರಿಸಿದ ಘಟಕವನ್ನು ಆಂತರಿಕವಾಗಿ, ಸಹಸಂಬಂಧವುಳ್ಳ ಘಟಕವಾಗಿ, ಅರ್ಥಪೂರ್ಣವಾಗಿ, ಯುಕ್ತ ಸಂಖ್ಯೆಯ ಉಪಘಟಕಗಳಾಗಿ ವಿಭಜಿಸಬೇಕಾಗುತ್ತದೆ. ಉದಾಹರಣೆಗೆ, ತಲಕಾಡಿನ ವೈಭವ ಘಟಕವನ್ನು ಕೆಳಕಂಡಂತೆ ಅರ್ಥಪೂರ್ಣ ಉಪಘಟಕಗಳಾಗಿ ವಿಶ್ಲೇಷಿಸಬಹುದಾಗಿದೆ.

1. ಕರುನಾಡ ಇತಿಹಾಸದಲ್ಲಿ ತಲಕಾಡು
2. ಕನ್ನಡ ಬಾವುಟ
3. ದೇಗುಲಗಳ ಬೀಡು ತಲಕಾಡು
4. ಯುರೇಕಾ
5. ಹೊಯ್‌ಸಳ
6. ಬದುಕು ನಯವಾಗಿಸುವ ದೇವಾಲಯ

**3. ಈ ಉಪಘಟಕಗಳು ಭಾಷಾ ಬೋಧನೆಯಲ್ಲಿ ಪಾಠ ಯೋಜನೆಯ ಪಾಠಗಳಾಗಿ ರೂಪುಗೊಳ್ಳುತ್ತದೆ.**

ಘಟಕದಿಂದ ವಿಭಜಿತಗೊಂಡ ಉಪಘಟಕಗಳು 40 / 45 ನಿಮಿಷಗಳ ಬೋಧನೆಗಾಗಿ ತರಗತಿ ಪಾಠಗಳಾಗಿ ರೂಪುಗೊಳ್ಳುತ್ತವೆ. ಉದಾಹರಣೆಗೆ 'ಕರುನಾಡ ಇತಿಹಾಸದಲ್ಲಿ ತಲಕಾಡು' ಉಪಘಟಕ, 'ತಲಕಾಡು ವೈಭವ' ಘಟಕದ ಮೊದಲ ದಿನದ ಬೋಧನೆಗಾಗಿ ರೂಪುಗೊಳ್ಳುತ್ತದೆ.

**4. ಆಯ್ಕೆ ಮಾಡಿದ ಉಪಘಟಕಗಳಲ್ಲಿ ಪ್ರಧಾನ ಪರಿಕಲ್ಪನೆಗಳನ್ನು ಗುರುತಿಸುವುದು**

ಬೋಧನೆಗಾಗಿ ಆರಿಸಿದ ಉಪಘಟಕಗಳಲ್ಲಿ ಭಾಷಾಂಶ, ಸಾಹಿತ್ಯಾಂಶ, ವ್ಯಾಕರಣಾಂಶ, ಪದ್ಯವಾದರೆ ಛಂಧೋ ಅಂಶಗಳ ನೆಲೆಯಲ್ಲಿ ಪ್ರಧಾನ ಪರಿಕಲ್ಪನೆಗಳನ್ನು ಗುರುತಿಸುವುದು. ಉದಾಹರಣೆಗೆ, 8ನೇ ತರಗತಿಯ ಪಾಠ 'ತಲಕಾಡಿನ ವೈಭವ' ಘಟಕದಲ್ಲಿ ಮೊದಲ ಪಾಠವಾದ, 'ಕರುನಾಡ ಇತಿಹಾಸದಲಿ ತಲಕಾಡು' ಪಾಠದಲ್ಲಿ ಪ್ರಧಾನ ಪರಿಕಲ್ಪನೆಗಳನ್ನು ಹೀಗೆ ಗುರತಿಸಬಹುದಾಗಿದೆ.

| **ಪ್ರಧಾನ ಪರಿಕಲ್ಪನೆಗಳು** | | |
|---|---|---|
| ಭಾಷಾಂಶ | **ಸಾಹಿತ್ಯಾಂಶ** | **ವ್ಯಾಕರಣಾಂಶ** |
| ಪದಗಳ ಅರ್ಥ: ನಿಲ್ಮನೆ, ಉಜ್ವಲ, ಹೊಳಲು, ನಂದನವನ<br>ವಿರುದ್ಧಾರ್ಥಕ ಪದ: ದಿನ, ವಿಶ್ವಾಸ, ಏಳ್ಗೆ<br>ತತ್ಸಮ – ತದ್ಭವ: ರಕ್ಕಸ, ರಾಜ, ರನ್ನ | ನಿಲ್‌ಮನೆ ಪ್ರಸಂಗ<br>ತಲಕಾಡಿನ ಗಂಗರು<br>ಕಲಾಶ್ರೀ ವಿಹರಿಸುವ ನಂದನವನ | ಸಂಧಿ<br>ಸಂಧಿಯ ವಿಧಗಳು<br>ಲೋಪಸಂಧಿ |

**5. ಆಯ್ಕೆ ಮಾಡಿದ ಉಪಘಟಕಗಳಲ್ಲಿ ಪ್ರಧಾನ ಪರಿಕಲ್ಪನೆಗಳನ್ನು ಗುರುತಿಸುವುದು**

ಪ್ರಧಾನ ಪರಿಕಲ್ಪನೆಗಳನ್ನು ಉಪಪರಿಕಲ್ಪನೆ –ಮುಖ್ಯಾಂಶಗಳಾಗಿ ವಿಶ್ಲೇಷಿಸುವುದು.

ಪಾಠ ವಿಕಸನಕ್ಕೆ ಪೂರಕವಾಗಿ, ಪ್ರಧಾನ ಪರಿಕಲ್ಪನೆಗಳನ್ನು, ಉಪಪರಿಕಲ್ಪನೆಗಳನ್ನು ಮುಖ್ಯಾಂಶಗಳನ್ನಾಗಿ ವಿಭಜಿಸುವುದು ಇಲ್ಲಿನ ಪ್ರಕ್ರಿಯೆಯಾಗಿದೆ.

ಉದಾಹರಣೆಗೆ:
ಘಟಕ: ತಲಕಾಡಿನ ವೈಭವ, ಉಪಘಟಕ: ಕರುನಾಡ ಇತಿಹಾಸದಲ್ಲಿ ತಲಕಾಡು

**ಸಾಹಿತ್ಯಾಂಶ**

| **ಪ್ರಧಾನ ಪರಿಕಲ್ಪನೆಗಳು** | **ಉಪ ಪರಿಕಲ್ಪನೆಗಳು** | **ಮುಖ್ಯಾಂಶಗಳು** |
|---|---|---|
| ನಿಲ್ಮನೆ ಪ್ರಸಂಗ | ಪಯಣದ ದಿನ<br>ಸುಬ್ರಹ್ಮಣ್ಯಂ ಸ್ವಾಗತ | 1950 –ಅಕ್ಟೋಬರ್ 30 ನೇ ಮಂಗಳವಾರ – ಶಿವನ ಸಮುದ್ರದ ನಿಲ್ಮನೆ, ರಾತ್ರಿ 12.15 ಗೆಳೆಯರು, ಯಾತ್ರಿಕರು ನಿದ್ರೆ, ಪಯಣದ ವಿವರ.<br>ವಿಶ್ವಾಸದ ಸ್ವಾಗತ – ನಿಲ್ಮನೆ ಖಾಲಿ, ಹಾಸಿಗೆ, ಊಟ–ಉಪಚಾರ – ಗುಡ್ ನಾಯಿಟ್ –ವಿಶ್ವಾಸಕ್ಕೆ ಹೋಲಿಸಿದಾಗ ಸಣ್ಣವರು. |

| | | |
|---|---|---|
| ತಲಕಾಡಿನ ಗಂಗರು | ಕನ್ನಡವೇ ಬಾಳಿನ ಪರಿಪೂರ್ಣತೆ<br><br>ಗಂಗರ ಇತಿಹಾಸ | ಕನ್ನಡ ಸಾಹಿತ್ಯ ಕಥನ –ಹೊಯ್ಸಳ ವಾಸ್ತುಶಿಲ್ಪ – ಕನ್ನಡವೇ ಧರ್ಮ –ಜೈನಧರ್ಮದ ಇತಿಹಾಸ<br><br>ಗಂಗರಾಜ್ಯ –ಗಂಗವಾಡಿ, ಕ್ರಿಶ.500ರ ಹೊತ್ತು – ಹರಿವರ್ಮ ಕೋಲಾರದಿಂದ ತಲಕಾಡಿಗೆ ವರ್ಗಾಂತರ, 5 ಶತಮಾನಗಳವರೆವಿಗೆ ಗಂಗರ ಆಳ್ವಿಕೆ |
| ಕಲಾಶ್ರೀ ವಿಹರಿಸುವ ನಂದನವನ | ರಾಯ<br><br>ನಂದನವನ | ಮಾರಸಿಂಗ, ರಾಚಮಲ್ಲ, ರಕ್ಕಸಗಂಗರ ತಲಕಾಡು – ರಾಯ ಅಣ್ಣ, ಕವಿ, ಚಾವುಂಡರಾಯ ಪುರಾಣ (63 ಪುಣ್ಯ ಪುರುಷರು)<br><br>10ನೇ ಶತಮಾತನ – ಮುದುವೊಳಲಿನಿಂದ ತಲಕಾಡಿಗೆ – ರಾಯ, ಅತ್ತಿಮಬ್ಬೆ, ಅಜಿತಸೇನರ ಶಿಷ್ಯವೃಂದ |

**ಭಾಷಾಂಶ**

ಪದಗಳ ಅರ್ಥ:

ನಿಲ್ಮನೆ – ಪ್ರವಾಸಿಗರು ಉಳಿದುಕೊಳ್ಳುವ ಮನೆ, ಅತಿಥಿಗೃಹ

ಉಜ್ವಲ –ಶ್ರೇಷ್ಠ

ಹೊಳಲು –ಪಟ್ಟಣ

ನಂದನವನ– ದೇವೇಂದ್ರನ ಉಪವನ

**ವ್ಯಾಕರಣಾಂಶ**

**ಸಂಧಿ:** ಎರಡು ಅಕ್ಷರಗಳು ಕಾಲ ವಿಳಂಬವಿಲ್ಲದೇ, ಅರ್ಥಪೂರ್ಣವಾಗಿ ಸೇರುವುದನ್ನು 'ಸಂಧಿ' ಎನ್ನುವರು.

ಸಂಧಿಯ ವಿಧಗಳು:

ಸಂಧಿ

ಸಂಸ್ಕೃತ ಸಂಧಿ    ಕನ್ನಡ ಸಂಧಿ

**ಕನ್ನಡ ಸಂಧಿ:** ಸಂಧಿ ಕಾರ್ಯದಲ್ಲಿ ಪಾಲ್ಗೊಳ್ಳುವ ಪೂರ್ವೋತ್ತರ ಪದಗಳಲ್ಲಿ ಒಂದು ಪದ ಕನ್ನಡ ಪದವಾಗಿದ್ದಲ್ಲಿ ಅಂತಹ ಸಂಧಿಯನ್ನು 'ಕನ್ನಡ ಸಂಧಿ' ಎನ್ನುವರು.

ಕನ್ನಡ ಸಂಧಿಯ ಬಗೆಗಳು:

ಕನ್ನಡ ಸಂಧಿಗಳು

ಸ್ವರಸಂಧಿ    ವ್ಯಂಜನ ಸಂಧಿ

ಲೋಪಸಂಧಿ    ಆಗಮಸಂಧಿ    ಆದೇಶಸಂಧಿ

**ಲೋಪಸಂಧಿ:** ಸಂಧಿಕಾರ್ಯ ನಡೆಯುವ ಸಂದರ್ಭದಲ್ಲಿ, ಅರ್ಥಕೆಡದ ಪಕ್ಷದಲ್ಲಿ ಪೂರ್ವಪದದ ಕೊನೆಯ ಅಕ್ಷರ ಲೋಪವಾಗಿ, ಉಂಟಾಗುವ ಸಂಧಿಯನ್ನು 'ಲೋಪಸಂಧಿ' ಎನ್ನುವರು.

ಉದಾಹರಣೆಗೆ, ಬಿಡದೆ+ಇರೆ–ಬಿಡದಿರೆ('ಎ'ಕಾರ ಲೋಪ)

ಈ ಬಗೆಯಲ್ಲಿ ವಿಶ್ಲೇಷಿಸಿದ ಪಠ್ಯಕ್ಕೆ ಉದ್ದೇಶ, ಬೋಧನಾ / ಕಲಿಕಾ ಚಟುವಟಿಕೆಗಳನ್ನು ಸಂಯೋಜಿಸಲಾಗುತ್ತದೆ.

**ಪಠ್ಯ ವಿಶ್ಲೇಷಣೆ ನಿರ್ವಹಿಸುವ ಸಂದರ್ಭದಲ್ಲಿ ಗಮನಿಸಬೇಕಾದ ಅಂಶಗಳು:**

**1. ಯೋಜನೆಗಾಗಿ ಆರಿಸಿಕೊಳ್ಳಬೇಕಾದ ಪದ್ಯ ಅಥವಾ ಗದ್ಯ ಭಾಗವನ್ನು ನಿರ್ದಿಷ್ಟಪಡಿಸಿಕೊಳ್ಳುವುದು.**
ಉದಾಹರಣೆಗೆ ಯೋಜನೆಗಾಗಿ ಎಂಟನೇ ತರಗತಿಯ ಗದ್ಯಭಾಗ 'ಮಗ್ಗದ ಸಾಹೇಬ' ಪಠ್ಯವನ್ನು ಆರಿಸಿಕೊಳ್ಳಬಹುದಾಗಿದೆ.

**2. ಆರಿಸಿದ ಗದ್ಯ ಅಥವಾ ಪದ್ಯಭಾಗದ ಸಾಹಿತ್ಯ ಪ್ರಕಾರವನ್ನು ಗುರುತಿಸಬೇಕಾಗುತ್ತದೆ.**
ಗದ್ಯ ಸಾಹಿತ್ಯ ಪ್ರಕಾರ ಹಲವಿದ್ದು, ಸಣ್ಣಕತೆ, ನಟಕ, ಲಲಿತ ಪ್ರಬಂಧ, ವ್ಯಕ್ತಿಚಿತ್ರ ಮುಂತಾದವುಗಳನ್ನು ಕಾಣಬಹುದಾಗಿದೆ. ಅಂತೆಯೇ ಪದ್ಯ ಸಾಹಿತ್ಯದಲ್ಲಿಯೂ ಭಾವಗೀತೆ, ಜನಪದ, ಗೀತನಾಟಕದಂತಹ ಪ್ರಕಾರಗಳನ್ನು ಗುರುತಿಸಬಹುದಾಗಿದೆ. ಆರಿಸಿದ ಗದ್ಯ ಅಥವಾ ಪದ್ಯವು ಯಾವ ಪ್ರಕಾರದ್ದೆಂದು ಗುರುತಿಸಿಕೊಳ್ಳಬೇಕಾಗುತ್ತದೆ. ಉದಾಹರಣೆಗೆ, 'ಮಗ್ಗದ ಸಾಹೇಬ' ಸಣ್ಣಕತೆ ಪ್ರಕಾರದ್ದಾಗಿದ್ದು, ಇದ್ನನು ಪಠ್ಯ ವಿಶ್ಲೇಷಣೆಗೂ ಮುನ್ನ ಗುರುತಿಸಬೇಕು.

**3. ನಿರ್ದಿಷ್ಟ ಗದ್ಯ ಪ್ರಕಾರದ ಉಪವಿಧಗಳಲ್ಲಿ ಯಾವ ವಿಧವೆಂದು ಗುರುತಿಸಬೇಕಾಗುತ್ತದೆ.**
ನಿರ್ದಿಷ್ಟ ಗದ್ಯ ಪ್ರಕಾರವೂ ಕೂಡಾ ಹಲವು ಉಪವಿಧಗಳಿಂದ ಕೂಡಿದ್ದು, ಅವುಗಳಲ್ಲಿ ಯಾವ ಉಪಪ್ರಕಾರವೆಂದು ಗುರುತಿಸಿ, ವಿಶ್ಲೇಷಿಸಬೆಕು. ಉದಾಹರಣೆಗೆ ಸಣ್ಣಕತೆಯ ಪ್ರಕಾರಗಳಲ್ಲಿ ಮೂರು ವಿಧಗಳಿದ್ದು, ಘಟನೆ, ಪಾತ್ರ, ಆವರಣ ಪ್ರಧಾನವೆಂದು ವಿಂಗಡಿಸಬಹುದಾಗಿದೆ. ಈ ಉಪವಿಧಗಳಲ್ಲಿ ಆಯ್ಕೆ ಮಾಡಿದ ಸಣ್ಣಕತೆಯು ಯಾವ ಉಪಪ್ರಕಾರದ್ದೆಂದು ಗುರುತಿಸಬೇಕು. ಉದಾಹರಣೆಗೆ, 'ಮಗ್ಗದ ಸಾಹೇಬ' ಹೆಸರೇ ಸೂಚಿಸುವಂತೆ, 'ಪಾತ್ರ ಪ್ರಧಾನ' ಸಣ್ಣಕತೆ ಎನಿಸಿದೆ.

**4. ಸಾಹಿತ್ಯ ಪ್ರಕಾರದ ಸ್ವರೂಪವನ್ನು ಗುರುತಿಸಿಕೊಂಡು ವಿಶ್ಲೇಷಿಸಬೇಕು.**
ಯಾವುದೇ ಸಾಹಿತ್ಯ ಪ್ರಕಾರವೂ ತನ್ನದೇ ಆದ ವಿಶಿಷ್ಟ ಸ್ವರೂಪವನ್ನು ಹೊಂದಿರುತ್ತದೆ. ಅದಕ್ಕೆ ಹೊಂದಿಕೊಂಡಂತೆ, ಪಠ್ಯವಿಶ್ಲೇಷಣೆ ಜರುಗಬೇಕಾಗುತ್ತದೆ. ಉದಾಹರಣೆಗೆ, 'ಮಗ್ಗದ ಸಾಹೇಬ' ಸಣ್ಣಕತೆಯ ಪ್ರಕಾರದ್ದಾಗಿದ್ದು, ಪಾತ್ರಪ್ರಧಾನ ನೆಲೆಯಲ್ಲಿರುವ ಕಥಾಪ್ರಕಾರವಾಗಿದೆ. ಇದನ್ನು ಕೇಂದ್ರವಾಗಿರಿಸಿಕೊಂಡು ಪಠ್ಯವನ್ನು ವಿಶ್ಲೇಷಿಸಬೇಕು. ಪಾತ್ರದ ಪ್ರವೇಶಿಕೆ, ಪಾತ್ರಸೃಷ್ಟಿ ಹಾಗೂ ಪಾತ್ರ ವಿಸ್ತರಣೆಯ ಸ್ವರೂಪದ ನೆಲೆಯಲ್ಲಿ ಪಠ್ಯವನ್ನು ವಿಶ್ಲೇಷಿಸಬೇಕಾಗುತ್ತದೆ. ಕತೆಯ ಪ್ರಾರಂಭ, ಶಿಖರ, ಮುಕ್ತಾಯದ ಮಜಲುಗಳನ್ನು ಆಧರಿಸಿ, ಪಠ್ಯವಿಶ್ಲೇಷಣೆಯನ್ನು ಮಾಡಬೇಕಾಗುತ್ತದೆ.

**5. ಪಾಠ ಯೋಜನೆಗಾಗಿ ಆರಿಸಿದ ಗದ್ಯ ಅಥವಾ ಪದ್ಯ ಸಾಹಿತ್ಯದ ಘಟ್ಟಗಳನ್ನು ಗುರುತಿಸಿ, ಅದರ ಹಿನ್ನೆಲೆಯಲ್ಲಿ ವಿಶ್ಲೇಷಿಸಬೇಕು:**
ಹೊಸಗನ್ನಡ ಸಾಹಿತ್ಯದ ಪ್ರಮುಖ ಘಟ್ಟಗಳಾದ ನವೋದಯ, ನವ್ಯ, ಪ್ರಗತಿಶೀಲ, ದಲಿತ–ಬಂಡಾಯ ಇವುಗಳಲ್ಲಿ ಯೋಜಿಸಬೇಕಾದ ಪಠ್ಯ ಯಾವ ಘಟ್ಟಕ್ಕೆ ಸೇರುತ್ತದೆ ಎಂಬುದನ್ನು ಆಧರಿಸಿ, ಪಠ್ಯವಿಶ್ಲೇಷಣೆಯನ್ನು ಮಾಡಬೇಕಾಗುತ್ತದೆ. ಉದಾಹರಣೆಗೆ, 'ಭರವಸೆ' ಪದ್ಯಭಾಗವು ದಲಿತ–ಬಂಡಾಯ ಸಾಹಿತ್ಯದ ನೆಲೆಯಲ್ಲಿ ರೂಪುಗೊಂಡ ಪದ್ಯಭಾಗವಾಗಿದ್ದು, ಈ ಹಿನ್ನೆಲೆಯಲ್ಲಿಯೇ ಪಠ್ಯ ವಿಶ್ಲೇಷಣೆಯನ್ನು ನಡೆಸಬೇಕು.

**6. ಕನ್ನಡ ಭಾಷೆಯ ಸ್ವರೂಪವನ್ನುಆಧರಿಸಿ, ಪಠ್ಯ ವಿಶ್ಲೇಷಣೆಯನ್ನು ನಡೆಸಬೇಕು.**

ಪಠ್ಯವು ಹಳಗನ್ನಡ, ನಡುಗನ್ನಡ, ಹೊಸಗನ್ನಡ ಇವುಗಳಲ್ಲಿ ಯಾವ ಸ್ವರೂಪವನ್ನು ಹೊಂದಿದೆ ಎಂಬುದನ್ನು ಆಧರಿಸಿ, ವಿಶ್ಲೇಷಣಾ ಕಾರ್ಯವನ್ನು ಮಾಡಬೇಕು. ಉದಾಹರಣೆಗೆ 8ನೇ ತರಗತಿಯ ಪದ್ಯಭಾಗ, 'ವಾತ್ಸಲ್ಯ' ನಡುಗನ್ನಡ ಸಾಹಿತ್ಯ ಪ್ರಕಾರವಾಗಿದ್ದು, ಇದನ್ನು ಆಧರಿಸಿ, ಪಠ್ಯ ವಿಶ್ಲೇಷಣೆಯನ್ನು ಮಾಡಬೇಕು.

**7. ಪ್ರಧಾನ ಹಾಗೂ ಉಪಪರಿಕಲ್ಪನೆಗಳ ಭಾಷೆ, ಸಾಹಿತ್ಯ, ವ್ಯಾಕರಣಾಂಶಗಳ ನೆಲೆಗಟ್ಟಿನಲ್ಲಿ ಪಠ್ಯವನ್ನು ವಿಶ್ಲೇಷಿಸಬೇಕು.**

ಭಾಷೆ, ಸಾಹಿತ್ಯ, ವ್ಯಾಕರಣ ಭಾಷಾ ಕಲಿಕೆಯ ಮೂರು ಆಯಾಮಗಳಾಗಿವೆ. ಪಠ್ಯ ವಿಶ್ಲೇಷಣೆ ನಿರ್ವಹಿಸುವಾಗ ಈ ಮೂರೂ ಅಂಶಗಳ ನೆಲೆಗಟಿನಲ್ಲಿ ವಿಶ್ಲೇಷಿಸಬೇಕು.

ಉದಾಹರಣೆಗೆ, ತಲಕಾಡಿನ ವೈಭವ, ಪಠ್ಯದ ಸಾಹಿತ್ಯದ ಉಪಘಟಕ, 'ಕರುನಾಡ ಇತಿಹಾಸದಲ್ಲಿ ತಲಕಾಡು' ಎಂಬಲ್ಲಿ, ನಿಲ್ಮನೆ ಪ್ರಸಂಗ, ತಲಕಾಡಿನ ಗಂಗರು, ಕಲಾಶ್ರೀ ವಿಹರಿಸುವ ನಂದನವನ ಎಂಬ ಪ್ರಧಾನ ಶೀರ್ಷಿಕೆಯಡಿಯಲ್ಲಿ ಸಾಹಿತ್ಯಾಂಶವನ್ನು ವಿಶ್ಲೇಷಿಸಬಹುದು. ಸಾಹಿತ್ಯಿಕವಾದ ಪಠ್ಯದಲ್ಲಿ, ಭಾಷಿಕವಾಗಿ ಪದಗಳ ಅರ್ಥ, ವಿರುದ್ಧಾರ್ಥಕ ಪದಗಳು, ತತ್ಸಮ-ತದ್ಭವಗಳು ಇತ್ಯಾದಿಗಳನ್ನು ಕಲಿಕೆಯ ನಿಟ್ಟಿನಲ್ಲಿ ವಿಶ್ಲೇಷಿಸಿ ಯೋಜಿಸಬಹುದು. ಅಂತೆಯೇ ಇದೇ ಪಠ್ಯಭಾಗದಲ್ಲಿ ಕಂಡು ಬರುವ ವ್ಯಾಕರಣಾಂಶಗಳನ್ನು ಕ್ರಿಯಾತ್ಮಕ ವ್ಯಾಕರಣದ ನೆಲೆಯಲ್ಲಿ ಯೋಜಿಸಬಹುದು.

**ಪಾಠಯೋಜನೆಯಲ್ಲಿ ಪಠ್ಯ ವಿಶ್ಲೇಷಣೆಯ ಪ್ರಾಮುಖ್ಯತೆ**

**1. ಘಟಕ ಬೋಧನೆಯನ್ನು ವ್ಯವಸ್ಥಿತಗೊಳಿಸುತ್ತದೆ.**

ಘಟಕವನ್ನು ಉಪಘಟಕಗಳನ್ನಾಗಿ, ಉಪಘಟಕಗಳನ್ನು ಪ್ರಧಾನ ಪರಿಕಲ್ಪನೆಗಳಾಗಿ, ಆ ಪ್ರಧಾನ ಪರಿಕಲ್ಪನೆಗಳನ್ನು ಉಪಪರಿಕಲ್ಪನೆಗಳನ್ನಾಗಿ ವಿಭಾಗಿಸುವುದರಿಂದ, ಬೋಧನೆಗೆ ವ್ಯವಸ್ಥಿತ ಚೌಕಟ್ಟನ್ನು ಒದಗಿಸಿಕೊಡುತ್ತದೆ. ಅನುಕ್ರಮತೆಯನ್ನು ಒದಗಿಸಿಕೊಡುತ್ತದೆ.

**2. ಪಾಠ ಯೋಜನೆಯಲ್ಲಿ ಪಠ್ಯ ವಿಶ್ಲೇಷಣೆಯು ಬೋಧಿಸಬೇಕಾದ ಪಠ್ಯದ ಪ್ರಧಾನ ಪರಿಕಲ್ಪನೆಗಳನ್ನು ಗುರುತಿಸಿ, ಬೋಧಿಸಲು ಸಹಕಾರಿಯಾಗುತ್ತದೆ.**

ಭಾಷಾ ಬೋಧನೆಯಲ್ಲಿ ಪ್ರಧಾನವಾಗಿ ಬರುವ ಪಠ್ಯದ ಕಲ್ಪನೆಗಳನ್ನು ಗುರುತಿಸುವುದು ಪ್ರಮುಖವಾಗಿರುತ್ತದೆ. ಉದಾಹರಣೆಗೆ, 8ನೇ ತರಗತಿಯ ಗದ್ಯಪಾಠ, 'ಮಗ್ಗದ ಸಾಹೇಬ' ಪಾತ್ರ ಪ್ರಧಾನ ಕತೆಯಾಗಿದ್ದು, ಪಾತ್ರ ಪ್ರವೇಶಿಕೆ, ಪಾತ್ರ ವಿಸ್ತರಣೆ ಮತ್ತು ಮುಕ್ತಾಯದ ನೆಲೆಗಟ್ಟಿನಲ್ಲಿ ಪ್ರಧಾನ ಪರಿಕಲ್ಪನೆಗಳನ್ನು ಗುರುತಿಸುವಲ್ಲಿ ಪಠ್ಯವಿಶ್ಲೇಷಣೆ ಪ್ರಮುಖ ಪಾತ್ರವನ್ನು ವಹಿಸುತ್ತದೆ.

**3. ಪಠ್ಯ ವಿಶ್ಲೇಷಣೆಯು ವಿವಿಧ ಭಾಷಿಕ ಕೌಶಲಗಳ ಕಲಿಕೆಗೆ ನೆರವಾಗುತ್ತದೆ.**

ಬೋಧನೆ / ಕಲಿಕೆಗೆ ಆಯ್ದ ಪಠ್ಯವನ್ನು ವಿವಿಧ ಭಾಷಾ ಕೌಶಲಗಳ ಅಭಿವೃದ್ಧಿಗೆ ಯೋಜಿಸುವಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತದೆ. ವಿಶ್ಲೇಷಿತ ಭಾಗವನ್ನು ವಾಚನ, ಮಾತುಗಾರಿಕೆಗೆ ಯೋಜಿಸಬಹುದಾಗಿದೆ. ಉದಾಹರಣೆಗೆ, 'ಮಗ್ಗದ ಸಾಹೇಬ' ಕತೆಯ ವಿಶ್ಲೇಷಿತ ಪಠ್ಯವನ್ನು, ಮಾದರಿ, ಅನುಕರಣ ಹಾಗೂ ಮೌನವಾಚನಕ್ಕೆ ನೀಡಿ, ವಾಚನ ಕುಶಲತೆಯನ್ನು ಅಭಿವೃದ್ಧಿಪಡಿಸಬಹುದಾಗಿದೆ.

**4. ಪಠ್ಯ ವಿಶ್ಲೇಷಣೆಯು ಭಾಷಾಸಾಮರ್ಥ್ಯಗಳ ಅಭಿವೃದ್ಧಿಗೂ ನೆರವಾಗುತ್ತದೆ.**

ಸಾಂದರ್ಭಿಕವಾಗಿ ಪಠ್ಯದಲ್ಲಿ ಬರುವ ಪದಗಳು, ಅರ್ಥ, ವಿರುದ್ಧಾರ್ಥ, ಪದಮೂಲ, ತತ್ಸಮ-ತದ್ಭವ, ಅನ್ಯದೇಶೀಯಗಳು ಮುಂತಾದವುಗಳನ್ನು ಪರಿಚಯಿಸುವುದು. ಸ್ವಂತವಾಕ್ಯಮಾಡುವ ಚಟುವಟಿಕೆ, ಗಾದೆ,

ನುಡಿಗಟ್ಟು, ಒಗಟುಗಳು ಮುಂತಾದವುಗಳನ್ನು ಸಾಂದರ್ಭಿಕವಾಗಿ ಹೊಂದಿಸಲು ಪಠ್ಯ ವಿಶ್ಲೇಷಣೆಯು ನೆರವಾಗುತ್ತದೆ.

**5. ಪಠ್ಯ ವಿಶ್ಲೇಷಣೆಯು ಕ್ರಿಯಾತ್ಮಕ ವ್ಯಾಕರಣವನ್ನು ಯೋಜಿಸಲು ಸಹಕಾರಿಯಾಗುತ್ತದೆ.**

'ಹೊರೆರಹಿತ ಕಲಿಕೆ' ತತ್ತ್ವದ ನೆಲೆಯಲ್ಲಿ ಬೋಧನೆ / ಕಲಿಕೆಯ ಯೋಜನೆ ರೂಪುಗೊಳ್ಳುತ್ತದೆಯಾದ್ದರಿಂದ, ವಿಶ್ಲೇಷಿತ ಪಠ್ಯದಲ್ಲಿ ಅಡಗಿರುವ ವ್ಯಾಕರಣವನ್ನು ಗುರುತಿಸಲು ಸಾಧ್ಯವಾಗುತ್ತದೆ. 8ನೇ ತರಗತಿಯ ಪಠ್ಯ, 'ಮಗ್ಗದ ಸಾಹೇಬ' ಸಣ್ಣಕತೆಯಾಗಿದ್ದು, ಕಥಾ ನಿರೂಪಣೆಯನ್ನು ಭೂತಕಾಲದಲ್ಲಿ ನಿರ್ವಹಿಸಲಾಗಿದ್ದು, ಕಾಲಸೂಚಕಗಳನ್ನು ಇಲ್ಲಿ ಕ್ರಿಯಾತ್ಮಕ ವ್ಯಾಕರಣದ ನೆಲೆಯಲ್ಲಿ ಕಲಿಸಲು ಯೋಜಿಸಲು ಮಾರ್ಗದರ್ಶನ ನೀಡುತ್ತದೆ.

**6. ಪಠ್ಯ ವಿಶ್ಲೇಷಣೆಯು ಸಾಹಿತ್ಯದ ಪ್ರಕಾರವನ್ನು ಗುರುತಿಸುವಲ್ಲಿ ಸಹಕಾರಿಯಾಗುತ್ತದೆ.**

ಕನ್ನಡ ಗದ್ಯದಲ್ಲಿ ಹಲವಾರು ಸಾಹಿತ್ಯ ಪ್ರಕಾರವನ್ನು ಗುರುತಿಸಬಹುದಾಗಿದೆ. ಪ್ರಬಂಧ, ಹರಟೆ ಇತ್ಯಾದಿ ಪ್ರಕಾರಗಳ ಸ್ವರೂಪ ಗುರುತಿಸುವುದು ಪಠ್ಯ ವಿಶ್ಲೇಷಣೆಯಿಂದ ಸಾಧ್ಯವಾಗುತ್ತದೆ. ಪಠ್ಯ ವಿಶ್ಲೇಷಣೆಯು ಈ ಹಿನ್ನೆಲೆಯಲ್ಲಿ ಪ್ರಮುಖವಾದುದು.

**7. ಪಠ್ಯ ವಿಶ್ಲೇಷಣೆಯು ಪದ್ಯಬೋಧನೆಗೆ ಅವಶ್ಯಕ ಪ್ರಕ್ರಿಯೆ ಎನಿಸಿದೆ.**

ಪದ್ಯಬೋಧನೆಯಲ್ಲಿ ಪಠ್ಯವಿಶ್ಲೇಷಣೆಯು ಪ್ರಮುಖ ಪ್ರಕ್ರಿಯೆಯಾಗಿರುತ್ತದೆ. ಪದ್ಯದ ಒಳಾರ್ಥಗಳು, ಹೋಲಿಕೆ, ವರ್ಣನೆ ಮುಂತಾದ ಅವಶ್ಯಕ ಪ್ರಕ್ರಿಯೆಗಳಿಗೆ ಪಠ್ಯ ವಿಶ್ಲೇಷಣೆಯು ಪ್ರಮುಖವಾಗುತ್ತದೆ.

**8. ಪಠ್ಯ ವಿಶ್ಲೇಷಣೆಯು ಬೋಧನಾ ಉದ್ದೇಶಗಳ ನಿರೂಪಣೆಯಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತದೆ.**

ಬೋಧನಾ ಉದ್ದೇಶಗಳನ್ನು ವಿಶ್ಲೇಷಿತ ಪಠ್ಯಾಂಶಗಳ ಸಹಾಯದಿಂದ ಹೇಗೆ ಸಾಧಿಸಬಹುದು ಎಂಬುದನ್ನು ಕಂಡುಕೊಳ್ಳುವಲ್ಲಿ , ಉದ್ದೇಶಗಳನ್ನು ಮೊದಲಿಗೆ ನಿರೂಪಿಸಿಕೊಳ್ಳುವಲ್ಲಿ ಪಠ್ಯವಿಶ್ಲೇಷಣೆ ಅನುವು ಮಾಡಿಕೊಡುತ್ತದೆ.

**9. ಪಠ್ಯ ವಿಶ್ಲೇಷಣೆಯು ಮೌಲ್ಯಮಾಪನಕ್ಕೆ ಆಧಾರವನ್ನು ಒದಗಿಸುತ್ತದೆ.**

ಉದ್ದೇಶ ನಿರೂಪಣೆ ಪಠ್ಯವಿಶ್ಲೇಷಣೆಯನ್ನು ಆಧರಿಸಿರುತ್ತದೆ. ಸಾಧಿಸುವ ಉದ್ದೇಶ ಆಧರಿಸಿ, ಮೌಲ್ಯಮಾಪನ ಕ್ರಮವನ್ನು ನಿರ್ವಹಿಸಿಲಾಗುತ್ತದೆ. ಪಠ್ಯ ವಿಶ್ಲೇಷಣೆಯು ಮೌಲ್ಯಮಾಪನ ಮಾಡಬೇಕಾದ ಭಾಷಾ ಕುಶಲತೆಗಳನ್ನು ಸ್ಪಷ್ಟಪಡಿಸುತ್ತದೆ. ಈ ಹಿನ್ನೆಲೆಯಲ್ಲಿ ಮೌಲ್ಯಮಾಪನಕ್ಕೆ ಆಧಾರ ನೆಲೆಯನ್ನು ಒದಗಿಸುತ್ತದೆ. ಮಾತ್ರವಲ್ಲದೇ ಪಠ್ಯ ವಿಶ್ಲೇಷಣೆ ಮೌಲ್ಯಮಾಪನ ಮಾಡಬೇಕಾದ ಭಾಷಾಸಾಮರ್ಥ್ಯಗಳನ್ನು ಸ್ಪಷ್ಟಪಡಿಸಿ, ಮೌಲ್ಯಮಾಪನಕ್ಕೆ ನೆರವಾಗುತ್ತದೆ.

ಪಾಠಯೋಜನೆ ರೂಪಿಸಬೇಕಾದ ಸಂದರ್ಭದಲ್ಲಿ ಪ್ರಧಾನವಾದ ಮೂರು ಅಂಶಗಳನ್ನು ಮತ್ತು ಅವುಗಳ ನಡುವಿನ ಸಂಬಂಧವನ್ನು ಅರ್ಥಮಾಡಿಕೊಳ್ಳಬೇಕು. ಅವು ಹೀಗಿವೆ: ಪಾಠಬೋಧನೆಯ ಉದ್ದೇಶ, ಕಲಿಕೆಯ ಅನುಭವಗಳು ಮತ್ತು ಮೌಲ್ಯಮಾಪನ. ಅವುಗಳ ನಡುವಿನ ಸಂಬಂಧವನ್ನು ಕೆಳಕಂಡ ಚಿತ್ರವು ಸ್ಪಷ್ಟಪಡಿಸುತ್ತದೆ.




**ಉದ್ದೇಶಗಳು:** ಬೋಧನಾ / ಕಲಿಕಾ ಚಟುವಟಿಕೆಯ ಅಡಿಯಲ್ಲಿ ನಿರೂಪಿಸಿಕೊಂಡು ಪ್ರಕ್ರಿಯೆಯ ಅಂತ್ಯದಲ್ಲಿ ಸಾಧಿಸಲಾಗುವ ಅಂಶಗಳೇ ಉದ್ದೇಶಗಳು.

ಭಾಷಾ ಬೋಧನೆಯಲ್ಲಿ ಭಾಷೆಯ ಸಾಮರ್ಥ್ಯ, ಕುಶಲತೆ ಕುರಿತಂತೆ ಉದ್ದೇಶಗಳ ನಿರೂಪಣೆಗೆ ಬೋಧನೆ / ಕಲಿಕೆಗೆ ಪ್ರಮುಖವಾಗುತ್ತದೆ. ಭಾಷಾಸಾಮರ್ಥ್ಯಗಳ ಅಭಿವೃದ್ಧಿಯ ನೆಲೆಗಟ್ಟಿನಲ್ಲಿ ಉದ್ದೇಶ ನಿರೂಪಣೆ ನಿರ್ವಹಿಸಬೇಕಾಗಿತ್ತದೆ. ಕನ್ನಡ ಭಾಷಾಬೋಧನೆಯನ್ನು ಮಾಡುವ ಸಂದರ್ಭದಲ್ಲಿ ಕನ್ನಡ ಭಾಷಾ ಬೋಧನೆಯ ಸಾಮಾನ್ಯ ಉದ್ದೇಶಗಳನ್ನು ಆಧರಿಸಿ, ಬೋದನೆಯ ನಿರ್ದಿಷ್ಟ ಉದ್ದೇಶಗಳನ್ನು ರೂಪಿಸಬೇಕು. ನಿರ್ದಿಷ್ಟ ಉದ್ದೇಶಗಳು ವರ್ತನೆಯಲ್ಲಿ ಉಂಟಾಗುವ ಅಂತಿಮ ಪರಿವರ್ತನೆಯನ್ನು ಸೂಚಿಸುತ್ತದೆ. ಬೋಧನೆಯ ಕೊನೆಯಲ್ಲಿ ಇವುಗಳನ್ನು ತರಗತಿಯಲ್ಲಿಯೇ ಸಾಧಿಸಲಾಗುತ್ತದೆ. ನಿರ್ದಿಷ್ಟ ಉದ್ದೇಶಗಳ ಸಂಘಟಿತ ಸಾಧನೆಯಿಂದ ಸಾಮಾನ್ಯ ಉದ್ದೇಶಗಳು ನೆರವೇರುತ್ತದೆ. ತರಗತಿ ಭಾಷಾಬೋಧನೆಯಲ್ಲಿ ನಿರ್ದಿಷ್ಟ ಉದ್ದೇಶಗಳನ್ನು ರೂಪಿಸುವುದು ಪ್ರಮುಖ ಪ್ರಕ್ರಿಯೆಯಾಗಿದೆ. ಈ ಉದ್ದೇಶಗಳನ್ನು ಭಾಷೆಯ ಸಾಮರ್ಥ್ಯ, ಕುಶಲತೆಗಳ ಸಾಧನೆಯ ನೆಲೆಗಟ್ಟಿನಲ್ಲಿ ಸ್ಪಷ್ಟವಾಗಿ, ನಿರ್ದಿಷ್ಟವಾಗಿ, ನಿರೂಪಿಸಬೇಕಾಗುತ್ತದೆ. ಜ್ಞಾನ, ಭಾವನಾತ್ಮಕ, ಕ್ರಿಯಾಜನ್ಯ ವಲಯದ ವರ್ತನಾ ಪರಿವರ್ತನೆಯ ನೆಲೆಯಲ್ಲಿ ಉದ್ದೇಶಗಳನ್ನು ನಿರೂಪಿಸಿರಬೇಕಾಗುತ್ತದೆ.

**ಕಲಿಕಾ ಅನುಭವ ಮತ್ತು ಚಟುವಟಿಕೆ:** ಉದ್ದೇಶಗಳನ್ನು ಆಧರಿಸಿ, ಕಲಿಕಾ ಅನುಭವಗಳು ಮತ್ತು ಚಟುವಟಿಕೆಗಳನ್ನು ಹೊಂದಿಸಬೇಕು. ಜ್ಞಾನ, ಭಾವನಾತ್ಮಕ, ಕ್ರಿಯಾಜನ್ಯಾತ್ಮಕ ವಲಯದಲ್ಲಿ, ವರ್ತನೆಯ ಪರಿವರ್ತನೆಯನ್ನು ತರುವ ನೆಲೆಯಲ್ಲಿ, ಕಲಿಕಾ ಅನುಭವಗಳನ್ನು, ಚಟುವಟಿಕೆಗಳನ್ನು ಸಂಯೋಜಿಸಬೇಕು. ಕಲಿಕಾ ಅನುಭವಗಳು ವೈವಿಧ್ಯತೆಯ ನೆಲೆಗಟ್ಟಿನಲ್ಲಿ ರೂಪುಗೊಂಡಿದುದಾಗಿರಬೇಕು.

ಕಲಿಕಾ ಅನುಭವಗಳು ವೈವಿಧ್ಯಮಯ ಉದ್ದೇಶಗಳ ನೆಲೆಯಲ್ಲಿ ನಿರೂಪಿತವಾಗಿದ್ದಲ್ಲಿ ವೈವಿಧ್ಯತೆ ಹೊಂದಲು ಸಾಧ್ಯವಾಗುತ್ತದೆ. ಕಲಿವಿನ ಅನುಭವ ಸಮನ್ವಯತೆ, ಅನನ್ಯತೆ, ಐಕ್ಯತೆ, ವಿವೇಚನಾಶೀಲತೆ ಇತ್ಯಾದಿ ವೈವಿಧ್ಯಮಯ ಕಲಿವಿನ ಅನುಭವಗಳನ್ನು ಒದಗಿಸುವ ಯುಕ್ತ ಚಟುವಟಿಕೆಗಳನ್ನು ಸಂಯೋಜಿಸಬೇಕು.

ಬೋಧನೆ / ಕಲಿಕೆಯ ನಿರ್ದಿಷ್ಟ ಉದ್ದೇಶಗಳ ನೆಲೆಯಲ್ಲಿ ಕಲಿಕಾ ಅನುಭವಗಳಿಗೆ ಯುಕ್ತ ಚಟುವಟಿಕೆಗಳನ್ನು ನಿರೂಪಿಸಬೇಕು. ವಿಶ್ಲೇಷಣೆ, ಸಂಶ್ಲೇಷಣೆ, ವಿಮರ್ಶೆ, ತೀರ್ಮಾನ, ಚರ್ಚೆ ಮುಂತಾದ ಚಟುವಟಿಕೆಗಳು ಮಾತುಗಾರಿಕೆಯ ಕುಶಲತೆಯನ್ನು ಅಭಿವೃದ್ಧಿಪಡಿಸುತ್ತವೆ. ಪಠ್ಯವಾಚನ, ಬರೆವಣಿಗೆ ಇತ್ಯಾದಿ ಚಟುವಟಿಕೆಗಳು ಕಲಿಕೆಯ ಅನುಭವವನ್ನು ಸಮನ್ವಯಿಸುತ್ತವೆ.

**ಮಾಲ್ಯಮಾಪನ:** ಉದ್ದೇಶಗಳ ಸಾಧನೆ, ಕಲಿಕಾ ಅನುಭವಗಳ ಗಳಿಕೆ ಇವುಗಳನ್ನು ಗುರುತಿಸುವಲ್ಲಿ ಪ್ರಮುಖ ಸಾಧನ ಮೌಲ್ಯಮಾಪನ. ಕಲಿಕೆ / ಬೋಧನೆಯ ಸಂದರ್ಭದಲ್ಲಿ ಯೋಜಿಸಲಾದ ಚಟುವಟಿಕೆಗಳು ಯುಕ್ತ ಕಲಿಕಾ ಅನುಭವನ್ನು ನೀಡುವಲ್ಲಿ ಸಮರ್ಥವಾಗಿದೆಯೇ? ಇಲ್ಲವೇ ಎಂಬುದನ್ನು ಮೌಲ್ಯಮಾಪನ ಕಾರ್ಯ ಸ್ಪಷ್ಟ ಪಡಿಸುತ್ತದೆ. ಭಾಷಾ ಕುಶಲತೆ, ಸಾಮರ್ಥ್ಯಗಳ ಗಳಿಕೆ ಕುರಿತಂತೆ ಮೌಲ್ಯಮಾಪನಗೈಯುವ ಕಾರ್ಯ ಈ ಹಂತದ ಪ್ರಕ್ರಿಯೆಯಾಗಿದೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ– 3**
ನಿಮ್ಮ ಆಯ್ಕೆಯ ಒಂದು ಗದ್ಯ ಅಥವಾ ಪದ್ಯ ಪಾಠದ ವಿಶ್ಲೇಷಣೆ ಮಾಡಿ '5 ಇ ಪಾಠಯೋಜನೆ'ಗೆ ಅನುಗುಣವಾಗಿ ಒಂದು ಪಾಠಯೋಜನೆ ತಯಾರಿಸಿ.

### 4.1.4. ಸಾರಾಂಶಿಸೋಣ

- ಶಿಕ್ಷಕ ವರ್ಗಕೋಣೆಯಲ್ಲಿ ಭಾಷೆ ಅಥವಾ ವಿಷಯ ಬೋಧನೆಗಾಗಿ/ಕಲಿಕೆಗಾಗಿ ಕೈಗೊಳ್ಳಬಹುದಾದ ಕಾರ್ಯಚಟುವಟಿಕೆಗಳ ಯೋಜನೆಯೇ 'ಪಾಠಯೋಜನೆ' ಎನಿಸುತ್ತದೆ.
- ನಿರ್ದಿಷ್ಟ ತರಗತಿಗೆ ಭಾಷಾಬೋಧನೆಗೆ ಸಂಬಂಧಿಸಿದಂತೆ, ನಿಗದಿತ ಗದ್ಯ / ಪದ್ಯ / ವ್ಯಾಕರಣ / ಛಂದಸ್ಸು ಇತ್ಯಾದಿಗಳನ್ನು ಬೋಧನೆಯ ಅನುಕ್ರಮದಲ್ಲಿ ಜೋಡಿಸಿ, ಇವುಗಳಿಗೆ ಯುಕ್ತ ಅನುಭವಗಳನ್ನು ಹೊಂದಿಸಿ, ರೂಪಿಸಲಾಗುವ ಬೋಧನಾಪೂರ್ವ ಯೋಜನೆಯೇ, 'ಕನ್ನಡ ಪಾಠಯೋಜನೆ'.
- ಪಾಠಯೋಜನೆಯ ಬಾಹ್ಯ ಹಾಗೂ ಆಂತರಿಕ ಅಂಶಗಳನ್ನು ಸಂಯೋಜಿಸಿ, ಕನ್ನಡ ಪಾಠಯೋಜನೆಯನ್ನು ನಿರೂಪಿಸಿದಲ್ಲಿ, ಪಾಠಬೋಧನೆಯ ಯಶಸ್ವಿಯಾಗುತ್ತದೆ.
- ಪಾಠಯೋಜನೆಯನ್ನು ತಯಾರಿಸಲು ಹಲವಾರು ಉಪಕ್ರಮಗಳು ಜಾರಿಯಲ್ಲಿದ್ದು, ಅವುಗಳಲ್ಲಿ ಸಾಂಪ್ರದಾಯಿಕವಾಗಿ ಅನುಸರಿಸಲಾದ ಹರ್ಬಾರ್ಟನ ಉಪಕ್ರಮ ಮತ್ತು ಈಚೆಗೆ ಅನುಸರಿಸಲಾಗುತ್ತಿರುವ ರಚನಾತ್ಮಕ ಕಲಿಕಾ ಉಪಕ್ರಮ ಆಧಾರಿತ ಪಾಠಯೋಜನೆಗಳು ಪ್ರಮುಖವಾಗಿವೆ.
- **ಕಲಿಕೆಯ ಸಂಚಯ:** ಕಲಿಯುವವನ ಮನಸ್ಸಿನಲ್ಲಿ, ಈ ಮೊದಲೇ ಕಲಿತು ಅರಗಿಸಿಕೊಂಡ ವಿಷಯಗಳ ಸ್ಮರಣೆಯ ಮೊತ್ತವೇ 'ಕಲಿಕೆಯ ಸಂಚಯ' ಎನಿಸಿಕೊಳ್ಳುತ್ತದೆ.
- ಪಾಠಯೋಜನೆಗೆ ವಿಶಿಷ್ಟ ಆಯಾಮವನ್ನು ಒದಗಿಸಿದ ಕೀರ್ತಿ ಜರ್ಮನಿಯ ಜಾನ್ ಫೆಡ್ರಿಕ್ ಹರ್ಬಾರ್ಟ (1776–1840)ನಿಗೆ ಸಲ್ಲುತ್ತದೆ. ಶಿಕ್ಷಣ ಮನೋವೈಜ್ಞಾನದ ನೆಲೆಗಟ್ಟಿನಲ್ಲಿ ರೂಪಿಸಲಾಗುವ ಪಾಠಯೋಜನೆಗೆ ನಿರ್ದಿಷ್ಟವಾದಂತಹ ಸ್ವರೂಪವನ್ನು ಹರ್ಬಾರ್ಟ್ ನೀಡಿದ್ದಾನೆ. ಹರ್ಬಾರ್ಟ್ ಪಾಠಯೋಜನೆಯು 'ಕಲಿಕೆಯ ಸಂಚಯ ಸಿದ್ಧಾಂತ (Approceptive Mass theory of Learning)' ವನ್ನು ಆಧರಿಸಿದೆ.
- ಈ 'ಕಲಿಕೆಯ ಸಂಚಯ' ಸಿದ್ಧಾಂತದ ಪ್ರಕಾರ, ಹೊಸ ಕಲಿಕೆಯ ಸ್ವರೂವು ಹಿಂದಿನ ಕಲಿಕೆಯ ಸಂಚಯನಾಂಶಗಳಿಂದ ರೂಪುಗೊಳ್ಳುತ್ತದೆ. ಈ ಸಿದ್ಧಾಂತದ ಪ್ರಭಾವ ಅತನು ರೂಪಿಸಿದ ಹಂತಗಳಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ಹರ್ಬಾರ್ಟ್ ಪಾಠಬೋಧನೆ ಐದು ಹಂತಗಳಲ್ಲಿ ನೆರವೇರುತ್ತದೆ ಎಂದು ಸ್ಪಷ್ಟಪಡಿಸುತ್ತಾನೆ. ಇವುಗಳನ್ನೇ ಹರ್ಬಾರ್ಟ್‌ನ 'ಪಂಚ ಸೋಪಾನ'ಗಳೆನ್ನುತ್ತಾರೆ.

- 5 ‘ಇ’ ಪಾಠಯೋಜನೆಯು ವಿಶೇಷವಾಗಿ ಚಟುವಟಿಕೆಯಾಧಾರಿತ ಪಾಠಯೋಜನೆಯಾಗಿದ್ದು, ಕಲಿಕಾರ್ಥಿಗಳನ್ನು ತೊಡಗಿಸಿಕೊಳ್ಳುವ, ಅನ್ವೇಷಿಸುವ, ವಿವರಿಸುವ, ವಿಸ್ತರಿಸುವ, ಮೌಲ್ಯಮಾಪನ ಮಾಡುವ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಅವಕಾಶ ನೀಡುವ ವಿಶೇಷ ಪಾಠಬೋಧನಾ ಯೋಜನೆಯಾಗಿದೆ. ಇದು ಪ್ರಮುಖವಾಗಿ ಇಂಗ್ಲಿಷಿನ Engage, Explore, Explain, Elaborate, Evaluate ಎಂಬ 5 ಹಂತಗಳನ್ನು ಒಳಗೊಳ್ಳುತ್ತದೆ.
- ಪಠ್ಯವಿಶ್ಲೇಷಣೆ ಪಾಠಬೋಧನೆಗೆ ಪೂರಕವೂ ಆಧಾರವೂ ಆಗಿದ್ದು ಬೋಧನೆಯನ್ನು ವ್ಯವಸ್ಥಿತಗೊಳಿಸುತ್ತದೆ.

### 4.1.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1, 2 ಮತ್ತು 3

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ –1**
ಸ್ವ ಕಲಿಕಾ ಸಾಮಗ್ರಿ 4.1.3.1 ಗಮನಿಸಿ

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**
ನೀವು ತಯಾರಿಸಿದ ಉತ್ಪನ್ನಗಳನ್ನು ಸಹೋದ್ಯೋಗಿಗಳೊಂದಿಗೆ ಚರ್ಚಿಸಿ ಉತ್ತಮಪಡಿಸಿ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3**
ನೀವು ತಯಾರಿಸಿದ ಪಾಠಯೋಜನೆಯನ್ನು ಸಹೋದ್ಯೋಗಿಗಳೊಂದಿಗೆ ಚರ್ಚಿಸಿ ಉತ್ತಮಪಡಿಸಿ.

### 4.1.6. ಘಟಕಾಂತ್ಯ ಅಭ್ಯಾಸಗಳು

1. ಸಮಗ್ರ ಪಾಠಯೋಜನೆ “ಬೋಧನೆಯ ಒಂದು ಪಕ್ಷಿನೋಟ” – ಈ ಹೇಳಿಕೆಯ ಬೆಳಕಿನಲ್ಲಿ ಉತ್ತಮ ಪಾಠಯೋಜನೆಯ ಮುಖ್ಯಾಂಶಗಳನ್ನು ಹಾಗೂ ಅಗತ್ಯತೆಯನ್ನು ಸಂಕ್ಷಿಪ್ತವಾಗಿ ವಿವರಿಸಿ.
2. ಪಾಠಯೋಜನೆಯ ಉಪಕ್ರಮಗಳ ಕುರಿತಂತೆ ಚರ್ಚಿಸಿರಿ.
3. ಹರ್ಬಾರ್ಟ್‌ನ ಪಂಚಸೋಪನಗಳನ್ನು ವಿಶ್ಲೇಷಿಸಿ.
4. ಪಾಠಯೋಜನೆ ಎಂದರೇನು? ಪಾಠಯೋಜನೆಯ ಹಂತಗಳನ್ನು ಉದಾಹರಣೆ ಸಹಿತ ವಿವರಿಸಿ.
5. ಮೌಲ್ಯಮಾಪನ ಉಪಕ್ರಮದ ಸ್ವರೂಪವನ್ನು ಚರ್ಚಿಸಿರಿ.
6. 5 ‘ಇ’ ಆಧಾರಿತ ಪಾಠಯೋಜನೆಯ ಹಂತಗಳನ್ನು ಉದಾಹರಣೆ ಸಹಿತ ವಿವರಿಸಿ.
7. ಹರ್ಬಾರ್ಟ್ ಪಂಚಸೋಪಾನ ಹಾಗೂ 5 ‘ಇ’ ಆಧಾರಿತ ಪಾಠಯೋಜನೆಗಳ ನಡುವಣ ಹೋಲಿಕೆ ಮತ್ತು ವ್ಯತ್ಯಾಸಗಳನ್ನು ಹೊರತನ್ನಿ.
8. ಪಾಠಯೋಜನೆಯಲ್ಲಿ ಪಠ್ಯವಿಶ್ಲೇಷಣೆಯ ಮಹತ್ವವನ್ನು ವಿವರಿಸಿರಿ.
9. ಪಾಠಯೋಜನೆಯಲ್ಲಿ ಪಠ್ಯವಿಶ್ಲೇಷಣೆಯ ಕ್ರಮವನ್ನು ಉದಾಹರಣೆಯ ಸಹಿತ ನಿರೂಪಿಸಿರಿ.
10. ಬೋಧನಾ ಉದ್ದೇಶಗಳು, ಕಲಿಕೆಯ ಅನುಭವಗಳೊಂದಿಗೆ ಹೊಂದಿರುವ ಸಂಬಂಧವನ್ನು ಉದಾಹರನೆಯ ಮೂಲಕ ನಿರೂಪಿಸಿರಿ.

**4.1.7. ಪರಾಮರ್ಶನ ಸೂಚಿ**


1. ಕೆ. ಸಚ್ಚಿದಾನಂದಯ್ಯ, "ಕನ್ನುಡಿಯ ಕಲಿಕೆ" ಪ್ರಕಾಶನ: ಸತ್ಯಶ್ರೀ ಪ್ರಕಾಶನ, 1316, ಪಡುವಣ ರಸ್ತೆ, ಕುವೆಂಪುನಗರ, ಮೈಸೂರು –570023, ಪ್ರಥಮ ಮುದ್ರಣ: 1990
2. ಡಾ. ಐ.ಎ ಲೋಕಾಪುರ, "ಪ್ರೌಢಶಿಕ್ಷಣ ಹಾಗೂ ಶಿಕ್ಷಕನ ಕಾರ್ಯಗಳು" ಪ್ರಕಾಶನ: ಜಯದೇವ. ಮೈ, ನಾಗರಾಜ ಮೈ, ಮೆಣಸಗಿ, ವಿಧ್ಯಾನಿಧಿ ಪ್ರಕಾಶನ, ಸ್ಟೇಷನ್ ರಸ್ತೆ, ಮಹೇಂದ್ರಕರ ವೃತ್ತದ ಸಮೀಪ, ಗದಗ – 582101, 5 ನೇ ಆವೃತ್ತಿ 1994
3. ಡಾ. ಮಹಾಬಲೇಶ್ವರ ರಾವ್, "ಪ್ರೌಢ ಶಾಲೆಗಳಲ್ಲಿ ಕನ್ನಡ ಬೋಧನೆ", ಪ್ರಕಾಶನ: ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟಿಡ್, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು –56001, ಮೊದಲನೇ ಮುದ್ರಣ 1996
4. ಭ.ಮಲ್ಲಿಕಾರ್ಜುನ, ಎಸ್.ಎಸ್.ಯದುರಾಯ್, "ನಿರಂತರ", ಪ್ರಕಾಶನ: ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆ (ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ, ಭಾರತ ಸರ್ಕಾರ), ಮಾನಸಗಂಗೋತ್ರಿ, ಮೈಸೂರು–570014,ಪ್ರ.ವರ್ಷ: 1999
5. ಪರಗಿ.ವಿ,ಅನಸೂಯ, 'ಮಾತೃಭಾಷೆ ಕನ್ನಡ ತತ್ತ್ವ ಮತ್ತು ಬೋಧನಾ ಮಾರ್ಗ', ಪ್ರಕಾಶನ: ವಿವೇಕ ಪ್ರಕಾಶನ, ಚಿಕ್ಕಬಳ್ಳಾಪುರ – 2004
6. ಪ್ರೊ.ಪಿ.ಎಸ್.ಸುರೇಶ್, ಎನ್.ಪುಟ್ಟಸ್ವಾಮಿ, 'ಪ್ರೌಢಶಾಲಾ ಶಿಕ್ಷಣ ಮತ್ತು ಶಿಕ್ಷಕನ ಕಾರ್ಯಗಳು', ಪ್ರಕಾಶನ: ಆರ್.ರವೀಶ್, ಸದ್ಗುರು ಪ್ರಿಂಟರ್ಸ್, ಮೈಸೂರು, 2006
7. ಸಂಪನ್ಮೂಲ ಪುಸ್ತಕ ರಚನಾ ಸಮಿತಿ, ಡಿಎಸ್‌ಸಿಆರ್‌ಟಿ, ಅನುವಾದಕ ಮಂಡಲಿ, 'ಪಠ್ಯಕ್ರಮ ಕಾರ್ಯಾಚರಣೆಯ ತತ್ತ್ವಗಳು', ಪ್ರಕಾಶನ: ವಿನಾಯಕ ಆಫ್‌ಸೆಟ್ ಪ್ರಿಂಟರ್ಸ್ # 56, 9ನೇ ಮುಖ್ಯರಸ್ತೆ, 1ನೇ ಅಡ್ಡರಸ್ತೆ, ಕಾವೇರಿ ನಗರ, ಬನಶಂಕರಿ ಕೈಗಾರಿಕಾ ಪ್ರದೇಶ, ಬನಶಂಕರಿ 2ನೇ ಹಂತ, ಬೆಂಗಳೂರು – 560070, ಪ್ರಕಟಣಾ ವರ್ಷ 2008
8. ಸಂಪನ್ಮೂಲ ಪುಸ್ತಕ ರಚನಾ ಸಮಿತಿ, ಡಿಎಸ್‌ಸಿಆರ್‌ಟಿ, 'ಕನ್ನಡ ಸಂಪದ', ಪ್ರಕಾಶನ: ವಿನಾಯಕ ಆಫ್‌ಸೆಟ್ ಪ್ರಿಂಟರ್ಸ್ # 56, 9ನೇ ಮುಖ್ಯರಸ್ತೆ, 1ನೇ ಅಡ್ಡರಸ್ತೆ, ಕಾವೇರಿ ನಗರ, ಬನಶಂಕರಿ ಕೈಗಾರಿಕಾ ಪ್ರದೇಶ, ಬನಶಂಕರಿ 2ನೇ ಹಂತ, ಬೆಂಗಳೂರು – 560070, ಪ್ರಕಟಣಾ ವರ್ಷ 2008

## ಬ್ಲಾಕ್ 4 : ಕನ್ನಡ ಭಾಷಾ ಬೋಧನೆಯಲ್ಲಿ ಪಾಠ ಯೋಜನೆಗಳು ಮತ್ತು ಮೌಲ್ಯಮಾಪನ

### ಘಟಕ 2 : ಘಟಕ ಯೋಜನೆ ಮತ್ತು ಸಂಪನ್ಮೂಲ ಘಟಕ ಯೋಜನೆ

**ಘಟಕದ ರಚನೆ**

4.2.1. ಕಲಿಕೆಯ ಉದ್ದೇಶಗಳು
4.2.2. ಪೀಠಿಕೆ
4.2.3. ಕಲಿಕೆಯ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು
4.2.3.1. ಘಟಕ ಯೋಜನೆ
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ - 1
4.2.3.2. ಸಂಪನ್ಮೂಲ ಘಟಕ ಯೋಜನೆ
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2
4.2.4. ಸಾರಾಂಶಿಸೋಣ
4.2.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು - 1 ಮತ್ತು 2
4.2.6. ಘಟಕಾಂತ್ಯ ಅಭ್ಯಾಸಗಳು
4.2.7. ಪರಾಮರ್ಶನ ಸೂಚಿ

### 4.2.1. ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿ ಶಿಕ್ಷಕ ಶಿಕ್ಷಕಿಯರು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು;

- ಘಟಕದ ಪರಿಕಲ್ಪನೆಯನ್ನು ವಿವರಿಸುವರು;
- ಉತ್ತಮ ಘಟಕ ಯೋಜನೆಯ ಲಕ್ಷಣಗಳನ್ನು ಪಟ್ಟಿ ಮಾಡುವರು;
- ಉತ್ತಮ ಘಟಕ ಯೋಜನೆಗಳನ್ನು ರೂಪಿಸುವರು;
- ಸಂಪನ್ಮೂಲ ಘಟಕದ ಪರಿಕಲ್ಪನೆಯನ್ನು ವಿವರಿಸುವರು;
- ಉತ್ತಮ ಸಂಪನ್ಮೂಲ ಘಟಕ ಯೋಜನೆಯ ಲಕ್ಷಣಗಳನ್ನು ಪಟ್ಟಿ ಮಾಡುವರು; ಮತ್ತು
- ಉತ್ತಮ ಸಂಪನ್ಮೂಲ ಘಟಕ ಯೋಜನೆಗಳನ್ನು ರೂಪಿಸುವರು.

### 4.2.2. ಪೀಠಿಕೆ

'ಯೋಜನೆ'ಯು ಯಾವುದೇ ಪ್ರಕ್ರಿಯೆಗೆ ವ್ಯವಸ್ಥಿತತೆ ಒದಗಿಸುವ ಸಾಧನವಾಗಿದ್ದು, ಬೋಧನೆಗೆ ಪಾಠಯೋಜನೆಯೇ ಆಧಾರವಾಗಿರುತ್ತದೆ. ಪಾಠಯೋಜನೆಯನ್ನು ರೂಪಿಸುವುದು ಅತ್ಯಂತ ಸಂಕೀರ್ಣ ಕೌಶಲವಾಗಿದ್ದು, ಇದಕ್ಕೆ ಪೂರಕ ನೆಲೆಯಲ್ಲಿ, 'ಪಾಠ ಯೋಜನೆ'ಗೂ ಮುನ್ನಾ ಘಟಕ ಯೋಜನೆ ಅದಕ್ಕೂ ಮುನ್ನಾ 'ಸಂಪನ್ಮೂಲ ಘಟಕ'ವನ್ನು ರಚಿಸುವ ಅಗತ್ಯತೆ ಇದೆ. ಬೋಧನೆಗೆ ಅಗತ್ಯವಾಗಿರುವ ಕಲಿಕಾಂಶಗಳು, ಸಾಮರ್ಥ್ಯಗಳು, ಉದ್ದೇಶಗಳು, ಬೋಧನಾ ತಂತ್ರಗಳು, ಸಾಧನಗಳು, ಬೋಧನಾ / ಕಲಿಕಾ ಸಂಪನ್ಮೂಲಗಳು ಇತ್ಯಾದಿಗಳನ್ನು ಸಂಯೋಜಿಸುವ ಅಗತ್ಯತೆ ಇದೆ. ಭಾಷಾಸಾಮರ್ಥ್ಯಗಳು, ಭಾಷಾ ಕೌಶಲಗಳು, ಸಾಹಿತ್ಯದ ಸ್ವರೂಪ ಇತ್ಯಾದಿಗಳನ್ನು ಪರಿಗಣಿಸಿ ಭಾಷಾಬೋಧನೆಯನ್ನು ಯೋಜಿಸಬೇಕಾದ ಅಗತ್ಯವಿರುವುದರಿಂದ, ಬೋಧನೆ/ಕಲಿಕೆಗೂ ಮುನ್ನ, ಪರಿಕಲ್ಪನಾತ್ಮಕ ನಕ್ಷೆಯನ್ನು ಸಂರೂಪಿಸಿಕೊಂಡು, 'ಸಂಪನ್ಮೂಲ ಘಟಕ'ವನ್ನು ತನ್ಮೂಲಕ 'ಘಟಕ ಯೋಜನೆ'ಯನ್ನು ರೂಪಿಸುವ ಕೌಶಲದ ಗಳಿಕೆ ಭಾಷಾಶಿಕ್ಷಕನಿಗೆ ಅಗತ್ಯವಾದುದು. ಈ ಹಿನ್ನೆಲೆಯಲ್ಲಿ ಘಟಕ ಯೋಜನೆ ಮತ್ತು ಸಂಪನ್ಮೂಲ ಘಟಕಗಳ ಅರ್ಥ, ಸ್ವರೂಪ ಮತ್ತು ಅವುಗಳನ್ನು ರೂಪಿಸುವ ವಿಧಾನಗಳನ್ನು ಕುರಿತು ಈ ಘಟಕದಲ್ಲಿ ವಿಚಾರಮಾಡೋಣ.

### 4.2.3. ಕಲಿಕೆಯ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

#### 4.2.3.1. ಘಟಕ ಯೋಜನೆ

**ಘಟಕ:**

ಪರಸ್ಪರ ಆಂತರಿಕ ಸಂಬಂಧವುಳ್ಳ ವಸ್ತು, ಅನುಭವ, ಚಟುವಟಿಕೆಗಳ ಅರ್ಥಪೂರ್ಣ ಸಂಘಟನೆಯೇ, 'ಘಟಕ'. ಘಟಕ ಎಂಬುದು ಆಂಗ್ಲಭಾಷೆಯ 'Unit' ಎಂಬ ಪದಕ್ಕೆ ಸಮಾನವಾಗಿ ಬಳಸುವ ಪದವಾಗಿದೆ. ಸ್ಯಾಮ್‌ಪೋರ್ಡ್‌ರವರು, ಘಟಕವನ್ನು ಹೀಗೆ ವ್ಯಾಖ್ಯಾನಿಸುತ್ತಾರೆ – "ಘಟಕವು ವಿದ್ಯಾರ್ಥಿಗಳ ಅಗತ್ಯತೆ, ಆಸಕ್ತಿಗಳಿಗೆ ಅನುಗುಣವಾಗಿ ಎಚ್ಚರಿಕೆಯಿಂದ ಆಯ್ದು ಪ್ರತ್ಯೇಕಿಸಿದ ವಸ್ತು, ವಿಷಯದ ಒಂದು ಬಾಗದ ರೂಪುರೇಷೆಯೆ ಘಟಕ".

**ಘಟಕ ಯೋಜನೆ:**

ಆಂತರಿಕ ಸಂಬಂಧವನ್ನುಳ್ಳ ಗದ್ಯ ಅಥವಾ ಪದ್ಯ ಘಟಕವೊಂದನ್ನು ಪಾಠಗಳಾಗಿ ವಿಶ್ಲೇಷಿಸಿ, ಯುಕ್ತ ಬೋಧನಾ / ಕಲಿಕಾ ಅನುಭವಗಳನ್ನು ಜೋಡಿಸುವ ಯೋಜನೆಯೇ, 'ಘಟಕಯೋಜನೆ'.

ಶಿಕ್ಷಣ ನಿಘಂಟಿನ ಪ್ರಕಾರ, "ವಿವಿಧ ಚಟುವಟಿಕೆ ಸಂಘಟನೆಯ ಸರ್ವಸಾರ. ಸುತ್ತಲೂ ಇರುವ ಕಲಿಕೆಯ ಪ್ರಕಾರಗಳು, ಸಮಸ್ಯೆ ಅಥವಾ ಉದ್ದೇಶ, ಶಿಕ್ಷಕನ ನಾಯಕತ್ವದಲ್ಲಿ, ವಿದ್ಯಾರ್ಥಿಗಳ ಗುಂಪಿನ ಸಹಕಾರದಲ್ಲಿ ಬೆಳವಣಿಗೆಯಾಗುವುದಕ್ಕೆ ಸಹಾಯವೆನಿಸುವ ಯೋಜನೆಯೇ, 'ಘಟಕಯೋಜನೆ'.

**ಉತ್ತಮ ಘಟಕಯೋಜನೆಯ ಲಕ್ಷಣಗಳು:**

**1. ಭಾಷಾ ಕಲಿಕೆಯ ಗುರಿ, ಉದ್ದೇಶ, ಸಾಮರ್ಥ್ಯಗಳನ್ನು ಆಧರಿಸಿ, ಯೋಜಿಸಿರಬೇಕು.**

ಭಾಷಾ ಕಲಿಕೆಯ ಉದ್ದೇಶಗಳಾದ ಆಲಿಸುವಿಕೆ, ಮಾತುಗಾರಿಕೆ, ಓದುಗಾರಿಕೆ, ಬರವಣಿಗೆ ಕೌಶಲಗಳು ಗಳಿಕೆ ಹಾಗೂ ಸಾಮರ್ಥ್ಯಗಳಿಗೆ ಅನುಗುಣವಾಗಿ, ಪಾಠಯೋಜನೆಯನ್ನು ರಚಿಸಿಬೇಕು.

**2. ವೈವಿಧ್ಯಮಯ ಬೋಧನಾ / ಕಲಿಕಾ ಅನುಭವಗಳಿಗೆ ಘಟಕ ಯೋಜನೆಯು ಅವಕಾಶ ಕಲ್ಪಿಸಿರಬೇಕು.**

ಅಭಿನಯ, ಚರ್ಚೆ, ಸಂಭಾಷಣೆ, ವರ್ಣನೆ ಇತ್ಯಾದಿ ಬೋಧನಾ / ಕಲಿಕಾ ಅನುಭವಗಳಿಗೆ ಅವಕಾಶ ಕಲ್ಪಿಸಿರಬೇಕು.

**3. ಹೊಸ ಕಲಿಕೆಯ ಅನುಭವಗಳನ್ನು ಸಂಯೋಜಿಸಿರಬೇಕು.**

ಭಾಷೆಯು ಸೃಜನಶೀಲ ಅಂಶಗಳ ಕಲಿಕೆಯನ್ನು ಒಳಗೊಂಡಿದ್ದು, ಘಟಕಯೋಜನೆಯು ಹೊಸ ಕಲಿಕೆಯ ಅನುಭವಗಳನ್ನು ಸಂಯೋಜಿಸಿರಬೇಕು.

**4. ಘಟಕ ಯೋಜನೆಗೆ ಪೂರಕವಾಗಿ ದೃಕ್–ಶ್ರವಣೋಪಕರಣಗಳನ್ನು ಹೊಂದಿಸಿರಬೇಕು.**

ಭಾಷಾ ಕೌಶಲಗಳಾ ಮಾತುಗಾರಿಕೆ, ಬರೆವಣಿಗೆ, ಆಲಿಸುವಿಕೆ, ಓದುಗಾರಿಕೆಗೆ ಪೂರಕವಾಗಿ ದೃಕ್–ಶ್ರವಣೋಪಕರಣಗಳನ್ನು ಹೊಂದಿಸಿರಬೇಕು.

**5. ಅವಶ್ಯಕತೆ, ಆಸಕ್ತಿ, ಕಲಿಕೆ ಮುಂತಾದ ವ್ಯಕ್ತಿ ಭಿನ್ನತೆಯನ್ನು ಆಧರಿಸಿ, ಯೋಜನೆ ರೂಪುಗೊಂಡಿರಬೇಕು.**

ಭಾಷಾ ಸಾಮರ್ಥ್ಯಗಳು, ವಿವಿಧ ಸಾಹಿತ್ಯ ಪ್ರಕಾರಗಳು ಇತ್ಯಾದಿಗಳನ್ನು ಆಧರಿಸಿ, ಯೋಜನೆಯನ್ನು ರೂಪಿಸಿರಬೇಕು.

**6. ಮೌಲ್ಯಮಾಪನ ಒಂಳಗೊಂಡಂತೆ ಯೋಜನೆ ರಚಿತವಾಗಿರಬೇಕು.**

ಭಾಷಾ ಬೋಧನೆಯ ಕುರಿತ ಘಟಕಯೋಜನೆ ಘಟಕ ಪರೀಕ್ಷೆ ಯುಕ್ತವಾಗಿರಬೇಕು. ಮೌಖಿಕ ಹಾಗೂ ಲಿಖಿತ ಪರೀಕ್ಷೆ ಎರಡನ್ನೂ ಒಳಗೊಳ್ಳಬೇಕು.

**7. ಸ್ಥಿತಿಸ್ಥಾಪಕತೆಯ ಗುಣವನ್ನು ಹೊಂದಿದ್ದು, ಬದಲಾವಣೆಗೆ ಅವಕಾಶ ಇರಬೇಕು.**

ಭಾಷಾ ಘಟಕ ಯೋಜನೆ, ನಿರ್ದಿಷ್ಟ ಚೌಕಟ್ಟಿನೊಳಗೆ, ಕೇಂದ್ರೀಕೃತವಾಗಿರದೇ, ನಮ್ಯತೆಯ ಗುಣವನ್ನು ಹೊಂದುತ್ತದೆ.

**ಘಟಕ ಯೋಜನೆಯ ಹಂತಗಳು**

ಘಟಕ ಯೋಜನೆ ಪಾಠಯೋಜನೆಗೆ ಆಧಾರ ಯೋಜನೆಯಾಗಿದ್ದು, ಸಂಪನ್ಮೂಲ ಘಟಕದಿಂದ ನಿರೂಪಿಸಲಾದಂತಹ ಯೋಜನೆಯಾಗಿದೆ. ಘಟಕ ಯೋಜನೆಯನ್ನು ಪ್ರಧಾನವಾಗಿ ಮೂರು ಹಂತಗಳಲ್ಲಿ ಆಯೋಜಿಸಬಹುದಾಗಿದೆ.

**ಸಿದ್ಧತಾ ಹಂತ:** ಘಟಕ ಯೋಜನೆ ತಯಾರಿಕೆಗೂ ಮಂಚಿತವಾಗಿ, ಘಟಕವನ್ನು ಇಡಿಯಾಗಿ ಅಭ್ಯಸಿಸಿ, ಸಂಪನ್ಮೂಲ ಘಟಕವನ್ನು ರಚಿಸಿ, ಘಟಕಯೋಜನೆಗೆ ಸಿದ್ಧತೆಯನ್ನು ನಡೆಸುವುದು. ಭಾಷಾ ಬೋಧನೆಗಾಗಿ ಘಟಕ ಆಯ್ಕೆ, ಘಟಕ ಬೋಧನೆಯ ಮಹತ್ವವನ್ನು ಗುರುತಿಸುವುದು. ಯುಕ್ತ ಸಂಪನ್ಮೂಲಗಳ ಸಂಘಟನೆ ಈ ಹಂತದ ಪ್ರಕ್ರಿಯೆಯಾಗಿದೆ. ಘಟಕ ಯೋಜನೆಗೆ ಸಂಬಂಧಿಸಿದಂತೆ ಭಾಷಾ ಬೋಧನಾ/ಕಲಿಕಾ ಸಂಪನ್ಮೂಲಗಳೆಂದರೆ, ಉದ್ದೇಶಗಳು, ಬೋಧನಾ / ಕಲಿಕಾ ವಿಧಾನಗಳು, ಭಾಷಾ ಸಂಪನ್ಮೂಲಗಳು, ಮೌಲ್ಯಮಾಪನ ಸಾಧನಗಳು ಎಲ್ಲವನ್ನೂ ತುಸು ಹೆಚ್ಚಾಗಿಯೇ ಒಳಗೊಳ್ಳುತ್ತದೆ. ಭಾಷಾ ಕುಶಲತೆಗಳ ಅಭಿವೃದ್ಧಿಗಾಗಿ ವಿವಿಧ ರೀತಿಯ ಚಟುವಟಿಕೆಗಳನ್ನು ಪೂರಕವಾಗಿ ಯೋಜಿಸಿಕೊಳ್ಳುವ ಪ್ರಕಾರ್ಯ ಈ ಹಂತದಲ್ಲಿ ಜರುಗುತ್ತದೆ.

**ಸಿದ್ಧತಾಹಂತದ ಪ್ರಕ್ರಿಯೆಗಳು:**

**ಘಟಕ ವಿಶ್ಲೇಷಣೆ:** ಘಟಕವನ್ನು ಬೋಧನೆಗೆ ಅನುಕೂಲವಾಗುವಂತೆ, ಪಾಠಗಳನ್ನಾಗಿ ವಿಶ್ಲೇಷಿಸುವುದು, ಪಾಠಗಳನ್ನು ಪ್ರಧಾನ ಹಾಗೂ ಉಪಪರಿಕಲ್ಪನೆಗಳಾಗಿ ವಿಶ್ಲೇಷಿಸುವುದು ಇಲ್ಲಿನ ಪ್ರಕ್ರಿಯೆಯಾಗಿದೆ. ಭಾಷಾ ಬೋಧನೆಯಲ್ಲಿಯೂ ಘಟಕಯೋಜನೆಯನ್ನು ರೂಪಿಸುವಾಗ ಗದ್ಯ ಅಥವಾ ಪದ್ಯ ಭಾಗದಲ್ಲಿ ಅರ್ಥಪೂರ್ಣವಾಗಿ ವಿಶ್ಲೇಷಿಸುವುದು ಇಲ್ಲಿನ ಪ್ರಕ್ರಿಯೆಯಾಗಿದೆ. ಉದಾಹರಣೆಗೆ, 'ತಲಕಾಡಿನ ವೈಭವ' ಘಟಕವನ್ನು ಬೋಧನೆ / ಕಲಿಕೆಯ ದೃಷ್ಟಿಯಿಂದ 6 ಅವಧಿಗಳಿಗಾಗಿ 6 ಉಪಘಟಕಗಳನ್ನಾಗಿ ವಿಶ್ಲೇಷಿಸಬಹುದಾಗಿದೆ.

1. ಕರುನಾಡ ಇತಿಹಾಸದಲ್ಲಿ ತಲಕಾಡು
2. ಕನ್ನಡ ಬಾವುಟ
3. ದೇಗುಲಗಳ ಬೀಡು ತಲಕಾಡು
4. ಯುರೇಕಾ
5. ಹೊಯ್ಸಳ
6. ಬದುಕು ನಯವಾಗಿಸುವ ದೇವಾಲಯ

**ವಿವಿಧ ಉಪಘಟಕಗಳಿಗೆ ಸಂಜ್ಞಾನಾತ್ಮಕ ನಕ್ಷೆಯನ್ನು ರಚಿಸಿಕೊಳ್ಳುವುದು:**

ಸಂಜ್ಞಾನಾತ್ಮಕ ನಕ್ಷೆ ಬೋಧನಾ / ಕಲಿಕಾ ಪ್ರಕ್ರಿಯೆ ರೂಪುರೇಷೆಯಾಗಿದ್ದು, ವಿಷಯದ ಸ್ವರೂಪ, ಸ್ವರೂಪಾಧಾರಿತ ಬೋಧನಾ / ಕಲಿಕಾ ಅನುಭವಗಳ ರೂಪುರೇಷೆಯನ್ನು ಪ್ರತಿನಿಧಿಸುತ್ತದೆ. ಉದಾಹರಣೆಗೆ,




ಪಠ್ಯ ವಿಶ್ಲೇಷಣೆ ಹಾಗೂ ಕಲಿಕಾ ಅನುಭವಗಳಿಗೂ ಈ ನಕ್ಷೆಯನ್ನು ಜೋಡಿಸಬಹುದಾಗಿದೆ. ಮಾದರಿ ಹೀಗಿದೆ.




| **ಪರಿಕಲ್ಪನಾ ನಕ್ಷೆ** | |
|---|---|
| ಪಧಾನ ಪರಿಕಲ್ಪನೆ–1 | ಉಪಪರಿಕಲ್ಪನೆ 1.1, ಉಪಪರಿಕಲ್ಪನೆ 1.2 ಉಪಪರಿಕಲ್ಪನೆ 1.3 |
| ಪ್ರಧಾನ ಪರಿಕಲ್ಪನೆ–2 | ಉಪಪರಿಕಲ್ಪನೆ 2.1, ಉಪಪರಿಕಲ್ಪನೆ 2.2, ಉಪಪರಿಕಲ್ಪನೆ 2.3 |
| ಪ್ರಧಾನ ಪರಿಕಲ್ಪನೆ –3 | ಉಪಪರಿಕಲ್ಪನೆ 3.1, ಉಪಪರಿಕಲ್ಪನೆ 3.2, ಉಪಪರಿಕಲ್ಪನೆ 3.3 |

**ಪ್ರಧಾನ ಪರಿಕಲ್ಪನೆ 1: ಪಾತ್ರ ಪ್ರವೇಶ:**
1.1: ಅರ್ಥ: ಮಗ್ಗ, ವಾಡಿಕೆ(ಅರ್ಥೈಸುವಿಕೆ)
ಅನ್ಯದೇಶ್ಯಗಳು: ಸಾಹೇಬ, ಬಹಾದ್ದೂರ(ಕನ್ನಡೀಕರಿಸುವಿಕೆ)
1.2: ಪಾತ್ರಪೋಷಣೆ: ಮಗ್ಗದ ಸಾಹೇಬ(ನಿರೂಪಿಸುವಿಕೆ)
1.3: ಅನ್ವರ್ಥನಾಮ: ಮಗ್ಗದ ಸಾಹೇಬ
ಕಲಿವಿನ ಫಲಗಳು: ಜಾತ್ಯತೀತತೆಯನ್ನು ತೊರೆದು ಸಾಮಾಜಿಕ ಐಕ್ಯತೆಯಿಂದ ಅನನ್ಯತೆ, ಧಾರ್ಮಿಕ ಸಮನ್ವಯತೆ ಸಾಧಿಸಬಹುದು. ನಿರೂಪಣೆಯ ಸೊಬಗು, ಪಾತ್ರಚಿತ್ರಣದಲ್ಲಿ ನಿಖರತೆಯನ್ನು ಗಮನಿಸುವುದು.

**ಪ್ರಧಾನ ಪರಿಕಲ್ಪನೆ 2: ಪಾತ್ರ ವಿಸ್ತರಣೆ**
2.1 ಅರ್ಥ: ಪ್ರತಿಷ್ಠಿತ(ಅರ್ಥೈಸುವಿಕೆ)
ಜೋಡಿಪದ: ಭಕ್ಷ್ಯ–ಭೋಜ್ಯ(ಜೋಡಿಸುವಿಕೆ, ಪ್ರಯೋಗ)
2.2 ಆಚರಣೆ: ಕೊಡುಕೊಳ್ಳುವಿಕೆ: ಉರ್ಸ್, ಗಣೇಶ ಚತುರ್ಥಿ, ಕೃಷ್ಣಾಷ್ಟಮಿ, ಆಚರಣೆಗಳ ವಿಶೇಷ, ಪ್ರಯೋಜನಗಳು
2.3: ಪ್ರಕಾರವಾಚಕ: ಇಂತಹ, ಅಂತಹ
ಕಲಿವಿನ ಫಲಗಳು: ಧಾರ್ಮಿಕ ಐಕ್ಯತೆಯ ಜೊತೆಗೆ ಸಂಸ್ಕೃತಿಯ ರಕ್ಷಣೆ ನಮ್ಮ ಹೊಣೆ, ನಿರೂಪಣೆಯ ನಿರರ್ಗಳತೆಗೆ ಗಮನ.

**ಪ್ರಧಾನ ಪರಿಕಲ್ಪನೆ 3: ಮಗ್ಗವಲ್ಲ ಹಗ್ಗ.**
3.1 ಅರ್ಥ: ಅನಿಷ್ಟ, ವಿಲಾಯಿತಿ, ನಿಕೃಷ್ಟ, ಕಳೇಬರ, ವಿವರ್ಣ, ಅಗ್ಗ(ಅರ್ಥೈಸುವಿಕೆ)

3.2 ಜಾಣ್ನುಡಿ: 'ಮಗ್ಗವಲ್ಲ; ಕೊರಳಿಗೆ ಹಗ್ಗ' 'ಅನ್ನಕ್ಕೆ ಸಂಚಕಾರ'(ವಿಸ್ತರಣೆ)
3.3: ಭಾವಸೂಚಕ ಚಿಹ್ನೆ: ಗುರುತಿಸುವಿಕೆ, ಬಳಸುವಿಕೆ
ಕಲಿವಿನ ಫಲಗಳು: ಪರಾಧೀನತೆಯ ಪರಿಣಾಮವಾಗಿ ಸ್ವದೇಶೀಯತೆ, ವಿವೇಚನಾಶೀಲತೆ ಬೆಳೆಯದು. ಸಣ್ಣಕತೆಯೊಂದು ಪ್ರಾರಂಭವಾಗುವ, ಬೆಳೆಯುವ ಮತ್ತು ಮುಕ್ತಾಯಗೊಳ್ಳುವುದರ ಕುರಿತ ಗಮನ, ಅರಿವು, ಅದರ ಸವಿಯ ಅನುಭವ.

**ಪ್ರಸ್ತುತಿ ಹಂತ:**

**ಬೋಧನಾ / ಕಲಿಕಾ ಅನುಭವಗಳ ಜೋಡಣೆ:** ವಿಶ್ಲೇಷಿತ ಪಾಠಗಳಿಗೆ, ಬೋಧನಾ / ಕಲಿಕಾ ಅನುಭವಗಲನ್ನು ಹೊಂದಿಸುವುದು ಈ ಹಂತದ ಕಾರ್ಯವಾಗಿದೆ. ಬೋಧನೆಯ ಸಾಮಾನ್ಯ ಉದ್ದೇಶಗಳನ್ನು ನಿರೂಪಿಸಿಕೊಂಡು, ಅದಕ್ಕೆ ಪೂಕವಾಗಿ ನಿರ್ದಿಷ್ಟ ಉದ್ದೇಶಗಳನ್ನು ನಿರೂಪಿಸಬೇಕಾಗುತ್ತದೆ.

ಉದಾಹರಣೆಗೆ, ಕನ್ನಡನಾಡು–ನುಡಿ–ಸಂಸ್ಕೃತಿಯ ಮೇಲೆ ಗೌರವ ಬೆಳೆಸುವುದು, ಕನ್ನಡ ಸಾಹಿತ್ಯದ ಪ್ರಕಾರಗಳನ್ನು ತಿಳಿದುಕೊಳ್ಳುವುದು ಇತ್ಯಾದಿ ಸಾಮಾನ್ಯ ಉದ್ದೇಶಗಳನ್ನು ಭಾಷೆ, ಸಾಹಿಯ, ವ್ಯಾಕರಣಾಂಶದ ನೆಲೆಯಲ್ಲಿ ನಿರೂಪಿಸಿರಬೇಕು.

ವಿದ್ಯಾಥಿಯು ಲೇಖಕರು ಪಯಣದ ವಿವರ ಬರೆಯುತ್ತಿದ್ದ ಸ್ಥಳವನ್ನು ಹೆಸರಿಸುತ್ತಾನೆ.
ವಿದ್ಯಾರ್ಥಿಯು ನಿಲ್ಮನೆ, ಉಜ್ವಲ, ಉದ್ಯಮ, ಹೊಳಲು ಪದಗಳನ್ನು ಅರ್ಥೈಸುತ್ತಾನೆ'.

ವಿದ್ಯಾರ್ಥಿಯು ಸಂಧಿಯನ್ನು ವ್ಯಾಖ್ಯಾನಿಸುತ್ತಾನೆ.
ನಿರೂಪಿಸಿದ ನಿರ್ದಿಷ್ಟಕಗಳಿಗೆ ಅನುಗುಣವಾಗಿ ಕಲಿಕಾ ಅನುಭವಗಳನ್ನು ಹೊಂದಿಸಬೇಕಾಗುತ್ತದೆ.

ಬೋಧನಾ / ಕಲಿಕಾ ಚಟುವಟಿಕೆಗಳನ್ನು ಕಲಿಕಾ ಅನುಭವಗಳ ಒದಗಣೆಗಾಗಿ ಯೋಜಿಸಬೇಕಾಗುತ್ತದೆ. ಭಾಷಾ ಬೋಧನೆಯಲ್ಲಿ ವಿಶ್ಲೇಷಣೆ, ಸಂಶ್ಲೇಷಣೆ, ಚರ್ಚೆ, ನಿರೂಪಣೆ, ಉದಾಹರಣೆ, ಪ್ರಶ್ನೆ, ವರ್ಣನೆ ಇತ್ಯಾದಿ ತಂತ್ರಗಳನ್ನು ಸಂಯೋಜಿಸಬಹುದಾಗಿದೆ. ಉದಾಹರಣೆಗೆ, ಪದ್ಯ 'ಭಾರತೀಯತೆ' ಕುರಿತಂತೆ, ಬೋಧನಾ / ಕಲಿಕಾ ಅನುಭವಯುಕ್ತ ಚಟುವಟಿಕೆಯ ಜೋಡಣೆ.

| ನಿರ್ದಿಷ್ಟಕಗಳು | ಬೋಧನಾ /ಕಲಿಕಾ ಚಟುವಟಿಕೆಗಳು | ಕಲಿಕಾ ಅನುಭವ |
|---|---|---|
| ಗುರುತಿಸುವನು | "ಆಕಾಶಕ್ಕೆದ್ದು ನಿಂತ ಪರ್ವತ ಹಿಮ ಮೌನದಲ್ಲಿ" ಇಲ್ಲಿರುವ ಅಲಂಕಾರ ಯಾವುದು? | ಕಾವ್ಯ ರಚನೆಯ ವಿಶಿಷ್ಟತೆಯ ಅನುಭವ |

**ಸಂಪನ್ಮೂಲಗಳನ್ನು ಹೊಂದಿಸುವುದು:** ಬೋಧನಾ-ಕಲಿಕಾ ಅನುಭವಗಳಿಗೆ ಅನುಗುಣವಾಗಿ ಅವಶ್ಯಕ ದೃಕ್-ಶ್ರವಣೋಪಕರಣಗಳಾದ, ಚರ್ಚೆ, ಸಂಭಾಷಣೆ ಮುಂತಾದ ಬೋಧನಾ ತಂತ್ರಗಳು ಎಲ್ಲವನ್ನೂ ಹೊಂದಿಸವುದು ಇಲ್ಲಿನ ಪ್ರಕ್ರಿಯೆಯಾಗಿದೆ. ಭಾಷಾ ಕುಶಲತೆಗಳನ್ನು ಪೋಷಿಸುವ ಸಂಪನ್ಮೂಲಗಳನ್ನು ಸಂಯೋಜಿಸುವುದು ಇಲ್ಲಿನ ಅಗತ್ಯತೆಯಾಗಿದೆ.

**ಬೋಧನೋತ್ತರ ಹಂತ:**

**ಮೌಲ್ಯಮಾಪನಕ್ಕಾಗಿ ಘಟಕ ಪರೀಕ್ಷೆಯ ರೂಪಣೆ:** ಉದ್ದೇಶ ಸಾಧನೆ, ಮಕ್ಕಳ ಬೋಧನಾ / ಕಲಿಕೆಯ ಅನುಭವಗಳ ಗಳಿಕೆ ಕುರಿತಂತೆ ಮೌಲ್ಯಮಾಪನ ಇಲ್ಲಿನ ಪ್ರಕ್ರಿಯೆಯಾಗಿದೆ. ಅರ್ಥಗ್ರಹಿಕೆ, ಅಭಿವ್ಯಕ್ತಿ, ರಸಾಸ್ವಾದನೆಯ ಉದ್ದೇಶದ ನೆಲೆಗಟ್ಟಿನಲ್ಲಿ, ಭಾಷಾ ಮೌಲ್ಯಮಾಪನಕ್ಕಗಿ ನೀಲನಕಾಶೆ ರಚಿಸಿ, ಸಮತೋಲಿತ ಪ್ರಶ್ನೆ ಪತ್ರಿಕೆಯನ್ನು ರಚಿಸಿ, ಘಟಕ ಪರೀಕ್ಷೆಯನ್ನು ರಚಿಸುವುದು. ಮೌಖಿಕ ಹಾಗೂ ಲಿಖಿತ ಪರೀಕ್ಷೆ ಎರಡೂ ಭಾಷಾ ಬೋಧ'ನೆಯಲ್ಲಿ ನಿರ್ವಹಿಸಲೇಬೇಕಾದ ಅವಶ್ಯಕ ಮೌಲ್ಯಮಾಪನ ಕ್ರಮವಾಗಿದೆ.

**ಪರಿಹಾರ ಬೋಧನೆ:** ಘಟಕ ಪರೀಕ್ಷೆಯ ನಂತರ, ಪರೀಕ್ಷಾ ಫಲಿತವಾಗಿ ಹೊರಬಂದ ವಿದ್ಯಾರ್ಥಿಗಳ ಸಾಧನೆಯನ್ನು ವಿಶ್ಲೇಷಿಸಿ, ಕಲಿಕಾ ದೋಷಗಳಿಗೆ ಪರಿಹಾರವನ್ನು ಒದಗಿಸುವಲ್ಲಿ, ಸಾಂದರ್ಭಿಕವಾಗಿ ಯೋಜಿಸುವ ಬೋಧನಾ ಯೋಜನೆ ಇಲ್ಲಿ ರೂಪಿಸಬೇಕಾಗುತ್ತದೆ.

**ಘಟಕಯೋಜನೆಯ ಗುಣಗಳು:**

- ಘಟಕ ಯೋಜನೆಯು ಬೋಧನಾ / ಕಲಿಕೆಗೆ ವಿವಿಧ ರೀತಿಯ ಅನುಭವಗಳನ್ನು ಹೊಂದಿಸುವಲ್ಲಿ ಉತ್ತಮ ಯೋಜನೆಯಾಗಿದೆ.
- ವಿದ್ಯಾರ್ಥಿಗಳ ಕಲಿಕಾ ಅಗತ್ಯಗಳಿಗೆ ಅನುಗುಣವಾಗಿ ರೂಪಿಸುವ ಯೋಜನೆಯಾಗಿದೆ.
- ಮನೋವೈಜ್ಞಾನಿಕ ನೆಲೆಗಟ್ಟಿನಲ್ಲಿ ಕಲಿಕೆಗೆ ಅನುವು ಮಾಡಿಕೊಡುತ್ತದೆ.
- ಭಾಷಾ ಕೌಶಲಗಳ ಅಭಿವೃದ್ಧಿಗೆ ನೆಲೆಯನ್ನು ಒದಗಿಸಿಕೊಡಬಲ್ಲ ಯೋಜನೆಯಾಗಿದೆ.
- ದೈನಂದಿನ ಪಾಠಯೋಜನೆಯ ರಚನೆಗೆ ಶಿಕ್ಷಕನಿಗೆ ಸಹಕಾರಿಯಾಗುತ್ತದೆ.
- ಇದೊಂದು ಇಡೀ ಯೋಜನೆಯಾಗಿ ಗೋಚರಿಸುತ್ತದೆ.

**ಘಟಕಯೋಜನೆಯ ಮಿತಿಗಳು**

- ಘಟಕಯೋಜನೆ ರಚನೆಗೆ ಶಿಕ್ಷಕರಿಗೆ ಸಾಕಷ್ಟು ತರಬೇತಿ ಅವಶ್ಯಕ.
- ಬಿಡಿ ನೆಲೆಯಲ್ಲಿ ಯೋಜನೆಯಾಗುವುದಿಲ್ಲವಾದ್ದರಿಂದ ಮಕ್ಕಳಿಗೆ ಅಗತ್ಯ ಅನುಭವದ ಜೋಡಣೆ ಸಾಧ್ಯವಾಗುವುದಿಲ್ಲ.
- ಶಿಕ್ಷಕರು ದೈನಂದಿನ ಪಾಠ ಯೋಜನೆಯೇ ಬೋಧನೆಗೆ ಲಭ್ಯವಾಗುವುದರಿಂದ, ಈ ಯೋಜನೆ ಶಿಕ್ಷಕನಿಗೆ ಹೊರೆಯಾಗಲಿದೆ,
- ಘಟಕಯೋಜನೆಯಲ್ಲಿ ನಮ್ಯತೆ ಇಲ್ಲದಿದ್ದರೆ, ಪಾಠಯೋಜನೆಯನ್ನು ಅದನ್ನು ಆಧರಿಸಿ, ಪುನರ್‌ರಚಿಸಿಕೊಳ್ಳುವುದು ಕಷ್ಟ.
- ಘಟಕಯೋಜನೆ ಹೆಚ್ಚಿನ ಸಂಪನ್ಮೂಲಗಳನ್ನು ಅಪೇಕ್ಷಿಸುತ್ತದೆ.

**ಘಟಕಯೋಜನೆ ಹಾಗೂ ಪಾಠಯೋಜನೆಯ ನಡುವಣ ವ್ಯತ್ಯಾಸಗಳು.**

| ಅಂಶಗಳ ಆಧಾರ | ಘಟಕ ಯೋಜನೆ | ಪಾಠಯೋಜನೆ |
|---|---|---|
| ಅನುಭವಗಳ ಸ್ವರೂಪ | ಇಡಿಯಾದ ಅನುಭವ ಒದಗಿಸುವ ಯೋಜನೆಯಾಗಿದೆ | ಬಿಡಿಯಾದ ಅನುಭವ ಒದಗಿಸುವ ಯೋಜನೆಯಾಗಿದೆ. |
| ಅವಧಿ | 4 ರಿಂದ 10 ಅವಧಿಯವರೆವಿಗೂ ಯೋಜಿಸಬಹುದು. | ಒಂದು ಅವಧಿಗೆ ಸೀಮಿತವಾದ ಬೋಧನೆಯಾಗಿದೆ. |
| ವ್ಯಾಪ್ತಿ | ವಿಶಾಲವಾದ ವ್ಯಾಪ್ತಿಯನ್ನು ಹೊಂದಿದೆ | ಸಂಕುಚಿತ ವ್ಯಾಪ್ತಿಯನ್ನು ಹೊಂದಿದೆ |
| ಕೇಂದ್ರ / ಗಮನ | ವಿದ್ಯಾರ್ಥಿಕೇಂದ್ರವಾಗಿರುವುದು ಗೋಚರಿಸುತ್ತದೆ | ಶಿಕ್ಷಕಕೇಂದ್ರವಾಗಿರುವುದು ಗೋಚರಿಸುತ್ತದೆ |
| ನಿರಂತರತೆ | ಬೋಧನೆ / ಕಲಿಕೆಯಲ್ಲಿ ನಿರಂತರತೆ ಇರುತ್ತದೆ | ನಿರಂತರತೆ ಇರುವುದಿಲ್ಲ |
| ಮೌಲ್ಯಮಾಪನ | ಘಟಕದ ಅಂತ್ಯದಲ್ಲಿ ಘಟಕ ಪರೀಕ್ಷೆಯನ್ನು ನೆರವೇರಿಸಲಾಗುತ್ತದೆ | ಪಾಠದ ಅಂತ್ಯದಲ್ಲಿ ಮೌಲ್ಯಮಾಪನ ಪ್ರಶ್ನೆಗಳನ್ನು ಕೇಳಲಾಗುತ್ತದೆ ಅಥವಾ ಚಟುವಟಿಕೆಗಳನ್ನು ನಿರ್ವಹಿಸಲಾಗುತ್ತದೆ |
| ಪರಿಗಣನೆ | ಸಮಗ್ರ ನೆಲೆಯಲ್ಲಿ ವಿವಿಧ ವಿಷಯಗಳನ್ನು ಸಮನ್ವಯಿಸಿ ಪರಿಗಣಿಸಲಾಗುತ್ತದೆ. | ಸೂಕ್ಷ್ಮ ನೆಲೆಯಾದ್ದರಿಂದ, ಸಮನ್ವಯತೆ ಅಲ್ಪ ಪ್ರಮಾಣದಲ್ಲಿ ಕಡಿಮೆ. |
| ಪರಿಹಾರ ಬೋಧನೆ | ಪರಿಹಾರ ಬೋಧನೆ ಇರುತ್ತದೆ. | ಪರಿಹಾರ ಬೋಧನೆ ಇರುವುದಿಲ್ಲ. |

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

ನಿಮ್ಮ ಆಯ್ಕೆಯ ಒಂದು ಪಾಠಕ್ಕೆ ಘಟಕ ಯೋಜನೆ ತಯಾರಿಸಿ. ಅದು ನಿಮ್ಮ ಪಾಠಯೋಜನೆಯನ್ನು ರೂಪಿಸಲು ಎಷ್ಟರಮಟ್ಟಿಗೆ ಸಹಾಯವಾಯಿತು ಎಂಬುದನ್ನು ದಾಖಲಿಸಿ.

**4.2.3.2. ಸಂಪನ್ಮೂಲ ಘಟಕ ಯೋಜನೆ**

ನಿಗದಿತ ಗುರಿಯನ್ನು ತಲುಪಲು ಪೂರ್ವಭಾವಿಯಾಗಿ ಅವಶ್ಯಕವಾದಂತಹ ಚಟುವಟಿಕೆಗಳನ್ನು ಚಿಂತಿಸುವ ಪ್ರಕ್ರಿಯೆಯನ್ನೇ 'ಯೋಜನೆ' ಎನ್ನುವರು.

ಭಾಷಾ ಬೋಧನೆಯ ಪ್ರಕ್ರಿಯೆಗೂ ಯೋಜನೆಯ ಅಗತ್ಯತೆ ಇದ್ದು ಬೋಧನೆಗೆ ಚಟವಟಿಕೆಗಳ ಸೃಷ್ಟಿ, ಚಟುವಟಿಕೆಗಳ ಅನುಷ್ಠಾನದ ಕ್ರಮಗಳು ಹಾಗೂ ಚಟುವಟಿಕೆಗಳ ಮೌಲ್ಯಮಾಪನ ಕ್ರಮಗಳನ್ನು ಕುರಿತಂತೆ ಪೂರ್ವಯೋಜನೆಯನ್ನು ರೂಪಿಸಿ, ಅನುಭವಗಳನ್ನು ಬೋಧನಾ ಪೂರ್ವದಲ್ಲಿಯೇ ನಿರ್ಧರಿಸಲಾಗುತ್ತದೆ. ಭಾಷಾ ಬೋಧನೆ / ಕಲಿಕೆಯು ವಿಶಿಷ್ಟ ಪ್ರಕ್ರಿಯೆಯಾಗಿದ್ದು, ಇದರ ಯಶಸ್ಸು ವಿವಿಧ ಯೋಜನೆಗಳನ್ನು ರೂಪಿಸುವುದರಲ್ಲಿ ನೆಲೆಯಾಗುತ್ತದೆ. ಭಾಷಾ ಬೋಧನೆಯ ಯೋಜನೆಯಲ್ಲಿ ಪ್ರಪ್ರಥಮವಾಗಿ ರೂಪಿಸುವ ಯೋಜನೆಯೆಂದರೆ, 'ಸಂಪನ್ಮೂಲ ಘಟಕ ಯೋಜನೆ'ಯಾಗಿದೆ.

**ಸಂಪನ್ಮೂಲ ಘಟಕ ಯೋಜನೆಯ ಅರ್ಥ:**

ಸಂಪನ್ಮೂಲ ಘಟಕ ಯೋಜನೆ ಒಂದು ಸಂಚಯಿತ ಯೋಜನೆಯಾಗಿದ್ದು, ಹೆಚ್ಚುವರಿ ಬೋಧನಾ ಉದ್ದೇಶಗಳು, ಬೋಧನಾ ಕಲಿಕಾ ಚಟುವಟಿಕೆಗಳು, ವಿವಿಧ ಬೋಧನಾ–ಕಲಿಕಾ ಸಾಧನ ಹಾಗೂ ತಂತ್ರಗಳು, ಬೋಧನಾ–ಕಲಿಕಾ ಸಂಪನ್ಮೂಲಗಳು, ಮೌಲ್ಯಮಾಪನ ಸಾಧನಗಳು ಮತ್ತು ತಂತ್ರಗಳು, ಪರಾಮರ್ಶನಾ ಸಾಮಗ್ರಿಗಳು ಇತ್ಯಾದಿಗಳನ್ನು ಒಂದು ನಿರ್ದಿಷ್ಟ ತರಗತಿ ಬೋಧನೆಗಾಗಿ ಹೊಂದಿಸುವ ಯೋಜನೆಯಾಗಿದೆ.

**ಸಂಪನ್ಮೂಲ ಘಟಕ ಯೋಜನೆಯ ಲಕ್ಷಣಗಳು:**

- ಈ ಯೋಜನೆಯ ವ್ಯಾಪ್ತಿ ವಿಶಾಲವಾದುದು.
- ಇದರ ಸ್ವರೂಪ ಸಮಗ್ರ ನೆಲೆಯಲ್ಲಿರುತ್ತದೆ.
- ಹಲವಾರು ಭಾಷಾ ಶಿಕ್ಷಕರು ಸೇರಿ ಈ ಯೋಜನೆಯನ್ನು ತಯಾರಿಸುತ್ತಾರೆ.
- ವೈವಿಧ್ಯಮಯ ಬೋಧನಾ–ಕಲಿಕಾ ಅನುಭವಗಳನ್ನು ಜೋಡಿಸಲಾಗಿರುತ್ತದೆ.
- ಇದೊಂದು ಸಂಚಯಿತ ಯೋಜನೆಯಾಗಿದೆ.
- ಸಂಪನ್ಮೂಲ ಘಟಕ ಯೋಜನೆಯು ಶಿಕ್ಷಕನಿಗೆ ಬೋಧನೆ/ಕಲಿಕೆಗಾಗಿ ಆಯ್ಕೆಗಳನ್ನು ಒದಗಿಸಿಕೊಡುತ್ತದೆ.

**ಸಂಪನ್ಮೂಲ ಘಟಕದ ಅಗತ್ಯ ಅಡಕಗಳು:**

ಸಂಪನ್ಮೂಲ ಘಟಕವು ಪ್ರಧಾನವಾಗಿ ವಿವಿಧ ರೀತಿಯ ಚಟುವಟಿಕೆಗಳು, ಬೋಧನಾ / ಕಲಿಕಾ ಅನುಭವಗಳು, ಬೋಧನಾ ಸಂಪನ್ಮೂಲಗಳು ಮೌಲ್ಯಮಾಪನ ಹಾಗೂ ಪರಾಮರ್ಶನಕ್ಕಾಗಿ ಸಾಮಗ್ರಿಗಳನ್ನು ಒಳಗೊಳ್ಳಬೇಕು.

**ಬೋಧನಾ / ಕಲಿಕಾ ಚಟುವಟಿಕೆಗಳು:**

ಸಂಪನ್ಮೂಲ ಘಟಕವು ಒಳಗೊಳ್ಳಬೇಕಾದ ಚಟುವಟಿಕೆಗಳನ್ನು 3 ರೀತಿಯಲ್ಲಿ ಗುರುತಿಸಬಹುದಾಗಿದೆ.

**ಪೀಠಿಕಾ ಚಟುವಟಿಕೆಗಳು:** ಒಂದು ಘಟಕಕ್ಕೆ ಸಂಬಂಧಿಸಿದಂತೆ, ಸಂಭಾಷಣೆ, ಗಾಯನ, ವಾಚನ, ಪ್ರಶ್ನೋತ್ತರ, ಪುಟ್ಟಭಾಷಣ, ಪುಟ್ಟನಾಟಕ, ಅಭಿನಯ ಇತ್ಯಾದಿ ಚಟುವಟಿಕೆಗಳನ್ನು ಒಳಗೊಂಡ ಕನಿಷ್ಟ 3 ರಿಂದ 5 ಅಥವಾ ಅದಕ್ಕೂ ಮಿಗಿಲಾದ ಪೀಠಿಕೆಗಳನ್ನು ಇಲ್ಲಿ ಜೋಡಿಸಲಾಗುತ್ತದೆ.

**ವಿಕಾಸದ ಚಟುವಟಿಕೆಗಳು:** ಒಂದು ಗದ್ಯ ಬೋಧನಾ ಘಟಕಕ್ಕೆ ಸಂಬಂಧಿಸಿದಂತೆ, ಭಾಷೆ, ಸಾಹಿತ್ಯ ಹಾಗೂ ವ್ಯಾಕರಣಾಂಶಗಳು, ಪದ್ಯವಾದರೆ, ಛಂದಸ್ಸು- ಅಲಂಕಾರಗಳನ್ನು ಒಳಗೊಂಡಂತೆ ವಿವಿಧ ಚಟುವಟಕೆಗಳನ್ನು ಇಲ್ಲಿ ಜೋಡಿಸಿರಬೇಕಾಗುತ್ತದೆ.

ವಿವಿಧ ಆಯಾಮಗಳಲ್ಲಿ ಪಠ್ಯ ವಿಶ್ಲೇಷಣೆ, ಉದ್ದೇಶಗಳು, ಪರಿಕಲ್ಪನಾತ್ಮಕ ನಕ್ಷೆ, ಕಲಿಕಾ ಅನುಭವಗಳು ಇತ್ಯಾದಿಗಳನ್ನು ಸಾಹಿತ್ಯಾಂಶ, ಭಾಷಾಂಶ, ವ್ಯಾಕರಣಾಂಶಗಳ ನೆಲೆಯಲ್ಲಿ ನಿರ್ವಹಿಸಲಾಗಿರುತ್ತದೆ.

ಸಾಹಿತ್ಯಾಂಶಕ್ಕೆ ಸಂಬಂಧಿಸಿದಂತೆ, ಪಠ್ಯವಿಶ್ಲೇಷಣೆ, ಭಾಷಾಂಶಕ್ಕೆ ಸಂಬಂಧಿಸಿದಂತೆ, ಪದಗಳ ಅರ್ಥ, ವಿರುದ್ಧಾರ್ಥಕಗಳು, ತತ್ಸಮ-ತದ್ಭವಗಳು, ಅನ್ಯದೇಶೀಯಗಳು, ಗ್ರಾಮ್ಯ ಪದಗಳು, ಸ್ವಂತವಾಕ್ಯ ರಚನೆ ಇತ್ಯಾದಿ ಹಾಗೂ ಪಠ್ಯಕ್ಕೆ ಹೊಂದಿಕೊಂಡಂತೆ, ಸಂಧಿ, ಸಮಾಸ, ನಾಮಪದ, ಕ್ರಿಯಾಪದ ಇದ್ಯಾದಿ ವ್ಯಾಕರಣಾಂಶಗಳ ಅನುಭವವನ್ನು ಒದಗಿಸಲುಚಟುವಟಿಕೆಗಳನ್ನು ಜೋಡಿಸುವ ಅಗತ್ಯತೆಯಿದೆ. ಇವುಗಳಿಗೆ ಪೂರಕವಾಗಿ ಅರ್ಥಪೂರ್ಣವಾಚನ, ವಿವರಣೆ, ಸಮರ್ಥನೆ, ಚರ್ಚೆ, ಗಾಯನ, ಪ್ರಶ್ನೋತ್ತರ, ಪ್ರಶಂಸೆ, ಇತ್ಯಾದಿ ಬೋಧನಾ / ಕಲಿಕಾ ಚಟುವಟಿಕೆಗಳನ್ನು ಸಂಯೋಜಿಸುವುದು. ಒಂದೊಂದು ಸಾಹಿತ್ಯಾಂಶ, ಭಾಷಾಂಶ, ವ್ಯಾಕರಣಾಂಶ/ಛಂಧೋ-ಅಲಂಕಾರಾಂಶಗಳಿಗೆ ವೈವಿಧ್ಯಮಯ ಚಟುವಟಿಕೆಗಳನ್ನು ಸಂಯೋಜಿಸುವುದು ಸಂಪನ್ಮೂಲ ಘಟಕದ ನಿರೀಕ್ಷೆಯಾಗಿರುತ್ತದೆ.

5 'ಇ' ನೆಲೆಯಲ್ಲಿ ಪಾಠಯೋಜನೆಗೆ ಪೂರಕವಾಗಿ, ಅನ್ವೇಷಣೆಯ ಕ್ರಮಗಳು ಹಾಗೂ ವಿವರಣೆಯ ವಿಧಾನಗಳನ್ನು ಜೋಡಿಸುವುದು ಇಲ್ಲಿನ ಅಗತ್ಯವಾಗಿದೆ.

**ಪುನರಾವಲೋಕನ ಚಟುವಟಿಕೆಗಳು:** ಪ್ರಸ್ತುತ 5 'ಇ' ನೆಲೆಯಲ್ಲಿ, ಪಾಠಕ್ಕೆ ಸಂಬಂಧಿಸಿದಂತೆ, ಅಭ್ಯಾಸ, ಚರ್ಚೆ, ನಾಟಕೀಕರಣ, ವಿಮರ್ಶೆ, ಸೃಜನಶೀಲ ಬರಹ, ಕಂಠಪಾಠ ಇತ್ಯಾದಿಗಳನ್ನು ಇಲ್ಲಿ ಜೋಡಿಸಬಹುದಾಗಿದೆ. ಸಾಂಪ್ರದಾಯಿಕ ನೆಲೆಯಲ್ಲಿ ಪಾಠಕ್ಕೆ ಸಂಬಂಧಿಸಿದಂತೆ, ಪುನರಾವಲೋಕನ ಪ್ರಶ್ನೆಗಳು ಅದಕ್ಕೆ ಹೊಂದಿಕೊಂಡಂತೆ, ಉಪಘಟಕದ ನೆಲೆಯನ್ನು ಸಾರಾಂಶವನ್ನೂ ಜೋಡಿಸಬಹುದಾಗಿದೆ.

**ಕಲಿಕಾ ದೃಢತಾ ಚಟುವಟಿಕೆಗಳು:** ಕಲಿತ ಅಂಶಗಳನ್ನು ದೃಢೀಕರಿಸಲು ಮೌಲ್ಯಮಾಪನವನ್ನು ಮಾಡಬಹುದಾದ ಕ್ರಮಗಳನ್ನು ಈ ಚಟುವಟಿಕೆಗಳ ಅಡಿಯಲ್ಲಿ ನಮೂದಿಸುವ ಅಗತ್ಯವಿದೆ. ಪ್ರತಿ ಉಪಘಟಕಕ್ಕೆ ಸಂಬಂಧಿಸಿದಂತೆ, ಸಾಹಿತ್ಯಾಧಾರಿತ ಪ್ರಶ್ನೋತ್ತರಗಳು, ಭಾಷಾ ಕೌಶಲಗಳ ಗಳಿಕೆಯ ದೃಢೀಕರಣೆ ಅಭ್ಯಾಸ ಚಟುವಟಿಕೆಗಳು ಇತ್ಯಾದಿಗಳನ್ನು ಈ ಚಟುವಟಿಕೆಗಳ ಅಡಿಯಲ್ಲಿ ಜೋಡಿಸಿರಲಾಗುತ್ತದೆ.

**ಬೋಧನೋತ್ತರ ಚಟುವಟಿಕೆಗಳು:** ಬೋಧನೆಯ ನಂತರ ಮಕ್ಕಳಿಗೆ ನೀಡಲಾಗುವ ಗೃಹಕಾರ್ಯ, ನಿಯೋಜಿತ ಕಾರ್ಯ, ಮಾರ್ಗದರ್ಶಿತ ಚಟುವಟಿಕೆಗಳು, ಯೋಜನಾ ಕಾರ್ಯ, ಕ್ಷೇತ್ರ ಸಂದರ್ಶನ, ಕವಿ ಸಂದರ್ಶನ, ಮಾಹಿತಿ ಸಂಗ್ರಹಣೆ ಮತ್ತು ವರದಿ ಇದ್ಯಾದಿ ಕಾರ್ಯ ಚಟುವಟಿಕೆಗಳನ್ನು ಇಲ್ಲಿ ಹೊಂದಿಸಲಾಗುತ್ತದೆ. ಘಟಕಪರೀಕ್ಷೆಯ ವಿಶ್ಲೇಷಣೆಯ ಸಂಭಾವ್ಯತೆ ಆಧರಿಸಿ, ಸಂಭಾವ್ಯ ಪರಿಹಾರ ಕ್ರಮಗಳನ್ನು ಇಲ್ಲಿ ಯೋಜಿಸಬಹುದಾಗಿದೆ.

**ಬೋಧನಾ ಸಂಪನ್ಮೂಲಗಳು:**

ಇಡೀ ಬೋಧನಾ ಘಟಕಕ್ಕೆ ಸಂಬಂಧಿಸಿದಂತೆ, ಅಗತ್ಯವಾಗಿರುವ ಬಳಸಬಹುದಾದ ಬೋಧನಾ / ಕಲಿಕಾ ಸಂಪನ್ಮೂಲಗಳನ್ನು ಇಲ್ಲಿ ನಮೂದಿಸಲಾಗುತ್ತದೆ. ಪದಬಂಧ, ದೃಕ್‌ಶ್ರವಣೋಪಕರಣಗಳು, ಚಾರ್ಟ್‌ಗಳು, ಮಾಹಿತಿ ಸಂವಹನ ತಂತ್ರಜ್ಞಾನ ಆಧಾರಿತ ಕಲಿಕಾ ಸಾಧನಗಳು, ಮಾದರಿಗಳು ಇತ್ಯಾದಿಗಳನ್ನು ಇಲ್ಲಿ ಜೋಡಿಸಲಾಗರುತ್ತದೆ. ಕವಿ, ಲೇಖಕರ ಸಂದರ್ಶನಾ ವೀಡಿಯೋಗಳು, ವ್ಯಾಕರಣಕ್ಕೆ ಸಂಬಂಧಿಸಿದ, ಡಿಜಿಟಲ್

ಸಾಧನಗಳು, ಉಚ್ಚಾರಣೆಗೆ ಸಂಬಂಧಿಸಿದಂತೆ ರೆಕಾರ್ಡ್ ಟೇಪ್‌ಗಳು, ಭಾಷಾ ಪ್ರಯೋಗಾಲಯದ ಸಾಧನಗಳು ಇತ್ಯಾದಿಗಳನ್ನು ನಮೂದಿಸುವ ಅಗತ್ಯತೆ ಇದೆ. ಪದ್ಯ ಬೋಧನೆಯಾದಲ್ಲಿ ರಾಗ ಸಂಯೋಜನೆಗೊಂಡ ಪದ್ಯಭಾಗದ ಧ್ವನಿಮುದ್ರಿಕೆ, ವೀಡಿಯೋಗಳು ಇತ್ಯದಿಗಳನ್ನು ಸಂಪನ್ಮೂಲವಾಗಿ ಜೋಡಿಸಬಹುದಾಗಿದೆ. ಇವುಗಳೊಟ್ಟಿಗೆ ಹೆಚ್ಚುವರಿ ಮಾಹಿತಿ ಇತ್ಯಾದಿಗಳನ್ನೂ ಕಲೆಹಾಕಿ ನಮೂದಿಸಬೇಕಾಗುತ್ತದೆ.

**ಮೌಲ್ಯಮಾಪನ:**

ಘಟಕಕ್ಕೆ ಸಂಬಂಧಿಸಿದಂತೆ, ಕನಿಷ್ಠ ಎರಡರಿಂದ ಗರಿಷ್ಟ ಎಷ್ಟಾದರೂ ಘಟಕಪರೀಕ್ಷೆಯ ಪ್ರಶ್ನೆ ಪತ್ರಿಕೆಗಳನ್ನು ಇಲ್ಲಿ ಜೋಡಿಸಲಾಗಿರುತ್ತದೆ. ಪ್ರಶ್ನೆಪತ್ರಿಕೆಗಳು ವಸ್ತುನಿಷ್ಟ, ಸಂಕ್ಷಿಪ್ತ, ಪ್ರಬಂಧ ಮಾದರಿ ಎಲ್ಲವನ್ನೂ ಒಳಗೊಂಡಂತೆ ನೀಲನಕಾಶೆ ಆಧರಿಸಿ, ರಚಿಸಿರಬೇಕು. ಅಂತೆಯೇ ಪ್ರಶ್ನಾಕೋಶಿಯನ್ನು ಒಳಗೊಳ್ಳುವುದು ಅಪೇಕ್ಷಣೀಯ.

**ಪರಾಮರ್ಶನ ಗ್ರಂಥಗಳು:**

ವಿದ್ಯಾರ್ಥಿ ಹಾಗೂ ಶಿಕ್ಷಕರಿಗೆ ಪ್ರತ್ಯೇಕವಾಗಿ ಪರಾಮರ್ಶನ ಗ್ರಂಥಗಳನ್ನು ಇಲ್ಲಿ ಪಟ್ಟಿಮಾಡಬಹುದಾಗಿದೆ. ಸಾಹಿತ್ಯದ ಮೂಲ ಕೃತಿಗಳು, ನಿಘಂಟುಗಳು, ವಿಮರ್ಶೆಗಳು, ಸೃಜನಶೀಲ ಬರಹಗಳು, ನಿಯತಕಾಲಿಕೆಗಳು, ವಿಶ್ವಕೋಶಗಳು, ಅನುವಾದ ಕೃತಿಗಳು, ಬೋಧನಾ ವಿಧಾನ, ತಂತ್ರ, ಸಾಧನ ಇತ್ಯಾದಿ ಒಳಗೊಂಡಿರುವ ಕೃತಿಗಳು, ಕರ್ತೃರಚಿತ ಕೃತಿಗಳು, ಸಂಪಾದನಾ ಕೃತಿಗಳು, ಸಂಕಲನಗಳು ಇತ್ಯಾದಿಗಳೆಲ್ಲವನ್ನೂ ಪರಾಮರ್ಶನ ಗ್ರಂಥಗಳನ್ನಾಗಿ ನಮೂದಿಸಬಹುದಾಗಿದೆ.

**ಸಂಪನ್ಮೂಲ ಘಟಕದ ಗುಣಗಳು:**

- ಬೋಧನೆ ಕಲಿಕೆ ವೈವಿಧ್ಯಮಯ ಸಂಪನ್ಮೂಲಗಳನ್ನು ಒದಗಿಸಿಕೊಡುತ್ತದೆ.
- ಬೋಧನೆ / ಕಲಿಕೆಯ ಅನುಭವಗಳಲ್ಲಿ ನಮ್ಯತೆಯನ್ನು ಒದಗಿಸಿಕೊಡುತ್ತದೆ.
- ಇಡಿ ಅನುಭವವನ್ನು ನೀಡುವ ವಿಶಿಷ್ಟ ಯೋಜನೆಯಾಗಿದೆ.
- ಘಟಕಯೋಜನೆ ಹಾಗೂ ಪಾಠ ಯೋಜನೆಗೆ ಆಧಾರವಾಗುತ್ತದೆ.
- ಶಿಕ್ಷಕರೆಲ್ಲರೂ ಒಟ್ಟಾಗಿ ಸೇರಿ ಮಾಡುವ ಯೋಜನೆಯಾದ್ದರಿಂದ ಹೆಚ್ಚು ಅನುಭವ ಕೇಂದ್ರಿತ ಯೋಜನೆಯಾಗಿದೆ.
- ಶಿಕ್ಷಕ ಹಗೂ ವಿದ್ಯಾರ್ಥಿಗಳಿಬ್ಬರಿಗೂ ಸಂಪನ್ಮೂಲಗಳನ್ನು ಒದಗಿಸುತ್ತದೆ.

**ಸಂಪನ್ಮೂಲ ಘಟಕದ ಮಿತಿಗಳು:**

- ಸಂಪನ್ಮೂಲ ಘಟಕಯೋಜನೆ ರಚನೆಗೆ ಶಿಕ್ಷಕರಿಗೆ ಸಾಕಷ್ಟು ತರಬೇತಿ ಅವಶ್ಯಕ.
- ಬಿಡಿ ನೆಲೆಯಲ್ಲಿ ಯೋಜನೆಯಾಗುವುದಿಲ್ಲವಾದ್ದರಿಂದ ಮಕ್ಕಳಿಗೆ ಅಗತ್ಯ ಅನುಭವದ ಜೋಡಣೆ ಸಾಧ್ಯವಾಗುವುದಿಲ್ಲ.
- ಶಿಕ್ಷಕರು ದೈನಂದಿನ ಪಾಠ ಯೋಜನೆ ಹಾಗೂ ಘಟಕ ಯೋಜನೆಗಳನ್ನು ಮಾಡಬೇಕಾಗಿರುವುದರಿಂದ ಈ ಯೋಜನೆ ಶಿಕ್ಷಕನಿಗೆ ಹೊರೆಯಾಗಲಿದೆ,
- ಸಂಪನ್ಮೂಲ ಘಟಕ ಯೋಜನೆ ರಚಿಸುವಾಗ ಶಿಕ್ಷಕರಲ್ಲಿ ಸಮನ್ವಯತೆಯ ಕೊರತೆಯಿದ್ದಲ್ಲಿ ಪರಿಪೂರ್ಣ ಯೋಜನೆ ಸಾಧ್ಯವಾಗುವಿದಿಲ್ಲ.
- ಸಂಪನ್ಮೂಲ ಘಟಕಯೋಜನೆಯೂ ಕೂಡಾ ಹೆಚ್ಚಿನ ಸಂಪನ್ಮೂಲಗಳನ್ನು ಅಪೇಕ್ಷಿಸುತ್ತದೆ.
- ಹೆಚ್ಚಿನ ಶ್ರಮ ಮತ್ತು ಸಮಯವನ್ನು ನಿರೀಕ್ಷಿಸುತ್ತದೆ.

**ಸಂಪನ್ಮೂಲ ಘಟಕ ಯೋಜನೆ ಮತ್ತು ಘಟಕಯೋಜನೆಯ ನಡುವಣ ವ್ಯತ್ಯಾಸಗಳು.**

| ಅಂಶಗಳ ಆಧಾರ | ಸಂಪನ್ಮೂಲ ಘಟಕ ಯೋಜನೆ | ಘಟಕಯೋಜನೆ |
|---|---|---|
| ಅನುಭವಗಳ ಸ್ವರೂಪ | ಇಡಿಯಾಗಿ, ವೈವಿಧ್ಯಮಯ ಅನುಭವ ಒದಗಿಸುತ್ತದೆ | ಇಡಿಯಾಗಿ ಅನುಭವ ಒದಗಿಸಿದರೂ, ಹೆಚ್ಚಿನ ವೈವಿಧ್ಯತೆ ಇರುವುದಿಲ್ಲ |
| ಅವಧಿ | ಕಾಲದ ಮಿತಿ ನಿರ್ಧರಿಸಲು ಕಷ್ಟಸಾಧ್ಯ | 4 ರಿಂದ 10 ಅವಧಿಯವರೆವಿಗೂ ಯೋಜಿಸಬಹುದು. |
| ವ್ಯಾಪ್ತಿ | ವಿಶಾಲವಾದ ವ್ಯಾಪ್ತಿಯನ್ನು ಹೊಂದಿದೆ | ಸಂಪನ್ಮೂಲ ಘಟಕ ಯೋಜನೆಗೆ ಹೋಲಿಸಿದಲ್ಲಿ, ಸಂಕುಚಿತ ವ್ಯಾಪ್ತಿಯನ್ನು ಹೊಂದಿದೆ |
| ಕೇಂದ್ರಿತತೆ | ಶಿಕ್ಷಕ, ವಿದ್ಯಾರ್ಥಿ, ಅನುಭವ, ಚಟುವಟಿಕೆ ಕೇಂದ್ರಿತತೆ ಗೋಚರಿಸುತ್ತದೆ | ಶಿಕ್ಷಕಕೇಂದ್ರಿತತೆ ಗೋಚರಿಸುತ್ತದೆ |
| ಪೀಠಿಕೆ | ಪ್ರತಿ ಉಪಘಟಕಕ್ಕೂ ವೈವಿಧ್ಯಮಯ ಪೀಠಿಕೆಗಳಿರುತ್ತವೆ. | ಉಪಘಟಕಗಳಿಗೆ ನಿರ್ದಿಷ್ಟವಾಗಿ ಪೀಠಿಕೆಯನ್ನು ಆರಿಸಲಾಗಿರುತ್ತದೆ |
| ಪರಿಗಣಿತಗಳು | ವಿಷಯ ಸಮನ್ವಯನಕ್ಕೆ ಹೆಚ್ಚಿನ ಅವಕಾಶವಿರುತ್ತದೆ. | ವಿಷಯ ಸಮನ್ವಯನಕ್ಕೆ ಸೀಮಿತ ಅವಕಾಶ ಮಾತ್ರವಿರುತ್ತದೆ. |
| ಮೌಲ್ಯಮಾಪನ | ಒಂದು ಘಟಕಕ್ಕೆ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಪ್ರಶ್ನೆಪತ್ರಿಕೆಗಳಿರುತ್ತವೆ. | ಘಟಕದ ಅಂತ್ಯಕ್ಕೆ ನಿರ್ವಹಿಸಬಹುದಾದ ಘಟಕಪರೀಕ್ಷೆಯ ಪ್ರಶ್ನೆಪತ್ರಿಕೆಯನ್ನು ನಿರ್ದಿಷ್ಟವಾಗಿ ಆರಿಸಲಾಗಿರುತ್ತದೆ. |

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ –2**

- ನಿಮ್ಮ ಆಯ್ಕೆಯ ಘಟಕವೊಂದಕ್ಕೆ ಘಟಕಯೋಜನೆಯನ್ನು ತಯಾರಿಸಿರಿ.
- ನಿಮ್ಮ ಆಯ್ಕೆಯ ಘಟಕವೊಂದಕ್ಕೆ 5 'ಇ' ಚಟುವಟಿಕೆ ಆಧರಿಸಿ, ಘಟಕಯೋಜನೆಯನ್ನು ತಯಾರಿಸಿರಿ.
- ಆಯ್ಕೆಯ ಘಟಕವೊಂದಕ್ಕೆ ಉಪಘಟಕಾಧಾರಿತವಾಗಿ 'ಪರಿಕಲ್ಪನಾತ್ಮಕ ನಕ್ಷೆ' ರಚಿಸಿರಿ.
- ಸಮೂಹದಲ್ಲಿ ನಿಮ್ಮ ಆಯ್ಕೆಯ ಘಟಕವೊಂದಕ್ಕೆ 'ಸಂಪನ್ಮೂಲ ಘಟಕ ಯೋಜನೆ' ತಯಾರಿಸಿರಿ.
- ಸಂರಚಿತ ಘಟಕಯೋಜನೆಯೊಂದನ್ನು ವಿಮರ್ಶಿಸಿರಿ.
- ಸಂರಚಿತ ಸಂಪನ್ಮೂಲ ಘಟಕಯೋಜನೆಯನ್ನು ವಿಮರ್ಶಿಸಿರಿ.

### 4.2.4. ಸಾರಾಂಶಿಸೋಣ

- ಪರಸ್ಪರ ಆಂತರಿಕ ಸಂಬಂಧವುಳ್ಳ ವಸ್ತು, ಅನುಭವ, ಚಟುವಟಿಕೆಗಳ ಅರ್ಥಪೂರ್ಣ ಸಂಘಟನೆಯೇ, 'ಘಟಕ'. ಘಟಕ ಎಂಬುದು ಆಂಗ್ಲಭಾಷೆಯ 'Unit' ಎಂಬ ಪದಕ್ಕೆ ಸಮಾನವಾಗಿ ಬಳಸುವ ಪದವಾಗಿದೆ.
- ಆಂತರಿಕ ಸಂಬಂಧವನ್ನುಳ್ಳ ಗದ್ಯ ಅಥವಾ ಪದ್ಯ ಘಟಕವೊಂದನ್ನು ಪಾಠಗಳಾಗಿ ವಿಶ್ಲೇಷಿಸಿ, ಯುಕ್ತ ಬೋಧನಾ / ಕಲಿಕಾ ಅನುಭವಗಳನ್ನು ಜೋಡಿಸುವ ಯೋಜನೆಯೇ, 'ಘಟಕಯೋಜನೆ'.
- ಘಟಕ ಯೋಜನೆಯನ್ನು ರೂಪಿಸುವಾಗ ನಿರ್ದಿಷ್ಟ ಹಂತಗಳನ್ನು ಅನುಸರಿಸಿ ರೂಪಿಸಬೇಕು.

- ಭಾಷಾ ಬೋಧನೆಯ ಯೋಜನೆಯಲ್ಲಿ ಪ್ರಪ್ರಥಮವಾಗಿ ರೂಪಿಸುವ ಯೋಜನೆಯೆಂದರೆ, 'ಸಂಪನ್ಮೂಲ ಘಟಕ ಯೋಜನೆ'ಯಾಗಿದೆ. ಸಂಪನ್ಮೂಲ ಘಟಕ ಯೋಜನೆ ಒಂದು ಸಂಚಯಿತ ಯೋಜನೆಯಾಗಿದ್ದು, ಹೆಚ್ಚುವರಿ ಬೋಧನಾ ಉದ್ದೇಶಗಳು, ಬೋಧನಾ ಕಲಿಕಾ ಚಟುವಟಿಕೆಗಳು, ವಿವಿಧ ಬೋಧನಾ–ಕಲಿಕಾ ಸಾಧನ ಹಾಗೂ ತಂತ್ರಗಳು, ಬೋಧನಾ–ಕಲಿಕಾ ಸಂಪನ್ಮೂಲಗಳು, ಮೌಲ್ಯಮಾಪನ ಸಾಧನಗಳು ಮತ್ತು ತಂತ್ರಗಳು, ಪರಾಮರ್ಶನಾ ಸಾಮಗ್ರಿಗಳು ಇತ್ಯಾದಿಗಳನ್ನು ಒಂದು ನಿರ್ದಿಷ್ಟ ತರಗತಿ ಬೋಧನೆಗಾಗಿ ಹೊಂದಿಸುವ ಯೋಜನೆಯಾಗಿದೆ.
- ಸಂಪನ್ಮೂಲ ಘಟಕವು ಬೋಧನಾ / ಕಲಿಕಾ ಚಟುವಟಿಕೆಗಳು, ಪೀಠಿಕಾ ಚಟುವಟಿಕೆಗಳು, ವಿಕಾಸದ ಚಟುವಟಿಕೆಗಳು– ಹೀಗೆ ಹಲವಾರು ಅಂಶಗಳನ್ನು ಒಳಗೊಂಡಿರುತ್ತದೆ.

### 4.2.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1 ಮತ್ತು 2

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**
ನಿಮ್ಮ ಅನುಭವವನ್ನು ಸಹೋದ್ಯೋಗಿಗಳೊಂದಿಗೆ ಹಂಚಿಕೊಳ್ಳಿ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**
ಸ್ವ ಕಲಿಕಾ ಸಾಮಗ್ರಿ 3.2.3. ಗಮನಿಸಿ, ನಿಮ್ಮ ಉತ್ತರಗಳು ಅಲ್ಲಿ ನೀಡಿರುವ ಅಂಶಗಳಿಗೆ ಅನುಗುಣವಾಗಿವೆಯೇ ಎಂದು ಖಚಿತಪಡಿಸಿಕೊಳ್ಳಿ.

### 4.2.6. ಘಟಕಾಂತ್ಯ ಅಭ್ಯಾಸಗಳು

1. ಘಟಕಯೋಜನೆ ಎಂದರೇನು? ಘಟಕ ಯೋಜನೆಯ ರಚನಾ ಹಂತಗಳನ್ನು ವಿಶ್ಲೇಷಿಸಿ.
2. 'ಘಟಕಯೋಜನೆ ಪಾಠಯೋಜನೆಗಿಂತ ಭಿನ್ನ' – ಸಮರ್ಥಿಸಿ.
3. ಘಟಕಯೋಜನೆಯ ಉಪಯೋಗಗಳನ್ನು ಪಟ್ಟಿಮಾಡಿ.
4. ಸಂಪನ್ಮೂಲ ಘಟಕಯೋಜನೆಯ ಅರ್ಥ, ಲಕ್ಷಣಗಳು ಹಾಗೂ ಪ್ರಾಮುಖ್ಯತೆಯನ್ನು ವಿವರಿಸಿ.
5. ಸಂಪನ್ಮೂಲ ಘಟಕಯೋಜನೆಯ ಅಡಕಗಳನ್ನು ವಿವರಿಸಿ.
6. ಸಂಪನ್ಮೂಲ ಘಟಕಯೋಜನೆ ಹಾಗೂ ಘಟಕಯೋಜನೆಯ ನಡುವಣ ವ್ಯತ್ಯಾಸ ವಿವರಿಸಿ.

### 4.2.7. ಪರಾಮರ್ಶನ ಸೂಚಿ


1. ಕೆ. ಸಚ್ಚಿದಾನಂದಯ್ಯ, "ಕನ್ನುಡಿಯ ಕಲಿಕೆ" ಪ್ರಕಾಶನ: ಸತ್ಯಶ್ರೀ ಪ್ರಕಾಶನ, 1316, ಪಡುವಣ ರಸ್ತೆ, ಕುವೆಂಪುನಗರ, ಮೈಸೂರು –570023, ಪ್ರಥಮ ಮುದ್ರಣ: 1990
2. ಡಾ. ಐ.ಎ ಲೋಕಾಪುರ, "ಪ್ರೌಢಶಿಕ್ಷಣ ಹಾಗೂ ಶಿಕ್ಷಕನ ಕಾರ್ಯಗಳು" ಪ್ರಕಾಶನ: ಜಯದೇವ. ಮೈ, ನಾಗರಾಜ ಮೈ, ಮೆಣಸಗಿ, ವಿಧ್ಯಾನಿಧಿ ಪ್ರಕಾಶನ, ಸ್ಟೇಷನ್ ರಸ್ತೆ, ಮಹೇಂದ್ರಕರ ವೃತ್ತದ ಸಮೀಪ, ಗದಗ – 582101, 5 ನೇ ಆವೃತ್ತಿ 1994
3. ಡಾ. ಮಹಾಬಲೇಶ್ವರ ರಾವ್, "ಪ್ರೌಢ ಶಾಲೆಗಳಲ್ಲಿ ಕನ್ನಡ ಬೋಧನೆ", ಪ್ರಕಾಶನ: ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು –56001, ಮೊದಲನೇ ಮುದ್ರಣ 1996
4. ಭ.ಮಲ್ಲಿಕಾರ್ಜುನ, ಎಸ್.ಎಸ್.ಯದುರಾಯ್, "ನಿರಂತರ", ಪ್ರಕಾಶನ: ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆ (ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ, ಭಾರತ ಸರ್ಕಾರ), ಮಾನಸಗಂಗೋತ್ರೆ, ಮೈಸೂರು–570014,ಪ್ರ.ವರ್ಷ: 1999

5. ಪರಗಿ.ವಿ,ಅನಸೂಯ, 'ಮಾತೃಭಾಷೆ ಕನ್ನಡ ತತ್ತ್ವ ಮತ್ತು ಬೋಧನಾ ಮಾರ್ಗ', ಪ್ರಕಾಶನ: ವಿವೇಕ ಪ್ರಕಾಶನ, ಚಿಕ್ಕಬಳ್ಳಾಪುರ – 2004
6. ಪ್ರೊ.ಪಿ.ಎಸ್.ಸುರೇಶ್, ಎನ್.ಪುಟ್ಟಸ್ವಾಮಿ, 'ಪ್ರೌಢಶಾಲಾ ಶಿಕ್ಷಣ ಮತ್ತು ಶಿಕ್ಷಕನ ಕಾರ್ಯಗಳು', ಪ್ರಕಾಶನ: ಆರ್.ರವೀಶ್, ಸದ್ಗುರು ಪ್ರಿಂಟರ್ಸ್, ಮೈಸೂರು, 2006
7. ಸಂಪನ್ಮೂಲ ಪುಸ್ತಕ ರಚನಾ ಸಮಿತಿ, ಡಿಎಸ್‌ಸಿಆರ್‌ಟಿ, ಅನುವಾದಕ ಮಂಡಲಿ, 'ಪಠ್ಯಕ್ರಮ ಕಾರ್ಯಾಚರಣೆಯ ತತ್ತ್ವಗಳು', ಪ್ರಕಾಶನ: ವಿನಾಯಕ ಆಫ್‌ಸೆಟ್ ಪ್ರಿಂಟರ್ಸ್ # 56, 9ನೇ ಮುಖ್ಯರಸ್ತೆ, 1ನೇ ಅಡ್ಡರಸ್ತೆ, ಕಾವೇರಿ ನಗರ, ಬನಶಂಕರಿ ಕೈಗಾರಿಕಾ ಪ್ರದೇಶ, ಬನಶಂಕರಿ 2ನೇ ಹಂತ, ಬೆಂಗಳೂರು – 560070, ಪ್ರಕಟಣಾ ವರ್ಷ 2008
8. ಸಂಪನ್ಮೂಲ ಪುಸ್ತಕ ರಚನಾ ಸಮಿತಿ, ಡಿಎಸ್‌ಸಿಆರ್‌ಟಿ, 'ಕನ್ನಡ ಸಂಪದ', ಪ್ರಕಾಶನ: ವಿನಾಯಕ ಆಫ್‌ಸೆಟ್ ಪ್ರಿಂಟರ್ಸ್ # 56, 9ನೇ ಮುಖ್ಯರಸ್ತೆ, 1ನೇ ಅಡ್ಡರಸ್ತೆ, ಕಾವೇರಿ ನಗರ, ಬನಶಂಕರಿ ಕೈಗಾರಿಕಾ ಪ್ರದೇಶ, ಬನಶಂಕರಿ 2ನೇ ಹಂತ, ಬೆಂಗಳೂರು – 560070, ಪ್ರಕಟಣಾ ವರ್ಷ 2008
9. JoBertrand, "Lesson plans", https://www.teachingenglish.org.uk/article/lesson-plans
10. MOHAMMED RHALMI, "14 Lesson plan tips for English Language Teaching", https://www.myenglishpages.com/blog/14-lesson-plan-tips-for-english-language-teaching/Taylor & Francis, Ltd.
11. Edgar M. Draper and Gordon Gardner, "How to Construct a Resource Unit",https://www.jstor.org/stable/30179440, Page Count: 4
12. EduSys, "Lesson Plan vs Unit Plan | 3D: Definition, Difference & Design", https://www.edusys.co/blog/lesson-plan-vs-unit-plan.
13. IRIS,"UnitPlanDesign", https://iris.peabody.vanderbilt.edu/module/cnm/cresource/q4/p15/

## ಬ್ಲಾಕ್ 4 : ಕನ್ನಡ ಭಾಷಾ ಬೋಧನೆಯಲ್ಲಿ ಪಾಠ ಯೋಜನೆಗಳು ಮತ್ತು ಮೌಲ್ಯಮಾಪನ

### ಘಟಕ 3 : ಸಾಮರ್ಥ್ಯಾಧಾರಿತ ಭಾಷಾಪಾಠ ಯೋಜನೆ

**ಘಟಕದ ರಚನೆ**


4.3.1. ಕಲಿಕೆಯ ಉದ್ದೇಶಗಳು
4.3.2. ಪೀಠಿಕೆ
4.3.3. ಕಲಿಕೆಯ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು
4.3.3.1. ಸಾಮರ್ಥ್ಯಾಧಾರಿತ ಭಾಷಾ ಪಾಠ ಯೋಜನೆ – ಪರಿಚಯ
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1
4.3.3.2. ಸಾಮರ್ಥ್ಯಾಧಾರಿತ ಬೋಧನೆ ಹಂತಗಳನ್ನು ಆಧರಿಸಿದ ಯೋಜನೆ
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2
4.3.4. ಸಾರಾಂಶಿಸೋಣ
4.3.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1 ಮತ್ತು 2
4.3.6. ಘಟಕಾಂತ್ಯ ಅಭ್ಯಾಸಗಳು
4.3.7. ಪರಾಮರ್ಶನ ಸೂಚಿ


### 4.3.1. ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿ ಶಿಕ್ಷಕ ಶಿಕ್ಷಕಿಯರು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು;

- ಸಾಮರ್ಥ್ಯಾಧಾರಿತ ಪಾಠ ಯೋಜನೆಯನ್ನು ವ್ಯಾಖ್ಯಾನಿಸುವರು;
- ಸಾಮರ್ಥ್ಯಾಧಾರಿತ ಪಾಠ ಯೋಜನೆಯಲ್ಲಿ ಗಮನಿಸಬೇಕಾದ ಅಂಶಗಳನ್ನು ವಿವರಿಸುವರು;
- ಸಾಮರ್ಥ್ಯಾಧಾರಿತ ಪಾಠ ಯೋಜನೆಗೆ ಶಿಕ್ಷಕರ ಸಿದ್ಧತೆ ಹೇಗಿರಬೇಕು ಎಂಬುದನ್ನು ಅಳವಡಿಸಿಕೊಳ್ಳುವರು;
- ಸಾಮರ್ಥ್ಯಾಧಾರಿತ ಬೋಧನೆಯ ಹಂತಗಳನ್ನು ವಿಶ್ಲೇಷಿಸುವರು; ಮತ್ತು
- ಭಾಷಾ ಬೋಧನೆಗೆ ಸಾಮರ್ಥ್ಯಾಧಾರಿತ ಪಾಠಯೋಜನೆಯ ಅಗತ್ಯವನ್ನು ಸ್ಪಷ್ಟಪಡಿಸುವರು.

### 4.3.2. ಪೀಠಿಕೆ

ಪ್ರಸ್ತುತದ ಬೋಧನಾ / ಕಲಿಕಾ ವ್ಯವಸ್ಥೆ ಸ್ಥಿತ್ಯಂತರದ ಸವಾಲನ್ನು ಎದುರಿಸುತ್ತಿದೆ. ಶಿಕ್ಷಕ ಕೇಂದ್ರಿತ ಬೋಧನೆಯಿಂದ ವಿಮುಖವಾಗಿ, ವಿದ್ಯಾರ್ಥಿಕೇಂದ್ರಿತ ಕಲಿಕೆ ತನ್ಮೂಲಕ ಕಲಿಕಾ ಸಾಮರ್ಥ್ಯಗಳ ಕಡೆಗೆ ವಾಲುತ್ತಿದೆ. ಚಟುವಟಿಕೆ ಕೇಂದ್ರಿತವಾಗಿರುವ ಈ ವ್ಯವಸ್ಥೆ, ಅನುಭವಕೇಂದ್ರಿತ ನೆಲೆಯಲ್ಲಿ, ಕಲಿಕಾರ್ಥಿಗಳ ಸಾಮರ್ಥ್ಯ ಅಭಿವೃದ್ಧಿಯತ್ತ ಮುನ್ನಡೆಯುತ್ತಾ ಸಾಗುತ್ತಿದೆ. ಜ್ಞಾನದ ಅಭಿವೃದ್ಧಿಯಾದಲ್ಲಿ ಮಾತ್ರ, ಕಲಿಕೆಯಲ್ಲಿ ಪರಿಪೂರ್ಣತೆಯನ್ನು ಸಾಧಿಸಲು ಸಾಧ್ಯವಿಲ್ಲ. ಬದಲಿಗೆ, ಕಲಿತ ಅಂಶಗಳು ನಿಜ ಜೀವನದಲ್ಲಿ ಬಳಕೆಯಾಗಬೇಕು. ಹಾಗಾಗಿ ಕಲಿಕಾ ಅಂಶಗಳು ಸಾಮರ್ಥ್ಯಗಳಾಗಿ, ವಿದ್ಯಾರ್ಥಿಗಳಲ್ಲಿ ಅಭಿವೃದ್ಧಿ ಹೊಂದುವ ಅವಶ್ಯಕತೆ ಇದೆ. ಭಾಷೆಯು ಕೌಶಲ್ಯಾಧಾರಿತ ಸಾಮರ್ಥ್ಯಗಳ ಆಗರವಾಗಿದ್ದು, ಅವುಗಳನ್ನು ಕಲಿಕಾರ್ಥಿಗಳಲ್ಲಿ ರೂಢಿಸಲು 'ಸಾಮರ್ಥ್ಯಾಧಾರಿತ ಭಾಷಾ ಪಾಠಯೋಜನೆ' ಸಂರೂಪಿಸುವ ಅಗತ್ಯವಿದೆ. ಪ್ರತಿ ಹಂತದಲ್ಲಿಯೂ ನಿರ್ದಿಷ್ಟ ಸಾಮರ್ಥ್ಯಗಳನ್ನು ಗುರುತಿಸಿ, ಅವುಗಳನ್ನು ಕಲಿಕಾರ್ಥಿಗಳಲ್ಲಿ ನಿಗದಿತ ನೆಲೆಯಲ್ಲಿ ಅಭಿವೃದ್ಧಿಪಡಿಸಲು ಯೋಜಿಸುವ ಅಗತ್ಯತೆ ಇದೆ. ಈ ಹಿನ್ನೆಲೆಯಲ್ಲಿ ಭಾಷಾ ಸಾಮರ್ಥ್ಯಾಧಾರಿತ 'ಪಾಠಯೋಜನೆ'ಯನ್ನು ರೂಪಿಸಲು ಅಗತ್ಯವಾದ ತಂತ್ರ, ಸಾಧನ, ಕ್ರಮಗಳನ್ನು ಈ ಘಟಕದಲ್ಲಿ ವಿಚಾರಮಾಡೋಣ.

### 4.3.3. ಕಲಿಕೆಯ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

### 4.3.3.1. ಸಾಮರ್ಥ್ಯಾಧಾರಿತ ಭಾಷಾ ಪಾಠ ಯೋಜನೆ – ಪರಿಚಯ

1986ರ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಕಲಿಕೆಯ ಕನಿಷ್ಠ ಮಟ್ಟಗಳ ಪರಿಕಲ್ಪನೆಯನ್ನು ಮೊದಲ ಬಾರಿಗೆ ಪ್ರಸ್ತಾಪಿಸಲಾಯಿತು. ಈ ಹಿನ್ನೆಲೆಯಲ್ಲಿ ಪ್ರಾಥಮಿಕ ತರಗತಿಗಳ ವಿಷಯಗಳಲ್ಲಿ ಅತಿ ಅವಶ್ಯಕವಾಗಿ ಗಳಿಸಲೇಬೇಕಾದ ಸಾಮರ್ಥ್ಯಗಳನ್ನು ಗುರುತಿಸಲಾಗಿದೆ. ಕಲಿಕೆಯ ಕನಿಷ್ಠ ಮಟ್ಟಗಳಿಗೆ ಸಂಬಂಧಿಸಿದಂತೆ ರಾಷ್ಟ್ರಮಟ್ಟದಲ್ಲಿ ಪ್ರತಿಯೊಂದು ವಿಷಯದಲ್ಲಿ ನಿರ್ದಿಷ್ಟ ಕ್ಷೇತ್ರಗಳನ್ನು ಗುರುತಿಸಿ, ಪ್ರತಿಯೊಂದು ಕ್ಷೇತ್ರದಲ್ಲಿ, ಆಯಾ ವರ್ಗದಲ್ಲಿ ಪ್ರತಿಯೊಂದು ವರ್ಗವೂ ಗಳಿಸಲೇಬೇಕಾದ ಸಾಮರ್ಥ್ಯಗಳನ್ನು ನಿರ್ದಿಷ್ಟಪಡಿಸಲಾಗಿದೆ. ಇವುಗಳಿಗೆ ಕ್ರಮಾಂಕ ನೀಡಿದೆ. ಪ್ರತಿಯೊಂದು ಮಗುವೂ ಪ್ರತಿಯೊಂದು ಸಾಮರ್ಥ್ಯವನ್ನು ಪ್ರಭುತ್ವ ಮಟ್ಟದಲ್ಲಿ ಕಲಯುವಂತೆ ಮಾಡುವುದು ಈ ಕಲಿಕೆಯ ಕನಿಷ್ಠ ಮಟ್ಟದ ಮುಖ್ಯ ಉದ್ದೇಶ.

**ಸಾಮರ್ಥ್ಯಾಧಾರಿತ ಭಾಷಾ ಪಾಠಯೋಜನೆಯ ಅರ್ಥ**

ಕಲಿಕೆಯ ಕನಿಷ್ಠ ಮಟ್ಟಗಳನ್ನು ಆಧರಿಸಿ ನಿರೂಪಿಸಲಾದ ಭಾಷಾ ಸಾಮರ್ಥ್ಯಗಳನ್ನು ಪ್ರಭುತ್ವ ಮಟ್ಟದಲ್ಲಿ ಪ್ರತಿಯೊಂದು ಮಗುವೂ ಗಳಿಸುವಂತೆ, ಶಿಕ್ಷಕರು ಬೋಧಿಸುವುದೇ 'ಸಾಮರ್ಥ್ಯಾಧಾರಿತ ಬೋಧನೆ'. ಈ ಸಾಮರ್ಥ್ಯಗಳ ಗಳಿಕೆಗೆ ರೂಪಿಸಬಹುದಾದ ಪಾಠಯೋಜನೆಯೇ 'ಸಾಮರ್ಥ್ಯಾಧಾರಿತ ಪಾಠಯೋಜನೆ' ಎನಿಸುತ್ತದೆ.

**ಸಾಮರ್ಥ್ಯಾಧಾರಿತ ಪಾಠ ಯೋಜನೆಯನ್ನು ರೂಪಿಸುವಾಗ, ಗಮನಿಸಬೇಕಾದ ಅಂಶಗಳು:–**

ಪ್ರತಿಯೊಂದು ವಿಷಯದಲ್ಲಿ ನಿರ್ದಿಷ್ಟ ಕ್ಷೇತ್ರದಲ್ಲಿ ನಿಗದಿಪಡಿಸಲಾದ ಸಾಮರ್ಥ್ಯಗಳನ್ನು ಲಂಬಶ್ರೇಣಿ ಹಾಗೂ ಸಮಾನಾಂತರ ಶ್ರೇಣಿಯಲ್ಲಿ ಜೋಡಿಸಲಾಗಿರುತ್ತದೆ.

**ಲಂಬಶ್ರೇಣಿ:** ಲಂಬಶ್ರೇಣಿಯಲ್ಲಿ ಮೊದಲನೆಯ ಸಾಮರ್ಥ್ಯ ಗಳಿಸಿದ ನಂತರವೇ ಎರಡನೇ ಸಾಮರ್ಥ್ಯ ಪಡೆದುಕೊಳ್ಳಲು ಅವಕಾಶ ಕಲ್ಪಿಸುವಂತೆ ನಿರೂಪಿಸಲಾಗಿರುತ್ತದೆ. ತರಗತಿಯಿಂದ ತರಗತಿಗೆ ಹೋದಂತೆ, ಸಾಮರ್ಥ್ಯದ ಆಳ, ಹರಿವು ವಿಸ್ತಾರವಾದಂತೆ, ಶ್ರೇಣೀಕೃತವಾಗಿದೆ.

**ಸಮಾನಾಂತರ ಶ್ರೇಣಿ:** ಸಮಾನಾಂತರ ಶ್ರೇಣಿಯಲ್ಲಿ ಒಂದು ಕ್ಷೇತ್ರದಲ್ಲಿ ಕೆಳಹಂತದ ವರ್ಗದ ಮಕ್ಕಳ ಮಟ್ಟಕ್ಕೆ ಅನುಗುಣವಾಗಿ ಒಂದು ಸಾಮರ್ಥ್ಯವನು ನಿಗಧಿ ಪಡಿಸಲಾಗಿರುತ್ತದೆ, ಎರಡನೇ ತರಗತಿಯಲ್ಲಿ ಅವೇ ಸಾಮರ್ಥ್ಯಗಳೇ ಉನ್ನತ ಮಟ್ಟಕ್ಕೆ ಏರಿ, ಮಗುವು ಸಾಮರ್ಥ್ಯದಲ್ಲಿ ಪ್ರಾವೀಣ್ಯತೆ ಪಡೆಯುವಲ್ಲಿ ಸಹಕಾರಿಯಾಗುತ್ತವೆ.

ಉದಾಹರಣೆಗೆ, ಭಾಷಾ ಕ್ಷೇತ್ರದಲ್ಲಿ ನಿರ್ದಿಷ್ಟ ವರ್ಗಗಳಿಗೆ ಭಾಷೆಯ ಮೂಲ ಕೌಶಲಗಳಾದ ಆಲಿಸುವಿಕೆ, ಮಾತುಗಾರಿಕೆ, ಓದುಗಾರಿಕೆ ಹಾಗೂ ಬರವಣಿಗೆಗೆ ಸಂಬಂಧಿಸಿದಂತೆ ನಾಲ್ಕು ವರ್ಗಗಳ ಅಡಿಯಲ್ಲಿ ಸಾಮರ್ಥ್ಯಗಳನ್ನು ಲಂಬ ಹಾಗೂ ಸಮಾನಾಂತರ ಶ್ರೇಣಿಗಳಲ್ಲಿ ಜೋಡಿಲಾಗಿರುತ್ತದೆ. ಇವುಗಳನ್ನು ಆಧರಿಸಿ, ಯೋಜನೆಯನ್ನು ರೂಪಿಸಬೇಕಾಗುತ್ತದೆ.

ವಿವಿಧ ವರ್ಗಗಳಿಗೆ ಸಂಬಂಧಿಸಿದ ಸಾಮರ್ಥ್ಯಗಳಿಗೆ ಯೋಜಿಸಿರುವ ಸಾಮರ್ಥ್ಯಗಳಿಗೆ ಉದಾಹರಣೆಗಳು:

| ಮೂಲ ಕೌಶಲಗಳು | ತರಗತಿ | ಸಾಮರ್ಥ್ಯಗಳು |
|---|---|---|
| ಆಲಿಸುವಿಕೆ | 4 | ಪರಿಚಿತ ಸನ್ನಿವೇಶಗಳಲ್ಲಿ ಸರಳ ಭಾಷಣಗಳನ್ನು ಆಲಿಸುವುದರ ಜೊತೆಗೆ ಅರ್ಥಮಾಡಿಕೊಳ್ಳುವುದು |
| ಮಾತುಗಾರಿಕೆ | 3 | ಸರಿಯಾದ ಉಚ್ಚಾರಣೆಯೊಂದಿಗೆ ಮಾತನಾಡುವುದು |
| ಓದುಗಾರಿಕೆ | 4 | ಪಠ್ಯ ವಸ್ತುವನ್ನು ಓದಿದ ನಂತರ ಹೇಗೆ? ಮತ್ತು ಏಕೆ? ಎಂಬ ಪ್ರಶ್ನೆಗಳನ್ನು ಉತ್ತರಿಸಲು ಶಕ್ತನಾಗುವನು. |
| ಬರವಣಿಗೆ | 4 | ವಾಕ್ಯ ರಚನೆಯಲ್ಲಿ ಸರಳ ಕ್ರಿಯಾತ್ಮಕ ನಿಯಮಗಳನ್ನು ಅರ್ಥಮಾಡಿಕೊಳ್ಳುವುದು. |

ಕಲಿಕೆಯು ಉಂಟಾಗುವುದು ಎಂದರೆ, ವಸ್ತು – ವಿಷಯ – ವಿಚಾರಗಳ ಜ್ಞಾನ ಇವುಗಳ ಬಗೆಗೆ ಸ್ಪಷ್ಟವಾದ ತಿಳಿವಳಿಕೆ, ಅಭಿವ್ಯಕ್ತಿ ಸಾಮರ್ಥ್ಯ, ನಿಜ ಜೀವನದಲ್ಲಿ ಅನ್ವಯಿಸುವ ಸಾಮರ್ಥ್ಯ, ಕೆಲವು ವಿಶಿಷ್ಟ ಕೌಶಲಗಳ ಗಳಿಗೆ ಹಾಗೂ ಒಳ್ಳೆಯದನ್ನು ಮೆಚ್ಚುವಂತಹ, ಅನುಭವಿಸುವಂತಹ ಸಾಮರ್ಥ್ಯದಲ್ಲಿ ಅಡಗಿರುತ್ತದೆ. ಈ ಹಿನ್ನೆಲೆಯಲ್ಲಿ ಪಾಠಯೋಜನೆಯನ್ನು ರೂಪಿಸಬೇಕು.

**ಸಾಮರ್ಥ್ಯಾಧಾರಿತ ಬೋಧನೆಗೆ ಶಿಕ್ಷಕರ ಸಿದ್ಧತೆ ಹೀಗಿರಬೇಕು:**

- ಕಲಿಕೆಯ ಕನಿಷ್ಟ ಮಟ್ಟದ ಕ್ಷೇತ್ರ ಮತ್ತು ಸಾಮರ್ಥ್ಯಗಳನ್ನು ಅರಿತಿರಬೇಕು.
- ಬಹುವರ್ಗ ಬೋಧನೆಯಾದಲ್ಲಿ ಸಾಮೀಪ್ಯ ಸಾಮರ್ಥ್ಯಗಳನ್ನು ಅರಿತು ತರಗತಿಗಳಲ್ಲಿ ಅಳವಡಿಸಿಕೊಳ್ಳಬೇಕು.
- ಚಟುವಟಿಕೆಯನ್ನು ರೂಪಿಸುವುದರ ಮೂಲಕ ಸಾಮರ್ಥ್ಯಕ್ಕೆ ತಕ್ಕಂತೆ ಅವುಗಳನ್ನು ಬಳಸುವ ತಂತ್ರಗಳನ್ನು ಅರಿತಿರಬೇಕು.
- ಬೋಧನೆಗೆ ಮುನ್ನ ಶಿಕ್ಷಕ ಸಾಮರ್ಥ್ಯಕ್ಕನುಗುಣವಾಗಿ ಕಲಿಕೋಪಕರಣಗಳ ಸಿದ್ಧತೆ ಮಾಡಿಕೊಳ್ಳಬೇಕು.
- ಕನಿಷ್ಟ ಕಲಿಕಾ ಮಟ್ಟದ ಕಲಿಕೆಯು ಚಟುವಟಿಕೆಯಾಧಾರಿತವಾಗಿರುವುದರಿಂದ, ಮಾರ್ಗದರ್ಶನ ತಂತ್ರಗಳ ಅರಿವಿರಬೇಕು.
- ಮಕ್ಕಳು ತೊಡಗಿಸಿಕೊಳ್ಳಲು ಅವಕಾಶ ಕಲ್ಪಿಸಬೇಕು.
- ಮಗುವಿನ ಪೂರ್ವಜ್ಞಾನ ಆಧರಿಸಿ, ಮುಂದಿನ ವಿಷಯ ತಿಳಿಸಲು ಯೋಜಿಸಬೇಕು.
- ಮಕ್ಕಳು ಸಹಪಾಠಿಯೊಂದಿಗೆ ಸಹಭಾಗಿಯಾಗಿ ಕಲಿಯಲು ಅವಕಾಶ ಕಲ್ಪಿಸಬೇಕು.
- ಮಕ್ಕಳ ಸ್ವಮೌಲ್ಯಮಾಪನಕ್ಕೆ ಯೋಜನೆಯಲ್ಲಿ ಅವಕಾಶ ಕಲ್ಪಿಸಿರಬೇಕು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ –1**

ಸಾಮರ್ಥ್ಯಾಧಾರಿತ ಬೋಧನೆಗೆ ಅಗತ್ಯವಾದ ಅಂಶಗಳ ಒಂದು ತಪಶೀಲು ಪಟ್ಟಿ ತಯಾರಿಸಿ, ನಿಮ್ಮನ್ನೂ ಒಳಗೊಂಡಂತೆ ನಿಮ್ಮ ಶಾಲೆಯ ಅಧ್ಯಾಪಕರ ಸಿದ್ಧತೆಯ ಮಟ್ಟವನ್ನು ಕುರಿತ ಒಂದು ಅಧ್ಯಯನ ನಡೆಸಿ.

### 4.3.3.2. ಸಾಮರ್ಥ್ಯಾಧಾರಿತ ಬೋಧನೆ ಹಂತಗಳನ್ನು ಆಧರಿಸಿದ ಯೋಜನೆ

ಸಾಮರ್ಥ್ಯಾಧಾರಿತ ಬೋಧನೆಯು ಚಟುವಟಿಕೆ ಆಧಾರಿತ ಬೋಧನೆಯಾಗಿದ್ದು, ಯೋಜನೆಯನ್ನು ಬೋಧನೆಯ ವಿವಿಧ ಹಂತಗಳಿಗೆ ಜೋಡಿಸುವುದರ ಮೂಲಕ ನಿರ್ವಹಿಸಬಹುದಾಗಿದೆ.

ಬೋಧನೆ / ಕಲಿಕೆಗೆ ಪೂರ್ವದಲ್ಲಿ, ರಾಷ್ಟ್ರಮಟ್ಟದಲ್ಲಿ ರೂಪಿಸಲಾಗಿರುವ ಪ್ರತಿ ತರಗತಿ ಹಂತದ ಸಾಮರ್ಥ್ಯ ಮತ್ತು ಉಪಸಾಮರ್ಥ್ಯಗಳನ್ನು ನಿರ್ದಿಷ್ಟಪಡಿಸಿಕೊಳ್ಳುವುದು. ಭಾಷಾಸಾಮರ್ಥ್ಯಗಳ ಅಭಿವೃದ್ಧಿಗೆ ಪೂರಕವಾಗಿ ಯೋಜನೆಯನ್ನು ರೂಪಿಸಿಕೊಳ್ಳುವುದು, ಯೋಜನೆಯಂತೆ ಬೋಧನೆ/ಕಲಿಕಾ ಯೋಜನೆಗಳನ್ನು ಕಾರ್ಯಗತಗೊಳಿಸುವುದು, ಇದರಲ್ಲಿ ಪ್ರಮುಖವಾದ ಅಂಶಗಳಾಗಿರುತ್ತವೆ.

**ಪೂರ್ವಸಿದ್ಧತಾ ಚಟುವಟಿಕೆಗಳು**

ಕುಟುಂಬದ ರಕ್ಷಿತ, ಒಲುಮೆಯ, ವಾತ್ಸಲ್ಯಪೂರಿತ ಸನ್ನಿವೇಶದಿಂದ ಹೊರಬಂದ ಮಕ್ಕಳಿಗೆ ಶಾಲಾ ಪರಿಸರಕ್ಕೆ ಹೊಂದಿಕೊಂಡು, ಕಲಿಕೆಯತ್ತ ಆಸಕ್ತಿ ಕೆರಳಿಸುವ ಚಟುವಟಿಕೆಗಳನ್ನು ಒದಗಿಸುವುದೇ 'ಪೂರ್ವಸಿದ್ಧತಾ ಚಟುವಟಿಕೆಗಳು. ಉದಾಹರಣೆಗೆ, ಹಾಡು, ಕತೆ, ಸರಳ ಸಂಭಾಷಣೆ, ಅಭಿನಯ, ಕ್ರೀಡೆ, ಒಗಟು ಇತ್ಯಾದಿ ಆಗಬಹುದು.

**ಕಲಿಕಾ ಪೂರಕ ಚಟುವಟಿಕೆಗಳು**

ಕಲಿಕಾಂಶಗಳನ್ನು ಸಾಕಾರಗೊಳಿಸಲು, ಮಕ್ಕಳನ್ನು ಸಿದ್ಧಪಡಿಸುವ ನೆರವಿನ ಚಟುವಟಿಕೆಗಳು ಇವಾಗಿವೆ.

ಉದಾಹರಣೆಗೆ ಸರಳ ಅಕ್ಷರಗಳು, ಅಕ್ಷರ ಮಾದರಿಗಳು, ಪದಗಳು, ವಾಕ್ಯರಚನೆ ಇತ್ಯಾದಿ ತರಗತಿವಾರು ಹೋದಂತೆ ಸಾಮರ್ಥ್ಯದ ಆಳ ಮತ್ತು ಹರವು ಹೆಚ್ಚುತ್ತಾ ಹೋಗುತ್ತದೆ. ಪ್ರಾರಂಭದ ತರಗತಿಗಳಲ್ಲಿ ಪರಕಲ್ಪನೆ ಅರ್ಥವಾಗಬೇಕಾದರೆ, ಮಕ್ಕಳಿಗೆ ಹಲವು ಬಾರಿ ಸರಳವಾಗಿ ಸುಲಭವಾಗಿ ತಿಳಿಸಿ ಹೇಳಬೇಕು. ಆದರೆ, ಕೆಲವು ಬಾರಿ ಕಲಿಕೆಯ ಅಂಶ ಪರಿಚಿತ ಇಲ್ಲವೇ ಸುಲಭ ಗ್ರಾಹ್ಯವಾಗಿರುತ್ತದೆ. ಅಂತಹ ಸಂದರ್ಭದಲ್ಲಿ ಪೂರ್ವಸಿದ್ಧತಾ ಚಟುವಟಿಕೆ ಮತ್ತು ಪೂರಕ ಚಟುವಟಕೆ ಒಂದೇ ಆಗುತ್ತವೆ.

**ಕಲಿಕಾಂಶ ಚಟುವಟಿಕೆಗಳು:**

ನಿರ್ದಿಷ್ಟ ಉದ್ದೇಶವನ್ನು ಸಂಪೂರ್ಣವಾಗಿ ಸಾಕಾರಗೊಳಿಸಲು ಕೈಗೊಳ್ಳುವ ಚಟುವಟಿಕೆಗಳು ಇವಾಗಿವೆ. ಇಲ್ಲಿಯ ಚಟುವಟಿಕೆಗಳೆಂದರೆ,

1. ಪಾಠವನ್ನು ಸ್ಪಷ್ಟವಾಗಿ, ಭಾವಪೂರ್ಣವಾಗಿ ಓದುವುದು, ಓದಿಸುವುದು.
2. ಓದುವ – ಓದಿಸುವುದರ ಮೂಲಕ ಮಕ್ಕಳಿಗೆ ಕತೆ, ಸನ್ನಿವೇಶ ಅರ್ಥವಾಗುವಂತೆ, ಮನಮುಟ್ಟುವಂತೆ ಮಾಡುವುದು.
3. ಶಿಕ್ಷಕರು ಓದುವಲ್ಲಿ, ಅರ್ಥಗ್ರಹಿಸುವಲ್ಲಿ ಉಂಟಾಗುವ ತಪ್ಪುಗಳನ್ನು ತಿದ್ದಿ ಹೇಳುವುದು.
4. ಶಿಕ್ಷಕರು ಪಾಠವನ್ನು ಸಂವಾದ ರೂಪಕ್ಕೆ ತಂದು ಪಾಠದಲ್ಲಿ ಬರುವ ಪಾತ್ರಗಳನ್ನು ಮಕ್ಕಳಿಗೆ ಹಂಚಿ, ಅಭಿನಯಿಸುವಂತೆ ಮಾಡಬಹುದು.
5. ಕತೆ, ಗೀತರೂಪಕಗಳನ್ನು ತಂತ್ರಗಳನ್ನಾಗಿ ಬಳಸಬಹುದು.

**ಅಭ್ಯಾಸ ಚಟುವಟಿಕೆಗಳು / ಪುನರ್ಬಲನದ ಚಟುವಟಿಕೆಗಳು**

ಕಲಿತ ಅಂಶಗಳನ್ನು ಮತ್ತಷ್ಟು ಪ್ರಬಲಗೊಳಿಸುವ ಚಟುವಟಿಕೆಗಳನ್ನು ಬಳಸಬೇಕು, ಉದಾಹರಣೆಗೆ ಚಿತ್ರ ನೋಡಿ ಪದಬರೆ, ವಾಕ್ಯಬರೆ, ಕತೆ ಹೇಳು, ಕತೆ ಬರೆ, ಅಭ್ಯಾಸಪುಸ್ತಕದ ಚಟುವಟಿಕೆಗಳು ಇತ್ಯಾದಿ.

**ಬಳಕೆಯ ಚಟುವಟಿಕೆಗಳು / ಅನ್ವಯನಾ ಚಟುವಟಿಕೆಗಳು/ ವಿಸ್ತರಣಾ ಚಟುವಟಿಕೆಗಳು**

ಶಿಕ್ಷಕರ ಸಹಾಯವಿಲ್ಲದೇ ಮಕ್ಕಳು ನಿತ್ಯ ಜೀವನದಲ್ಲಿ ಗುರುತಿಸುವ ಮತ್ತು ಅನ್ವಯ ಮಾಡಿಕೊಳ್ಳುವಂತಹ ಚಟುವಟಿಕೆಗಳು. ಉದಾಹರಣೆಗೆ ಚರ್ಚೆ, ಪಠ್ಯವನ್ನು ಕತೆಯ ರೂಪಕ್ಕೆ ತರುವುದು. ವಾದಿಸುವುದು, ಪದಕ್ರೀಡೆಗಳಿಗೆ ಉತ್ತರಿಸುವುದು, ಮಕ್ಕಳು ತರ್ಕಬದ್ಧವಾಗಿ, ವಿಚಾರಪೂರ್ಣವಾಗಿ ಸಂವಾದದಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸಬೇಕು.

**ಮೌಲ್ಯಮಾಪನ ಚಟುವಟಿಕೆಗಳು (ಪರೀಕ್ಷೆ – ಲಿಖಿತ, ಮೌಖಿಕ)**

ಕಲಿತ ಎಲ್ಲಾ ಚಟುವಟಿಕೆ ಅಥವಾ ಕೌಶಲಗಳು ಪುನರ್ಮನನವಾಗಿದೆಯೇ? ಇಲ್ಲವೇ? ಎಂಬುದನ್ನು ಪರೀಕ್ಷಿಸುವುದು. ಉದಾಹರಣೆಗೆ, ಪಾಠಾಂತ್ಯದ ಮೌಲ್ಯಮಾಪನ ಪ್ರಶ್ನೆಗಳು, ಪರೀಕ್ಷೆಗಳು, ಸ್ವಯಂ ಮೌಲ್ಯಮಾಪನ ಚಟುವಟಿಕೆಗಳು.

**ಸಾಮರ್ಥ್ಯಾಧಾರಿತ ಪಾಠಯೋಜನೆಯ ಅನುಕೂಲಗಳು**

- ಮಗುವಿನ ಕಲಿಕೆಯ ಕನಿಷ್ಠ ಮಟ್ಟ ನಿರ್ಧಾರಿತವಾಗಿರುತ್ತದೆ.
- ಶಿಕ್ಷಕನಿಗೆ ವರ್ಗಕ್ಕೆ ನಿರ್ಧಾರಿತ ಸಾಮರ್ಥ್ಯದನ್ವಯ ಪಾಠಯೋಜನೆಯನ್ನು ರೂಪಿಸಿಕೊಳ್ಳುವುದು ಸುಲಭವಾಗುತ್ತದೆ.
- ಮಕ್ಕಳಿಗೂ ಕಲಿಯುವ ಅಂಶಗಳ ಕುರಿತಂತೆ ಕಲಿಕೆಯ ಗುರಿ ನಿರ್ಧಾರವಾಗಿರುತ್ತದೆ.
- ಚಟುವಟಿಕೆಯಾಧಾರಿತ ನೆಲೆಯಲ್ಲಿ ಮಕ್ಕಳು ಸುಲಭವಾಗಿ ಕಲಿಯುತ್ತಾರೆ.
- ವೈವಿಧ್ಯಮಯ ಕಲಿಕಾ ಅನುಭವಗಳು ದೊರಕುತ್ತವೆ.
- ಮಕ್ಕಳು ಸ್ವಯಂ ಮೌಲ್ಯಮಾಪನ ಮಾಡಿಕೊಳ್ಳಲು ಶಕ್ತರಾಗುತ್ತಾರೆ.
- ಪೂರ್ವಜ್ಞಾನವನ್ನು ಆಧರಿಸಿ, ಪಾಠ ಯೋಜಿಸುವುದರಿಂದ, ಕಲಿಕೆಗೆ ನೆಲೆ ಒದಗುತ್ತದೆ.

**ಕಲಿಕಾ ಚಟುವಟಿಕೆಗಳು:**

ಭಾಷಾಬೋಧನೆಯಲ್ಲಿ ಸಾಧಿಸಬೇಕಾದ ಮೂಲ ಕಲಿಕಾ ಸಾಮರ್ಥ್ಯಗಳನ್ನು ಈ ಕೆಳಗಿನಂತೆ ಪಟ್ಟಿಮಾಡಿದೆ. ಈ ಕಲಿಕಾ ಸಾಮರ್ಥ್ಯಗಳನ್ನು ಈ ಕೆಳಗಿನಂತೆ ನೀಡಲಾಗಿದೆ. ಈ ಸಾಮರ್ಥ್ಯಗಳಿಗೆ ಯುಕ್ತ ಚಟುವಟಿಕೆಗಳನ್ನು ಆಧರಿಸಿ, ಯೋಜನೆ ರೂಪಿಸಿ.

**ಆಲಿಸುವಿಕೆ**

- ಸರಳ ಹಾಗೂ ಬಳಕೆಯಲ್ಲಿರುವ ಜನಪ್ರಿಯ ಪ್ರಾಸಗಳು ಗೀತೆಗಳು ಮತ್ತು ಕತೆಗಳನ್ನು ಆಲಿಸುವುದರ ಜೊತೆಗೆ ಅರ್ಥಮಾಡಿಕೊಳ್ಳುವುದು.
- ಅಪರಿಚಿತ ಸನ್ನಿವೇಶಗಳಲ್ಲಿನ ಸರಳ ಸೂಚನೆಗಳು, ಮೌಖಿಕ ಬೇಡಿಕೆಗಳು, ಆದೇಶಗಳು ಮತ್ತು ಪ್ರಶ್ನೆಗಳನ್ನು ಅರ್ಥಮಾಡಿಕೊಳ್ಳುವುದು.
- ಓದಿದ ಪದ್ಯಗಳು, ನಾಟಕಗಳು ಮತ್ತು ಚರ್ಚೆಗಳನ್ನು (ಶಾಲಾ ಸಮಾರಂಭಗಳು ಮತ್ತು ಸ್ಪರ್ಧೆಗಳಲ್ಲಿ) ಆಸಲಿಸುವುದರ ಜೊತೆಗೆ ಅರ್ಥಮಾಡಿಕೊಳ್ಳುವುದು.

**ಮಾತುಗಾರಿಕೆ**

- ಸರಿಯಾದ ವಾಕ್ ಶೈಲಿಯೊಂದಿಗೆ ಉಚ್ಚರಿಸುವುದು.
- ಘಟನೆಗಳು ಹಾಗೂ ಸನ್ನಿವೇಶಗಳನ್ನು ವಿವರಿಸುವುದು.
- ನಾಟಕ ಮತ್ತು ಚರ್ಚೆಗಳಲ್ಲಿ ಭಾಗವಹಿಸುವುದು.
- ಔಪಚಾರಿಕ ಪ್ರಕಟಣೆಗಳನ್ನು ಹೇಳುವುದು.
- ಸಂದರ್ಶನ, ನಾಟಕ, ಚರ್ಚಾಗೋಷ್ಠಿ, ಸಂವಾದಗಳಲ್ಲಿ ಭಾಗವಹಿಸುವುದು.
- ಸಾಹಿತಿಗಳ ಭೇಟಿ, ಸಂದರ್ಶನ ಮುಂತಾದ ಸನ್ನಿವೇಶಗಳಲ್ಲಿ ಸೂಕ್ತ ಪ್ರಶ್ನೆಗಳನ್ನು ಕೇಳುವುದು.

**ಓದುಗಾರಿಕೆ**

- ಪಠ್ಯಪುಸ್ತಕದಲ್ಲಿರುವ ಗದ್ಯ ಹಾಗೂ ಪದ್ಯಭಾಗಗಳನ್ನು ಸ್ಪಷ್ಟವಾಗಿ, ಸರಾಗವಾಗಿ ಭಾವಪೂರ್ಣವಾಗಿ ಓದುವುದು
- ಪ್ರಸಿದ್ಧ ಸಾಹಿತಿಗಳ ಕೃತಿಗಳನ್ನು ಓದಿ ಮುಖ್ಯಾಂಶಗಳನ್ನು ಗುರುತಿಸುವುದು.
- ದಿನಪತ್ರಿಕೆ, ವಾರಪತ್ರಿಕೆ, ಪಾಕ್ಷಿಕ ಪತ್ರಿಕೆಗಳನ್ನು ವಿರಾಮಕಾಲದಲ್ಲಿ ವಾಚಿಸಿ ಅರ್ಥಮಾಡಿಕೊಳ್ಳುವುದು.
- ಮೌನವಾಗಿ ಪಠ್ಯದ ಸಾರಾಂಶವನ್ನು ಗ್ರಹಿಸುವುದು.

**ಬರೆವಣಿಗೆ**

- ವಾಕ್ಯಗುಚ್ಛಗಳು ಮತ್ತು ಲೇಖನ ಚಿಹ್ನೆಗಳನ್ನು ಬಳಸಿ, ಮಾರ್ಗದರ್ಶಕ ರಚನೆಗಳನ್ನು ಬರೆಯುವುದು.
- ಪ್ರವಾಸ, ಕಾರ್ಯಕ್ರಮ ಮುಂತಾದ ಘಟನೆಗಳ ಬಗ್ಗೆ ವರದಿ ಬರೆಯುವುದು.
- ವಾರ್ತಾ ಪತ್ರಿಕೆಗಳು, ವಿಶೇಷ ಸುದ್ಧಿಗಳನ್ನು ವಾರ್ತಾಫಲಕದ ಮೇಲೆ ಬರೆಯವುದು.
- ಭಿತ್ತಿಪತ್ರಿಕೆಗಳನ್ನು ತಯಾರಿಸುವುದು.
- ಔಪಚಾರಿಕ ಮತ್ತು ಅನೌಪಚಾರಿಕ ಮಾದರಿ ಪತ್ರಗಳನ್ನು ಬರೆಯುವುದು.

**ವಿಷಯ ಗ್ರಹಿಕೆ (ಆಲಿಸುವುದು ಮತ್ತು ಓದುವುದರ ಮೂಲಕ)**

- ಪಠ್ಯಪುಸ್ತಕ, ಉಪಪಠ್ಯಪುಸ್ತಕ, ಬೇರೆ ಪುಸ್ತಕಗಳು ಎಲ್ಲವನ್ನೂ ಓದಿ ವಿಷಯವನ್ನು ಸಂಪೂರ್ಣವಾಗಿ ಗ್ರಹಿಸಿ, ಎಲ್ಲಾ ರೀತಿಯ ಪ್ರಶ್ನೆಗಳಿಗೆ ಉತ್ತರಿಸುವುದಲ್ಲದೇ ಸರಳ ವಾಕ್ಯಗಳಲ್ಲಿ ಮುಖ್ಯಾಂಶಗಳನ್ನು ಹೇಳುವುದು.

**ಕ್ರಿಯಾತ್ಮಕ ವ್ಯಾಕರಣ**

- ವಸ್ತು ವಾಚಕಗಳ ಬಳಕೆ, ಸಂಕ್ಷಿಪ್ತ ಮತ್ತು ಬೇರೆ ಬೇರೆ ವಿಧಾನ ವಾಕ್ಯಗಳ ಬಳಕೆ, ಲಿಂಗಭೇದ, ನಾಮಪದಗಳನ್ನು ಕ್ರಿಯಾಪದಕ್ಕೆ ಪರಿವರ್ತಿಸುವುದು, ಕನ್ನಡದಲ್ಲಿ ಬಳಸುವ ಅನ್ಯಭಾಷಾ ಪದಗಳ ಬಗ್ಗೆ ಅರ್ಥಮಾಡಿಕೊಳ್ಳುವುದು.
- ಪ್ರಕೃತಿ, ಪ್ರತ್ಯಯ, ವಿಭಕ್ತಿ ಪ್ರತ್ಯಯ, ತದ್ಧಿತ ಮತ್ತು ಕೃತ್‌ಪ್ರತ್ಯಯಗಳು, ಸಂಧಿ, ಸಮಾಸ, ಕಾಲಭೇದಗಳು, ವಾಕ್ಯ ಸಂಯೋಜನೆ, ಪ್ರಶ್ನಾರ್ಥಕ ವಾಕ್ಯಗಳು ಇವುಗಳ ಬಳಕೆಯ ಬಗ್ಗೆ ಅರ್ಥಮಾಡಿಕೊಳ್ಳುವುದು.

**ಸ್ವ ಕಲಿಕೆ**

- ಸ್ವತಂತ್ರ್ಯವಾಗಿ ವಿಶ್ವಕೋಶ, ಶಬ್ದಕೋಶ, ನಿಘಂಟು, ಚಿತ್ರಕೋಶ, ಸಮೂಹಮಾಧ್ಯಮಗಳನ್ನು ಲಾಭದಾಯಕವಾಗಿ ಉಪಯೋಗಿಸುವ ಸಾಮರ್ಥ್ಯ.

**ಭಾಷಾಬಳಕೆ**

- ಸಮೂಹ ಚರ್ಚೆ ಅಥವಾ ಸಂವಾದ ಮಾಡುವಾಗ ಸರದಿ ಅನುಸರಿಸುವುದು.
- ಔಪಚಾರಿಕ ಮತ್ತು ಅನೌಪಚಾರಿಕ ಸಂದರ್ಭಗಳಿಗೆ ತಕ್ಕಂತೆ ಭಾಷೆಯನ್ನು ಬಳಸುವುದು.
- ಸಭೆಯಲ್ಲಿ ಭಾಷಣ, ಅಭಿನಯ ಮುಂತಾದ ಸನ್ನಿವೇಶಗಳಲ್ಲಿ ಸೂಕ್ತ ಭಾಷೆಯನ್ನು ಬಳಸುವುದು.

**ಶಬ್ದ ಸಂಪತ್ತಿನ ಪ್ರಭುತ್ವ**

- ಸುಮಾರು 8000 ರಿಂದ 10,000ದವರೆಗೆ ಪದಗಳನ್ನು ಓದಿ ಗ್ರಹಿಸುವ ಸಾಮರ್ಥ್ಯ ಹೊಂದುವುದು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ –2**

ನಿಮ್ಮ ಆಯ್ಕೆಯ ಒಂದು ಪಾಠಕ್ಕೆ ಸಂಬಂಧಿಸಿದಂತೆ, ಸಾಮರ್ಥ್ಯಾಧಾರಿತ ಯೋಜನೆ ರಚಿಸಿ.

### 4.3.4. ಸಾರಾಂಶಿಸೋಣ

- 1986ರ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಕಲಿಕೆಯ ಕನಿಷ್ಠ ಮಟ್ಟಗಳ ಪರಿಕಲ್ಪನೆಯನ್ನು ಮೊದಲ ಬಾರಿಗೆ ಪ್ರಸ್ತಾಪಿಸಲಾಯಿತು. ಈ ಹಿನ್ನೆಲೆಯಲ್ಲಿ ಪ್ರಾಥಮಿಕ ತರಗತಿಗಳ ವಿಷಯಗಳಲ್ಲಿ ಅತಿ ಅವಶ್ಯಕವಾಗಿ ಗಳಿಸಲೇಬೇಕಾದ ಸಾಮರ್ಥ್ಯಗಳನ್ನು ಗುರುತಿಸಲಾಗಿದೆ. ಕಲಿಕೆಯ ಕನಿಷ್ಠ ಮಟ್ಟಗಳಿಗೆ ಸಂಬಂಧಿಸಿದಂತೆ ರಾಷ್ಟ್ರಮಟ್ಟದಲ್ಲಿ ಪ್ರತಿಯೊಂದು ವಿಷಯದಲ್ಲಿ ನಿರ್ದಿಷ್ಟ ಕ್ಷೇತ್ರಗಳನ್ನು ಗುರುತಿಸಿ, ಪ್ರತಿಯೊಂದು ಕ್ಷೇತ್ರದಲ್ಲಿ, ಆಯಾ ವರ್ಗದಲ್ಲಿ ಪ್ರತಿಯೊಂದು ವರ್ಗವೂ ಗಳಿಸಲೇಬೇಕಾದ ಸಾಮರ್ಥ್ಯಗಳನ್ನು ನಿರ್ದಿಷ್ಟಪಡಿಸಲಾಗಿದೆ. ಇವುಗಳಿಗೆ ಕ್ರಮಾಂಕ ನೀಡಿದೆ. ಪ್ರತಿಯೊಂದು ಮಗುವೂ ಪ್ರತಿಯೊಂದು ಸಾಮರ್ಥ್ಯವನ್ನು ಪ್ರಭುತ್ವ ಮಟ್ಟದಲ್ಲಿ ಕಲಯುವಂತೆ ಮಾಡುವುದು ಈ ಕಲಿಕೆಯ ಕನಿಷ್ಠ ಮಟ್ಟದ ಮುಖ್ಯ ಉದ್ದೇಶ.
- ಕಲಿಕೆಯ ಕನಿಷ್ಠ ಮಟ್ಟಗಳನ್ನು ಆಧರಿಸಿ ನಿರೂಪಿಸಲಾದ ಭಾಷಾ ಸಾಮರ್ಥ್ಯಗಳನ್ನು ಪ್ರಭುತ್ವ ಮಟ್ಟದಲ್ಲಿ ಪ್ರತಿಯೊಂದು ಮಗುವೂ ಗಳಿಸುವಂತೆ, ಶಿಕ್ಷಕರು ಬೋಧಿಸುವುದೇ 'ಸಾಮರ್ಥ್ಯಾಧಾರಿತ ಬೋಧನೆ'. ಈ ಸಾಮರ್ಥ್ಯಗಳ ಗಳಿಕೆಗೆ ರೂಪಿಸಬಹುದಾದ ಪಾಠಯೋಜನೆಯೇ 'ಸಾಮರ್ಥ್ಯಾಧಾರಿತ ಪಾಠಯೋಜನೆ' ಎನಿಸುತ್ತದೆ.
- ಸಾಮರ್ಥ್ಯಾಧಾರಿತ ಬೋಧನೆಯು ಚಟುವಟಿಕೆ ಆಧಾರಿತ ಬೋಧನೆಯಾಗಿದ್ದು, ಯೋಜನೆಯನ್ನು ಬೋಧನೆಯ ವಿವಿಧ ಹಂತಗಳಿಗೆ ಜೋಡಿಸುವುದರ ಮೂಲಕ ನಿರ್ವಹಿಸಬಹುದಾಗಿದೆ.
- ಬೋಧನೆ / ಕಲಿಕೆಗೆ ಪೂರ್ವದಲ್ಲಿ, ರಾಷ್ಟ್ರಮಟ್ಟದಲ್ಲಿ ರೂಪಿಸಲಾಗಿರುವ ಪ್ರತಿ ತರಗತಿ ಹಂತದ ಸಾಮರ್ಥ್ಯ ಮತ್ತು ಉಪಸಾಮರ್ಥ್ಯಗಳನ್ನು ನಿರ್ದಿಷ್ಟಪಡಿಸಿಕೊಳ್ಳುವುದು. ಭಾಷಾಸಾಮರ್ಥ್ಯಗಳ ಅಭಿವೃದ್ಧಿಗೆ ಪೂರಕವಾಗಿ ಯೋಜನೆಯನ್ನು ರೂಪಿಸಿಕೊಳ್ಳುವುದು, ಯೋಜನೆಯಂತೆ ಬೋಧನೆ/ಕಲಿಕಾ ಯೋಜನೆಗಳನ್ನು ಕಾರ್ಯಗತಗೊಳಿಸುವುದು, ಇದರಲ್ಲಿ ಪ್ರಮುಖವಾದ ಅಂಶಗಳಾಗಿರುತ್ತವೆ.

### 4.3.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು –1 ಮತ್ತು 2

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ –1**

ನಿಮ್ಮ ಅಧ್ಯಯನದ ಫಲಿತಾಂಶವನ್ನು ಸಹೋದ್ಯೋಗಿಗಳೊಂದಿಗೆ ಹಂಚಿಕೊಳ್ಳಿ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ –2**

ನೀವು ರಚಿಸಿರುವ ಸಾಮರ್ಥ್ಯಾಧಾರಿತ ಯೋಜನೆ ಮೇಲೆ ಹೇಳಿರುವ ಅಂಶಗಳನ್ನು ಒಳಗೊಂಡಿವೆಯೇ ಎಂಬುದನ್ನು ಗಮನಿಸಿ.

### 4.3.6. ಘಟಕಾಂತ್ಯ ಅಭ್ಯಾಸಗಳು

1. ಸಾಮರ್ಥ್ಯಾಧಾರಿತ ಪಾಠಯೋಜನೆ ಎಂದರೇನು? ಈ ರೀತಿಯ ಪಾಠಯೋಜನೆಯನ್ನು ರೂಪಿಸುವ ಸಂದರ್ಭದಲ್ಲಿ ಗಮನಿಸಿಬೇಕಾದ ಅಂಶಗಳನ್ನು ಚರ್ಚಿಸಿ.
2. ಸಾಮರ್ಥ್ಯಾಧಾರಿತ ಪಾಠಬೋಧನೆಗೆ ಶಿಕ್ಷಕರ ಸಿದ್ಧತೆ ಹೇಗಿರಬೇಕು? ವಿವರಿಸಿ.

3. ಸಾಮರ್ಥ್ಯಾಧಾರಿತ ಬೋಧನೆಯ ಚಟುವಟಿಕೆ ಹಂತಗಳನ್ನು ವಿಶ್ಲೇಷಿಸಿರಿ.
4. ಭಾಷೆಯ ಮೂಲಕೌಶಲಗಳಿಗೆ ಸಾಮರ್ಥ್ಯಾಧಾರಿತ ಬೋಧನೆಯನ್ನು ಹೊಂದಿಸುವ ಬಗೆಯನ್ನು ವಿವರಿಸಿ.
5. "ಅನುಭವಾಧಾರಿತ ಚಟುವಟಿಕೆಗಳು ಸಾಮರ್ಥ್ಯಾಧಾರಿತ ಪಾಠ ಬೋಧನಾ ಯೋಜನೆಯಲ್ಲಿ ಪ್ರತಿಫಲಿಸುತ್ತವೆ" – ಈ ಹೇಳಿಕೆಯನ್ನು ಸಮರ್ಥಿಸಿ

### 4.3.7. ಪರಾಮರ್ಶನ ಸೂಚಿ


1. ಸಂಪನ್ಮೂಲ ಪುಸ್ತಕ ರಚನಾ ಸಮಿತಿ, ಡಿಎಸ್‌ಸಿಆರ್‌ಟಿ, 'ಕನ್ನಡ ಸಂಪದ', ಪ್ರಕಾಶನ: ವಿನಾಯಕ ಆಫ್‌ಸೆಟ್ ಪ್ರಿಂಟರ್ಸ್ # 56, 9ನೇ ಮುಖ್ಯರಸ್ತೆ, 1ನೇ ಅಡ್ಡರಸ್ತೆ, ಕಾವೇರಿ ನಗರ, ಬನಶಂಕರಿ ಕೈಗಾರಿಕಾ ಪ್ರದೇಶ, ಬನಶಂಕರಿ 2ನೇ ಹಂತ, ಬೆಂಗಳೂರು – 560070, ಪ್ರಕಟಣಾ ವರ್ಷ 2008
2. Prepared by Ms. Fatma Amin – Ms. Sherifah Al-Sayegh – Ms.Rehab Nadim – Ms. Hadiyah Alenzi - Ms. Girmeen Gendia – Ms. Salwa Shalan – Ms.Abber Al-Jeran, Supervised by Mohamed Nagib Ali Elt. Acting General Supervisor Ms. Suzan Al-Bashiti 'Guidelines for Competency Based Lesson Plan', https://eltsupervisionkw.files.wordpress.com/2015/09/how_to_prepare_your_lesson_plan_may_20151.pdf -2015
3. Rwanda Education Board 'Lesson plan format', https://elearning.reb.rw/mod/resource/view.php?id=693&forceview=1
4. ರಾಜ್ಯ ಶಿಕ್ಷಣ ಸಂಶೋಧನೆ ಹಾಗೀ ತರಬೇತಿ ಇಲಾಖೆ, 'ಗುರುಚೇತನ ಮಾಡ್ಯೂಲ್‌ಗಳು', http://dsert.kar.nic.in/guruchethana/english.html

## ಬ್ಲಾಕ್ 4 : ಕನ್ನಡ ಭಾಷಾ ಬೋಧನೆಯಲ್ಲಿ ಪಾಠ ಯೋಜನೆಗಳು ಮತ್ತು ಮೌಲ್ಯಮಾಪನ

## ಘಟಕ 4 : ಭಾಷಾ ಬೋಧನೆಯಲ್ಲಿ ಮೌಲ್ಯಮಾಪನ ಮತ್ತು ಮೌಲ್ಯಮಾಪನ ಸಾಧನಗಳು

**ಘಟಕದ ರಚನೆ**

4.4.1. ಕಲಿಕೆಯ ಉದ್ದೇಶಗಳು
4.4.2. ಪೀಠಿಕೆ
4.4.3. ಕಲಿಕೆಯ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು
4.4.3.1. ಮೌಲ್ಯಮಾಪನ, ಶೈಕ್ಷಣಿಕ ಮೌಲ್ಯಮಾಪನ ಮತ್ತು ಭಾಷಾ ಮೌಲ್ಯಮಾಪನ
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ - 1
4.4.3.2. ಭಾಷಾ ಮೌಲ್ಯಮಾಪನದ ಸಾಧನಗಳು
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ - 2
4.4.4. ಸಾರಾಂಶಿಸೋಣ
4.4.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು - 1 ಮತ್ತು 2
4.4.6. ಘಟಕಾಂತ್ಯ ಅಭ್ಯಾಸಗಳು
4.4.7. ಪರಾಮರ್ಶನ ಸೂಚಿ

### 4.4.1. ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿ ಶಿಕ್ಷಕ ಶಿಕ್ಷಕಿಯರು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು;

- ಮೌಲ್ಯಮಾಪನದ ಪರಿಕಲ್ಪನೆಯನ್ನು ವ್ಯಾಖ್ಯಾನಿಸುವರು;
- ಭಾಷಾ ಮೌಲ್ಯಮಾಪನದ ಸ್ವರೂಪವನ್ನು ವಿಶ್ಲೇಷಿಸುವರು ಮತ್ತು
- ಮೌಖಿಕ ಪರೀಕ್ಷೆ ಹಾಗೂ ಲಿಖಿತ ಪರೀಕ್ಷೆಗಳ ನಡುವಣ ವ್ಯತ್ಯಾಸಗಳನ್ನು ಗುರುತಿಸುವರು;
- ಸಾಧನಾ ಪರೀಕ್ಷೆಯ ವಿಧಗಳನ್ನು ವಿಶ್ಲೇಷಿಸುವರು;
- ನೈದಾನಿಕ ಪರೀಕ್ಷೆಯನ್ನು ವ್ಯಾಖ್ಯಾನಿಸುವರು;
- ಉತ್ತಮ ಪ್ರಶ್ನೆಯ ಲಕ್ಷಣಗಳನ್ನು ಪಟ್ಟಿಮಾಡುವರು;
- ವೀಕ್ಷಣೆಯಲ್ಲಿ ನಿಖರತೆ ಸಾಧಿಸುವ ಕ್ರಮಗಳನ್ನು ತಿಳಿಸುವರು ಮತ್ತು
- ಭಾಷಾ ಬೋಧನೆಯಲ್ಲಿ ಸಂದರ್ಶನದ ಪ್ರಾಮುಖ್ಯತೆಯನ್ನು ವಿವರಿಸುವರು.

### 4.4.2. ಪೀಠಿಕೆ

ಅಧ್ಯಾಪನ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ನಿಮಗೆ ಮೌಲ್ಯಮಾಪನದ ಪ್ರಕ್ರಿಯೆಯ ಕುರಿತಾಗಿ ಸಾಕಷ್ಟು ತಿಳಿದಿದೆ. ದಿನನಿತ್ಯ ನೀವು ಇದರ ಉಪಯೋಗವನ್ನು ಪಡೆಯುತ್ತಿರುವಿರಿ. ಒಟ್ಟು ಮೌಲ್ಯಮಾಪನದ ಪ್ರಕ್ರಿಯೆಯಲ್ಲಿ ನಾವು ಯಾವುದರ ಮೌಲ್ಯಮಾಪನವನ್ನು ಮಾಡುತ್ತಿದ್ದೇವೆ? ವಿದ್ಯಾರ್ಥಿಗಳ ಸಾಧನೆಯ ಮೌಲ್ಯಮಾಪನವೋ ಅಥವಾ ಅಧ್ಯಾಪಕರು ನೀಡುವ ಕಲಿಕಾ ಅನುಭವಗಳ ಪರಿಣಾಮಕಾರಿತ್ವದ ಮೌಲ್ಯಮಾಪನವೋ? ಇವೆರಡರ ಮೌಲ್ಯಮಾಪನವೂ ಹೌದು. ವಿದ್ಯಾರ್ಥಿಗಳ ಸಾಧನೆಯ ಮೌಲ್ಯಮಾಪನದ ಮೂಲಕ ಕಲಿಕಾ ಅನುಭವಗಳ ಪರಿಣಾಮಕಾರಿತ್ವದ ಮೌಲ್ಯಮಾಪನ ಇಲ್ಲಿ ನಡೆಯಬೇಕು. ವಿದ್ಯಾರ್ಥಿಗಳು ಎಷ್ಟರಮಟ್ಟಿಗೆ ಕಲಿಯಲು ಸಾಧ್ಯವಾಗಿದೆ ಎಂಬುದರ ಆಧಾರದ ಮೇಲೆ ಮತ್ತೇನು ಕಲಿಯಬೇಕು ಎಂಬುದನ್ನು ಗುರುತಿಸಿಕೊಳ್ಳಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಇಂದು ಮೌಲ್ಯಮಾಪನದ ಪರಿಕಲ್ಪನೆಯ ಅರ್ಥ ಸಾಂಪ್ರದಾಯಿಕ ಮಾಪನದ ಅರ್ಥಕ್ಕಿಂತ

ಹೆಚ್ಚು ಭಿನ್ನವಾಗಿದೆ. 'ಕಲಿಕೆಯ ಮಾಪನ' ದ ಪರಿಕಲ್ಪನೆ ಇಂದು 'ಕಲಿಕೆಗಾಗಿ ಮಾಪನ'ವಾಗಿ ಮಾರ್ಪಾಟಾಗಿದೆ. ಇದನ್ನು ನೀವು ಕಲಿಕೆಗಾಗಿ ಮಾಪನ ಎಂಬ ಪತ್ರಿಕೆಯ ಅಡಿಯಲ್ಲಿ ವಿಸ್ತಾರವಾಗಿ ಕಲಿತಿರುವಿರಿ. ಕಲಿಕೆಗಾಗಿ ಮಾಪನ ಭಾಷಾ ಕಲಿಕೆಯ ದೃಷ್ಟಿಯಿಂದ ಸಾರ್ಥಕವಾಗಬೇಕಾದರೆ ನಾವು ಭಾಷಾ ಕಲಿಕೆ ಮತ್ತು ಬೋಧನೆಗೆ ಸಂಬಂಧಿಸಿದಂತೆ ಭಾಷಾ ಕಲಿಕೆಯ ಮಾಪನದ ಸ್ವರೂಪ ಹೇಗಿರಬೇಕು ಎಂಬುದನ್ನು ವಿಶೇಷವಾಗಿ ಕಲಿಯಬೇಕು. ಅದಕ್ಕೆ ಪೂರಕವಾದ ಅಗತ್ಯವಾದ ಸಾಧನಗಳು ಯಾವುವು, ಅವುಗಳನ್ನು ರೂಪಿಸಿಕೊಳ್ಳುವ ಬಳಸಿಕೊಳ್ಳುವ ವಿಧಾನಗಳಾವುವು ಎಂಬ ಅಂಶಗಳನ್ನು ಸ್ಪಷ್ಟಪಡಿಸಿಕೊಳ್ಳಬೇಕು. ಈ ವಿಚಾರಗಳನ್ನು ಪ್ರಸ್ತುತ ಘಟಕದಲ್ಲಿ ವಿಚಾರಮಾಡೋಣ.

### 4.4.3. ಕಲಿಕೆಯ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

### 4.4.3.1. ಮೌಲ್ಯಮಾಪನ, ಶೈಕ್ಷಣಿಕ ಮೌಲ್ಯಮಾಪನ ಮತ್ತು ಭಾಷಾ ಮೌಲ್ಯಮಾಪನ

**ಅರ್ಥ:**

ಯಾವುದೇ ಪ್ರಕ್ರಿಯೆಯ ನಿರ್ಣಾಯಕ ಪ್ರಕ್ರಿಯೆಯಾಗಿ ಮೌಲ್ಯಮಾಪನವು ಪದಶಃ ಅರ್ಥದಲ್ಲಿ ಸ್ವೀಕರಿಸಿದಾಗ, ಮೌಲ್ಯ ಮಾಪನ ಎಂದರೆ, ವಸ್ತು, ಪ್ರಕ್ರಿಯೆಯೊಂದರ ಯೋಗ್ಯತೆ ಮತ್ತು ಗುಣಮಟ್ಟದ ಆಧಾರದ ಮೇ;ಲೆ 'ಬೆಲೆ ನಿರ್ಧಾರ' ಅಥವಾ 'ಮೌಲ್ಯ ನಿಷ್ಕರ್ಷೆ' ಮಾಡುವುದು ಎಂದರ್ಥ.

**ಪರಿಕಲ್ಪನೆ:**

ಪರೀಕ್ಷೆ, ಮೌಲ್ಯಮಾಪನ, ಮೌಲ್ಯಾಂಕನ ಹೀಗೆ ಹಲವಾರು ಪರಿಕಲ್ಪನೆಗಳು ಮೌಲ್ಯಮಾಪನದ ಸುತ್ತಲೂ ಹರಿದಾಡುತ್ತವೆ. ಆದರೆ, ಎಲ್ಲವೂ ಮೌಲ್ಯಮಾಪನಕ್ಕೆ ಸಂಬಂಧಿಸಿದ್ದರೂ ಎಲ್ಲವೂ ಮೌಲ್ಯಮಾಪನವಾಗಲು ಸಾಧ್ಯವಿಲ್ಲ!

ಸಾಂಪ್ರದಾಯಿಕ ನೆಲೆಯಲ್ಲಿ 'ಪರೀಕ್ಷೆ'ಯನ್ನೇ ಮೌಲ್ಯಮಾಪನ ಎಂದು ಪರಿಗಣಿಸಲಾಗುತ್ತಿದ್ದರೂ ಈ ಪರೀಕ್ಷೆ ಮೌಲ್ಯಮಾಪನ ನಿರ್ವಹಿಸಲು ಸಾಧನ ಮಾತ್ರವಾದರೆ, 'ಮೌಲ್ಯಮಾಪನ'ದ ಪರಿಕಲ್ಪನೆಯು ವಸ್ತು ಅಥವಾ ಪ್ರಕ್ರಿಯೆಯ ಅಳತೆ ಎಂದೆನಿಸುತ್ತದೆ. ಮೌಲ್ಯಾಂಕನವು 'ಮೌಲ್ಯ ನಿಷ್ಕರ್ಷೆ' ಎಂದೆನಿಸುತ್ತದೆ.

**ಮೌಲ್ಯಮಾಪನದ ವ್ಯಾಖ್ಯಾನಗಳು:**

- ಎನ್.ಎಸ್.ವೀರಪ್ಪರವರ ಪ್ರಕಾರ, "ಒಂದು ಪದಾರ್ಥದ ಅಥವಾ ಸನ್ನಿವೇಶದ ಬೆಲೆ, ಮೌಲ್ಯವನ್ನು ಅಥವಾ ಪರಿಮಾಣವನ್ನು ಎಚ್ಚರಿಕೆಯ ವಿಧಾನಗಳಿಂದ ನಿರ್ಧರಿಸುವ ಕಾರ್ಯವೇ ಮೌಲ್ಯಮಾಪನ."
- ಜೇಮ್ಸ್.ಎಂ ಬ್ರಾಡ್ ಫೀಲ್ಡ್‌ರು, "ಒಂದು ವಸ್ತು, ಘಟನೆಯ ಬೆಲೆ ಅಥವಾ ಮೌಲ್ಯದ ಗುಣ ತಿಳಿಸಲು ಆ ವಸ್ತು, ಘಟನೆಗೆ ಸಂಕೇತ ನೀಡುವ ಕಾರ್ಯವೇ ಮೌಲ್ಯಮಾಪನ" ಎಂದಿದ್ದಾರೆ.

**ಶೈಕ್ಷಣಿಕ ಮೌಲ್ಯಮಾಪನ**

**ಅರ್ಥ:** ಶೈಕ್ಷಣಿಕ ಪ್ರಕ್ರಿಯೆಗಳ ಮೂಲಕ ಶಿಕ್ಷಣದ ಉದ್ದೇಶಗಳ ಸಾಧನೆಯ ಪ್ರಮಾಃಣವನ್ನು ನಿರ್ಧರಿಸಲು, ಮೌಲ್ಯ ನಿಷ್ಕರ್ಷಿಸಲು ಇರುವ ಸಾಧನವನ್ನು ಶೈಕ್ಷಣಿಕ ಮೌಲ್ಯಮಾಪನ ಎನ್ನುವರು.

**ಶೈಕ್ಷಣಿಕ ಮೌಲ್ಯಮಾಪನದ ವ್ಯಾಖ್ಯಾನಗಳು**

- ಡಬ್ಲ್ಯೂ.ಎನ್. ದಾಂಡೇಕರ್‌ರವರ ಪ್ರಕಾರ, "ಶೈಕ್ಷಣಿಕ ಉದ್ದೇಶಗಳನ್ನು ಎಷ್ಟರಮಟ್ಟಿಗೆ ಸಾಧಿಸಲಾಗಿದೆ ಎಂದು ನಿರ್ಧರಿಸುವ ವ್ಯವಸ್ಥಿತ ಪ್ರಕ್ರಿಯೆಯೇ ಮೌಲ್ಯಮಾಪನ."

ಈ ವ್ಯಾಖ್ಯಾನವು ಶೈಕ್ಷಣಿಕ ಉದ್ದೇಶಗಳ ಸಾಧನೆಯನ್ನು ಅಳತೆ ಮಾಡುವ ಸಾಧನವಾಗಿ ಮೌಲ್ಯಮಾಪನವನ್ನು ವ್ಯಾಖ್ಯಾನಿಸುತ್ತದೆ.

- ರ್‍ವೆಲೆನ್ ಮತ್ತು ಹನ್ನಾರ್‌ರವರ ಪ್ರಕಾರ, "ಶೈಕ್ಷಣಿಕ ಮೌಲ್ಯಮಾಪನವೆಂದರೆ ಮಕ್ಕಳ ಬೌದ್ಧಿಕ, ದೈಹಿಕ, ಸಾಮಾಜಿಕ ಅಭಿವೃದ್ಧಿ, ಅಭಿರುಚಿ, ಅರ್ಹತೆ ಮತ್ತು ಒಲವು ಮುಂತಾದವುಗಳನ್ನು ಸಮಗ್ರವಾಗಿ ಅಳೆಯುವ ಒಂದು ಸಾಧನ.

ಈ ವ್ಯಾಖ್ಯಾನವು ಮಗುವಿನ ಸಮಗ್ರ ಅಭಿವೃದ್ಧಿಯನ್ನು ಅಳತೆ ಮಾಡುವ ಸಾಧನವಾಗಿ ಮೌಲ್ಯಮಾಪನವನ್ನು ಬಿಂಬಿಸುತ್ತದೆ.

**ಉತ್ತಮ ಮೌಲ್ಯಮಾಪನದ ತತ್ತ್ವಗಳು:**
ಉತ್ತಮ ಮೌಲ್ಯಮಾಪನವು

- ಉದ್ದೇಶ ಆಧಾರಿತವಾಗಿರಬೇಕು.
- ನಿರಂತರ ಮತ್ತು ವ್ಯಾಪಕವಾಗಿರವಾಗಿರಬೇಕು.
- ವಿದ್ಯಾರ್ಥಿಕೇಂದ್ರಿತವಾಗಿರಬೇಕು.
- ನೈದಾನಿಕ ಸ್ವರೂಪವನ್ನು ಪಡೆದಿರಬೇಕು.
- ವೈಜ್ಞಾನಿಕವಾಗಿರಬೇಕು.
- ವಸ್ತುನಿಷ್ಠವಾಗಿರಬೇಕು.
- ಉತ್ತಮ ಸಾಧನ ತಂತ್ರಗಳಿಂದ ಕೂಡಿರಬೇಕು.
- ಪರಿಹಾರ ಬೋಧನೆಯನ್ನು ನೀಡುವಂತಿರಬೇಕು.
- ಬೋಧನಾ/ಕಲಿಕಾ ಪ್ರಕ್ರಿಯೆಯನ್ನು ಸುಧಾರಿಸುವಂತಿರಬೇಕು.
- ಲಿಖಿತ ಮತ್ತು ಮೌಖಿಕ ವಿಧಾನಗಳೆರಡರ ಮೂಲಕ ನಡೆಯಬೇಕು.
- ವಿದ್ಯಾರ್ಥಿಯ ಸಮಗ್ರ ಸಾಮರ್ಥ್ಯವನ್ನು ಪರೀಕ್ಷಿಸುವಂತಿರಬೇಕು.
- ಗುಣಾತ್ಮಕ ಮತ್ತು ಪರಿಮಾಣಾತ್ಮಕ ಸಾಧನಗಳೆರಡನ್ನೂ ಪರಿಗಣಿಸಬೇಕು.

ಭಾಷಾ ಮೌಲ್ಯಮಾಪನದಲ್ಲಿಯೂ ಈ ಎಲ್ಲಾ ತತ್ತ್ವಗಳನ್ನು ಆಧರಿಸಿ ಮೌಲ್ಯಮಾಪನವನ್ನು ಯೋಜಿಸುವುದು ಪ್ರಮುಖವಾಗುತ್ತದೆ.

**ಭಾಷಾ ಮೌಲ್ಯಮಾಪನ:**

ಭಾಷಾ ಬೋಧನೆಯಲ್ಲಿ ವಿಷಯ ಗೌಣ, ಭಾಷೆ ಪ್ರಧಾನವಾಗಿದ್ದು, ಭಾಷಾ ಮೌಲ್ಯಮಾಪನದಲ್ಲಿ ಮಕ್ಕಳ ಭಾಷಾ ಸಾಮರ್ಥ್ಯಗಳ ಮೌಲ್ಯಮಾಪನವೇ ಪ್ರಧಾನ ಎನಿಸುತ್ತದೆ.

**ಅರ್ಥ:**

ಭಾಷಾ ಬೋಧನಾ/ಕಲಿಕಾ ಪ್ರಕ್ರಿಯೆಯಲ್ಲಿ ಭಾಷೆಯ ವಿವಿಧ ರೀತಿಯ ಸಾಮರ್ಥ್ಯಗಳ ಮೌಲ್ಯಮಾಪನವೇ 'ಭಾಷಾ ಮೌಲ್ಯಮಾಪನ', ಎನಿಸುತ್ತದೆ.

ಈ ಭಾಷಾ ಮೌಲ್ಯಮಾಪನವು ಈ ಕೆಳಕಂಡ ಸಾಮರ್ಥ್ಯಗಳ ಪರಿಣತಿಯ ಮೌಲ್ಯಮಾಪನವನ್ನು ಒಳಗೊಳ್ಳುತ್ತದೆ.

1. ಭಾಷಾ ಸಾಮರ್ಥ್ಯಗಳಲ್ಲಿನ ಪರಿಣತಿ
2. ಭಾಷಾ ಕೌಶಲಗಳ ಪರಿಣತಿ

**1. ಭಾಷಾ ಸಾಮರ್ಥ್ಯಗಳಲ್ಲಿನ ಪರಿಣತಿ:** ಭಾಷೆಯು ಒಳಗೊಳ್ಳುವ ವಿವಿಧ ರೀತಿಯ ಸಾಮರ್ಥ್ಯಗಳೆಂದರೆ, ಭಾಷೆ, ಭಾಷೆಯಲ್ಲಿನ ಸಾಹಿತ್ಯ, ಭಾಷೆಯ ಚೌಕಟ್ಟಾದ ವ್ಯಾಕರಣಾಂಶಗಳಲ್ಲಿನ ಪರಿಣತಿ ಇತ್ಯಾದಿ. ಇವುಗಳನ್ನು ಭಾಷಾಂಶ, ಸಾಹಿತ್ಯಾಂಶ, ವ್ಯಾಕರಣಾಂಶಗಳಲ್ಲಿನ ಪರಿಣತಿಗಳ ಮೌಲ್ಯಮಾಪನ ಎಂದು ಗುರುತಿಸಿಕೊಳ್ಳಬಹುದು.

**ಭಾಷಾಂಶ:** ಅಕ್ಷರ–ಪದ ಪರಿಚಯ, ಶಬ್ಧಭಂಡಾರ, ಪದಗಳ ಅರ್ಥ, ವಿರುದ್ಧಾರ್ಥಕ, ಸಮಾನಾರ್ಥಕ, ತತ್ಸಮ–ತದ್ಭವಗಳು, ಅನ್ಯದೇಶೀಯ ಪದಗಳು, ಜೋಡುನುಡಿ, ಅನುಕರಣಾವ್ಯಯಗಳು, ದ್ವಿರುಕ್ತಿ, ಗಾದೆ, ಒಗಟು, ನುಡಿಗಟ್ಟುಗಳು, ಸ್ವಂತವಾಕ್ಯ ರಚನೆ, ಇತ್ಯಾದಿಗಳ ಮೇಲಿನ ಮಕ್ಕಳ ಹಿಡಿತ ಕುರಿತ ಮಾಪನ ಇಲ್ಲಿನ ಮೌಲ್ಯಮಾಪನಾಂಶವಾಗಿರುತ್ತದೆ.

**ಸಾಹಿತ್ಯಾಂಶ:** ಸಾಹಿತ್ಯದ ಅರ್ಥ, ಸ್ವರೂಪ, ಪ್ರಕಾರಗಳು, ಸಾಹಿತ್ಯ ರಚನೆಯ ತತ್ತ್ವ, ನಿಯಮಗಳು, ಅಲಂಕಾರ, ಧ್ವನಿ, ರಸ, ಶೈಲಿ ರೀತಿ, ಗುಣ, ವಿಮರ್ಶೆ ಇತ್ಯಾದಿ ಮೀಮಾಂಸೆ ಆಧಾರಿತ ಅಂಶಗಳ ಕುರಿತಂತೆ, ಲೇಖಕರ ಕುರಿತಂತೆ, ಪರಿಪೂರ್ಣ ನೆಲೆಯಲ್ಲಿ ಉಂಟಾಗಿರುವ ಅರಿವನ್ನು ಮಾಪನಮಾಡುವುದನ್ನು ಈ ಆಯಾಮವು ಒಳಗೊಳ್ಳುತ್ತದೆ.

**ಛಂದೋ–ವ್ಯಾಕರಣಾಂಶ:** ಭಾಷೆಯ ಚೌಕಟ್ಟಾದ ವ್ಯಾಕರಣವು ಒಳಗೊಳ್ಳುವ ಅಕ್ಷರ, ಪದ, ವಾಕ್ಯ ರಚನೆ, ಸಂಧಿ, ಸಮಾಸ, ಇತ್ಯಾದಿ ಎಲ್ಲಾ ನಿಯಮಾಧಾರಿತ ಸಾಮರ್ಥ್ಯಗಳ ಗಳಿಕೆಯನ್ನು ಮಾಪನಮಾಡುವುದು, ಪದ್ಯವಿಷಯಕವಾದ ಛಂದಸ್ಸು ಮತ್ತು ಸಂಬಂಧಿತ ಅಂಶಗಳನ್ನು ಮಾಪನಮಾಡುವುದು ಈ ಆಯಾಮಕ್ಕೆ ಸಂಬಂಧಪಟ್ಟುದಾಗಿರುತ್ತದೆ.

**2. ಭಾಷಾ ಕೌಶಲಗಳಲ್ಲಿನ ಪರಿಣತಿ:** ಭಾಷೆಯ ಮೂಲ ಕೌಶಲಗಳಾದ ಆಲಿಸುವಿಕೆ, ಮಾತುಗಾರಿಕೆ, ಓದುಗಾರಿಕೆ ಹಾಗೂ ಬರವಣಿಗೆಯ ಕೌಶಲಗಳ ಕುರಿತಾದ ಪರಿಣತಿಯನ್ನು ಮಾಪನಮಾಡುವುದು ಈ ಆಯಾಮಕ್ಕೆ ಸೇರುತ್ತದೆ.
ಈ ಮೂಲ ಕೌಶಲಗಳಿಗೆ ಸಂಬಂಧಿಸಿದ ಹಲವಾರು ಉಪ ಕೌಶಲಗಳ ಮಾಪನವನ್ನೂ ಇದು ಒಳಗೊಳ್ಳುತ್ತದೆ.

**ಭಾಷಾ ಮೌಲ್ಯಮಾಪನದ ಪ್ರಾಮುಖ್ಯತೆ:**

1. ಭಾಷಾ ಸಾಮರ್ಥ್ಯಗಳ ಪರಿಣಿತಿಯನ್ನು ಗುರುತಿಸುತ್ತದೆ;
2. ಭಾಷಾ ಕೌಶಲಗಳ ಮೇಲಿನ ಹಿಡಿತವನ್ನು ಗುರುತಿಸುವಲ್ಲಿ ಸಹಕರಿಸುತ್ತದೆ;
3. ವಿದ್ಯಾರ್ಥಿಗೆ ಸಂವಹನ ಸಾಮರ್ಥ್ಯ ಕುರಿತಂತೆ, ಪುಷ್ಟೀಕರಣ ಒದಗಿಸುತ್ತದೆ;
4. ಭಾಷಾ ಕಲಿಕೆಯಲ್ಲಿನ ನ್ಯೂನ್ಯತೆಯನ್ನು ಗುರುತಿಸಿ, ಪರಿಹಾರ ನೀಡುವಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತದೆ;
5. ಭಾಷೆಯ ಕಲಿಕೆಯನ್ನು ನಿರಂತರವಾಗಿ, ವ್ಯಾಪಕವಾಗಿ ನಿರ್ವಹಿಸಲು ಸಹಕರಿಸುತ್ತದೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

1. ಮೌಲ್ಯಮಾಪನ ಎಂದರೇನು?
2. ಭಾಷಾ ಮೌಲ್ಯಮಾಪನ ಎಂದರೇನು ವಿವರಿಸಿ.

**4.4.3.2. ಭಾಷಾ ಮೌಲ್ಯಮಾಪನದ ಸಾಧನಗಳು**

ಭಾಷೆಯ ವಿವಿಧ ಕೌಶಲಗಳು ಹಾಗೂ ಸಾಮರ್ಥ್ಯಗಳ ಗಳಿಕೆಯನ್ನು ಕಲಿಕಾರ್ಥಿಯಲ್ಲಿ ಗುರುತಿಸುವ ಸಾಧನಗಳೇ 'ಭಾಷಾ ಮೌಲ್ಯಮಾಪನದ ಸಾಧನಗಳು'.

ಭಾಷೆಯ ಕಲಿಕೆಯು ಗುಣಾತ್ಮಕ ನೆಲೆಯಲ್ಲಿದ್ದು, ಇದರ ಮೌಲ್ಯಮಾಪನ ಸಂಕೀರ್ಣ ಪ್ರಕ್ರಿಯೆಯಾಗಿ ಗೋಚರಿಸುತ್ತದೆ. ಈ ಹಿನ್ನೆಲೆಯಲ್ಲಿ ಭಾಷಾಶಿಕ್ಷಕನಿಗೆ ಮೌಲ್ಯಮಾಪನ ಪ್ರಕ್ರಿಯೆಗೆ ಅತ್ಯಂತ ಪ್ರಮುಖವಾಗುತ್ತವೆ.

**ಭಾಷಾ ಮೌಲ್ಯಮಾಪನ ಸಾಧನಗಳ ಪ್ರಾಮುಖ್ಯತೆ**

1. ಭಾಷಾ ಮೌಲ್ಯಮಾಪನವು ಸಂಕೀರ್ಣಪ್ರಕ್ರಿಯೆಯಾಗಿದ್ದು, ವೈವಿಧ್ಯಮಯ ಭಾಷಾ ಮೌಲ್ಯಮಾಪನದ ಸಾಧನೆಯ ಬಳಕೆಯು ಸಾಂದರ್ಭಿಕವಾಗಿ ಯುಕ್ತವಾಗಿರುತ್ತದೆ.
2. ಭಾಷೆಯ ಮೌಲ್ಯಮಾಪನದಲ್ಲಿ ಕೌಶಲದ ಮೌಲ್ಯಮಾಪನ ಪ್ರಮುಖವಾಗಿರುವುದರಿಂದ, ಕೌಶಲಗಳನ್ನು ಮಾಪನಮಾಡುವಾಗ ದರ್ಜಾಮಾಪನ, ತಾಳೆಪಟ್ಟಿಯಂತಹ ಸಾಧನಗಳು ಸಹಕಾರಿಯಾಗುತ್ತವೆ.
3. ಭಾಷೆಯ ಸಾಮರ್ಥ್ಯಗಳ ಗಳಿಕೆಯನ್ನು ಗುರುತಿಸಿಕೊಳ್ಳಲು ಮತ್ತು ಆ ಸಂಬಂಧವಾದ ದೋಷಗಳನ್ನು ಕಂಡುಕೊಳ್ಳಲು ಸಂಬಂಧಿಸಿದಂತೆ, ಸಾಧನಾ ಪರೀಕ್ಷೆ, ನೈದಾನಿಕ ಪರೀಕ್ಷೆಗಳು, ಸೂಕ್ತ ಸಾಧನಗಳಾಗಿವೆ.
4. ಭಾಷಾ ಸಾಮರ್ಥ್ಯಗಳ ಗಳಿಕೆಯನ್ನು ಗುಣಾತ್ಮಕ ಹಾಗೂ ಪರಿಮಾಣಾತ್ಮಕ ನೆಲೆಗಳಲ್ಲಿ ಗುರುತಿಸಲು ಮೌಲ್ಯಮಾಪನ ಸಾಧನಗಳು ಸಹಾಯಕವಾಗಿವೆ.

**ಭಾಷಾ ಮೌಲ್ಯಮಾಪನದ ತಂತ್ರ ಮತ್ತು ಸಾಧನಗಳು**

ಭಾಷಾ ಮೌಲ್ಯಮಾಪನ ವೈವಿಧ್ಯಮಯ ಆಯಾಮಗಳಲ್ಲಿ ನೆರವೇರಲಿದ್ದು, ವೈವಿಧ್ಯಮಯ ಮೌಲ್ಯಮಾಪನ ಸಾಧನ ಸಂಪನ್ಮೂಲಗಳನ್ನು ಬಳಸುವ ಅಗತ್ಯವಿದೆ. ಭಾಷಾ ಮೌಲ್ಯಮಾಪನಕ್ಕಾಗಿ ಹಲವಾರು ತಂತ್ರಗಳನ್ನು ಬಳಸಬಹುದಾಗಿದ್ದು ಅವುಗಳು ಕೆಳಗಿನಂತಿವೆ:

**1. ಪರೀಕ್ಷೆ**

ವ್ಯಕ್ತಿಯ ಜ್ಞಾನ, ವಿಷಯದ ಮೇಲಿನ ಪ್ರಾವೀಣ್ಯತೆ ಹಾಗೂ ಕೌಶಲದ ಗಳಿಕೆಯ ಕುರಿತಂತೆ, ಮಾಪನ ಮಾಡುವ ತಂತ್ರವೇ 'ಪರೀಕ್ಷೆ' ಎನಿಸುತ್ತದೆ.

ಕಲಿಕಾರ್ಥಿಯ ಸಾಮರ್ಥ್ಯ ಮತ್ತು ದೌರ್ಬಲ್ಯಗಳೆರಡನ್ನೂ ಗುರುತಿಸುವ ತಂತ್ರವೇ 'ಪರೀಕ್ಷೆ' ಎನಿಸುತ್ತದೆ.

ಭಾಷಾ 'ಪರೀಕ್ಷೆ'ಯಲ್ಲಿ ಹಲವಾರು ಬಗೆಗಳಿದ್ದು, ಅದರ ಸ್ವರೂಪಕ್ಕೆ ಅನುಗುಣವಾಗಿ 2 ರೀತಿಯ ಪರೀಕ್ಷೆಗಳನ್ನು ಗಮನಿಸಬಹುದಾಗಿದೆ:

1. ಮೌಖಿಕ ಪರೀಕ್ಷೆ
2. ಲಿಖಿತ ಪರೀಕ್ಷೆ

**ಮೌಖಿಕ ಪರೀಕ್ಷೆ**

ಪರೀಕ್ಷೆಯನ್ನು ನಡೆಸುವವನು ಪರೀಕ್ಷಾರ್ಥಿಯ ಎದುರು ಮುಖಾಮುಖಿಯಾಗಿ ಪ್ರಶ್ನಿಸುವ ವಿಧಾನವೇ, 'ಮೌಖಿಕ ಪರೀಕ್ಷೆ' ಎನ್ನಲಾಗುತ್ತದೆ.

ಮೌಖಿಕ ಸಾಮರ್ಥ್ಯಗಳ ಗಳಿಕೆಯನ್ನು ಪರಿಶೀಲಿಸುವ ದೃಷ್ಟಿಯಿಂದ ರೂಪಿಸಲಾಗುವ ಪರೀಕ್ಷೆಗಳೇ 'ಮೌಖಿಕ ಪರೀಕ್ಷೆಗಳು'.

ವಿದ್ಯಾರ್ಥಿಗಳ ಮಾತುಗಾರಿಕೆ ಮತ್ತು ಓದುಗಾರಿಕೆಗೆ ಸಂಬಂಧಿಸಿದ ಕೌಶಲಗಳನ್ನು ಪರೀಕ್ಷಿಸಲು ಪ್ರಮುಖವಾಗಿ ಮೌಖಿಕ ಪರೀಕ್ಷೆಯನ್ನೇ ಅನ್ವಯಿಸಿಕೊಳ್ಳಬೇಕು. ಆಲಿಸುವಿಕೆಯ ಕೌಶಲದ ಮಾಪನಕ್ಕೂ ಇದನ್ನು ನಿರ್ದಿಷ್ಟ ರೀತಿಗಳಲ್ಲಿ ಬಳಸಿಕೊಳ್ಳಬಹುದು.

**ಮೌಖಿಕ ಪರೀಕ್ಷೆಯ ಗುಣಗಳು**

- ಓದುಗಾರಿಕೆ, ಮಾತುಗಾರಿಕೆ ಕೌಶಲಗಳ ಮೌಲ್ಯಮಾಪನ ಸಾಧ್ಯ;
- ಉಚ್ಚಾರಣೆ, ಅಭಿವ್ಯಕ್ತಿ ವಿಧಾನ, ಓದುಗಾರಿಕೆ ಇವುಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳಲ್ಲಿ ದೋಷವಿದ್ದರೆ, ತಿಳಿದು ಪರಿಹಾರ ಕ್ರಮವನ್ನು ಅಳವಡಿಸಬಹುದು;
- ವಿದ್ಯಾರ್ಥಿಗಳು ಪ್ರಶ್ನೆಗಳ ಸಂದಿಗ್ಧತೆಯನ್ನು ಪರೀಕ್ಷಾ ಸಮಯದಲ್ಲಿಯೇ ನಿವಾರಿಸಿಕೊಳ್ಳಬಹುದು;
- ಸ್ಥಳದಲ್ಲಿಯೇ ಮೌಲ್ಯಮಾಪನ ಸಾಧ್ಯ;
- ವಿದ್ಯಾರ್ಥಿಗಳಲ್ಲಿ ಉತ್ತಮ ಮಾತುಗಾರಿಕೆ ಅಗತ್ಯವಾದ ಧೈರ್ಯ–ಸ್ಥೈರ್ಯಗಳು ಬೆಳೆಯುತ್ತವೆ;

**ಮೌಖಿಕ ಪರೀಕ್ಷೆಯ ಮಿತಿಗಳು**

- ತಕ್ಷಣವೇ ಉತ್ತರಿಸಬೇಕಾಗಿರುವುದರಿಂದ ಕೆಲವರಿಗೆ ಕಷ್ಟಸಾಧ್ಯ.
- ಕೇಳುವ ಪ್ರಶ್ನೆಗಳಿಗೆ ಸಮಂಜಸತೆ, ವಿಶ್ವಸನೀಯತೆ, ವ್ಯಾಪಕತೆ ಇರುವುದಿಲ್ಲ,
- ಸಮಗ್ರವಾಗಿ ಪರಿಶೀಲಿಸುವುದು ಕಷ್ಟ.
- ಸ್ವಲ್ಪ ಸಮಯದ ನಂತರ ಪರೀಕ್ಷಕರಿಗೂ ದಣಿವಾಗಿ, ಪ್ರಶ್ನೆ ಕೇಳುವವರಲ್ಲಿ ಆಸಕ್ತಿ ಕಡಿಮೆಯಾಗಬಹುದು.

**ಲಿಖಿತ ಪರೀಕ್ಷೆ**

ಬರೆವಣಿಗೆಯ ರೂಪದಲ್ಲಿ ಉತ್ತರವನ್ನು ನಿರೀಕ್ಷಿಸುವ ಪ್ರಶ್ನೆಗಳನ್ನು ಒಳಗೊಂಡ ಪರೀಕ್ಷೆಗಳಿಗೆ 'ಲಿಖಿತ ಪರೀಕ್ಷೆಗಳು' ಎನ್ನುವರು.

**ಲಿಖಿತ ಪರೀಕ್ಷೆಯ ಗುಣಗಳು**

- ಬರೆ7ಯಯ ಬವಣಿಗೆ ಸಾಮರ್ಥ್ಯವನ್ನು ಮಾಪನಮಾಡುತ್ತದೆ;
- ವಿವಿಧ ರೀತಿಯ ಬರವಣಿಗೆ ಕೌಶಲಗಳ ಗಳಿಕೆಗೆ ನೆರವಾಗುತ್ತದೆ;
- ಪ್ರಶ್ನೆ ಪತ್ರಿಕೆ ರಚನೆ ಹೆಚ್ಚು ಸುವ್ಯವಸ್ಥಿತವಾಗಿದ್ದು, ಉದ್ದೇಶಾಧಾರಿತವಾಗಿರುತ್ತದೆ;
- ಮೌಖಿಕ ಪರೀಕ್ಷೆಗೆ ಹೋಲಿಸಿದಲ್ಲಿ ಹೆಚ್ಚು ವಸ್ತುನಿಷ್ಠತೆ ಸಾಧಿಸಬಹುದಾಗಿದೆ;
- ಮಕ್ಕಳಲ್ಲಿ ಸೃಜನಾತ್ಮಕ ಬರೆವಣಿಗೆಯ ಸಾಮರ್ಥ್ಯವನ್ನು ಬೆಳೆಸಲು ಸಹಾಯಕವಾಗಿದೆ.

**ಲಿಖಿತ ಪರೀಕ್ಷೆಯ ಮಿತಿಗಳು**

- ಪ್ರಶ್ನೆಗಳಲ್ಲಿ ಗೊಂದಲವಿದ್ದರೆ, ಅದರ ನಿವಾರಣೆ ಸ್ಥಳದಲ್ಲಿಯೇ ಸಾಧ್ಯವಾಗುವುದಿಲ್ಲ.
- ವಸ್ತುನಿಷ್ಟ ಪರೀಕ್ಷೆಗಳನ್ನು ಹೊರತುಪಡಿಸಿ, ಪ್ರಬಂಧ ಮತ್ತು ಸಂಕ್ಷಿಪ್ತ ಮಾದರಿ ಪ್ರಶ್ನೆಗಳಲ್ಲಿ ವಸ್ತುನಿಷ್ಠತೆ ಕಾಯ್ದುಕೊಳ್ಳಲು ಸಾಧ್ಯವಿಲ್ಲ.
- ಪ್ರಬಂಧ ಮಾದರಿ ಪ್ರಶ್ನೆಗಳಲ್ಲಿ ವ್ಯಕ್ತಿನಿಷ್ಟತೆಗೆ ಅವಕಾಶವಿದೆ.

**ಮೌಖಿಕ ಮತ್ತು ಲಿಖಿತ ಪರೀಕ್ಷೆಗಳ ನಡುವಣ ವ್ಯತ್ಯಾಸ**

| ಅಂಶಗಳು | ಮೌಖಿಕ ಪರೀಕ್ಷೆ | ಲಿಖಿತ ಪರೀಕ್ಷೆ |
|---|---|---|
| ಪ್ರಶ್ನೋತ್ತರಗಳ ಸ್ವರೂಪ | ಮೌಖಿಕ ನೆಲೆಯಲ್ಲಿರುತ್ತವೆ | ಬರವಣಿಗೆಯ ನೆಲೆಯಲ್ಲಿರುತ್ತವೆ. |
| ಪರೀಕ್ಷಾ ಸಾಧನ | ಸಂಭಾಷಣೆಯು ಪರೀಕ್ಷಾ ಸಾಧನವಾಗಿ ಕಾರ್ಯ ನಿರ್ವಹಿಸುತ್ತದೆ. | ಪ್ರಶ್ನೆಪತ್ರಿಕೆಯು ಪರೀಕ್ಷಾ ಸಾಧನವಾಗಿ ಕಾರ್ಯ ನಿರ್ವಹಿಸುತ್ತದೆ. |
| ವ್ಯಾಪ್ತಿ | ಸಮಗ್ರ ನೆಲೆಯಲ್ಲಿ ಪರೀಕ್ಷೆ ಕಷ್ಟಸಾಧ್ಯ | ಸಮಗ್ರ ನೆಲೆಯಲ್ಲಿ ಪರೀಕ್ಷೆಗೆ ಒಳಪಡಿಸುವ ಅವಕಾಶ ಇರುತ್ತದೆ. |
| ಪರೀಕ್ಷೆಯ ಸ್ವರೂಪ | ವೈಯಕ್ತಿಕವಾಗಿ ಪರೀಕ್ಷೆಗೆ ಒಳಪಡಿಸಲಾಗುತ್ತದೆ. | ಸಾಮೂಹಿಕ ನೆಲೆಯಲ್ಲಿ ಪರೀಕ್ಷೆಗೆ ಒಳಪಡಿಸಲಾಗುತ್ತದೆ. |
| ಯೋಜಿತತೆ | ಸಾಂದರ್ಭಿಕವಾಗಿ ಯೋಜಿಸಲಾಗುತ್ತದೆ. | ನಿರ್ದಿಷ್ಟ ನೆಲೆಯಲ್ಲಿ ನೀಲನಕಾಶೆ ಆಧರಿಸಿ, ಯೋಜಿಸಲಾಗುತ್ತದೆ. |

ಈ ಪರೀಕ್ಷೆಗಳನ್ನು ಸಾಧನಾ ಪರೀಕ್ಷೆಗಳೆಂತಲೇ ಗುರುತಿಸಲಾಗುತ್ತಿದ್ದು, ಸಾಧನಪರೀಕ್ಷೆಯ ಕುರಿತು ಮುಂದೆ ವಿಚಾರಮಾಡೋಣ.

**i) ಸಾಧನಾ ಪರೀಕ್ಷೆ**

ಶಾಲೆಯಲ್ಲಿ ಒಂದು ನಿರ್ದಿಷ್ಟ ವಿಷಯದಲ್ಲಿ ಬೋಧಿಸಿದ ಜ್ಞಾನ, ತಿಳಿವಳಿಕೆ, ಕೌಶಲ ಮುಂತಾದವುಗಳಲ್ಲಿ ವಿದ್ಯಾರ್ಥಿಗಳ ಸಾಧನೆಯನ್ನು ಮಾಪನಮಾಡುವ ಉದ್ದೇಶ ಹೊಂದಿರುವ ಪರೀಕ್ಷೆಗಳೇ ಸಾಧನಾ ಪರೀಕ್ಷೆಗಳು.

ನಿರ್ದಿಷ್ಟ ಕ್ಷೇತ್ರದಲ್ಲಿ ವಿದ್ಯಾರ್ಥಿಗಳ ಸಾಧನೆಯನ್ನು ನಿಷ್ಕರ್ಷಿಸಲು ರೂಪಿಸಲಾಗುವ ಪರೀಕ್ಷೆಗಳೇ 'ಸಾಧನಾ ಪರೀಕ್ಷೆಗಳು'.

**ಭಾಷಾ ಸಾಧನಾ ಪರೀಕ್ಷೆಗಳು**

ಭಾಷಾ ಬೋಧನೆಯಲ್ಲಿ ಭಾಷಾಂಶ, ಸಾಹಿತ್ಯಾಂಶ, ಛಂದೋ–ವ್ಯಾಕರಣಾಂಶಗಳ ಕಲಿಕೆಯನ್ನು ಹಾಗೂ ಭಾಷಾ ಕೌಶಲಗಳ ಗಳಿಕೆಯನ್ನು ನಿಷ್ಕರ್ಷಿಸಲು ರೂಪಿಸಲಾಗುವ ಪರೀಕ್ಷೆಗಳೇ 'ಭಾಷಾ ಸಾಧನಾ ಪರೀಕ್ಷೆಗಳು' ಎನಿಸಿಕೊಳ್ಳುತ್ತವೆ.

ಈ ಸಾಧನಾ ಪರೀಕ್ಷೆಯಲ್ಲಿ ಹಲವಾರು ವಿಧಗಳಿವೆ:
ಸಮಯವನ್ನು ಆಧರಿಸಿ, ಪರೀಕ್ಷೆಗಳಲ್ಲಿ ಹಲವಾರು ವಿಧಗಳನ್ನು ಗುರುತಿಸಬಹುದು.

**ವಾರ್ಷಿಕ ಪರೀಕ್ಷೆ**

ನಿರ್ದಿಷ್ಟ ವಿಷಯವೊಂದಕ್ಕೆ ಸಂಬಂಧಿಸಿದಂತೆ ಒಂದು ಶೈಕ್ಷಣಿಕ ವರ್ಷಕ್ಕೆ ಪಠ್ಯಭಾಗದಲ್ಲಿ/ ಪಠ್ಯವಸ್ತುವಿನಲ್ಲಿ ಅಪೇಕ್ಷಿತವಾದ ಜ್ಞಾನ, ಕೌಶಲಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳ ಸಾಧನೆಯನ್ನು ಮಾಪನಮಾಡುವ ಪರೀಕ್ಷಣವನ್ನು 'ವಾರ್ಷಿಕ ಪರೀಕ್ಷೆ' ಎನ್ನುವರು.

**ಅರ್ಧ ವಾರ್ಷಿಕ ಪರೀಕ್ಷೆ**

ನಿರ್ದಿಷ್ಟ ವಿಷಯವೊಂದಕ್ಕೆ ಸಂಬಂಧಿಸಿದಂತೆ ಆರು ತಿಂಗಳಿಗೆ ಪಠ್ಯಭಾಗದಲ್ಲಿ/ ಪಠ್ಯವಸ್ತುವಿನಲ್ಲಿ ಅಪೇಕ್ಷಿತವಾದ ಜ್ಞಾನ, ಕೌಶಲಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳ ಸಾಧನೆಯನ್ನು ಮಾಪನಮಾಡುವ ಪರೀಕ್ಷಣವನ್ನು 'ಅರ್ಧವಾರ್ಷಿಕ ಪರೀಕ್ಷೆ' ಎನ್ನುವರು.

**ಚಾತುರ್ಮಾಸಿಕ ಪರೀಕ್ಷೆ**

ನಿರ್ದಿಷ್ಟ ವಿಷಯವೊಂದಕ್ಕೆ ಸಂಬಂಧಿಸಿದಂತೆ ನಾಲ್ಕು ತಿಂಗಳಿಗೆ ಪಠ್ಯಭಾಗದಲ್ಲಿ/ ಪಠ್ಯವಸ್ತುವಿನಲ್ಲಿ ಅಪೇಕ್ಷಿತವಾದ ಜ್ಞಾನ, ಕೌಶಲಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳ ಸಾಧನೆಯನ್ನು ಮಾಪನಮಾಡುವ ಪರೀಕ್ಷಣವನ್ನು 'ಅರ್ಧವಾರ್ಷಿಕ ಪರೀಕ್ಷೆ' ಎನ್ನುವರು.

**ಪರೀಕ್ಷೆಯ ಉದ್ದೇಶವನ್ನು ಆಧರಿಸಿ, ಪರೀಕ್ಷೆಯನ್ನು ಎರಡು ಭಾಗಗಳಾಗಿ ವಿಭಾಗಿಸಲಾಗುತ್ತದೆ.**

ಅ) ಸಾಮರ್ಥ್ಯ ಪರೀಕ್ಷೆ
ಆ) ಕೌಶಲ ಪರೀಕ್ಷೆ

**ಅ. ಸಾಮರ್ಥ್ಯ ಪರೀಕ್ಷೆ:** ಭಾಷೆಗೆ ಸಂಬಂಧಿಸಿದಂತೆ, ಭಾಷಾಂಶ, ಸಾಹಿತ್ಯಾಂಶ, ವ್ಯಾಕರಣ–ಛಂದಸ್ಸು ಇವುಗಳನ್ನು ಕುರಿತು ಗಳಿಸಿದ ಸಾಮರ್ಥ್ಯವನ್ನು ಮಾಫನಮಾಡಲು ಉದ್ದೇಶಿಸಿದ ಪರೀಕ್ಷೆಯೇ 'ಸಾಮರ್ಥ್ಯ ಪರೀಕ್ಷೆ' ಎಂದು ಗುರುತಿಸಲಾಗುತ್ತದೆ.

ಕನ್ನಡ ಭಾಷಾ ಸಾಮರ್ಥ್ಯ ಪರೀಕ್ಷೆಯು ಒಳಗೊಳ್ಳಬೇಕಾದ ಅಂಶಗಳನ್ನು ಎರಡು ಭಾಗಗಳಲ್ಲಿ ಮಾಪನಮಾಡಬಹುದಾಗಿದೆ. ಒಂದು ಸಾಮರ್ಥ್ಯ, ಮತ್ತೊಂದು ಕೌಶಲ.

**ಸಾಮರ್ಥ್ಯ ಆಧಾರಿತ ಪರೀಕ್ಷೆ:**

**ಶಾಸ್ತ್ರ**

ನಿಶ್ಚಿತ ನಿಯಮಗಳಿಗನುಗುಣವಾದ ಭಾಷಾ ಸಾಮರ್ಥ್ಯಗಳ ಗಳಿಕೆಯನ್ನು ಸಾಮರ್ಥ್ಯ ಪರೀಕ್ಷೆಯು ಮಾಪನಮಾಡುತ್ತದೆ. ಪದಗಳ ಅರ್ಥ, ಸಮಾನಾರ್ಥಕ ಪದ, ವಿರುದ್ಧಾರ್ಥಕ ಪದ, ತತ್ಸಮ–ತದ್ಭವ, ಅನ್ಯದೇಶೀಯಗಳು, ತದ್ಧಿತಾಂತ–ಕೃತ್ ಪ್ರತ್ಯಯಗಳು, ಪದಮೂಲ ಇತ್ಯಾದಿಗಳು ಪದ, ವಾಕ್ಯ, ವಾಕ್ಯವೃಂದ ರಚನಾ ನಿಯಮಗಳ ಗಳಿಕೆಯ ಮಾಪನವನ್ನು ಇಲ್ಲಿ ಗಮನಿಸಿಕೊಳ್ಳಲಾಗುತ್ತದೆ.

**ಛಂದೋ–ವ್ಯಾಕರಣಾಂಶ:** ಈ ಹಿನ್ನೆಲೆಯಲ್ಲಿ ವಿಭಕ್ತಿ ಪ್ರತ್ಯಯ, ಸಂಧಿ, ಸಮಾಸ, ನಾಮಪದ, ಕ್ರಿಯಾಪದ, ವಿಶೇಷಣ ಇತ್ಯಾದಿ ವ್ಯಾಕರಣಾಂಶಗಳು, ಮಾತ್ರೆ, ಪಾದ, ಪ್ರಾಸ, ಹೊಸಕನ್ನಡ ಛಂದಸ್ಸು ಇತ್ಯಾದಿ ಅಂಶಗಳ ಗಳಿಕೆಯ ಕುರಿತಂತೆ ಮಾಪನಮಾಡಲಾಗುತ್ತದೆ.

**ಕಾವ್ಯಾಲಂಕಾರ:** ಕಾವ್ಯ ಮೀಮಾಂಸೆಗೆ ಸಂಬಂಧಿಸಿದಂತೆ, ಗುಣ, ರೀತಿ, ಧ್ವನಿ, ರಸ, ಅಲಂಕಾರ ಇತ್ಯಾದಿಗಳನ್ನು ಕುರಿತಂತೆ ಪರೀಕ್ಷಾಂಶಗಳನ್ನು ಈ ಪರೀಕ್ಷೆ ಒಳಗೊಳ್ಳುತ್ತದೆ.

**ಸಾಹಿತ್ಯಾಂಶ:**

ಈ ಪರೀಕ್ಷೆಗಳು ಪ್ರೌಢಶಾಲೆಗಳಲ್ಲಿ ಕನ್ನಡ ಸಾಹಿತ್ಯದ ವಿವಿಧ ಕಾಲಘಟ್ಟಗಳ– ಹಳಗನ್ನಡ, ನಡುಗನ್ನಡ, ಹೊಸಗನ್ನಡ, ನವೋದಯ, ನವ್ಯ, ಪ್ರಗತಿಶೀಲ, ದಲಿತ–ಬಂಡಾಯ– ಹಾಗೂ ವಿವಿಧ ಸಾಹಿತ್ಯಪ್ರಕಾರಗಳ– ಕತೆ, ನಾಟಕ, ಪ್ರಬಂಧ, ಕಾವ್ಯ – ಸಾಹಿತ್ಯವನ್ನು ಗಮನದಲ್ಲಿಟ್ಟು(ಪಠ್ಯಕ್ಕೆ ಅನುಗುಣವಾಗಿ) ಮಾಪನ ಪರೀಕ್ಷೆಗಳನ್ನು ರೂಪಿಸಬೇಕು.

**ಆ. ಕೌಶಲ ಆಧಾರಿತ ಪರೀಕ್ಷೆ:**

ಈ ಪರೀಕ್ಷೆಗಳು ಭಾಷೆಯ ಮೂಲ ಕೌಶಲಗಳಾದ ಆಲಿಸುವಿಕೆ, ಮಾತುಗಾರಿಕೆ, ಓದುಗಾರಿಕೆ ಮತ್ತು ಬರವಣಿಗೆ ಕೌಶಲ ಕುರಿತಂತೆ, ಭಾಷೆಯ ಉಪಕೌಶಲಗಳ ಗಳಿಕೆಗೆ ಸಂಬಂಧಿಸಿದಂತೆ, ಪರೀಕ್ಷಾಂಶಗಳನ್ನು ಒಳಗೊಂಡಿರುತ್ತದೆ.

**II. ನೈದಾನಿಕ ಪರೀಕ್ಷೆ:** ನಿರ್ದಿಷ್ಟ ಕ್ಷೇತ್ರದಲ್ಲಿ ವಿದ್ಯಾರ್ಥಿಯ ದೌರ್ಬಲ್ಯಗಳನ್ನು ನಿಖರವಾಗಿ ಪತ್ತೆಹಚ್ಚಲು ತಯಾರಿಸಲಾದ ಪರೀಕ್ಷೆಗಳಿಗೆ 'ನೈದಾನಿಕ ಪರೀಕ್ಷೆ' ಎಂದು ಹೆಸರು.
ನೈದಾನಿಕ ಪರೀಕ್ಷೆಗಳನ್ನು ಕುರಿತಂತೆ, ಮುಂದೆ ವಿವರವಾಗಿ ಚರ್ಚಿಸಲಾಗುವುದು.

**III. ವೀಕ್ಷಣೆ:**

ಉದ್ದೇಶಪೂರ್ವಕವಾಗಿ ನಿರ್ದಿಷ್ಟ ಸನ್ನಿವೇಶ ಮತ್ತು ಸಮಯದಲ್ಲಿ ಪೂರ್ವ ನಿರ್ಧಾರಿತ ಕ್ರಮದಲ್ಲಿ ವ್ಯವಸ್ಥಿತವಾಗಿ ವೀಕ್ಷಿಸಿ, ವೀಕ್ಷಿಸಿದ್ದನ್ನು ದಾಖಲು ಮಾಡುವುದೇ 'ಅವಲೋಕನ'.

**ವೈಜ್ಞಾನಿಕ ವೀಕ್ಷಣೆಯ ಲಕ್ಷಣಗಳು**

- ಅದು ಕ್ರಮಬದ್ಧವಾಗಿರುತ್ತದೆ.
- ನಿರ್ದಿಷ್ಟವಾಗಿರುತ್ತದೆ.
- ವಸ್ತುನಿಷ್ಟವಾಗಿರುತ್ತದೆ.
- ಪರಿಮಾಣಾತ್ಮಕವಾಗಿರುತ್ತದೆ.

**ವೀಕ್ಷಣೆಯಲ್ಲಿ ನಿಖರತೆ ಸ್ಥಾಪಿಸಲು ಕ್ರಮಗಳು**

1. ವೀಕ್ಷಿಸುವ ಮೊದಲು ವೀಕ್ಷಕ ಏನನ್ನು ವೀಕ್ಷಿಸಬೇಕು? ಹೇಗೆ ವೀಕ್ಷಿಸಬೇಕು? ಎಂಬುದನ್ನು ಖಚಿತಪಡಿಸಿಕೊಂಡಿರಬೇಕು.
2. ವೀಕ್ಷಣಾ ಸಲಕರಣೆಗಳಾದ ಟಿಪ್ಪಣಿ, ಅನುಸೂಚಿ, ನಕ್ಷೆ, ಛಾಯಾಚಿತ್ರ, ಧ್ವನಿ ಹಾಗೂ ಚಿತ್ರ ಮುದ್ರಣ ಮುಂತಾದವುಗಳನ್ನು ಸಿದ್ಧವಾಗಿಟ್ಟುಕೊಂಡಿರಬೇಕು.
3. ವೀಕ್ಷಣಾ ಸಹಾಯಕ ಸಾಧನಗಳನ್ನೂ ಇಟ್ಟುಕೊಂಡಿರಬೇಕು. ವೀಕ್ಷಣಾ ಸಹಾಯಕ ಸಾಧನಗಳು ಕೆಳಕಂಡಂತಿವೆ:

**ತಾಳೆಪಟ್ಟಿ:** ವೀಕ್ಷಿಸಬಹುದಾದ ಅಂಶಗಳನ್ನು ಮೊದಲೇ ಗುರುತಿಸಿಕೊಂಡು, '√, x 'ಈ ಚಿನ್ಹೆಗಳ ಮೂಲಕ ವೀಕ್ಷಣೆಯನ್ನು ದಾಖಲಿಸುವ ಸಾಧನಗಳು.

**ಅವಧಿಬದ್ಧ ವೀಕ್ಷಣೆ:** ವಿದ್ಯಾರ್ಥಿಗಳ ಎಲ್ಲಾ ಚಟುವಟಿಕೆಗಳನ್ನೂ ವೀಕ್ಷಿಸದೇ, ನಿರ್ದಿಷ್ಟ ಅಂಶಗಳಿಗೆ ಸಂಬಂಧಿಸಿದಂತೆ ನಿರ್ದಿಷ್ಟ ಕಾಲಾವಧಿಯಲ್ಲಿ ಅವರ ಪ್ರತಿಕ್ರಿಯೆ ಹೇಗೆ ಮತ್ತು ಎಷ್ಟು ಬಾರಿ ನಡೆಯಿತು ಎಂಬುದನ್ನು ದಾಖಲಿಸುವ ವ್ಯವಸ್ಥೆ.

**ವೀಕ್ಷಣೆಯ ವಿಧಗಳು:**
ವೀಕ್ಷಣೆಯಲ್ಲಿ ಎರಡು ವಿಧಗಳಿವೆ:

**ಸಹಭಾಗಿ ವೀಕ್ಷಣೆ:** ಭಾಷಾ ಬೋಧಕ ತಾನು ಅಧ್ಯಯನ ನಡೆಸುವ ಗುಂಪಿನ ಜೀವನ ಮತ್ತು ಚಟುವಟಿಕೆಗಳಲ್ಲಿ ಪಾಲ್ಗೊಂಡು ಅವರ ಆಸೆ, ಆಕಾಂಕ್ಷೆ, ಅಭಿಪ್ರಾಯ, ಅಭಿರುಚಿ ಇವುಗಳ ಜೊತೆಗೆ ಭಾಷೆಯ ಮೂಲ ಕೌಶಲಗಳಾದ ಆಲಿಸುವಿಕೆ, ಮಾತುಗಾರಿಕೆ, ಓದುಗಾರಿಕೆ, ಬರವಣಿಗೆ, ಅಭಿನಯ ಮುಂತಾದವುಗಳನ್ನು ವೀಕ್ಷಿಸುವುದನ್ನೇ ಸಹಭಾಗಿ ಅವಲೋಕನ ಎನ್ನುವರು.

**ಅಸಹಭಾಗಿ ವೀಕ್ಷಣೆ:** ಅಧ್ಯಯನ ನಡೆಸುವ ಗುಂಪಿನಿಂದ ಹೊರತಾಗಿ ವೀಕ್ಷಿಸುವ ವಿಧಾನವೇ ಅಸಹಭಾಗಿ ವೀಕ್ಷಣೆ. ಮಕ್ಕಳಿಗೆ ತಿಳಿಯದಂತೆ, ಸಹಪಠ್ಯ ಚಟುವಟಿಕೆಗಳಲ್ಲಿ ಮೂಲ ಭಾಷಾ ಕೌಶಲಗಳ ಗಳಿಕೆಯನ್ನು ವೀಕ್ಷಿಸುವುದು ಇದಕ್ಕೆ ಉದಾಹರಣೆ.

**ವೀಕ್ಷಣೆಯ ಗುಣಗಳು**

1. ಗುಂಪನ್ನು ಮತ್ತು ತರಗತಿಯನ್ನು ಸುಲಭವಾಗಿ ಅಧ್ಯಯನ ಮಾಡಬಹುದು;
2. ವಸ್ತುನಿಷ್ಠವಾದುದು;
3. ವ್ಯಕ್ತಿಗೆ ತಿಳಿಯದಂತೆ ವೀಕ್ಷಿಸುವುದರಿಂದ ವರ್ತನೆಗಳು ಸ್ವಾಭಾವಿಕವಾಗಿರುತ್ತವೆ;
4. ಮಿತವ್ಯಯಕಾರಿ;
5. ವ್ಯಕ್ತಿತ್ವ ಪರೀಕ್ಷೆಯಲ್ಲಿ ಪ್ರಮುಖ ಸಾಧನ;
6. ಭಾಷಾ ನಿದಾನ ಪರೀಕ್ಷೆಯಲ್ಲಿ ಉತ್ತಮ ಸಾಧನ ಎನಿಸುತ್ತದೆ.

**ವೀಕ್ಷಣೆಯ ಮಿತಿಗಳು**

1. ಪರಿಣಿತಿ ಮತ್ತು ಅನುಭವ ಅಗತ್ಯ.
2. ನಂಬಿಕೆಗೆ ಅರ್ಹವಾದುದಲ್ಲ.
3. ಎಲ್ಲ ಅಂಶಗಳನ್ನು ತಕ್ಷಣ ದಾಖಲು ಮಾಡಲು ಕಷ್ಟ.
4. ವೀಕ್ಷಿಸಿದ ವ್ಯಕ್ತಿಗೆ ಅವಲೋಕನ ಮಾಡುತ್ತಿರುವುದು ತಿಳಿದಲ್ಲಿ ವರ್ತನೆ ಕೃತಕವಾಗಬಹುದು.
5. ಬಾಹ್ಯ ವರ್ತನೆಯನ್ನು ಮಾತ್ರ ಅವಲೋಕಿಸಿ ದಾಖಲಿಸುತ್ತದೆ.

ಭಾಷಾ ಬೋಧನೆಯಲ್ಲಿ ಅವಲೋಕನವು ಭಾಷಾಗಳಿಕೆಗೆ ಸಂಬಂಧಿಸಿದ ಮಾಪನಮಾಡಲು ಯುಕ್ತ ತಂತ್ರವಾಗಿದ್ದು, ದರ್ಜಾ ಮಾಪನವನ್ನು ಇಲ್ಲಿ ಸಾಧನವಾಗಿ ಬಳಸಬಹುದಾಗಿದೆ.

**iv. ದರ್ಜಾಮಾಪನ**

ಸಂಭವಿಸಿದ ಘಟನೆ ಅಥವಾ ವರ್ತನೆಯನ್ನು ಪರಿಮಾಣಾತ್ಮಕವಾಗಿ, ಗುಣಾತ್ಮಕವಾಗಿ ದಾಖಲಿಸಲು ರೂಪಿಸಲ್ಪಟ್ಟ ನಿರ್ದೇಶಿತ ಅವಲೋಕನ ಸಾಧನವೇ ದರ್ಜಾಮಾಪನ.

ದರ್ಜಾಮಾಪನದಲ್ಲಿ ಮೂರು ವಿಧಗಳಿವೆ.

**ವರ್ಣನಾತ್ಮಕ ದರ್ಜಾಮಾಪನ:** ದರ್ಜೆಯನ್ನು ವರ್ಣನಾತ್ಮಕ ಪದಗಳ ಮೂಲಕ ನೀಡಲಾಗುತ್ತದೆ.

| ಕ್ರಮ ಸಂಖ್ಯೆ | ಘಟಕಾಂಶಗಳು | ವಿವರಣಾತ್ಮಕ ದರ್ಜಾಮಾಪನ | | | |
|---|---|---|---|---|---|
| 1 | ಚಲನೆ | ಬಳಸಲಿಲ್ಲ | ಅಲ್ಪ ಮಟ್ಟಿಗೆ ಸರಳವಾಗಿತ್ತು | ಸರಳವಾಗಿತ್ತು | ಅತ್ಯಂತ ಸರಳವಾಗಿತ್ತು |
| 2 | ಹಾವಭಾವ | ಸಂಬಂಧಿತವಲ್ಲ | ಅಲ್ಪ ಪ್ರಮಾಣದಲ್ಲಿ ಸಂಬಂಧಿತ | ಸಂಬಂಧಿತ | ಉತ್ತಮ ಸಂಬಂಧಿತ |
| 3 | ನಿರ್ದಿಷ್ಟ ವಿನ್ಯಾಸದಲ್ಲಿ ಪರಿವರ್ತನೆ | ಯುಕ್ತ ಪ್ರಮಾಣದಲ್ಲಿರಲಿಲ್ಲ | ಅಲ್ಪ ಮಟ್ಟಿಗೆ ಇದ್ದಿತು | ಪ್ರಮಾಣಬದ್ಧವಾಗಿತ್ತು | ಅತ್ಯುಕ್ತ ನೆಲೆಯಲ್ಲಿ ಪ್ರಮಾಣಬದ್ಧವಾಗಿತ್ತು |
| 4 | ಮುಖ್ಯಾಂಶಗಳ ಕೇಂದ್ರೀಕರಣ | ಯುಕ್ತ ಪ್ರಮಾಣದಲ್ಲಿರಲಿಲ್ಲ | ಅಲ್ಪ ಮಟ್ಟಿಗೆ ಇದ್ದಿತು | ಪ್ರಮಾಣಬದ್ಧವಾಗಿತ್ತು | ಅತ್ಯುಕ್ತ ನೆಲೆಯಲ್ಲಿ ಪ್ರಮಾಣಬದ್ಧವಾಗಿತ್ತು |
| 5 | ಅಂತರ್‌ಕ್ರಿಯೆಯ ಶೈಲಿಯಲ್ಲಿ ಬದಲಾವಣೆ | ಯುಕ್ತ ಪ್ರಮಾಣದಲ್ಲಿರಲಿಲ್ಲ | ಅಲ್ಪ ಮಟ್ಟಿಗೆ ಇದ್ದಿತು | ಪ್ರಮಾಣಬದ್ಧವಾಗಿತ್ತು | ಅತ್ಯುಕ್ತ ನೆಲೆಯಲ್ಲಿ ಪ್ರಮಾಣಬದ್ಧವಾಗಿತ್ತು |
| 6 | ನಿಲುಗಡೆ | ಬಳಸಲಿಲ್ಲ | ಸಮಂಜಸವಾಗಿ ಬಳಸಲಿಲ್ಲ | ಸಮಂಜಸವಾದ ಬಳಕೆ | ಅತ್ಯುತ್ತಮವಾದ ಬಳಕೆ |
| 7 | ನೋಟ–ದೃಷ್ಟಿ ಸಂಬಂಧ | ಉತ್ತಮವಲ್ಲ | ಸಾಮಾನ್ಯವಾಗಿ ಉತ್ತಮ | ಉತ್ತಮ | ಅತ್ಯುತ್ತಮ |

**ಸಂಖ್ಯಾತ್ಮಕ ದರ್ಜಾಮಾಪನ:** ದರ್ಜೆಯನ್ನು ಸಂಖ್ಯೆಗಳ ಮೂಲಕ ನೀಡಲಾಗುತ್ತದೆ. ಅತ್ಯುತ್ತಮ, ಉತ್ತಮ, ಸಾಧಾರಣ, ಅತಿ ಸಾಧಾರಣ, ಅತೃಪ್ತಿಕರ ಇತ್ಯಾದಿ ವರ್ಣನೆಗಳನ್ನೇ ಸೂಚಿಸುವ

| | | | | | |
|---|---|---|---|---|---|
| ಮಾತಿನ ಶೈಲಿ | 01 | 02 | 03 | 04 | 05 |

**ರೇಖಾತ್ಮಕ ದರ್ಜಾಮಾಪನ:** ದರ್ಜೆಯನ್ನು ರೇಖಾನಕ್ಷೆಯಲ್ಲಿ ಪ್ರತಿನಿಧಿಸಲಾಗುತ್ತದೆ.
ಮಾತುಗಾರಿಕೆ:




**v. ಸಂದರ್ಶನ**

"ಸಂದರ್ಶಕ ಮತ್ತು ಸಂದರ್ಶನಾರ್ಥಿ ಇವರ ನಡುವೆ ಏರ್ಪಡುವ ಮುಖಾಮುಖಿ ಸಂಪರ್ಕವೇ ಸಂದರ್ಶನ".

ಉದ್ದೇಶಿತ ಮಾಹಿತಿಯನ್ನು ಪಡೆಯುವ ಸಲುವಾಗಿ ಇಬ್ಬರು ಅಥವಾ ಇಬ್ಬರಿಗಿಂತ ಹೆಚ್ಚಿನ ವ್ಯಕ್ತಿಗಳು ಮುಖಾಮುಖಿ ಭೇಟಿಯೊಂದಿಗೆ, ಪ್ರಶ್ನೋತ್ತರಗಳೊಂದಿಗೆ ನಡೆಯುವ ಅರ್ಥಪೂರ್ಣ ಮತ್ತು ಉದ್ದೇಶಪೂರಿತ ಸಂವಾದವೇ ಸಂದರ್ಶನ.

ಸಂದರ್ಶನದಲ್ಲಿ ಉಪಯೋಗಿಸುವ ಮುಖ್ಯ ಸಾಧನ ಸಂಭಾಷಣೆ.
ಸಂದರ್ಶನದಲ್ಲಿ ಪ್ರಧಾನವಾಗಿ ಎರಡು ವಿಧಗಳನ್ನು ಗುರುತಿಸಬಹುದು.

**ಸಂರಚಿತ ಸಂದರ್ಶನ:**
ಇದನ್ನು 'ಔಪಚಾರಿಕ ಸಂದರ್ಶನ' ಅಥವಾ 'ನಿಯಂತ್ರಿತ ಸಂದರ್ಶನ'ವೆಂದೂ ಕರೆಯುತ್ತಾರೆ.

ಈ ವಿಧಾನದಲ್ಲಿ ಸಂದರ್ಶನ ಕಾಲದಲ್ಲಿ ಕೇಳಬೇಕಾದ ಪ್ರಶ್ನೆಗಳು ಮತ್ತು ಪ್ರಶ್ನೆ ಕೇಳುವ ಕ್ರಮಗಳನ್ನು ಸಂದರ್ಶನದ ಪೂರ್ವದಲ್ಲಿಯೇ ನಿಯೋಜಿಸಲಾಗುತ್ತದೆ. ಇಲ್ಲಿ ಸಂದರ್ಶಕನಿಗೆ ಹೆಚ್ಚಿನ ಸ್ವಾತಂತ್ರ್ಯ ಇರುವುದಿಲ್ಲ. ಈ ಬಗೆಯ ಸಂದರ್ಶನ ಹೆಚ್ಚು ಔಪಚಾರಿಕವಾಗಿರುತ್ತದೆ.

**ಸಂರಚಿತವಲ್ಲದ ಸಂದರ್ಶನ:**
ಇದನ್ನು 'ಅನೌಪಚಾರಿಕ ಅಥವಾ ಅನಿಯಂತ್ರಿತ ಸಂದರ್ಶನ' ಎಂದೂ ಕರೆಯುತ್ತಾರೆ.

ಈ ವಿಧಾನದಲ್ಲಿ ಸಂದರ್ಶನ ಕಾಲದಲ್ಲಿ ಕೇಳಬೇಕಾದ ಪ್ರಶ್ನೆಗಳು, ಪ್ರಶ್ನೆಗಳನ್ನು ಕೇಳುವ ಕ್ರಮ ಇವು ಪೂರ್ವ ನಿರ್ಧರಿತವಾಗಿರುವುದಿಲ್ಲ. ಸಂದರ್ಶನದ ಸಂದರ್ಭದಲ್ಲಿಯೇ ಸಂದರ್ಶಕ ಅಗತ್ಯಕ್ಕೆ ತಕ್ಕಂತೆ ಪ್ರಶ್ನೆ–ಉಪಪ್ರಶ್ನೆಗಳನ್ನು ಕೇಳಿ ಉಪಯುಕ್ತ ಮಾಹಿತಿ ಪಡೆಯಬಹುದು. ಇಲ್ಲಿ ಸಂದರ್ಶನದ ವಸ್ತುನಿಷ್ಠತೆ, ವಿಶ್ವಸನೀಯತೆ ಮುಖ್ಯವಾಗಿ ಸಂದರ್ಶಕನನ್ನೇ ಅವಲಂಭಿಸಿರುತ್ತದೆ.

**ಭಾಷಾ ಬೋಧನೆಯಲ್ಲಿ ಸಂದರ್ಶನದ ಪ್ರಾಮುಖ್ಯತೆ**

- ವಿವಿಧ ಸನ್ನಿವೇಶಗಳಲ್ಲಿ, ಪ್ರಮುಖವಾಗಿ ಪದ್ಯ ಬೋಧನೆ, ಸೃಜನಶೀಲ ಬರೆವಣಿಗೆ ಇತ್ಯಾದಿ ಸಂದರ್ಭಗಳಲ್ಲಿ ವಿದ್ಯಾರ್ಥಿಗಳ ಭಾವನೆಗಳನ್ನು ಅಭಿಪ್ರಾಯಗಳನ್ನು ಅರಿತುಕೊಳ್ಳಬಹುದು.
- ಒಂದು ಸಾಹಿತ್ಯ ಕೃತಿಯನ್ನು ಓದಿ ಬರಲು ಹೇಳಿ, ಅದನ್ನು ಕುರಿತಂತೆ ವಿದ್ಯಾರ್ಥಿಗಳನ್ನು ಸಂದರ್ಶನದ ರೂಪದಲ್ಲಿ ಮಾತನಾಡಿಸುವುದರಿಂದ ಅವರ ಅಭಿವ್ಯಕ್ತಿ, ಓದುಗಾರಿಕೆ, ಗ್ರಹಿಕೆ, ಇತ್ಯಾದಿ ಅನೇಕ ಸಾಮರ್ಥ್ಯಗಳನ್ನು ಮಾಪನಮಾಡಬಹುದು.
- ಸಾಂಪ್ರದಾಯಿಕ ಸಾಧನಗಳಿಗಿಂತ ಇದು ಹೆಚ್ಚು ಆಕರ್ಷಕವೂ ಕ್ರಿಯಾಶೀಲವೂ ಆಗಿರುತ್ತದೆ. ಆದ ಕಾರಣ ಮಾಪನ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳು ಹೆಚ್ಚು ಆಸಕ್ತಿ ವಹಿಸುತ್ತಾರೆ.

**ಸಂದರ್ಶನದ ಮಿತಿಗಳು**

- ಸಂದರ್ಶಕ ಹಾಗೂ ಸಂದರ್ಶನಾರ್ಥಿಯ ನಡುವೆ ಸಾಮರಸ್ಯ ಉಂಟಾಗದಿದ್ದರೆ, ಸಂದರ್ಶನ ಯಶಸ್ವಿಯಾಗುವುದಿಲ್ಲ.
- ಸಂದರ್ಶಕ ಪೂರ್ವಗ್ರಹ ಪೀಡಿತನಾಗಿದ್ದರೆ, ಈ ಪದ್ಧತಿ ನಿರುಪಯುಕ್ತ.
- ಉದ್ದೇಶಕ್ಕನುಗುಣವಾಗಿ ಸೂಕ್ತ ರೀತಿಯಲ್ಲಿ ಸಂದರ್ಶನವನು ನಿರ್ವಹಿಸುವುದು ಸವಾಲಿನ ಕೆಲಸ.
- ಸಂದರ್ಶನ ಪರ್ಯಂತ ವಿದ್ಯಾರ್ಥಿಗಳ ಆಸಕ್ತಿ ಕುಂದದಂತೆ ಗಮನಿಸಿಕೊಳ್ಳಬೇಕಾದುದೂ ಗಹನವಾದುದೇ.
- ಇದು ಅತಿ ಹೆಚ್ಚಿನ ಮಟ್ಟದ ಪರಿಣತಿ ಮತ್ತು ತಾಳ್ಮೆಯನ್ನು ಅಪೇಕ್ಷಿಸುತ್ತದೆ.
- ನಿಖರ ಮಾಹಿತಿಗಾಗಿ ತರಬೇತಿ, ಅನುಭವದ ಅವಶ್ಯಕತೆ ಸಂದರ್ಶಕನಿಗೆ ಅಪೇಕ್ಷಣೀಯ.

ಸಂದರ್ಶನದಲ್ಲಿ ಪ್ರಮುಖವಾಗಿ ಬಳಸುವ ತಂತ್ರವೆಂದರೆ, ಪ್ರಶ್ನಾವಳಿ. ಈ ಪ್ರಶ್ನಾವಳಿಯ ರಚನೆ ಕುರಿತಂತೆ, ಮೌಲ್ಯಮಾಪನಕಾರನಾದ ಶಿಕ್ಷಕನಿಗೆ ಅರಿವಿರುವುದು ಅಗತ್ಯ ಎನಿಸುತ್ತದೆ. ಹಾಗಾಗಿ ಮುಂದೆ 'ಪ್ರಶ್ನಾವಳಿ'ಯ ಅರ್ಥ ಮತ್ತು ಸ್ವರೂಪವನ್ನು ವಿಚಾರಮಾಡೋಣ.

**vi. ಪ್ರಶ್ನಾವಳಿ**

ಉತ್ತರ ಅಥವಾ ಮಾಹಿತಿಯನ್ನು ಅಪೇಕ್ಷಿಸುವ ಪ್ರಶ್ನೆಗಳ ಸರಣಿ ಅಥವಾ ಸಂಕಲನವೇ ಪ್ರಶ್ನಾವಳಿ. ಈ ಪ್ರಶ್ನಾವಳಿಯಲ್ಲಿ ಜನರ ವ್ಯಕ್ತಿಗತ ನಂಬಿಕೆಗಳು, ಮನೋಭಾವನೆಗಳು, ದೃಷ್ಟಿಕೋನ, ವರ್ತನೆಯ ನಮೂನೆಗಳು, ವೈಯಕ್ತಿಕ ಆಸಕ್ತಿ, ಅಭಿರುಚಿ, ಸಮೂಹದ ನಂಬಿಕೆಗಳು, ಆಚರಣೆಗಳು ಮತ್ತು ಅಭ್ಯಾಸಗಳು ಮುಂತಾದವುಗಳಿಗೆ ಸಂಬಂಧಿಸಿದ ಮಹತ್ವದ ಮಾಹಿತಿಯನ್ನು ಸಂಗ್ರಹಿಸಲು ಪ್ರಶ್ನೆಗಳನ್ನು ಸಂರಚಿಸಲಾಗಿರುತ್ತದೆ.

**ಉತ್ತಮ ಪ್ರಶ್ನೆಯ ಲಕ್ಷಣಗಳು**

- ಉದ್ದೇಶಕ್ಕೆ ಪೂರಕವಾಗಿರಬೇಕು.
- ವ್ಯಕ್ತಿಯ ಅಂತರಂಗದ ಆಳವನ್ನು ಪರಿಶೀಲಿಸುವಂತಿರಬೇಕು.
- ಪ್ರಶ್ನಾವಳಿಯಿಂದ ಕ್ರಿಯಾತ್ಮಕ ಉದ್ದೇಶಕ್ಕಾಗಿ ಸಂಗ್ರಹಿಸುವ ದತ್ತಾಂಶಗಳು ಹೆಚ್ಚು ಪರಿಣಾಮಾತ್ಮಕವಾಗಿರುವಂತೆ ರೂಪಿಸಿರಬೇಕು.
- ಏಕರೂಪತೆಯಿಂದ ಕೂಡಿರಬೇಕು.

**vii ಅನುಸೂಚಿ (Schedule):** ನಿರ್ದಿಷ್ಟ ವಿಷಯವನ್ನು ಕುರಿತಂತೆ ಪೂರ್ವಭಾವಿಯಾಗಿಯೇ ಪ್ರಶ್ನೆಗಳನ್ನು ತಯಾರಿಸಿ ಅದಕ್ಕೆ 'ಹೌದು/ಇಲ್ಲ' ಎಂಬ ಇಲ್ಲವೇ 'ಇದೆ/ಇಲ್ಲ' ಎಂಬ ರೀತಿಯ ಪ್ರತಿಕ್ರಿಯೆಗಳನ್ನು ಬಯಸುವ ಪ್ರಶ್ನಮಾಲಿಕೆಗಳನ್ನು 'ಅನುಸೂಚಿ' ಎನ್ನುವರು. ಉದಾಹರಣೆಗೆ, ಕೆಳಗಿನ ಪಟ್ಟಿಯಲ್ಲಿ ನೀವು ಓದಿರುವ ಪುಸ್ತಕಗಳನ್ನು (√) ಗುರುತಿನಿಂದ ಸೂಚಿಸಿ.

**ಅನುಸೂಚಿಯ ಉಪಯುಕ್ತತೆ**

1. ಅಗತ್ಯ ಮಾಹಿತಿ ಸಂಗ್ರಹಣೆಯ ಪ್ರಮುಖ ಸಾಧನವಾಗಿದೆ.
2. ಅಧ್ಯಯನಕ್ಕೊಳಪಟ್ಟವರು ಬೇರೊಬ್ಬರ ಸಹಾಯಪಡೆಯದೇ ತಾವೇ ಮಾಹಿತಿ ನೀಡುವರು.
3. ಒಂದು ವಿಷಯಕ್ಕೆ ಸಂಬಂಧಿಸಿದಂತೆ ಹಲವಾರು ರೀತಿಯ ಪ್ರಶ್ನೆ ಕೇಳಲು ಅವಕಾಶ ಕಲ್ಪಿಸುತ್ತದೆ.
4. ವ್ಯಕ್ತಿಯೊಬ್ಬನ ಅಂತರಂಗಕ್ಕೆ ಹೊಕ್ಕಿ, ಆತನ ಮಾನಸಿಕ ಚಟುವಟಿಕೆ ಅರಿಯಲು ಸಹಕಾರಿಯಾಗುತ್ತದೆ.

**ಮಿತಿಗಳು**

1. ವ್ಯಕ್ತಿಗತ ಮಾಹಿತಿಯಲ್ಲಿ ವಿಶ್ವಾಸಾರ್ಹತೆ ಕಡಿಮೆ.
2. ಏಕರೂಪವಾಗಿ ಪ್ರಶ್ನೆ ಜೋಡಿಸುವುದು ಕಷ್ಟ ಸಾಧ್ಯ.
3. ಸಮಗ್ರತೆಯನ್ನು ಸಾಧಿಸಲು ಕಷ್ಟಕರ
4. ಮಾಹಿತಿ ಸಂಗ್ರಹಣೆಗೆ ನಿರ್ಬಂಧ ಹೇರುತ್ತದೆ. ಉದಾಹರಣೆಗೆ, ಮೇಲಿನ ಉದಾಹರಣೆಯಲ್ಲಿ ವಿದ್ಯಾರ್ಥಿ 'ಓದಿದ್ದೇನೆ' ಎಂದು ಗುರುತಿಸಿರುವ ಕೃತಿಗಳನ್ನು ಯಾವ ಮಟ್ಟದಲ್ಲಿ ಎಷ್ಟರಮಟ್ಟಿಗೆ ಓದಿದ್ದಾನೆ ಎಂದು ಮಾಪನಮಾಡಲಾಗದು.

ಈ ಎಲ್ಲಾ ಭಾಷಾ ಮೌಲ್ಯಮಾಪನ ಸಾಧನಗಳನ್ನು ಸಾಂದರ್ಭಿಕವಾಗಿ ಬಳಸಿ, ಮೌಲ್ಯಮಾಪನವನ್ನು ನಿರ್ವಹಿಸಿದ್ದೇ ಆದಲ್ಲಿ, ಭಾಷಾ ಮೌಲ್ಯಮಾಪನವು ಸಮಗ್ರ ನೆಲೆಯಲ್ಲಿ ಉಂಟಾಗಿ, ಭಾಷಾ ಸಾಮರ್ಥ್ಯಗಳ ಅಭಿವೃದ್ಧಿ ಉಂಟಾಗುವುದರಲ್ಲಿ ಸಂಶಯವಿಲ್ಲ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**
ಓದುಗಾರಿಕೆಯನ್ನು ಮಾಪನ ಮಾಡುವಲ್ಲಿನ ವಿವಿಧ ಘಟಕಾಂಶಗಳನ್ನು ಗುರುತಿಸಿಕೊಂಡು ನಿಮ್ಮ ವಿದ್ಯಾರ್ಥಿಗಳ ಓದುಗಾರಿಕೆಯ ಕೌಶಲವನ್ನು ಮಾಪನ ಮಾಡಲು ಒಂದು ದರ್ಜಾ ಮಾಪನವನ್ನು ತಯಾರಿಸಿ.

### 4.1.4. ಸಾರಾಂಶಿಸೋಣ

- ಶೈಕ್ಷಣಿಕ ಪ್ರಕ್ರಿಯೆಗಳ ಮೂಲಕ ಶಿಕ್ಷಣದ ಉದ್ದೇಶಗಳ ಸಾಧನೆಯ ಪ್ರಮಾಣವನ್ನು ನಿರ್ಧರಿಸಲು, ಮೌಲ್ಯ ನಿಷ್ಕರ್ಷಿಸಲು ಇರುವ ಸಾಧನವನ್ನು ಶೈಕ್ಷಣಿಕ ಮೌಲ್ಯಮಾಪನ ಎನ್ನುವರು.
- ಭಾಷಾ ಬೋಧನೆಯಲ್ಲಿ ವಿಷಯ ಗೌಣ, ಭಾಷೆ ಪ್ರಧಾನವಾಗಿದ್ದು, ಭಾಷಾ ಮೌಲ್ಯಮಾಪನದಲ್ಲಿ ಮಕ್ಕಳ ಭಾಷಾ ಸಾಮರ್ಥ್ಯಗಳ ಮೌಲ್ಯಮಾಪನವೇ ಪ್ರಧಾನ ಎನಿಸುತ್ತದೆ. ಈ ಭಾಷಾ ಮೌಲ್ಯಮಾಪನವು ಈ ಕೆಳಕಂಡ ಸಾಮರ್ಥ್ಯಗಳ ಪರಿಣತಿಯ ಮೌಲ್ಯಮಾಪನವನ್ನು ಒಳಗೊಳ್ಳುತ್ತದೆ: ಭಾಷಾ ಸಾಮರ್ಥ್ಯಗಳಲ್ಲಿನ ಪರಿಣತಿ ಮತ್ತು ಭಾಷಾ ಕೌಶಲಗಳ ಪರಿಣತಿ.
- ಭಾಷೆಯ ವಿವಿಧ ಕೌಶಲಗಳು ಹಾಗೂ ಸಾಮರ್ಥ್ಯಗಳ ಗಳಿಕೆಯನ್ನು ಕಲಿಕಾರ್ಥಿಯಲ್ಲಿ ಗುರುತಿಸುವ ಸಾಧನಗಳೇ 'ಭಾಷಾ ಮೌಲ್ಯಮಾಪನದ ಸಾಧನಗಳು'. ಭಾಷೆಯ ಕಲಿಕೆಯು ಗುಣಾತ್ಮಕ ನೆಲೆಯಲ್ಲಿದ್ದು, ಇದರ ಮೌಲ್ಯಮಾಪನ ಸಂಕೀರ್ಣ ಪ್ರಕ್ರಿಯೆಯಾಗಿ ಗೋಚರಿಸುತ್ತದೆ. ಈ ಹಿನ್ನೆಲೆಯಲ್ಲಿ ಭಾಷಾಶಿಕ್ಷಕನಿಗೆ ಮೌಲ್ಯಮಾಪನ ಪ್ರಕ್ರಿಯೆಗೆ ಅತ್ಯಂತ ಪ್ರಮುಖವಾಗುತ್ತವೆ.
- ಪರೀಕ್ಷೆ, ನೈದಾನಿಕ ಪರೀಕ್ಷೆ, ವೀಕ್ಷಣೆ, ದರ್ಜಾಮಾಪನ, ಸಂದರ್ಶನ ಮತ್ತು ಪ್ರಶ್ನಾವಳಿ–ಇವು ಪ್ರಮುಖ ಮಾಪನ ಸಾಧನಗಳಾಗಿದ್ದು ಪ್ರತಿಯೊಂದನ್ನೂ ನಿರ್ದಿಷ್ಟ ಉದ್ದೇಶಗಳೊಂದಿಗೆ ನಿರ್ದಿಷ್ಟ ರೀತಿಯಲ್ಲಿ ಬಳಸಬೇಕಾಗುತ್ತದೆ.

### 4.4.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು - 1 ಮತ್ತು 2

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**
ಸ್ವ ಕಲಿಕಾ ಸಾಮಗ್ರಿ ಭಾಗ 4.1.3.1. ಗಮನಿಸಿ

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ –2**
ನೀವು ತಯಾರಿಸಿದ ದರ್ಜಾಮಾಪನವನ್ನು ನಿಮ್ಮ ಸಹೋದ್ಯೋಗಿಗಳೊಂದಿಗೆ ಚರ್ಚಿಸಿ ಮೌಲ್ಯೀಕರಿಸಿ.

### 4.4.6. ಘಟಕಾಂತ್ಯ ಅಭ್ಯಾಸಗಳು

1. ಭಾಷಾ ಮೌಲ್ಯಮಾಪನದ ಸಾಧನಗಳಾವುವು? ಯಾವುದಾದರೂ ಎರಡು ಸಾಧನಗಳನ್ನು ವಿವರಿಸಿ.
2. ಸಾಧನಾ ಪರೀಕ್ಷೆಯ ವಿಧಗಳನ್ನು ವಿಶ್ಲೇಷಿಸಿ.
3. ಮೌಖಿಕ ಹಾಗೂ ಲಿಖಿತ ಪರೀಕ್ಷೆಗಳ ನಡುವಣ ವ್ಯತ್ಯಾಸಗಳನ್ನು ಗುರುತಿಸಿ.
4. ಭಾಷಾ ಮೌಲ್ಯಮಾಪನದಲ್ಲಿ ವೀಕ್ಷಣಾ ತಂತ್ರದ ಪ್ರಾಮುಖ್ಯತೆಯನ್ನು ತಿಳಿಸಿ.
5. ಸಂದರ್ಶನ ಎಂದರೇನು? ಭಾಷಾ ಬೋದನೆಯಲ್ಲಿ ಅದರ ಬಳಕೆಯ ವಿಧಾನವನ್ನು ಚರ್ಚಿಸಿರಿ.

**4.4.7. ಪರಾಮರ್ಶನ ಸೂಚಿ**


1. ಡಾ. ಐ.ಎ ಲೋಕಾಪುರ, ಪ್ರೌಢಶಿಕ್ಷಣ ಹಾಗೂ ಶಿಕ್ಷಕನ ಕಾರ್ಯಗಳು" ಪ್ರಕಾಶನ: ಜಯದೇವ. ಮೈ, ನಾಗರಾಜ ಮೈ, ಮೆಣಸಗಿ, ವಿಧ್ಯಾನಿಧಿ ಪ್ರಕಾಶನ, ಸ್ಟೇಷನ್ ರಸ್ತೆ, ಮಹೇಂದ್ರಕರ ವೃತ್ತದ ಸಮೀಪ, ಗದಗ – 582101, 5 ನೇ ಆವೃತ್ತಿ 1994
2. ಸಂಪನ್ಮೂಲ ಪುಸ್ತಕ ರಚನಾ ಸಮಿತಿ, ಡಿಎಸ್‌ಸಿಆರ್‌ಟಿ, ಅನುವಾದಕ ಮಂಡಲಿ, 'ಪಠ್ಯಕ್ರಮ ಕಾರ್ಯಾಚರಣೆಯ ತತ್ತ್ವಗಳು', ಪ್ರಕಾಶನ: ವಿನಾಯಕ ಆಫ್‌ಸೆಟ್ ಪ್ರಿಂಟರ್ಸ್ # 56, 9ನೇ ಮುಖ್ಯರಸ್ತೆ, 1ನೇ ಅಡ್ಡರಸ್ತೆ, ಕಾವೇರಿ ನಗರ, ಬನಶಂಕರಿ ಕೈಗಾರಿಕಾ ಪ್ರದೇಶ, ಬನಶಂಕರಿ 2ನೇ ಹಂತ, ಬೆಂಗಳೂರು – 560070, ಪ್ರಕಟಣಾ ವರ್ಷ 2008
3. ಡಾ.ಎಸ್.ಬಿ.ಯಾದವಾಡ, 'ಪಠ್ಯಕ್ರಮ ಹಾಗೂ ಮೌಲ್ಯಮಾಪನ' ಪ್ರಕಾಶನ: ವಿದ್ಯಾನಿಧಿ ಪ್ರಕಾಶನ, ಸ್ಟೇಷನ್ ರೋಡ ಮತ್ತು ಜೆ.ಟಿ.ಮಠ ರೋಡ, ಗದಗ 582101, 3ನೇ ಆವೃತ್ತಿ, ಪ್ರಕಟಣಾ ವರ್ಷ : 2015–16
4. Shodhaganga(ಶೋಧಗಂಗಾ), 'Testing and Evaluation (ಪರೀಕ್ಷಿಸುವುದು ಮತ್ತು ಮೌಲ್ಯಮಾಪನ http://shodhganga.inflibnet.ac.in/bitstream/10603/51437/8/08_chapter 4.pdf.
5. H.S.Srivathsa, 'Comprehensive Evaluation in Schools', Published at the Publication Department by the Secratory, National Counsil of Educaiton Research and Training, Sri Aurobindo Marg, New Delhi 110016 and Printed at Narendra Press, 20, Model Basti, New Delhi – 110005 year 1989
6. ಡಾ. ಐ.ಎ ಲೋಕಾಪುರ, ಪ್ರೌಢಶಿಕ್ಷಣ ಹಾಗೂ ಶಿಕ್ಷಕನ ಕಾರ್ಯಗಳು" ಪ್ರಕಾಶನ: ಜಯದೇವ. ಮೈ, ನಾಗರಾಜ ಮೈ, ಮೆಣಸಗಿ, ವಿಧ್ಯಾನಿಧಿ ಪ್ರಕಾಶನ, ಸ್ಟೇಷನ್ ರಸ್ತೆ, ಮಹೇಂದ್ರಕರ ವೃತ್ತದ ಸಮೀಪ, ಗದಗ – 582101, 5 ನೇ ಆವೃತ್ತಿ 1994
7. ಕೆ. ಯಶೋಧರಾ, 'ಶಿಕ್ಷಣದಲ್ಲಿ ಸಂಖ್ಯಾಶಾಸ್ತ್ರ', ಪ್ರಕಾಶನ : ಚಿನ್ನಸ್ವಾಮಿ ಜಗನ್ನಾಥ್ ಪ್ರೈವೇಟ್ ಲಿಮಿಟೆಡ್, ಮೈಸೂರು, ಪ್ರಕಟಣಾ ವರ್ಷ – 2007
8. American Speech-Language-Hearing Association (ASHA), 'Assessment Tools, Techniques, and Data Sources' https://www.asha.org/Practice-Portal/Clinical-Topics/Late-Language-Emergence/Assessment-Tools-Techniques-and-Data-Sources/

## ಬ್ಲಾಕ್ 4 : ಕನ್ನಡ ಭಾಷಾ ಬೋಧನೆಯಲ್ಲಿ ಪಾಠ ಯೋಜನೆಗಳು ಮತ್ತು ಮೌಲ್ಯಮಾಪನ

### ಘಟಕ 5 : ಘಟಕ ಪರೀಕ್ಷೆ ಮತ್ತು ನೈದಾನಿಕ ಪರೀಕ್ಷೆ

**ಘಟಕದ ರಚನೆ**

4.5.1. ಕಲಿಕೆಯ ಉದ್ದೇಶಗಳು
4.5.2. ಪೀಠಿಕೆ
4.5.3. ಕಲಿಕೆಯ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು
4.5.3.1. ಘಟಕ ಪರೀಕ್ಷೆ
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ - 1
4.5.3.2. ನೈದಾನಿಕ ಪರೀಕ್ಷೆ
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2
4.5.4. ಸಾರಾಂಶಿಸೋಣ
4.5.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1 ಮತ್ತು 2
4.5.6. ಘಟಕಾಂತ್ಯ ಅಭ್ಯಾಸಗಳು
4.5.7. ಪರಾಮರ್ಶನ ಸೂಚಿ

**4.5.1. ಕಲಿಕೆಯ ಉದ್ದೇಶಗಳು**

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿ ಶಿಕ್ಷಕ ಶಿಕ್ಷಕಿಯರು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು:

- ಘಟಕ ಪರೀಕ್ಷೆಯನ್ನು ವ್ಯಾಖ್ಯಾನಿಸುವರು;
- ನೀಲನಕಾಶೆಯ ವಿವಿಧ ಆಯಾಮಗಳನ್ನು ವಿಶ್ಲೇಸುವರು;
- ನೀಲನಕಾಶೆಯ ಮಹತ್ವವನ್ನು ವಿವರಿಸುವರು;
- ನೈದಾನಿಕ ಪರೀಕ್ಷೆಯ ಹಂತಗಳನ್ನು ವಿಶ್ಲೇಷಿಸುವರು;
- ಸಮರ್ಪಕ ಘಟಕ ಪರೀಕ್ಷೆ ಮತ್ತು ನೈದಾನಿಕ ಪರೀಕ್ಷೆಗಳನ್ನು ರೂಪಿಸಲು ಸಮರ್ಥರಾಗುವರು.

**4.5.2. ಪೀಠಿಕೆ**

ಮೌಲ್ಯಮಾಪನವು ಬೋಧನಾ–ಕಲಿಕಾ ಪ್ರಕ್ರಿಯೆಯ ಆದ್ಯಂತ ನಡೆಯುವ ಪ್ರಕ್ರಿಯೆಯಾಗಿದ್ದು, ಮಕ್ಕಳ ಸಾಧನೆಯನ್ನು ಅಳೆಯಲು ಪ್ರಮುಖ ಸಾಧನವಾಗಿದೆ. ಮಕ್ಕಳ ಸಾಧನೆಯನ್ನು 'ಸಾಧನಾ ಪರೀಕ್ಷೆಗಳು' ಅಳೆದರೆ, ಮಕ್ಕಳ ಕಲಿಕಾ ದೋಷಗಳನ್ನು, 'ನೈದಾನಿಕ ಪರೀಕ್ಷೆ'ಯು ಗುರುತಿಸುತ್ತದೆ. ಸಾಧನಾ ಪರೀಕ್ಷೆಗಳಲ್ಲಿ ಪ್ರಮುಖವಾದ, 'ಘಟಕ ಪರೀಕ್ಷೆ' ಹಾಗೂ 'ನೈದಾನಿಕ ಪರೀಕ್ಷೆ'ಯ ರಚನಾಕ್ರಮಗಳು ಭಿನ್ನ ನೆಲೆಯಲ್ಲಿದ್ದು, ಇವುಗಳ ರಚನಾ ಕ್ರಮವನ್ನು ಅರಿತುಕೊಳ್ಳುವುದು ಅಗತ್ಯವಾಗಿದೆ. ಈ ಎರಡರ ಉದ್ದೇಶ ಭಿನ್ನವಾಗಿರುವುದರಿಂದ ಇವುಗಳ ಸ್ವರೂಪವೂ ಭಿನ್ನವಾಗಿದೆ. ಈ ಹಿನ್ನೆಲೆಯಲ್ಲಿ ಈ ಎರಡೂ ಪರೀಕ್ಷೆಗಳನ್ನು ಕುರಿತಂತೆ ಈ ಘಟಕದಲ್ಲಿ ಸಮಗ್ರವಾಗಿ ವಿಚಾರಮಾಡೋಣ.

**4.3.3. ಕಲಿಕೆಯ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು**

ಬೋಧನಾ–ಕಲಿಕಾ ಪ್ರಕ್ರಿಯೆಯು ಪ್ರಸ್ತುತ ನಿರಂತರವಾಗಿ, ವ್ಯಾಪಕವಾಗಿ ನಿರ್ವಹಣೆಗೆ ಒಳಗಾಗುತ್ತಿದ್ದು, ಈ ಹಿನ್ನೆಲೆಯಲ್ಲಿ, ಪ್ರತಿ ಘಟಕ ಬೋಧನೆಯ ನಂತರ ನಿರ್ವಹಿತವಾಗುವ 'ಘಟಕ ಪರೀಕ್ಷೆ'ಯು

ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತದೆ. ಈ ಹಿನ್ನೆಲೆಯಲ್ಲಿ ಭಾಷಾ ಶಿಕ್ಷಕನಾದವನಿಗೆ 'ಘಟಕ ಪರೀಕ್ಷೆ'ಯ ರಚನಾ ಕ್ರಮವನ್ನು ಕುರಿತು ಅರಿವು ಇರುವ ಅಗತ್ಯವೂ ಇದೆ.

**4.5.3.1. ಘಟಕ ಪರೀಕ್ಷೆ**

'ಘಟಕ ಪರೀಕ್ಷೆ'ಯು ಘಟಕ ಯೋಜನೆಯ ಅಂತಿಮ ಘಟ್ಟವಾಗಿದ್ದು, ಘಟಕಾದ್ಯಂತ ಗಳಿಸಿದ ಸಾಮರ್ಥ್ಯ ಹಾಗೂ ಕೌಶಲಗಳ ಗಳಿಕೆಯ ಕುರಿತಂತೆ, ನೀಲನಕಾಶೆಯನ್ನು ಆಧರಿಸಿ, ಮೌಲ್ಯಮಾಪನಕ್ಕಾಗಿ ಬಳಸುವ ಸಾಧನಾ ಪರೀಕ್ಷೆಯನ್ನು 'ಘಟಕ ಪರೀಕ್ಷೆ' ಎನ್ನುವರು.

**ನೀಲ ನಕಾಶೆ**

ಪಠ್ಯಾಂಶ, ಉದ್ದೇಶ, ಪ್ರಶ್ನೆಯ ವಿಧ, ಕಾಠಿಣ್ಯತೆ ಇವುಗಳಿಗೆ ಹೊಂದಿಕೊಂಡಂತೆ ರೂಪುಗೊಳಿಸಲಾಗಿರುವ ಪರೀಕ್ಷಾ ಪೂರ್ವಯೋಜನೆಯೇ 'ನೀಲನಕಾಶೆ' ಎನಿಸಿಕೊಳ್ಳುತ್ತದೆ.

ಅಥವಾ

'ನೀಲ ನಕಾಶೆ'ಯು ಸಮತೋಲಿತ ಪ್ರಶ್ನೆ ಪತ್ರಿಕೆಯನ್ನು ಅಭಿವೃದ್ಧಿ ಪಡಿಸಲು ಕೆಳಗಿನ ಆಯಾಮಗಳನ್ನು ಒಳಗೊಂಡ ಪೂರ್ವ ಯೋಜನೆಯಾಗಿದೆ.

**ನೀಲನಕಾಶೆಯ ಪ್ರಾಮುಖ್ಯತೆ**

- ಉದ್ದೇಶಾಧಾರಿತವಾಗಿ ಪ್ರಶ್ನೆಪತ್ರಿಕೆ ರಚಿಸಲು ನೆರವಾಗುತ್ತದೆ.
- ಘಟಕ ಒಳಗೊಳ್ಳುವ ಎಲ್ಲಾ ಉಪಘಟಕಗಳಿಗೂ ಪ್ರಶ್ನೆಪತ್ರಿಕೆಯಲ್ಲಿ ಪ್ರಾಮುಖ್ಯತೆಯನ್ನು ನೀಡಲು ಒತ್ತಾಯಿಸುತ್ತದೆ.
- ವೈವಿಧ್ಯಮಯ ಪ್ರಶ್ನೆ ರಚಿಸಲು ಅನುವು ಮಾಡಿಕೊಡುತ್ತದೆ.
- ಕಠಿಣತೆಯ ಮಟ್ಟ ಆಧರಿಸಿ, ಪ್ರಶ್ನೆ ರಚಿಸಲು ಅನುಕೂಲ ಸಿಂಧುವಾಗುತ್ತದೆ.
- ಪ್ರಶ್ನೆಗಳ ಪುನರಾವರ್ತನೆಯನ್ನು ತಪ್ಪಿಸುತ್ತದೆ.
- ವಿವಿಧ ಪ್ರಶ್ನೆಗಳು ನಿಗಧಿತ ಪ್ರಮಾಣದಲ್ಲಿ ಇರುವಂತೆ ನಿರ್ವಹಿಸಲು ಅನುವಾಗುತ್ತದೆ.
- ಪ್ರಶ್ನೆಗಳ ರಚನೆಯಲ್ಲಿ ಗೊಂದಲವನ್ನು ನಿವಾರಿಸುತ್ತದೆ.

**ನೀಲನಕಾಶೆಯ ಆಯಾಮಗಳು**

ನೀಲನಕಾಶೆಯು ಚತುರ್ಆಯಾಮದ ಮೌಲ್ಯಮಾಪನದ ಪೂರ್ವಯೋಜನೆಯಾಗಿದ್ದು, ಅದನ್ನು ಚರ್ಚಿಸುವ ಅಗತ್ಯವಿದೆ. ನೀಲನಕಾಶೆಯ ವಿವಿಧ ಆಯಾಮಗಳ ಚರ್ಚೆ ಮುಂದಿನ ಉಪಕ್ರಮವಾಗಿದೆ.

**I. ಪಠ್ಯವಿಷಯದ ಆಯಾಮ**

ಕನ್ನಡ ಭಾಷಾ ವಿಷಯ ಮೌಲ್ಯಮಾಪನದಲ್ಲಿ ಪಠ್ಯವಿಷಯದ ಆಯಾಮ ಪ್ರಮುಖವಾಗಿದ್ದು, ಪಠ್ಯ ವಿಷಯವನ್ನು ಆಧರಿಸಿ ಪ್ರಶ್ನೆ ಜೋಡಿಸುವ ಸಂದರ್ಭದಲ್ಲಿ ವಿಶೇಷ ಗಮನ ಹರಿಸುವ ಅಗತ್ಯತೆ ಇದೆ.

ಭಾಷೆ ಹಾಗೂ ವಿಷಯಗಳ ನಡುವಣ ಸಾಕಷ್ಟು ವ್ಯತ್ಯಾಸಗಳಿದ್ದು, ಮೌಲ್ಯಮಾಪನದಲ್ಲಿಯೂ ಈ ಅಂಶವನ್ನು ಪರಿಗಣಿಸುವ ಅಗತ್ಯತೆ ಇದೆ. ಭಾಷೆಯನ್ನು ಹೊರತು ಪಡಿಸಿದಂತೆ ಇತರೆ, ವಿಷಯಗಳಲ್ಲಿ ವಿಷಯವೇ ಪ್ರಧಾನವಾಗಿರುತ್ತದೆ. ಭಾಷೆ ಗೌಣವಾಗಿರುತ್ತದೆ. ಆದರೆ, ಭಾಷಾ ಮೌಲ್ಯಮಾಪನದಲ್ಲಿ ವಿಷಯಕ್ಕಿಂತ, ಭಾಷೆಯೇ ಪ್ರಧಾನವಾಗಿರುತ್ತದೆ. ವಿಷಯ ಗೌಣವಾಗಿರುತ್ತದೆ.

ಉದಾಹರಣೆಗೆ, ಸಮಾಜವಿಜ್ಞಾನದಲ್ಲಿ ಬರುವ 'ಟಿಪ್ಪುಸುಲ್ತಾನ' ಪಠ್ಯಭಾಗವು ಮೌಲ್ಯಮಾಪನಕ್ಕೆ ಒಳಗಾದ ಸಂದರ್ಭದಲ್ಲಿ ಟಿಪ್ಪುಸುಲ್ತಾನನ ಜೀವನ, ಘಟನೆಗಳು ಇತ್ಯಾದಿ ಪ್ರಮುಖವಾಗುತ್ತದೆ.

ಕನ್ನಡ ಭಾಷೆಗೆ ಸಂಬಂಧಿಸಿದ 'ಕನ್ನಡಿಗರಿಗೆ ಟಿಪ್ಪುವಿನ ಪತ್ರ' ಎಂಬ ಪಠ್ಯಭಾಗದಲ್ಲಿ 'ಪತ್ರಲೇಖನ ಕುರಿತ ಪ್ರಶ್ನೆಗಳು ಪ್ರಮುಖವಾಗುತ್ತದೆ.

ಅಂತೆಯೇ, 'ಪರಿಸರ ಸಮತೋಲನ' ಕುರಿತಂತೆ ವಿಜ್ಞಾನ ಪ್ರಶ್ನೆಪತ್ರಿಕೆಯಲ್ಲಿ 'ಪರಿಸರ'ದ ಸಮತೋಲನದ ಪ್ರಕ್ರಿಯೆ ಕುರಿತಂತೆ ವಿಷಯಾಧಾರಿತ ಪ್ರಶ್ನೆಗಳನ್ನು ಜೋಡಿಸಿದರೆ, ಕನ್ನಡದಲ್ಲಿ ಇದೇ ವಿಷಯವನ್ನು ಇಟ್ಟುಕೊಂಡು ಪ್ರಶ್ನಿಸುವ ಸಂದರ್ಭದಲ್ಲಿ ವೈಜ್ಞಾನಿಕ ಪ್ರಬಂಧ ರಚನೆಯ ನೆಲೆಯನ್ನಿಟ್ಟುಕೊಂಡು ಮೌಲ್ಯಮಾಪನ ಪ್ರಶ್ನೆಗಳನ್ನು ಜೋಡಿಸುವುದು ಪ್ರಮುಖವಾಗುತ್ತದೆ.
ಇಲ್ಲಿನ ಮೌಲ್ಯಮಾಪನವನ್ನು ರೂಪಿಸುವಾಗ ಪ್ರಮುಖವಾಗಿ ಗಮನಿಸಬೇಕಾದ ಅಂಶಗಳೆಂದರೆ,

**ಪಠ್ಯದ ಸ್ವರೂಪ ಆಧರಿಸಿ, ಮೌಲ್ಯಮಾಪನ ಸ್ವರೂಪದ ನಿರ್ಧಾರ**

ಪಠ್ಯದಲ್ಲಿ ಎರಡು ರೀತಿಯ ಪಠ್ಯಗಳಿದ್ದು, ಶಾಸ್ತ್ರ ಪ್ರಧಾನ ಹಾಗೂ ಸಾಹಿತ್ಯ ಪ್ರಧಾನ ಪಠ್ಯಗಳೆಂದು ವಿಭಾಗೀಕರಿಸಲಾಗುತ್ತದೆ. ಈ ಸಾಹಿತ್ಯ ಪ್ರಧಾನ ಪಠ್ಯಗಳ ಮೌಲ್ಯಮಾನ ಸ್ವರೂಪವನ್ನು ಹೀಗೆ ನಿರ್ಧರಿಸಬಹುದಾಗಿದೆ.

**ಅ. ಸನ್ನಿವೇಶ:** ಸನ್ನಿವೇಶವನ್ನು ಸ್ಪಷ್ಟಪಡಿಸಿಕೊಂಡು ಸನ್ನಿವೇಶಾಧಾರಿತವಾಗಿ ಸ್ಪಷ್ಟ, ನಿರ್ದಿಷ್ಟ ಉದ್ದೇಶವನ್ನು ಇಟ್ಟುಕೊಂಡು ಪ್ರಶ್ನೆ ರೂಪಿಸುವುದು ಅಪೇಕ್ಷಣೀಯ ಎನಿಸುತ್ತದೆ.
ಉದಾಹರಣೆಗೆ, 'ಕರಿ' ಎಂಬ ಪದದ ಅರ್ಥ ವಿವಿಧ ಸನ್ನಿವೇಶಗಳಲ್ಲಿ ವಿವಿಧ ರೀತಿಯಲ್ಲಿರುತ್ತದೆ.

ನಾಮಪದದ ಅರ್ಥದಲ್ಲಿ 'ಕರಿ' – ಆನೆ

ಗುಣವಿಶೇಷಣದ ಅರ್ಥದಲ್ಲಿ 'ಕರಿ' – ಕಪ್ಪುಬಣ್ಣ

ಕ್ರಿಯಾಪದದ ಅರ್ಥದಲ್ಲಿ 'ಕರಿ' – ಕರಿಯುವ ಕ್ರಿಯೆ

**ಕಿರುನೆಲ್ಲಿಯ ಮರ**

ಕ.ವೆಂ ರಾಜಗೋಪಾಲ
ಕಾರ್ತೀಕದಲ್ಲಿ ನಿಂತ ಬರಿಯ ಮೈತುಂಬ ಕಿರುನೆಲ್ಲಿ ಹೂ
ಮಿರುಗಿ ಗೊಂಚಲು ಗೊಂಚಲಾಗಿ ಹುಳಿಗಾಯಿ ಕನಸು
ತೇಲಾಡಿ ನಾಲಗೆಗೆ ನೀರೂರಿ ಹುಳಿಗೆ ಉಪ್ಪು ಕೂಡಿಸಿ
ತಿಂದ ಬಾಯಾರಿಕೆಗೆ ಸಿಹಿನೀರು ಸುರಿದಂತೆ ಹಿತವಾಗಿ ಬೆಳಕರಿಸಿ ಬಂದು ಅವ್ವಾ ಎಂದತ್ತು ಕರೆದು
ಬೆರಳ ಹತ್ತಿಯ ಚೀಪಿ ನಿದ್ದೆಯಲಿ ಬೆಳೆದು ಕಸುಗಾಯಿ ಒಗರರಿತು ನೆತ್ತರಿಗೆ ಸುಖದುಃಖ ಬೆರೆಯಬೇಕು
ತಿಳಿಮುಗಿಲ ಬತ್ತಲೆಯ ಮೈದುಂಬ ನಗುವ ಹೂವಿರಬೇಕು
ಚಿಂತೆಯೆಳೆಯನು ಹಿಡಿದ ಹೆಜ್ಜೆಹೆಜ್ಜೆಯ ಮುಂದೆ
ಕಗ್ಗತ್ತಲ ಕೋಟೆಯಲಿ ಸಾವಿನ ದವಡೆ! ಸೆಣಸಿ
ಬಂದರೆ ಹೆಣ್ಣಿನಾಲಿಂಗನದ ಚಿತೆಯ ಸುಖ! ಅಲ್ಲ, ಬಿಡಿಸಲು ಬರದ ಗೋಜಿನ ಆಟದಂಗೈಯ ನೆಲ್ಲಿಯಲ್ಲ;
ಇಂದು ಮುಂಜಾನೆ ಮಂಜು ಬೆಳಕಿನಲಿ ನನ್ನ ಹೆಜ್ಜೆಯ ಕಂಡೆ ಕಿರಿನೆಲ್ಲಿಯ ಭೂತ ಕರೆದಂತಾಗಿ ಮೊದಲ
ಬಯವನುಂಡೆ!

ಈ ಪಠ್ಯ ಸನ್ನಿವೇಶವನ್ನು ಆಧರಿಸಿ, ಸೂಕ್ತವಾದ ಸಂಕ್ಷಿಪ್ತ ಉತ್ತರದ ಪ್ರಶ್ನೆಗಳನ್ನು ಹೀಗೆ ಗುರುತಿಸಬಹುದು.
ಕಿರುನೆಲ್ಲಿಯ ಸವಿ ಹೇಗಿರುತ್ತದೆ?

ಕಿರುನೆಲ್ಲಿಯ ಮರ ಕವಿತೆಯಲ್ಲಿ 'ಅಂಗೈನೆಲ್ಲಿ' ಪದ ಬಳಕೆಯ ಭಾವವೇನು?

**ಆ. ವಸ್ತು:** ವಸ್ತು ವಿಷಯ ಬೋಧನೆಗಿಂತ ಭಾಷಾ ಬೋಧನೆಯಲ್ಲಿ ಭಿನ್ನವಾಗಿ ಕಾಣುತ್ತದೆ. ಇಲ್ಲಿರುವ ಕಾವ್ಯವಸ್ತು ಪ್ರಮುಖವಾಗುತ್ತದೆ. ಕಾವ್ಯದಲ್ಲಿರುವ ವಸ್ತು ಕುರಿತಂತೆ, ವಿಶೇಷ ರೀತಿಯಲ್ಲಿ ಹೀಗೆ ಗುರುತಿಸಬಹುದಾಗಿದೆ. ವಸ್ತು ಕುರಿತಂತೆ, ವಸ್ತುಧ್ವನಿ ಕುರಿತಂತೆ ಗುರುತಿಸುವುದು ಪ್ರಮುಖವಾಗುತ್ತದೆ. ಭಾಷೆ-ಸಾಹಿತ್ಯ ಬೋಧನೆಯಲ್ಲಿ ಬರುವ 'ವಸ್ತು' ಸಂಜ್ಞಾನಾತ್ಮಕ ನೆಲೆಯಲ್ಲಿರದೇ, ಸೃಜನಾತ್ಮಕ ನೆಲೆಯಲ್ಲಿ ಇರುವುದು ವಿಶೇಷ ಸಂಗತಿಯಾಗಿದೆ.



'ಗಂಟೆ' ಎಂಬ ವಸ್ತುವನ್ನು ಕುರಿತಂತೆ, ಗಂಟೆ ಎಂದರೇನು?
ಗಂಟೆಯನ್ನು ಯಾವುದಕ್ಕೆ ಬಳಸಲಾಗುತ್ತದೆ? ಹೀಗೆ ಸಂಜ್ಞಾನಾತ್ಮಕ ನೆಲೆಯ ಪ್ರಶ್ನೆಗಳನ್ನು ವಿಷಯಾಧಾರಿತ ಮೌಲ್ಯಮಾಪನದಲ್ಲಿ ಬಳಸಲಾಗುತ್ತದೆ. ಆದರೆ, ಸೃಜನಾತ್ಮಕ ನೆಲೆಯಲ್ಲಿ ಪಠ್ಯಾಧಾರಿತ ಮೌಲ್ಯಮಪನ ಪ್ರಶ್ನೆ ಹೀಗಿರುತ್ತದೆ.

**ಪಠ್ಯ**
**ಸೀತೆ:** ಅಯೋಧ್ಯೆಯಲ್ಲಿ ಎಲ್ಲರೂ ಸಕುಶಲರೇ?!.............
**ಸಂಸದ:-** ಶ್ರೀರಾಮಚಂದ್ರರ ಸಾಮ್ರಾಜ್ಯದಲ್ಲಿ ಅಕುಶಲತೆಯ ಪ್ರಶ್ನೆಯೇ?!..........ಕನಸಿನಲ್ಲಿಯೂ ಇಲ್ಲ!.........
(ಅಷ್ಟರಲ್ಲಿ ಹೊರಗಿನಿಂದ ನ್ಯಾಯದ ಗಂಟೆ ಬಾರಿಸುತ್ತದೆ.)

ವಿಶೇಷ್ಯವಾದ ಗಂಟೆಗೆ ವಿಶೇಷಣದ ಅರ್ಥದಲ್ಲಿ ನಿರೀಕ್ಷಿಸಲಾಗುವ ಶಂಕ್ಷಿಪ್ತ ಉತ್ತರದ ಪ್ರಶ್ನೆ ಇದಾಗಿದೆ.
**ಶ್ರೀರಾಮ ಸಭೆಯನ್ನು ನಡೆಸುತ್ತಿದ್ದಾಗ ಯಾವ ಗಂಟೆ ಬಾರಿಸಿತು**?

**ವಸ್ತು ಧ್ವನಿ:** ಕಾವ್ಯದಲ್ಲಿ ವ್ಯಂಜಕವಾದ ಅಂಶ ಪ್ರಧಾನವಾಗಿ ವಸ್ತುವಾಗಿದ್ದರೆ, ಅಂತಹ ಧ್ವನಿಯನ್ನು 'ವಸ್ತುಧ್ವನಿ' ಎನ್ನುತ್ತೇವೆ.

ಧ್ವನಿ ಪ್ರಪಂಚದಲ್ಲಿ ವಸ್ತುಧ್ವನಿಯ ಪ್ರಪಂಚವೇ ವಿಸ್ತಾರವಾದುದು. ವಸ್ತುಧ್ವನಿಯು ವಿವಿಧ ಸ್ತರಗಳಲ್ಲಿ ವಸ್ತುವಿನ ಕುರಿತಂತೆ ಆಲೋಚನೆ, ಆಂತರಿಕ ವಿಚಾರಗಳು, ಚಿಂತನಶೀಲತೆ ಮುಂತಾದವುಗಳನ್ನು ನಿರ್ವಹಿಸಲು ಹೆಚ್ಚು ಹೆಚ್ಚು ವ್ಯಾಪಕವಾದ ಅವಕಾಶ ಕಲ್ಪಿಸುತ್ತದೆಯಾಗಿ ಇದು ಅನುಭವಕ್ಕೆ ಸುಲಭವಾಗಿ ನಿಲುಕುತ್ತದೆ.

ಉದಾಹರಣೆಗೆ,
"ಕಲ್ಕಿ! ಕಲ್ಕಿ!" ಎನ್ನುತ ಚೀರಿ
ಕನಸೊಡೆದೆದ್ದೆ!
ಇನ್ನೆಲ್ಲಿಯ ನಿದ್ರೆ?

ಕುವೆಂಪುರವರ 'ಕಲ್ಕಿ' ಕವಿತೆಯ ಕೊನೆಯ ಸಾಲಿನಲ್ಲಿರುವ 'ಇನ್ನೆಲ್ಲಿಯ ನಿದ್ದೆ' ಎಂಬುದು ಭಯಾನಕವಾದ ಕನಸನ್ನು ಕಂಡನಂತರ ಎಚ್ಚರಗೊಂಡ ಬಳಿಕ ನಿದ್ದೆ ಬರುವುದುಂಟೇ? ಎಂಬ ವಾಚ್ಯಾರ್ಥವನ್ನು ನೀಡುತ್ತದೆಯಾದರೂ, ಉದಾತ್ತವಾದ ಇನ್ನೊಂದು ಅರ್ಥ ನಿಸ್ಸಂದೇಹವಾಗಿ ಧ್ವನಿತವಾಗುತ್ತಿದೆ. ಜಗತ್ತಿನ ವಿಷಮ ಸ್ಥಿತಿಯನ್ನು ಕಲ್ಕಿಯ ರೂಪದಲ್ಲಿ ಕಂಡ ಮೇಲೆ ಮನಸ್ಸು ನೆಮ್ಮದಿಯಾಗಿ, ನಿಶ್ಚಿಂತೆಯಿಂದ ಉಳಿಯಲು ಸಾಧ್ಯವೇ? ಕನಸ್ಸಿನ ನಾಡಿನಲ್ಲಿ ವಿಹರಿಸುತ್ತಿದ್ದ ಕವಿಗೆ ಈ ಲೋಕದ ದುಃಖ, ದುಗುಡ, ನೋವು, ಆಕ್ರಂದನ, ಹಿಂಸೆ ಎಲ್ಲವೂ ಕಣ್ಣಿಗೆ ಕಟ್ಟಿದಂತಾಗಿ ಸ್ವಚ್ಛಂದವಾಗಿದ್ದ ಮನಸ್ಸು ಕದಡಿ ಹೋಯಿತು ಎಂಬುದೇ ಇಲ್ಲಿನ ವಸ್ತುಧ್ವನಿಯಾಗಿದೆ.

ಉದಾಹರಣೆಗೆ,
ಬುದ್ಧ–ಬುದ್ಧ
ಜಗವೆಲ್ಲಾ ಮಲಗಿರಲು
ಅವನೊಬ್ಬನೆದ್ದ!

ಬೇಂದ್ರೆಯವರ 'ಬುದ್ಧ' ಎಂಬ ಕವಿತೆಯ ಈ ಸಾಲುಗಳಲ್ಲಿ ಧ್ವನಿತವಾಗಿರುವ ವಸ್ತುವಿನ ವ್ಯಾಪ್ತಿ ಆದಷ್ಟೂ ದೂರ ಹೋಗುತ್ತದೆ. ಇದನ್ನು ಅನುಭವಿಸಿಯೇ ತೀರಬೇಕು. ವಾಚ್ಯಾರ್ಥವು ಇಲ್ಲಿ ಪುರಸ್ಕೃತವಾಗುತ್ತದೆ. ಆತ ಮನೆಯನ್ನು ಬಿಟ್ಟು ತೀವ್ರ ವೈರಾಗ್ಯ ಪರನಾಗಿ ಹೋದದ್ದು, ಮಧ್ಯರಾತ್ರಿಯಲ್ಲಿ ಜಗತ್ತೆಲ್ಲಾ ಮಲಗಿರಲು ಈತನೊಬ್ಬನೆ ಎಚ್ಚರವಾಗಿದ್ದ. ಇದಕ್ಕಿಂತ ಮಿಗಿಲಾದ, ವ್ಯಾಪಕವಾದ ಅರ್ಥ ಬರುತ್ತದೆ. ಆ ಅರ್ಥವೆಂದರೆ, ಜಗತ್ತೆಲ್ಲಾ ಅಜ್ಞಾನದ ಅಂಧಕಾರದಲ್ಲಿ ಮುಳುಗಿರುವಾಗ ಆ ಕತ್ತಲನ್ನು ಕಳೆಯುವಂತಹ ಎಚ್ಚರದ ಕಡೆಗೆ, ಜ್ಞಾನದ ಕಡೆಗೆ ಈತ ಮುಖ ಮಾಡಿ ಎದ್ದು ನಿಂತು, ಜಗತ್ತಿಗೆ ಬೆಳಕನ್ನು ತರುವ ಸಾಹಸದಲ್ಲಿ ತೊಡಗಿ ಲೋಕಕ್ಕೆ ಜ್ಞಾನದ ಬೆಳಕು ನೀಡಿದನು ಎಂಬುದು ಇಲ್ಲಿನ ವಸ್ತುಧ್ವನಿಯಾಗಿದೆ.

**ಪ್ರಸ್ತುತ 8ನೇ ತರಗತಿಯ ಬಿ. ಟಿ.ಲಲಿತಾನಾಯಕ್‌ರವರ 'ಭರವಸೆ' ಪದ್ಯಭಾಗದಲ್ಲಿ ಆರಿಸಿರುವ ವಸ್ತುಧ್ವನಿ:**

"ಏನೆಂದು ಹಾಡಲಿ ನಾನು ಏನ ಅರುಹಲಿ ಚೆಲುವೆ
ಬಣ್ಣ ಬೆಡಗಿನ ಮಾತನರಿಯೆ
ಕೃತಕತೆಯ ಜಾಲದಲಿ ಸಿಲುಕಿಕೊಂಡಿದೆ ಜಗವು
ನೈಜತೆಗೆ ಇಲ್ಲ ಬೆಲೆಯು
ಪ್ರಕೃತಿಯ ಸಿರಿಮುಡಿಗೆ ಕೊಡಲಿ ಹಾಕಿದ ಮನುಜ
ಸ್ವಾರ್ಥದಲಿ ಮುಳುಗಿಹನು ಪೂರ
ಭಿತ್ತಿಯಲಿ ಬಿಡಿಸುವನು ಗಿಡಬಳ್ಳಿ ಚಿತ್ತಾರ

ಮರೆತೇ ಬಿಟ್ಟಿಹನು ಮಣ್ಣ ಸೊಗಡ
ಮಾವು ಮಲ್ಲಿಗೆ ಭ್ರಮರ ಮತ್ತದರ ಝೇಂಕಾರ
ಕವಿ ಕಲ್ಪನೆಯ ಗಾನಲಹರಿ
ನಲುಗದಿರು ಇದ ಕೇಳಿ ಬರಡಲ್ಲ ಈ ಬುವಿಯು
ಅಮರ ಪ್ರೇಮದ ಒರತೆ ಹರಿಯುವುದು ಉಂಟು ಅಲ್ಲಲ್ಲಿ"

ಈ ಕವಿತೆಯಲ್ಲಿ ಮಲ್ಲಿಗೆ ಮತ್ತು ಕೋಗಿಲೆಯ ಸಂಭಾಷಣೆಯ ಮೂಲಕ ಜಗತ್ತಿನ ತಲ್ಲಣಗಳನ್ನು ವ್ಯಕ್ತಪಡಿಸುವ ವಸ್ತುವನ್ನು ಒಳಗೊಂಡಿದೆ. ವಾಚ್ಯಾರ್ಥದ ನೆಲೆಯಲ್ಲಿ, ಸಾಮಾನ್ಯ ಸಂಭಾಷಣೆಯಂತೆ ಗೋಚರಿಸುತ್ತದೆಯಾದರೂ, ಲೋಕವಾರ್ತೆಯನ್ನು ನುಡಿಯುವ ಕೋಗಿಲೆಯ ಧ್ವನಿಯಲ್ಲಿ ನಿರಾಸೆ, ಅವಾಸ್ತವಿಕ ಬದುಕಿನ ಬಗೆಗಿನ ವಿಷಾಧವಿದೆ. ಕೋಗಿಲೆಯ ದನಿ ಎಂದಿಗೂ ಇಂಪು, ಮಲ್ಲಿಗೆಯ ಸುಗಂಧ ಎಂದೆಂದಿಗೂ ಕಂಪು ಇವು ಸಹಜತೆಯ ಪ್ರತೀಕಗಳು. ಎಂದಿಗೂ ಬದಲಾಗುವುದಿಲ್ಲ. ಮಾನವ ಮಾತ್ರ ಏಕೆ ಮಾನವೀಯತೆಯನ್ನು ಬಿಟ್ಟು, ಸ್ವಾರ್ಥಿಯಾಗುತ್ತಿದ್ದಾನೆ? ಎಲ್ಲರ ಬದುಕನ್ನು ಸ್ವಾರ್ಥಕ್ಕಾಗಿ ಏಕೆ ಮಣ್ಣಾಗಿಸುತ್ತಿದ್ದಾನೆ? ಪ್ರೀತಿ, ವಿಶ್ವಾಸ ಮುಂತಾದ ಮೌಲ್ಯಗಳನ್ನು ಬಿಟ್ಟು, ಕೃತಕ, ಭ್ರಮಾಲೋಕದ ಜೀವನಕ್ಕೆ ಏಕೆ ಬೆರಗಾಗಿದ್ದಾನೆ? ಎಂಬ ಸುಪ್ತ ಪ್ರತಿಭಟನೆ ಅದರಲ್ಲಿ ಅಡಗಿದೆ. ನಿರಾಶೆಯ ಭಾವಕ್ಕೆ ಕೊನೆಯಲ್ಲಿ ಆಶಾವಾದದ ಕಿರಣ ಪ್ರೇಮದ ಒರತೆಯಾಗಿದೆ. ಪ್ರೀತಿಯಿಂದ ಜಗತ್ತನ್ನು ಗೆಲ್ಲಬಹುದು. ಮತ್ತೆ ಜೀವನ ಹಸನಾಗಬಲ್ಲದು ಎಂಬ ಭರವಸೆ ಕೊನೆಯಲ್ಲಿ ಮೂಡಿದೆ. ಇಲ್ಲಿ ವಸ್ತು ಅದ್ಭುತ ಪ್ರತಿಮೆಯಾಗಿ ಹೊರಬಂದಿದೆ.

**ಇ. ವ್ಯಕ್ತಿ:** ವ್ಯಕ್ತಿ, ರಚನೆಕಾರರು, ಪಾತ್ರಗಳು ಇತ್ಯಾದಿ ಕುರಿತಂತೆ ರೂಪಿಸಲಾಗುವ ಮೌಲ್ಯಮಾಪನಾಂಶವನ್ನು ಇದು ಒಳಗೊಳ್ಳುತ್ತದೆ.

- ಮೈಸೂರು ಮಲ್ಲಿಗೆ ಪದ್ಯದಲ್ಲಿ ರಾಯರ ಹೆಂಡತಿಯ ಹೆಸರೇನು?
- ರಾಯರು ಬಂದರು ಮಾವನ ಮನೆಗೆ' ಭಾವಗೀತೆಯ ಕರ್ತೃ ಯಾರು?
- ಶಿವನೊಡನೆ ಹೋರಾಡಿ ಪಾಶುಪಥವನು ಪಡೆದವನು ಯಾರು?

**ಈ. ಸಂದರ್ಭಗಳು:** ಸಂದರ್ಭ ಆಧಾರಿತ ಪ್ರಶ್ನೆಗಳು ಕಲಿಕಾಂಶಗಳ ಸಂದರ್ಭದ ಅರ್ಥಗ್ರಹಿಕೆಯನ್ನು ಪರಿಶೀಲಿಸುವ ಪ್ರಶ್ನೆಗಳಾಗಿರುತ್ತವೆ. ಸಂದರ್ಭ ಆಧಾರಿತ ಪ್ರಶ್ನೆಗಳಲ್ಲಿ ಎರಡು ರೀತಿಯ ಸ್ವರೂಪವನ್ನು ಗುರುತಿಸಬಹುದಾಗಿದೆ.

1. ಕೇವಲ ಸಂದರ್ಭದ ಗ್ರಹಿಕೆಯನ್ನು ಪರಿಶೀಲಿಸುವ ಪ್ರಶ್ನೆಗಳು
2. ಸಂದರ್ಭದ ಭಾವ ಗ್ರಹಿಕೆಯನ್ನು ಪರಿಶೀಲಿಸುವ ಪ್ರಶ್ನೆಗಳು

**ಕೇವಲ ಸಂದರ್ಭದ ಗ್ರಹಿಕೆಯನ್ನು ಪರಿಶೀಲಿಸುವ ಪ್ರಶ್ನೆಗಳು**

ಈ ರೀತಿಯ ಪ್ರಶ್ನೆಗಳನ್ನು ರಚಿಸುವಾಗ ಕೇವಲ ಸಂದರ್ಭದ ಗ್ರಹಿಕೆಯನ್ನು ಮಾತ್ರ ಪರೀಕ್ಷಿಸುವಂತೆ ರಚಿಸಲಾಗುತ್ತದೆ. ಇಲ್ಲಿ ಯಾರು? ಯಾರಿಗೆ? ಯಾವ ಸಂದರ್ಭದಲ್ಲಿ? ಮಾತುಗಳನ್ನು ಹೇಳಿದರು ಎಂಬ ಸಂದರ್ಭದ ಗ್ರಹಿಕೆಯನ್ನು ಪ್ರಶ್ನಿಸಲಾಗುತ್ತದೆ. ಇಲ್ಲಿ ಸಂದರ್ಭವೇ ಪ್ರಮುಖವಾಗಿರುತ್ತದೆ ಹೊರತು, ಸಂದರ್ಭದ ಭಾವವಲ್ಲ! ಎನ್ನುವುದು ಪ್ರಮುಖ ಸಂಗತಿಯಾಗುತ್ತದೆ. ಉದಾಹರಣೆಗೆ,

**ಈ ಕೆಳಗಿನವುಗಳಲ್ಲಿ ನಾಲ್ಕು ವಾಕ್ಯಗಳನ್ನು ಸಂದರ್ಭಸಹಿತ ವಿವರಿಸಿ.**

ಅ) "ಮರಳು, ಮರಳು, ಮಗಳೆ ಎಂದ, ಮೊರೆವ ಕಾಯಲ ಗಂಟಲಿಂದ"

ಆ) "ಹಿಂದು ಹಿಂದಕೆ ನಡೆದು ಹತ್ತಿ ಗುಡ್ಡವನೇರಿ, ಆ ಕಡೆಗೆ ಇಳಿದು ದಾರಿಯ ಸೇರೆ ಒಪ್ಪುವೆನು"

ಇ) "ಒಳಮನೆಯಲಿ 'ನೀರಾಯಿತು!' ಎಂದಳು ನಾದಿನಿ ರಾಗದಲಿ"

ಈ) "ಯಾವತ್ತೋ ನಾನು ಸಾಯುವುದು ಪ್ರಾಣಿಯಿಂದಲೇ"

ಉ) "ಸತ್ಯವೆಂದರೆ ನಾನೋ? –ನೀನೋ?"

**ಸಂದರ್ಭದ ಭಾವ ಗ್ರಹಿಕೆಯನ್ನು ಪರಿಶೀಲಿಸುವ ಪ್ರಶ್ನೆಗಳು**

ಈ ರೀತಿಯ ಪ್ರಶ್ನೆಗಳನ್ನು ರಚಿಸುವ ಸಂದರ್ಭದಲ್ಲಿ ಸಾಂದರ್ಭಿಕ ವಾಕ್ಯ ಅಥವಾ ಪದ್ಯಭಾಗದ ಭಾವ ಪ್ರಮುಖ ಪರಂತು ಸಂದರ್ಭದ ಗ್ರಹಿಕೆಯು ಗೌಣ ಎನಿಸುತ್ತದೆ.
ಉದಾಹರಣೆಗೆ,

**ಈ ಕೆಳಗಿನ ಒಂದು ಪದ್ಯದ ಭಾವವನ್ನು ಸಂದರ್ಭ ಸಹಿತ ವಿವರಿಸಿ.**

ಪಂಚಭೂತದಾಂಗ ವಂಚನೆ ಕಂಡಿ
ಕಣ್ಣಿನಂಚಿನಾಗ ಹೊಸಜಗ ಕಂಡಿ
ಸೊನ್ನಿಗಿ ಆಕಾರ ಬರದೇನಂದಿ
ಬಯಲಿಗೆ ಗೋಡೆ ಕಟ್ಟೇನಂದಿ
ಸಚರಾಚರಗಳ ರಚನ ಮಾಡುದಕ
ಬೇರೊಬ್ಬ ಸೂರ್ಯನ ತರತೇನಂದಿ ॥

ಹಕ್ಕಿಯುಲಿಯದ ಮೌನ; ಬೀಸಲು, ಗರಿಯ ಪುಕ್ಕಲು
ಎಲ್ಲಿಯವರೆಗೆ ಇದು, ನಮ್ಮ ಆಕಾಶ?
ಶ್ರುತಿಯ ಸರಹದ್ದು.
ಹೇಳು, ಎಲ್ಲಿಯವರೆವಿಗೆ ನಕಲಿ ಮಂಜು? ಕಣ್ಣು ಹೊಡೆಯುವ
ಮಿಂಚು? ರಾತ್ರಿ ಕಾಡುವ ಬೊಗಳು?

**ಉ. ಘಟನೆಗಳು:** ಘಟನೆಗಳ ಕಾಲ, ಕಾರಣ, ಸಂದರ್ಭ, ಸ್ವರೂಪ ಹಾಗೂ ಪರಿಣಾಮ ಕುರಿತಂತೆ, ಪ್ರಶ್ನೆಗಳನ್ನು ರೂಪಿಸಲಾಗುತ್ತದೆ. ಉದಾಹರಣೆಗೆ,

**ಪಠ್ಯ:**
ಆಗಳ್ ಬಾಳ್ ನಿಮಿರ್ದುದು ತೋಳ್
ತೂಗಿದುದು ಮನಂ ಕದಲ್ದುದಿರ್ವರುಮನೆರಳ್
ಭಾಗಂ ಮಾಡಲ್ ಧೃತಿ ಬಂ
ದಾಗಳ್ ಮಾಣೆಂಬ ತೆರದೆ ಪೇಸಿದನರಸಂ

ಯಶೋಧರನ ಸಂಯಮಪೂರ್ಣ ವ್ಯಕ್ತಿತ್ವ ಸಾಬೀತಾದ ಸಂದರ್ಭವನ್ನು ವಿವರಿಸಿ.
ಯಶೋಧರನ ಕನಸಿನ ವೃತ್ತಾಂತದ ಪರಿಣಾಮವನ್ನು ವಿವರಿಸಿ.

**ಊ. ಪರಿಕಲ್ಪನೆ:** ಸಾಮಾನ್ಯ ಲಕ್ಷಣಗಳನ್ನು ಆಧರಿಸಿ, ಎಲ್ಲಾ ವಸ್ತು, ವಿಷಯಗಳನ್ನು ಒಂದೇ ಎಂದು ಭಾವಿಸುವ ಅಂಶವನ್ನೇ 'ಪರಿಕಲ್ಪನೆ' ಎಂದು ಗುರುತಿಸಬಹುದು. ಪರಿಕಲ್ಪನೆಯಲ್ಲಿ ಎರಡು ರೀತಿಯ ಪರಿಕಲ್ಪನೆಗಳನ್ನು ಗುರುತಿಸಲಾಗಿದೆ.

ಪರಿಕಲ್ಪನೆಗೆ ಸಂಬಂಧಿಸಿದ ಪ್ರಶ್ನೆಗಳನ್ನು ರೂಪಿಸಬೇಕಾದ ಸಂದರ್ಭದಲ್ಲಿ ಪ್ರಶ್ನೆಗಳು ಹೀಗಿರಬೇಕು.

- ಪರಿಕಲ್ಪನೆಗಳಿಗೆ ಉದಾಹರಣೆಗಳನ್ನು ನಿರೀಕ್ಷಿಸುವ ಪ್ರಶ್ನೆಗಳು
- ಸಾಮಾನ್ಯೀಕರಿಸಲು ಸಹಕರಿಸುವ ಪ್ರಶ್ನೆಗಳು
- ಬಹುಮುಖ ನಿರೂಪಣೆಗಳನ್ನು ನಿರೀಕ್ಷಿಸುವ ಪ್ರಶ್ನೆಗಳು
- ಸಂಬಂಧ, ವ್ಯತ್ಯಾಸಗಳನ್ನು ನಿರೀಕ್ಷಿಸುವ ಪ್ರಶ್ನೆಗಳು

**ಸಂಯೋಜಕ ಪರಿಕಲ್ಪನೆ:**
ಅನೇಕ ಲಕ್ಷಣಗಳನ್ನು ಆಧರಿಸಿ, ವ್ಯಾಖ್ಯಾನಿಸಬಹುದಾದ ಪರಿಕಲ್ಪನೆಗಳು 'ಸಂಯೋಜಕ ಪರಿಕಲ್ಪನೆಗಳು' ಎನಿಸಿಕೊಳ್ಳುತ್ತವೆ.

ಉದಾಹರಣೆಗೆ, 'ಸಂಧಿ' ಹಾಗೂ ಅದರ 'ಸಂಧಿಯ ವಿಧ'ಗಳ ಪರಿಕಲ್ಪನೆಗಳು.
ವಿಶೇಷಿಸುವ ಪದಗಳು 'ವಿಶೇಷಣಗಳು'. ಉದಾಹರಣೆಗೆ ನಾಮವಿಶೇಷಣ, ಕ್ರಿಯಾ ವಿಶೇಷಣ ಇತ್ಯಾದಿ.

ಉದಾಹರಣೆಗೆ, ಬಿಳಿಯ ಹಾಳೆಯ ಮೇಲೆ ಕರಿಯ ಅಕ್ಷರ.
ಎಳೆಯ ಕರು ಥಟ್ಟನೆ ನೆಗೆಯಿತು.

ವಿಶೇಷಣಗಳೆಂದರೇನು? ವಿಶೇಷಣಗಳ ವಿಧಗಳನ್ನು ಸಂಶ್ಲೇಷಿಸಿ.

**ವಿಯೋಜಕ ಪರಿಕಲ್ಪನೆ:**
ನಿರ್ದಿಷ್ಟ ಲಕ್ಷಣವನ್ನು ಆಧರಿಸಿ, ವ್ಯಾಖ್ಯಾನಿಸಬಹುದಾದ ಪರಿಕಲ್ಪನೆಗಳು 'ವಿಯೋಜಕ ಪರಿಕಲ್ಪನೆಗಳು' ಎನಿಸಿಕೊಳ್ಳುತ್ತವೆ.
ನಾಮಪದದ ವಿಧಗಳು: –

| | |
|---|---|
| ಸಹಜ ನಾಮ | ಸಾಧಿತ ನಾಮ |
| ರೂಢನಾಮ | ತದ್ಧಿತಾಂತ ನಾಮ |
| ಅಂಕಿತನಾಮ | ಕೃದಂತನಾಮ |
| ಅನ್ವರ್ಥನಾಮ | |

ನಾಮಪದದ ವಿಧಗಳನ್ನು ವಿಶ್ಲೇಷಿಸಿ.
ಗಮನಿಸಿ:– ಈ ಪರಿಕಲ್ಪನೆ ಆಧಾರಿತ ಪ್ರಶ್ನೆಗಳು ಸಾಮಾನ್ಯೀಕರಿಸುವ ಉದ್ದೇಶವನ್ನು ಹೊಂದಿರುತ್ತವೆ.

**ಸಂಬಂಧ ಸೂಚಕ ಪರಿಕಲ್ಪನೆಗಳು:**
ಎರಡು ಅಥವಾ ಎರಡಕ್ಕಿಂತ ಹೆಚ್ಚು ಪರಿಕಲ್ಪನೆಗಳ ನಡುವೆ ಸಂಬಂಧವನ್ನು ಸೂಚಿಸಲು ಬಳಸುವ ಪರಿಕಲ್ಪನೆಗಳು

'ಸಂಬಂಧಸೂಚಕ ಪರಿಕಲ್ಪನೆಗಳು' ಎನಿಸಿಕೊಳ್ಳುತ್ತವೆ. ಇಲ್ಲಿ ಸಾಮ್ಯತೆ, ವೈಷಮ್ಯತೆ, ಸಾಮಾನ್ಯೀಕೃತ ಅಂಶಗಳ ಆಧಾರದ ನೆಲೆಯಲ್ಲಿ  ನಿರೂಪಿಸಲಾಗುತ್ತದೆ. ಯಾವುದು? ಏಕೆ? ಹೇಗೆ? ಸಾಮ್ಯವೇ? ಭಿನ್ನವೇ? ಪರಸ್ಪರ ಸಂಬಂಧವೇನು? ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸುವಲ್ಲಿ ಈ ಪರಿಕಲ್ಪನೆಗಳು ಪ್ರಧಾನ ಪಾತ್ರವನ್ನು ನಿರ್ವಹಿಸುತ್ತವೆ.

ಉದಾಹರಣೆಗೆ.  ಸಂಧಿ ಹಾಗೂ ಸಮಾಸಗಳಲ್ಲಿ ಸಾಮಾನ್ಯೀಕೃತವಾಗುವ ಪ್ರಕ್ರಿಯೆ 'ಕೂಡುವ ಪ್ರಕ್ರಿಯೆ' ಆದರೆ, ಕೂಡುವ ಅಂಶಗಳು ಮಾತ್ರ ಭಿನ್ನವಾಗಿರುತ್ತವೆ. 'ಸಂಧಿ'ಯಲ್ಲಿ ಅಕ್ಷರಗಳು ಪರಸ್ಪರ ಕೂಡಿದರೆ, 'ಸಮಾಸ'ದಲ್ಲಿ 'ಪದಗಳು' ಪರಸ್ಪರ ಕೂಡುತ್ತವೆ.

ಪ್ರಶ್ನೆ: ಸಂಧಿ ಮತ್ತು ಸಮಾಸಗಳ ನಡುವಣ ವ್ಯತ್ಯಾಸ ತಿಳಿಸಿ
ರಾಯ ಕೇಳಿಂತು ರಾಘವೇಶ್ವರನ ರಮ
ಣೀಯ ಗುಣಮಾಲೆಯಂ
ನೆನೆ ನೆನೆದು ಹಂಬಲಿಸು
ತಾಯ ತಾಂಬಕಿ ಮತ್ತೆ ಮೈಮರೆಯುತೆಚ್ಚರುತೇ
**ಪಾವಗಿದ ಪಸುಳೆವೊಲಿರೆ**

ಪ್ರಶ್ನೆ:
ಈ ಪದ್ಯಭಾಗದಲ್ಲಿ ಉಪಮಾವಾಚಕ ಹಾಗೂ ಸಾಧಾರಣಧರ್ಮಗಳ ನೆಲೆಯಲ್ಲಿ ಉಪಮೇಯ ಉಪಮಾನಗಳ ನಡುವಣ ಸಂಬಂಧ ಗುರುತಿಸಿ.

**ಉ. ತಥ್ಯಗಳು:**

ಯಾರು ಬೇಕಾದರೂ ಪ್ರಮಾಣಿಸಿ ನೋಡಬಹುದಾದ, ಸಾಧಿಸಿ, ತೋರಿಸಬಹುದಾದ ವಿಷಯದ ತುಣುಕುಗಳೇ 'ತಥ್ಯಗಳು'. ಆದರೆ, ಸಾಹಿತ್ಯವು ಕಲ್ಪನಾತ್ಮಕ ನೆಲೆಯಲ್ಲಿ ವ್ಯಕ್ತಿನಿಷ್ಠವಾಗಿರುವ ದೆಸೆಯಿಂದ ತಥ್ಯಾಧಾರಿತ ಪ್ರಶ್ನೆ ರೂಪಿಸುವಾಗ ಬಹಳ ಗಮನವಿಟ್ಟು ಪ್ರಶ್ನೆಗಳ್ನು ಜೋಡಿಸಬೇಕಾಗುತ್ತದೆ.

ಘಟನೆಗಳು, ದಿನಾಂಕಗಳು, ಸ್ಥಳಗಳು, ಲೇಖಕರು, ಪುಸ್ತಕ, ಕೃತಿಗಳು, ಪ್ರಶಸ್ತಿಗಳು ಇತ್ಯಾದಿಗಳ ಕುರಿತಂತೆ, ಪ್ರಶ್ನೆಗಳನ್ನು ಜೋಡಿಸಿದಲ್ಲಿ ಅದನ್ನು ತಥ್ಯ ಆಧಾರಿತ ಪ್ರಶ್ನೆಗಳೆಂದು ಗುರುತಿಸಬಹುದಾಗಿದೆ.
ಉದಾಹರಣೆಗೆ,
ಪ್ರಶ್ನೆ: 'ಶ್ರೀರಾಮಾಯಣದರ್ಶನಂ' ಮಹಾಕಾವ್ಯವನ್ನು ಬರೆದವರು ____________________

**ಎ. ವಿದ್ಯಮಾನಗಳು:** ವಿದ್ಯಮಾನವೆಂದರೆ, ಸ್ಥಿತಿಗತಿ ಎಂಬ ಅರ್ಥವನ್ನು ಹೊಂದಿರುವ ಪದ. ಹಾಗಾಗಿ ಸ್ಥಿತಿಗತಿಯನ್ನು ಕುರಿತಂತೆ, ರೂಪಿಸಲಾಗುವ ಪ್ರಶ್ನೆಗಳಿಗೆ ವಿದ್ಯಮಾನ ಆಧಾರಿತ ಪ್ರಶ್ನೆಗಳು ಎಂದು ಗುರುತಿಸಬಹುದಾಗಿದೆ. ಆದರೆ ಸಾಹಿತ್ಯಿಕ ವಿದ್ಯಮಾನಗಳು ವಾಸ್ತವ ಹಾಗೂ ಕಲ್ಪನೆಯ ನಡುವಣ ಸ್ಥಾನವನ್ನು ಪಡೆಯುವುದರಿಂದ ವಿದ್ಯಮಾನಗಳನ್ನು ಕುರಿತ ಪ್ರಶ್ನೆ ರೂಪಿಸುವ ಸಂದರ್ಭದಲ್ಲಿ ಎಚ್ಚರಿಕೆ ವಹಿಸಬೇಕು. ಏಕೆಂದರೆ, ಈ ರೀತಿಯ ಪ್ರಶ್ನೆಗಳಲ್ಲಿ ಸಾಮಾನ್ಯೀಕೃತ ನೆಲೆಗಟ್ಟು ತರುವುದು ಕಷ್ಟಸಾಧ್ಯವಾದ ಸಂಗತಿಯಾಗುತ್ತದೆ. ಈ ಹಿನ್ನೆಲೆಯಲ್ಲಿ ಸಾಮಾಜಿಕ ಹಾಗೂ ಪ್ರಚಲಿತ ವಿದ್ಯಮಾನಗಳ ಕುರಿತಂತೆ ಪ್ರಶ್ನೆಗಳನ್ನು ರೂಪಿಸುವ ಅಗತ್ಯವಿದೆ.

ಉದಾಹರಣೆಗೆ,

ಆಡಳಿತ ಪತ್ರ ಎಂದರೇನು? ನಿಮ್ಮ ವರ್ಗಾವಣೆ ಪತ್ರ ಕೋರಿ, ನಿಮ್ಮ ಮುಖ್ಯೋಪಾಧ್ಯಾಯರಿಗೆ ಪತ್ರ ಬರೆಯಿರಿ.

**ಏ. ನಿಯಮಗಳು:** ಸಾರ್ವತ್ರೀಕರಿಸಿದ ಅಥವಾ ಸಾಮಾನ್ಯೀಕರಿಸಿದ ಸಾರ್ವಕಾಲಿಕವಾಗಿ ಸತ್ಯವೆನಿಸಿದ ಹೇಳಿಕೆಗಳೇ ನಿಯಮಗಳು. ಇವು ಸಾರ್ವತ್ರೀಕರಣಗಳಾಗಿರುತ್ತವೆ.
ಸಂಧಿನಿಯಮ/ ಸಮಾಸ ನಿಯಮ
ಸವರ್ಣದೀರ್ಘ ಸಂಧಿ: ಸವರ್ಣಾಕ್ಷರಗಳು ಒಂದರ ಮುಂದೊಂದು ಬಂದು, ಅದೇ ಸ್ವರ ದೀರ್ಘವಾಗುವುದಕ್ಕೆ 'ಸವರ್ಣ ದೀರ್ಘ ಸಂಧಿ' ಎನ್ನುವರು.
ದೇವ + ಆಲಯ = ದೇವಾಲಯ
ಅ + ಆ = ಆ

ಈ ಅಂಶವನ್ನು ಆಧರಿಸಿ, ಸವರ್ಣದೀರ್ಘ ಸಂಧಿ ಆಧರಿಸಿದ ಪ್ರಶ್ನೆಯನ್ನು ಹೀಗೆ ನಿರೂಪಿಸಬಹುದು.
ಸವರ್ಣದೀರ್ಘ ಸಂಧಿ ಎಂದರೇನು? ಉದಾಹರಣೆಯ ಮುಖಾಂತರ 'ಸಂಧಿ' ನಿಯಮವನ್ನು ನಿರೂಪಿಸಿ.

ಬಹುವ್ರೀಹಿ ಸಮಾಸ: ಪೂರ್ವೋತ್ತರ ಪದಗಳ ಅರ್ಥವು ಪ್ರಮುಖವಾಗದೇ, ಮತ್ತೊಂದು ಪದದ ಅರ್ಥವು ಪ್ರಧಾನವಾಗುವ ಸಮಾಸವೇ 'ಬಹುವ್ರೀಹಿ ಸಮಾಸ' ಎನಿಸಿಕೊಳ್ಳುತ್ತದೆ.

ನಿಡುಮೂಗಿ – ನೀಳವಾದ ಮೂಗನ್ನು ಯಾವನು ಹೊಂದಿರುವನೋ ಅವನೇ ನಿಡುಮೂಗಿ ಅರ್ಥಾತ್ 'ಗಣೇಶ'.

ಒಂದನೇ ಪದಕ್ಕೆ ಸಂಬಂಧಿಸಿದಂತೆ ಎರಡನೇ ಪದವಿದೆ. ಮೂರನೇ ಪದಕ್ಕೆ ಸಂಬಂಧಿಸಿದಂತೆ ನಾಲ್ಕನೇ ಪದವನ್ನು ಬರೆಯಿರಿ.
ಕೆರೆಕಟ್ಟೆಬಾವಿಗಳು: ದ್ವಂದ್ವ ಸಮಾಸ :: ನಿಡುಮೂಗಿ :____________________

ಅ) ತತ್ಪುರುಷ ಬ) ಕರ್ಮಧಾರಯ ಕ) ಬಹುವ್ರೀಹಿ ಡ) ಗಮಕ

**ಐ. ಸಿದ್ಧಾಂತಗಳು**: ಎರಡು ಅಥವಾ ಹೆಚ್ಚು ಪರಿಕಲ್ಪನೆಗಳ ನಡುವಣ ನಿರ್ದಿಷ್ಟ ಸಂಬಂಧವನ್ನು ಸೂಚಿಸುವ ಹೇಳಿಕೆಯೇ 'ಸಿದ್ಧಾಂತ'.
ಉದಾಹರಣೆಗೆ, ರಸಸಿದ್ಧಾಂತ:
ವಿಭಾವ: ಭಾವದ ಕಾರಣ (ಆಲಂಭನಾ ವಿಭಾವ, ಉದ್ದೀಪನಾ ವಿಭಾವ)
ಅನುಭಾವ: ಭಾವದ ಪರಿಣಾಮ
ಸಂಚಾರಿಭಾವ: ಪ್ರಧಾನ ಭಾವದ ನಡುವೆ ಬಂದು ಬಂದು ಹೋಗುವ ಭಾವಗಳು
ಈ ಅಂಶಗಳು ಸಾಮಾನ್ಯವಾಗಿ ಉನ್ನತ ಶಿಕ್ಷಣದಲ್ಲಿ ಕನ್ನಡ ಕಲಿಯುವವರಿಗೆ ಸಂಬಂಧಿಸಿದವು.

**ಓ. ತತ್ತ್ವಗಳು:** ಸಾರ್ವತ್ರೀಕರಿಸಿದ ಅಥವಾ ಸಾಮಾನ್ಯೀಕರಿಸಿದ ಅಭಿಪ್ರಾಯಗಳನ್ನು 'ತತ್ತ್ವಗಳು' ಎಂದು ಕರೆಯಲಾಗುತ್ತದೆ.

ಭಾಷಾ ಬೋಧನೆಯ ಪಠ್ಯಕ್ರಮದ ಪ್ರತಿ ಅಧ್ಯಾಯಗಳು ಗದ್ಯ ಅಥವಾ ಪದ್ಯ ಭಾಗಗಳನ್ನು ಒಳಗೊಂಡಿದ್ದು, ಪರಸ್ಪರ ಸಂಬಂಧಿತ ಅಂಶಗಳನ್ನು ಒಳಗೊಂಡ ಘಟಕಾಂಶ ಎನಿಸುತ್ತದೆ. ಅಧ್ಯಾಯವೊಂದರ ಎಲ್ಲಾ ಉಪಘಟಕಾಂಶಗಳನ್ನು ಒಳಗೊಂಡಂತೆ, ಪ್ರಶ್ನಾಂಶಗಳನ್ನು ಒಳಗೊಳ್ಳಬೇಕು. ಉಪಘಟಕದ ವ್ಯಾಪಕತೆಯನ್ನು ಆಧರಿಸಿ ಪ್ರತಿಶತ ಪ್ರಶ್ನೆ ಹಾಗೂ ಅಂಕ ಪ್ರಮಾಣವನ್ನು ನಿರ್ಧರಿಸಬೇಕು.

ಈ 9 ಮತ್ತು 10 ನೆಯ ಅಂಶಗಳನ್ನು ಪ್ರೌಢಶಾಲೆಯ ಹಂತಕ್ಕಿಂತ ಮುಂದೆ, ಅಂದರೆ ಉನ್ನತ ಶಿಕ್ಷಣದ ಹಂತದಲ್ಲಿ ಉದ್ದೇಶಗಳಾಗಿ ಗುರುತಿಸಿಕೊಳ್ಳಬಹುದು.

**ಉಪ ಘಟಕಗಳ ಆಯಾಮ:**

| ಕ್ರ. ಸಂ. | ಉಪಘಟಕಗಳು | ಶೇಕಡಾವಾರು |
|---|---|---|
| 1 | **ಉಪಘಟಕ 01** | **ಪಠ್ಯಭಾಗದ ವ್ಯಾಪಕತೆ ಆಧರಿಸಿ, ಪ್ರಶ್ನೆ ಹಾಗೂ ಅಂಕ ನಿಯೋಜನೆ, ಪ್ರತಿಶತ ಪ್ರಮಾಣವನ್ನು ನಿರ್ಧರಿಸುವುದು** |
| 2 | **ಉಪಘಟಕ 02** | |
| 3 | **ಉಪಘಟಕ 03** | |
| | | |

ಭಾಷೆಯ ಕುರಿತ ಮೌಲ್ಯಮಾಪನದಲ್ಲಿ ಪಠ್ಯ ಮಾತ್ರವಲ್ಲದೇ ಕೌಶಲದ ಆಯಾಮವೂ ಇದ್ದು, ಇದನ್ನು ಕೂಡ ಮೌಲ್ಯಮಾಪನಾಂಶವಾಗಿ ಗುರುತಿಸುವ ಅಗತ್ಯತೆ ಇದೆ.

**ಐ. ಕೌಶಲದ ಆಯಾಮ:**

ಭಾಷೆಯ ಮೂಲ ಕೌಶಲಗಳಾದ ಆಲಿಸುವಿಕೆ, ಮಾತುಗಾರಿಕೆ, ಓದುಗಾರಿಕೆ ಹಾಗೂ ಬರವಣಿಗೆ ಕುರಿತಂತೆ ಮೌಲ್ಯಮಾಪನಾಂಶವನ್ನು ಜೋಡಿಸುವುದು ಇಲ್ಲಿ ಪ್ರಮುಖವಾಗುತ್ತದೆ. ಭಾಷಾ ಬೋಧನೆಯ ಪ್ರತಿ ಹಂತಗಳಲ್ಲಿಯೂ ಈ ನಾಲ್ಕು ಕೌಶಲಗಳ ಕಲಿಕೆಯನ್ನು ಒಳಗೊಳ್ಳುತ್ತದೆ. ಆದರೆ, ಕೆಳಹಂತಗಳಾದ ಪೂರ್ವ ಪ್ರಾಥಮಿಕ, ಕಿರಿಯ ಪ್ರಾಥಮಿಕ, ಹಿರಿಯ ಪ್ರಾಥಮಿಕ ಹಂತಗಳಲ್ಲಿ ಕೆಳಹಂತದ ಭಾಷಾ ಕೌಶಲಗಳ ಸಾಮರ್ಥ್ಯದ ಪರೀಕ್ಷೆ ಜರುಗಿದರೆ, ಪದವಿಪೂರ್ವ ಹಂತದಲ್ಲಿ ಸಮನ್ವಯದ ನೆಲೆಯಲ್ಲಿ ಪರೀಕ್ಷಾಂಶವನ್ನು ಜೋಡಿಸುವ ಅಗತ್ಯತೆ ಇದೆ. ಉನ್ನತ ಹಂತದಲ್ಲಿ ಉನ್ನತ ಭಾಷಾ ಸಾಮರ್ಥ್ಯಗಳ ಪರೀಕ್ಷಾಂಶಗಳನ್ನು ಮೌಲ್ಯಮಾಪನ ಮಾಡಲು ಯೋಜಿಸಲಾಗುತ್ತದೆ.

ಕೆಳಹಂತದಲ್ಲಿ ಈ ಭಾಷಾ ಮೂಲಕೌಶಲಗಳಡಿಯಲ್ಲಿ ಈ ಸಾಮರ್ಥ್ಯಗಳನ್ನು ಹೀಗೆ ಗುರುತಿಸಬಹುದು:

ಅ) ಆಲಿಸುವಿಕೆ: ಕೇಳುವಿಕೆ ಇಲ್ಲಿನ ಪ್ರಕ್ರಿಯೆ ಆಗಿರುತ್ತದೆ. ಶ್ರವಣ, ಸ್ಮರಣ, ಮನನ ಇಲ್ಲಿನ ಪ್ರಕ್ರಿಯೆಯಾಗಿದ್ದು, ಈ ಅಂಶಗಳ ಮೌಲ್ಯಮಾಪನ ಇಲ್ಲಿ ಪ್ರಮುಖವಾಗುತ್ತದೆ.

ಆ) ಮಾತುಗಾರಿಕೆ: ಸರಳ ಸಂಭಾಷಣೆ, ಹರಟೆ ಇಲ್ಲಿನ ಮೌಲ್ಯಮಾಪನ ಪ್ರಕ್ರಿಯೆಯನ್ನು ಮೌಲ್ಯಮಾಪನಾಂಶ ಎನಿಸುತ್ತದೆ.

ಇ) ಓದುಗಾರಿಕೆ: ಸರಳ ವಾಕ್ಯಗಳು, ಸರಳ ಓದು, ಗಟ್ಟಿವಾಚನ ಇಲ್ಲಿನ ಮೌಲ್ಯಮಾಪನಾಂಶವಾಗಿ ಗೋಚರಿಸುತ್ತದೆ.

ಈ) ಬರೆವಣಿಗೆ: ಸರಳ ಬರೆವಣಿಗೆ, ಪ್ರಶ್ನೋತ್ತರ ಬರೆವಣಿಗೆ ಇಲ್ಲಿ ವಿಶೇಷವಾಗಿ ಪರಿಗಣಿಸಬೇಕಾದ ಮೌಲ್ಯಮಾಪನಾಂಶವಾಗಿರುತ್ತದೆ.

ಉನ್ನತ ಹಂತದಲ್ಲಿ ಈ ಭಾಷಾ ಮೂಲಕೌಶಲಗಳಡಿಯಲ್ಲಿ ಈ ಸಾಮರ್ಥ್ಯಗಳನ್ನು ಹೀಗೆ ಗುರುತಿಸಬಹುದು.

ಅ) ಆಲಿಸುವಿಕೆ: ಉದ್ದೇಶಪೂರ್ವಕ ನೆಲೆಯಲ್ಲಿ ಕೇಳುವಿಕೆ, ವಿವಿಧ ಆಯಾಮ ಹಾಗೂ ದೃಷ್ಟಿಕೋನಗಳಲ್ಲಿ ವಸ್ತು ವಿಷಯದ ಅರ್ಥಗ್ರಹಿಕೆ, ಆಲಿಕೆ ಟಿಪ್ಪಣಿ ಇತ್ಯಾದಿ ಅಂಶಗಳನ್ನು ಮೌಲ್ಯಮಾಪನಾಂಶವಾಗಿ ಪರಿಗಣಿಸಲಾಗುತ್ತದೆ.

ಆ) ಮಾತುಗಾರಿಕೆ: ಚರ್ಚೆ, ದ್ವಿಮುಖ ಚರ್ಚೆ, ಭಾಷಣ, ಆಶು ಮಾತುಗಾರಿಕೆ, ಇತ್ಯಾದಿ ಈ ಹಂತದ ಮೌಲ್ಯಮಾಪನಾಂಶ ಎನಿಸುತ್ತದೆ.

ಇ) ಓದುಗಾರಿಕೆ: ಶೀಘ್ರವಾಚನ, ಸ್ಥೂಲವಾಚನ, ಸೂಕ್ಷ್ಮವಾಚನ, ಸಮಗ್ರವಾಚನ, ಆಳವಾಚನ, ವಿಮರ್ಶಾತ್ಮಕ ವಾಚನ, ಸೃಜನಾತ್ಮಕ ವಾಚನದ ನೆಲೆಯಲ್ಲಿ ಪ್ರಶ್ನೆಗಳನ್ನು ರೂಪಿಸಿ, ಮೌಲ್ಯಮಾಪನಾಂಶವಾಗಿ ಹೊಂದಿಸಲಾಗಿರುತ್ತದೆ.

ಈ) ಬರೆವಣಿಗೆ: ಸಂಕ್ಷೇಪ ಬರಹ, ವಿಸ್ತರಣಾ ಬರಹ, ಟಿಪ್ಪಣಿ ಬರಹ, ವಿಮರ್ಶಾತ್ಮಕ ಬರಹ, ಆಶು ಬರಹ, ಸೃಜನಶೀಲ ಬರಹ ಇತ್ಯಾದಿ ಪ್ರಶ್ನೆಗಳನ್ನು ಮೌಲ್ಯಮಾಪನಾಂಶವಾಗಿ ಹೊಂದಿಸಲಾಗಿರುತ್ತದೆ.

ಆಲಿಕೆಗೆ ಸಂಬಂಧಿಸಿದಂತೆ ಕೆಲವು ಪ್ರಶ್ನಾಂಶಗಳು:
ಉಕ್ತಲೇಖನ: ಉಚ್ಚರಿಸಿದ ಪದಗಳನ್ನು ಕೊಟ್ಟಿರುವ ಪಟ್ಟಿಯಲ್ಲಿ ಗುರುತಿಸಿ.
ಮಾತುಗಾರಿಕೆಗೆ ಸಂಬಂಧಿಸಿದಂತೆ: ಈ ಕೆಳಗಿನ ಸಂಭಾಷಣೆಯನ್ನು ಅಭಿವ್ಯಕ್ತಿಪೂರ್ವಕವಾಗಿ ಓದಿರಿ
ಬರೆವಣಿಗೆಗೆ ಸಂಬಂಧಿಸಿದಂತೆ: ಕೆಳಗಿನ ವಾಕ್ಯವೃಂದವನ್ನು ಸಂಭಾಷಣೆಯಾಗಿ ಬರೆಯಿರಿ

## II. ಕಠಿಣತೆಯ ಮಟ್ಟದ ಆಯಾಮ

**ಕಠಿಣತೆಯ ಮಟ್ಟ ಆಧಾರಿತ, ಭಾಷೆಯ ಕಲಿಕೆಯ ಸ್ವರೂಪ:** ಭಾಷಾ ಮೌಲ್ಯಮಾಪನಕ್ಕೆ ಪ್ರಶ್ನಾಂಶ ಆರಿಸುವ ಸಂದರ್ಭದಲ್ಲಿ ಭಾಷಾ ಕಲಿಕೆಯ ಸ್ವರೂಪವನ್ನು ಕಠಿಣತೆಯ ಮಟ್ಟ ಆಧರಿಸಿ, ಗಮನಿಸುವ ಅಗತ್ಯತೆ ಇದೆ.

ಭಾಷೆ ಕೇವಲ ಭಾಷೆಯಾಗಿ ಕಲಿಕೆಯಾಗುತ್ತಿದ್ದಲ್ಲಿ,

- ಸಂವಹನ ಭಾಷೆಯಾಗಿ ಭಾಷೆ ಮೌಲ್ಯಮಾಪನಕ್ಕೆ ಒಳಗಾಗುತ್ತದೆ.
- ಸರಳ ನಿಯಮಗಳ ಕುರಿತಂತೆ ಪ್ರಶ್ನಾಂಶವನ್ನು ರಚಿಸಲಾಗುತ್ತದೆ.
- ಸರಳ ಸಾಹಿತ್ಯ ಕುರಿತಂತೆ ಪ್ರಶ್ನೆಗಳು ಇರುತ್ತವೆ.

ಭಾಷೆಯೇ ವಿಷಯವಾಗಿ ಕಲಿಸಲ್ಪಟ್ಟಿದ್ದಲ್ಲಿ, ಮೌಲ್ಯಮಾಪನಾಂಶವು

- ಉನ್ನತ ನೆಲೆಯ ಭಾಷಾ ವಿಷಯಗಳಾದ, ಭಾಷಾವಿಜ್ಞಾನ, ಕಾವ್ಯಮೀಮಾಂಸೆ, ವಿಮರ್ಶೆ, ತೌಲನಿಕ ಸಾಹಿತ್ಯ, ಶಾಸನ ಇತ್ಯಾದಿಗಳನ್ನು ಒಳಗೊಳ್ಳುತ್ತದೆ.

- ಉನ್ನತ ನೆಲೆಯ ವ್ಯಾಕರಣ ಸಾಮರ್ಥ್ಯವನ್ನು ಒಳಗೊಳ್ಳುತ್ತದೆ.
- ಕಾವ್ಯ ರಚನೆಗೆ ನೆಲೆಯಾದ ಛಂದಸ್ಸು – ಅಲಂಕಾರಗಳನ್ನು ಒಳಗೊಳ್ಳುತ್ತದೆ.

**ಪ್ರಶ್ನೆಪತ್ರಿಕೆಯನ್ನು ರೂಪಿಸುವಾಗ ಕಠಿಣತೆಯ ಮಟ್ಟ:**

ಪ್ರಶ್ನೆಪತ್ರಿಕೆಯನ್ನು ರೂಪಿಸುವಾಗ 'ಕಠಿಣತೆಯ ಮಟ್ಟ' ಅತ್ಯಂತ ಪ್ರಮುಖ ಅಂಶ. ಸಾಮಾನ್ಯವಾಗಿ ಒಂದು ತರಗತಿಯಲ್ಲಿ ಪ್ರತಿಭಾವಂತರು, ಸರಾಸರಿ ಮಟ್ಟದ ವಿದ್ಯಾರ್ಥಿಗಳು ಹಾಗೂ ಕನಿಷ್ಠ ಸಾಮರ್ಥ್ಯ ಉಳ್ಳವರನ್ನು ಕಾಣುತ್ತೇವೆ. ಕಲಿಕಾಂಶದ ಕಠಿಣತೆಯೂ ಇಲ್ಲಿ ಗಮನಿಸಬೇಕಾದ ಅಂಶವಾಗಿರುತ್ತದೆ. ಸಾಮಾನ್ಯವಾಗಿ ತರಗತಿಯೊಂದು ಸರಾಸರಿ ಮಟ್ಟದ ವಿದ್ಯಾರ್ಥಿಗಳನ್ನು ಪ್ರತಿನಿಧಿಸುವುದರಿಂದ ಸುಲಭ ಹಾಗೂ ಕಠಿಣ ಪ್ರಶ್ನೆಗಳಿಗಿಂತ, ಸರಾಸರಿ ಪ್ರಶ್ನೆಗಳು ಹೆಚ್ಚಿರುವಂತೆ ಯೋಜಿಸುವುದು ಅನಿವಾರ್ಯವಾಗುತ್ತದೆ.

ಕಠಿಣತೆ ಆಧರಿಸಿ, ಪ್ರಶ್ನೆಗಳನ್ನು ರೂಪಿಸುವಾಗ ಈ ಪ್ರಮಾಣೀಕೃತ ಪ್ರತಿಶತ ಪ್ರಮಾಣವನ್ನು ಬಳಸಬಹುದಾಗಿದೆ.

| ಕ್ರ.ಸಂ. | ಕಠಿಣತೆಯ ಮಟ್ಟ | ಶೇಖಡಾವಾರು |
|---|---|---|
| 1 | ಸುಲಭ | 30% |
| 2 | ಸರಾಸರಿ | 50% |
| 3 | ಕಠಿಣ | 20% |

## III. ಉದ್ದೇಶದ ಆಯಾಮ:

ಉದ್ದೇಶಗಳು ಬೋಧನೆ / ಕಲಿಕೆಯ ಅಂತಿಮ ಫಲಗಳಾಗಿದ್ದು, ನಿರ್ದಿಷ್ಟ ಬೋಧನಾ ಉದ್ದೇಶಗಳು ಹಾಗೂ ಪರೀಕ್ಷಾ ಉದ್ದೇಶಗಳನ್ನು ಇಲ್ಲಿ ಗುರುತಿಸಬಹುದಾಗಿದೆ.

**ನಿರ್ದಿಷ್ಟ ಬೋಧನಾ ಉದ್ದೇಶಗಳು**

ಉದ್ದೇಶಗಳು ಬೋಧನೆ / ಕಲಿಕೆಯ ಅಂತಿಮ ಫಲಗಳಾಗಿದ್ದು, ನಿರ್ದಿಷ್ಟ ಬೋಧನಾ ಉದ್ದೇಶಗಳು ಹಾಗೂ ಪರೀಕ್ಷಾ ಉದ್ದೇಶಗಳನ್ನು ಇಲ್ಲಿ ಗುರುತಿಸಬಹುದಾಗಿದೆ.

- ತರಗತಿ ಸನ್ನಿವೇಶದಲ್ಲಿ ಸಾಧಿಸಬಹುದಾದ ಉದ್ದೇಶಗಳನ್ನು ನಿರ್ದಿಷ್ಟ ಬೋಧನಾ ಉದ್ದೇಶಗಳು ಎನ್ನುವರು.

**ಪರೀಕ್ಷಾ ಉದ್ದೇಶಗಳು**

- ಪರೀಕ್ಷಾಂಶಗಳನ್ನು ರಚಿಸಲು ಸಂರಚಿಸಿಕೊಂಡಿರುವ ನಿರ್ದಿಷ್ಟ ಸ್ವಭಾವದ ಉದ್ದೇಶಗಳನ್ನು 'ನಿರ್ದಿಷ್ಟ ಉದ್ದೇಶಗಳು' ಎನ್ನುವರು.
- ಗಮನಿಸಿ: ಪರೀಕ್ಷಾ ಉದ್ದೇಶಗಳು ಪರೀಕ್ಷಾ ಫಲಿತಗಳಲ್ಲಿ ಪ್ರತಿಫಲಿಸುತ್ತವೆ.

ಭಾಷಾ ಕಲಿಕೆಯನ್ನು ಉದ್ದೇಶ ಆಧಾರಿತವಾಗಿ ಮೌಲ್ಯಮಾಪಿಸುವುದು ಪ್ರಮುಖವಾಗುತ್ತದೆ. ಭಾಷಾ ಮೌಲ್ಯಮಾಪನದಲ್ಲಿ ಈ ಕೆಳಗಿನ ಉದ್ದೇಶಗಳನ್ನು ಗುರುತಿಸಬಹುದಾಗಿದೆ.

**1. ಅರ್ಥಗ್ರಹಿಕೆ ಉದ್ದೇಶ**

ಅರ್ಥಗ್ರಹಿಕೆ ಉದ್ದೇಶಗಳು ಮಕ್ಕಳ ಜ್ಞಾನಾತ್ಮಕ ಹಾಗೂ ಅರ್ಥಗ್ರಹಿಕೆಯನ್ನು ಉದ್ದೇಶವನ್ನು ಮೌಲ್ಯಮಾಪಿಸುತ್ತವೆ.

ಲೇಖಕರ ಹೆಸರು, ಪುಸ್ತಕದ ಹೆಸರು, ಕಾವ್ಯನಾಮ, ಪ್ರಶಸ್ತಿಗಳು, ಪಠ್ಯಭಾಗದಲ್ಲಿ ಬರುವ ಪಾತ್ರಗಳು ಇತ್ಯಾದಿಗಳ ಕುರಿತಂತೆ ಸಾಹಿತ್ಯಿಕ ನೆಲೆಯಲ್ಲಿ ಜ್ಞಾನಾತ್ಮಕ ಉದ್ದೇಶಗಳನ್ನು ಆಧರಿಸಿ, ಪಶ್ನೆಗಳನ್ನು ರೂಪಿಸಬಹುದಾಗಿದೆ.
ಉದಾಹರಣೆಗೆ,

**ವಿದ್ಯಾರ್ಥಿಯು 'ಅನಿಕೇತನ' ಪದ್ಯದ ಕರ್ತೃವನ್ನು ಸ್ಮರಿಸುತ್ತಾನೆ**
**ಸೂಕ್ತ ಉತ್ತರವನ್ನು ಆರಿಸಿರಿ.**
'ಅನಿಕೇತನ' ಪದ್ಯವನ್ನು ರಚಿಸಿದವರು ________
ಅ) ದ.ರಾ.ಬೇಂದ್ರೆ ಬ) ಪು.ತಿ.ನ ಕ) ಕುವೆಂಪು ಡ) ಬಿ.ಎಂ.ಶ್ರೀ

ಪದಗಳ ಅರ್ಥ, ವಿರುದ್ಧಾರ್ಥಕ, ಪದ್ಯಗಳ ಭಾವಾರ್ಥ, ಸಂದರ್ಭ ಇತ್ಯಾದಿ ಅರ್ಥಗ್ರಹಿಕೆಯನ್ನು ಪರೀಕ್ಷಿಸುವ ಉದ್ದೇಶ ಆಧರಿಸಿ, ಪ್ರಶ್ನೆ ರೂಪಿಸಬಹುದಾಗಿದೆ.
ಜಾಗ್ರತೆ,
ಉದಾಹರಣೆಗೆ
**ವಿದ್ಯಾರ್ಥಿಯು ಜಾಗ್ರತೆ, ಉರುವ, ಕನಲಿಕೆ, ಜಾಡು ಪದಗಳಿಗೆ ಅರ್ಥ ಹೊಂದಿಸುತ್ತಾನೆ.**

**ಹೊಂದಿಸಿ ಬರೆಯಿರಿ**

| ಪಟ್ಟಿ 'ಅ' | ಪಟ್ಟಿ 'ಬ' |
|---|---|
| 1. ಜಾಗ್ರತೆ | ಅ) ಎಚ್ಚರ |
| 2. ಉರುವ | ಆ) ಕೋಪ |
| 3. ಕನಲಿಕೆ | ಇ) ಶ್ರೇಷ್ಠ |
| 4. ಜಾಡು | ಈ) ಸುಳಿವು |
| | ಉ) ಬೇಸರ |

**ಸಂದರ್ಭದ ಅರ್ಥಗ್ರಹಿಕೆಯ ಉದ್ದೇಶ**
**ವಿದ್ಯಾರ್ಥಿಯು ದತ್ತ ಪದ್ಯಭಾಗದ ಭಾವಾರ್ಥವನ್ನು ಸಂದರ್ಭ ಸಹಿತ ವಿವರಿಸುತ್ತಾನೆ.**
ಪಂಚಭೂತದಾಂಗ ವಂಚನೆ ಕಂಡಿ
ಕಣ್ಣಿನಂಚಿನಾಗ ಹೊಸಜಗ ಕಂಡಿ
ಸೊನ್ನಿಗಿ ಆಕಾರ ಬರದೇನಂದಿ
ಬಯಲಿಗೆ ಗೋಡೆ ಕಟ್ಟೇನಂದಿ
ಸಚರಾಚರಗಳ ರಚನ ಮಾಡುದಕ
ಬೇರೊಬ್ಬ ಸೂರ್ಯನ ತರತೇನಂದಿ ।

**ಪ್ರಶ್ನಾಂಶ**
**ಈ ಕೆಳಗಿನ ಒಂದು ಪದ್ಯದ ಭಾವವನ್ನು ಸಂದರ್ಭ ಸಹಿತ ವಿವರಿಸಿ.**
ಪಂಚಭೂತದಾಂಗ ವಂಚನೆ ಕಂಡಿ
ಕಣ್ಣಿನಂಚಿನಾಗ ಹೊಸಜಗ ಕಂಡಿ
ಸೊನ್ನಿಗಿ ಆಕಾರ ಬರದೇನಂದಿ
ಬಯಲಿಗೆ ಗೋಡೆ ಕಟ್ಟೇನಂದಿ
ಸಚರಾಚರಗಳ ರಚನ ಮಾಡುದಕ
ಬೇರೊಬ್ಬ ಸೂರ್ಯನ ತರತೇನಂದಿ ।

**2. ಅಭಿವ್ಯಕ್ತಿ ಉದ್ದೇಶ**

ಅನ್ವಯ ಮತ್ತು ಕೌಶಲಗಳ ಉದ್ದೇಶಗಳನ್ನು ಮೌಲ್ಯಮಾಪಿಸುತ್ತವೆ.

ವ್ಯಾಕರಣ, ಛಂದಸ್ಸಿನ ನಿಯಮಗಳನ್ನು ಅನ್ವಯಿಸುವ ಪ್ರಶ್ನೆಗಳನ್ನು ಇಲ್ಲಿ ಜೋಡಿಸಬಹುದಾಗಿದೆ. ಸಂಧಿ, ಸಮಾಸ ಇತ್ಯಾದಿಗಳ ಪ್ರಶ್ನೆಗಳನ್ನು ಇಲ್ಲಿ ಹೊಂದಿಸಬಹುದಾಗಿದೆ.
ಕೌಶಲದ ಉದ್ದೇಶಗಳನ್ನು ಭಾಷಾ ಕೌಶಲಗಳ ಕುರಿತಂತೆ, ಪ್ರಶ್ನೆಗಳನ್ನು ಜೋಡಿಸಬಹುದಾಗಿದೆ.

ಉದಾಹರಣೆಗೆ,
ವಿದ್ಯಾರ್ಥಿಯು 'ನಿರಪೇಕ್ಷೆ' ಪದವನ್ನು ಸ್ವಂತವಾಕ್ಯದಲ್ಲಿ ಪ್ರಯೋಗಿಸುತ್ತಾನೆ.
ಪ್ರಶ್ನೆ
'ನಿರಪೇಕ್ಷೆ' ಎಂಬ ಪದವನ್ನು ಬಳಸಿ ಒಂದು ಅರ್ಥಪೂರ್ಣವಾದ ವಾಕ್ಯವನ್ನು ರಚಿಸಿ.

**3. ರಸಾಸ್ವಾದನಾ ಉದ್ದೇಶ**

ಈ ಉದ್ದೇಶದ ಹಿನ್ನೆಲೆಯಲ್ಲಿ ವಿದ್ಯಾರ್ಥಿ ಒಂದು ಪದ್ಯವನ್ನು ಎಷ್ಟರಮಟ್ಟಿಗೆ ಆನಂದಿಸಬಲ್ಲ ಎಂದು ಗುರುತಿಸಿಕೊಳ್ಳುತ್ತೇವೆ. ಒಂದು ಕವನ/ನಾಟಕ/ಗದ್ಯಭಾಗವನ್ನು ವಿದ್ಯಾರ್ಥಿ ಮೆಚ್ಚಿಕೊಂಡನೇ?ಳೇ? ಹಾಗಿದ್ದರೆ ಅದಕ್ಕೆ ಕಾರಣವೇನು ಎಂದು ಗಮನಿಸುತ್ತೇವೆ.
ಈ ಉದ್ದೇಶವನ್ನು ಆಧರಿಸಿ, ರೂಪಿಸಬಹುದಾದ ಪ್ರಶ್ನೆ:

ಈ ಕವನ ನಿನಗೆ ಮೆಚ್ಚುಗೆಯಾಗಲು ಕಾರಣವೇನು?

ಉದ್ದೇಶ ಆಧರಿಸಿ, ಪ್ರಶ್ನೆಗಳನ್ನು ರೂಪಿಸುವಾಗ ಈ ಪ್ರಮಾಣವನ್ನು ಬಳಸಬಹುದಾಗಿದೆ.

| ಉದ್ದೇಶ | ಉದ್ದೇಶಗಳ ವರ್ಗೀಕರಣ | ಶೇಖಡಾವಾರು ಪ್ರಮಾಣ |
|---|---|---|
| ಅರ್ಥಗ್ರಹಿಕೆ | ಜ್ಞಾನ | 40% |
| | ಗ್ರಹಿಕೆ | 30% |
| ಅಭಿವ್ಯಕ್ತಿ | ಅನ್ವಯ | 10% |
| | ಕೌಶಲ | 10% |
| ರಸಾಸ್ವಾದನೆ | ಪ್ರಶಂಸೆ | 10% |

## IV. ಪ್ರಶ್ನೆಯ ವಿಧದ ಆಯಾಮ:

ವಿವಿಧ ರೀತಿಯ ಪ್ರಶ್ನೆಗಳನ್ನು ರೂಪಿಸಿ, ಮೌಲ್ಯಮಾಪನದಲ್ಲಿ ಜೋಡಿಸುವುದು ಅವಶ್ಯಕವಾಗಿರುತ್ತದೆ. ಪ್ರಶ್ನೆಯ ವಿಧಗಳೆಂದರೆ,

**1. ಪ್ರಬಂಧ ಮಾದರಿಯ ಪ್ರಶ್ನೆಗಳು:**

ದೀರ್ಘ ಉತ್ತರವನ್ನು ಅಪೇಕ್ಷಿಸುವ ಪ್ರಶ್ನೆಗಳನ್ನು ಪ್ರಬಂಧ ಮಾದರಿ ಪ್ರಶ್ನೆಗಳು ಎನ್ನುವರು.
ಉತ್ತರದ ದೀರ್ಘತೆಯನ್ನು ಹೀಗೆ ನಿರ್ಧರಿಸಬಹುದಾಗಿದೆ.

**ಕಿರಿಯ ಪ್ರಾಥಮಿಕ ಹಂತ:** ಮಕ್ಕಳ ಮಾನಸಿಕ ಮಟ್ಟ ಈ ಹಂತದಲ್ಲಿ, ಪರಿಪಕ್ವವಾಗಿಲ್ಲದಿರುವ ಕಾರಣ, ಈ ಹಂತದಲ್ಲಿ ಪ್ರಬಂಧ ಮಾದರಿಯ ಪ್ರಶ್ನೆಗಳಿಗೆ ಉತ್ತರಿಸುವುದು ಕಷ್ಟವಾಗುತ್ತದೆಯಾದ್ದರಿಂದ, ಈ ಹಂತದಲ್ಲಿ ಯಾವುದೇ ಪ್ರಬಂಧ ಮಾದರಿಯ ಪ್ರಶ್ನೆಗಳಿಗೆ ಅವಕಾಶವಿರುವುದಿಲ್ಲ.

**ಹಿರಿಯ ಪ್ರಾಥಮಿಕ ಹಂತ:** ಹಿರಿಯ ಪ್ರಾಥಮಿಕ ಹಂತದಲ್ಲಿ, ಸ್ವಲ್ಪಮಟ್ಟಿಗೆ ಬರವಣಿಗೆ ಸಾಮರ್ಥ್ಯ ಅಭಿವೃದ್ಧಿಯಾಗುವುದರಿಂದ, ಈ ಹಂತದಲ್ಲಿ, 7 ರಿಂದ 8 ಸಾಲುಗಳಲ್ಲಿ ಉತ್ತರ ನಿರೀಕ್ಷಿಸುವ ಪ್ರಶ್ನೆಗಳನ್ನು ಹೊಂದಿಸಬೇಕಾಗುತ್ತದೆ.

**ಪ್ರೌಢ ಹಂತ:** ಪ್ರೌಢಶಾಲಾ ಹಂತದಲ್ಲಿ ಮಕ್ಕಳ ಪ್ರೌಢಬರಹ ರೂಢಿಯಾಗಬೇಕಾದ ಕಾರಣ, ಪ್ರಬಂಧ ಮಾದರಿಯ ಪ್ರಶ್ನೆಗಳನ್ನು ಈ ಹಂತದಲ್ಲಿ ಉನ್ನತೀಕರಿಸಬೇಕಾಗುತ್ತದೆ. ಈ ಹಂತದಲ್ಲಿ 10 ರಿಂದ 15 ವಾಕ್ಯಗಳಲ್ಲಿ ಉತ್ತರಿಸುವ ಪ್ರಶ್ನೆಗಳು ಇರುವಂತೆ ನೋಡಿಕೊಳ್ಳಬೇಕಾಗುತ್ತದೆ.

**ಪದವಿ ಹಂತ:** ಪದವಿ ಹಂತದ ಸಮಯಕ್ಕೆ ವಿದ್ಯಾರ್ಥಿಗಳಲ್ಲಿ ಉನ್ನತ ಭಾಷಾ ಸಾಮರ್ಥ್ಯಗಳಾದ ವಿಸ್ತರಣೆ, ಸಂಕ್ಷೇಪಣೆ ವಿವರಣೆ ಇತ್ಯಾದಿ ವಿಕಸನಗೊಂಡಿರುತ್ತದೆಯಾದ್ದರಿಂದ ಇಲ್ಲಿ ಪ್ರಬಂಧ ಮಾದರಿಯ ಪ್ರಶ್ನೆಗಳಿಗೆ ಪ್ರಾಧಾನ್ಯತೆ ನೀಡಲಾಗುತ್ತದೆ. ಸರಿ ಸುಮಾರು 2 ರಿಂದ 3 ಪುಟ ಉತ್ತರ ನಿರೀಕ್ಷಿಸುವ ಪ್ರಶ್ನೆಗಳನ್ನು ಜೋಡಿಸಲಾಗುತ್ತದೆ.

**ಗಮನಿಸಿ:** ಉನ್ನತ ಹಂತದ ಪ್ರಶ್ನೆಗಳಲ್ಲಿ ವಿಷಯಕ್ಕೆ ಸಂಬಂಧಿಸಿದಂತೆ, ವಿವರಿಸಿ, ಚರ್ಚಿಸಿ, ವಿಶ್ಲೇಷಿಸಿ, ವಿಮರ್ಶಿಸಿ, ಸಂಗ್ರಹಿಸಿ, ಹೋಲಿಕೆ ಬರೆಯಿರಿ, ವ್ಯತ್ಯಾಸ ತಿಳಿಸಿ, ಮೌಲ್ಯಮಾಪನ ಮಾಡಿರಿ, ವ್ಯಾಖ್ಯಾನಿಸಿ, ನಿರೂಪಿಸಿ, ರಚಿಸಿ ಇತ್ಯಾದಿ ಪ್ರಶ್ನಾ ನಿರ್ದಿಷ್ಟಕಗಳನ್ನು ಬಳಸಬಹುದಾಗಿದೆ.
ಉದಾಹರಣೆಗೆ,

ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಒಂದು** ಪ್ರಶ್ನೆಗೆ **ಮೂರು** ಪುಟಗಳಷ್ಟು ಉತ್ತರಿಸಿ. **1 x 10=10**

1. 'ಸರಸದ ಮಾತು ವಿರಸವಾಯಿತು' ಎಂಬ ಮಾತು ಮದಲಿಂಗನ ಕಣಿವೆ ಸ್ಥಳಕಥೆಯಲ್ಲಿ ನಿರೂಪಿತವಾದ ಬಗೆಯನ್ನು ವಿವರಿಸಿ.

**2. ಸಂಕ್ಷಿಪ್ತ ಮಾದರಿಯ ಪ್ರಶ್ನೆಗಳು:**

ಸಂಕ್ಷಿಪ್ತ ಅಥವಾ ಸಂಗ್ರಹ ಮಾದರಿಯ ಉತ್ತರವವನ್ನು ಅಪೇಕ್ಷಿಸುವ ಪ್ರಶ್ನೆಗಳಿಗೆ ಸಂಕ್ಷಿಪ್ತ ಮಾದರಿಯ ಪ್ರಶ್ನೆಗಳು ಎನ್ನುವರು.

ಉತ್ತರದ ಸಂಕ್ಷಿಪ್ತತೆಯನ್ನು ಹೀಗೆ ನಿರ್ಧರಿಸಬಹುದಾಗಿದೆ.

**ಕಿರಿಯ ಪ್ರಾಥಮಿಕ ಹಂತ:** ಪದಪುಂಜ ಅಥವಾ ಒಂದು ವಾಕ್ಯದಲ್ಲಿ ಉತ್ತರಿಸುವ ಪ್ರಶ್ನೆಗಳನ್ನು ನೀಡಬಹುದು.
**ಹಿರಿಯ ಪ್ರಾಥಮಿಕ ಹಂತ**: ಒಂದೆರಡು ವಾಕ್ಯಗಳಲ್ಲಿ ಉತ್ತರಿಸಬಹುದಾದ ಪ್ರಶ್ನೆಗಳನ್ನು ನೀಡಬಹುದು.
**ಪ್ರೌಢ ಹಂತ:** ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸುವ ಪ್ರಶ್ನೆಗಳನ್ನು ನೀಡಬಹುದು.
**ಪದವಿ ಹಂತ:** ಅರ್ಧ ಪುಟದಷ್ಟು ಉತ್ತರಿಸುವ ಪ್ರಶ್ನೆಗಳನ್ನು ನೀಡಬಹುದು.

**ಗಮನಿಸಿ:** ವಿಷಯಕ್ಕೆ ಸಂಬಂಧಿಸಿದಂತೆ, ಹೆಸರಿಸಿ, ಪಟ್ಟಿಮಾಡಿ, ಸಂಕ್ಷೇಪಗೊಳಿಸಿ, ಉದಾಹರಿಸಿ, ವ್ಯಾಖ್ಯಾನ ಬರೆಯಿರಿ, ಟಿಪ್ಪಣಿ ಬರೆಯಿರಿ, ಸಂದರ್ಭ ಬರೆಯಿರಿ, ಸ್ವಂತ ವಾಕ್ಯದಲ್ಲಿ ಪ್ರಯೋಗಿಸಿ ಇತ್ಯಾದಿ ಪ್ರಶ್ನಾ ನಿರ್ದಿಷ್ಟಕಗಳನ್ನು ಬಳಸಬೇಕು.

ಉದಾಹರಣೆ:

**ಒಂದು ವಾಕ್ಯದಲ್ಲಿ ಉತ್ತರಿಸಿ.**

ಅ) ಪರಮೇಶ್ವರ ಪಾರ್ವತಿಯಿಂದ ದೂರವಾಗಲು ಯಾವ ವೇಷವನ್ನು ಧರಿಸಿದನು?
ಆ) ಶಿವನೊಡನೆ ಹೋರಾಡಿ ಪಾಶುಪತವನ್ನು ಪಡೆದವನಾರು?
ಇ) ನಾಯಿಗೆ ಹಿತವೆನಿಸುವ 'ಸೊದೆಕುಡಿತ'ವಾವುದೆಂದು ಕವಿ ಭಾವಿಸುತ್ತಾರೆ?
ಈ) ರಾಯರ ಹೆಂಡತಿಯ ಹೆಸರೇನು?
ಉ)'ಮರೆತೇನೆಂದರ ಮರೆಯಲಿ ಹ್ಯಾಂಗ' ಕವನವನ್ನು ಕಂಬಾರರ ಯಾವ ಕವನ ಸಂಕಲನದಿಂದ ಆರಿಸಲಾಗಿದೆ?

**ವಸ್ತುನಿಷ್ಠ ಪರೀಕ್ಷೆ:**

ವಸ್ತುನಿಷ್ಟವಾದ ಉತ್ತರವನ್ನು ಅಪೇಕ್ಷಿಸುವ ಪ್ರಶ್ನೆಗಳನ್ನು ವಸ್ತುನಿಷ್ಟ ಮಾದರಿ ಪ್ರಶ್ನೆಗಳು ಎನ್ನುವರು.

ಯಾರೇ ಮಾಪನಮಾಡಿದರೂ ಒಂದೇ ಮೌಲ್ಯ ನೀಡುವಂತಹ ಒಂದೇ ಉತ್ತರವನ್ನು ಅಪೇಕ್ಷಿಸುವ ಪ್ರಶ್ನೆಗಳನ್ನು ಹೊಂದಿರುವ ಪರೀಕ್ಷೆಗಳೇ 'ವಸ್ತುನಿಷ್ಠ ಪರೀಕ್ಷೆ' ಎನ್ನುವರು.

**ವಸ್ತುನಿಷ್ಠ ಮಾದರಿ ಪ್ರಶ್ನೆಯ ಸ್ವರೂಪ**

- ಈ ರೀತಿಯ ಪ್ರಶ್ನೆಗಳು ಒಂದೇ ಉತ್ತರವನ್ನು ಹೊಂದಿರುತ್ತದೆ.
- ಪ್ರತಿಯೊಬ್ಬರಿಗೂ ಉತ್ತರಿಸಲು ಒಂದೇ ರೀತಿಯ ಸಮಯಾವಕಾಶವನ್ನು ಅಪೇಕ್ಷಿಸುತ್ತದೆ.
- ಯಾರೇ ಮೌಲ್ಯಮಾಪನ ಮಾಡಿದರೂ ಒಂದೇ ಮೌಲ್ಯವನ್ನು ಪಡೆಯುವ ಪ್ರಶ್ನೆಗಳಾಗಿರುತ್ತವೆ.
- ಉದ್ದೇಶ ಆಧಾರಿತ ಪ್ರಶ್ನೆಗಳಾಗಿರುತ್ತವೆ.
- ಒಂದೇ ಬಗೆಯ ಪ್ರಶ್ನೆಗಳನ್ನು ಒಂದು ಗುಂಪಿನಲ್ಲಿ ಇಡಲಾಗುತ್ತದೆ.

ವಸ್ತುನಿಷ್ಠ ಮಾದರಿ ಪ್ರಶ್ನೆಗಳಲ್ಲಿ  ಪ್ರಧಾನವಾಗಿ ಎರಡು ಬಗೆಗಳನ್ನು ಕಾಣಬಹುದು.

**ವಸ್ತುನಿಷ್ಠ ಮಾದರಿ ಪ್ರಶ್ನೆಗಳು**

ಸ್ಮರಣ ಮಾದರಿ ಪ್ರಶ್ನೆಗಳು — ಗುರುತಿಸುವಿಕೆ ಮಾದರಿ ಪ್ರಶ್ನೆಗಳು

**ಸ್ಮರಣ ಮಾದರಿ ಪ್ರಶ್ನೆಗಳು:**

ಈ ರೀತಿಯ ಪ್ರಶ್ನೆಗಳಲ್ಲಿ ಪ್ರಶ್ನೆಯನ್ನು ಮಾತ್ರ ಪೂರೈಸಲಾಗುತ್ತದೆ ಹಾಗೂ ಪರೀಕ್ಷಾರ್ಥಿಯು ಪ್ರಶ್ನಾಂಶಕ್ಕೆ ಸ್ಮರಣೆಯ ಮುಖಾಂತರ ಉತ್ತರಿಸಬೇಕಾಗುತ್ತದೆ. ಈ ರೀತಿಯ ಪ್ರಶ್ನೆಗಳನ್ನು **'ಪೂರೈಕೆ ವಿಧದ ಪ್ರಶ್ನೆ'**ಗಳೆಂದೂ ಕೂಡಾ ಕರೆಯಲಾಗುತ್ತದೆ.

ಉದಾಹರಣೆಗೆ, ಸರಳ ಸ್ಮರಣ ಮಾದರಿ ಪ್ರಶ್ನೆಗಳು ಹಾಗೂ ಪೂರಣ ಮಾದರಿ ಪ್ರಶ್ನೆಗಳು

**ಸರಳ ಸ್ಮರಣ ಮಾದರಿ ಪ್ರಶ್ನೆಗಳು:**

ಪೂರ್ಯೆಕೆ ವಿಧದ ಪ್ರಶ್ನೆಗಳು ಇವಾಗಿದ್ದು, ಪದ, ಪದಪುಂಜಗಳಲ್ಲಿ ಉತ್ತರಿಸುವ ಪ್ರಶ್ನೆಗಳಾಗಿದ್ದು, ಇಲ್ಲಿ ಪ್ರಶ್ನೆಗಳಿಗೆ ಉತ್ತರವನ್ನು ಮಗು ಸ್ಮರಿಸುವುದರ ಮುಖಾಂತರವೇ ಉತ್ತರಿಸುವ ಪ್ರಶ್ನೆಗಳಾಗಿರುತ್ತವೆ.

ಉದಾಹರಣೆಗೆ,

ಈ ಕೆಳಗಿನ ಕೃತಿಗಳ ಲೇಖಕರನ್ನು ಹೆಸರಿಸಿ.

ಶ್ರೀರಾಮಾಯಣ ದರ್ಶನಂ, ಸಖೀಗೀತ, ಚೋಮನದುಡಿ, ಗೃಹಭಂಗ

**ಪೂರಣ ಪ್ರಶ್ನೆ ಮಾಲಿಕೆ / ಬಿಟ್ಟಸ್ಥಳ ತುಂಬಿರಿ:**

ನಿರ್ದಿಷ್ಟ ಉದ್ದೇಶ, ಸಾಮರ್ಥ್ಯದ ಗಳಿಕೆಯನ್ನು ಪರೀಕ್ಷಿಸುವ ಸಲುವಾಗಿ, ಪೂರಣಾಪೇಕ್ಷಿತ ಸ್ಥಳವನ್ನು ತೆರೆದಿಟ್ಟು, ಯುಕ್ತ ಪದ ಅಥವಾ ಪದಗುಚ್ಛವನ್ನು ಸ್ಮರಿಸಿ, ತುಂಬಿ ಉತ್ತರಿಸುವಂತೆ ನಿರೀಕ್ಷಿಸುವ ಪ್ರಶ್ನೆಗಳಿಗೆ 'ಪೂರಣ ವಿಧದ ಪ್ರಶ್ನೆಗಳು' ಅಥವಾ 'ಬಿಟ್ಟ ಪದ ತುಂಬಿರಿ' ಪ್ರಶ್ನೆಗಳು ಎನ್ನುವರು.

**ಗುರುತಿಸುವಿಕೆ ಮಾದರಿ ಪ್ರಶ್ನೆಗಳು:**

ಪ್ರಶ್ನೆಗಳಿಗೆ ಉತ್ತರದ ಆಯ್ಕೆಯನ್ನು ಒದಗಿಸಿ, ಉತ್ತರವನ್ನು ಗುರುತಿಸಲು ಅಥವಾ ಆರಿಸಲು ಅವಕಾಶವನ್ನು ಒದಗಿಸುವುದೋ ಅಂತಹ ಪ್ರಶ್ನೆಗಳು 'ಗುರುತಿಸುವಿಕೆ' ಮಾದರಿ ಪ್ರಶ್ನೆಗಳು ಎನಿಸುತ್ತವೆ. ಇಲ್ಲಿ ಉತ್ತರಗಳ ಆಯ್ಕೆಗು ಅವಕಾಶ ಇರುವ ಕಾರಣ, 'ಆಯ್ಕೆ ಮಾದರಿ ಪ್ರಶ್ನೆಗಳು' ಎಂದೂ ಗುರುತಿಸಲಾಗುತ್ತದೆ.

ಆಯ್ಕೆ ಮಾದರಿ ಪ್ರಶ್ನೆಗಳಲ್ಲಿ ಹಲವು ಬಗೆಗಳಿದ್ದು, ಅವುಗಳಲ್ಲಿ ಕೆಲವನ್ನು ಹೀಗೆ ಗುರುತಿಸಬಹುದಾಗಿದೆ.

**ಅ) ಜೋಡಣಾ ಪರೀಕ್ಷೆ**

ಎರಡು ಅಥವಾ ಹೆಚ್ಚು ಪಟ್ಟಿಗಳಲ್ಲಿ ಕೊಟ್ಟಿರುವ ಸಂಬಂಧವುಳ್ಳ ವಿಷಯಗಳ ಅನುರೂಪವಾದ ಸಂಗತಿಗಳನ್ನು ಆರಿಸಿ, ಜೋಡಿಸುವ ಪ್ರತಿಕ್ರಿಯೆಯನ್ನು ವಿದ್ಯಾರ್ಥಿಯು ತೋರಬೇಕಾಗುವ ಪರೀಕ್ಷೆ, 'ಜೋಡಣಾ ಪರೀಕ್ಷೆ' ಎನಿಸುತ್ತದೆ.

ಉದಾಹರಣೆ:

| ಪಟ್ಟಿ 'ಅ' | ಪಟ್ಟಿ 'ಬ' |
|---|---|
| 1. ಸವರ್ಣದೀರ್ಘ ಸಂಧಿ | ಅ) ಅಣ್ಣಾ, ಇತ್ತ ಬಾ |
| 2. ಆಗಮಸಂಧಿ | ಆ) ದೇವಾಲಯ |
| 3. ಪ್ರಕೃತಿಭಾವ | ಇ) ಹಳಗನ್ನಡ |
| 4. ಯಣ್‌ಸಂಧಿ | ಈ) ಮನಶ್ಶುದ್ಧಿ |
| 5. ಜಸ್ತ್ವಸಂಧಿ | ಉ) ಮನ್ವಂತರ |

ಇಲ್ಲಿ ಪಟ್ಟಿ 'ಅ'ನಲ್ಲಿರುವ ಪ್ರತಿಯೊಂದು ಅಂಶಗಳಿಗೂ ಪಟ್ಟಿ 'ಬ'ನಲ್ಲಿ ಸರಿ ಹೊಂದಾಣಿಕೆ ಇದೆ. ಹಾಗಾಗೀ ಉತ್ತಮ ಉದಾಹರಣೆಯಾಗಿದೆ.

**ವರ್ಗೀಕರಣ ಪರೀಕ್ಷೆ**

ಪ್ರತಿ ಗುಂಪಿನಲ್ಲಿ ಇರತಕ್ಕಂತಹ ಅಂಶಗಳಲ್ಲಿನ ಸಾಮ್ಯವನ್ನು ಗುರುತಿಸಿ,ಅವನ್ನೆಲ್ಲಾ ಒಂದು ವರ್ಗವನ್ನಾಗಿ ಮಾಡಿಕೊಂಡು, ಅವಕ್ಕೆ ಹೊಂದದ ಅಂಶವನ್ನು ಪ್ರತ್ಯೇಕವಾಗಿ ನಮೂದಿಸಲಾಗುವ ಪರೀಕ್ಷೆ 'ವರ್ಗೀಕರಣ ಪರೀಕ್ಷೆ' ಎನ್ನುವರು.

ಉದಾಹರಣೆಗೆ,

1.ಲೋಪಸಂಧಿ, ಆಗಮಸಂಧಿ, ಗುಣಸಂಧಿ, ಆದೇಶಸಂಧಿ

ಇಲ್ಲಿ ಗುಣಸಂಧಿಯ ಹೊರತಾಗಿ ಉಳಿದಿಲ್ಲವೂ ಕನ್ನಡ ಸಂಧಿಗಳು. ಆದ್ದರಿಂದ, ಪ್ರತ್ಯೇಕಿಸಬೇಕಾದ ಅಂಶ 'ಗುಣಸಂಧಿ'.

2.ಚಿರತೆ, ಹುಲಿ, ಸಿಂಹ, ಆನೆ.
ಇಲ್ಲಿ 'ಆನೆ'ಯ ಹೊರತಾಗಿ ಉಳಿದೆಲ್ಲವೂ ಮಾಂಸಾಹಾರಿಗಳಾಗಿವೆ.

**ವರ್ಗೀಕರಣ ಪರೀಕ್ಷೆಯ ನಿಯಮಗಳು:**

1. ವರ್ಗೀಕರಣ ಪರೀಕ್ಷೆಯ ಉದ್ದೇಶ ಆಧಾರಿತವಾಗಿರಬೇಕು.
ಉದಾಹರಣೆಗೆ,
ದತ್ತ ಪದಗಳಲ್ಲಿ ನಾಮವಿಶೇಷಣ ಹಾಗೂ ಕ್ರಿಯಾವಿಶೇಷಣ ಪದಗಳನ್ನು ವರ್ಗೀಕರಿಸುತ್ತಾನೆ.
ಬಿಳಿ, ಎಳೆನೀರು ಥಟ್ಟನೆ, ಹೊಳೆ,ಆಂಜನೇಯ, ನಿಧಾನ, ಅವಸರ,

2. ವರ್ಗೀಕರಣ ಪರೀಕ್ಷೆಯಲ್ಲಿ ಕನಿಷ್ಟ ಎರಡು ವರ್ಗಗಳಾದರೂ ಇರಬೇಕು.
ಉದಾಹರಣೆಗೆ, ಸಂಧಿ, ಸಮಾಸ

ಈ ಕೆಳಗಿನ ಪದ ವಿಂಗಡನೆಯನ್ನು ಸಂಧಿ ಸಮಾಸವೆಂದು ವರ್ಗೀಕರಿಸಿ.
ಅರಮನೆ = ಅರಸನ + ಮನೆ
ಮನೆಯಲ್ಲಿ = ಮನೆ + ಅಲ್ಲಿ
ಹೆಬ್ಬಾಗಿಲು = ಹಿರಿದು + ಬಾಗಿಲು
ಅಲ್ಲಿ+ಅಲ್ಲಿ = ಅಲ್ಲಲ್ಲಿ

3. ವರ್ಗೀಕರಣ ಪರೀಕ್ಷೆಗೆ ಸೂಚನೆಗಳು ಅತ್ಯಗತ್ಯ. ಇಲ್ಲವಾದಲ್ಲಿ ವರ್ಗೀಕರಣ ಕಷ್ಟಕರವಾಗಬಹುದು.
ದತ್ತ ಪದಗಳನ್ನು ಸಂಸ್ಕೃತ ಸಂಧಿಪದಗಳು ಹಾಗೂ ಕನ್ನಡ ಸಂಧಿ ಪದಗಳೆಂದು ವರ್ಗೀಕರಿಸಿರಿ.
ಲೋಕೈಕ, ಗಣೇಶ, ದೇವಾಲಯ, ಊರೂರು, ಮನೆಯಲ್ಲಿ, ವಾಙ್ಮಯ

**ಸರಿ–ತಪ್ಪು ಪರೀಕ್ಷೆ**

**ಹೇಳಿಕೆಗಳನ್ನು ನೀಡಿ ಅವುಗಳನ್ನು 'ಸರಿ' ಅಥವಾ 'ತಪ್ಪು' ಎಂದು ಗುರುತಿಸಬೇಕು ಎಂದು ಅಪೇಕ್ಷಿಸುವ ಪ್ರಶ್ನೆಗಳಿವು.ಈ ಪ್ರಶ್ನಾಂಶಗಳನ್ನು ರೂಪಿಸುವಾಗ ಕೆಳಗಿನ ಅಂಶಗಳನ್ನು ಗಮನಿಸಿಕೊಳ್ಳಬೇಕು.**

1. 'ತಪ್ಪು' ಮತ್ತು 'ಸರಿ'ಯಾದ ವಾಕ್ಯಗಳು ಒಂದೇ ಪ್ರಮಾಣದಲ್ಲಿರಬೇಕು
ಉದಾಹರಣೆಗೆ, 6 ಪ್ರಶ್ನೆಗಳಿಗೆ 3 ಸರಿ 3 ತಪ್ಪು
ಕೊಟ್ಟಿರುವ ವಾಕ್ಯಗಳಲ್ಲಿ ಅರ್ಧದಷ್ಟು ಸರಿಯಾಗಿದೆ, ಅರ್ಧದಷ್ಟು ತಪ್ಪಾಗಿದೆ ಎಂದು ವಿದ್ಯಾರ್ಥಿಗಳಿಗೆ ತಿಳಿಸಬೇಕು.

2. ಇಂತಹ ಪ್ರಶ್ನೆಗಳಲ್ಲಿ ಋಣಾಂಕವನ್ನು ಗುರುತಿಸುವ ಕ್ರಮ ಇರಬೇಕು.
ಹೀಗೆ ಋಣಾಂಕವನ್ನು ಗುರುತಿಸುವ ಕ್ರಮ ಇಲ್ಲವಾದಲ್ಲಿ ಎಲ್ಲಾ ಪ್ರಶ್ನೆಗಳಿಗೂ 'ಸರಿ' ಅಥವಾ ಎಲ್ಲಾ ಪ್ರಶ್ನೆಗಳಿಗೂ 'ತಪ್ಪು' ಎಂದು ಉತ್ತರ ಬರೆದರೆ, ಅರ್ಧದಷ್ಟು ಅಂಕ ಸಿಕ್ಕೇ ಸಿಗುತ್ತದೆ.

3. ಪಠ್ಯಪುಸ್ತಕದಲ್ಲಿರುವಂತೆಯೇ ವಾಕ್ಯಗಳನ್ನು ಆಯ್ಕೆಮಾಡಿ ಕೊಡಬಾರದು. ಪ್ರಶ್ನೆಗಳನ್ನು ಪುನರ್ರಚಿಸಿಕೊಳ್ಳಬೇಕು.

ಕನ್ನಡ ಸಂಸ್ಕೃತ, ಹಿಂದಿ, ಮರಾಠಿ, ಗುಜರಾತಿಗಳ ಆರ್ಯನ್ ಭಾಷಾ ವರ್ಗಕ್ಕಿಂತ ಭಿನ್ನವಾದ ದ್ರಾವಿಡ ಭಾಷಾವರ್ಗಕ್ಕೆ ಸೇರಿದೆ X

ಕನ್ನಡವು ಒಂದು ದ್ರಾವಿಡ ಭಾಷೆಯಾಗಿದೆ √

4. ಹೇಳಿಕೆಗಳು ಒಂದೇ ಅಂಶದ ಜ್ಞಾನವನ್ನು ಪರೀಕ್ಷಿಸುವಂತಿರಬೇಕು

‘ವಿದ್ಯಾರ್ಥಿ ಮಿತ್ರ’ ಇಲ್ಲಿ ಎರಡನೆಯ ಅಕ್ಷರ ವಿಜಾತಿ ಸಂಯುಕ್ತಾಕ್ಷರವಾಗಿದೆ. ಅಂತೆಯೇ ಐದನೆಯ ಅಕ್ಷರವು ಸಜಾತಿ ಸಂಯುಕ್ತಾಕ್ಷರವಾಗಿದೆ. X

‘ಧ್ವಜ’ ಇಲ್ಲಿ ಮೊದಲನೇ ಅಕ್ಷರ ಮಹಾಪ್ರಾಣ, ಎರಡನೇ ಅಕ್ಷರ ‘ಅಲ್ಪಪ್ರಾಣ’ವಾಗಿದೆ.

‘ಮಿತ್ರ’ ಇಲ್ಲಿ ಎರಡನೇ ಅಕ್ಷರ ಸಜಾತಿ ಸಂಯುಕ್ತಾಕ್ಷರವಾಗಿದೆ. √

5. ಮೇಲ್ನೋಟಕ್ಕೆ ‘ಸರಿ’ ಅಥವಾ ‘ತಪ್ಪು’ ಎನಿಸುವ ವಾಕ್ಯಗಳನ್ನು, ಹೇಳಿಕೆಗಳನ್ನು ಕೊಡಬಾರದು.

ಕನ್ನಡ ಕರ್ನಾಟಕದ ಭಾಷೆ

ಪಂಪ ಇಪ್ಪತ್ತೊಂದನೆಯ ಶತಮಾನದ ಜನಪ್ರಿಯ ಕವಿ

ಕುವೆಂಪು ಇಂಗ್ಲೀಷ್ ಭಾಷೆಯ ಕವಿ

‘ಸಾಂಗತ್ಯ’ ಅಪ್ಪಟ ದೇಶೀ ಛಂದಸ್ಸು

**ಸಾದೃಶ್ಯ ಪರೀಕ್ಷೆ**

‘ಹೋಲಿಕೆ’ ಸಾಮರ್ಥ್ಯ ಕುರಿತಂತೆ, ಪ್ರಶ್ನಾಂಶಗಳನ್ನು ಹೊಂದಿರುವ ಪರೀಕ್ಷೆಗೆ ‘ಸಾದೃಶ್ಯ ಪರೀಕ್ಷೆ’ ಎನ್ನುವರು. ಇದನ್ನು ರೂಪಿಸುವಾಗ ಕೆಳಗಿನ ಅಂಶಗಳನ್ನು ಗಮನಿಸಿಕೊಳ್ಳಬೇಕು:

1. ಸಂಬಂಧಿಸಿದ ಅಂಶಗಳಿಗೆ ಮಾತ್ರ ‘ಸಾದೃಶ್ಯ ಪರೀಕ್ಷೆ’ಯನ್ನು ಜೋಡಿಸಬೇಕು.

ಉದಾಹರಣೆಗೆ, ಆದಿತ್ಯ: ಸೂರ್ಯ:: ಸೋಮ: __________

ಇಲ್ಲಿರುವುದು ‘ಅರ್ಥ ಸಾದೃಶ್ಯ’ ಸಂಬಂಧ

2. ಮೊದಲನೇ ಪದಕ್ಕೆ ಸಂಬಂಧಿಸಿದಂತೆ ಎರಡನೇ ಪದ ಇದೆ. ಮೂರನೇ ಪದಕ್ಕೆ ಸಂಬಂಧಿಸಿದಂತೆ ನಾಲ್ಕನೇ ಪದ ಬರೆಯಿರಿ.

ಉದಾಹರಣೆಗೆ, ಸುಲೋಚನ: ಕನ್ನಡಕ:: ಲೋಚನ:_______

3. ಉದ್ದೇಶಾಧಾರಿತವಾಗಿರಬೇಕು.

ಅನುಕರಣಾವ್ಯಯಗಳಿಗೆ ಉದಾಹರಣೆ ಹೊಂದಿಸುವ ಉದ್ದೇಶ

ಬೆಂಕಿ ಹೊತ್ತಿ ಉರಿಯುವುದು : ಧಗಧಗ :: ನೀರು ಹರಿಯುವುದು:___________

4. ಎರಡೆರಡು ವರ್ಗಗಳ ಸಂಬಂಧವನ್ನು ಒಟ್ಟಿಗೆ ಪರೀಕ್ಷಾಂಶವಾಗಿ ಬಳಸಬಾರದು.

ಮನೆ+ಅಲ್ಲಿ=ಮನೆಯಲ್ಲಿ : ‘ಯ’ಕಾರಾಗಮ ಸಂಧಿ:

ತಲೆಯಲ್ಲಿ + ನೋವು ತಲೆನೋವು: ________________

**ಅನುಕ್ರಮಣಿಕೆ ಪರೀಕ್ಷೆ**

ಪದ, ವಾಕ್ಯ ಜೋಡಣೆ, ಕಾಲಾನುಕ್ರಮಣಿಗೆ ಇತ್ಯಾದಿಗಳನ್ನು ಅನುಕ್ರಮಣಿಕೆ ಪರೀಕ್ಷೆಯಲ್ಲಿ ಪರೀಕ್ಷಾಂಶವಾಗಿ ಜೋಡಿಸಬಹುದಾಗಿದೆ. ಇವುಗಳನ್ನು ರೂಪಿಸುವಾಗ ಕೆಳಗಿನ ಅಂಶಗಳನ್ನು ಗಮನಿಸಿಕೊಳ್ಳಬೇಕು.

1. ಉದ್ದೇಶ ಆಧಾರಿತವಾಗಿರಬೇಕು.
   ಉದ್ದೇಶ: ವಾಕ್ಯರಚನೆಯ ಸರಿಯಾದ ಗ್ರಹಿಕೆಯ ಮಾಪನ
   ಅನುಕ್ರಮ ನೆಲೆಯಲ್ಲಿ ದತ್ತವಾಕ್ಯವನ್ನು ಜೋಡಿಸುತ್ತಾನೆ.
   ಹೋದನು ರಾಮನು ಕಾಡಿಗೆ
   1 2 3

2. ಅನುಕ್ರಮಣಿಕೆಗೆ ಸೂತ್ರವನ್ನು ಸ್ಪಷ್ಟವಾಗಿ ಸೂಚಿಸಬೇಕು.
   <ಕರ್ತೃ><ಕರ್ಮ><ಕ್ರಿಯೆ> ಈ ಅನುಕ್ರಮದಲ್ಲಿ ವಾಕ್ಯವನ್ನು ಜೋಡಿಸಿರಿ.
   ಕುಡಿದಳು ಸೀತೆಯು ನೀರನ್ನು
   ಅ) ಸೀತೆಯು ನೀರನ್ನು ಕುಡಿದಳು
   ಬ) ನೀರನ್ನು ಕುಡಿದಳು ಸೀತೆಯು
   ಕ) ನೀರನ್ನು ಸೀತೆಯು ಕುಡಿದಳು
   ಡ) ಕುಡಿದಳು ಸೀತೆಯು ನೀರನ್ನು

3. ಅನುಕ್ರಮಣಿಕೆಗೆ ಕಾಲಾನುಕ್ರಮ ಅಂಶಗಳನ್ನು ಜೋಡಿಸುವಾಗ ಒಂದೇ ಅಂಶದ ವರ್ಗವನ್ನು ಇಟ್ಟುಕೊಂಡು ಜೋಡಿಸಬೇಕು.
   ಉದಾಹರಣೆಗೆ, ಜ್ಞಾನಪೀಠ ಪ್ರಶಸ್ತಿ ವಿಜೇತರು

ಈ ಕೆಳಗಿನ ಕವಿಗಳನ್ನು ಅವರಿಗೆ ಜ್ಞಾನಪೀಠ ಪ್ರಶಸ್ತಿ ದೊರಕಿದ ವರ್ಷಗಳನ್ನು ಆಧರಿಸಿ, ಅನುಕ್ರಮಗೊಳಿಸಿ.

ದ.ರಾ.ಬೇಂದ್ರೆ, ಕುವೆಂಪು, ವಿ.ಕೃ.ಗೋಕಾಕ್, ಶಿವರಾಮಕಾರಂತ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಗಿರೀಶ್ ಕಾರ್ನಾಡ್, ಯು.ಆರ್.ಅನಂತಮೂರ್ತಿ, ಚಂದ್ರಶೇಖರ ಕಂಬಾರ.

ಪ್ರಶ್ನೆಯ ವಿಧಗಳನ್ನು ಆಧರಿಸಿ, ಅಂಕ ವಿತರಣೆ ಇಂತಿರಲಿ.

| ಕ್ರ.ಸಂ. | ಪ್ರಶ್ನೆಯ ವಿಧಗಳು | ಶೇಖಡಾವಾರು |
|---|---|---|
| 1 | ವಸ್ತುನಿಷ್ಠ ಮಾದರಿ | 30 % |
| 2 | ಸಂಕ್ಷಿಪ್ತ ಉತ್ತರ ಮಾದರಿ | 50% |
| 3 | ಪ್ರಬಂಧ ಮಾದರಿ | 20% |
| **ಒಟ್ಟು** | | **100%** |

**ಮೌಲ್ಯಮಾಪನಾಂಶವನ್ನು ನಿರ್ದಿಷ್ಟಪಡಿಸುವಿಕೆ:**
ಮೊದಲಿಗೆ ಮೌಲ್ಯಮಾಪನಾಂಶವನ್ನು ಗುರುತಿಸಿಕೊಳ್ಳಬೇಕು.
1. ಪ್ರತಿ ಕಲಿಕೆಯ ಫಲವನ್ನೇ ಮೌಲ್ಯಮಾಪನದ ಉದ್ದೇಶವಾಗಿ ರೂಪಿಸಿಕೊಳ್ಳಬಹುದು.
   ಉದಾಹರಣೆಗೆ, ಪಾಠಬೋಧನೆಯ ನಂತರ ವಿದ್ಯಾರ್ಥಿಗಳು,
   ಪದಗಳ ಅರ್ಥವನ್ನು ಗ್ರಹಿಸಿಕೊಳ್ಳುತ್ತಾರೆ (ದತ್ತ ವಾಕ್ಯಗಳ ಅರ್ಥ)
   ಸುಸಂಬದ್ಧ ಅರ್ಥವತ್ತಾದ ವಾಕ್ಯಗಳನ್ನು ರಚಿಸುತ್ತಾರೆ.
   ಸೃಜನಶೀಲವಾಗಿ ಚಿಂತನೆ ನಡೆಸುತ್ತಾರೆ.

2. ಉದ್ದೇಶಗಳು ಭಾಷಾ ಕಲಿಕೆಯ ಯಾವ ಸಾಮರ್ಥ್ಯವನ್ನು ಪ್ರತಿನಿಧಿಸುತ್ತವೆ ಎಂಬುದನ್ನು ನಿರ್ದಿಷ್ಟಪಡಿಸಿಕೊಳ್ಳಬೇಕು.

ಪದ/ವಾಕ್ಯಗಳ ಅರ್ಥಗ್ರಹಣೆ – ಅರ್ಥಗ್ರಹಿಕೆ

ಸುಸಂಬದ್ಧ ಅರ್ಥವತ್ತಾದ ವಾಕ್ಯರಚನೆ – ಅಭಿವ್ಯಕ್ತಿ

ಸೃಜನಶೀಲ ಚಿಂತನೆ – ರಸಾಸ್ವಾದನೆ

3. ಭಾಷಾಸಾಮರ್ಥ್ಯ ಅಭಿವ್ಯಕ್ತಿಗೊಳ್ಳುವ ಭಾಷಾ ಕೌಶಲಗಳನ್ನು ಗುರುತಿಸಿಕೊಳ್ಳಬೇಕು.

ಉದಾಹರಣಗೆ: ಗ್ರಹಿಕೆ–ಓದುಗಾರಿಕೆ,

ಆಲಿಸುವ ಸಾಮರ್ಥ್ಯ –ಓದುಗಾರಿಕೆ

ತಪ್ಪಿಲ್ಲದೆ ಬರೆಯುವ ಸಾಮರ್ಥ್ಯ–ಬರೆವಣಿಗೆ

ಅಕ್ಷರ ಜೋಡಣೆ–ಬರೆವಣಿಗೆ ಇತ್ಯಾದಿ

**ಮಾತುಗಾರಿಕೆ ಕೌಶಲ:** ಕತೆ ಹೇಳುವುದು, ನಾಟಕ ಆಡುವುದು, ಸಂದರ್ಭ ನೀಡಿ ಸಂಭಾಷಣೆ ಮಾಡಲು ತಿಳಿಸುವುದು.

**ಓದುಗಾರಿಕೆ ಕೌಶಲ:** ತರಗತಿಯಲ್ಲಿ ಮೌನವಾಚನ ಹಾಗೂ ಗಟ್ಟಿವಾಚನ ನೀಡಿ, ವಾಚನಾಂಶಕ್ಕೆ ಸಂಬಂಧಿಸಿದಂತೆ, ಪ್ರಶ್ನೆಗಳನ್ನು ಜೋಡಿಸಿ ಕೇಳುವುದು.

ಅಕ್ಷರ, ಪದಗಳ ಸ್ವರೂಪವನ್ನು ಮಕ್ಕಳಿಗೆ ನೀಡಿ, ಅಕ್ಷರ, ಪದ ಗುರುತಿಸಲು ತಿಳಿಸುವುದು.
ಉದಾಹರಣೆಗೆ: ಅಡಕ, ಅಕ್ಷಮ್ಯ, ಅನೂಚಾನ

**ಬರೆವಣಿಗೆ ಕೌಶಲ:** ಸುಂದರ ಬರೆವಣಿಗೆಯಿಂದ ಪ್ರಾರಂಭಿಸಿ, ಸಂಕ್ಷಿಪ್ತ ಬರೆಹ, ವಿಸ್ತರಣಾ ಬರೆಹ, ವಿಮರ್ಶಾತ್ಮಕ ಬರೆಹ, ಸೃಜನಶೀಲ ಬರೆಹ ಇತ್ಯಾದಿ ಕುರಿತಂತೆ ಮೌಲ್ಯಮಾಪನ ಒದಗಿಸುವುದು.
ಉದಾಹರಣೆಗೆ,
–'ಅನಿವಾರ್ಯ' ಎಂಬ ಪದವನ್ನು ಬಳಸಿ ಸರಿಯಾದ ವಾಕ್ಯ ರಚಿಸಿ.

4. ವಿಷಯಾಂಶ (ಭಾಷಾವಿಷಯಾಂಶ)ದ ಮೌಲ್ಯಮಾಪನ ಕ್ರಮವನ್ನು ಗುರುತಿಸುವುದು.
ಉದಾಹರಣೆಗೆ ಅಲ್ಪಪ್ರಾಣ ಹಾಗೂ ಮಹಾಪ್ರಾಣಾಕ್ಷರಗಳ ಬಳಕೆ ಸಾಮರ್ಥ್ಯ
ಆವರಣದ ಅಕ್ಷರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ.
ಮೊನ್ನೆ ನಮ್ಮೂರಿನಲ್ಲಿ ಒಂದು _ಟನೆ ನಡೆಯಿತು (ಘ.ಗ)
ಸೇವಕರು ಪ್ರ_ವೇ, ನೀವೇ ನಮ್ಮನ್ನು ಕಾಪಾಡಬೇಕು ಎಂದು ಹೇಳಿದರು (ಭು,ಬು)

❖ ಅಂತಿಮವಾಗಿ, ನಿರ್ದಿಷ್ಟಪಡಿಸಿದ ಭಾಷಾ ಸಾಮರ್ಥ್ಯವನ್ನು ಮೌಲ್ಯಮಾಪನ ಮಾಡುವುದು.
ಕಲಿಕೆಯ ಅಂತಿಮ ಫಲವನ್ನು ನಿರ್ಧರಿಸಿ, ಅದರ ಸಾಧನೆಯನ್ನು ಗುರುತಿಸಲು ಮೌಲ್ಯಮಾಪನ ಚಟುವಟಿಕೆಯನ್ನು ಜೋಡಿಸುವುದು.

ಮಾಪನಮಾಡುವ ಮುನ್ನ ಭಾಷೆಯ ಯಾವ ಸಾಮರ್ಥ್ಯವನ್ನು ಮೌಲ್ಯಮಾಪನ ಮಾಡುತ್ತಿದ್ದೇವೆ ಎಂಬ ಅಂಶ ಸ್ಪಷ್ಟವಾಗಿಬೇಕು. ನಿರ್ದಿಷ್ಟವಾಗಬೇಕು. ಇಲ್ಲದಿದ್ದಲ್ಲಿ, ಮೌಲ್ಯಮಾಪನ ಗೊಂದಲಮಯವಾಗುತ್ತದೆ.
ಉದಾಹರಣೆಗೆ, ವಾಕ್ಯವೃಂದವನ್ನು ಕೊಟ್ಟು, ಆ ವಾಕ್ಯವೃಂದಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಕೊಟ್ಟು ಉತ್ತರ ಬರೆಯಲು ಹೇಳಿದರೆ, ಗ್ರಹಿಕೆಯ ಜೊತೆಗೆ, ಮಗುವಿನ ಓದುವ ಸಾಮರ್ಥ್ಯ, ಬರೆಯುವ ಸಾಮರ್ಥ್ಯ ಎಲ್ಲವೂ ಅದರಲ್ಲಿ ಸೇರಿರುತ್ತದೆ. ಮಗುವಿಗೆ ಸರಿಯಾಗಿ ಬರೆಯಲು ಬರದಿದ್ದರೆ ಅದು ತನಗಾಗಿರುವ ಗ್ರಹಿಕೆಯನ್ನು

ಅಭಿವ್ಯಕ್ತಿಸಲು ಸಾಧ್ಯವಿಲ್ಲ. ಆದುದರಿಂದ, ಎಂತಹ ಸನ್ನಿವೇಶದಲ್ಲಿ ಮಗುವಿನ ಗ್ರಹಿಕೆಯ ಶಕ್ತಿಯನ್ನು ಮೌಲ್ಯಮಾಪನ ಮಾಡುತ್ತಿದ್ದೇವೆ ಎಂದು ಸ್ಪಷ್ಟಪಡಿಸಿಕೊಳ್ಳಬೇಕು, ನಿರ್ದಿಷ್ಟಪಡಿಸಿಕೊಳ್ಳಬೇಕು.
ಈ ನಿಟ್ಟಿನಲ್ಲಿ ಪ್ರಶ್ನಾಂಶಗಳ ರಚನೆ ಪ್ರಮುಖವಾಗುತ್ತದೆ.
ಪ್ರಶ್ನಾಂಶಗಳ ರಚನೆಗೆ ಮಾದರಿ ಇಂತಿದೆ.

**ಉದಾಹರಣೆಗೆ,**

**ಪರೀಕ್ಷಾಂಶಗಳು**

| **ಪ್ರಶ್ನಾಂಶ ಸಂಖ್ಯೆ: 1** | | |
|---|---|---|
| ಉದ್ದೇಶ ಅರ್ಥಗ್ರಹಿಕೆ | ಘಟಕ: ತಲಕಾಡಿನ ವೈಭವ<br>ಉಪಘಟಕ: ನಿಲ್ಮನೆ ಪ್ರಸಂಗ | ಪ್ರಶ್ನೆಯ ವಿಧ:<br>**ವಸ್ತುನಿಷ್ಠ** / ಸಂಕ್ಷಿಪ್ತ / ಪ್ರಬಂಧ |
| ನಿರ್ದಿಷ್ಟಕ: ಅರ್ಥ ಬರೆಯುತ್ತಾನೆ | ಪರಿಕಲ್ಪನೆ: ವಿರುದ್ಧಾರ್ಥಕ | ಕಠಿಣತೆಯ ಮಟ್ಟ:<br>**ಸುಲಭ** / ಸರಾಸರಿ / ಕಠಿಣ |
| **ಪರೀಕ್ಷಾಂಶ** | ಈ ಕೆಳಗಿನ ಪದಕ್ಕೆ ಅರ್ಥ ಬರೆಯಿರಿ:<br>ನಿಲ್ಮನೆ: __________ | |
| **Key / ಉತ್ತರ ಕೀಲಿ** | ಪ್ರವಾಸಿಗರು ಉಳಿದುಕೊಳ್ಳುವ ತಾಣ. | |

ಈ ಎಲ್ಲಾ ಆಂಶಗಳನ್ನು ಸಂಯೋಜಿಸಿ ಈ ನಮೂನೆಯಡಿಯಲ್ಲಿ ನೀಲನಕಾಶೆಯನ್ನು ರಚಿಸುವುದು.

**ನೀಲನಕಾಶೆಯ ಮಾದರಿ**

| **ಕ್ರ. ಸಂ.** | **ಉದ್ದೇಶಗಳು ಉಪಘಟಕಗಳು** | **ಅರ್ಥಗ್ರಹಿಕೆ** | | | | | | **ಅಭಿವ್ಯಕ್ತಿ** | | | | | | **ರಸಾಸ್ವಾದನೆ** | | | **ಒಟ್ಟು** |
|---|---|---|---|---|---|---|---|---|---|---|---|---|---|---|---|---|---|
| | | ಜ್ಞಾನ | | | ಗ್ರಹಿಕೆ / ತಿಳಿವಳಿಕೆ | | | ಅನ್ವಯ | | | ಕೌಶಲ | | | ಪ್ರಶಂಸೆ | | | |
| | | ವ | ಸಂ | ಪ್ರ | ವ | ಸಂ | ಪ್ರ | ವ | ಸಂ | ಪ್ರ | ವ | ಸಂ | ಪ್ರ | ವ | ಸಂ | ಪ್ರ | |
| | ಉಪಘಟಕ – 1 | | | | | | | | | | | | | | | | |
| | | | | | | | | | | | | | | | | | |
| | ಉಪಘಟಕ – 2 | | | | | | | | | | | | | | | | |
| | | | | | | | | | | | | | | | | | |
| | ಉಪಘಟಕ – 3 | | | | | | | | | | | | | | | | |
| | | | | | | | | | | | | | | | | | |
| | ಉಪಘಟಕ – 4 | | | | | | | | | | | | | | | | |
| | | | | | | | | | | | | | | | | | |
| | | | | | | | | | | | | | | | | | |
| | | | | | | | | | | | | | | | | | |
| | | | | | | | | | | | | | | | | | |

| | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|
| | | | | | | | | | | | | | | | | | |
| | | | | | | | | | | | | | | | | | |
| | | | | | | | | | | | | | | | | | |
| | | | | | | | | | | | | | | | | | |
| ಒಟ್ಟು | | | | | | | | | | | | | | | | | |
| | | | | | | | | | | | | | | | | | |

**ಗಮನಿಸಿ**

ಮೇಲ್ಕಂಡ ತಾಲಿಕೆಯಲ್ಲಿ ವ– ವಸ್ತುನಿಷ್ಠ ಮಾದರಿ ಪ್ರಶ್ನೆಗಳು, ಸಂ – ಸಂಕ್ಷಿಪ್ತ ಮಾದರಿ ಪ್ರಶ್ನೆಗಳು, ಪ್ರ– ಪ್ರಬಂಧ ಮಾದರಿ ಪ್ರಶ್ನೆಗಳನ್ನು ಸೂಚಿಸುತ್ತವೆ.

ಬಿಳಿ ಬಣ್ಣದ ಚೌಕಗಳು ನಮೂದಿಸಿರುವ ಅಂಕಗಳನ್ನು ಸೂಚಿಸಿದರೆ, ಶೇಡ್ ಆಗಿರುವ ಚೌಕಗಳು ನಮೂದಿಸಿರುವ ಪ್ರಶ್ನೆಗಳನ್ನು ಸೂಚಿಸುತ್ತದೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

ಘಟಕ ಪರೀಕ್ಷೆಯಲ್ಲಿ ಅಳವಡಿಸಬೇಕಾದ ಅಂಶಗಳ ಕುರಿತು ಒಂದು ತಪಶೀಲು ಪಟ್ಟಿ ತಯಾರಿಸಿ, ನಿಮ್ಮ ಆಯ್ಕೆಯ ಒಂದು ಗದ್ಯ/ಪದ್ಯ ಪಾಠಕ್ಕೆ ಘಟಕ ಪರೀಕ್ಷೆ ರಚಿಸಿರಿ.

**4.2.3.2. ನೈದಾನಿಕ ಪರೀಕ್ಷೆ**

ಒಂದು ತರಗತಿಯಲ್ಲಿ ನಾವು ವಿಭಿನ್ನ ರೀತಿಯ ವಿದ್ಯಾರ್ಥಿಗಳನ್ನು ಕಾಣುವುದು ಸಹಜವಾಗಿದ್ದು, ಎಲ್ಲಾ ವಿದ್ಯಾರ್ಥಿಗಳಲ್ಲಿ ಭಾಷೆಯ ವಿವಿಧ ಸಾಮರ್ಥ್ಯದ ಗಳಿಕೆಯ ತೊಂದರೆಗಳಿರುತ್ತವೆ. ಓದುಗಾರಿಕೆ, ಮಾತುಗಾರಿಕೆ, ಬರವಣಿಗೆ ಮುಂತಾದ ಭಾಷಾ ಸಮಸ್ಯೆಗಳಲ್ಲಿ ಮಕ್ಕಳು ತೊಳಲಾಡುತ್ತಿರುತ್ತಾರೆ. ಈ ಭಾಷಾದೋಷಗಳು ಸಹಜವಾಗಿಯೇ ಉಂಟಾಗುತ್ತದೆ. ಇಂತಹ ಸಮಯದಲ್ಲಿ ಉಪಾಧ್ಯಾಯರು ವಿದ್ಯಾರ್ಥಿಗಳ ಸಮಸ್ಯೆಯನ್ನು ಗುರುತಿಸಿ, ಅದಕ್ಕೆ ತಕ್ಕದಾದಂತಹ ಪರಿಹಾರೋಪಾಯಗಳನ್ನು ಗುರುತಿಸುವ ಅಗತ್ಯತೆ ಇದೆ.

**ನೈದಾನಿಕ ಪರೀಕ್ಷೆಯ ಪದ ವ್ಯುತ್ಪತ್ತಿ**

ನೈದಾನಿಕ ಅಥವಾ ದೋಷ ನಿದಾನ ಎಂಬ ಪದವು, ಆಂಗ್ಲಭಾಷೆಯ 'Diagnosis' ಎಂಬ ಪದಕ್ಕೆ ಸಮನಾದುದು. 'Diagnosis' ಎಂದರೆ, ದೋಷವನ್ನು ಕಂಡುಕೊಳ್ಳುವುದು ಎಂದರ್ಥ.

**ನೈದಾನಿಕ ಪರೀಕ್ಷೆಯ ಅರ್ಥ:** ನಿರ್ದಿಷ್ಟ ಕ್ಷೇತ್ರದಲ್ಲಿ ವಿದ್ಯಾರ್ಥಿಯ ದೌರ್ಬಲ್ಯಗಳನ್ನು ನಿಖರವಾಗಿ ಪತ್ತೆಹಚ್ಚಲು ತಯಾರಿಸಲಾದ ಪರೀಕ್ಷೆಗಳಿಗೆ 'ನೈದಾನಿಕ ಪರೀಕ್ಷೆ' ಎಂದು ಹೆಸರು.

**ಭಾಷಾ ದೋಷನಿದಾನ ಪರೀಕ್ಷೆ**

ವಿದ್ಯಾರ್ಥಿಗಳ ಭಾಷಾ ದೌರ್ಬಲ್ಯಗಳನ್ನು ಪರೀಕ್ಷಿಸಿ, ಕಂಡುಕೊಳ್ಳಲಾದ ಸಮಸ್ಯೆಗಳಿಗೆ ಸೂಕ್ತ ಪರಿಹಾರಗಳನ್ನು ಕೈಗೊಳ್ಳಲಾಗುವ ಪರೀಕ್ಷೆಗಳಿಗೆ 'ಭಾಷಾ ದೋಷನಿದಾನ ಪರೀಕ್ಷೆ'ಗಳು ಎನ್ನಲಾಗುತ್ತದೆ.

**ದೋಷನಿದಾನ ಪರೀಕ್ಷೆಯ ವ್ಯಾಪ್ತಿ:**

- **ದೋಷಗಳನ್ನು ಗುರುತಿಸುವುದು:** ಜ್ಞಾನಾತ್ಮಕ, ಭಾವನಾತ್ಮಕ, ಮನೋಕ್ರಿಯಾಜನ್ಯಾತ್ಮಕ ವಲಯಗಳಲ್ಲಿ ಕಂಡುಬರುವ ದೋಷಗಳನ್ನು / ಕಲಿಕೆಯ ದೋಷಗಳನ್ನು ಗುರುತಿಸುವುದು.

ಭಾಷಾ ಸಾಮರ್ಥ್ಯಗಳಾದ ಓದುಗಾರಿಕೆ, ಆಲಿಸುವಿಕೆ, ಮಾತುಗಾರಿಕೆ, ಬವಣಿಗೆ ಹಾಗೂ ಇವುಗಳ ಉಪಸಾಮರ್ಥ್ಯಗಳ ಕಲಿಕೆ/ಗಳಿಕೆಯಲ್ಲಿನ ದೋಷಗಳನ್ನು ಗುರುತಿಸುವುದು.

- **ದೋಷಗಳಿಗೆ ಕಾರಣಗಳನ್ನು ಗುರುತಿಸುವುದು:** ಓದುಗಾರಿಕೆ, ಬರವಣಿಗೆ ಮುಂತಾದ ಸಾಮರ್ಥ್ಯಗಳ ಗಳಿಕೆಗೆ ಉಂಟಾಗಿರುವ ತೊಂದರೆಗಳಿಗೆ ನಿರ್ದಿಷ್ಟ ಕಾರಣವನ್ನು ಪತ್ತೆ ಹಚ್ಚುವುದು.

  ಉದಾಹರಣೆಗೆ ಸ, ಷ, ಶ ದೋಷಗಳಿಗೆ ಧ್ವನ್ಯುತ್ಪತ್ತಿ ಸ್ಥಾನಗಳ ಅರಿವಿಲ್ಲದಿರುವುದೇ ಕಾರಣವಾಗಿರಬಹುದು.

- **ದೋಷಗಳಿಗೆ ಯುಕ್ತ ಪರಿಹಾರ ಕ್ರಮವನ್ನು ಕಂಡು ಹಿಡಿಯುವುದು:** ಕಾರಣಗಳನ್ನು ಆಧರಿಸಿ, ಯುಕ್ತ ಪರಿಹಾರವನ್ನು ಕಂಡು ಹಿಡಿಯುವುದು. ಉದಾಹರಣೆಗೆ, ಸ–ಶ–ಷ ಉಚ್ಚಾರಣಾ ದೋಷಗಳನ್ನು ಪರಿಹರಿಸಲು ಯುಕ್ತ ತಂತ್ರದೊಂದಿಗೆ ಧ್ವನ್ಯುತ್ಪತ್ತಿ ಸ್ಥಾನಗಳ ಅರಿವು ಇಲ್ಲದೇ ಇರುವುದು.

**ದೋಷನಿದಾನ ಪರೀಕ್ಷೆಯ ಉದ್ದೇಶಗಳು**

1. ಕಲಿಕೆಯ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಯ ಸಾಮರ್ಥ್ಯಗಳನ್ನು, ದೌರ್ಬಲ್ಯಗಳನ್ನು ನಿಖರವಾಗಿ ಕಂಡುಹಿಡಿಯುವುದು.
2. ದೌರ್ಬಲ್ಯಗಳಿಗೆ ನಿಖರವಾದ ಕಾರಣಗಳನ್ನು ಕಂಡುಹಿಡಿಯುವುದು.
3. ಭೌದ್ಧಿಕವಾಗಿ ಏನಾದರೂ ದೋಷವಿದೆಯೋ? ಅಥವಾ ಮತ್ತೇನಾದರೂ ಕಾರಣವೋ ಎಂಬುದನ್ನು ತಿಳಿಯುವುದು.
4. ಯಾವ ಅಂಶಗಳಲ್ಲಿ ತೊಂದರೆಯನ್ನು ಅನುಭವಿಸುತ್ತಿದ್ದಾನೆ? ಎಂಬುದನ್ನು ನಿರ್ಧರಿಸುವುದು.
5. ಶಿಕ್ಷಕನು ವಿದ್ಯಾರ್ಥಿಗಳ ವ್ಯಕ್ತಿಗತವಾದ ಸಾಧನೆಗಳನ್ನು ವಿಶ್ಲೇಷಿಸುವುದು.
6. ಸುಧಾರಣಾ ಕ್ರಮಗಳನನು ಕೈಗೊಳ್ಳುವುದು.

**ನೈದಾನಿಕ ಪರೀಕ್ಷೆಯ ಲಕ್ಷಣಗಳು**

ಸಾಧನಾ ಪರೀಕ್ಷೆಗಿಂತ ನೈದಾನಿಕ ಪರೀಕ್ಷೆಯು ಪರಿಪೂರ್ಣವಾಗಿಯೇ ಭಿನ್ನವಾಗಿದ್ದು, ತನ್ನದೇ ಆದಂತಹ ವಿಶಿಷ್ಟ ಲಕ್ಷಣಗಳನ್ನು ಹೊಂದಿದೆ.

**1. ನೈದಾನಿಕ ಪರೀಕ್ಷೆಗಳಲ್ಲಿ ವಿದ್ಯಾರ್ಥಿಯು ಗಳಿಸುವ ಅಂಕಕ್ಕೆ ಮಹತ್ವವಿಲ್ಲ.**

ಸಾಮಾನ್ಯವಾಗಿ ಪ್ರಶ್ನೆಗಳಲ್ಲಿ ವಿದ್ಯಾರ್ಥಿಯು ಗಳಿಸುವ ಅಂಕಕ್ಕೆ ಮಹತ್ವವಿಲ್ಲ.

**2. ಪ್ರಶ್ನೆಗಳನ್ನು ಉತ್ತರಿಸಲು ಕಾಲದ ನಿರ್ಬಂಧವಿಲ್ಲ.**

ಸಾಧ್ಯವಿರುವಷ್ಟು ಉತ್ತರಿಸಿ, ಮುಂದಿನ ಪ್ರಶ್ನೆಗಳನ್ನು ಮರುದಿನ ಉತ್ತರಿಸಬಹುದು. ಆಯಾಸ ಅಥವಾ ಬೇಸರವಾದಾಗ, ಉತ್ತರಿಸುವುದನ್ನು ನಿಲ್ಲಿಸಬಹುದು. ಹಾಗೆಯೇ ಯಾವುದೇ ಆತಂಕ, ಕಾತರ ಅಥವಾ ಉದ್ವಿಗ್ನತೆಗಳಿಗೆ ಉತ್ತರಿಸಬೇಕಾದ ಅವಶ್ಯಕತೆಯಿಲ್ಲ.

**3. ಪ್ರತಿ ಪ್ರಶ್ನೆಯು ಇಚ್ಛಿತ ಕ್ಷೇತ್ರಕ್ಕೆ ಸಂಬಂಧಿಸಿದ ವರ್ತನೆಯ ಘಟಕವೊಂದಕ್ಕೆ ಸಂಬಂಧಿಸಿರುತ್ತದೆ.**

ಯಾವ ಪ್ರಶ್ನೆಗಳನ್ನು ವಿದ್ಯಾರ್ಥಿಯು ಸಮರ್ಪಕವಾಗಿ ಉತ್ತರಿಸುವುದಿಲ್ಲವೋ, ಆ ಪ್ರಶ್ನೆಗೆ ಸಂಬಂಧಿಸಿದ ವರ್ತನೆಯ ಘಟಕದಲ್ಲಿ ಅವನು ದುರ್ಬಲನಾಗಿದ್ದಾನೆ ಎಂದರ್ಥ.
ಉದಾಹರಣೆಗೆ, ಅಂ: ಅನುಸ್ವಾರ :: ಅಃ :________________

ಈ ಪ್ರಶ್ನೆಗೆ ವಿದ್ಯಾರ್ಥಿಯೊಬ್ಬ / ವಿದ್ಯಾರ್ಥಿಗಳು ಅನುನಾಸಿಕ ಎಂದು ಉತ್ತರಿಸಿದ್ದಾರೆ ಎಂದು ಕಲ್ಪಿಸಿಕೊಂಡರೆ, ವಿದ್ಯಾರ್ಥಿಗಳು ವ್ಯಾಕರಣ ಘಟಕದಲ್ಲಿ ದುರ್ಬಲನಾಗಿದ್ದಾನೆ ಎಂದರ್ಥ.

**4. ಪ್ರಶ್ನೆಗಳು ಸಾಮಾನ್ಯವಾಗಿ ಕ್ಲಿಷ್ಟತೆಯಲ್ಲಿ ಏರುವ ಕ್ರಮದಲ್ಲಿರುತ್ತದೆ.**

ಪ್ರಾರಂಭದಲ್ಲಿ ಸರಳ ಪ್ರಶ್ನೆಗಳನ್ನು ನೀಡಿ, ಮುಂದುವರೆದಂತೆ ಕಠಿಣ ಪ್ರಶ್ನೆಗಳನ್ನು ಕೊಟ್ಟಿರುವುದು ಇಲ್ಲಿನ ವಿಶೇಷವಾದ ಲಕ್ಷಣ ಎನಿಸಿದೆ. ಆರಂಭದ ಹಂತಗಳಲ್ಲಿ ವಿದ್ಯಾರ್ಥಿಗೆ ಯಶಸ್ಸು ದೊರಕುವಂತೆ ಪ್ರಶ್ನೆಗಳನ್ನು / ಸಮಸ್ಯೆಗಳನ್ನು ನೀಡಿದರೆ, ಅವನಲ್ಲಿ ಆತ್ಮವಿಶ್ವಾಸವೂ, ಮುಂದಿನ ಪ್ರಶ್ನೆಗಳನ್ನು ಉತ್ತರಿಸಲು ಉತ್ಸಾಹವು ಉಂಟಾಗುತ್ತದೆ.
ಉದಾಹರಣೆಗೆ, ಉಚ್ಚಾರಣಾ ದೋಷ ಗುರುತಿಸಲು ಪರೀಕ್ಷೆ

ಅಕ್ಷರಗಳ ಉಚ್ಚಾರಣೆ – ಅ, ಆ, ಕ, ಖ
ಪದಗಳ ಉಚ್ಚಾರಣೆ – ಪುಸ್ತಕ, ಗರಗಸ
ವಾಕ್ಯಗಳ ಉಚ್ಚಾರಣೆ – ನನಗೆ ನೀರು ಬೇಕು.

ಇದರಿಂದ ಯಾವ ನಿರ್ದಿಷ್ಟ ಹಂತದಲ್ಲಿ ವಿದ್ಯಾರ್ಥಿಯು ತೊಂದರೆಗೀಡಾಗಿದ್ದಾನೆ ಎಂದು ತಿಳಿಯಲು ಸಾಧ್ಯವಾಗುತ್ತದೆ.

ಈ ಮೇಲ್ಕಂಡ ಅಂಶಗಳಿಂದ ನೈದಾನಿಕ ಪರೀಕ್ಷೆಗಳ ಮೂಲ ಉದ್ದೇಶವು ಸ್ಪಷ್ಟವಾಗುತ್ತದೆ. ಯಾವ ರೀತಿ ಒಬ್ಬ ವೈದ್ಯನು ತನ್ನ ರೋಗಿಯ ರೋಗನಿದಾನ ಮಾಡಿ, ರೋಗಕ್ಕೆ ಕಾರಣಗಳನ್ನು ಪತ್ತೆ ಹಚ್ಚುತ್ತಾನೋ, ಅದೇ ರೀತಿ ಕನ್ನಡ ಅಧ್ಯಾಪಕನೂ ಸಹಾ ತನ್ನ ವಿದ್ಯಾರ್ಥಿಗಳ ಕಲಿಕೆಯಲ್ಲಿನ ದೌರ್ಬಲ್ಯ, ಕುಂದು–ಕೊರತೆಗಳನ್ನು ಗುರುತಿಸಿ, ನೈದಾನಿಕ ಪರೀಕ್ಷೆಗಳ ಮೂಲಕ ಅವುಗಳ ಕಾರಣಗಳನ್ನು ಕಂಡುಹಿಡಿದುಕೊಳ್ಳುತ್ತಾನೆ.

ಇಂತಹ ಪರೀಕ್ಷೆಗಳನ್ನು ರಚಿಸುವಾಗ ಅಧ್ಯಾಪಕನು ಎರಡು ಮುಖ್ಯ ಅಂಶಗಳನ್ನು ಪರಿಗಣಿಸಬೇಕು.

ಎ) ನಿರ್ದಿಷ್ಟ ಕಾರ್ಯ ನಿರ್ವಹಿಸಲು ಅಗತ್ಯವಾಗಿ ಕೈಗೊಳ್ಳಬೇಕಾದ ಕ್ರಮಗಳನ್ನು ವಿಶ್ಲೇಷಿಸಿ ಬರೆಯಬೇಕು.

ವಿದ್ಯಾರ್ಥಿಗಳ ಭಾಷಾಪ್ರಭುತ್ವವನ್ನು ಪರೀಕ್ಷಿಸಲು ರೂಪಿಸಿದ ನೈದಾನಿಕ ಪರೀಕ್ಷೆಯ ಸ್ವರೂಪ ವಿಶ್ಲೇಷಣೆಯನ್ನು ಹೀಗೆ ನಿರ್ವಹಿಸಬಹುದಾಗಿದೆ. ಸಾಹಿತ್ಯಿಕ ಅಂಶಗಳ ಮಾಧ್ಯಮದ ಮೂಲಕ ಪ್ರಶ್ನಿಸಲಾಗುತ್ತದೆ. ಇಲ್ಲಿ ಕ್ಲಿಷ್ಟತೆಯ ಮಟ್ಟವನ್ನು ಏರಿಕೆಯ ಕ್ರಮದಲ್ಲಿ ಜೋಡಿಸಲಾಗುತ್ತದೆ.

ಪ್ರಾರಂಭದ ಸರಣಿ – ಒಂದು ಅಥವಾ ಎರಡು ಸರಳವಾಕ್ಯಗಳಲ್ಲಿ ಉತ್ತರಿಸಬಹುದಾದ ಪ್ರಶ್ನೆಗಳು.
ನಂತರದ ಸರಣಿ – ನಾಲ್ಕಾರು ವಾಕ್ಯಗಳಲ್ಲಿ ಉತ್ತರಿಸಬಹುದಾದ ಪ್ರಶ್ನೆಗಳು.
ಕೊನೆಯ ಸರಣಿ – ಒಚಿದೆರಡು ಪುಟಗಳಷ್ಟು ದೀರ್ಘ ಉತ್ತರದ ಪ್ರಶ್ನೆಗಳು.

ಬಿ) ಈ ಕ್ರಮಗಳನ್ನು ಸರಿಯಾದ ರೀತಿಯಲ್ಲಿ ವಿದ್ಯರ್ಥಿ ಕೈಗೊಳ್ಳುತ್ತಾನೆಯೋ? ಇಲ್ಲವೋ ಎಂಬುದನ್ನು ನಿರ್ಧರಿಸಲು ಸೂಕ್ತವಾದ ಪ್ರಶ್ನೆಗಳನ್ನು ಅಥವಾ ಪ್ರಶ್ನೆಗಳ ಸರಣಿಯನ್ನು ರೂಪಿಸಬೇಕು.
ವಾಕ್ಯರಚನಾ ಸಾಮರ್ಥ್ಯ
ಈ ಕೆಳಗಿನ ಪದಗಳನ್ನು ಸ್ವಂತವಾಕ್ಯದಲ್ಲಿ ಪ್ರಯೋಗಿಸಿರಿ.
ಕುಶಲ:
ವಿಸ್ಮಯ:
ವಾಕ್ಯವನ್ನು ಪೂರ್ಣಗೊಳಿಸಿರಿ (ಕೊಟ್ಟಿರುವ ಕ್ರಿಯಾಪದಗಳಲ್ಲಿ ಸೂಕ್ತ ಪದಗಳಿಂದ ತುಂಬಿರಿ)
ಅವನು ನೀರನ್ನು ________ (ಕುಡಿದನು / ಕುಡಿದಳು / ಕುಡಿಯಿತು / ಕುಡಿದರು)
ಕರ್ಮಣಿ ಪ್ರಯೋಗಕ್ಕೆ ಬದಲಿಸಿ.
ರಾಮನು ರಾವಣನನ್ನು ಕೊಂದನು

**ದೋಷನಿದಾನ ಪರೀಕ್ಷೆಯ ಪ್ರಕ್ರಿಯಾತ್ಮಕ ಹಂತಗಳು**

ಶಿಕ್ಷಣದ ಪ್ರಕ್ರಿಯೆಯಲ್ಲಿ ದೋ಼ನಿದಾನ ಮತ್ತುಇ ಪರಿಹಾರವು ಒಂದು ಸಮಗ್ರವಾದ ಕಾರ್ಯಕ್ರಮ. ಈ ದೋಷನಿದಾನವು ಪ್ರಮುಖವಾಗಿ ಐದು ಹಂತಗಳನ್ನು ಒಳಗೊಂಡಿದೆ. ಈ ಪ್ರಕ್ರಿಯಾತ್ಮಕ ಹಂತಗಳು ಶ್ರೇಣಿಯಾತ್ಮಕ ಕ್ರಮದಲ್ಲಿ ರೂಪುಗೊಂಡಿದ್ದು, ಅವುಗಳನ್ನು ಹೀಗೆ ಗುರುತಿಸಬಹುದಾಗಿದೆ.

| |
|---|
| **೫. ತಡೆಗಟ್ಟುವ ಕ್ರಮಗಳನ್ನು ಆಲೋಚಿಸಿ ಅನ್ವಯಿಸುವುದು** |
| **೪. ಪರಿಹಾರ ಕ್ರಮವನ್ನು ಕೈಗೊಳ್ಳುವುದು.** |
| **೩. ದೋಷಗಳು ಏಕೆ ಆಗುತ್ತಿವೆ? ಎಂದು ಗುರುತಿಸುವುದು.** |
| **೨. ದೋಷಗಳು ಎಲ್ಲಿ ಆಗುತ್ತಿವೆ? ಎಂದು ಗುರುತಿಸುವುದು.** |
| **೧. ದೋಷಗಳನ್ನು ಮಾಡುವವರು ಯಾರು? ಎಂದು ಗುರುತಿಸುವುದು.** |

**ಹಂತ 1:**
**ತಪ್ಪುಗಳನ್ನು ಮಾಡುವವರು ಯಾರು? ಎಂದು ಗುರುತಿಸುವುದು.**

- ಅಧ್ಯಾಪಕನು ಭಾಷಾ ವಿಷಯದ ಪರಿಣತಿಯನ್ನು ಕುರಿತಂತೆ ಮಕ್ಕಳ ವರ್ತನೆಗಳನ್ನು ತರಗತಿಯ ಒಳಗಿನ ಮತ್ತು ಹೊರಗಿನ ಸನ್ನಿವೇಶಗಳಲ್ಲಿ ಗಮನಿಸಬೇಕು.

ತರಗತಿ ಸನ್ನಿವೇಶ, ಪಠ್ಯೇತರ ಚಟುವಟಿಕೆಗಳು, ಅಂತೆಯೇ ಸಹಪಠ್ಯ ಚಟುವಟಿಕೆಗಳ ಸಂದರ್ಭದಲ್ಲಿ ಮಗುವಿನ ವರ್ತನೆಯ ವೀಕ್ಷಣೆ.
ಉದಾಹರಣೆಗೆ,

ಪಠ್ಯಗಳನ್ನು ಓದುವಾಗ ಉಂಟಾಗುವ ಉಚ್ಚಾರಣಾದೋಷ, ಚರ್ಚಾಸ್ಪರ್ಧೆಯನ್ನೇರ್ಪಡಿಸಿದಾಗ ವಿದ್ಯಾರ್ಥಿ ಅನುಭವಿಸುತ್ತಿರುವ ತೊಂದರೆಗಳು, ಮೈದಾನದಲ್ಲಿ ಆಟವಾಡುವಾಗ ಮಗು "ಬಾಳನ್ನು ನಂಗೆ ಆಕು" ಎಂದು ತೆಗೆಯುವ ಉದ್ಗಾರ.

- ಭಾಷಾ ವಿಷಯದಲ್ಲಿ ನಿರ್ದಿಷ್ಟ ಸಾಮರ್ಥ್ಯದ ಪರಿಣತಿಗೆ ಸಂಬಂಧಿಸಿದಂತೆ, ಅಗತ್ಯ ವರ್ತನೆಗಿಂತ ಭಿನ್ನವಾದ ವರ್ತನೆಯನ್ನು ಹೊಂದಿರುವುದು.

| ಕೌಶಲ | ನಿರ್ದಿಷ್ಟ ಸಾಮರ್ಥ್ಯ | ಅವಶ್ಯಕ ವರ್ತನ | ಭಿನ್ನ ವರ್ತನ |
|---|---|---|---|
| ಓದುಗಾರಿಕೆ | ಸ್ಪಷ್ಟ ಉಚ್ಚಾರಣೆ | ಶತೃಘ್ನ | ಸತೃಗ್ನ |
| | | ಕೃತಜ್ಞ / ಕೃತಘ್ನ | ಕೃತಗ್ನ |
| ಮಾತುಗಾರಿಕೆ | ಮಾತಿನ ವೇಗ | ಆನೆ ಬಂದಿತು. | ಆನೆ ಬಂ.......ದಿ.....ತು |
| | ಮಾತಿನ ಸ್ಪಷ್ಟತೆ | ಸ್ಪಷ್ಟತೆ ಇರುವುದು | ಸ್ಪಷ್ಟತೆ ಇಲ್ಲದೇ ಅಕ್ಷರ ಪದಗಳನ್ನು ನುಂಗುವುದು. |
| ಆಲಿಸುವಿಕೆ | ಉಕ್ತ ವಾಚನ:<br>ಪದ, ವಾಕ್ಯ ಪುನರುತ್ಪಾದನೆ | ಪ್ರಬೋಧ<br><br>ಚಂದ್ರಿಕೆ | ಪ್ರಮೋದ / ಪ್ರಬೋದ<br><br>ಚಂದಕೆ |
| ಬರವಣಿಗೆ | ಉಕ್ತ ಲೇಖನ:<br>ಅಕ್ಷರ, ಪದ, ವಾಕ್ಯ, ವಾಕ್ಯವೃಂದಗಳ ಉಕ್ತಲೇಖನ | ಆನೆ<br>ಅಕ್ಷರ<br>ರಾಮು ಮನೆಗೆ ಬಂದನು | ಅನೆ<br>ಅಷರ<br>ರಾಮು ಮನಗೆ ಬದನು |

ಹೀಗೆ ಯಾವ ಸಾಮರ್ಥ್ಯದಲ್ಲಿ ಅಪೇಕ್ಷಿತ ವರ್ತನೆಗಿಂತ ಭಿನ್ನವಾದ ವರ್ತನೆಯು ವಿದ್ಯಾರ್ಥಿಯಲ್ಲಿ/ ವಿದ್ಯಾರ್ಥಿಗಳಲ್ಲಿ ಕಂಡುಬರುತ್ತಿದೆ ಎಂದು ಗುರುತಿಸುವುದು.

**ಹಂತ 2:**
**ತಪ್ಪುಗಳು ಎಲ್ಲಿ ಉಂಟಾಗುತ್ತಿವೆ? ಎಂದು ಗುರುತಿಸುವುದು.**
ದೋಷನಿದಾನ ಪರೀಕ್ಷೆಯ ಪ್ರಮುಖ ಹಂತ ಇದಾಗಿದೆ. ಸಮಸ್ಯೆಯ ಕ್ಷೇತ್ರ ಅಥವಾ ಸಾಮರ್ಥ್ಯವನ್ನು ಗುರುತಿಸುವಲ್ಲಿ ಮಾತ್ರ ಪಾತ್ರ ನಿರ್ವಹಿಸುತ್ತದೆಯೇ ಹೊರತು, ಸಮಸ್ಯೆಯ ಮೂಲ ನೆಲೆಯನ್ನಲ್ಲ. ಈ ಹಿನ್ನೆಲೆಯಲ್ಲಿ ಸಮಸ್ಯೆಯ ನಿರ್ದಿಷ್ಟ ನೆಲೆಯನ್ನು ಗುರುತಿಸಬಹುದು. ಇಲ್ಲಿನ ಪ್ರಕ್ರಿಯೆಯಾಗಿದೆ. ನಿರ್ದಿಷ್ಟವಾಗಿ ಯಾವ ಸಾಮರ್ಥ್ಯದಲ್ಲಿ ನ್ಯೂನ್ಯತೆಯನ್ನು ವಿದ್ಯಾರ್ಥಿಯು ತೋರಿಸುತ್ತಿದ್ದಾನೆ ಎಂಬುದನ್ನು ಇಲ್ಲಿ ನಿರ್ದಿಷ್ಟಪಡಿಸಲಾಗುತ್ತದೆ. ನಿರ್ದಿಷ್ಟ ಉದ್ದೇಶಗಳನ್ನು ಇಟ್ಟಕೊಂಡು, ದೋಷನಿದಾನ ಪರೀಕ್ಷೆಯನ್ನು ರಚಿಸುವ ಹಂತ ಇದಾಗಿದೆ.

**ದೋಷನಿದಾನ ಪರೀಕ್ಷೆಯ ರಚನೆಯ ಕ್ರಮ:**
ದೋಷ ನಿದಾನ ಪರೀಕ್ಷೆಯ ರಚನೆಯಲ್ಲಿ ನಾಲ್ಕು ಹಂತಗಳನ್ನು ಗುರುತಿಸಬಹುದಾಗಿದೆ.

- **ಉದ್ದೇಶಗಳನ್ನು ಸ್ಪಷ್ಟೀಕರಿಸುವುದು:**

ಯಾವ ಉದ್ದೇಶ ಸಾಧನೆಗಾಗಿ ದೋಷನಿದಾನ ಪರೀಕ್ಷೆಯನ್ನು ರಚಿಸಲಾಗಿದೆ? ಎಂಬುದನ್ನು ಸ್ಪಷ್ಟೀಕರಿಸುವುದು, ನಿರ್ದಿಷವಟಪಡಿಸುವುದು. ಇಲ್ಲಿ ಸಾಮರ್ಥ್ಯಗಳಡಿಯಲ್ಲಿ ಯಾವ ಉಪಸಾಮರ್ಥ್ಯದ ಗಳಿಕೆಯಲ್ಲಿ ನ್ಯೂನ್ಯತೆ ಉಂಟಾಗುತ್ತಿದೆ? ಎಂಬುದನ್ನು ಗುರುತಿಸಿಕೊಳ್ಳುವುದು.
ಉದಾಹರಣೆಗೆ, ಓದುಗಾರಿಕೆ ಸಾಮರ್ಥ್ಯ.
ಓದುಗಾರಿಕೆ ಸಾಮರ್ಥ್ಯದ ಬೆಳವಣಿಗೆಯನ್ನು ಪ್ರತಿಬಿಂಬಿಸವ ಪ್ರಮುಖ ಅಂಶವೆಂದರೆ, ಸ್ಪಷ್ಟ ಉಚ್ಚಾರಣೆ.

- ಮಗುವು ಉಚ್ಚಾರಣಾ ದೋಷವನ್ನು ಅನುಭವಿಸುತ್ತಿದ್ದಾನೆ ಎಂದು ತಿಳಿಯೋಣ. ಅದರಲ್ಲಿಯೂ ನಿರ್ದಿಷ್ಟವಾಗಿ, 'ಅ'ಕಾರ 'ಹ'ಕಾರಗಳ ನಡುವೆ ವ್ಯತ್ಯಾಸ ಉಂಟು ಮಾಡುತ್ತಿದ್ದಾನೆ ಎಂದು ಭಾವಿಸಿದರೆ, ಪರೀಕ್ಷೆಯು "ಓದುಗಾರಿಕೆಯಲ್ಲಿನ ಉಚ್ಚಾರಣಾ ದೋಷವನ್ನು ಗುರುತಿಸುವ ಉದ್ದೇಶ'ವನ್ನು ಹೊಂದಿರುತ್ತದೆ.

- ವಾಕ್ಯವನ್ನು ಸರಿಕ್ರಮದಲ್ಲಿ ಜೋಡಿಸಿರಿ.

  ರಾಮುವು ಪತ್ರವನ್ನು ಬರೆಯುತ್ತಿದ್ದಾನೆ ತಂದೆಯವರಿಗೆ

  1 2 3 4

  ಎ) 1, 4, 2, 3 ಬಿ) 1, 3, 4, 2 ಸಿ) 3, 1, 2, 4 ಡಿ) 3, 4, 1, 2

ಈ ಪರೀಕ್ಷಾಂಶವು ನೈದಾನಿಕ ಪರೀಕ್ಷೆಯ ಒಂದು ಘಟಕವಾಗಿದೆ ಎಂದು ಪರಿಭಾವಿಸಿದಲ್ಲಿ ಇದು ಯಾವ ಸಾಮರ್ಥ್ಯದ ಉಪಸಾಮರ್ಥ್ಯವನ್ನು ನೈದಾನಿಸುವ ಉದ್ದೇಶವನ್ನು ಹೊಂದಿದೆ?

- ಪರೀಕ್ಷೆಯು "ಬರವಣಿಗೆಯಲ್ಲಿನ ವಾಕ್ಯರಚನಾ ಸಾಮರ್ಥ್ಯವನ್ನು ನೈದಾನಿಸುವ ಉದ್ದೇಶ"ವನ್ನು ಹೊಂದಿದೆ.

ಬಿಟ್ಟ ಸ್ಥಳಗಳನ್ನು ಸೂಕ್ತ ವಿಶೇಷಣಗಳಿಂದ ತುಂಬಿರಿ.
ರಾಮುವು ________ ನಡೆದನು.
________ಗುಲಾಬಿಯ ಸೌಂದರ್ಯ ರಮಣೀಯವಾದುದು.
(ಸರಸರನೆ, ಕೆಂಪು)
"ವ್ಯಾಕರಣದಲ್ಲಿ ವಿಶೇಷಣವನ್ನು ಬಳಸುವ ಸಾಮರ್ಥ್ಯವನ್ನು ನೈದಾನಿಸುವ ಉದ್ದೇಶ".

- **ಉಪ ಘಟಕಗಳನ್ನು ಗುರುತಿಸಿಕೊಳ್ಳುವುದು.**

ನೈದಾನಿಸಬೇಕಾಗಿರುವ ಘಟಕಗಳನ್ನು ಉಪಘಟಕಗಳಾಗಿ ವಿಶ್ಲೇಷಿಸುವ ಪ್ರಕ್ರಿಯೆ ಈ ಹಂತದ್ದಾಗಿದೆ. ನೈದಾನಿಸಬೇಕಾಗಿರುವ ಘಟಕವು ಒಳಗೊಳ್ಳುವ ಪ್ರತ್ಯೇಕ ಅಂಶಗಳನ್ನು ಗುರುತಿಸಬೇಕಾದ ಅಗತ್ಯತೆ ಇಲ್ಲಿ ಪ್ರತಿಬಿಂಬಿತವಾಗುತ್ತದೆ.

"ಓದುಗಾರಿಕೆಯಲ್ಲಿನ ಸ್ಪಷ್ಟ ಉಚ್ಚಾರಣೆ" ಎಂದರೆ, ಪ್ರತಿಯೊಂದು ಅಕ್ಷರಗಳನ್ನು ತಪ್ಪಿಲ್ಲದೇ ಓದುವ ಸಾಮರ್ಥ್ಯ ಎನಿಸಿದೆ. ಇಲ್ಲಿ ಪ್ರತಿಯೊಂದು ಅಕ್ಷರಗಳ ಸ್ಪಷ್ಟ ಉಚ್ಚಾರಣೆ ಎಂದರೆ, ಕನ್ನಡ ವರ್ಣಮಾಲೆಗೆ ಸಂಬಂಧಿಸಿದ ಎಲ್ಲಾ ಅಕ್ಷರಗಳನ್ನು ಹೀಗೆ ವಿಶ್ಲೇಷಿಸಬಹುದಾಗಿದೆ.

ಕನ್ನಡ ಓದುಗಾರಿಕೆಯಲ್ಲಿ ಸ್ಪಷ್ಟ ಉಚ್ಚಾರಣೆ:
ವರ್ಣಮಾಲೆಯ ಅಕ್ಷರಗಳ ಉಚ್ಚಾರಣೆ: ಸ್ವರ, ವ್ಯಂಜನ, ಯೋಗವಾಹ.

ಮೂಲಾಕ್ಷರಗಳ ಸ್ಪಷ್ಟ ಉಚ್ಚಾರಣೆ

ಮೂಲಾಕ್ಷರಗಳಿಗೆ ಸಂಬಂಧಿಸಿದ
ಗುಣಿತಾಕ್ಷರಗಳ ಸ್ಪಷ್ಟ ಉಚ್ಚಾರಣೆ

ಮೂಲಾಕ್ಷರಗಳಿಗೆ ಸಂಬಂಧಿಸಿದ
ಒತ್ತಕ್ಷರಗಳ ಸ್ಪಷ್ಟ ಉಚ್ಚಾರಣೆ

ಪದದ ಮೊದಲಲ್ಲಿ ಪದದ ಮಧ್ಯದಲ್ಲಿ ಪದದ ಅಂತ್ಯದಲ್ಲಿ ಪದದಮೊದಲಲ್ಲಿ ಪದದ ಮಧ್ಯದಲ್ಲಿ ಪದದ ಅಂತ್ಯದಲ್ಲಿ

**ಬರೆವಣಿಗೆ ಅಕ್ಷರ – ಸ್ವರೂಪದ ವಿಧಾನ**

1. ವರ್ಣಮಾಲೆಯ ಸ್ವರೂಪ

ಸ್ವರ ವ್ಯಂಜನ ಯೋಗವಾಹ

2. ಗುಣಿತಾಕ್ಷರಗಳ ಸ್ವರೂಪ 3) ಒತ್ತಕ್ಷರಗಳ ಸ್ವರೂಪ

- **ಉಪಘಟಕಗಳಿಕೆ ಅನುಗುಣವಾಗಿ ಪ್ರಶ್ನೆಗಳ ರಚನೆ**

ಉಪಘಟಕಗಳಿಗೆ ಅನುಗುಣವಾಗಿ ಪ್ರಸ್ನೆಗಳು / ಪ್ರಶ್ನಾಂಶಗಳನ್ನು ರಚಿಸುವುದು.
**ಗಮನಿಸಿ:** – ಇಲ್ಲಿ ಪ್ರತಿಯೊಂದು ಪ್ರಶ್ನೆಯ ರೂಪದಲ್ಲಿ ಇರಬೇಕೆಂದೇನೂ ಇಲ್ಲ.

**ಕನ್ನಡದ ಮೂಲ ಉಚ್ಚಾರಣಾಂಶಗಳಿಗೆ ಸಂಬಂಧಿಸಿದಂತೆ ಮಕ್ಕಳ ಉಚ್ಚಾರಣಾ ದೋಷಗಳನ್ನು ಗುರುತಿಸಲು ಪ್ರಶ್ನಾಂಶಗಳ ರಚನೆ**

ಅಪೇಕ್ಷಿತ ವರ್ತನೆ: ವಿದ್ಯಾರ್ಥಿಯು ಪ್ರತಿಯೊಂದು ಪದವನ್ನು ಗಟ್ಟಿಯಾಗಿ, ಸ್ಪಷ್ಟವಾಗಿ ಓದಬೇಕು.

| ಉಪಘಟಕ : ಸ್ವರ | | |
|---|---|---|
| ಸ್ವರೂಪ | ಉಚ್ಚಾರಣಾಂಶ | ಪ್ರಶ್ನಾಂಶ |
| ಹ್ರಸ್ವ | ಅ | ಅನಿಕೇತನ |
| ದೀರ್ಘ | ಆ | ಆತಂಕ |

| ಉಪಘಟಕ : ವ್ಯಂಜನ | | |
|---|---|---|
| ವರ್ಗೀಯ | ಉಚ್ಚಾರಣಾಂಶ | ಪ್ರಶ್ನಾಂಶ |
| ಅಲ್ಪಪ್ರಾಣ | ಕ್ | ಕರ್ಮ |
| ಮಹಾಪ್ರಾಣ | ಛ್ | ಛತ್ರ |
| ಅವರ್ಗೀಯ | ಶ್ | ಶಶಿ |
| ಅನುನಾಸಿಕ | ನ್ | ನಯನ |

| ಉಪಘಟಕ : ಯೋಗವಾಹ | | |
|---|---|---|
| ಯೋಗವಾಹ | ಉಚ್ಚಾರಣಾಂಶ | ಪ್ರಶ್ನಾಂಶ |
| ಂ | ಅನುಸ್ವಾರ | ಅಂಕ |
| ಃ | ವಿಸರ್ಗ | ಹಂಸಃ |

**ಕನ್ನಡದ ಮೂಲ ಉಚ್ಚಾರಣಾಂಶಗಳಿಗೆ ಸಂಬಂಧಿಸಿದಂತೆ ಮಕ್ಕಳ ಉಚ್ಚಾರಣಾ ದೋಷಗಳನ್ನು ಗುರುತಿಸಲು ಪ್ರಶ್ನಾಂಶಗಳ ರಚನೆ**

ಅಪೇಕ್ಷಿತ ವರ್ತನೆ: ವಿದ್ಯಾರ್ಥಿಯು ಪ್ರತಿಯೊಂದು ಪದವನ್ನು ಗಟ್ಟಿಯಾಗಿ, ಸ್ಪಷ್ಟವಾಗಿ ಓದಬೇಕು.

| ಉಪಘಟಕ : ಮೂಲಾಕ್ಷರಗಳಿಗೆ ಸಂಬಂಧಿಸಿದ ಗುಣಿತಾಕ್ಷರಗಳು | | |
|---|---|---|
| ಗುಣಿತಾಕ್ಷರಗಳು | ಉಚ್ಚಾರಣಾಂಶ | ಪ್ರಶ್ನಾಂಶ |
| ಾ | ಕ್+ಆ | ಕಾಲ |
| ಿ | ಕ್+ಇ | ಕಿನ್ನರಿ |
| ೋ | ಕ್+ಓ | ಕೋರಿಕೆ |
| ಉಪಘಟಕ : ಮೂಲಾಕ್ಷರಗಳಿಗೆ ಸಂಬಂಧಿಸಿದ ಗುಣಿತಾಕ್ಷರಗಳು (ಸ್ಥಾನ ಆಧರಿಸಿ) | | |
| ಸ್ಥಾನ | ಉಚ್ಚಾರಣಾಂಶ | ಪ್ರಶ್ನಾಂಶ |
| ಪದಾದಿ | ಕ್+ಅ | ಕಮಲ |
| ಪದಮಧ್ಯ | ಕ್+ಅ | ಮಕರ |
| ಪದಾಂತ್ಯ | ಕ್+ಅ | ಧನಿಕ |
| ಉಪಘಟಕ : ಮೂಲಾಕ್ಷರಗಳಿಗೆ ಸಂಬಂಧಿಸಿದ ಗುಣಿತಾಕ್ಷರಗಳು (ಸ್ಥಾನ ಆಧರಿಸಿ) | | |
| ಸ್ಥಾನ | ಉಚ್ಚಾರಣಾಂಶ | ಪ್ರಶ್ನಾಂಶ |
| ಪದಾದಿ | ಕ್+ಷ್+ಅ | ಕ್ಷಣ |
| ಪದಮಧ್ಯ | ಕ್+ಷ್+ಅ | ಅಕ್ಷರ |
| ಪದಾಂತ್ಯ | ಕ್+ಷ್+ಅ | ನಕ್ಷೆ |

(ಬರವಣಿಗೆ)

**1. ಕನ್ನಡ ವರ್ಣಮಾಲೆಯ ಅಕ್ಷರಗಳನ್ನು ಬರೆಯಿರಿ.**

**2. ಚಿತ್ರವನ್ನು ನೋಡಿ ಬಿಟ್ಟ ಸ್ಥಳ ತುಂಬಿರಿ.**



__ಲು




____ರು



___ಗಿ



___ ಲು



____

**3. ಗುಣಿತಾಕ್ಷರಗಳನ್ನು ರೂಪಿಸಿ:**

ಕ್+ಅ =__
ಕ್+ಊ =__
ಕ್+ಔ =___
ಶ್+ಋ= __
ಶ್+ಏ=__
ಪ್+ಐ=__

**4. 'ಕೋ' ಇಲ್ಲಿ ____ ವ್ಯಂಜನದೊಂದಿಗೆ ___ ಸ್ವರ ಸೇರಿದೆ.**

**5. ಸರಿಯಾದ ಸ್ವರೂಪ ಗುರುತಿಸಿ:**

ಸನ್ಹದ್ಧ / ಸನ್ನದ್ಧ
ಬ್ರಂಹ/ಬ್ರಹ್ಮ
ನಾ್ಯಯ / ನ್ಯಾಯ

**6. ಸ್ವರೂಪ ಆಧರಿಸಿ, ಗುಂಪಿಗೆ ಸೇರದ ಪದ ಗುರುತಿಸಿ:**

ಸನ್ನಿಧಿ, ಪ್ರವೇಶ, ಅಕ್ಕಯ್ಯ, ಅಣ್ಣಯ್ಯ
ವಿಶ್ವ, ವಿಪ್ರ, ಕನ್ನಡ, ವ್ಯಂಜನ

**7. ಮೊದಲನೇ ಪದ ಹಾಗೂ ಎರಡನೆಯ ಪದಕ್ಕಿರುವ ಸಂಬಂಧದಂತೆ, ಮೂರನೆಯ ಪದಕ್ಕೆ ಸಂಬಂಧಿಸಿದ ನಾಲ್ಕನೇ ಪದ ಬರೆಯಿರಿ.**

ಅ: ಆ :: ಇ: ___
ಕ: ಖ :: ಗ: __

**ಪ್ರಶ್ನಾಂಶಗಳನ್ನು ವ್ಯವಸ್ಥಿತವಾಗಿ ಜೋಡಿಸುವುದು**

ಕ್ಲಿಷ್ಟತೆಯ ಏರುವ ಕ್ರಮದಲ್ಲಿ ಪ್ರಶ್ನಾಂಶಗಳನ್ನು ವ್ಯವಸ್ಥಿತವಾಗಿ ಜೋಡಿಸಬೇಕು.

**I. ಈ ಕೆಳಗಿನ ಅಕ್ಷರಗಳನ್ನು ಸ್ಪಷ್ಟವಾಗಿ ಓದಿರಿ.**

ಅ, ಆ, ಇ, ಈ, ಉ, ಊ, ಋ, ಎ, ಏ, ಐ, ಒ, ಓ, ಔ, ಅಂ, ಅಃ

ಕ, ಖ, ಗ, ಘ, ಙ

ಯ, ರ, ಲ, ವ, ಶ, ಷ, ಸ, ಹ, ಳ

**II. ಈ ಕೆಳಗಿನ ಅಕ್ಷರಗಳನ್ನು ಉಚ್ಚಾರಣೆ ಮಾಡಿ.**

ಅ – ಹ

ಸ – ಶ, ಷ

**III. ಈ ಕೆಳಗಿನ ಅಕ್ಷರಗಳನ್ನು ಉಚ್ಚಾರಣೆ ಮಾಡಿ.**

ಅ – ಹ

ಸ – ಶ – ಷ

**IV. ಈ ಕೆಳಗಿನ ಗುಣಿತಾಕ್ಷರಗಳನ್ನು ಸರಿಯಾಗಿ ಓದಿರಿ.**

ಕು, ಕೊ, ಕೋ, ಕೌ, ಕೈ, ಕೂ, ಕೆ, ಕಾ, ಕಿ, ಕೀ

**V. ಈ ಕೆಳಗಿನ ಪದಗಳನ್ನು ಸ್ಪಷ್ಟವಾಗಿ ಉಚ್ಚರಿಸಿ.**

ಕಮಲ, ವಿಮಲ, ಕಾರು, ಗಾಜು, ಗೀಜುಗ, ಗೈರು, ನವಿಲು

**VI. ಈ ಕೆಳಗಿನ ಒತ್ತಕ್ಷರವುಳ್ಳ ಪದಗಳನ್ನು ಸ್ಪಷ್ಟವಾಗಿ ಓದಿರಿ.**

ಭತ್ತ, ಕಣ್ಣು, ತಪ್ಪು, ಅಪ್ಪ, ಅಮ್ಮ

ವಿಶ್ವ, ಸೂಕ್ತ, ಪರೀಕ್ಷೆ, ದಿಕ್ಸೂಚಿ

**VII. ಈ ವಾಕ್ಯಗಳನ್ನು ಸ್ಪಷ್ಟವಾಗಿ ಓದಿರಿ.**

1. ರಾಮನು ಕಾಡಿಗೆ ಹೋದನು.
2. ಸಹನಾ ಶಾಲೆಯಿಂದ ಮನೆಗೆ ಹೋದಳು.
3. ದ್ರಾವಿಡ ಭಾಷೆಗಳಲ್ಲಿ ಕನ್ನಡವು ವಿಶಿಷ್ಟವಾದುದು.

**VIII. ಈ ಕೆಳಗಿನ ವಾಕ್ಯವೃಂದವನ್ನು ಸ್ಪಷ್ಟವಾಗಿ ಓದಿರಿ.**

ಹರಿಜನ ಗಿರಿಜನರಿಗೆ ವಿಶಿಷ್ಟವಾದ ಸ್ಥಾನ ಸಂವಿಧಾನದಲ್ಲಿದೆಯಾದರೂ ಸರಿಯಾಗಿ ಫಲದಾಯಕವಾಗುತ್ತಿಲ್ಲದಿರುವುದು ಭಾರತದ ದುರಂತವಾಗಿದೆ. ರಾಜಕಾರಣಿಗಳು ಓಟಿಗೋಸ್ಕರ ಇಲ್ಲಸಲ್ಲದ ಆಸೆ, ಆಮಿಷಗಳು ಮತ್ತು ಸುಳ್ಳು ಯೋಜನೆಗಳನ್ನು ನಮ್ಮ ಮುಂದೆ ಒಡ್ಡಿ ನಮ್ಮನ್ನು ಮೋಸಗೊಳಿಸುತ್ತಿದ್ದಾರೆ.

**ಕನ್ನಡ ವ್ಯಾಕರಣ ಪದ ಪ್ರಕರಣ**

**I. ಈ ಕೆಳಗೆ ಕೊಟ್ಟಿರುವ ಅಕ್ಷರಗಳನ್ನು ಬಳಸಿ 15 ಪದ ಮಾಡಿರಿ.**

ಕ, ರ, ಸ, ಮ, ಲ, ತ, ಜ

**II. ಏಕಪದ ಮಾಡಿರಿ.**

ಪರಮ + ಅನ್ನ =

ದೇವ + ಆಲಯ =

ಗಣ + ಈಶ =

**III. ಸಂಧಿ ಗುರುತಿಸಿ.**

ರಾಜಾಶ್ರಯ

ಏಕೈಕ

ವಾಙ್ಮಯ

ಮನಶ್ಚಾಪಲ್ಯ

**IV. ಸಮಾಸ ಗುರುತಿಸಿ.**

ಅಂಗೈ

ಕಾಡುಹಂದಿ

**ಹಂತ 3:**

ದೋಷನಿದಾನ ಪರೀಕ್ಷೆಯ ಅತಿ ಸೂಕ್ಷ್ಮವಾದ ಹಂತವಿದು. ದೋಷಕ್ಕೆ ನಿರ್ದಿಷ್ಟ ಕಾರಣಗಳನ್ನು ಈ ಹಂತದಲ್ಲಿ ಗುರುತಿಸಲಾಗುತ್ತದೆ. ಇದು ದೋಷನಿದಾನಕ್ಕಾಗಿ ದಿಕ್ಸೂಚಿಯಾಗುವುದು. ಈ ಹಂತದ ಪ್ರಕ್ರಿಯೆಗಳೆಂದರೆ,

**1. ದೋಷಗಳನ್ನು ಗುರುತಿಸುವುದು**

ಏಣಿ–ಶ್ರೇಣಿ ಕ್ರಮದಲ್ಲಿ ರೂಪಿಸಲಾಗಿರುವ ಪ್ರಶ್ನಾವಳಿ ಅಥವಾ ಪ್ರಶ್ನೆಮಾಲಿಕೆಗಳಿಗೆ ಉತ್ತರಿಸುವಾಗ ಉಂಟಾಗಿರುವ ತಪ್ಪುಗಳನ್ನು ಮೌಲ್ಯಮಾಪಿಸಿ ತಿಳಿದುಕೊಳ್ಳುವುದು.
ಉದಾಹರಣೆಗೆ,

**ಉಚ್ಚಾರಣಾ ದೋಷ**

ಮಹಾಪ್ರಾಣಾಕ್ಷರಗಳ ಉಚ್ಚಾರಣೆಯಲ್ಲಿ ದೋಷ

ಸಂಯುಕ್ತಾಕ್ಷರಗಳ ಉಚ್ಚಾರಣೆಯಲ್ಲಿ ದೋಷ

**ಬರೆವಣಿಗೆ – ವ್ಯಾಕರಣ ದೋಷ**

**ಸಂಯುಕ್ತಾಕ್ಷರ**

ಸನ್ನಿಧಿ, ಪ್ರವೇಶ, ಅಕ್ಕಯ್ಯ ಅಣ್ಣಯ್ಯ – ಬಹುತೇಕ ವಿದ್ಯಾರ್ಥಿಗಳು ಆಯ್ಕೆ ಮಾಡಿರುವ ಉತ್ತರ – ಸನ್ನಿಧಿ

ಆದರೆ, ಸರಿಯಾದ ಉತ್ತರ – ಪ್ರವೇಶ

**ಸಂಧಿ**

ರಾಜಾಶ್ರಯ – ಬಹುತೇಕ ವಿದ್ಯಾರ್ಥಿಗಳು ಆಯ್ಕೆ ಮಾಡಿರುವ ಉತ್ತರ  ಗುಣಸಂಧಿ

ಆದರೆ, ಸರಿಯಾದ ಉತ್ತರ ಸವರ್ಣದೀರ್ಘ ಸಂಧಿ

**ಸಮಾಸ**

ಅಂಗೈ, ಕಾಡುಹಂದಿ – ವಿದ್ಯಾರ್ಥಿಗಳ್ಯಾರೂ ಉತ್ತರಿಸಿಲ್ಲ.
ಅಂಗೈ = ಕೈಯ+ಅಡಿ (ಅಂಶಿ ಸಮಾಸ)
ಕಾಡುಹಂದಿ = ಕಾಡಿನ + ಹಂದಿ (ತತ್ಪುರುಷ ಸಮಾಸ)

**2. ಹೆಚ್ಚು ದೋಷಗಳಾಗಿರುವ ಹಂತಗಳನ್ನು ಉಪಘಟಕದ ಅಡಿಯಲ್ಲಿ ಗುರುತಿಸುವುದು**

ಉದಾಹರಣೆಗೆ, ಮೇಲಿನ ಉದಾಹರಣೆಗಲಲ್ಲಿ ಅತಿಹೆಚ್ಚು ತಪ್ಪಾಗಿರುವ ಹಂತಗಳನ್ನು ಗುರುತಿಸುವುದು.

ಉಚ್ಚಾರಣೆಯ ದೋಷ – ಮಹಾಪ್ರಾಣಾಕ್ಷರಗಳ ಉಚ್ಚಾರಣೆ
– ಸಂಯುಕ್ತಾಕ್ಷರಗಳ ಉಚ್ಚಾರಣೆ
ವ್ಯಾಕರಣ ದೋಷ – ಸಂಧಿ ಗುರುತಿಸುವಲ್ಲಿನ ದೋಷ
– ಸಮಾಸ ಬಿಡಿಸಿ ಬರೆದು, ಸಮಾಸ ಗುರುತಿಸುವಲ್ಲಿ ಪೂರ್ಣದೋಷ.

**3. ಗುರುತಿಸಿದ ದೋಷಗಳಿಗೆ ವಿವಿಧ ಕಾರಣಗಳನ್ನು ಪಟ್ಟಿ ಮಾಡುವುದು**

ಉಚ್ಚಾರಣೆಯ ದೋಷಕ್ಕೆ ಈ ಎಲ್ಲಾ ಕಾರಣಗಳನ್ನು ಪಟ್ಟಿಮಾಡಬಹುದು.

- ತಪ್ಪು ಮಾದರಿ – ಶಿಕ್ಷಕರ, ಪೋಷಕರ ತಪ್ಪು ಮಾದರಿ ಉಚ್ಚಾರಣೆ
- ಅನ್ಯ ಭಾಷೆಗಳ ಸಂಪರ್ಕ – ವಿದ್ಯಾರ್ಥಿಯ ಮಾತೃಭಾಷೆಯೇ ಬೇರೆಯಾಗಿದ್ದು, ಉಚ್ಚಾರಣೆಯ ದೋಷವು ಉಂಟಾಗಬಹುದು. ಉದಾಹರಣೆಗೆ, ಮಲಯಾಳಿ ಮಾತೃಭಾಷೆಯಾಗಿ ಹೊಂದಿರುವ ಮಗುವಿನ ಕನ್ನಡ ಭಾಷಾ ಉಚ್ಚಾರಣಾ ರೀತಿ.
- ಧ್ವನ್ಯಂಗಗಳಲ್ಲಿರುವ ತೊಂದರೆ – ಉಚ್ಚಾರಣೆಯ ದೋಷಕ್ಕೆ ಮಗುವಿನ ಧ್ವನ್ಯಂಗಗಳಲ್ಲಿರುವ ಅಥವಾ ಅದರ ಸಂರಚನೆಯಲ್ಲಾಗಿರುವ ತೊಂದರೆಗಳನ್ನು ಕಾರಣವಾಗಿರಬಹುದು.
- ಸಾಕಷ್ಟು ಅಭ್ಯಾಸದ ಕೊರತೆ – ಉಚ್ಚಾರಣೆಯ ದೋಷಕ್ಕೆ ಸರಿಯಾದ ಅಭ್ಯಾಸ ಇಲ್ಲದಿರುವುದೂ ಪ್ರಮುಖ ಕಾರಣವಾಗಿ ಗೋಚರಿಸುತ್ತದೆ.
- ತಪ್ಪು ಮಾಡುತ್ತಿದ್ದೇನೆ ಎಂಬ ಅರಿವು ಇಲ್ಲದಿರುವುದು – ಉಚ್ಚಾರಣೆಯ ಸ್ವರೂಪದ ಪ್ರಜ್ಞೆಯ ಕೊರತೆ ಉಚ್ಚಾರಣೆಯ ನ್ಯೂನ್ಯತೆಗೂ ಕಾರಣ ಎನಿಸುತ್ತದೆ.

ವ್ಯಾಕರಣದೋಷಕ್ಕೆ ಕಾರಣಗಳನ್ನು ಈ ರೀತಿಯಲ್ಲಿ ಪಟ್ಟಿಮಾಡುವುದು.

- ಸಂಧಿಯ ಪರಿಕಲ್ಪನೆ ಇಲ್ಲದಿರುವುದು.
- ಸಮಾಸದ ಪರಿಕಲ್ಪನೆ ಇಲ್ಲದಿರುವುದು.
- ಸಂಧಿಗೂ ಸಮಾಸಕ್ಕೂ ವ್ಯತ್ಯಾಸ ತಿಳಿಯದೇ ಇರುವುದು.
- ಸಂಧಿಯ ನಿಯಮಗಳ ಅರಿವಿಲ್ಲದಿರುವುದು.
- ಸಮಾಸದ ನಿಯಮಗಳ ಅರಿವಿಲ್ಲದಿರುವುದು.
- ಪದ ಬಿಡಿಸಲು ತಿಳಿಯದಿರುವುದು.
- ಸಂಧಿ, ಸಮಾಸ ಪದದ ಅರ್ಥ ತಿಳಿಯದೇ ಇರುವುದು.

**3. ಈ ಕಾರಣಗಳಲ್ಲಿ ಸಮಸ್ಯೆಗೆ ನಿರ್ದಿಷ್ಟ ಕಾರಣಗಳನ್ನು ಗುರುತಿಸುವುದು**

ವೈವಿಧ್ಯಮಯ ಪರೀಕ್ಷಾ ತಂತ್ರಗಳನ್ನು ಬಳಸುವುದರ ಮೂಲಕನಿರ್ದಿಷ್ಟ ಹಂತದ ನಿರ್ದಿಷ್ಟ ಸಮಸ್ಯೆಗಳಿಗೆ ನಿರ್ದಿಷ್ಟ ಕಾರಣಗಳನ್ನು ಗುರುತಿಸುವುದು ಇಲ್ಲಿನ ಪ್ರಕ್ರಿಯೆಯಾಗಿದೆ.

ಉದಾಹರಣೆಗೆ,

**ಉಚ್ಚಾರಣಾ ದೋಷ**

'ಆಪ್ಯಾಯಮಾನ' ಈ ಪದೋಚ್ಚಾರಣೆಯ ಸಂದರ್ಭದಲ್ಲಿ 'ಪ'ಗೆ ಒತ್ತಾಗಿ ಬಂದಿರುವ ಅಕ್ಷರ ಯಾವುದು? ಈ ಪ್ರಶ್ನೆಗೆ ಉತ್ತರವನ್ನು ಗುರುತಿಸುವಲ್ಲಿ ಮಗುವು ಸಮಸ್ಯೆಯನ್ನು ಎದುರಿಸಿದ್ದಾನೆ ಎಂದು ತಿಳಿದಲ್ಲಿ, ಒತ್ತಕ್ಷರವನ್ನು, ಅದರ ಸ್ವರೂಪ / ಪದಸ್ವರೂಪವನ್ನು ಗುರುತಿಸುವಲ್ಲಿ ವಿದ್ಯಾರ್ಥಿಯು ವಿಫಲನಾಗಿದ್ದಾನೆ ಎಂದರ್ಥ.

ಅಂತೆಯೇ, 'ನಿದಾನ', 'ನಿಧಾನ' ಪದೋಚ್ಚಾರಣೆಯ ಸಂದರ್ಭದಲ್ಲಿ, ಉಚ್ಚಾರಣೆ ಒಂದೇ ರೀತಿಯಲ್ಲಿ ಮಾಡುತ್ತಿದ್ದಾನೆ ಎಂದು ಪರಿಭಾವಿಸಿದರೆ, ಇಲ್ಲಿ ಉಚ್ಚಾರಣಾ ದೋಷಕ್ಕೆ ನಿರ್ದಿಷ್ಟ ಕಾರಣವೇನೆಂದು ತಿಳಿಯಲು ಬಳಸಬೇಕಾದ ತಂತ್ರವೆಂದರೆ, 'ನಿಧಾನ' ಹಾಗೂ 'ನಿದಾನ' ಈ ಎರಡು ಪದಗಳ ನಡುವಿನ ಅರ್ಥವನ್ನು ಪ್ರಶ್ನಿಸುವುದು. ಉತ್ತರ ಬರದಿದ್ದಲ್ಲಿ, ಅಕ್ಷರ/ಪದಗಳ ಸ್ವರೂಪದಲ್ಲಿ ಉಂಟಾಗುವ ವ್ಯತ್ಯಾಸ, ಅರ್ಥವ್ಯತ್ಯಾಸವನ್ನು ಪೋಷಿಸುತ್ತದೆ ಎಂಬ ಅಂಶದ ಅರಿವುಮಗುವಿಗೆ ಇಲ್ಲವೆಂಬ ತೀರ್ಮಾನಕ್ಕೆ ಬರುವುದು.

**ವ್ಯಾಕರಣ ದೋಷ**

ವ್ಯಾಕರಣ ದೋಷಕ್ಕೆ ನಿರ್ದಿಷ್ಟ ಕಾರಣವನ್ನು ತಿಳಿದುಕೊಳ್ಳುವುದು.

ಉದಾಹರಣೆಗೆ

ಒತ್ತಕ್ಷರದ ಸ್ವರೂಪದ ಜ್ಞಾನ ಇಲ್ಲದಿರುವುದು

ಒತ್ತಕ್ಷರದಿಂದ ಉಂಟಾಗುವ ಅರ್ಥಗ್ರಹಿಕೆಯ ಗೊಂದಲ.

ಸಂಧಿ–ಸಮಾಸ ದೋಷ

ಸಂಧಿ ಎಂದರೇನು? ಈ ಪ್ರಶ್ನೆಗೆ ವಿದ್ಯಾರ್ಥಿಗಳು ಉತ್ತಿರಿಸಿಲ್ಲ ಎಂದು ಪರಿಭಾವಿಸಿದಲ್ಲಿ, ಸಂಧಿಯ ಪರಿಕಲ್ಪನೆಯು ವಿದ್ಯಾರ್ಥಿಗೆ ಇಲ್ಲದಿರುವುದು ಇದಕ್ಕೆ ಪ್ರಮುಖ ಕಾರಣ ಎಂದು ನಿರ್ದಿಷ್ಟವಾಗಿ ಗುರುತಿಸಬಹುದು.

**ಸಂಧಿಪದ**

ರಾಜಾಶ್ರಯ – ರಾಜಾ + ಶ್ರಯ<br>
ರಾಜ + ರ್ಶಯ<br>
ರಾಜ + ಅಶ್ರಯ

ಹೀಗೆ ಸರಿಯಾದ ರೀತಿಯಲ್ಲಿ ಬಿಡಿಸಿ ಬರೆಯದಿದ್ದಲ್ಲಿ ಪದ ಬಿಡಿಸುವ ವಿಧಾನವು ವಿದ್ಯಾರ್ಥಿಗಳಿಗೆ ತಿಳಿದಿಲ್ಲವೆಂದೇ ಅರ್ಥೈಸಿಕೊಳ್ಳಬಹುದಾಗಿದೆ.

ಸರಿಯಾದ ಕ್ರಮ – ರಾಜ + ಆಶ್ರಯ = ರಾಜಾಶ್ರಯ

**ಸಮಾಸಪದ**

ಮಳೆಗಾಲ = ಮಳೆ + ಕಾಲ – ವಿದ್ಯಾರ್ಥಿಯು ಹೀಗೆ ಸಮಾಸ ಪದವನ್ನು ಬಿಡಿಸಿ ಬರೆದಿದ್ದಾನೆಂದು ಪರಿಭಾವಿಸಿದಲ್ಲಿ, ವಿದ್ಯಾರ್ಥಿಗೆ ಸಂಧಿ ಹಾಗೂ ಸಮಾಸದ ನಡುವಣ ವ್ಯತ್ಯಾಸ ತಿಳಿಯದೇ ಇರುವುದೇ ಈ ಕಲಿಕಾ ಸಮಸ್ಯೆಗೆ ಕಾರಣ ಎಂದು ನಿರ್ಧರಿಸಬಹುದಾಗಿದೆ.

**ಸಂಧಿ–ಸಮಾಸ ನಿಯಮ ಗ್ರಹಿಕೆಯ ದೋಷ**

ಮಳೆ + ಕಾಲ = ಮಳೆಗಾಲ ವಿದ್ಯಾರ್ಥಿಯು ಈ ಪ್ರಶ್ನೆಗೆ ಆಗಮ ಸಂಧಿ ಎಂದು ಉತ್ತರಿಸಿದ್ದಾನೆ ಎಂದು ಪರಿಭಾವಿಸಿ. ಆದರೆ, ಇದಕ್ಕೆ ಸರಿಯುತ್ತರ 'ಆದೇಶ ಸಂಧಿ'ಯಾಗಿರುವುದರಿಂದ ವಿದ್ಯಾರ್ಥಿಗೆ ಸಂಧಿ ನಿಯಮದ ಅರಿವಿಲ್ಲದಿರುವುದೇ ಸಮಸ್ಯೆಗೆ ಕಾರಣವೆಂದು ನಿರ್ಧರಿಸಬಹುದಾಗಿದೆ.

ಅಂತೆಯೇ 'ನಿಟ್ಟುಸಿರು' ಸಮಾಸ ಪದವನ್ನು ನೀಡಿದಾಗ, ವಿದ್ಯಾರ್ಥಿಯು ನಿಡಿದಾದ + ಉಸಿರು ಎಂದು ಪದ ವಿಭಾಗ ಮಾಡಿ, ದ್ವಂದ್ವ ಸಮಾಸವೆಂದು ಉತ್ತರಿಸಿದ್ದಾನೆಂದು ಪರಿಭಾವಿಸಿದಲ್ಲಿ, ಈ ಉತ್ತರ ತಪ್ಪಾಗಿದ್ದು, **'ಕರ್ಮಧಾರಯ ಸಮಾಸ'** ಎಂಬುದು ಸರಿ ಉತ್ತರವಾಗಿದೆ. ಇದಕ್ಕೆ ಸಮಾಸದ ನಿಯಮ ತಿಳಿಯದಿರುವುದೇ ಕಾರಣ ಎನಿಸಿದೆ.

**ವಾಕ್ಯ ರಚನೆ:**

ಸರಿಯಾದ ಕ್ರಮದಲ್ಲಿ ವಾಕ್ಯವನ್ನು ಜೋಡಿಸಿರಿ.

ಮನೆಗೆ ಶಾಲೆಯಿಂದ ರಾಜುವು ಬಂದನು X

ರಾಜುವು ಬಂದನು ಶಾಲೆಯಿಂದ ಮನೆಗೆ X

ರಾಜವು ಶಾಲೆಯಿಂದ ಮನೆಗೆ ಬಂದನು √

ಇಲ್ಲಿ ವಾಕ್ಯರಚನೆಯ ನಿಯಮವು ವಿದ್ಯಾರ್ಥಿಗೆ ತಿಳಿಯದಿರುವುದು

**ಹಂತ 4: ಪರಿಹಾರ ಕಾರ್ಯಕ್ರಮ**

ದೋಷಕ್ಕೆ ಪರಿಹಾರ ಕ್ರಮವು ಈ ಹಂತದ ಉಪಕ್ರಮ ಎನಿಸಿದೆ. ನಿರ್ದಿಷ್ಟ ದೋಷಕ್ಕೆ ಕಾರಣವನ್ನು ಗುರುತಿಸಲಾಗಿದೆ. ನಿರ್ದಿಷ್ಟ ಪರಿಹಾರವನ್ನು ಗುರುತಿಸುವುದೇ ಇಲ್ಲಿನ ಉಪಕ್ರಮ ಎನಿಸಿದೆ.

ಉದಾಹರಣೆಗೆ, ಉಚ್ಚಾರಣಾದೋಷ

ಆಪ್ಯಾಯಮಾನ – ದೋಷ ಉಂಟಾಗಿರುವ ಸಂದರ್ಭ. ಒತ್ತಕ್ಷರದ ಉಚ್ಚಾರಣಾ ಸ್ವರೂಪ, ಧ್ವನಿಸ್ವರೂಪವನ್ನು ಪರಿಚಯಿಸುವುದು.

ಧ್ವನ್ಯುತ್ಪತ್ತಿ ಸ್ಥಾನಗಳ ಬಗೆಗೆ ಪರಿಚಯಿಸುವುದು ಅ–ಹ, ಸ–ಶ–ಷ ಗಳ ನಡುವಣ ಉಂಟಾಗುವ ಉಚ್ಚಾರಣಾ ದೋಷ, ಉಚ್ಚಾರಣಾದೊಷವನ್ನು ಸರಿಪಡಿಸಲು ಸಾಕಷ್ಟು ಅಭ್ಯಾಸ ಕ್ರಮಗಳನ್ನು ಕೈಗೊಳ್ಳುವುದು.

ಮಕ್ಕಳಿಗೆ ತಾವು ತಪ್ಪು ಎಲ್ಲಿ ಮಾಡುತ್ತಿದ್ದೇವೆ ಎಂಬುದನ್ನು ತಿಳಿಸಿಕೊಡುವುದು. ಉದಾಹರಣೆಗೆ, ಪದಾದಿಯ ಒತ್ತಕ್ಷರ ಉಚ್ಚಾರಣೆಯ ದೋಷ ಮಾಡುತ್ತಿದ್ದಾರೆ ಎಂಬುದನ್ನು ತಿಳಿಸಿಕೊಡುವುದು.

ಸ, ಶ, ಷ ಅಥವಾ ಅ, ಹ ದೋಷಗಳಿಗೆ ಸುರಳು ಪದಗಳನ್ನು ನೀಡಿ, ಆಭ್ಯಾಸವನ್ನು ಮಾಡಿಸುವುದು.

ಉದಾಹರಣೆಗೆ, ತರಿಕೆರೆ ಏರಿ ಮೇಲೆ ಮೂರು ಕರಿ ಕುರಿ ಮೇಯುತ್ತದೆ.

**ಹಂತ 5: ತಡೆಗಟ್ಟುವ ಕ್ರಮಗಳು**

ಸಮಸ್ಯೆ ಬರುವ ಮುನ್ನವೇ ಅದನ್ನು ತಡೆಗಟ್ಟಬೆಕು. ಅಂತೆಯೇ ಸಮಸ್ಯೆ ಮತ್ತೊಮ್ಮೆ ಮರುಕಳಿಸದಂತೆಯೇ ಎಚ್ಚರಿಕೆ ವಹಿಸಬೇಕಾಗುತ್ತದೆ. ಇಲ್ಲಿ ಬಳಸುವ ಉಪಕ್ರಮಗಳೇ ತಡೆಗಟ್ಟುವ ಕ್ರಮಗಳು. ಅಕ್ಷರ, ಪದ, ವಾಕ್ಯ ಸ್ವರೂಪದ ಪರಿಚಯ, ಉಚ್ಚಾರಣಾ ಸ್ವರೂಪದ ಪರಿಚಯ, ಧ್ವನ್ಯುತ್ಪತ್ತಿ ಸ್ಥಾನಗಳ ಬಗೆಗೆ

ಅರಿವು ಮೂಡಿಸುವುದು. ಕಾಲಕಾಲಿಕ ಭಾಷಾಭ್ಯಾಸಗಳು, ಸಂಭಾಷಣೆ, ಚರ್ಚೆ, ಸುರುಳಿ ಪದ ನೀಡುವುದು ಎಲ್ಲವನ್ನೂ ಮುಂಜಾಗೃತಾ ಕ್ರಮವಾಗಿ ನಿಯೋಜಿಸಬಹುದಾಗಿದೆ.

**ನೈದಾನಿಕ ಪರೀಕ್ಷೆಯ ಪ್ರಾಮುಖ್ಯತೆ:**

ನೈದಾನಿಕ ಪರೀಕ್ಷೆಯು ಕ್ರಿಯಾ ಸಂಶೋಧನೆಯ ಕ್ರಮವನ್ನೇ ಬಹುಮಟ್ಟಿಗೆ ಒಳಗೊಂಡಿದೆ. ಇದರ ಪ್ರಾಮುಖ್ಯತೆಯನ್ನು ಹೀಗೆ ಗುರುತಿಸಬಹುದು.

1. ವಿದ್ಯಾರ್ಥಿಗಳ ದೌರ್ಬಲ್ಯವನ್ನು ನಿಖರವಾಗಿ ಪತ್ತೆಹಚ್ಚಲು ಸಹಕಾರಿ.
2. ದೌರ್ಬಲ್ಯಗಳಿಗೆ ಕಾರಣ ಮತ್ತು ಪರಿಣಾಮವನ್ನು ಸೂಚಿಸುತ್ತದೆ.
3. ಬೋಧನಾ ಸಮಸ್ಯೆಗಳನ್ನು ತಿಳಿದುಕೊಂಡು ಪರಿಹಾರವನ್ನು ಗುರುತಿಸಲು ಸಹಕಾರಿ.
4. ಕಲಿಕಾ ದೋಷಗಳ ಜೊತೆಗೆ ಸಾಮರ್ಥ್ಯಗಳನ್ನೂ ಪತ್ತೆ ಹಚ್ಚುತ್ತದೆ.
5. ಕಲಿಕೆಗೆ ಪ್ರೇರಣೆ ನೀಡಲು ಸಹಕಾರಿ.
6. ವಿದ್ಯಾರ್ಥಿ, ಶಿಕ್ಷಕ, ಸಂಶೋಧಕರಿಗೆ ಮಾರ್ಗದರ್ಶನ ನೀಡುತ್ತದೆ.

**ನೈದಾನಿಕ ಪರೀಕ್ಷೆಯ ಮಿತಿಗಳು:**

1. ಹೆಚ್ಚಿನ ಸಮಯ ಬಯಸುತ್ತದೆ.
2. ವೈಯಕ್ತಿಕವಾಗಿ ಗಮನಹರಿಸುವ ಸಾಧನವಾದ್ದರಿಂದ ಗುಂಪಿಗೆ ಪ್ರಾಧಾನ್ಯತೆ ಇರುವುದಿಲ್ಲ.
3. ಪರೀಕ್ಷೆಯ ರಚನೆ, ನಿರ್ವಹಣೆಗೆ ಶಿಕ್ಷಕ–ಸಂಶೋಧಕರಿಗೆ ತರಬೇತಿ ಅವಶ್ಯಕ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

1. ಬರವಣಿಗೆ ದೋಷ ಕುರಿತಂತೆ ನೈದಾನಿಕ ಪರೀಕ್ಷೆ ರಚಿಸಿರಿ
2. ವ್ಯಾಕರಣ ಕಲಿಕಾ ದೋಷ ಕುರಿತಂತೆ ನೈದಾನಿಕ ಪರೀಕ್ಷೆ ರಚಿಸಿರಿ.
3. ಛಂದಸ್ಸಿನ ಕಲಿಕಾ ದೋಷ ಕುರಿತಂತೆ ನೈದಾನಿಕ ಪರೀಕ್ಷೆ ರಚಿಸಿರಿ.
4. ಆಯ್ಕೆಯ ಘಟಕವೊಂದಕ್ಕೆ ಆ್ಯಂಡರ್‌ಸನ್ ಸೂಚನೆಗಳಿಗನುಗುಣವಾಗಿ ಉದ್ದೇಶಗಳನ್ನು ರಚಿಸಿರಿ.

### 4.5.4. ಸಾರಾಂಶಿಸೋಣ

- 'ಘಟಕ ಪರೀಕ್ಷೆ'ಯು ಘಟಕ ಯೋಜನೆಯ ಅಂತಿಮ ಘಟ್ಟವಾಗಿದ್ದು, ಘಟಕಾದ್ಯಂತ ಗಳಿಸಿದ ಸಾಮರ್ಥ್ಯ ಹಾಗೂ ಕೌಶಲಗಳ ಗಳಿಕೆಯ ಕುರಿತಂತೆ, ನೀಲನಕಾಶೆಯನ್ನು ಆಧರಿಸಿ, ಮೌಲ್ಯಮಾಪನಕ್ಕಾಗಿ ಬಳಸುವ ಸಾಧನಾ ಪರೀಕ್ಷೆಯನ್ನು 'ಘಟಕ ಪರೀಕ್ಷೆ' ಎನ್ನುವರು.
- ಪಠ್ಯಾಂಶ, ಉದ್ದೇಶ, ಪ್ರಶ್ನೆಯ ವಿಧ, ಕಾಠಿಣ್ಯತೆ ಇವುಗಳಿಗೆ ಹೊಂದಿಕೊಂಡಂತೆ ರೂಪುಗೊಳಿಸಲಾಗಿರುವ ಪರೀಕ್ಷಾ ಪೂರ್ವಯೋಜನೆಯೇ 'ನೀಲನಕಾಶೆ' ಎನಿಸಿಕೊಳ್ಳುತ್ತದೆ.
- ನಿರ್ದಿಷ್ಟ ಕ್ಷೇತ್ರದಲ್ಲಿ ವಿದ್ಯಾರ್ಥಿಯ ದೌರ್ಬಲ್ಯಗಳನ್ನು ನಿಖರವಾಗಿ ಪತ್ತೆಹಚ್ಚಲು ತಯಾರಿಸಲಾದ ಪರೀಕ್ಷೆಗಳಿಗೆ 'ನೈದಾನಿಕ ಪರೀಕ್ಷೆ' ಎಂದು ಹೆಸರು.
- ವಿದ್ಯಾರ್ಥಿಗಳ ಭಾಷಾ ದೌರ್ಬಲ್ಯಗಳನ್ನು ಪರೀಕ್ಷಿಸಿ, ಕಂಡುಕೊಳ್ಳಲಾದ ಸಮಸ್ಯೆಗಳಿಗೆ ಸೂಕ್ತ ಪರಿಹಾರಗಳನ್ನು ಕೈಗೊಳ್ಳಲಾಗುವ ಪರೀಕ್ಷೆಗಳಿಗೆ 'ಭಾಷಾ ದೋಷನಿದಾನ ಪರೀಕ್ಷೆ'ಗಳು ಎನ್ನಲಾಗುತ್ತದೆ.
- ಈ ಪರೀಕ್ಷೆಯು ಪ್ರಮುಖವಾಗಿ ದೋಷಗಳನ್ನು ಗುರುತಿಸುವುದು, ದೋಷಗಳಿಗೆ ಕಾರಣಗಳನ್ನು ಗುರುತಿಸುವುದು, ಮತ್ತು ದೋಷಗಳಿಗೆ ಯುಕ್ತ ಪರಿಹಾರ ಕ್ರಮವನ್ನು ಕಂಡು ಹಿಡಿಯುವುದು – ಈ ಮೂರು ಪ್ರಕ್ರಿಯೆಗಳನ್ನು ಒಳಗೊಳ್ಳುತ್ತದೆ.

- ಭಾಷಾ ದೋಷನಿದಾನ ಪರೀಕ್ಷೆಯು ೧. ದೋಷಗಳನ್ನು ಮಾಡುವವರು ಯಾರು? ಎಂದು ಗುರುತಿಸುವುದು. ೨. ದೋಷಗಳು ಎಲ್ಲಿ ಆಗುತ್ತಿವೆ? ಎಂದು ಗುರುತಿಸುವುದು. ೩. ದೋಷಗಳು ಏಕೆ ಆಗುತ್ತಿವೆ? ಎಂದು ಗುರುತಿಸುವುದು. ೪. ಪರಿಹಾರ ಕ್ರಮವನ್ನು ಕೈಗೊಳ್ಳುವುದು. ೫. ತಡೆಗಟ್ಟುವ ಕ್ರಮಗಳನ್ನು ಆಲೋಚಿಸಿ ಅನ್ವಯಿಸುವುದು ಎಂಬೀ ಐದು ಹಂತಗಳಲ್ಲಿ ರೂಪುಗೊಳ್ಳುತ್ತದೆ.

### 4.5.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1 ಮತ್ತು 2

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ - 1**

ತಪಶೀಲು ಪಟ್ಟಿಯ ಪ್ರತಿ ಅಂಶದ ಹಿನ್ನೆಲೆಯಲ್ಲಿ ನೀವು ರಚಿಸಿರುವ ಘಟಕ ಪರೀಕ್ಷೆ ಸರಿಯಾಗಿದೆಯೇ ಎಂಬುದನ್ನು ಕಂಡುಕೊಳ್ಳಿ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ - 2**

ನಿಮ್ಮ ಉತ್ಪನ್ನಗಳನ್ನು ಸಹೋದ್ಯೋಗಿಗಳೊಂದಿಗೆ ಚರ್ಚಿಸಿ ಮೌಲ್ಯೀಕರಿಸಿ.

### 4.5.6. ಘಟಕಾಂತ್ಯ ಅಭ್ಯಾಸಗಳು

1. ಘಟಕ ಪರೀಕ್ಷೆ ಎಂದರೇನು? ಘಟಕ ಪರೀಕ್ಷೆಯ ಸ್ವರೂಪವನ್ನು ವಿವರಿಸಿ. ನಿಮ್ಮ ಆಯ್ಕೆಯ ಒಂದು ಪಾಠಕ್ಕೆ ಘಟಕಪರೀಕ್ಷೆಯ ರೂಪುರೇಖೆ ನೀಡಿರಿ.
2. ದೋಷನಿದಾನ ಪರೀಕ್ಷೆ ಎಂದರೇನು? ಭಾಷೆಯಲ್ಲಿ ದೋಷನಿದಾನ ಪರೀಕ್ಷೆಯ ಸ್ವರೂಪವನ್ನೂ ಅದರ ಅಗತ್ಯವನ್ನೂ ಗುರುತಿಸಿ. ಇದರ ಗುಣಗಳನ್ನು ಮತ್ತು ಮಿತಿಗಳನ್ನು ಪಟ್ಟಿಮಾಡಿ.

### 4.5.7. ಪರಾಮರ್ಶನ ಸೂಚಿ


1. ಡಾ. ಐ.ಎ ಲೋಕಾಪುರ, ಪ್ರೌಢಶಿಕ್ಷಣ ಹಾಗೂ ಶಿಕ್ಷಕನ ಕಾರ್ಯಗಳು" ಪ್ರಕಾಶನ: ಜಯದೇವ. ಮೈ, ನಾಗರಾಜ ಮೈ, ಮೆಣಸಗಿ, ವಿಧ್ಯಾನಿಧಿ ಪ್ರಕಾಶನ, ಸ್ಟೇಷನ್ ರಸ್ತೆ, ಮಹೇಂದ್ರಕರ ವೃತ್ತದ ಸಮೀಪ, ಗದಗ – 582101, 5 ನೇ ಆವೃತ್ತಿ 1994
2. ಸಂಪನ್ಮೂಲ ಪುಸ್ತಕ ರಚನಾ ಸಮಿತಿ, ಡಿಎಸ್‌ಸಿಆರ್‌ಟಿ, ಅನುವಾದಕ ಮಂಡಲಿ, 'ಪಠ್ಯಕ್ರಮ ಕಾರ್ಯಾಚರಣೆಯ ತತ್ತ್ವಗಳು', ಪ್ರಕಾಶನ: ವಿನಾಯಕ ಆಫ್‌ಸೆಟ್ ಪ್ರಿಂಟರ್ಸ್ # 56, 9ನೇ ಮುಖ್ಯರಸ್ತೆ, 1ನೇ ಅಡ್ಡರಸ್ತೆ, ಕಾವೇರಿ ನಗರ, ಬನಶಂಕರಿ ಕೈಗಾರಿಕಾ ಪ್ರದೇಶ, ಬನಶಂಕರಿ 2ನೇ ಹಂತ, ಬೆಂಗಳೂರು – 560070, ಪ್ರಕಟಣಾ ವರ್ಷ 2008
3. ಡಾ.ಎಸ್.ಬಿ.ಯಾದವಾಡ, 'ಪಠ್ಯಕ್ರಮ ಹಾಗೂ ಮೌಲ್ಯಮಾಪನ' ಪ್ರಕಾಶನ: ವಿದ್ಯಾನಿಧಿ ಪ್ರಕಾಶನ, ಸ್ಟೇಷನ್ ರೋಡ ಮತ್ತು ಜೆ.ಟಿ,ಮಠ ರೋಡ, ಗದಗ 582101, 3ನೇ ಆವೃತ್ತಿ, ಪ್ರಕಟಣಾ ವರ್ಷ : 2015–16
4. Shodhaganga(ಶೋಧಗಂಗಾ), 'Testing and Evaluation (ಪರೀಕ್ಷಿಸುವುದು ಮತ್ತು ಮೌಲ್ಯಮಾಪನ http://shodhganga.inflibnet.ac.in/bitstream/10603/51437/8/08_chapter 4.pdf.
5. H.S.Srivathsa, 'Comprehensive Evaluation in Schools', Published at the Publication Department by the Secratory, National Counsil of Educaiton Research and Training, Sri Aurobindo Marg, New Delhi 110016 and Printed at Narendra Press, 20, Model Basti, New Delhi – 110005 year 1989

6. ಡಾ. ಐ.ಎ ಲೋಕಾಪುರ, ಪ್ರೌಢಶಿಕ್ಷಣ ಹಾಗೂ ಶಿಕ್ಷಕನ ಕಾರ್ಯಗಳು" ಪ್ರಕಾಶನ: ಜಯದೇವ. ಮೈ, ನಾಗರಾಜ ಮೈ, ಮೆಣಸಗಿ, ವಿಧ್ಯಾನಿಧಿ ಪ್ರಕಾಶನ, ಸ್ಟೇಷನ್ ರಸ್ತೆ, ಮಹೇಂದ್ರಕರ ವೃತ್ತದ ಸಮೀಪ, ಗದಗ – 582101, 5 ನೇ ಆವೃತ್ತಿ 1994
7. ಕೆ. ಯಶೋಧರಾ, 'ಶಿಕ್ಷಣದಲ್ಲಿ ಸಂಖ್ಯಾಶಾಸ್ತ್ರ', ಪ್ರಕಾಶನ : ಚಿನ್ನಸ್ವಾಮಿ ಜಗನ್ನಾಥ್ ಪ್ರೈವೇಟ್ ಲಿಮಿಟೆಡ್, ಮೈಸೂರು, ಪ್ರಕಟಣಾ ವರ್ಷ – 2007
8. American Speech-Language-Hearing Association (ASHA), 'Assessment Tools, Techniques, and Data Sources' https://www.asha.org/Practice-Portal/Clinical-Topics/Late-Language-Emergence/Assessment-Tools-Techniques-and-Data-Sources/

## ಬ್ಲಾಕ್ 4 : ಕನ್ನಡ ಭಾಷಾ ಬೋಧನೆಯಲ್ಲಿ ಪಾಠ ಯೋಜನೆಗಳು ಮತ್ತು ಮೌಲ್ಯಮಾಪನ

### ಘಟಕ 6 : ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ

**ಘಟಕದ ರಚನೆ**


4.6.1. ಕಲಿಕೆಯ ಉದ್ದೇಶಗಳು
4.6.2. ಪೀಠಿಕೆ
4.6.3. ಕಲಿಕೆಯ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು
4.6.3.1 ಭಾಷೆ ಹಾಗೂ ನಿರಂತರ – ವ್ಯಾಪಕ ಮೌಲ್ಯಮಾಪನ
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ - 1
4.6.3.2. ಕನ್ನಡ ಭಾಷೆಯ ಮಾಪನದಲ್ಲಿ ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ - 2
4.6.4. ಸಾರಾಂಶಿಸೋಣ
4.6.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು - 1 ಮತ್ತು 2
4.6.6. ಘಟಕಾಂತ್ಯ ಅಭ್ಯಾಸಗಳು
4.6.7. ಪರಾಮರ್ಶನ ಸೂಚಿ


**4.6.1. ಕಲಿಕೆಯ ಉದ್ದೇಶಗಳು**

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿ ಶಿಕ್ಷಕ ಶಿಕ್ಷಕಿಯರು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು:

- ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದ ಉದ್ದೇಶಗಳನ್ನು ವಿವರಿಸುವರು;
- ಮೌಲ್ಯಮಾಪನದ ವಿಧಗಳನ್ನು ವಿಶ್ಲೇಷಿಸುವರು; ಮತ್ತು
- ಭಾಷಾ ಮೌಲ್ಯಮಾಪನದಲ್ಲಿ ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ವಿಧಾನವನ್ನು ಅನುಸರಿಸಲು ಸಮರ್ಥರಾಗುವರು.

**4.6.2. ಪೀಠಿಕೆ**

ಮೌಲ್ಯಮಾಪನವು ಈ ಹಿಂದೆ ಬೋಧನಾ / ಕಲಿಕಾ ಪ್ರಕ್ರಿಯೆಯ ಅಂತ್ಯದಲ್ಲಿ ನಡೆಯುವ ಪ್ರಕ್ರಿಯೆಯಾಗಿತ್ತು. ಆದರೆ, ಪ್ರಸ್ತುತ ಮೌಲ್ಯಮಾಪನದ ಪರಿಕಲ್ಪನೆ ಬದಲಾಗಿದ್ದು, ಮೌಲ್ಯಮಾಪನವು ನಿರಂತರ ಮತ್ತು ವ್ಯಾಪಕ ನೆಲೆಯಲ್ಲಿ ನೆರವೇರುತ್ತಿರುತ್ತದೆ. ಉದ್ದೇಶಗಳ ಸಾಧನೆಯನ್ನು ನಿರಂತರವಾಗಿ, ವ್ಯಾಪಕವಾಗಿ ನೆರವೇರಿಸಲಾಗುತ್ತದೆ. ಈ ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನವು ಸಾಂಪ್ರದಾಯಿಕ ಮೌಲ್ಯಮಾಪನಕ್ಕಿಂತ ಹೆಚ್ಚು ಸಮಗ್ರವಾದ ಪ್ರಕ್ರಿಯೆಯಾಗಿದ್ದು, ಇದರ ಅರ್ಥ ಮತ್ತು ಸ್ವರೂಪವನ್ನು ನೀವು ಈಗಾಗಲೇ 'ಕಲಿಕೆಗಾಗಿ ಮಾಪನ' ಕೋರ್ಸಿನ ಅಡಿಯಲ್ಲಿ ಕಲಿತಿದ್ದೀರಿ. ಭಾಷಾ ಮೌಲ್ಯಮಾಪನದ ಸಂದರ್ಭದಲ್ಲಿ ನಿರಂತರ ಮತ್ತು ಸಮಗ್ರ ಮೌಲ್ಯಮಾಪನದ ಸ್ವರೂಪವೇನು ಎಂಬುದನ್ನು ಈ ಘಟಕದಲ್ಲಿ ವಿಚಾರಮಾಡೋಣ.

### 4.6.3. ಕಲಿಕೆಯ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

#### 4.6.3.1. ಭಾಷೆ ಹಾಗೂ ನಿರಂತರ – ವ್ಯಾಪಕ ಮೌಲ್ಯಮಾಪನ

**ನಿರಂತರ–ವ್ಯಾಪಕ ಮೌಲ್ಯಮಾಪನದ ಅರ್ಥ:**

ಸಮಗ್ರ ನೆಲೆಯಲ್ಲಿ ಶೈಕ್ಷಣಿಕ ಪ್ರಕ್ರಿಯೆಯ ಆದ್ಯಂತ, ನಿರಂತರವಾಗಿ ವಿದ್ಯಾರ್ಥಿಯ ಪಠ್ಯ ಹಾಗೂ ಪಠ್ಯಪೂರಕ ಚಟುವಟಿಕೆಗಳಲ್ಲಿನ ಸಾಧನೆ, ವೈವಿಧ್ಯಮಯ ಪಾತ್ರಗಳ ನಿರ್ವಹಣೆ, ಪಾಲ್ಗೊಳ್ಳುವಿಕೆ ಇತ್ಯಾದಿ ಕುರಿತಂತೆ ಮಗುವಿನ ಸರ್ವಾಂಗೀಣ ಅಭಿವೃದ್ಧಿಯನ್ನು ಮೌಲ್ಯಮಾಪಿಸುವ ಪ್ರಕ್ರಿಯೆಯನ್ನು 'ನಿರಂತರ – ವ್ಯಾಪಕ ಮೌಲ್ಯಮಾಪನ' ಎನ್ನುವರು.

ನಿರಂತರ–ವ್ಯಾಪಕ ಮೌಲ್ಯಮಾಪನ (ಸಿಸಿಇ)ಯಲ್ಲಿ ಎರಡು ಮೌಲ್ಯಮಾಪನ ಎರಡು ಆಯಾಮಗಳು ಸಂಯೋಜನೆಗೊಂಡಿವೆ.

**1. ನಿರಂತರ ಮೌಲ್ಯಮಾಪನ:**

ಕಲಿಕಾ ಸಂದರ್ಭಗಳು ಹಾಗೂ ವಿವಿಧ ಚಟುವಟಿಕೆಯ ಸಂದರ್ಭದಲ್ಲಿ ವಿದ್ಯಾರ್ಥಿಗಳಲ್ಲಿ ನಿರ್ದಿಷ್ಟ ವರ್ತನಾ ವಿನ್ಯಾಸಕ್ಕೆ ಹೊಂದಿಕೆಯಾಗಿದೆಯೇ ಇಲ್ಲವೇ ಅನ್ನುವುದನ್ನು ವಿದ್ಯಾರ್ಥಿಗಳ ಕಲಿಕೆಯನ್ನು ನಿರಂತರವಾಗಿ ಕಲಿಕಾ ಪ್ರಕ್ರಿಯೆಯ ಜೊತೆಗೆ ಮೌಲ್ಯಮಾಪನ ಮಾಡುವುದಕ್ಕೆ ನಿರಂತರ ಮೌಲ್ಯಮಾಪನ ಎನ್ನುವರು. ಭಾಷೆಯು ನಿರಂತರ ಬದಲಾವಣೆಗೆ ಒಳಗಾಗುವ ಅಂಶವಾಗಿದ್ದು, ಕಲಿಕೆಯ ಸಂದರ್ಭದಲ್ಲಿ ಭಾಷೆಯ ಸಾಮರ್ಥ್ಯಗಳನ್ನು ಕೌಶಲಗಳನ್ನು ನಿರಂತರವಾಗಿ ಮೌಲ್ಯಮಾಪಿಸುವ ಅಗತ್ಯವಿದೆ.

**2. ವ್ಯಾಪಕ ಮೌಲ್ಯಮಾಪನ:**

ಪಠ್ಯ, ಪಠ್ಯಪೂರಕ ಅಂಶಗಳನ್ನು ಒಳಗೊಂಡಂತೆ ಸಮಗ್ರ ನೆಲೆಯಲ್ಲಿ ಕೈಗೊಳ್ಳಲಾಗುವ ಮೌಲ್ಯಮಾಪನವನ್ನು 'ವ್ಯಾಪಕ ಮೌಲ್ಯಮಾಪನ' ಎನ್ನುವರು ಅಥವಾವಿದ್ಯಾರ್ಥಿಗಳ ಸರ್ವತೋಮುಖ ವಿಕಾಸವನ್ನು ಗಮನದಲ್ಲಿಟ್ಟುಕೊಂಡು, ಪಠ್ಯ, ಸಹಪಠ್ಯ ಮತ್ತು ಇತರ ಅಂಶಗಳಲ್ಲಿ ವಿದ್ಯಾರ್ಥಿಗಳ ಕಲಿಕೆಯ ಸಾಧನೆಯ ಮಟ್ಟವನ್ನು ಮೌಲ್ಯಮಾಪನ ಮಾಡುವುದೇ ವ್ಯಾಪಕ ಅಥವಾ ಸಮಗ್ರ ಮೌಲ್ಯಮಾಪನ.

ಕನ್ನಡ ಭಾಷಾ ಕೌಶಲ ಹಾಗೂ ಸಾಮರ್ಥ್ಯಗಳ ಕಲಿಕೆ ವ್ಯಾಪಕವಾಗಿದ್ದು, ಭಾಷೆ, ವ್ಯಾಕರಣ, ಸಾಹಿತ್ಯ, ಅಲಂಕಾರ ಛಂದಸ್ಸು ಹೀಗೆ ವ್ಯಾಪಕವಾಗಿದೆ. ಕೌಶಲ ಹಾಗೂ ಸಾಮರ್ಥ್ಯಗಳ ಮೌಲ್ಯಮಾಪನ ಇಲ್ಲಿನ ಮೌಲ್ಯಮಾಪನದ ನೆಲೆಯಾಗಿರುತ್ತದೆ.

**ಭಾಷಾ ಮೌಲ್ಯಮಾಪನದಲ್ಲಿ ನಿರಂತರ–ವ್ಯಾಪಕ ಮೌಲ್ಯಮಾಪನದ ಪ್ರಾಮುಖ್ಯತೆ:**

ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನವು NCF –2005ರ ಪ್ರಮುಖ ಆಶಯವಾಗಿದ್ದು, ಕಲಿಕೆ ಮತ್ತು ಕಲಿಕೆಯ ಪ್ರಗತಿಯು ವ್ಯಾಪಕ ಹಾಗೂ ಸಮಗ್ರ ನೆಲೆಯಲ್ಲಿರಬೇಕೆಂದು ನಿರ್ದೇಶಿಸುತ್ತದೆ. ಮಕ್ಕಳ ಸರ್ವಾಂಗೀಣ ಅಭಿವೃದ್ಧಿ ಕುರಿತಂತೆ, ಸಮಗ್ರ ನೆಲೆಯಲ್ಲಿ ನಿರಂತರವಾಗಿ, ವ್ಯಾಪಕವಾಗಿ ಮೌಲ್ಯಮಾಪನ ಪ್ರಕ್ರಿಯೆ ಇರಬೇಕೆಂದು ಸ್ಪಷ್ಟಪಡಿಸುತ್ತಾ, ನಿರಂತರ ಮೌಲ್ಯಮಾಪನಕ್ಕೆ ಒತ್ತಾಯಿಸುತ್ತವೆ.

1. ವಿದ್ಯಾರ್ಥಿಗಳಲ್ಲಿ ಭಾಷಾ ಸಾಮರ್ಥ್ಯಗಳ, ಕೌಶಲಗಳ ಗಳಿಕೆಯ ಮಟ್ಟವನ್ನು ಮೌಲ್ಯಮಾಪಿಸುವಲ್ಲಿ ಪ್ರಮುಖ ಸಾಧನ ಎನಿಸಿದೆ.
2. ತತ್‌ಕ್ಷಣದ ಪುಷ್ಠೀಕರಣ ಒದಗಿಸುವಲ್ಲಿ ಪ್ರಮುಖ ಸಾಧನ ಎನಿಸಿದೆ.
3. ವಿದ್ಯಾರ್ಥಿಗಳ ಗುಣಾತ್ಮಕ ಪ್ರಗತಿಯನ್ನು ಖಾತ್ರಿ ಪಡಿಸುತ್ತದೆ.

4. ವಿದ್ಯಾರ್ಥಿಗಳಿಗೆ ಸ್ವ ಮೌಲ್ಯಮಾಪನಕ್ಕೆ ನೆರವಾಗುತ್ತದೆ
5. ಶಿಕ್ಷಕ ಹಾಗೂ ಪೋಷಕರಿಗೆ ಕಲಿಕೆಯ ಕುರಿತಂತೆ ಹಿಮ್ಮಾಹಿತಿಯನ್ನು ಒದಗಿಸಿಕೊಡುತ್ತದೆ.
6. ವಿವಿಧ ಮೌಲ್ಯಮಾಪನಗಳನ್ನು ಮೌಲ್ಯಮಾಪನದಲ್ಲಿ ಸಂಯೋಜಿಸುತ್ತದೆ.
   ಉದಾಹರಣೆಗೆ, ರೂಪಣಾತ್ಮಕ, ಸಂಕಲನಾತ್ಮಕ.

**ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದ ಉದ್ದೇಶಗಳು:**
ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದ ಉದ್ದೇಶಗಳನ್ನು ಭಾಷಾ ಬೋಧನೆ / ಕಲಿಕೆಯ ನೆಲೆಯಲ್ಲಿ ಹೀಗೆ ಗುರುತಿಸಬಹುದಾಗಿದೆ.

**1. ವಿದ್ಯಾರ್ಥಿಯ ಸಾಧನೆಯನ್ನು ಸಮಗ್ರವಾಗಿ ಅವಲೋಕನಕ್ಕೆ ಒಳಪಡಿಸುವುದು.**

ಕೇವಲ ವಾರ್ಷಿಕ ಪರೀಕ್ಷೆ ಮಾತ್ರವಲ್ಲದೇ ಮಾತುಗಾರಿಕೆ, ಓದುಗಾರಿಕೆ, ಬರವಣಿಗೆ ಇತ್ಯಾದಿ ಎಲ್ಲಾ ಭಾಷಾ ಕೌಶಲಗಳಲ್ಲಿ ಸಮಗ್ರ ನೆಲೆಯಲ್ಲಿ ವರ್ತನಾತ್ಮಕ ಪರಿವರ್ತನೆಯನ್ನು ಗುರುತಿಸಲು ವ್ಯಾಪಕ ನೆಲೆಯಲ್ಲಿ ವರ್ತನೆಯನ್ನು ಅವಲೋಕನಕ್ಕೆ ಸಮಗ್ರವಾಗಿ ಒಳಪಡಿಸುವುದು ಈ ರೀತಿಯ ಮೌಲ್ಯಮಾಪನದ ಉದ್ದೇಶ ಎನಿಸಿದೆ.

**2. ನಿರೀಕ್ಷಿತ ಹಾಗೂ ಗಳಿಸಿದ ಕಲಿಕಾ ಸಾಮರ್ಥ್ಯಗಳನ್ನು ವಿಶ್ಲೇಷಿಸುವುದು.**

ನಿರೀಕ್ಷಿತ ಸಾಮರ್ಥ್ಯ ಹಾಗೂ ಗಳಿಸಿದ ಸಾಮರ್ಥ್ಯಗಳನ್ನು ಗುರುತಿಸಿ, ಹೋಲಿಸಿ ಅವುಗಳ ನಡುವೆ ವ್ಯತ್ಯಾಸ ಗುರುತಿಸಿ ವಿಶ್ಲೇಷಿಸುವುದು ಈ ಬಗೆಯ ಮೌಲ್ಯಮಾಪನದ ಪ್ರಮುಖವಾದ ಉದ್ದೇಶ ಎನಿಸಿದೆ.

**3. ವಿವಿಧ ಸಾಧನ ಮತ್ತು ಸಲಕರಣೆಗಳನ್ನು ಉಪಯೋಗಿಸಿ ಮೌಲ್ಯಮಾಪಿಸುವುದು ಈ ರೀತಿಯ ಮೌಲ್ಯಮಾಪನದ ಉದ್ದೇಶ ಎನಿಸಿದೆ.**

ಪರೀಕ್ಷೆ ಮಾತ್ರವಲ್ಲದೇ ಇನ್ನಿತರೆ ಸಾಧನಗಳಾದ ದರ್ಜಾಮಾಪನಿ, ಸಂದರ್ಶನಾವಳಿ, ಸಾಂದರ್ಭಿಕ ದಾಖಲೆ ಇತ್ಯಾದಿ ಇತ್ಯಾದಿಗಳನ್ನು ಸಲಕರಣೆಯಾಗಿ ಬಳಸುವುದು.

**4. ಅಂಕಗಳ ಬದಲಿಗೆ ಶ್ರೇಣಿ ನೀಡುವ ಕ್ರಮವನ್ನು ಜಾರಿಗೆ ತರುವುದು.**

ಭಾಷಾ ಸಾಮರ್ಥ್ಯಗಳ ಗಳಿಕೆ, ಕೌಶಲಗಳ ಅಭಿವೃದ್ಧಿ ಪರಿಮಾಣಾತ್ಮಕ ನೆಲೆಗಿಂತ ಗುಣಾತ್ಮಕ ನೆಲೆಯಲ್ಲಿ ಗಣಿಸಬೇಕಾದ ಅಂಶಗಳಾಗಿದ್ದು, ಇಲ್ಲಿ ಅಂಕಗಳ ಬದಲಿಗೆ ಶ್ರೇಣಿ ನೀಡುವ ಕ್ರಮವನ್ನು ಪ್ರೋತ್ಸಾಹಿಸುವುದು ನಿರಂತರ–ವ್ಯಾಪಕ ಮೌಲ್ಯಮಾಪನದ ಉದ್ದೇಶವಾಗಿದೆ.

**5. ಸ್ವಮೌಲ್ಯಮಾಪನಕ್ಕೆ ಅನುವು ಮಾಡಿಕೊಡುವುದು.**

ವಿದ್ಯಾರ್ಥಿಯು ತನ್ನ ಸ್ವ ಕಲಿಕೆಯನ್ನು ತಾನೇ ಸ್ವತಃ ಮೌಲ್ಯಮಾಪಿಸಿಕೊಳ್ಳಬೇಕು. ಇದಕ್ಕೆ ಆಸ್ಪದ ನೀಡುವುದು ಈ ಮೌಲ್ಯಮಾಪನ ಕ್ರಮದ ಉದ್ದೇಶವಾಗಿದೆ. ಭಾಷೆಯ ಕಲಿಕೆಯನ್ನು ಕುರಿತಂತೆ ಸ್ವಮೌಲ್ಯಮಾಪನ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತದೆ.

**6. ವರ್ತನೆ ರೂಪಿಸುವಲ್ಲಿ ಸಕಾಲಿಕ ಹಿಮ್ಮಾಹಿತಿಯನ್ನು ಒದಗಿಸುವುದು.**

ಮಗುವಿನ ವರ್ತನಾತ್ಮಕ ಬದಲಾವಣೆ ನಿರಂತರ – ವ್ಯಾಪಕ ಮೌಲ್ಯಮಾಪನದ ಭಾಗವಾಗಿದ್ದು, ರೂಪಣಾತ್ಮಕ ಮೌಲ್ಯಮಾಪನ ತಂತ್ರದಿಂದ ವಿದ್ಯಾರ್ಥಿ, ಶಿಕ್ಷಕರು ಹಾಗೂ ಪೋಷಕರಿಗೆ ಹಿಮ್ಮಾಹಿತಿಯನ್ನು ನೀಡಿ, ವರ್ತನೆಯನ್ನು ರೂಪಿಸುವಲ್ಲಿ ಪ್ರಮುಖ ಸಾಧನವಾಗಿ ಕಾರ್ಯ ನಿರ್ವಹಿಸುತ್ತದೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ - 1**

ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಎಂದರೇನು? ಭಾಷಾ ಮೌಲ್ಯಮಾಪನದ ಸಂದರ್ಭದಲ್ಲಿ ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದ ಪ್ರಯೋಜನಗಳೇನು?

### 4.6.3.2. ಕನ್ನಡ ಭಾಷೆಯ ಮಾಪನದಲ್ಲಿ ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ

**ಮೌಲ್ಯಮಾಪನದ ವಿಧಗಳು**

ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದ ಅರ್ಥ ಮತ್ತು ಸ್ವರೂಪವನ್ನು ನೀವು 'ಕಲಿಕೆಗಾಗಿ ಮಾಪನ' ಪತ್ರಿಕೆಯಲ್ಲಿ ನೀವು ಈಗಾಗಲೇ ಕಲಿತಿರುವಿರಿ. ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದ ಸಂದರ್ಭದಲ್ಲಿ ನಾವು ರೂಪಣಾತ್ಮಕ ಮಾಪನವನ್ನು ಅನುಸರಿಸುತ್ತೇವೆ ಎಂಬುದೂ ನಿಮಗೆ ಮನವರಿಕೆ ಇದೆ. ಈ ರೂಪಣಾತ್ಮಕ ಮಾಪನ ಕನ್ನಡ ಭಾಷೆಯಲ್ಲಿ ಯಾವ ರೂಪ ಪಡೆಯುತ್ತದೆ ಎಂಬುದನ್ನು ವಿಚಾರಮಾಡೋಣ.

**ರೂಪಣಾತ್ಮಕ ಮೌಲ್ಯಮಾಪನ:** ವಿದ್ಯಾರ್ಥಿಗಳ ಕಲಿಕಾ ಪ್ರಗತಿಯನ್ನು ಶೈಕ್ಷಣಿಕ ವರ್ಷದಲ್ಲಿ ನಿರಂತರವಾಗಿ ಗುರುತಿಸುವ ಮೌಲ್ಯಮಾಪನಕ್ಕೆ ರೂಪಣಾತ್ಮಕ ಮೌಲ್ಯಮಾಪನ ಎನ್ನುವರು. ಈ ರೂಪಣಾತ್ಮಕ ಮೌಲ್ಯಮಾಪನ ವರ್ಷಪೂರ್ತಿ ಶಿಕ್ಷಕರು ಔಪಚಾರಿಕ ಮತ್ತು ಅನೌಪಚಾರಿಕ ಮೌಲ್ಯಮಾಪನವಾಗಿದೆ. ನೈದಾನಿಕ ಪರೀಕ್ಷೆ ಮತ್ತು ಪರಿಹಾರ ಬೋಧನೆಗಳನ್ನೂ ಈ ರೀತಿಯ ಮೌಲ್ಯಮಾಪನ ಒಳಗೊಳ್ಳುತ್ತದೆ. ರೂಪಣಾತ್ಮಕ ಮೌಲ್ಯಮಾಪನ ವರ್ತನಾತ್ಮಕ ಬದಲಾವಣೆಯನ್ನು ಪರೀಕ್ಷಿಸಲು ಬಳಸುವ ಮೌಲ್ಯಮಾಪನವಾಗಿದ್ದು, ನಿತ್ಯದ ತರಗತಿಗಳಲ್ಲಿಯೂ ವರ್ತನಾತ್ಮಕ ಪರಿವರ್ತನೆಯನ್ನು ಗುರುತಿಸಲು ಬಳಸುವ ಮೌಲ್ಯಮಾಪನವಾಗಿದೆ.

ನಿರ್ದಿಷ್ಟ ಬೋಧನಾ ಉದ್ದೇಶಗಳು ಮಗುವಿನ ನಿರ್ದಿಷ್ಟ ವರ್ತನಾತ್ಮಕ ಪರಿವರ್ತನೆಯ ವಿನ್ಯಾಸವನ್ನು ಬೋಧನೆಯ ಪೂರ್ವದಲ್ಲಿಯೇ ನಿರ್ದೇಶಿಸುವ ನಿರ್ದೇಶನಾಂಶಗಳಾಗಿದ್ದು, ಮಗವಿನ ವರ್ತನೆಯನ್ನು ಈ ರೀತಿಯ ಮೌಲ್ಯಮಾಪನದಲ್ಲಿ ರೂಪಿಸಲು ಬಳಸುವ ಸಾಧನ ಎನಿಸಿದೆ. ವರ್ತನಾತ್ಮಕ ಪರಿವರ್ತನೆಯನ್ನು ಪ್ರಸ್ತುತ ಬಳಕೆಯಲ್ಲಿರುವ ಆ್ಯಂಡರ್‌ಸನ್ ಗುರುತಿಸಿದ ಉದ್ದೇಶಗಳ ನೆಲೆಯಲ್ಲಿ ಚರ್ಚಿಸುವ ಅಗತ್ಯವಿದೆ.

ಆ್ಯಂಡರ್‌ಸನ್ ಉದ್ದೇಶಗಳ ಏಣಿಶ್ರೇಣಿ ಕ್ರಮದಲ್ಲಿ ನಿತ್ಯದ ಬೋಧನಾ ಕಲಿಕಾ ಪ್ರಕ್ರಿಯೆಗೆ ಯೋಜನೆಯನ್ನು ರೂಪಿಸುವುದು ಪ್ರಸ್ತುತದ ಚಿಂತನೆಯಾಗಿದ್ದು, ಈ ಆ್ಯಂಡರ್‌ಸನ್ ಉದ್ದೇಶಗಳ ನೆಲೆ 'ಕ್ರಿಯಾತ್ಮಕತೆ'ಯಲ್ಲಿದ್ದು, ಕ್ರಿಯಾಪದಗಳಲ್ಲಿ ವರ್ತಣಾ ಪರಿವರ್ತನೆಯನ್ನು ನಮೂದಿಸಲಾಗುತ್ತದೆ.

ಆ್ಯಂಡರ್‌ಸರ್ ಉದ್ದೇಶಗಳ ಏಣಿಶ್ರೇಣಿಯನ್ನು ಹೀಗೆ ಗುರುತಿಸಬಹುದಾಗಿದೆ.




ಆ್ಯಂಡರ್‌ಸನ್‌ರವರ ಈ ಏಣಿಶ್ರೇಣಿಯ ನೆಲೆಯಲ್ಲಿ ವರ್ತನಾತ್ಮಕ ಬದಲಾವಣೆಯನ್ನು ಮೌಲ್ಯಮಾಪಿಸುವದನ್ನು ಈ ಕೆಳಗಿನಂತೆ ವಿಶ್ಲೇಷಿಸಬಹುದಾಗಿದೆ.

**1. ಸ್ಮರಿಸುವಿಕೆ:**

ಕಲಿತ ಅಂಶಗಳನ್ನು ಯಥಾವತ್ತಾಗಿ ಪುನಸ್ಮರಿಸುವ ವರ್ತನಾತ್ಮಕ ಬದಲಾವಣೆಯೇ 'ಸ್ಮರಣೆ' ಎನಿಸುತ್ತದೆ.

ಈ ಸ್ಮರಣೆಯ ಉದ್ದೇಶವನ್ನು ವರ್ತನಾತ್ಮಕ ಪದದಲ್ಲಿ ರೂಪಿಸುಕೊಂಡು ಮೌಲ್ಯಮಾಪನ ಕ್ರಮವನ್ನು ರೂಪಿಸುವ ಅಗತ್ಯತೆ ಇದೆ.

ಉದಾಹರಣೆಗೆ,

**ಪಠ್ಯ ಕ್ಷೇತ್ರ:** ನಡುಗನ್ನಡ ಸಾಹಿತ್ಯ

**ಪಠ್ಯ:** ಕುಮಾರವ್ಯಾಸ ಭಾರತದ 'ವಿರಾಟ ಪರ್ವ

**ಪಠ್ಯ ಭಾಗ:**

ಮಂದಗೆಳೆಸಿದ ಪಾಪಿ ಕೌರವ
ನಂದು ಮುಂದಲೆವಿಡಿದು ಸೈಂಧವ
ಬಂದು ಬಳಿಕರಣ್ಯವಾಸದೊಳೆನ್ನನೆಳದೊಯ್ದ
ಇಂದು ಕೀಚಕ ನಾಯ ಕಾಲಲಿ
ನೊಂದೆ ನಾನೀ ಮೂರು ಬಾರಿಯೆ
ಬಂದ ಭಂಗವೆ ಸಾಕೆನುತೆ ಬಸವಳಿದಳಿಂದುಮುಖಿ ॥4॥

ಈ ಪಠ್ಯಭಾಗವನ್ನು ಆಧರಿಸಿ, 'ಸ್ಮರಿಸುವಿಕೆ'ಯ ಉದ್ದೇಶವನ್ನು ಹೀಗೆ ರಚಿಸಿಕೊಳ್ಳಬಹುದಾಗಿದೆ.

**ವಿದ್ಯಾರ್ಥಿಯು ದ್ರೌಪದಿಯನ್ನು ಅವಮಾನಿಸಿದ ಮೂವರನ್ನು ಹೆಸರಿಸುತ್ತಾನೆ**

ಈ ಉದ್ದೇಶಕ್ಕನುಗುಣವಾಗಿ ಬೋಧನಾ ಕಲಿಕಾ ಚಟುವಟಿಕೆ, ತಂತ್ರ, ಮೌಲ್ಯಮಾಪನ ಸಾಧನ, ಕಲಿಕೆಯ ಫಲಿತ ಅಥವಾ ವರ್ತನಾತ್ಮಕ ಪರಿವರ್ತನೆಯನ್ನು ಹೀಗೆ ನಿರ್ಧರಿಸಬಹುದಾಗಿದೆ.

**ಬೋಧನಾ/ಕಲಿಕಾ ಚಟುವಟಿಕೆಯ ನಿರ್ಧಾರ:** ಅಂತರ್‌ಕ್ರಿಯೆ
**ಬೋಧನಾ/ಕಲಿಕಾ ಚಟುವಟಿಕೆಯ ತಂತ್ರ:** ಪ್ರಶ್ನೆ
**ಬೋಧನಾ/ಕಲಿಕಾ ಚಟುವಟಿಕೆಯ ಸಾಧನ:** ಪ್ರಶ್ನಾವಾಕ್ಯ: ಈ ಪದ್ಯವು ಯಾರ ಮನಸ್ಸಿನ ಭಾವವನ್ನು ಸೂಚಿಸುತ್ತದೆ?
**ಕಲಿಕಾ ಫಲಿತ / ವರ್ತನೆಯ ಬದಲಾವಣೆ:** ದ್ರೌಪದಿಯ ಮನಸ್ಸಿನ ಭಾವವನ್ನು ಸೂಚಿಸುತ್ತದೆ.

**2. ಅರ್ಥಗ್ರಹಿಕೆ:**
ಸನ್ನಿವೇಶಾತ್ಮಕವಾಗಿ, ಸಾಂದರ್ಭಿಕವಾಗಿ, ಕಲಿತ ಅಂಶಗಳನ್ನು ಗ್ರಹಿಸುವುದರಿಂದ ಉಂಟಾಗುವ ವರ್ತನಾತ್ಮಕ ಬದಲಾವಣೆ.

ಉದಾಹರಣೆಗೆ,
**ಪಠ್ಯ ಕ್ಷೇತ್ರ:** ನಡುಗನ್ನಡ ಸಾಹಿತ್ಯ
**ಪಠ್ಯ:** ಕುಮಾರವ್ಯಾಸ ಭಾರತದ 'ವಿರಾಟ ಪರ್ವ

**ಪಠ್ಯ ಭಾಗ:**
**ಮುಸುಡನಮರಾದ್ರಿಯಲಿ ತೇವೆನು ದೇವಸಂತತಿಯ**

ಈ ಪಠ್ಯಭಾಗವನ್ನು ಆಧರಿಸಿ, 'ಅರ್ಥಗ್ರಹಿಕೆ'ಯ ಉದ್ದೇಶವನ್ನು ಹೀಗೆ ರಚಿಸಿಕೊಳ್ಳಬಹುದಾಗಿದೆ.

**ವಿದ್ಯಾರ್ಥಿಯು ದತ್ತ ಪದ್ಯ ಭಾಗದಲ್ಲಿ ಶಾಬ್ದಿಕವಾಗಿ ಭಾವತೀವ್ರತೆಯ ಸ್ವರೂಪವನ್ನು ಗುರುತಿಸುತ್ತಾನೆ.**

**"ಮುಸುಡನಮರಾದ್ರಿಯಲಿ ತೇವೆನು ದೇವಸಂತತಿಯ"**
ಈ ಉದ್ದೇಶಕ್ಕನುಗುಣವಾಗಿ ಬೋಧನಾ ಕಲಿಕಾ ಚಟುವಟಿಕೆ, ತಂತ್ರ, ಮೌಲ್ಯಮಾಪನ ಸಾಧನ, ಕಲಿಕೆಯ ಫಲಿತ ಅಥವಾ ವರ್ತನಾತ್ಮಕ ಪರಿವರ್ತನೆಯನ್ನು ಹೀಗೆ ನಿರ್ಧರಿಸಬಹುದಾಗಿದೆ.

**ಬೋಧನಾ/ಕಲಿಕಾ ಚಟುವಟಿಕೆಯ ನಿರ್ಧಾರ:** ಅಭಿನಯ
**ಬೋಧನಾ/ಕಲಿಕಾ ಚಟುವಟಿಕೆಯ ತಂತ್ರ:** ನಾಟಕೀಕರಣ
**ಬೋಧನಾ/ಕಲಿಕಾ ಚಟುವಟಿಕೆಯ ಸಾಧನ:** ಕಾವ್ಯದ ಪಠ್ಯ ಹಾಗೂ ಪ್ರಶ್ನಾವಾಕ್ಯ :
**"ಮುಸುಡನಮರಾದ್ರಿಯಲಿ ತೇವೆನು ದೇವಸಂತತಿಯ"**
ಈ ಪದ್ಯಭಾಗದಲ್ಲಿ ಯಾವ ಭಾವವು ವ್ಯಕ್ತವಾಗಿದೆ?
ಸಾತ್ವಿಕ ಸಿಟ್ಟು, ಸಿಡುಕು, ಕೋಪ, ಆಕ್ರೋಶ
**ಕಲಿಕಾ ಫಲಿತ / ವರ್ತನೆಯ ಬದಲಾವಣೆ:** ಆಕ್ರೋಶ

**3. ಅನ್ವಯಿಸುವಿಕೆ:**
**ಗ್ರಹಿಸಿದ ಜ್ಞಾನವನ್ನು ವಿವಿಧ ಸನ್ನಿವೇಶ, ಸಂದರ್ಭಗಳಿಗೆ ಅನ್ವಯಿಸುವುದು ಅನ್ವಯ ಎನಿಸುತ್ತದೆ.**
ಉದಾಹರಣೆಗೆ,
**ಪಠ್ಯ ಕ್ಷೇತ್ರ:** ಅಲಂಕಾರ
**ಪಠ್ಯ:** ರೂಪಕಾಲಂಕಾರ

**ಪಠ್ಯ ಭಾಗ:**

**ಯಮಸುತಗರುಹುವೆನೆ ಧರ್ಮ**
**ಕ್ಷಮೆಯ ಗರ ಹೊಡೆದಿಹುದು ಪಾರ್ಥನು**
**ಮಮತೆಯುಳ್ಳವನೆಂಬೆನೇ ತಮ್ಮಣ್ಣನಾಜ್ಞೆಯಲಿ**
**ಭ್ರಮಿತನಾಗಿಹನುಳಿದರಿರ್ವರು**
**ರಮಣರೀ ನಾಯ ಕೊಲಲ**
**ಕ್ಷಮರು ನಿಸ್ಸಂದೇಹವೆಂದಳು ತನ್ನ, ಮನದೊಳಗೆ**

ಈ ಪಠ್ಯಭಾಗವನ್ನು ಆಧರಿಸಿ, 'ಅನ್ವಯ'ದ ಉದ್ದೇಶವನ್ನು ಹೀಗೆ ರಚಿಸಿಕೊಳ್ಳಬಹುದಾಗಿದೆ.

**ವಿದ್ಯಾರ್ಥಿಯು ದತ್ತ ಪದ್ಯ ಭಾಗದಲ್ಲಿ ರೂಪಕಾಲಂಕಾರವಿರುವ ಪದವನ್ನು ಗುರುತಿಸಿ, ನಿಯಮ ಅನ್ವಯಿಸುತ್ತಾನೆ.**
**"ಮುಸುಡನಮರಾದ್ರಿಯಲಿ ತೇವೆನು ದೇವಸಂತತಿಯ"**

ಈ ಉದ್ದೇಶಕ್ಕನುಗುಣವಾಗಿ ಬೋಧನಾ ಕಲಿಕಾ ಚಟುವಟಿಕೆ, ತಂತ್ರ, ಮೌಲ್ಯಮಾಪನ ಸಾಧನ, ಕಲಿಕೆಯ ಫಲಿತ ಅಥವಾ ವರ್ತನಾತ್ಮಕ ಪರಿವರ್ತನೆಯನ್ನು ಹೀಗೆ ನಿರ್ಧರಿಸಬಹುದಾಗಿದೆ.
**ಬೋಧನಾ/ಕಲಿಕಾ ಚಟುವಟಿಕೆಯ ನಿರ್ಧಾರ:** ಗುಂಪು ಚಟುವಟಿಕೆ
**ಬೋಧನಾ/ಕಲಿಕಾ ಚಟುವಟಿಕೆಯ ತಂತ್ರ:** ಉದಾಹರಣೆ
**ಬೋಧನಾ/ಕಲಿಕಾ ಚಟುವಟಿಕೆಯ ಪದ್ಧತಿ:** ನಿಗಮನ ಪದ್ಧತಿ

**ನಿಯಮ:** ಉಪಮಾನ ಹಾಗೂ ಉಪಮೇಯಗಳಲ್ಲಿ ಭೇದವಿಲ್ಲದಂತೆ ವರ್ಣಿಸಿದಲ್ಲಿ ಅದನ್ನು 'ರೂಪಕಾಲಂಕಾರ' ಎನ್ನುವರು.

ಉದಾಹರಣೆಗೆ: 'ಮೃಗನಯನೆ' ಈ ಪದದಲ್ಲಿ ಮೃಗ ಎಂದರೆ, 'ಜಿಂಕೆ', ನಯನ ಎಂದರೆ, 'ಕಣ್ಣು'. ಇಲ್ಲಿ ಜಿಂಕೆ ಹಾಗೂ ಆಕೆಯ ಕಣ್ಣುಗಳಲ್ಲಿ ಭೇದವಿಲ್ಲವೆಂದು ವರ್ಣಿಸಲಾಗಿರುವುದರಿಂದ, ಇದು 'ರೂಪಕಾಲಂಕಾರ' ಎನಿಸುತ್ತದೆ.

**ಮೌಲ್ಯಮಾಪನಕ್ಕೆ ಪ್ರಶ್ನೆ:** ಈ ಪಠ್ಯಭಾಗದಲ್ಲಿರುವ ರೂಪಕಾಲಂಕಾರ ಪದವನ್ನು ಗುರುತಿಸಿ, ನಿಯಮವನ್ನು ಅನ್ವಯಿಸಿ.
ಯಮಸುತಗರುಹುವೆನೆ ಧರ್ಮ
ಕ್ಷಮೆಯ ಗರ ಹೊಡೆದಿಹುದು ಪಾರ್ಥನು
ಮಮತೆಯುಳ್ಳವನೆಂಬೆನೇ ತಮ್ಮಣ್ಣನಾಜ್ಞೆಯಲಿ
ಭ್ರಮಿತನಾಗಿಹನುಳಿದರಿರ್ವರು
ರಮಣರೀ ನಾಯ ಕೊಲಲ
ಕ್ಷಮರು ನಿಸ್ಸಂದೇಹವೆಂದಳು ತನ್ನ, ಮನದೊಳಗೆ

**ಕಲಿಕಾ ಫಲಿತ / ವರ್ತನೆಯ ಬದಲಾವಣೆ:** ಈ ಪಠ್ಯ ಭಾಗದಲ್ಲಿ 'ಧರ್ಮಕ್ಷಮೆ' ಎಂಬುದು ರೂಪಕಾಲಂಕಾರವನ್ನು ಸೂಚಿಸುವ ಪದ. ಇಲ್ಲಿ ಧರ್ಮಕ್ಕೂ, ಕ್ಷಮೆಗೂ ನಡುವೆ ಯಾವುದೇ ಭೇದವಿಲ್ಲ. ಹಾಗಾಗಿಯೇ ಇದು 'ರೂಪಕಾಲಂಕಾರ' ಎನಿಸಿಕೊಳ್ಳುತ್ತದೆ.

**4. ವಿಶ್ಲೇಷಿಸುವಿಕೆ:**
**ಒಡೆದು ಒಡೆದು ಪರಿಕಲ್ಪನೆ ಹಾಗೂ ನಿಯಮಾಂತರ್ಗತವಾದ ಅಂಶಗಳನ್ನು ವಿವರಿಸುವ ಪ್ರಕ್ರಿಯೆಯನ್ನು 'ವಿಶ್ಲೇಷಣೆ' ಎನ್ನುವರು.**
ಉದಾಹರಣೆಗೆ,
**ಪಠ್ಯ ಕ್ಷೇತ್ರ:** ಕಾವ್ಯಮೀಮಾಂಸೆ
**ಪಠ್ಯ:** ಕಲ್ಪನೆ

**ಪಠ್ಯ ಭಾಗ:**
**ಕಲ್ಪನೆ:** "ಕಲ್ಪನೆ ಸೃಷ್ಟಿಯನ್ನು ಪರಿಭಾವಿಸುವ ವ್ಯಕ್ತಿ(ಕವಿ)ಯ ಭಾವದೃಷ್ಟಿಯಾಗಿದ್ದು, ಇದು ಅನುಸೃಷ್ಟಿಯೂ ಆಗಬಲ್ಲದು".

ಉದಾಹರಣೆಗೆ, ಸಾಮಾನ್ಯರಿಗೆ, 'ಸಂತೆಯ ಹಾದಿಯ ಕಲ್ಲು ಕಟ್ಟೆ'ಯಂತೆ ಕಾಣುವ ಕುಣಿಗಲ್ ಕೆರೆ, ಕವಿಗೆ, "ಬಾಳೆಯ ಹಣ್ಣು ಬಾಗಿದಂತೆ ಕಾಣುತ್ತಿದೆ". ಅವರವರ ಭಾವಕ್ಕೆ ಅದು ಕಾಣಿಸುವ ರೀತಿ ಭಿನ್ನವಾಗಿರುತ್ತದೆ. ಇಲ್ಲಿ ವ್ಯಕ್ತಿಯ ಭಾವದೃಷ್ಟಿಯನ್ನೇ ಕಲ್ಪನೆಯನ್ನಾಗಿ ಗುರುತಿಸಬಹುದು. 'ಹಾರುವ ಹಕ್ಕಿಯ ಸಾಲುಸಾಲನ್ನು ದೇವರು ರುಜು ಮಾಡಿರುವುದಾಗಿ ಪರಿಭಾವಿಸಿರುವ ಕವಿ ಕುವೆಂಪುರವರ ಕಲ್ಪನೆ' ಇಲ್ಲಿ ಅನುಸೃಷ್ಟಿಯಾಗಿದೆ.
**ಕಲ್ಪನೆಯ ವಿಧಗಳು:**

**ಸಹಜ ಕಲ್ಪನೆ:** ಲೋಕದ ವಸ್ತು, ವಿಷಯದ ಭಾವವನ್ನು ಯಥಾವತ್ತಾಗಿ ಕಲ್ಪಿಸುವುದೇ 'ಸಹಜ ಕಲ್ಪನೆ' ಎನಿಸುತ್ತದೆ. ಕವಿಸೃಷ್ಟಿಯಲ್ಲಿ ಈ ನೈಜ ಕಲ್ಪನೆಯನ್ನು ಕಾಣಬಹುದಾಗಿದೆ.

ಉದಾಹರಣೆಗೆ: ಸಾ.ಶಿ.ಮರುಳಯ್ಯರವರು ತಮ್ಮ 'ಸುಮ ಸುಂದರ ತರುಲತೆಗಳ ಕವಿತೆ'ಯಲ್ಲಿ ಪ್ರಕೃತಿಯ ವರ್ಣನೆಯನ್ನು ಸಹಜವಾಗಿ ಹೀಗೆ ಮಾಡಿರುತ್ತಾರೆ.

"ಋತು ಋತುವಿಗೂ ಹೂವಾಗಿ ಫಲವಾಗುವ ತನಿರಸವೆ
ಚಿಲಿಪಿಲಿಯಂತಾ ಮೋದದಿ  ನಲಿದುಲಿವಾ ಕೂಜನವೆ"

ಇಲ್ಲಿ ಪ್ರಕೃತಿಯಲ್ಲಿ ಜರುಗುವ ಸಹಜ ಕ್ರಿಯೆಗಳಾದ ಹೂವಾಗುವುದು, ಫಲವಾಗುವುದು, ಹಕ್ಕಿಪಕ್ಷಿಗಳು ಚಿಲಿಪಿಲಿ ಗುಟ್ಟುವುದು ಮುಂತಾದ ವರ್ಣನೆ ಸಹಜ ಕಲ್ಪನೆಯಾಗಿ ಮೂಡಿ ಬಂದಿರುವುದು ವಿಶೇಷ.

**ಮಿಥ್ಯಾ ಕಲ್ಪನೆ:** ಲೋಕದಲ್ಲಿ ಅಸಾಧ್ಯವಾದ, ಭಾವದ ನೆಲೆಯಲ್ಲಿ ಸುಲಭಸಾಧ್ಯವಾದ ಕಲ್ಪನೆಯೇ 'ಮಿಥ್ಯಾ ಕಲ್ಪನೆ'. ಉದಾಹರಣೆಗೆ, ಕವಿಯೊಬ್ಬನ ಕವಿತೆ ಹೀಗಿದೆ.
ಉದಾಗೆ, ವಾಮನ ತ್ರಿವಿಕ್ರಮನಾಗಿ ಆಕಾಶಕ್ಕೆ ಹೆಜ್ಜೆ ಹಾಕುವುದು ವಾಸ್ತವದಲ್ಲಿ ಸಾಧ್ಯವಿಲ್ಲ. ಆದರೆ, ಇದು ಕಾವ್ಯಗಳಲ್ಲಿ ಸಾಧ್ಯ. ಇದು 'ಮಿಥ್ಯಾಕಲ್ಪನೆ' ಎನಿಸುತ್ತದೆ.

**ಸಾದೃಶ್ಯ ಕಲ್ಪನೆ:** ಲೋಕದಲ್ಲಿನ ಒಂದು ವಸ್ತು-ವಿಷಯಾಂಶ ಇತ್ಯಾದಿಗಳನ್ನು, ಮತ್ತೊಂದು ವಸ್ತು-ವಿಷಯಾಂಶದೊಡನೆ ಹೋಲಿಕೆ ಮಾಡಿ ಕಲ್ಪಿಸುವುದೇ, 'ಸಾದೃಶ್ಯ ಕಲ್ಪನೆ'.
ಸರ್ವಜ್ಞನ ವಚನಗಳ ಸಂಗ್ರಹವಾದ 'ಒಳ್ನುಡಿ'ಯಲ್ಲಿ ಬರುವ ಸಾದೃಶ್ಯ ಕಲ್ಪನೆ ವಿಶಿಷ್ಟವಾಗಿದೆ.

ಬಲ್ಲವರ ಒಡನಾಟ ಬೆಲ್ಲಮನು ಮೆದ್ದಂತೆ।
ಅಲ್ಲದಹುದೆಂಬ ಅಜ್ಞಾನಿಯೊಡನಾಟ।
ಕಲ್ಲುಹಾದಂತೆ ಸರ್ವಜ್ಞ

ಇಲ್ಲಿ 'ತಿಳಿದವರೊಂದಿಗಿನ ಒಡನಾಟ ಬೆಲ್ಲವನ್ನು ತಿಂದಂತೆ', ಅಂತೆಯೇ 'ಅಜ್ಞಾನಿಗಳ ಒಡನಾಟ ಕಲ್ಲುಹಾದಂತೆ' ಎಂಬ ಹೋಲಿಕೆಯನ್ನು ನೀಡಲಾಗಿದೆ. ಅಂದರೆ, ಬೆಲ್ಲ ತಿಂದಾಗ ಆಗುವ ಸವಿಯ ಅನುಭವ, ಕಲ್ಲು ಹಾದಾಗ ಉಂಟಾಗುವ ಕಷ್ಟ, ನೋವಿನ ಅನುಭವವನ್ನು ಅನುಕ್ರಮವಾಗಿ ಜ್ಞಾನಿ ಹಾಗೂ ಅಜ್ಞಾನಿಗಳ ಒಡನಾಟಕ್ಕೆ ಹೋಲಿಸಿರುವುದು ಇಲ್ಲಿಯ ಸಾದೃಶ್ಯ ಕಲ್ಪನೆಯಾಗಿದೆ.

**ಅನುಮಾನಿಕ ಕಲ್ಪನೆ:** ಹೋಲಿಕೆಯಿರುವ ಎರಡು ವಸ್ತು– ವಿಷಯ ಸಂಗತಿಗಳು ಒಂದೇ ಎಂಬ ಅನುಮಾನ ಮೂಡಿ, ರೂಪುಗೊಳ್ಳುವ ಕಲ್ಪನೆಯೇ 'ಅನುಮಾನಿಕ ಕಲ್ಪನೆ".

**'ಮೂಡಲ್ ಕುಣಿಗಲ್ ಕೆರೆ'ಯಲ್ಲಿ ಮೂಡಿರುವ ಕಲ್ಪನೆ:**

ಬಾಳೆಯ ಹಣ್ಣಿನಂತೆ ಬಾಗಿದ ಕುಣಿಗಲ್ ಕೆರೆ
ಭಾವಾ ತಂದಾನು ಬಣ್ಣದ ಸೀರೆ। ತಾನಂದನೋ
ಭಾವಾ ತಂದಾನು ಬಣ್ಣದ ಸೀರೆ॥

ಇಲ್ಲಿಯೂ ಜನಪದರಿಗೆ ಕೆರೆ ಕಂಡು ಬರುವುದು 'ಬಾಳೆ ಹಣ್ಣು ಬಾಗಿದಂತೆ', ಆಗಸದ ನೀಲಿ ಬಣ್ಣ ಭೂಮಾತೆಗೆ ಬಣ್ಣದ ಸೀರೆ ಉಡಿಸಿದಂತೆ, ಕಂಡು ಬರುತ್ತಿರುವುದು ಈ ಅನುಮಾನದ ದೆಸೆಯಿಂದಲೇ ಆಗಿದೆ. ಹೀಗಾಗಿ ಇಲ್ಲಿಯ ಕಲ್ಪನೆಗಳು 'ಅನುಮಾನಿಕ ಕಲ್ಪನೆ'ಗಳೇ ಎನಿಸಿವೆ.

**ಕಾವ್ಯದಲ್ಲಿ ಕಲ್ಪನೆಯ ಸಂಭಾವ್ಯತೆ:**

ಲೋಕಾತೀತವಾದ ವಿಷಯಗಳು ಜೋಡಿಸಿ ಕಾವ್ಯಜಗತ್ತನ್ನು ಕಟ್ಟಿರಬಹುದು. ಬಾಹ್ಯದಲ್ಲಿ ಇರುವುದಾಗಲೀ, ನಡೆಯುವುದಾಗಲೀ, ಲೋಕದಲ್ಲಿ ಸಂಭವವಾಗದ ಅಂಶಗಳು ಕಾವ್ಯದಲ್ಲಿ ಸಂಭವ ಎನಿಸುತ್ತವೆ. ಕಾವ್ಯ ಪ್ರಪಂಚವನ್ನು ಹೊಕ್ಕು ವಿಹರಿಸುವಾಗ ಅಲ್ಲಿ ಹೇಳಿರುವುದೆಲ್ಲಾ ಸಂಭವ ಎನಿಸುತ್ತದೆ. ಕವಿಯ ಕಾವ್ಯ ಲೋಕಸ್ಥಿತಿಯ ನಕಲಾಗಿರುವುದಿಲ್ಲ. ಬದಲಿಗೆ, ಲೋಕಸ್ಥಿತಿಯ ಎಲ್ಲೆಯನ್ನು ಮೀರಿ ಬಹದೂರ ಹೋಗದಿರುವುದೇ ಸಂಭಾವ್ಯತೆಯ ಗುಟ್ಟು. ಆದ್ದರಿಂದ ಇಲ್ಲಿಯ ಕಲ್ಪನೆಗಳು ಸಂಭಾವ್ಯ ಎನಿಸುತ್ತವೆ.

ಉದಾಗೆ, ಜನಪದಗೀತೆ 'ಮೂಡಲ್ ಕುಣಿಗಲ್ ಕೆರೆ' ಕವನದ ಈ ಭಾಗ.

ಅಂದಾನೆ ನೋಡಲು ಶಿವ ಬಂದು ಶಿವಯೋಗಿ
ಕಪ್ಪಕ್ಕಿ ಬಾಯ ಬಿಡುತಾವೆ। ತಾನಂದನೋ
ಕಪ್ಪಕ್ಕಿ ಬಾಯ ಬಿಡುತಾವೆ ಬಿಡದಿ
ಗಪ್ಪಾಗೊಂಬಾಳೆ ನಡುಗ್ಯಾವೆ ॥

ಕುಣಿಗಲ್ ಕೆರೆಯ ವೈಭವವನ್ನು ನೋಡಲು ಸ್ವಯಂ ಮಹಾದೇವನೇ ಧರೆಗಿಳಿದು ಬಂದಿದ್ದಾನೆ ಎಂಬ ಕಲ್ಪನೆ, ಸಂಭಾವ್ಯವಲ್ಲ. ಆದರೆ, ಆತ ಅಕಸ್ಮಾತ್ ಬಂದಲ್ಲಿ ಉಂಟಾಗುವ ಆಶ್ಚರ್ಯ ಭಾವ ಮಾತ್ರ ಸಂಭಾವ್ಯ ಎನಿಸುತ್ತದೆ. ಸಹಜವಾಗಿ ಕಪ್ಪಕ್ಕಿಗಳು ಆಹಾರಕ್ಕಾಗಿ ಬಾಯ್ದೆರೆಯುವುದು, ಅದು ಬಾಯ್ದೆರೆದಿರುವುದನ್ನು ನೋಡಿ, ಹೊಂಬಾಳೆ ಮೀನುಗಳು ಜೀವಭಯದಿಂದ ಗಡಗಡನೆ ನಡುಗುವುದು ಇವುಗಳು ಲೋಕದಲ್ಲಿ ಸಹಜ ಸಂಭಾವ್ಯ ವರ್ತನೆ. ಈ ಸ್ವಾಭಾವಿಕ ಕ್ರಿಯೆಗಳೊಂದಿಗೆ ಶಿವನ ಕಲ್ಪನೆಯನ್ನು ಜೋಡಿಸಿರುವುದು, ಲೋಕಸ್ಥಿತಿಯ ಚೌಕಟ್ಟಿನಲ್ಲಿಯೇ ಇರುವುದರಿಂದ ಈ ಎಲ್ಲಾ ಕಲ್ಪನೆಗಳು ಸಹಜ ಎನಿಸುತ್ತವೆ. ಅಂತೆಯೇ ಇದೇ ಕವನದ "ಬಾಳೆಯ ಹಣ್ಣಿನಂತೆ ಬಾಗಿದ ಕುಣಿಗಲ್ ಕೆರೆ" ಎಂಬ ಸಾದೃಶ್ಯ ಕಲ್ಪನೆ ಸಹಜವಾಗಿಯೇ ಇದೆ. ಬಾಳೆಯ ಹಣ್ಣು ಅಂಕುಡೊಂಕಾಗಿದ್ದು, ಕೆರೆಕಟ್ಟೆಯೂ ಅಂಕುಡೊಂಕಾಗಿರುತ್ತವೆ. ಆದ್ದರಿಂದ ಈ 'ಕಲ್ಪನಾಭಾವ' ಸತ್ಯ ಎನಿಸುತ್ತದೆ. ಹೀಗೆ ಕಲ್ಪನೆಗಳು ಸಂಭಾವ್ಯ ಎನಿಸುತ್ತವೆ.

"ಆಗಸದ ಹಾದಿಯಾ ದಾಟಿ
ಚಂದಿರನ ಲೋಕಕೆ ಹೋಗಿ
ರವಿ, ಶಶಿಗಳ ಜೊತೆಯಲ್ಲಿ ಆಡಿ
ಕ್ಷಣದಲ್ಲೇ ಹಿಂದಕ್ಕೆ ಬರುವಾ"

ಕಲ್ಪನೆಯ ಪ್ರಪಂಚದಲ್ಲಿ ವಿಹರಿಸುತ್ತಿರುವ ಕವಿಯ ಮನಸ್ಸು ಆಗಸದ ಹಾದಿಯನ್ನು ದಾಟಿ, ಚಂದಿರನ ಲೋಕಕ್ಕೂ ಪ್ರಯಾಣ ಬೆಳೆಸಿದೆ. ಅಲ್ಲಿ ರವಿ, ಶಶಿಗಳೊಂದಿಗೆ ಆಡಿ ಕ್ಷಣದಲ್ಲಿ ಹಿಂದಕ್ಕೆ ಬರುವುದು, ವಾಸ್ತವದಲ್ಲಿ ಅಸಾಧ್ಯವಾದರೂ ಕವಿಯ ಕಲ್ಪನೆಯಲ್ಲಿ ಎಲ್ಲವೂ ಸಾಧ್ಯ.

ಉದಾಗೆ, ಲಕ್ಷ್ಮೀಶನ ಜೈಮಿನಿ ಭಾರತದ, 'ಕರುಣಾಳು ರಾಘವನಲ್ಲಿ ತಪ್ಪಿಲ್ಲ' ಎಂಬ ಪದ್ಯ ಭಾಗದಲ್ಲಿರುವ ವರ್ಣನೆ:

ಸೀತಾದೇವಿಯನ್ನು ಕಾಡಿಗೆ ತಂದು ಬಿಟ್ಟ ಲಕ್ಷ್ಮಣನು, ಆಕೆಯನ್ನು ಅಗಸನೊಬ್ಬನ ಮಾತಿಗೆ ಓಗೊಟ್ಟು. ರಾಘವನು ತಮ್ಮನ್ನು ಕಾಡಿನಲ್ಲಿ ಬಿಟ್ಟು ಬರುವಂತೆ ಆದೇಶಿಸಿ, ನನ್ನನ್ನು ಕಳುಹಿಸಿದ್ದಾನೆ ಎಂದು ಅರುಹಿದಾಗ, ಆಕೆ ಹೇಗೆ ನಿಸ್ತೇಜಳಾದಳು!? ಎಂಬುದನ್ನು ಕವಿಯು ಹೀಗೆ ಕಲ್ಪಿಸುತ್ತಾನೆ.

ರಾಯಕೇಳಿಂತಿತು ರಾಘವೇಶ್ವರನ ರಮ
ಣೀಯ ಗುಣಮಾಲೆಯಂ ನೆನೆನೆನೆದು ಹಂಬಲಿಸು
ತಾಯತಾಂಬಕಿ ಮತ್ತೆ ಮೈಮರೆಯುತೆಚ್ಚರುರೆ ಪಾವಗಿದ ಪಸುಳೆವೊಲಿರೆ॥

ರಾಘವನ ಈ ಆದೇಶವನ್ನು ಲಕ್ಷ್ಮಣನ ಬಾಯಿಂದ ಕೇಳಿದ ಸೀತೆ, ಹಾವು ಕಚ್ಚಿದ ಹಸುಳೆಯಂತೆ ನಿಸ್ತೇಜಳಾದಳು! ಎಂಬ ಹೋಲಿಕೆ ಇಲ್ಲಿ ಮೂಡಿ ಬಂದಿದೆ. ಇಲ್ಲಿ ಹಾವು ಕಚ್ಚಿದ ಹಸುಳೆ ಹೇಗೆ ಒಮ್ಮೆ ಮೈಮರೆತು, ಕ್ಷಣದಲ್ಲಿಯೇ ಹೇಗೆ ಎಚ್ಚರಗೊಳ್ಳುತ್ತದೋ ಹಾಗೆಯೇ ಸೀತೆಯು ಅರೆಪ್ರಜ್ಞಾವಸ್ಥೆಯಲ್ಲಿದ್ದಾಳೆ ಎಂಬ ಕಲ್ಪನೆ ಸಾದೃಶ್ಯದ ನೆಲೆಯಲ್ಲಿ ಮೂಡಿಬಂದ ಕಲ್ಪನೆಯಾಗಿದೆ.

ಉದಾಗೆ, 'ದೇವರು ರುಜು ಮಾಡಿದನು' ಎಂಬಲ್ಲಿ, ಕವಿ ಕುವೆಂಪುರವರ ಅನುಮಾನ ಕಲ್ಪನಾತ್ಮಕವಾಗಿ ಅದ್ಭುತವಾಗಿ ರೂಪುಗೊಂಡಿದೆ.

ದೇವರು ರುಜು ಮಾಡಿದನು
ರಸವಶನಾಗುತ ಕವಿ ಅದ ನೋಡಿದನು.

ಹಾರುವ ಹಕ್ಕಿ ಸಾಲುಗಳು ಕವಿಗೆ ರುಜುವಿನಂತೆ ಗೋಚರಿಸುತ್ತಿದೆ. ಹಾಗಾದರೆ, ಬಾನಿನಲ್ಲಿ ಈ ರುಜುವನ್ನು ಮಾಡಿದವರು ಯಾರು? ಎಂದು ಮನದಲ್ಲಿ ಅನುಮಾನ ಮೂಡಿದಾಗ, ಬಂದ ಕಲ್ಪನೆಯೇ, 'ದೇವರು ರುಜು ಮಾಡಿದನು'. ಇಲ್ಲಿ ಅನುಮಾನದ ದೆಸೆಯಿಂದ ಈ ಕಲ್ಪನೆ ಮೂಡಿ ಬಂದಿದೆಯಾಗಿ, ಇಲ್ಲಿ ಉಂಟಾಗಿರುವುದು ಅನುಮಾನಿಕ ಕಲ್ಪನೆಯಾಗಿದೆ.

ಕಲ್ಪನೆಯು ಕವಿಯೊಬ್ಬನ ಭಾವುಕ ಶಕ್ತಿ. ಭಾವನೆಗಳಿಗೆ ಜೀವ ತುಂಬುವ ಕವಿಯ ಅಂತಃಶಕ್ತಿಯ ಸ್ಫೂರ್ತಿ. ಈ ಹಿನ್ನೆಲೆಯಲ್ಲಿ ಕಲ್ಪನೆಯು ಕಾವ್ಯ ಸೃಜನೆಗೆ ಅನಿವಾರ್ಯವಾದ ಅಂಶವಾಗಿದೆ. ಈ ಕಾಲ್ಪನಿಕ ಶಕ್ತಿ ಸೃಷ್ಟಿಯನ್ನು ಪರಿಭಾವಿಸುವ ದೃಷ್ಟಿಕೋನಕ್ಕೆ ವೈವಿಧ್ಯತೆಯೊಂದಿಗೆ ವೈಶಿಷ್ಟ್ಯತೆಯನ್ನೂ ತಂದು ಕೊಡುವಲ್ಲಿ ಸಮರ್ಥವಾದ ಶಕ್ತಿಯಾಗಿದೆ. ಕಲ್ಪನೆಯ ಭಾವನೇತ್ರದ ದೃಷ್ಟಿಯಿಂದ ಒದಗಿಬರುವ ಸೃಷ್ಟಿ ನವನವೋನ್ಮೇಷದ ಅನುಭಾವವನ್ನು

ತಂದುಕೊಡುವಲ್ಲಿ ಯಶಸ್ವಿಯಾಗಬಲ್ಲದು. ಹಾಗಾಗೀ ಸಾಹಿತ್ಯಾಸಕ್ತರಿಗೆ ಕಲ್ಪನೆಯ ರೂಪುರೇಷೆಯ ಅರಿವು ಹಾಗೂ ಆ ಅರಿವಿನ ಬರಹ ಅಗತ್ಯವಾದುದಾಗಿದೆ.

ಈ ಪಠ್ಯಭಾಗವನ್ನು ಆಧರಿಸಿ, 'ವಿಶ್ಲೇಷಣೆಯ' ಉದ್ದೇಶವನ್ನು ಹೀಗೆ ರಚಿಸಿಕೊಳ್ಳಬಹುದಾಗಿದೆ.

**ವಿದ್ಯಾರ್ಥಿಯು ಕಲ್ಪನೆಯ ವಿಧಗಳನ್ನು ವಿಶ್ಲೇಷಿಸುತ್ತಾನೆ.**
ಈ ಉದ್ದೇಶಕ್ಕನುಗುಣವಾಗಿ ಬೋಧನಾ ಕಲಿಕಾ ಚಟುವಟಿಕೆ, ತಂತ್ರ, ಮೌಲ್ಯಮಾಪನ ಸಾಧನ, ಕಲಿಕೆಯ ಫಲಿತ ಅಥವಾ ವರ್ತನಾತ್ಮಕ ಪರಿವರ್ತನೆಯನ್ನು ಹೀಗೆ ನಿರ್ಧರಿಸಬಹುದಾಗಿದೆ.

**ಬೋಧನಾ/ಕಲಿಕಾ ಚಟುವಟಿಕೆಯ ನಿರ್ಧಾರ:** ನಿದರ್ಶನಾಯುಕ್ತ ನಿರೂಪಣೆ
**ಬೋಧನಾ/ಕಲಿಕಾ ಚಟುವಟಿಕೆಯ ತಂತ್ರ:** ವಿಶ್ಲೇಷಣೆ
**ಬೋಧನಾ/ಕಲಿಕಾ ಚಟುವಟಿಕೆಯ ಸಾಧನ:** ಪಠ್ಯ ಭಾಗ ಹಾಗೂ ವಿಶ್ಲೇಷಣಾ ಪಟ್ಟಿಕೆ ಹಾಗೂ ಪ್ರಶ್ನಾವಾಕ್ಯ :
**ಈ ಕೆಳಗಿನ ಪದ್ಯಭಾಗಗಳನ್ನು ಕಲ್ಪನೆಯ ವಿಧಗಳನ್ನು ಆಧರಿಸಿ, ವಿಶ್ಲೇಷಿಸಿ.**

ಅರಳಿ ಮಲ್ಲಿಗೆ ಮೊಗ್ಗು ಸುತ್ತ ಗಂಧವ ಚೆಲ್ಲಿ
ವಸಂತನಾಗಮನ ಸಾರಿದಾಗ
ಕೋಗಿಲೆಯ ಬೆರಸಿತದರೊಳಗೊಂದು
ಕುಕಿಲರಾಗ

ರಾಯ ಕೇಳಿಂತಿತು ರಾಘವೇಶ್ವರ
ಗುಣಮಾಲೆಯಂ
ನೆನೆನೆನೆದು ಹಂಬಲಿಸು ತಾಯತಾಂಬಕಿ
ಮತ್ತೆ ಮೈಮರೆಯುತ್ತೆಚರುತೆ ಪಾವಗಿದ
ಪಸುಳೆವೊಲಿರೆ

ಆಗಸದಾ ಹಾದಿಯಾ ದಾಟಿ
ಚಂದಿರನ ಲೋಕಕ್ಕೆ ಹೋಗಿ
ರವಿ ,ಶಶಿಗಳಾ ಜೊತೆಯಲ್ಲಿ ಆಡಿ
ಕ್ಷಣದಲ್ಲೇ ಹಿಂದಕ್ಕೆ ಬರುವಾ

ದೇವರು ರುಜು ಮಾಡಿದನು
ರಸವಶನಾಗುತ ಕವಿ ಅದ
ನೋಡಿದನು

**ಕಲಿಕಾ ಫಲಿತ / ವರ್ತನೆಯ ಬದಲಾವಣೆ:**

| ಕ್ರ.ಸಂ. | | ಕಲ್ಪನೆ | | | |
|---|---|---|---|---|---|
| | | **ಸಹಜ ಕಲ್ಪನೆ** | **ಸಾದೃಶ್ಯ ಕಲ್ಪನೆ** | **ಮಿಥ್ಯಾ ಕಲ್ಪನೆ** | **ಅನುಮಾನಿಕ ಕಲ್ಪನೆ** |
| 1 | ವ್ಯಾಖ್ಯಾನ | ಲೋಕದ ವಸ್ತು, ವಿಷಯದ ಭಾವವನ್ನು ಯಥಾವತ್ತಾಗಿ ಕಲ್ಪಿಸುವುದೇ 'ಸಹಜ ಕಲ್ಪನೆ' ಎನಿಸುತ್ತದೆ. | ಲೋಕದಲ್ಲಿ ಅಸಾಧ್ಯವಾದ, ಭಾವದ ನೆಲೆಯಲ್ಲಿ ಸುಲಭಸಾಧ್ಯವಾದ ಕಲ್ಪನೆಯೇ 'ಮಿಥ್ಯಾ ಕಲ್ಪನೆ'. | ಲೋಕದಲ್ಲಿನ ಒಂದು ವಸ್ತು–ವಿಷಯಾಂಶ ಇತ್ಯಾದಿಗಳನ್ನು, ಮತ್ತೊಂದು ವಸ್ತು–ವಿಷಯಾಂಶದೊಡನೆ ಹೋಲಿಕೆ ಮಾಡಿ ಕಲ್ಪಿಸುವುದೇ, 'ಸಾದೃಶ್ಯ ಕಲ್ಪನೆ' | ಹೋಲಿಕೆಯಿರುವ ಎರಡು ವಸ್ತು–ವಿಷಯ ಸಂಗತಿಗಳು ಒಂದೇ ಎಂಬ ಅನುಮಾನ ಮೂಡಿ, ರೂಪುಗೊಳ್ಳುವ ಕಲ್ಪನೆಯೇ 'ಅನುಮಾನಿಕ ಕಲ್ಪನೆ". |
| | ಉದಾಹರಣೆ | ಅರಳಿ ಮಲ್ಲಿಗೆ ಮೊಗ್ಗು ಸುತ್ತ ಗಂಧವ ಚೆಲ್ಲಿ ವಸಂತನಾಗಮನ ಸಾರಿದಾಗ ಕೋಗಿಲೆಯ ಬೆರಸಿತದರೊಳಗೊಂದು ಕುಕಿಲರಾಗ | ರಾಯ ಕೇಳಿಂತಿತು ರಾಘವೇಶ್ವರ ಗುಣಮಾಲೆಯಂ ನೆನೆನೆನೆದು ಹಂಬಲಿಸು ತಾಯತಾಂಬಕಿ ಮತ್ತೆ ಮೈಮರೆಯುತ್ತೆಚರುತೆ ಪಾವಗಿದ ಪಸುಳೆವೊಲಿರೆ | ಆಗಸದಾ ಹಾದಿಯಾ ದಾಟಿ ಚಂದಿರನ ಲೋಕಕ್ಕೆ ಹೋಗಿ ರವಿಶಶಿಗಳಾ ಜೊತೆಯಲ್ಲಿ ಆಡಿ ಕ್ಷಣದಲ್ಲೇ ಹಿಂದಕ್ಕೆ ಬರುವಾ | ದೇವರು ರುಜು ಮಾಡಿದನು ರಸವಶನಾಗುತ ಕವಿ ಅದ ನೋಡಿದನು |

**5. ಮೌಲ್ಯಮಾಪನ ಮಾಡುವಿಕೆ:**

'ಮೌಲ್ಯ' ಎಂದರೆ, ಬೆಲೆ, 'ಮಾಪನ' ಎಂದರೆ ಅಳತೆ ಮಾಡುವಿಕೆ ಅರ್ಥಾತ್ ಕಲಿಕೆಯಲ್ಲಿ ಅಳತೆಯನ್ನು ಪ್ರತಿನಿಧಿಸುತ್ತದೆ. ಗಳಿಕೆಯಾದ ಭಾಷಾ ಸಾಮರ್ಥ್ಯ ಹಾಗೂ ಕೌಶಲಗಳ ಮಾಪಿಸುವಿಕೆಯೇ 'ಮೌಲ್ಯಮಾಪಿಸುವಿಕೆ' ಎನಿಸುತ್ತದೆ. ಇಲ್ಲಿ ಮೌಲ್ಯಮಾಪನವು ಸ್ವ ಮೌಲ್ಯಮಾಪನಕ್ಕೆ ಹೆಚ್ಚಿನ ಒತ್ತು ನೀಡುತ್ತದೆ.

**ಉದಾಹರಣೆಗೆ,**
**ಪಠ್ಯ ಕ್ಷೇತ್ರ:** ನಡುಗನ್ನಡ ಸಾಹಿತ್ಯ
**ಪಠ್ಯ:** ಕುಮಾರವ್ಯಾಸ ಭಾರತದ 'ವಿರಾಟ ಪರ್ವ

**ಪಠ್ಯ ಭಾಗ:**

**ಹಿಂಡಿದನು ಹಗೆಗಳ ಮನದೊಳಗೆ**
ಈ ಪಠ್ಯಭಾಗವನ್ನು ಆಧರಿಸಿ, 'ಮೌಲ್ಯಮಾಪನದ' ಉದ್ದೇಶವನ್ನು ಹೀಗೆ ರಚಿಸಿಕೊಳ್ಳಬಹುದಾಗಿದೆ.

**ವಿದ್ಯಾರ್ಥಿಯು ದತ್ತ ಪದ್ಯ ಭಾಗದ ಧ್ವನ್ಯಾರ್ಥಕ್ಕೆ ಅನುಗುಣವಾಗಿ ವಾಕ್ಯದಲ್ಲಿರುವ ದೋಷವನ್ನು ಸರಿಪಡಿಸುತ್ತಾನೆ.**
ಈ ಉದ್ದೇಶಕ್ಕನುಗುಣವಾಗಿ ಬೋಧನಾ ಕಲಿಕಾ ಚಟುವಟಿಕೆ, ತಂತ್ರ, ಮೌಲ್ಯಮಾಪನ ಸಾಧನ, ಕಲಿಕೆಯ ಫಲಿತ ಅಥವಾ ವರ್ತನಾತ್ಮಕ ಪರಿವರ್ತನೆಯನ್ನು ಹೀಗೆ ನಿರ್ಧರಿಸಬಹುದಾಗಿದೆ.

**ಬೋಧನಾ/ಕಲಿಕಾ ಚಟುವಟಿಕೆಯ ನಿರ್ಧಾರ:** ನಿರೂಪಣೆ, ವರ್ಣನೆ
**ಬೋಧನಾ/ಕಲಿಕಾ ಚಟುವಟಿಕೆಯ ತಂತ್ರ:** ಕಥೆ
**ಬೋಧನಾ/ಕಲಿಕಾ ಚಟುವಟಿಕೆಯ ಸಾಧನ:** ಹಿನ್ನೆಲೆ ಕಥೆ ಮತ್ತು ಪ್ರಶ್ನೆ
"ಹಿಂಡಿದನು ಹಗೆಗಳ ಮನದೊಳಗೆ" ಈ ಪದಗುಚ್ಛದಲ್ಲಿ, ಹಾಸ್ಯವು ಅಡಗಿದೆ – ಈ ವಾಕ್ಯದಲ್ಲಿರುವ ದೋಷವನ್ನು ಸರಿಪಡಿಸುತ್ತಾನೆ.

**ಕಲಿಕಾ ಫಲಿತ / ವರ್ತನೆಯ ಬದಲಾವಣೆ:** "ಹಿಂಡಿದನು ಹಗೆಗಳ ಮನದೊಳಗೆ" ಈ ಪದಗುಚ್ಛದಲ್ಲಿ, ಪದಗುಚ್ಛದಲ್ಲಿ 'ಕ್ರೋಧ'ವು ಅಡಗಿದೆ ಎಂದು ವಾಕ್ಯದಲ್ಲಿರುವ ದೋಷವನ್ನು ಸರಿಪಡಿಸುತ್ತಾನೆ.

**6. ಸೃಜಿಸುವಿಕೆ:**
ಸೃಷ್ಟಿ – ಹೊಸ ಆಲೋಚನೆಗಳ ಸೃಷ್ಟಿ ಎನಿಸುತ್ತದೆ.
**ಉದಾಹರಣೆಗೆ,**
**ಪಠ್ಯ ಕ್ಷೇತ್ರ:** ಕಾವ್ಯಮೀಮಾಂಸೆ
**ಪಠ್ಯ:** ಅಲಂಕಾರ

**ಪಠ್ಯ ಭಾಗ:** ರೂಪಕಾಲಂಕಾರ
ಉಪಮಾನ, ಉಪಮೇಯಗಳ ನಡುವೆ ಯಾವುದೇ ವ್ಯತ್ಯಾಸ ಇಲ್ಲದೇ ಹೋದಲ್ಲಿ ಅದನ್ನು 'ರೂಪಕಾಲಂಕಾರ' ಎನ್ನುವರು.
ಈ ಪಠ್ಯಭಾಗವನ್ನು ಆಧರಿಸಿ, 'ಸೃಜಿಸುವಿಕೆ'ಯ ಉದ್ದೇಶವನ್ನು ಹೀಗೆ ರಚಿಸಿಕೊಳ್ಳಬಹುದಾಗಿದೆ.

**ವಿದ್ಯಾರ್ಥಿಯು ಚಿತ್ರ ನೋಡಿ, ಸನ್ನಿವೇಶಾತ್ಮಕವಾಗಿ 'ರೂಪಕಾಲಂಕಾರ'ದ ಪದಗಳನ್ನು ಸೃಜಿಸುವನು.**
ಈ ಉದ್ದೇಶಕ್ಕನುಗುಣವಾಗಿ ಬೋಧನಾ ಕಲಿಕಾ ಚಟುವಟಿಕೆ, ತಂತ್ರ, ಮೌಲ್ಯಮಾಪನ ಸಾಧನ, ಕಲಿಕೆಯ ಫಲಿತ ಅಥವಾ ವರ್ತನಾತ್ಮಕ ಪರಿವರ್ತನೆಯನ್ನು ಹೀಗೆ ನಿರ್ಧರಿಸಬಹುದಾಗಿದೆ.

**ಬೋಧನಾ/ಕಲಿಕಾ ಚಟುವಟಿಕೆಯ ನಿರ್ಧಾರ:** ನಿರೂಪಣೆ, ವರ್ಣನೆ
**ಬೋಧನಾ/ಕಲಿಕಾ ಚಟುವಟಿಕೆಯ ತಂತ್ರ:** ಉದಾಹರಣೆ
**ಬೋಧನಾ/ಕಲಿಕಾ ಚಟುವಟಿಕೆಯ ಸಾಧನ:** ಸಾಂದರ್ಭಿಕ ಚಿತ್ರಗಳು ಮತು ಪ್ರಶ್ನಾ ವಾಕ್ಯಗಳು.

ಈ ಚಿತ್ರಗಳನ್ನು ನೋಡಿ, 'ರೂಪಕಾಲಂಕಾರ'ದ ಪದಗಳನ್ನು ಸೃಜಿಸಿ.

**ಬೋಧನಾ ಪದ್ಧತಿ:** ಅನುಗಮನ ಪದ್ಧತಿ
"ಹಿಂಡಿದನು ಹಗೆಗಳ ಮನದೊಳಗೆ" ಈ ಪದಗುಚ್ಛದಲ್ಲಿ, ಹಾಸ್ಯವು ಅಡಗಿದೆ – ಈ ವಾಕ್ಯದಲ್ಲಿರುವ ದೋಷವನ್ನು ಸರಿಪಡಿಸುತ್ತಾನೆ.

**ಕಲಿಕಾ ಫಲಿತ / ವರ್ತನೆಯ ಬದಲಾವಣೆ:** ಚಿತ್ರಕ್ಕೆ ಅನುಗುಣವಾಗಿ ರೂಪಕಾಲಂಕಾರ ಸೂಚಿಸುವ ಪದಗಳನ್ನು ಸೃಜಿಸುತ್ತಾನೆ.

ಉದಾಹರಣೆ: ಗರಿನಯನ, ನಾಟ್ಯಮಯೂರಿ ಇತ್ಯಾದಿ.

ಈ ರೀತಿಯಾಗಿ, ವರ್ತನಾತ್ಮಕ ಬದಲಾವಣೆಗೆ ಈ ರೂಪಣಾತ್ಮಕ ಮೌಲ್ಯಮಾಪನ ಸಹಕಾರಿಯಾಗುತ್ತದೆ.
ರೂಪಣಾತ್ಮಕ ಮೌಲ್ಯಮಾಪನವು ಇವುಗಳಲ್ಲದೇ, ಈ ಕೆಳಗಿನ ಚಟುವಟಿಕೆಗಳ ಮುಖಾಂತರವೂ ವರ್ತನಾತ್ಮಕ ಬದಲಾವಣೆಯನ್ನು ಗುರುತಿಸುತ್ತದೆ.

1. ತರಗತಿಯಲ್ಲಿ ನಿರ್ವಹಿಸುವ ಪಠ್ಯಪೂರಕ ಚಟುವಟಿಕೆಗಳು. ಉದಾಹರಣೆಗೆ ಸಾಂಸ್ಕೃತಿಕ ಕಾರ್ಯಕ್ರಮ, ರಸಪ್ರಶ್ನೆ ಕಾರ್ಯಕ್ರಮ ಇತ್ಯಾದಿ.
2. ಗೃಹ ಅಭ್ಯಾಸಗಳಾಗಿ ಸಲಹಿತ ಚಟುವಟಿಕೆಗಳು.
3. ಸನ್ನಿವೇಶಾತ್ಮಕ ವರ್ತನೆ
4. ಕಿರು ಪರೀಕ್ಷೆಗಳು
5. ನಿಯೋಜಿತ ಕಾರ್ಯಗಳು ಇತ್ಯಾದಿ.

**ಸಂಕಲನಾತ್ಮಕ ಮೌಲ್ಯಮಾಪನ:** ಕಲಿಕಾ ಪ್ರಕ್ರಿಯೆಯ ಅಂತ್ಯದಲ್ಲಿ ನಡೆಯುವ ಮೌಲ್ಯಮಾಪನವೇ ಸಂಕಲನಾತ್ಮಕ ಮೌಲ್ಯಮಾಪನ. ಕೆಲವು ಸನ್ನಿವೇಶಗಳಲ್ಲಿ ಕೆಲವು ಉದ್ದೇಶಗಳಿಗೆ ಸಂಕಲನಾತ್ಮಕ ಮಾಪನವೂ ಅಗತ್ಯವಿರುತ್ತದೆ.

ಈ ವಿಧದ ಮೌಲ್ಯಮಾಪನವನ್ನು ಶೈಕ್ಷಣಿಕ ವರ್ಷದ ಕೊನೆಯಲ್ಲಿ ನಿರ್ವಹಿಸಲಾಗುತ್ತದೆ. ಪ್ರಸ್ತುತ ಚಾತುರ್ಮಾಸಿಕ ನೆಲೆಯಲ್ಲಿ ಸಂಕಲನಾತ್ಮಕ ಮೌಲ್ಯಮಾಪನ ವರ್ಷಕ್ಕೆ ಎರಡು ಭಾರಿ ನೆರವೇರಿಸಲಾಗುತ್ತದೆ.
ಸಂಕಲನಾತ್ಮಕ ಮೌಲ್ಯಮಾಪನ ನೆರವೇರಿಸುವ ಕ್ರಮಗಳು:

- ಪಠ್ಯಕ್ರಮ ಆಧರಿಸಿ, ಶಾಲಾಮಟ್ಟದಲ್ಲಿಯೇ ಈ ರೀತಿಯ ಮೌಲ್ಯಮಾಪನಕ್ಕೆ ಯೋಜನೆಯನ್ನು ತಯಾರಿಸುವುದು.
- ಪರೀಕ್ಷೆಗೆ ಪೂರ್ವದಲ್ಲಿ ಪೂರ್ವಭಾವಿಯಾಗಿ ಪ್ರಶ್ನಾಕೋಶ ರಚನೆ ಮಾಡುವುದು.
- ಪ್ರತಿ ಚತುರ್ಮಾಸಗಳಲ್ಲಿ ನೆರವೇರಿಸಲಾಗುವ ಅಂತಿಮ ಪರೀಕ್ಷೆಗಳೊಂದಿಗೆ, ನಿರಂತರವಾಗಿ ಚಾತುರ್ಮಾಸ ಪರ್ಯಂತ, ನಿರ್ವಹಿಸಲಾದ ಮೌಲ್ಯಮಾಪನವನ್ನು ಒಳಗೊಂಡಂತೆ ಪರೀಕ್ಷೆಯ ಫಲಿತವನ್ನು ಪ್ರಕಟಿಸಲಾಗುತ್ತದೆ.
- ಸಹಪಠ್ಯ ಚಟುವಟಿಕೆಗಳಿಗೆ ಮಾನಕಗಳನ್ನು ನೆರವೇರಿಸಲಾಗುತ್ತದೆ. ಉದಾಹರಣೆಗೆ: ದರ್ಜಾಮಾಪನ, ತನಿಖಾಪಟ್ಟಿ, ಸಾಂದರ್ಭಿಕ ವರ್ತನಾ ದಾಖಲಾ ಪತ್ರ ಇತ್ಯಾದಿ.
- ಸಂಚಯಿತ ದಾಖಲೆಯಲ್ಲಿ ವಿದ್ಯಾರ್ಥಿಯ ಸಮಗ್ರ ಮೌಲ್ಯಮಾಪನ ದಾಖಲೆಗಳನ್ನು ನಿರ್ವಹಿಸಲಾಗುತ್ತದೆ.

**ಗಮನಿಸಿ:** ಇವುಗಳಲ್ಲದೇ ಮೌಲ್ಯಮಾಪನದಲ್ಲಿ ಪ್ರಕ್ರಿಯಾ ಮೌಲ್ಯಮಾಪನ ಹಾಗೂ ಉತ್ಪನ್ನ ಮೌಲ್ಯಮಾಪನ ಎಂಬ ಬಗೆಗಳಿದ್ದು ಇವುಗಳನ್ನು ಭಾಷಾ ಮೌಲ್ಯಮಾಪನದಲ್ಲಿ ಬಳಸಬಹುದಾಗಿದೆ.

**ಪ್ರಕ್ರಿಯಾ ಮೌಲ್ಯಮಾಪನ:** ಬೋಧನಾ/ಕಲಿಕಾ ಪ್ರಕ್ರಿಯೆಯ ಮೌಲ್ಯಮಾಪನವೇ ಪ್ರಕ್ರಿಯಾ ಮೌಲ್ಯಮಾಪನ ಎನಿಸುತ್ತದೆ. ಈ ಬಗೆಯ ಮೌಲ್ಯಮಾಪನದಲ್ಲಿ ವಿದ್ಯಾರ್ಥಿಗಳು ಕಲಿಕೆಯ ಸಂದರ್ಭದಲ್ಲಿ ಕಾರ್ಯನಿರ್ವಹಿಸುವ ಬಗೆಯನ್ನು ಮೌಲ್ಯಮಾಪಿಸುಲಾಗತ'ದೆ.

**ಉತ್ಪನ್ನ ಮೌಲ್ಯಮಾಪನ:** ಬೋಧನಾ/ಕಲಿಕಾ ಪ್ರಕ್ರಿಯೆಯ ಉತ್ಪನ್ನದ ಮೌಲ್ಯಮಾಪನವೇ ಉತ್ಪನ್ನ ಮೌಲ್ಯಮಾಪನ ಎನಿಸುತ್ತದೆ. ಈ ಬಗೆಯ ಮೌಲ್ಯಮಾಪನದಲ್ಲಿ ಉತ್ಪಾದಿತ ಅಂಶದ ಗುಣಮಟ್ಟ ಪರಿಮಾಣ ಹಾಗೂ ಉತ್ಪಾದಿಸಲು ತೆಗೆದುಕೊಂಡ ಸಮಯವನ್ನು ಅವಲಂಬಿಸಿರುತ್ತದೆ.

ಮೌಲ್ಯಮಾಪನವು ನಿರಂತರ – ವ್ಯಾಪಕ ಸ್ವರೂಪವನ್ನು ಅನುಸರಿಸುವುದರಿಂದ, ಸಾಂದರ್ಭಿಕವಾಗಿ, ಎಲ್ಲಾ ಮೌಲ್ಯಮಾಪನ ಕ್ರಮಗಳನ್ನು ಅನುಸರಿಸಬಹುದಾಗಿದೆ. ವರ್ತನಾತ್ಮಕ ರೂಪಣೆಯಲ್ಲಿ ರೂಪಣಾತ್ಮಕ ಮೌಲ್ಯಮಾಪನ, ಭಾಷಾ ಬೋಧನಾ–ಕಲಿಕಾ ಪ್ರಕ್ರಿಯೆಯ ಮೌಲ್ಯಮಾಪನಕ್ಕಾಗಿ 'ಪ್ರಕ್ರಿಯಾ ಮೌಲ್ಯಮಾಪನ ಹಾಗೂ ಭಾಷಾ ಕಲಿಕೆಯ ಉತ್ಪನ್ನ ಗುರುತಿಸಿಲು, ಭಾಷಾ ಸಾಮರ್ಥ್ಯಗಳ ಗಳಿಕೆಯನ್ನು ಸಂಕಲಿತ ನೆಲೆಯಲ್ಲಿ ಮೌಲ್ಯಮಾಪಿಸಬಹುದಾಗಿದೆ. ಭಾಷಾ ಶಿಕ್ಷಕನಾದವನು ಭಾಷಾ ಸಾಮರ್ಥ್ಯ ಹಾಗೂ ಕೌಶಲಗಳನ್ನು ನಿರಂತರವಾಗಿ ಮೌಲ್ಯಮಾಪಿಸುವ ಅಗತ್ಯತೆ ಇದ್ದು, ಅಭ್ಯಸಿಸಿದ ಎಲ್ಲ ಅಂಶಗಳನ್ನು ಸಂಯೋಜಿಸಿದಲ್ಲಿ ಮೌಲ್ಯಮಾಪನ ಕಾರ್ಯವನ್ನು ಸಂಪೂರ್ತಿಗೊಳಿಸಿದಂತಾಗುತ್ತದೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ - 2**
ಕನ್ನಡ ಭಾಷಾ ಬೋಧನೆಯಲ್ಲಿ ರೂಪಣಾತ್ಮಕ ಮಾಪನ ವಿಧಾನದ ಸ್ವರೂಪವನ್ನು ವಿಶ್ಲೇಷಿಸಿ.

### 4.6.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು - 1 ಮತ್ತು 2

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ - 1**
ಸ್ವ ಕಲಿಕಾ ಸಾಮಗ್ರಿ 4.6.3.1 ಗಮನಿಸಿ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ - 2**
ಸ್ವ ಕಲಿಕಾ ಸಾಮಗ್ರಿ 4.6.3.2 ಗಮನಿಸಿ.

### 4.6.6. ಘಟಕಾಂತ್ಯ ಅಭ್ಯಾಸಗಳು

1. ಭಾಷಾ ಮೌಲ್ಯಮಾಪನಕ್ಕೆ 'ನೀಲ ನಕಾಶೆ' ತಯಾರಿಸಿಕೊಳ್ಳುವ ವಿಧಾನವನ್ನು ವಿವರಿಸಿ.
2. ಪಠ್ಯದ ಸ್ವರೂಪ ಆಧರಿಸಿ, ಮೌಲ್ಯಮಾಪನ ಕ್ರಮವನ್ನು ನಿರ್ಧರಿಸುವ ಕ್ರಮಗಳನ್ನು ಸೂಕ್ತ ಉದಾಹರಣೆಗಳೊಂದಿಗೆ ವಿಶ್ಲೇಷಿಸಿ.
3. ಈ ಕೆಳಗಿನ ವಸ್ತುನಿಷ್ಠ ಪರೀಕ್ಷಣಗಳಲ್ಲಿ ಯಾವುದಾದರೂ ಎರಡರ ರಚನಾ ನಿಯಮಗಳನ್ನು ಉದಾಹರಣೆ ಸಹಿತ ವಿವರಿಸಿ.
    - ಪದಪೂರಣ ಪ್ರಶ್ನಮಾಲಿಕೆ
    - ಜೋಡಣಾ ಪ್ರಶ್ನಮಾಲಿಕೆ
    - ಸಾದೃಶ್ಯ ಪ್ರಶ್ನಮಾಲಿಕೆ
    - ವರ್ಗೀಕರಣ ಪ್ರಶ್ನಮಾಲಿಕೆ
    - ಅನುಕ್ರಮಣಿಕೆ ಪ್ರಶ್ನಮಾಲಿಕೆ
4. ಬಹುಆಯ್ಕೆ ಪರೀಕ್ಷೆಯ ರಚನಾ ನಿಯಮಗಳನ್ನು ತಿಳಿಸಿ.
5. ನೀಲನಕಾಶೆಯಲ್ಲಿ ಮೌಲ್ಯಮಾಪನಾಂಶದ ಕಾಠಿಣ್ಯತೆಯನ್ನು ಹೇಗೆ ನಿರ್ಧರಿಸುವಿರಿ? ವಿವರಿಸಿ.
6. ಭಾಷಾ ನೈದಾನಿಕ ಪರೀಕ್ಷೆಯ ರಚನೆಯ ಹಂತಗಳನ್ನು ವಿಶ್ಲೇಷಿಸಿ, ಭಾಷಾ ಮೌಲ್ಯಮಾಪನದಲ್ಲಿ ಅದರ ಪ್ರಾಮುಖ್ಯತೆಯನ್ನು ತಿಳಿಸಿ.
7. ಸಾಧನಾ ಪರೀಕ್ಷೆ ಹಾಗೂ ನೈದಾನಿಕ ಪರೀಕ್ಷೆಗಳ ನಡುವಣ ವ್ಯತ್ಯಾಸವನ್ನು ಪಟ್ಟಿಮಾಡಿ.
8. ಭಾಷಾ ಬೋಧನೆಯಲ್ಲಿ ನಿರಂತರ–ವ್ಯಾಪಕ ಮೌಲ್ಯಮಾಪನ ಕ್ರಮವನ್ನು ವಿಶ್ಲೇಷಿಸಿ.

### 4.6.7 ಪರಾಮರ್ಶನ ಸೂಚಿ


1. H.S.Srivathsa, ‘Comprehensive Evaluation in Schools’, Published at the Publication Department by the Secratory, National Counsil of Educaiton Research and Training, Sri Aurobindo Marg, New Delhi 110016 and Printed at Narendra Press, 20, Model Basti, New Delhi – 110005 year 1989

2. ಡಾ. ಐ.ಎ ಲೋಕಾಪುರ, ಪ್ರೌಢಶಿಕ್ಷಣ ಹಾಗೂ ಶಿಕ್ಷಕನ ಕಾರ್ಯಗಳು” ಪ್ರಕಾಶನ: ಜಯದೇವ. ಮೈ, ನಾಗರಾಜ ಮೈ, ಮೆಣಸಗಿ, ವಿಧ್ಯಾನಿಧಿ ಪ್ರಕಾಶನ, ಸ್ಟೇಷನ್ ರಸ್ತೆ, ಮಹೇಂದ್ರಕರ ವೃತ್ತದ ಸಮೀಪ, ಗದಗ – 582101, 5 ನೇ ಆವೃತ್ತಿ 1994
3. ಪರಗಿ.ವಿ,ಅನಸೂಯ, ‘ಮಾತೃಭಾಷೆ ಕನ್ನಡ ತತ್ತ್ವ ಮತ್ತು ಬೋಧನಾ ಮಾರ್ಗ’, ಪ್ರಕಾಶನ: ವಿವೇಕ ಪ್ರಕಾಶನ, ಚಿಕ್ಕಬಳ್ಳಾಪುರ – 2004
4. ಪ್ರೊ.ಪಿ.ಎಸ್.ಸುರೇಶ್, ಎನ್.ಪುಟ್ಟಸ್ವಾಮಿ, ‘ಪ್ರೌಢಶಾಲಾ ಶಿಕ್ಷಣ ಮತ್ತು ಶಿಕ್ಷಕನ ಕಾರ್ಯಗಳು’, ಪ್ರಕಾಶನ: ಆರ್.ರವೀಶ್, ಸದ್ಗುರು ಪ್ರಿಂಟರ್ಸ್, ಮೈಸೂರು, 2006
5. ಸಂಪನ್ಮೂಲ ಪುಸ್ತಕ ರಚನಾ ಸಮಿತಿ, ಡಿಎಸ್‌ಸಿಆರ್‌ಟಿ, ‘ಕನ್ನಡ ಸಂಪದ’, ಪ್ರಕಾಶನ: ವಿನಾಯಕ ಆಫ್‌ಸೆಟ್ ಪ್ರಿಂಟರ್ಸ್ # 56, 9ನೇ ಮುಖ್ಯರಸ್ತೆ, 1ನೇ ಅಡ್ಡರಸ್ತೆ, ಕಾವೇರಿ ನಗರ, ಬನಶಂಕರಿ ಕೈಗಾರಿಕಾ ಪ್ರದೇಶ, ಬನಶಂಕರಿ 2ನೇ ಹಂತ, ಬೆಂಗಳೂರು – 560070, ಪ್ರಕಟಣಾ ವರ್ಷ 2008
6. KAUL ,LOKESH, Methodology of educational research, Vikas Publication PVT.LTD, New Delhi -2013
7. ಡಾ.ಎಸ್.ಬಿ.ಯಾದವಾಡ, ‘ಪಠ್ಯಕ್ರಮ ಹಾಗೂ ಮೌಲ್ಯಮಾಪನ’ ಪ್ರಕಾಶನ: ವಿದ್ಯಾನಿಧಿ ಪ್ರಕಾಶನ, ಸ್ಟೇಷನ್ ರೋಡ ಮತ್ತು ಜೆ.ಟಿ,ಮಠ ರೋಡ, ಗದಗ 582101, 3ನೇ ಆವೃತ್ತಿ, ಪ್ರಕಟಣಾ ವರ್ಷ : 2015–16
8. Shodhaganga (ಶೋಧಗಂಗಾ), ‘Testing and Evaluation (ಪರೀಕ್ಷಿಸುವುದು ಮತ್ತು ಮೌಲ್ಯಮಾಪನ)
9. http://shodhganga.inflibnet.ac.in/bitstream/10603/51437/8/08_chapter4.pdf.
10. Center of Teaching and Learning, University of Washigton, ‘Constructing Tests’, https://www.washington.edu/teaching/topics/preparing-to-teach/constructing-tests/